ಶ್ರೀ ಜಯಚಾಮರಾಜೇಂದ್ರಗ್ರಂಥರತ್ನಮಾಲಾ

ಪುಷ್ಪರತ್ನಸಂಖ್ಯಾ ೨೨-೪

ಶ್ರೀಮತ್ಸ್ಕಾಂದಪುರಾಣಾಂತರ್ಗತಾ

ಸೂತಸಂಹಿತಾ

(ಸಂಸ್ಕೃತಮೂಲ, ಕನ್ನಡದಲ್ಲಿ ಅರ್ಥಾನುವಾದ, ವಿವರಣೆಗಳೊಡನೆ.)

ಬ್ರಹ್ಮಗೀತಾ ಮತ್ತು ಸೂತಗೀತಾ

ಅನುವಾದಕ
ಆಸ್ಥಾನ ಮಹಾವಿದ್ವಾನ್,
ಎಡತೊರೆ ಚಂದ್ರಶೇಖರಶಾಸ್ತ್ರೀ, ಎಂ.ಎ.,
ಸಾಹಿತ್ಯವಿದ್ವಾನ್

ಮೈಸೂರು
ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್
೧೯೪೫

ಶ್ರೀ ಜಯಚಾಮರಾಜೇಂದ್ರಗ್ರಂಥರತ್ನಮಾಲಾ

ಪುಷ್ಪರತ್ನಸಂಖ್ಯಾ ೨೨-೪

ಶ್ರೀಮತ್ಸ್ಕಾಂದಪುರಾಣಾಂತರ್ಗತಾ

ಸೂತಸಂಹಿತಾ

(ಸಂಸ್ಕೃತಮೂಲ, ಕನ್ನಡದಲ್ಲಿ ಅರ್ಥಾನುವಾದ, ವಿವರಣೆಗಳೊಡನೆ.)

ಬ್ರಹ್ಮಗೀತಾ

ಅನುವಾದಕ

ಆಸ್ಥಾನ ಮಹಾವಿದ್ವಾನ್,

ಎಡತೊರೆ ಚಂದ್ರಶೇಖರಶಾಸ್ತ್ರೀ, ಎಂ.ಎ.,

ಸಾಹಿತ್ಯವಿದ್ವಾನ್

ಮೈಸೂರು

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್

೧೯೪೫

Printed by T. S. Raghavachar, Manager,
Sree Panchacharya Electric Press
Sayaji Rao Road, Mysore.

For The Palace Mysore.

ಮುನ್ನುಡಿ

॥ ಶ್ರೀಗಣೇಶಶಾರದಾಗುರುಭ್ಯೋ ನಮಃ ॥

ಈ ಬ್ರಹ್ಮಗೀತೆಯಂತೆ ಅನೇಕ ಗೀತೆಗಳಿವೆ. ಶ್ರೀಕೃಷ್ಣನು ಅರ್ಜುನನಿಗೆ ಅನುಗ್ರಹಿಸಿದ ಭಗವದ್ಗೀತೆಯು, ದೇವೀಭಾಗವತದಲ್ಲಿ ದೇವಿಯು ಕರುಣಿಸಿರುವ ದೇವೀಗೀತೆಯೂ, ಇವುಗಳಂತೆ ಅಷ್ಟಾವಕ್ರಗೀತೆ, ಅವಧೂತಗೀತೆ, ಈಶ್ವರಗೀತೆ, ಉತ್ತರಗೀತೆ, ಕಪಿಲಗೀತೆ, ಗಣೇಶಗೀತೆ, ಪಾಂಡವಗೀತೆ, ಭಿಕ್ಷುಗೀತೆ, ಯಮಗೀತೆ, ರಾಮಗೀತೆ, ವ್ಯಾಸಗೀತೆ, ಶಿವಗೀತೆ, ಸೂರ್ಯಗೀತೆ, ಇವೇ ಮೊದಲಾದ ಗೀತೆಗಳು ಸ್ವಲ್ಪ ಹೆಚ್ಚು ಕಡಿಮೆಯಾಗಿ ಪ್ರಸಿದ್ಧವಾಗಿವೆ. ಈ ಗೀತೆಗಳು ಬೇರೆ ಬೇರೆ ಪುರಾಣ ಇತಿಹಾಸಗಳಲ್ಲಿ ನಿರೂಪಿಸಲ್ಪಟ್ಟಿವೆ. ಇವೆಲ್ಲವೂ ಮೋಕ್ಷಸಾಧನವಾದ ಯೋಗಗಳನ್ನು ತಿಳಿಯಹೇಳುತ್ತವೆ. ಈ ಸ್ಕಾಂದಪುರಾಣದಲ್ಲಿ ಬ್ರಹ್ಮಗೀತೆ ಮತ್ತು ಸೂತಗೀತೆ ಎಂದು ಎರಡು ಗೀತೆಗಳಿವೆ. ಪುರುಷಾರ್ಥಗಳು ಧರ್ಮ, ಅರ್ಥ, ಕಾಮ, ಮೋಕ್ಷ ಗಳೆಂದು ನಾಲ್ಕು ಪ್ರಸಿದ್ಧವಾಗಿದ್ದರೂ ಚನ್ನಾಗಿ ಪರಿಶೀಲಿಸಿದರೆ, ನಾವು ತಿಳಿದು ಪಡೆಯಲು ದುಡಿಯುತ್ತಿರುವ ಕಾಮ, ಅರ್ಥ, ಇವು ಧರ್ಮದಿಂದ ಪರಿಮಿತ ವಾಗಿಯೂ, ಧರ್ಮಾಚರಣೆಗೆ ಮಾತ್ರ ಉಪಯೋಗಿಸಬೇಕಾಗಿಯೂ ಇರುವುದರಿಂದ, ಇವೆರಡೂ ಧರ್ಮಕ್ಕೆ ಸಾಧನವಾದರೆ ಪುರುಷಾರ್ಥಗಳು ಎಂದ಼ಹಾಗಾಗುತ್ತದೆ. ಅಲ್ಲದೆ ಆ ಧರ್ಮವೂ ಚಿತ್ತಶುದ್ಧಿ, ಜ್ಞಾನಪ್ರಾಪ್ತಿಯ ಮೂಲಕ ಮೋಕ್ಷಸಂಪಾದನೆಗೆ ಅಂಗವಾಗಿರುವುದರಿಂದ, ಮೋಕ್ಷವೆಂಬುದು ಒಂದೇ ಪರಮಪುರುಷಾರ್ಥವೆಂದು ಗೊತ್ತಾಗುತ್ತದೆ.

ಇದರಂತೆ ಗೀತೆಗಳಲ್ಲಿ ಹೇಳಿರುವ ಯೋಗಗಳು ಅನೇಕಗಳಾಗಿದ್ದರೂ, ಕರ್ಮಯೋಗ, ಭಕ್ತಿಯೋಗ, ರಾಜ ಅಥವಾ ಧ್ಯಾನಯೋಗ, ಜ್ಞಾನಯೋಗ ಎಂದು ನಾಲ್ಕು ಯೋಗಗಳು ಪ್ರಸಿದ್ಧವಾಗಿವೆ. ಇವುಗಳಲ್ಲೂ ಕರ್ಮಯೋಗವು ಚಿತ್ತಶುದ್ಧಿ, ಜ್ಞಾನಪ್ರಾಪ್ತಿಯೋಗ್ಯತೆ ಇವುಗಳಿಗಾಗಿ ಇದೆ. ಭಕ್ತಿಯೋಗ, ರಾಜಯೋಗಗಳು

ಚಿತ್ತದ ಏಕಾಗ್ರತೆಗಾಗಿ ಇವೆ. ಈ ಮೂರು ಯೋಗಗಳೂ ಜ್ಞಾನಯೋಗದಲ್ಲಿ ಪರ್ಯವಸಾನವಾಗುವುದರಿಂದ ಜ್ಞಾನಯೋಗ ಒಂದೇ ಮುಖ್ಯವೆಂಬುದು ಗೊತ್ತಾಗುತ್ತದೆ. ಇದರಂತೆ ಈ ಬ್ರಹ್ಮಗೀತೆಯಲ್ಲಿ ನಿಷ್ಕಾಮವಾದ ವರ್ಣಾಶ್ರಮಧರ್ಮಾಚರಣೆ ಎಂಬ ಕರ್ಮಯೋಗವನ್ನೂ, ಶಿವ, ವಿಷ್ಣು, ಶಕ್ತಿ ಮುಂತಾದ ಸಗುಣ ಸಾಕಾರ ಮೂರ್ತಿಯ ಪೂಜೆ,!ಮಂತ್ರಜಪ, ಉಪಾಸನೆಗಳೆಂಬ ನಿಷ್ಕಾಮಭಕ್ತಿಯೋಗ, ಧ್ಯಾನ ಯೋಗಗಳನ್ನೂ, ಕಡೆಗೆ ಈ ಬ್ರಹ್ಮಾ, ವಿಷ್ಣು, ರುದ್ರ, ಈಶ್ವರ, ಸದಾಶಿವರೂಪಿಯಾದ, ಚಿಚ್ಛಕ್ತಿರೂಪನೂ ಆದ ಪರಶಿವನ ಪ್ರಸಾದ, ಸಾಕ್ಷಾತ್ಕಾರಗಳಿಂದ, ಜೀವಾತ್ಮಪರಮಾತ್ಮರ ಐಕ್ಯವು ಗೊತ್ತಾಗಲು, ಬ್ರಹ್ಮಾತ್ಮೈಕ್ಯದ ಅಪರೋಕ್ಷಾನುಭವವೆಂಬ ಮೋಕ್ಷವು, ನಿತ್ಯಶುದ್ಧ ಬುದ್ಧಮುಕ್ತನಾದ ಸಚ್ಚಿದಾನಂದಸ್ಥಿತಿಯು, ದೊರೆಯುತ್ತದೆ. ಆದುದರಿಂದ ಜ್ಞಾನಯೋಗದಿಂದ ಮೋಕ್ಷವಾಗುತ್ತದೆಂದು ತಿಳಿಯಹೇಳಿದೆ. ಇಂತಹ ಜ್ಞಾನವು ದೊರೆತ ಕೂಡಲೆ ಇಲ್ಲಿಯೇ ಈಗಲೇ, ದೇಶಾಂತರ ಕಾಲಾಂತರಗಳ ನಿರೀಕ್ಷಣೆಮಾಡಬೇಕಾದ ಅವಶ್ಯಕತೆ- ಇಲ್ಲದೆ ಮೋಕ್ಷವಾಗುತ್ತದೆ. ಸಂಚಿತ ಆಗಾಮಿಕರ್ಮಗಳು ಜ್ಞಾನದಿಂದ, ಹುರಿದ ಬೀಜಗಳಂತೆ, ನಾಶವಾಗಲು, ಎಂದರೆ ಸುಖದುಃಖರೂಪಫಲವನ್ನೂ ಅದಕ್ಕಾಗಿ ಜನನಮರಣಗಳನ್ನೂ ಉಂಟುಮಾಡಲಾರದಂತಾಗಲು, ಪ್ರಾರಬ್ಧಕರ್ಮಶೇಷವಿದ್ದರೆ ಅದು ಮುಗಿಯುವವರೆಗೆ ಈ ಜ್ಞಾನಿಯು ಜೀವನ್ಮುಕ್ತನಾಗಿದ್ದು, ಕಡೆಗೆ ವಿದೇಹಕೈವಲ್ಯವನ್ನು ಪಡೆಯುತ್ತಾನೆ. ಈ ವೇದಾಂತಜ್ಞಾನದಿಂದ ಮಾನವನು ಈ ಲೋಕದಲ್ಲಿ ಮಾದರಿಯ ಕರ್ಮಯೋಗಿಯಾಗಿರುತ್ತಾನೆ. ಅವನ ಧರ್ಮಾಚರಣೆಯೂ, ಕರ್ಮಾನುಷ್ಠಾನವೂ, ಕೃಷ್ಣ, ನಾರದ, ಶಂಕರರ ನಡೆವಳಿಕೆಯಂತೆ, ವಿಶ್ವಧರ್ಮಾಚರಣೆಯಾಗಿರುತ್ತದೆ. ಇದರಿಂದ ಜಗತ್ತಿನಲ್ಲಿ ಶಾಂತಿಸುಖಗಳು ಜನಸಾಮಾನ್ಯಕ್ಕೂ ದೊರೆಯುವಂತಾಗುತ್ತವೆ.

ಇಂತಹ ತಿಳಿವಳಿಕೆಯು ಜನಸಾಮಾನ್ಯರಲ್ಲೂ, ಮುಖಂಡರಲ್ಲೂ ಹರಡಿ ಬಲವಾದರೆ ಜಗತ್ಕಲ್ಯಾಣಸಾಧನೆಯಾಗುವುದರಿಂದ, ಈ ಉದ್ದೇಶಕ್ಕಾಗಿ ಇಂತಹ ಗೀತೆಗಳನ್ನು ಒಳಗೊಂಡಿರುವ ಪುರಾಣಗಳನ್ನು ಕನ್ನಡ ಅನುವಾದದೊಡನೆ ಪ್ರಕಟಿಸಬೇಕೆಂದು ನಮ್ಮನ್ನಾಳುತ್ತಾ ದಯಮಾಡಿಸಿರುವ **ಶ್ರೀ ಜಯಚಾಮ**

ರಾಜೇಂದ್ರ ಒಡೆಯರ್ ಬಹದ್ದೂರ್ ಜಿ.ಸಿ.ಎಸ್.ಐ., ಮಹಾಪ್ರಭುಗಳವರ ಆಜ್ಞಾನುಸಾರವಾಗಿ ಈ ಗ್ರಂಥವನ್ನೂ ಮುದ್ರಿಸಿ ಪ್ರಕಟಿಸಲಾಗಿದೆ. ನಮ್ಮ ಮಹಾಸ್ವಾಮಿಯವರ ಘನತಮವಾದ ಈ ಸದುದ್ದೇಶವು ಸರ್ವದಾ ನೆರವೇರುತ್ತಿರುವಂತಾಗಲೆಂದು ಚಿಚ್ಛಕ್ತಿಸ್ವರೂಪನೂ, ಅರ್ಧನಾರೀಶ್ವರನೂ, ಆಗಿರುವ ಸಾಂಬಸದಾಶಿವನ ಪಾದಾರವಿಂದದಲ್ಲಿ ಭಕ್ತಿನಮ್ರನಾಗಿ ಬೇಡುತ್ತಿದೇನೆ.

ಪಾರ್ಥಿವಸಂವತ್ಸರದ
ಆಶ್ವಯುಜ ಕೃಷ್ಣ ತ್ರಯೋದಶಿ
ಶುಕ್ರವಾರ, 2—11—1945

ಎಡತೊರೆ ದೇವಯ್ಯದೀಕ್ಷಿತರ ಮಗ
ಚಂದ್ರಶೇಖರಶಾಸ್ತ್ರೀ

ಶ್ರೀಸೂತಸಂಹಿತೆಯ ಬ್ರಹ್ಮಗೀತೆಯಲ್ಲಿರುವ ವಿಷಯಗಳ ಸೂಚಿಕೆ

ಅಧ್ಯಾಯ   ವಿಷಯ   ಪುಟಸಂಖ್ಯೆ

॥ ಶ್ರೀಃ ॥

ಅಥಾಸ್ಯಾಃ ಶ್ರೀಮತ್ಸ್ಕಾಂದಪುರಾಣಾಂತರ್ಗತ ಸೂತಸಂಹಿತಾಯಾಶ್ಚತುರ್ಥಸ್ಯ ಯಜ್ಞವೈಭವಖಂಡಸ್ಯೋಪರಿಭಾಗೇ ಬ್ರಹ್ಮಗೀತಾ

॥ ಪ್ರಥಮೋಽಧ್ಯಾಯಃ ॥

ಮೊದಲನೆಯ ಅಧ್ಯಾಯವು

॥ ಮುನಯ ಊಚುಃ ॥

ಭವತಾ ಸರ್ವಮಾಖ್ಯಾತಂ ಸಂಕ್ಷೇಪಾದ್ವಿಸ್ತರಾದಪಿ ।
ಇದಾನೀಂ ಶ್ರೋತುಮಿಚ್ಛಾಮೋ ಬ್ರಹ್ಮಗೀತಾ ಮನುತ್ತಮಾಂ ॥೧॥

॥ ಶ್ರೀಗಣೇಶಶಾರದಾಗುರುಭ್ಯೋ ನಮಃ ॥

ದುಃಖಸ್ಯಾತ್ಯಂತ ನಾಶಃ ಸುಖಮಪಿಪರಮಂ ಪ್ರಾರ್ಥನೀಯಂ ಹಿ ಸರ್ವೈಃ ।
ಸೌಖ್ಯಂ ಪ್ರಾಪ್ಯಂ ನ ತತ್ ಸ್ಯಾತ್ ಅನುಭವ ವಿದಿತಂ ಸ್ವಾತ್ಮ ರೂಪಂ ಹಿ ಸಿದ್ಧಂ॥
ಮೋಕ್ಷೋ ದುಃಖಸ್ಯ ನಾಶಃ ಜನಿಮೃತಿಲಹರೀ ಪ್ರಾಪ್ತಿರೂಪಂ ಹಿ ದುಃಖಂ ।
ಜ್ಞಾನಾನ್ಮೋಕ್ಷೋಽಭ್ಯುಪೇತಃ ತತ ಇಹಹಿ ಭವೇತ್ ದುಃಖಮಜ್ಞಾನರೂಪಂ ॥

"ಪ್ರಯೋಜನಮನುದ್ದಿಶ್ಯ ನ ಮಂದೋಽಪಿ ಪ್ರವರ್ತತೇ" ಎಂಬ ಮಾತು ಮನುಷ್ಯರೆಲ್ಲರ, ಅಷ್ಟೇ ಏಕೆ? ಪ್ರಾಣಿಸಾಮಾನ್ಯದ, ಚಲನಸಮರ್ಥವಾದ ಮತ್ತು ಹಾಗೆಯೇ ಮೇಲಿನ ತರಗತಿಯಲ್ಲಿ ವಿವೇಚನಶೀಲರಾದವರೆಲ್ಲರ, ಸಹಜಗುಣವು. ಆದುದರಿಂದ ನಾವು ಮಾಡಿದ ಎಲ್ಲ ಕೆಲಸಗಳಿಗೂ ಯಾವುದಾದರೊಂದು ಪ್ರಯೋಜನವಿರಬೇಕು. ಏಕೆಂದರೆ ಯಾರಾದರೂ ಯಾವುದಾದರೊಂದು ಕಾರ್ಯವನ್ನು ಮಾಡಿ ಹೆಮ್ಮೆಯಿಂದ ಜನರಲ್ಲಿ ಅದನ್ನು ಹೇಳಿಕೊಂಡರೆ, ಆದನ್ನು ಕೇಳಿದವರು "ಇದೇನು ಮಹಾಕಾರ್ಯ? ಪುಣ್ಯವೇ? ಪುರುಷಾರ್ಥವೇ?" ಎಂದು ವಿಮರ್ಶೆಯ ಮಾತನ್ನು ಹೇಳುತ್ತಾರೆ. ಅದರಿಂದ ನಾವು ಮಾಡುವ ಕಾರ್ಯಗಳಿಗೆ, ಅವುಗಳ

ಲ್ಲಿಯೂ ಹೇಳಿಸಿಕೊಳ್ಳಬಹುದಾದ ಕಾರ್ಯಗಳಿಗೆ, ಪುಣ್ಯಕರವಾದ, ಪುರುಷಾರ್ಥ ಸಾಧನವಾಗಬಹುದಾದ, ಫಲವಿರಬೇಕೆಂಬುದು ಸಿದ್ಧವಾಗುತ್ತದೆ. ಆದುದರಿಂದ ವಿವೇಕಿಗಳಾದವರು ಈ ಅಮೂಲ್ಯವಾದ ಮಾನವಜನ್ಮದ ಅತ್ಯಲ್ಪವಾದ ಈ ನಮ್ಮ ಕಾಲವನ್ನೂ ಪ್ರಯತ್ನವನ್ನೂ ಸರಿಯಾದ ಪ್ರಯೋಜನವಾಗುವಂತೆ ವಿನಿಯೋಗಿಸ ಬೇಕು.

ಸಾಮಾನ್ಯವಾಗಿ ನಮ್ಮ ಈ ಪ್ರಾಪಂಚಿಕ ವ್ಯವಹಾರದಲ್ಲೂ ಪ್ರಯೋಜನವು ಎರಡು ಬಗೆಯಾಗಿದೆ. ಹೇಗೆಂದರೆ ಸುಖದಪ್ರಾಪ್ತಿ ಅಥವಾ ದುಃಖದ ನಿವೃತ್ತಿಯು ಜನರೆಲ್ಲರ ಪ್ರಯತ್ನಗಳಿಗೆ ಫಲವಾಗಿರುವುದು ಕಂಡುಬರುತ್ತದೆ. ಆದರೂ ಸಾಧಾರಣ ವಾದ ಅಲ್ಪವಾದ ಸುಖವಾಗಲೀ, ತಾತ್ಕಾಲಿಕವಾದ ದುಃಖನಿವೃತ್ತಿಯಾಗಲೀ, ಪರಮಪುರುಷಾರ್ಥವೆನಿಸಿಕೊಳ್ಳಲಾರದು. ಏಕೆಂದರೆ "ದೃಷ್ಟವದಾನುಶ್ರವಿಕಃ ಸ ಹ್ಯ ವಿಶುದ್ಧಿ ಕ್ಷಯಾತಿಶಯಯುಕ್ತಃ ॥" ಎಂದು ಮುಂತಾದ ನೀತಿವಚನಗಳನ್ನು, ಅನು ಭವಸಾರವಾದ ಗಾದೆಯಂತಹ ಬುದ್ಧಿವಾದದ ಮಾತುಗಳನ್ನೂ ಪರಿಶೀಲಿಸಿದರೆ ಫಲವು ಪರಮಸುಖಸ್ವರೂಪವಾಗಿ ಅಥವಾ ದುಃಖದ ಆತ್ಯಂತಿಕನಾಶರೂಪವಾಗಿ ಆಗಲಿ, ಇರಬೇಕೆಂದು ಗೊತ್ತಾಗುತ್ತದೆ. ಇದನ್ನು ದುಃಖಸ್ಯಾತ್ಯಂತನಾಶಃ ಎಂಬ ಈ ಪದ್ಯದಲ್ಲಿ ಸಂಗ್ರಹವಾಗಿ ವರ್ಣಿಸಿದೇನೆ.

ಇಂತಹ ಫಲಪ್ರಾಪ್ತಿಗೆ ಸಾಧನವು ಯಾವುದೆಂದು ಮುಂದಾಲೋಚನೆಯುಳ್ಳ ವಿವೇಕಿಗಳು ವಿಮರ್ಶಿಸಿ ಗೊತ್ತುಮಾಡಿಕೊಂಡು ಪ್ರಯತ್ನಮಾಡುತ್ತಾರೆ. ಹಾಗೆ ಮಾಡದೇ ಯತ್ನಿಸಿದರೆ ಕಾಲವೂ, ಪ್ರಯತ್ನವೂ ವ್ಯರ್ಥವಾಗುವ ಅಪಾಯವಿರುತ್ತದೆ. ಆದುದರಿಂದ ನಿತ್ಯವಾದ ಸುಖಪ್ರಾಪ್ತಿಯೂ, ಅತ್ಯಂತಿಕವಾದ ದುಃಖನಿವೃತ್ತಿಯೂ, ಅಲೌಕಿಕವಾದ ಪುರುಷಾರ್ಥವಾಗಲು ಅರ್ಹವಾಗಿದೆ. ಎಂದು ಗೊತ್ತಾಗುತ್ತದೆ. ಲೌಕಿಕವಲ್ಲದ ಪುರುಷಾರ್ಥಸಾಧನೆಯ ಮಾರ್ಗವನ್ನು ಅಲೌಕಿಕವಾದ ಮತ್ತು ಉತ್ತಮ ಪ್ರಮಾಣಭೂತವಾದ ವೇದದಿಂದಲೇ ಗೊತ್ತುಮಾಡಿಕೊಳ್ಳಬೇಕು. ವೇದಗಳು ಅಪೌರುಷೇಯಗಳು. ಆದುದರಿಂದ ಪುರುಷದೋಷರಹಿತಗಳೂ, ಅನಂತ ಗಳೂ, ನಿತ್ಯಗಳೂ ಆದ ವೇದಗಳನ್ನು ಬ್ರಹ್ಮನು ಹಿಂದಿನ ಕಲ್ಪದಲ್ಲಿ ಇದ್ದಂತೆಯೇ ಈಗಲೂ ಪ್ರಕಟಪಡಿಸಿರುವನು.

ಆದುದರಿಂದ ಪುರುಷಾರ್ಥಗಳ ತಿಳಿವಳಿಕೆಯನ್ನು ಪಡೆಯಬೇಕೆಂಬ ಆಸಕ್ತಿ ಯುಳ್ಳ ವಿವೇಕಿಗಳು ಅಲೌಕಿಕವಾದ ಪರಮಪುರುಷಾರ್ಥಕ್ಕೆ ಸಾಧನವನ್ನು ಈ

ಅಲೌಕಿಕವಾದ ವೇದಪ್ರಮಾಣಗಳಿಂದಲೇ ತಿಳಿದು ಅನುಷ್ಠಾನಮಾಡಬೇಕಾಗಿದೆ. ಈ ವೇದಗಳ ಮುಖ್ಯಾರ್ಥಗಳನ್ನು ಸ್ಮೃತಿ, ಇತಿಹಾಸ, ಪುರಾಣಗಳು ಮಿತ್ರನಂತೆ ವಿಸ್ತರಿಸಿ ವಿವರಿಸಿ ತಿಳಿಯಹೇಳುತ್ತವೆ. ವೇದಗಳಲ್ಲಿ ಹೇಳಿರುವ ಗಹನವಾದ ತತ್ವಗಳನ್ನು ಪುರಾಣಗಳಿಂದ ತಿಳಿಯುವುದು ಸುಲಭವಾಗಿದೆ. "ಇತಿಹಾಸ ಪುರಾಣಾಭ್ಯಾಂ ವೇದಂ ಸಮುಪಬೃಹ್ಮಯೇತ್ ||" "ಬಿಭೇತ್ಯಲ್ಪಶ್ರುತಾದ್ವೇದೋ ಮಾಮಯಂ ಪ್ರತರಿಷ್ಯತಿ ||" ಎಂದು ಮುಂತಾದ ಸೂಕ್ತಿಗಳು ಈ ಅರ್ಥವನ್ನು ಸ್ಪಷ್ಟಪಡಿಸುತ್ತವೆ.

ವೇದಗಳಲ್ಲಿ ಕರ್ಮಗಳನ್ನೂ ಭಕ್ತಿ ಉಪಾಸನೆಗಳನ್ನೂ, ಬ್ರಹ್ಮಾತ್ಮೈಕ್ಯ ಜ್ಞಾನವನ್ನೂ, ವಿವರಿಸಿ ಹೇಳಿದೆ. ಆದರೂ, ಕರ್ಮಾನುಷ್ಠಾನ, ಅದರಲ್ಲೂ ನಿಷ್ಕಾಮ ಕರ್ಮಾನುಷ್ಠಾನದಿಂದ ಚಿತ್ತಶುದ್ಧಿಯೂ, ಶ್ರದ್ಧಾಭಕ್ತಿಪೂರ್ವಕವಾದ ಉಪಾಸನೆಯಿಂದ ಚಿತ್ತದ ಏಕಾಗ್ರತೆಯೂ, ದೊರೆಯುತ್ತದೆ. ಆಮೇಲೆ ಜ್ಞಾನವಾಗಿ ಮೋಕ್ಷವಾಗುವುದರಿಂದ ಜ್ಞಾನವನ್ನು ಪ್ರತಿಪಾದಿಸುವ ಉಪನಿಷತ್ತುಗಳ ಅರ್ಥವೇ ವೇದಗಳ ಮುಖ್ಯ ತಾತ್ಪರ್ಯವಾಗಿದೆ. ಆದುದರಿಂದ ಉಪನಿಷದ್ಭಾಗಕ್ಕೆ ವೇದಾಂತವೆಂದು ಹೆಸರು ರೂಢಿಯಲ್ಲಿರುತ್ತದೆ. ಪುರಾಣಗಳಲ್ಲಿ ಬಗೆಬಗೆಯಾಗಿ ವೇದಾಂತಗಳ ಅರ್ಥವು ಸುಲಭವಾಗಿ ತಿಳಿಯುವಂತೆ ವಿವರಿಸಿ ಹೇಳಿರುತ್ತದೆ. ಸ್ಕಾಂದಪುರಾಣದಲ್ಲಿ ಒಂದು ಭಾಗವಾಗಿರುವ ಈ ಸೂತಸಂಹಿತೆಯಲ್ಲಿ, ನಾಲ್ಕು ಭಾಗಗಳಲ್ಲಿ ಒಂದಾದ ಯಜ್ಞವೈಭವಖಂಡದ ಉತ್ತರಭಾಗದಲ್ಲಿರುವ ಈ ಬ್ರಹ್ಮಗೀತೆಯಲ್ಲಿ, ಎಲ್ಲ ಮುಖ್ಯವಾದ ಉಪನಿಷತ್ತುಗಳ ತಾತ್ಪರ್ಯಾರ್ಥವನ್ನೂ ಒಂದೆಡೆಯಲ್ಲಿ ಸಂಗ್ರಹಿಸಿ ಹೇಳಿರುವುದು. ಒಂದು ವಿಶೇಷಗುಣವಾಗಿದೆ. ಎಲ್ಲ ಉಪನಿಷತ್ತುಗಳಲ್ಲೂ ಒಂದೇ ತತ್ವವನ್ನೇ ಹೇಳಿದ್ದರೂ, ಅದನ್ನು ವಿವರಿಸಿರುವ ರೀತಿಗಳು ನಾನಾಬಗೆಯಾಗಿರುವುದರಿಂದ ತತ್ವವು ಚೆನ್ನಾಗಿ ಗೊತ್ತಾಗುತ್ತದೆ.

ವೇದಾಂತವಾಕ್ಯಗಳ ಮುಖ್ಯ ತಾತ್ಪರ್ಯಾರ್ಥವು ಯಾವುದೆಂಬುದರ ವಿಷಯದಲ್ಲಿ ಭಿನ್ನಾಭಿಪ್ರಾಯಗಳಿವೆ. ಆದರೆ ಹಿಂದಿನಂತೆಯೇ ಎಲ್ಲ ಪ್ರಪಂಚಗಳನ್ನೂ ಸೃಜಿಸಿ, ಎಲ್ಲ ವೇದಗಳನ್ನೂ ಪ್ರಕಟಗೊಳಿಸಿದ ಬ್ರಹ್ಮದೇವನೇ ಹೇಳಿರುವ ಈ ಗೀತೆಯು ತುಂಬಾ ಪ್ರಾಮಾಣಿಕವಾದುದು. ವ್ಯಾಸಕೃತವಾದ ಸ್ಕಾಂದಪುರಾಣದಲ್ಲಿರುವ ಈ ಗೀತೆಯು, ದೇವೀಭಾಗವತದಲ್ಲಿ ದೇವಿಯು ಅನುಗ್ರಹಿಸಿರುವ ದೇವೀಗೀತೆಯಂತೆಯೂ ಮತ್ತು ಮಹಾಭಾರತದಲ್ಲಿ ಶ್ರೀಕೃಷ್ಣನು ಉಪದೇಶಿಸಿರುವ

ಭಗವದ್ಗೀತೆಯಂತೆಯೂ, ಇರುವುದರಿಂದ ಬ್ರಹ್ಮನು ದೇವತೆಗಳಿಗೆ ಮಾಡಿದ ಉಪದೇಶಗಳನ್ನು ಸಂಗ್ರಹಿಸಿ ವ್ಯಾಸರು ಹೇಳಿರುವರೆಂಬ ಕಾರಣದಿಂದ ಈ ಗೀತೆಯು ತುಂಬಾ ಪ್ರಾಮಾಣಿಕವಾದುದು. ಮೇಲಿನ ಮಂಗಳ ಪದ್ಯದ ಅರ್ಥವು ಹೀಗಿದೆ.

ದುಃಖದ ಬೇರುಸಹಿತವಾಗಿ ಪುನಃ ಉಂಟಾಗದಂತೆ ನಾಶವಾಗುವಿಕೆಯೂ, ಎಲ್ಲ ಸುಖಗಳಿಗಿಂತಲೂ ಮೇಲಾದ, ಶ್ರೇಷ್ಠವಾದ ಸುಖವೂ, ಎಲ್ಲರಿಂದಲೂ ಅಪೇಕ್ಷಿಸಲ್ಪಡುತ್ತಿದೆಯಷ್ಟೆ? ಇವುಗಳ ಪೈಕಿ ಆ ಪರಮಸುಖವು ಪ್ರಾಪ್ಯವಾಗುವುದಲ್ಲವು, ಎಂದರೆ ಹೊರಗಿನಿಂದ ಪಡೆಯಬೇಕಾದುದಲ್ಲವು. ಈ ಅಂಶವು ವೇದಾಂತವಿಚಾರ, ಅವಸ್ಥಾತ್ರಯ ಪರೀಕ್ಷೆಗಳಿಂದ ಪ್ರತಿಯೊಬ್ಬರ ಅನುಭವಕ್ಕೂ ಗೋಚರವಾಗುತ್ತದೆ. ಆ ನಿತ್ಯವಾದ ಪರಮಸುಖವು ಎಲ್ಲರಿಗೂ ಅವರವರ ಆತ್ಮಸ್ವರೂಪವಾಗಿರುವುದರಿಂದ ಸರ್ವದಾ ಸಿದ್ಧವಾಗಿಯೇ ಇರುತ್ತದೆಯೇ ಹೊರತು ಯಾವಾಗಲೂ ಸಾಧ್ಯವಾದುದಾಗಿ ಇರುವುದಿಲ್ಲವು. ಆದುದರಿಂದ ಮೋಕ್ಷವು ದುಃಖದ ನಾಶವಾಗಿರುವಿಕೆಯಾಗಿದೆ, ಎನ್ನಬೇಕು. ಈ ದುಃಖವು ಹುಟ್ಟುಸಾವುಗಳ ಪ್ರವಾಹದಲ್ಲಿ ಜೀವನು ಸಿಕ್ಕಿಗೊಂಡು ಇರುವುದೇ ಆಗಿದೆ. ಎಲ್ಲ ಮತಗಳೂ, ದಾರ್ಶನಿಕರೂ, ಜ್ಞಾನದಿಂದ ಮೋಕ್ಷವಾಗುತ್ತದೆ ಎಂದು ಒಪ್ಪಿರುತ್ತಾರೆ. ಜ್ಞಾನವು ಅಜ್ಞಾನವನ್ನು ಮಾತ್ರ ಹೋಗಲಾಡಿಸಬಲ್ಲದು. ಆದುದರಿಂದ ದುಃಖವು ಅಜ್ಞಾನರೂಪವಾದುದಾಗಿಯೇ, ಮಾಯಾತೋರಿಕೆಯ ಸ್ವರೂಪವುಳ್ಳದ್ದಾಗಿಯೇ, ಇರಬೇಕಾಗುತ್ತದೆ. ಇದೇ ಮೋಕ್ಷವೆಂಬ ಪರಮ ಪುರುಷಾರ್ಥವು. ಈ ತತ್ವವು ಅದ್ವೈತವೇದಾಂತ ಸಿದ್ಧಾಂತಕ್ಕೆ ಅನುಗುಣವಾಗಿ ಹೊಂದಿಕೊಂಡಿದೆ. ಅದ್ವೈತದ ದರ್ಶನದ ಮುಖ್ಯಾಂಶಗಳನ್ನು ಈ ಮುಂದಿನ ಪದ್ಯದಲ್ಲಿ ಹೀಗೆ ಸಂಗ್ರಹಿಸಿರುತ್ತೇನೆ—

ಅದ್ವೈತೇ ಬ್ರಹ್ಮ ಸತ್ಯಂ ಜಗದಿದಮನೃತಂ ಮಾಯಯಾ ಭಾಸಮಾನಂ
ಜೀವೋ ಬ್ರಹ್ಮಸ್ವರೂಪೋಽಪ್ಯಹಮಿತಿ ಮಮ ಚೇತ್ಯಸ್ತಿ ದೇಹೇಽಭಿಮಾನಾತ್ ।
ಶ್ರುತ್ಯಾ ಬ್ರಹ್ಮಾಹಮಸ್ಮೀತ್ಯನುಭವ ಉದಿತೇ ಕಾಮಕರ್ಮಪ್ರಣಾಶೇ
ಮಾಯಾಸಂಸಾರಮುಕ್ತೋ(ರಿಹ)(ರಿವ)ಭವತಿ ಸದಾ(ಪುನಃ)ಸಚ್ಚಿದಾನಂದರೂಪಃ ॥

ಮುನಿಗಳು ಹೇಳಿದರು—ಓ ಸೂತನೇ, ನಿನ್ನಿಂದ ಕೆಲವು ವಿಷಯಗಳು ಸಂಕ್ಷೇಪವಾಗಿಯೂ, ಕೆಲವು ವಿಷಯಗಳು ವಿಸ್ತಾರವಾಗಿಯೂ, ಹೀಗೆ ನಾವು ಕೇಳಿದ್ದುವೆಲ್ಲವೂ ಹೇಳಲ್ಪಟ್ಟವು. ಈಗ ಅತ್ಯಂತ ಶ್ರೇಷ್ಠವಾದ ಬ್ರಹ್ಮಗೀತೆಯನ್ನು ನಾವು ಕೇಳಲು ಬಯಸುತ್ತೇವೆ. ॥೧॥

ಸರ್ವವಿಜ್ಞಾನ ರತ್ನಾನಾ ಮಾಕರಸ್ಯ ಮಹಾತ್ಮನಃ ।
ಕೃಷ್ಣದ್ವೈಪಾಯನಸ್ಯೈವ ಭವಾನ್ ಶಿಷ್ಯಃ ಸು ಶಿಕ್ಷಿತಃ ॥೨॥

ತ್ವಯೈವಾ ವಿದಿತಂ ಕಿಂಚಿನ್ನಾಸ್ತಿ ಸತ್ಯಂ ಪ್ರಭಾಷಿತಂ ।
ಯದಿ ಪ್ರಸನ್ನೋ ಭಗವಾನ್ ತನ್ನೋ ವಕ್ತುಮಿಹಾರ್ಹಸಿ ॥೩॥

॥ ಸೂತ ಉವಾಚ ॥

ವಕ್ಷ್ಯೇ ತಾಮಾದರೇಣೈವ ಬ್ರಹ್ಮಗೀತಾ ಮನುತ್ತಮಾಂ ।
ಶ್ರದ್ಧಯಾ ಸಹಿತಾ ಯೂಯಂ ಶೃಣುತ ಬ್ರಹ್ಮವಿತ್ತಮಾಃ ॥೪॥

ಪುರಾ ಕಲ್ಪಾಂತರೇ ದೇವಾಃ ಸರ್ವೇ ಸಂಭೂಯ ಸಾದರಂ ।
ವಿಚಾರ್ಯ ಸುಚಿರಂ ಕಾಲಂ ವೇದಾನಾಮರ್ಥಮುತ್ತಮಂ ॥೫॥

ಸಂಶಯಾ ವಿಷ್ಟಚಿತ್ತಾಸ್ತು ತಪಸ್ತಪ್ತ್ವಾ ಮಹತ್ತರಂ ।
ಅಭಿಜಗ್ಮುರ್ವಿಧಾತಾರಂ ಪ್ರಷ್ಟುಂ ದೇವಾ ಮುನೀಶ್ವರಾಃ ॥೬॥

ಓ ಸೂತಮಹರ್ಷಿಯೇ, ನೀನಾದರೋ ಸಮಸ್ತ ವಿಜ್ಞಾನಗಳೆಂಬ ರತ್ನಗಳಿಗೆ ಸಮುದ್ರದಂತೆ ಆಕರವಾಗಿರತಕ್ಕವನಾಗಿಯೂ, ಮಹಾತ್ಮನಾಗಿಯೂ, ಕೃಷ್ಣನೆಂದು ಹೆಸರುಳ್ಳ, ದ್ವೀಪವೇ ವಾಸಸ್ಥಾನವಾಗಿ ಉಳ್ಳ, ವ್ಯಾಸರಿಂದ ಚನ್ನಾಗಿ ಶಿಕ್ಷಿಸಲ್ಪಟ್ಟ, ಶಿಷ್ಯನಾಗಿಯೂ ಇರುವೆ. ನೀನು ತಿಳಿಯದೇ ಇರತಕ್ಕ ಅಂಶವೇ ಇರುವುದಿಲ್ಲ. ನೀನು ಹೇಳಿದುದೆಲ್ಲವೂ ತಥ್ಯವಾಗಿದೆ. ನೀನು ನಮ್ಮ ವಿಷಯದಲ್ಲಿ ಪ್ರಸನ್ನನಾಗಿರುವ ಪಕ್ಷದಲ್ಲಿ ನಮಗೆ ಈಗ ಬ್ರಹ್ಮಗೀತೆಯನ್ನು ಹೇಳಬೇಕು. ॥೨-೩॥

ಸೂತನು ಹೇಳಿದನು—ಎಲೈ ಬ್ರಹ್ಮಜ್ಞಾನಿಗಳಾದ ಮುನಿಗಳೇ, ಆ ಬ್ರಹ್ಮಗೀತೆಯೆಂಬ ಉತ್ತಮವಾದ ಗೀತೆಯನ್ನು ನಿಮಗೆ ಹೇಳುವೆನು. ನೀವೂ ಸಹ ಆ ಗೀತೆಯನ್ನು ಶ್ರದ್ಧೆಭಕ್ತಿ ಚಿತ್ತೈಕಾಗ್ರತೆಯಿಂದ ಕೇಳಿರಿ. ಯದ್ಯಪಿ ಮುನಿಗಳು ಶ್ರದ್ಧೆಯಿಂದಲೇ ಬಂದಿರುತ್ತಾರೆ. ಆದರೆ ಶಿಷ್ಯಾವಧಾನಕ್ಕೋಸ್ಕರ, "ಶ್ರದ್ಧಯಾ ಸಹಿತಾ" ಎಂದು ಹೇಳಿದೆ. ಈ ರೀತಿಯಲ್ಲಿ ಹೇಳಿದುದುರಿಂದ ಸಮಸ್ತವಾದ ವೈದಿಕ ವ್ಯಾಪಾರಗಳಲ್ಲಿ ಶ್ರದ್ಧೆಯೂ ಅತ್ಯಾವಶ್ಯಕವೆಂದು ತಿಳಿಯಬೇಕು. ॥೪॥

ಹಿಂದೆ ಒಂದಾನೊಂದು ಕಲ್ಪಾಂತರದಲ್ಲಿ ಸಮಸ್ತ ದೇವತೆಗಳೂ ಸೇರಿ ಬಹಳ ಆದರಪೂರ್ವಕವಾಗಿ ಉತ್ತಮವಾದ ವೇದಗಳ ಅರ್ಥಗಳನ್ನು ಬಹಳ ಕಾಲದವರೆಗೆ

ಯತ್ರಾಸ್ತೇ ಜಗತಾಂ ನಾಥಃ ಸರ್ವಜ್ಞಃ ಸರ್ವವಿತ್ಪ್ರಭುಃ ।
ಮಹಾಕಾರುಣಿಕಃ ಶ್ರೀಮಾನ್ ಬ್ರಹ್ಮಾ ಭಕ್ತಹಿತೇ ರತಃ ॥೭॥

ಮೇರು ಶೃಂಗೇ ವರೇ ರಮ್ಯೇ ಸರ್ವಯೋಗಿ ಸಮಾವೃತೇ ।
ಯಕ್ಷರಾಕ್ಷಸಗಂಧರ್ವ ಸಿದ್ಧಾದ್ಯೈಶ್ಚ ಸುಸೇವಿತೇ ॥೮॥

ನಾನಾರತ್ನ ಸಮಾಕೀರ್ಣೇ ನಾನಾಧಾತು ವಿಚಿತ್ರಿತೇ ।
ಶಕುಂತ ಸಂಘಸಂಘುಷ್ಟೇ ನಾನಾತೀರ್ಥ ಸಮಾವೃತೇ ॥೯॥

ಗುಹಾ ಕೋಟಿ ಸಮಾಯುಕ್ತೇ ಗಿರಿಪ್ರಸ್ರವಣೈರ್ಯುತೇ ।
ಮಧುರಾದಿ ರಸೈಃ ಷಡ್ಭಿಃ ಸಮೃದ್ಧೇಽತೀವ ಶೋಭನೇ ॥೧೦॥

ವಿಚಾರಿಸಿದರು. ಹೀಗೆ ವಿಚಾರಮಾಡಿದಾಗ್ಯೂ ಅವರು ಮುಖ್ಯ ವೇದಾರ್ಥದಲ್ಲಿ ಸಂಶಯ ಉಳ್ಳವರಾಗಿ ಹೆಚ್ಚಾಗಿ ತಪಸ್ಸನ್ನು ಮಾಡಿ ಬ್ರಹ್ಮನನ್ನು ಕೇಳಲು ಅವನ ಸ್ಥಾನಕ್ಕೆ ಹೋದರು. ॥೫-೬॥

ಆ ಬ್ರಹ್ಮನಾದರೋ ಹೀಗಿರುತ್ತಾನೆ. ಸಮಸ್ತ ಜಗತ್ತನ್ನೂ ಸೃಷ್ಟಿಮಾಡಿದ್ದರಿಂದ ಜಗತ್ತಿಗೆ ನಾಥನಾಗಿಯೂ, ಸಾಮಾನ್ಯವಾಗಿ ಸರ್ವವನ್ನೂ ತಿಳಿದವನೂ, ಪದಾರ್ಥಗಳ ವಿಶೇಷರೂಪವನ್ನೂ ತಿಳಿದವನಾಗಿ, ಬಹಳ ಕರುಣಾಶಾಲಿಯಾಗಿಯೂ, ಅಷ್ಟೈಶ್ವರ್ಯ ಉಳ್ಳವನಾಗಿಯೂ, ಭಕ್ತರ ಹಿತವನ್ನೇ ಬಯಸುವವನಾಗಿಯೂ, ಇದ್ದಾನೆ. ಬ್ರಹ್ಮನೆಂದರೆ ಪರಮೇಶ್ವರನೇ ರಜೋಗುಣೋಪಹಿತನಾದರೆ ಬ್ರಹ್ಮನೆಂದು ಹೇಳಿಸಿಕೊಳ್ಳುತ್ತಾನೆ. ಅನಂತರ ಅವನು ನಿಖಿಲವಾದ ಜಗತ್ತನ್ನು ಸೃಷ್ಟಿಸುತ್ತಾನೆ. ಪರಮಾತ್ಮನ ಸ್ವರೂಪವು ಮುಂಡಕದಲ್ಲಿ "ಯಃ ಸರ್ವಜ್ಞಃ ಸರ್ವವಿತ್ ಯಸ್ಯ ಜ್ಞಾನಮಯಂ ತಪಃ" ಎಂದು ಆಮ್ನಾತವಾಗಿದೆ. ॥೭॥

ಆ ಮೇರುಪರ್ವತದ ಶೃಂಗವನ್ನು ವರ್ಣಿಸುತ್ತಾನೆ. ಆ ಮೇರುವಿನ ಶಿಖರವು ಹೀಗಿದೆ. ಅತ್ಯಂತ ಶ್ರೇಷ್ಠವಾಗಿಯೂ, ಮನೋಹರವಾಗಿಯೂ, ಸಮಸ್ತಯೋಗಿಗಳಿಂದ ಆಶ್ರಿತವಾಗಿಯೂ, ಯಕ್ಷರು, ರಾಕ್ಷಸರು, ಸಿದ್ಧರು ಗಂಧರ್ವರು ವಿದ್ಯಾಧರರು ಇವರಿಂದ ಸೇವಿಸಲ್ಪಡತಕ್ಕದ್ದಾಗಿಯೂ, ಅನೇಕವಿಧವಾದ ಮಣಿಗಳಿಂದ ಕೂಡಿದ್ದಾಗಿಯೂ, ನಾನಾವಿಧವಾದ ನೀಲಪೀತಾದಿಗೈರಿಕಾದಿ ಧಾತುಗಳಿಂದ ಚಿತ್ರವರ್ಣವುಳ್ಳದ್ದಾಗಿಯೂ, ಪಕ್ಷಿಗಳ ಧ್ವನಿಯಿಂದ ವ್ಯಾಪ್ತವಾಗಿಯೂ, ನಾನಾಬಗೆಯವಾದ ತೀರ್ಥ

ತತ್ರ ಬ್ರಹ್ಮವನಂ ನಾಮ ಶತಯೋಜನಮಾಯತಂ ।
ಶತಯೋಜನವಿಸ್ತೀರ್ಣಂ ದೀರ್ಘಿಕಾಭಿಃ ಸುಸಂಯುತಂ ॥೧೧॥

ನಾನಾಪಶುಸಮಾಯುಕ್ತಂ ನಾನಾಪಕ್ಷಿ ಸಮಾಕುಲಂ ।
ಸ್ವಾದುಪಾನೀಯ ಸಂಯುಕ್ತಂ ಫಲಮೂಲೈಶ್ಚ ಸಂಯುತಂ ॥೧೨॥

ಭ್ರಮದ್ಭ್ರಮರಸಂಛನ್ನ ಸುಗಂಧ ಕುಸುಮದ್ರುಮಂ ।
ಮಂದಾನಿಲಸಮಾಯುಕ್ತಂ ಮಂದಾತಪಸಮಾಯುತಂ ॥೧೩॥

ನಿಶಾಕರ ಕರೈರ್ಯುಕ್ತಂ ವನಮಸ್ತಿ ಮಹತ್ತರಂ ।
ತತ್ರಜಾಂಬೂನದಮಯಂ ತರುಣಾದಿತ್ಯಸನ್ನಿಭಂ ॥೧೪॥

ನವಪ್ರಾಕಾರ ಸಂಯುಕ್ತ ಮಶೀತಿದ್ವಾರಸಂಯುತಂ ।
ಮಹಾಬಲಸಮೋಪೇತೈಃ ದ್ವಾರಪಾಲೈಶ್ಚಕೋಟಿಭಿಃ ॥೧೫॥

ಖಡ್ಗತೋಮರಚಾಪಾದಿ ಶಸ್ತ್ರಯುಕ್ತೈಶ್ಚ ರಕ್ಷಿತಂ ।
ಪುಷ್ಪ ಪ್ರಕರ ಸಂಕೀರ್ಣಂ ಪೂರ್ಣಕುಂಭೈಶ್ಚ ಸಂಯುತಂ ॥೧೬॥

ಗಳುಳ್ಳದ್ದಾಗಿಯೂ, ಅನೇಕ ಗುಹೆಗಳುಳ್ಳದ್ದಾಗಿಯೂ, ಮಧುರಾಮ್ಲಾದಿ ಷಡ್ವಿಧವಾದ ರಸಗಳಿಂದ ಸಮೃದ್ಧಿಯಾಗಿ ಅತ್ಯಂತ ಶೋಭಿಸುತ್ತಲೂ ಇದೆ. ॥೮-೯-೧೦॥

ಆಮೇರುಶೃಂಗದಲ್ಲಿ ಬ್ರಹ್ಮವನವೆಂಬ ಮಹತ್ತರವಾದ ಒಂದು ವನವಿದೆ. ಅದು ಹೀಗೆ ಇದೆ. ನೂರುಯೋಜನ ಅಗಲವಾಗಿಯೂ, ನೂರುಯೋಜನ ಉದ್ದವಾಗಿಯೂ, ಸಣ್ಣ ಸಣ್ಣ ನದಿಗಳಿಂದ ಕೂಡಿದ್ದಾಗಿಯೂ, ನಾನಾವಿಧ ಪಶುಗಳುಳ್ಳದ್ದಾಗಿಯೂ, ಅನೇಕವಿಧವಾದ ಪಕ್ಷಿಗಳುಳ್ಳದ್ದಾಗಿಯೂ, ಮಧುರವಾದ ಜಲ ಉಳ್ಳದ್ದಾಗಿಯೂ, ಫಲಮೂಲಗಳುಳ್ಳದ್ದಾಗಿಯೂ, ಹಾರಾಡುತ್ತಿರುವ ಭ್ರಮರಗಳಿಂದ ಮುಚ್ಚಲ್ಪಟ್ಟ ಸುಗಂಧವಾದ ಪುಷ್ಪಗಳುಳ್ಳ ವೃಕ್ಷಗಳುಳ್ಳದ್ದಾಗಿಯೂ, ಮಂದಮಾರುತ ಉಳ್ಳದ್ದಾಗಿಯೂ, ಎಳೆಯದಾದ ಬಿಸಿಲುಳ್ಳದ್ದಾಗಿಯೂ ಚಂದ್ರಕಿರಣಗಳುಳ್ಳದ್ದಾಗಿಯೂ ಇದೆ. ॥೧೧-೧೨-೧೩॥

ಆ ಬ್ರಹ್ಮವನದ ಮಧ್ಯದಲ್ಲಿ ಉತ್ತಮವಾದ ಒಂದು ಪಟ್ಟಣವಿದೆ. ಅದಾದರೋ ಹೀಗಿದೆ. ಸುವರ್ಣದಿಂದ ನಿರ್ಮಿತವಾಗಿಯೂ, ಮಧ್ಯಾಹ್ನದ ಸೂರ್ಯನಂತೆ ಪ್ರಕಾಶಮಾನವಾಗಿಯೂ, ಹೊಸದಾದ ಕೋಟೆಗಳಿಂದ ಆವೃತವಾಗಿಯೂ, ಎಂಬತ್ತು

ಜ್ವಲದ್ದೀಪೈಃ ಸಮಾಯುಕ್ತಂ ಪುಷ್ಪಮಾಲಾ ವಿರಾಜಿತಂ ।
ವಿಚಿತ್ರ ಚಿತ್ರಸಂಯುಕ್ತ ಭಿತ್ತಿಕೋಟಿ ಸುಶೋಭಿತಂ ॥೧೭॥

ಮುಕ್ತಾದಾಮ ಸಮಾಯುಕ್ತಂ ವಿತಾನೈರ್ಮೌಕ್ತಿಕೈರ್ಯುತಂ ।
ಅಭ್ರಗಾಮಿ ಧ್ವಜೈರ್ಯುಕ್ತಂ ಪ್ರಾಂಶುತೋರಣಸಂಯುತಂ ॥೧೮॥

ನೃತ್ಯಗೀತಾದಿಭಿರ್ಯುಕ್ತ ಮಪ್ಸರೋಗಣಸೇವಿತಂ ।
ನಾನಾವಿಧ ಮಹಾವಾದ್ಯೈರ್ನಾನಾತಾಲೈಶ್ಚ ಸಂಯುತಂ ॥೧೯॥

ಮೃದು ಮಧ್ಯೋಗ್ರ ಶಬ್ದಾಢ್ಯಂ ನಾನಾಕಾಹಲಸಂಯುತಂ ।
ವೇದಘೋಷ ಸಮಾಯುಕ್ತಂ ಸ್ಮೃತಿಘೋಷಸಮನ್ವಿತಂ ॥೨೦॥

ಪುರಾಣಘೋಷ ಸಂಯುಕ್ತ ಮಿತಿಹಾಸರವಾನ್ವಿತಂ ।
ಸರ್ವವಿದ್ಯಾ ರವೈರ್ಯುಕ್ತಂ ಸರ್ವಜ್ಞೈಶ್ಚ ಸಮಾವೃತಂ ॥೨೧॥

ಬಾಗಿಲುಗಳುಳ್ಳದ್ದಾಗಿಯೂ, ಅತ್ಯಂತ ಪರಾಕ್ರಮಶಾಲಿಗಳಾದ ಕೋಟಿ ಸಂಖ್ಯಾತರಾದ ಖಡ್ಗ, ತೋಮರ, ಧನುಸ್ಸು ಮುಂತಾದ ಆಯುಧಗಳನ್ನು ಧರಿಸಿರತಕ್ಕ ದ್ವಾರಪಾಲಕರಿಂದ ರಕ್ಷಿಸಲ್ಪಟ್ಟದ್ದಾಗಿಯೂ, ಪುಷ್ಪಗಳ ರಾಶಿಯಿಂದ ವ್ಯಾಪ್ತವಾದದ್ದಾಗಿಯೂ, ಪೂರ್ಣ ಕಲಶಗಳಿಂದ ಕೂಡಿದ್ದಾಗಿಯೂ, ಇದೆ. ||೧೪-೧೫-೧೬||

ಮತ್ತು ಉರಿಯುತ್ತಿರುವ ದೀಪ ಉಳ್ಳದ್ದಾಗಿಯೂ, ಪುಷ್ಪಮಾಲಿಕೆಯಿಂದ ಅಲಂಕೃತವಾಗಿಯೂ, ನಾನಾವಿಧವಾದ ಚಿತ್ರಗಳಿಂದ ಕೂಡಿದ ಗೋಡೆಗಳಿಂದ (ಅಲಂಕೃತವಾಗಿಯೂ) ಶೋಭಿತವಾಗಿಯೂ, ಮುತ್ತಿನ ಸರಗಳಿಂದ ಕೂಡಿದ್ದಾಗಿಯೂ, ಮುತ್ತಿನ ಪರದೆಗಳುಳ್ಳದ್ದಾಗಿಯೂ, ಆಕಾಶವನ್ನು ಮುಟ್ಟುತ್ತಿರುವ ಧ್ವಜಗಳುಳ್ಳದ್ದಾಗಿಯೂ, ನರ್ತನ, ಸಂಗೀತಗಳುಳ್ಳದ್ದಾಗಿಯೂ, ಅಪ್ಸರರಿಂದ ಸೇವಿಸಲ್ಪಟ್ಟದ್ದಾಗಿಯೂ, ನಾನಾವಿಧ ವಾದ್ಯಗಳಿಂದಲೂ, ತಾಳಗಳಿಂದಲೂ ಕೂಡಿದ್ದಾಗಿಯೂ, ಮೃದುವಾಗಿಯೂ, ಮಧ್ಯವಾಗಿಯೂ, ಗಟ್ಟಿಯಾಗಿಯೂ, ಇರುವ ಗಾನನಾದ ಉಳ್ಳದ್ದಾಗಿಯೂ, ನಾನಾವಿಧವಾದ ಕಾಹಳೆಯೆಂಬ ವಾದ್ಯ ಧ್ವನಿ ಉಳ್ಳದ್ದಾಗಿ, ವೇದಘೋಷಗಳಿಂದಲೂ ಸ್ಮೃತಿಘೋಷಗಳಿಂದಲೂ ಕೂಡಿರುವುದಾಗಿದೆ. ||೧೭-೧೮-೧೯-೨೦||

ಆ ಪುರವು ಪುರಾಣಪಠನ ಉಳ್ಳದ್ದಾಗಿಯೂ, ಇತಿಹಾಸಪಠನ ಉಳ್ಳದ್ದಾಗಿಯೂ, ಸರ್ವ ವಿದ್ಯೆಗಳ ಶಬ್ದ ಉಳ್ಳದ್ದಾಗಿಯೂ, ಸರ್ವಜ್ಞರಿಂದ ಕೂಡಿದ್ದಾಗಿಯೂ,

ಅಗಾಧಜಲ ಪರ್ಯಂತ ಮವರೋಧಸಮನ್ವಿತಂ ।
ರಥಕೋಟಿ ಸಮಾಯುಕ್ತಂ ಕೋಟಿಕೋಟಿ ಗಜಾವೃತಂ ॥೨೨॥

ಕೋಟಿ ಕೋಟಿ ಸಹಸ್ರೈಶ್ಚ ಮಹಾಶ್ವೈಶ್ಚ ವಿರಾಜಿತಂ ।
ಅಸ್ತ್ರ ಶಸ್ತ್ರಾದಿ ಸಂಯುಕ್ತೈ ರಸಂಖ್ಯಾತ ಬಲಾನ್ವಿತೈಃ ॥೨೩॥

ಅಸಂಖ್ಯಾತೈರ್ಭಟೈರ್ನಿತ್ಯಂ ರಕ್ಷಿತಂ ಪುರಮುತ್ತಮಂ ।
ಅಸ್ತಿ ಪುಣ್ಯವತಾಂ ಪ್ರಾಪ್ಯ ಮಪ್ರಾಪ್ಯಂ ಪಾಪಕರ್ಮಣಾಂ ॥೨೪॥

ತಸ್ಮಿನ್ನಂತಃಪುರೇ ಶುದ್ಧೇ ಸಹಸ್ರ ಸ್ಥೂಣ ಸಂಯುತೇ ।
ಸರ್ವಲಕ್ಷಣಸಂಯುಕ್ತೇ ಸರ್ವಾಲಂಕಾರ ಸಂಯುತೇ ॥೨೫॥

ಮೃದು ತೋರಣಸಂಯುಕ್ತೇ ಕಲ್ಪವೃಕ್ಷಸಮನ್ವಿತೇ ।
ಕಂಠೀರವ ಮುಖೈರ್ಯುಕ್ತೇ ಷಟ್ಪದ ಸ್ವನ ಸಂಯುತೇ ॥೨೬॥
ಮೃದುತಲ್ಪ ಸಮೋಪೇತೇ ರತ್ನನಿರ್ಮಿತ ಮಂಟಪೇ ।

ಆಳವಾದ ನೀರಿನ ಪ್ರದೇಶ ಉಳ್ಳದ್ದಾಗಿಯೂ, ಅಂತಃಪುರಗಳುಳ್ಳದ್ದಾಗಿಯೂ, ಕೋಟಿ ಸಂಖ್ಯಾತವಾದ ರಥಗಳುಳ್ಳದ್ದಾಗಿಯೂ, ಅನೇಕ ಕೋಟಿ ಆನೆಗಳುಳ್ಳದ್ದಾಗಿಯೂ, ಅನೇಕ ಕೋಟಿ ಸಂಖ್ಯಾತವಾದ ಕುದುರೆಗಳಿಂದ ಅಲಂಕೃತವಾಗಿಯೂ, ಅಸ್ತ್ರ ಶಸ್ತ್ರಗಳನ್ನು ಧರಿಸಿದವರಾಗಿಯೂ, ಅನೇಕ ಕೋಟಿ ಸಂಖ್ಯೆ ಉಳ್ಳವರಾಗಿರುವ, ಪರಾಕ್ರಮಶಾಲಿಗಳಾಗಿಯೂ ಇರತಕ್ಕ ಭಟರಿಂದ ಸದಾ ರಕ್ಷಿಸಲ್ಪಟ್ಟದ್ದಾಗಿಯೂ, ಪಾಪಿಷ್ಠರಿಗೆ ಹೊಂದಲಸಾಧ್ಯವಾಗಿಯೂ, ಪುಣ್ಯಪುರುಷರಿಗೆ ಹೊಂದಲು ಯೋಗ್ಯವಾಗಿಯೂ ಇದೆ. ||೨೧-೨೨-೨೩-೨೪||

ಆ ಪಟ್ಟಣದ ಮಧ್ಯಭಾಗದಲ್ಲಿ ಪರಿಶುದ್ಧವಾಗಿಯೂ, ಅನೇಕ ಅಲಂಕಾರ ಉಳ್ಳದ್ದಾಗಿಯೂ, ಸಮಸ್ತ ಲಕ್ಷಣ ಉಳ್ಳದ್ದಾಗಿಯೂ, ಕಲ್ಪವೃಕ್ಷಗಳುಳ್ಳದ್ದಾಗಿಯೂ, ಮೃದುವಾದ ತೋರಣಗಳುಳ್ಳದ್ದಾಗಿಯೂ, ಸಿಂಹಗಳ ಮುಖವುಳ್ಳದ್ದಾಗಿಯೂ, ಭ್ರಮರಗಳ ಧ್ವನಿಯುಳ್ಳದ್ದಾಗಿಯೂ, ಕೋಮಲವಾದ ಮೆತ್ತೆಯುಳ್ಳದ್ದಾಗಿಯೂ, ರತ್ನಗಳಿಂದ ಮಾಡಲ್ಪಟ್ಟದ್ದಾಗಿಯೂ ಇರತಕ್ಕ ಮಂಟಪವಿದೆ. ||೨೫-೨೬||

ಸರ್ವಶಬ್ದಾರ್ಥಭೂತಸ್ತು ಬ್ರಹ್ಮಾ ನಿವಸತಿ ಪ್ರಭುಃ ।
ದೇವ್ಯಾ ಚಾಪಿ ಸರಸ್ವತ್ಯಾ ವರ್ಣವಿಗ್ರಹಯಾ ಸಹ ॥೨೭॥

ತತ್ರ ದೇವಾ ದ್ವಿಜಾ ಗತ್ವಾ ದದೃಶುರ್ಲೋಕನಾಯಕಂ ॥೨೮॥

ನಾನಾರತ್ನ ಸಮೋಪೇತಂ ವಿಚಿತ್ರ ಮುಕುಟೋಜ್ವಲಂ ।
ರತ್ನಕುಂಡಲ ಸಂಯುಕ್ತಂ ಪ್ರಸನ್ನವದನಂ ಶುಭಂ ॥೨೯॥

ನಾನಾರತ್ನ ಸಮೋಪೇತ ಹಾರಾಭರಣ ಭೂಷಿತಂ ।
ಮಹಾರ್ಹಮಣಿ ಸಂಯುಕ್ತ ಕೇಯೂರ ಕರ ಸಂಯುತಂ ॥೩೦॥

ವಿಚಿತ್ರಕಟಕೋಪೇತ ಮಂಗುಳೀಯಕ ಶೋಭಿತಂ ।
ಉತ್ತರೀಯಕ ಸಂಯುಕ್ತಂ ಶುಕ್ಲಯಜ್ಞೋಪವೀತಿನಂ ॥೩೧॥

ನಾನಾರತ್ನ ಸಮೋಪೇತಂ ತುಂದಬಂಧವಿರಾಜಿತಂ ।
ಚಂದನಾಗರು ಕರ್ಪೂರ ಕ್ಷೋದದಿಗ್ಧತನೂರುಹಂ ॥೩೨॥

ಎಲೈ ಬ್ರಾಹ್ಮಣರೇ, ಆ ಮಂಟಪದಲ್ಲಿ ವರ್ಣಗಳೇ ಶರೀರವಾಗಿ ಉಳ್ಳ ಸರಸ್ವತೀದೇವಿಯೊಡನೆ ಸಮಸ್ತಲೋಕಕ್ಕೂ ನಾಯಕನಾದ ಬ್ರಹ್ಮನನ್ನು ದೇವತೆಗಳು ನೋಡಿದರು. ಆ ಮಂಟಪದಲ್ಲಿ ಸರಸ್ವತಿಯೊಡನೆ ಸರ್ವಶಬ್ದಾರ್ಥರೂಪನಾದ ಬ್ರಹ್ಮನು ಇರುತ್ತಾನೆ. ॥೨೭-೨೮॥

ಆ ಬ್ರಹ್ಮನು ಹೀಗಿರುತ್ತಾನೆ. ಅನೇಕ ರತ್ನಗಳಿಂದ ಕೂಡಿದವನಾಗಿಯೂ, ಚಿತ್ರವಾದ ಕಿರೀಟದಿಂದ ಪ್ರಕಾಶಮಾನವಾಗಿಯೂ, ರತ್ನಖಚಿತವಾದ ಕರ್ಣಕುಂಡಲಗಳುಳ್ಳವನಾಗಿಯೂ, ನಗುತ್ತಿರುವ ಮುಖ ಉಳ್ಳವನಾಗಿಯೂ, ಮಂಗಳಕರವಾಗಿಯೂ, ಅನೇಕ ರತ್ನಗಳುಳ್ಳ ಹಾರವೇ ಮುಂತಾದ ಒಡವೆಗಳಿಂದ ಅಲಂಕೃತನಾಗಿಯೂ, ಬಹಳ ಬೆಲೆಗಳುಳ್ಳ ರತ್ನಗಳಿಂದ ಕೂಡಿದ ಕಂಕಣಗಳುಳ್ಳ ಕೈಯುಳ್ಳವನಾಗಿಯೂ, ॥೨೯-೩೦॥

ವಿಚಿತ್ರವಾದ ಕಡಗ ಉಳ್ಳವನಾಗಿಯೂ, ಉಂಗುರಗಳಿಂದ ಶೋಭಿತನಾಗಿಯೂ, ಉತ್ತರೀಯ ಉಳ್ಳವನಾಗಿಯೂ, ಶುಭ್ರವಾದ ಯಜ್ಞೋಪವೀತ ಉಳ್ಳವನಾಗಿಯೂ, ಅನೇಕ ಬಗೆಯುವಾದ ರತ್ನಗಳುಳ್ಳವನಾಗಿಯೂ ಯೋಗಪಟ್ಟವುಳ್ಳವನಾಗಿಯೂ, ಚಂದನ, ಅಗರು, ಕರ್ಪೂರ, ಇವುಗಳ ಪುಡಿಯಿಂದ ವ್ಯಾಪಿಸಲ್ಪಟ್ಟ

ಸುಗಂಧ ಕುಸುಮೋತ್ಪನ್ನ ನಾನಾಮಾಲಾ ವಿಭೂಷಿತಂ ।
ಶುಕ್ಲವಸ್ತ್ರ ಪರೀಧಾನಂ ತಪ್ತಜಾಂಬೂನದಪ್ರಭಂ ॥೩೩॥

ಸ್ವಭಾಸಾ ಸಕಲಂ ನಿತ್ಯಂ ಭಾಸಯಂತಂ ಪರಾತ್ಪರಂ ।
ಸುರಾಸುರ ಮುನೀಂದ್ರೈಶ್ಚ ವಂದ್ಯಮಾನ ಪದಾಂಬುಜಂ ॥೩೪॥

ತಂ ದೃಷ್ಟ್ವಾ ಸರ್ವಕರ್ತಾರಂ ಸಾಕ್ಷಿಣಂ ತಮಸಃ ಪರಂ ।
ಮಹಾಪ್ರೀತಿಸಮೋಪೇತಾಃ ಪ್ರಸನ್ನವದನೇಕ್ಷಣಾಃ ॥೩೫॥

ಸಂಜಾತ ಪುಲಕೈರ್ಯುಕ್ತಾ ವಿವಶಾ ಗದ್ಗದಸ್ವರಾಃ ।
ಪ್ರಕಾಶಿತ ಸುಖಾಬ್ಧ್ಯಂತ ರ್ನಿಮಗ್ನಾ ನಿರ್ಮಲಾವೃತಂ ॥೩೬॥

ನಿರಸ್ತ ನಿಖಿಲ ಧ್ವಾಂತಾಃ ಪ್ರಣಮ್ಯ ವಸುಧಾತಲೇ ।
ಶಿರಸ್ಯಂಜಲಿ ಮಾಧಾಯ ಸರ್ವೇ ದೇವಾಃ ಸಮಾಹಿತಾಃ ॥೩೭॥

ತುಷ್ಟುವುಃ ಹೃಷ್ಟ ಮೀಶಾನಂ ಸರ್ವಲೋಕಪಿತಾಮಹಂ ।
ಮುಕ್ತಿದಂ ಪುಣ್ಯನಿಷ್ಠಾನಾಂ ದುಃಖದಂ ಪಾಪಕರ್ಮಣಾ ॥೩೮॥

ರೋಮಗಳುಳ್ಳವನಾಗಿಯೂ, ಪರಿಮಳವುಳ್ಳ ಪುಷ್ಪಗಳ ಮಾಲಿಕೆಗಳಿಂದ ಅಲಂಕೃತವಾದ ಶರೀರ ಉಳ್ಳವನಾಗಿಯೂ, ಶುಭ್ರವಾದ ವಸ್ತ್ರವನ್ನು ಹೊದೆದವನಾಗಿಯೂ, ಕಾಯಿಸಿದ ಚಿನ್ನದಂತೆ ಕಾಂತಿಯುಳ್ಳವನಾಗಿಯೂ, ತನ್ನ ಕಾಂತಿಯಿಂದ ಸಮಸ್ತವನ್ನೂ ಬೆಳಗತಕ್ಕವನಾಗಿಯೂ, ಶ್ರೇಷ್ಠವಾದುವುಗಳಿಗಿಂತಲೂ ಶ್ರೇಷ್ಠನಾಗಿಯೂ, ಸುರರು, ಅಸುರರು, ಇವರುಗಳಿಂದ ನಮಸ್ಕರಿಸಲ್ಪಟ್ಟ ಪಾದಾರವಿಂದಗಳುಳ್ಳವನಾಗಿಯೂ, ಸಮಸ್ತಕ್ಕೂ ಸೃಷ್ಟಿಕರ್ತನೂ, ಸರ್ವಕ್ಕೂ ಸಾಕ್ಷಿಯೂ ಆಗಿ, ಅಜ್ಞಾನವನ್ನು ಮೀರಿರತಕ್ಕವನಾಗಿಯೂ, ಇರುವ ಬ್ರಹ್ಮನನ್ನು ನೋಡಿ ದೇವತೆಗಳು ಹೆಚ್ಚಾದ ಸಂತೋಷವುಳ್ಳವರಾಗಿಯೂ, ಪ್ರಸನ್ನವಾದ ಮುಖ ಮತ್ತು ಕಣ್ಣುಗಳುಳ್ಳವರಾಗಿಯೂ, ॥೩೧-೩೨-೩೩-೩೪-೩೫॥

ಆಶ್ಚರ್ಯ ರೋಮಾಂಚ ಉಳ್ಳವರಾಗಿ ಪರಾಧೀನರಾಗಿ ನಡುಗುತ್ತಿರುವ ಧ್ವನಿಯುಳ್ಳವರಾಗಿಯೂ, ಪ್ರಕಾಶಮಾನವಾದ ಸುಖವೆಂಬ ಸಾಗರದಲ್ಲಿ ಮುಳುಗಿರತಕ್ಕವರಾಗಿ, ನಿರಸ್ತವಾದ ಅಜ್ಞಾನ ಉಳ್ಳವರಾಗಿಯೂ ಸಹ, ಭೂಮಿಯಲ್ಲಿ ಸಾಷ್ಟಾಂಗವೆರಗಿ, ಶಿರಸ್ಸಿನಲ್ಲಿ ಅಂಜಲಿಯನ್ನಿಟ್ಟು, ಶಾಂತವಾದ ಮನಸ್ಸುಳ್ಳವನಾಗಿ ಸಂತೋ

|| ದೇವಾ ಊಚುಃ ||

ಬ್ರಹ್ಮಣೇ ಬ್ರಹ್ಮವಿಜ್ಞಾನ ದುಗ್ಧೋದಧಿ ವಿಧಾಯಿನೇ ।
ಬ್ರಹ್ಮತತ್ವ ದಿದೃಕ್ಷೂಣಾಂ ಬ್ರಹ್ಮದಾಯ ನಮೋ ನಮಃ ||೩೯||

ಕಷ್ಟಸಾಗರ ಮಗ್ನಾನಾಂ ಸಂಸಾರೋತ್ತಾರ ಹೇತವೇ ।
ಸಾಕ್ಷಿಣೇ ಸರ್ವಭೂತಾನಾಂ ಸಾಕ್ಷ್ಯಹೀನಾಯ ವೈ ನಮಃ ||೪೦||

ಸರ್ವಧಾತ್ರೇ ವಿಧಾತ್ರೇ ಚ ಸರ್ವದ್ವಂದ್ವಾಪಹಾರಿಣೇ ।
ಸರ್ವಾವಸ್ಥಾಸು ಸರ್ವೇಷಾಂ ಸಾಕ್ಷಿಣೇ ವೈ ನಮೋನಮಃ ||೪೧||

ಷಪಟ್ಟವನಾಗಿಯೂ, ಸನಕನೇ ಮೊದಲಾದ ದಿವ್ಯಯೋಗಿಗಳೊಡನೆ ಇರುವ, ಈಶ್ವರನಾಗಿಯೂ, ಸಮಸ್ತ ಲೋಕಕ್ಕೂ ತಾತನಾಗಿಯೂ, ಪುಣ್ಯವಂತರಿಗೆ ಮುಕ್ತಿಯನ್ನು ಕೊಡತಕ್ಕವನಾಗಿಯೂ, ಪಾಪಿಷ್ಠರಿಗೆ ದುಃಖವನ್ನುಂಟುಮಾಡತಕ್ಕವನಾಗಿಯೂ, ಇರುವ ಬ್ರಹ್ಮನನ್ನು ಹೀಗೆ ಸ್ತೋತ್ರಮಾಡಿದರು. ||೩೬-೩೭-೩೮||

ದೇವತೆಗಳು ಹೇಳಿದರು—ಬ್ರಹ್ಮಜ್ಞಾನವೆಂಬ ಕ್ಷೀರಸಮುದ್ರವನ್ನುಂಟುಮಾಡತಕ್ಕವನಾಗಿಯೂ, ಬ್ರಹ್ಮನ ಪಾರಮಾರ್ಥಿಕವಾದ ನಿಷ್ಪ್ರಂಪಂಚವಾದ, ಸಚ್ಚಿದಾನಂದವಾದ ಅಖಂಡೈಕರಸಸ್ವರೂಪವನ್ನು ಸಾಕ್ಷಾತ್ಕರಿಸಿಕೊಳ್ಳಲು ಬಯಸುವವರಿಗೆ ಅಂತಹ ಬ್ರಹ್ಮಸ್ವರೂಪವನ್ನು ಉಪದೇಶಿಸತಕ್ಕ ಬ್ರಹ್ಮನಿಗೆ ನಮಸ್ಕಾರವು. ||೩೯||

ಕಷ್ಟವೆಂಬ ಸಾಗರದಲ್ಲಿ ಮುಳುಗಿರತಕ್ಕವರ ಸಂಸಾರವನ್ನು ಹೋಗಲಾಡಿಸತಕ್ಕವನಾಗಿಯೂ, ಯಾವಾಗಲೂ ಎಲ್ಲಾ ಭೂತಗಳಿಗೂ ಸಾಕ್ಷಿಯಾಗಿಯೂ, ತಾನು ಮಾತ್ರ ಸಾಕ್ಷ್ಯಕೋಟಿಯಲ್ಲಿ ಸೇರದೇ ಇರತಕ್ಕವನಾಗಿಯೂ, ಇರುವ ಬ್ರಹ್ಮದೇವನಿಗೆ ನಮಸ್ಕಾರವು. ||೪೦||

ಸಮಸ್ತ ಜಗತ್ತನ್ನು ಧಾರಣೆಮಾಡಿದವನೂ, ಸಮಸ್ತ ಜಗತ್ತಿಗೆ ಕರ್ತನೂ, ಸಮಸ್ತ ಶೀತೋಷ್ಣ ಸುಖದುಃಖಾದಿ ದ್ವಂದ್ವಗಳನ್ನೂ ಹೋಗಲಾಡಿಸತಕ್ಕ, ಸಮಸ್ತ ಪ್ರಾಣಿಗಳ ಜಾಗ್ರತ್, ಸ್ವಪ್ನ, ಸುಷುಪ್ತ್ಯಾದಿ ಅವಸ್ಥೆಗಳಲ್ಲಿ ಸಾಕ್ಷಿಚೈತನ್ಯರೂಪನಾಗಿರುವ ಬ್ರಹ್ಮನಿಗೆ ನಮಸ್ಕಾರವು. ||೪೧||

ಪರಾತ್ಪರ ವಿಹೀನಾಯ ಪರಾಯ ಪರಮೇಷ್ಠಿನೇ ।
ಪರಿಜ್ಞಾನವತಾ ಮಾತ್ಮಸ್ವರೂಪಾಯ ನಮೋ ನಮಃ ॥೪೨॥

ಪದ್ಮಜಾಯ ಪವಿತ್ರಾಯ ಪದ್ಮನಾಭಸುತಾಯ ಚ ।
ಪದ್ಮಪುಷ್ಪೇಣ ಪೂಜ್ಯಾಯ ನಮಃ ಪದ್ಮಧರಾಯ ಚ ॥೪೩॥

ಸುರಜ್ಯೇಷ್ಠಾಯ ಸೂರ್ಯಾದಿ ದೇವತಾ ತೃಪ್ತಿಕಾರಿಣೇ ।
ಸುರಾಸುರ ನರಾದೀನಾಂ ಸುಖದಾಯ ನಮೋ ನಮಃ ॥೪೪॥

ವೇಧಸೇ ವಿಶ್ವನೇತ್ರಾಯ ವಿಶುದ್ಧಜ್ಞಾನರೂಪಿಣೇ ।
ವೇದವೇದ್ಯಾಯ ವೇದಾಂತ ವಿ(ನಿ)ಧಯೇ ವೈ ನಮೋ ನಮಃ ॥೪೫॥

ವಿಧಯೇ ವಿಧಿಹೀನಾಯ ವಿಧಿವಾಕ್ಯ ವಿಧಾಯಿನೇ ।
ವಿಧ್ಯುಕ್ತ ಕರ್ಮನಿಷ್ಠಾನಾಂ ನಮೋ ವಿದ್ಯಾಪ್ರದಾಯಿನೇ ॥೪೬॥

ಮಹತ್ತೇ ಮುಂತಾದ ಭೂತಭೌತಿಕ ಕಾರ್ಯಕ್ಕಿಂತಲೂ, ಪರವಾದದ್ದು ಅವ್ಯಕ್ತವೆಂಬ ಮಾಯೆಯು. ಅಂತಹ ಮಾಯೆಯಿಲ್ಲದವನಾಗಿ ಸರ್ವಕ್ಕಿಂತಲೂ ಶ್ರೇಷ್ಠನೂ, ಪರಮಪದದಲ್ಲಿರತಕ್ಕವನೂ, ಎಲ್ಲ ಜ್ಞಾನ ಉಳ್ಳವರಿಗೆ ಆತ್ಮಸ್ವರೂಪನೂ, ಕಮಲದಿಂದ ಹುಟ್ಟಿದವನೂ, ಪರಿಶುದ್ಧನೂ, ಪದ್ಮವೇ ನಾಭಿಯಲ್ಲಿರತಕ್ಕ ನಾರಾಯಣನ ಪುತ್ರನೂ, ಕಮಲಪುಷ್ಪಗಳಿಂದ ಪೂಜಿಸಲು ಯೋಗ್ಯನೂ, ಕಮಲ ಪುಷ್ಪವನ್ನು ಧರಿಸಿರುವವನೂ, ಸುರರಿಗೆಲ್ಲರಿಗೂ ಜ್ಯೇಷ್ಠನೂ, ಸೂರ್ಯನೇ ಮುಂತಾದ ಎಲ್ಲ ದೇವತೆಗಳಿಗೂ ತೃಪ್ತಿಯನ್ನುಂಟುಮಾಡುವವನೂ, ದೇವತೆಗಳೂ, ಅಸುರರೂ, ಮನುಷ್ಯರು ಇವರುಗಳಿಗೆ ಸುಖವನ್ನು ಕೊಡುವವನೂ, ಆದ ಬ್ರಹ್ಮನಿಗೆ ನತಿಯು. ॥೪೨-೪೩-೪೪॥

ಸಕಲ ಜಗತ್ತಿಗೂ ನೇತ್ರದಂತೆ ಪ್ರಕಾಶಕನಾಗಿಯೂ, ಅವಿದ್ಯಾರೂಪವಾದ ಮಲವಿಲ್ಲದೇ ಶುದ್ಧವಾದ ಜ್ಞಾನಸ್ವರೂಪನಾಗಿಯೂ, ವೇದಗಳಿಂದ ತಿಳಿಯುವವನೂ, ವೇದಾಂತವಿಷಯಕವಾದ ಜ್ಞಾನವನ್ನುಂಟುಮಾಡುವವನೂ, ಆದ ಬ್ರಹ್ಮನಿಗೆ ನತಿಯು. ॥೪೫॥

ಎಲ್ಲಕ್ಕೂ ಸೃಷ್ಟಿಕರ್ತನಾಗಿಯೂ, ತನಗೆ ಇನ್ನೊಬ್ಬ ವಿಧಾತನಿಲ್ಲದವನಾಗಿಯೂ ವಿಧಿವಾಕ್ಯಗಳನ್ನು ಪ್ರಕಟಮಾಡತಕ್ಕವನೂ, ವಿಧ್ಯುಕ್ತವಾದ ಕರ್ಮಗಳನ್ನು ಅನು

ವಿರಿಂಚಾಯ ವಿಶಿಷ್ಟಾಯ ವಿಶಿಷ್ಟಾರ್ತಿ ಹರಾಯ ಚ ।
ವಿಷಣ್ಣಾನಾಂ ವಿಷಾದಾಬ್ಧಿ ವಿನಾಶಾಯ ನಮೋ ನಮಃ ॥೪೭॥

ನಮೋ ಹಿರಣ್ಯಗರ್ಭಾಯ ಹಿರಣ್ಯಗಿರಿವರ್ತಿನೇ ।
ಹಿರಣ್ಯದಾನ ಲಭ್ಯಾಯ ಹಿರಣ್ಯಾತಿ ಪ್ರಿಯಾಯ ಚ ॥೪೮॥

ಶತಾನಂದಾಯ ಶಾಂತಾಯ ಶಾಂಕರ ಜ್ಞಾನದಾಯಿನೇ ।
ಶಮಾದಿ ಸಹಿತ ಸ್ಯೈವ ಜ್ಞಾನದಾಯ ನಮೋ ನಮಃ ॥೪೯॥

ಶಂಭವೇ ಶಂಭು ಭಕ್ತಾನಾಂ ಶಂಕರಾಯ ಶರೀರಿಣಾಂ ।
ಶಾಂಕರಜ್ಞಾನ ಹೀನಾನಾಂ ಶತ್ರವೇ ವೈ ನಮೋ ನಮಃ ॥೫೦॥

ನಮಃ ಸ್ವಯಂಭುವೇ ನಿತ್ಯಂ ಸ್ವಯಂಭು ಬ್ರಹ್ಮದಾಯಿನೇ ।
ಸ್ವಯಂ ಬ್ರಹ್ಮಸ್ವರೂಪಾಯ ಸ್ವತಂತ್ರಾಯ ನಮೋ ನಮಃ ॥೫೧॥

ಷ್ಠಾನಮಾಡುವವರಿಗೆ ವಿದ್ಯೆಯನ್ನು ಕೊಡುವ, ಈ ಪ್ರಪಂಚವನ್ನು ರಚಿಸುವ, ಶ್ರೇಷ್ಠನೂ, ಶಿಷ್ಟರ ಪೀಡೆಯನ್ನು ಹೋಗಲಾಡಿಸತಕ್ಕವನೂ, ದುಃಖವನ್ನು ಹೊಂದಿರತಕ್ಕವರ ದುಃಖವೆಂಬ ಸಾಗರವನ್ನು ಹೋಗಲಾಡಿಸುವವನೂ, ಸುವರ್ಣವೇ ಗರ್ಭದಲ್ಲುಳ್ಳವನೂ, ಸುವರ್ಣಪರ್ವತದಲ್ಲಿ ವಾಸಿಸುವವನೂ, ಹಿರಣ್ಯದಾನದಿಂದ ಲಭ್ಯನೂ, ಹಿರಣ್ಯದಾನದಲ್ಲಿ ಹೆಚ್ಚಾದ ಪ್ರೀತಿಯುಳ್ಳವನೂ, ಆದ ಬ್ರಹ್ಮನಿಗೆ ನಮಸ್ಕಾರವು. ॥೪೬-೪೭-೪೮॥

ಮನುಷ್ಯರ ಆನಂದಕ್ಕಿಂತಲೂ ನೂರಾರು ಪಾಲು ಹೆಚ್ಚಾಗಿ ಆನಂದ ಉಳ್ಳವನೂ, ಬ್ರಹ್ಮರೂಪ ಶಂಕರನ ಜ್ಞಾನದಾತನೂ, ಶಮಾದಿಗುಣಗಳುಳ್ಳವರಿಗೆ ಜ್ಞಾನೋಪದೇಶಕನೂ, ಶಂಭುವೂ, ಶಂಭುಭಕ್ತರಾದವರಿಗೆ ಮಂಗಳವನ್ನುಂಟು ಮಾಡುವವನೂ, ಶಂಕರನ ಜ್ಞಾನವಿಲ್ಲದವರಿಗೆ ಶತ್ರುವಂತಿರತಕ್ಕವನೂ, ಆದ ಬ್ರಹ್ಮನಿಗೆ ನಮಸ್ಕಾರವು. ॥೪೯-೫೦॥

ತಾನೇ ಹುಟ್ಟಿದವನೂ, ಸ್ವಯಂಭುವವೆಂಬ ಬ್ರಹ್ಮನಾಗಿಯೂ, ತಾನು ಬ್ರಹ್ಮರೂಪನೂ, ಸ್ವತಂತ್ರನೂ, ದುಷ್ಟರನ್ನು ನಾಶಪಡಿಸುವವನೂ, ದುರಾಚಾರದಲ್ಲಿರತಕ್ಕವರಿಗೆ ದುಃಖವನ್ನುಂಟುಮಾಡುವವನೂ, ಸದಾಚಾರದಲ್ಲಿರತಕ್ಕವರಿಗೆ

ದ್ರುಹಿಣಾಯ ದುರಾಚಾರ ನಿರತಸ್ಯ ದುರಾತ್ಮನಃ ।
ದುಃಖದಾಯಾನ್ಯ ಜಂತೂನಾಂ ಆತ್ಮದಾಯ ನಮೋನಮಃ ॥೫೨॥

ವಂದ್ಯ ಹೀನಾಯ ವಂದ್ಯಾಯ ವರದಾಯ ಪದಸ್ಯ ಚ ।
ವರಿಷ್ಠಾಯ ವರಿಷ್ಠಾನಾಂ ಚತುರ್ವಕ್ತ್ರಾಯ ವೈ ನಮಃ ॥೫೩॥

ಪಜಾಪತಿ ಸಮಾಖ್ಯಾಯ ಪ್ರಜಾನಾಂ ಪತಯೇ ಸದಾ ।
ಪ್ರಾಜಾಪತ್ಯ ವಿರಕ್ತಸ್ಯ ನಮಃ ಪ್ರಜ್ಞಾನದಾಯಿನೇ ॥೫೪॥

ಪಿತಾಮಹಾಯ ಪಿತ್ರಾದಿ ಕಲ್ಪನಾರಹಿತಾಯ ಚ ।
ಪಿಶುನಾಗಮ್ಯ ದೇಹಾಯ ಪೇಶಲಾಯ ನಮೋ ನಮಃ ॥೫೫॥

ಜಗತ್ಕರ್ತ್ರೇ ಜಗದ್ಗೋಪ್ತ್ರೇ ಜಗದ್ಧಂತ್ರೇ ಪರಾತ್ಮನೇ ।
ಜಗದ್ದೃಶ್ಯ ವಿಹೀನಾಯ ಚಿನ್ಮಾತ್ರಜ್ಯೋತಿಷೇ ನಮಃ ॥೫೬॥

ವಿಶ್ವೋತ್ತೀರ್ಣಾಯ ವಿಶ್ವಾಯ ವಿಶ್ವಹೀನಾಯ ಸಾಕ್ಷಿಣೇ ।
ಸ್ವಪ್ರಕಾಶೈಕಮಾನಾಯ ನಮಃ ಪೂರ್ಣ ಪರಾತ್ಮನೇ ॥೫೭॥

ಸುಖವನ್ನುಂಟುಮಾಡುಮಾಡುವವನೂ, ಸಚ್ಚಿದಾನಂದರೂಪವಾದ ಆತ್ಮತತ್ತ್ವೋಪದೇಶಕನೂ, ತಾನು ನಮಸ್ಕರಿಸಲು ಮೇಲಾದ ಇನ್ನೊಬ್ಬರಿಲ್ಲದವನಾಗಿಯೂ, ಸರ್ವರಿಂದ ವಂದ್ಯನಾಗಿಯೂ, ವರವನ್ನು ಕೊಡತಕ್ಕವನೂ, ಶ್ರೇಷ್ಠನೂ, ಶ್ರೇಷ್ಠರಿಗೆಲ್ಲರಿಗೂ ಶ್ರೇಷ್ಠನೂ, ನಾಲ್ಕು ಮುಖಗಳುಳ್ಳವನೂ, ಪ್ರಜಾಪತಿಯೆಂಬ ಹೆಸರುಳ್ಳವನೂ, ಪ್ರಜೆಗಳಿಗೆ ಒಡೆಯನೂ, ಜೀವನ್ಮುಕ್ತನಾದುದರಿಂದ ತನ್ನ ಪದವಿಯಲ್ಲಿಯೂ ವೈರಾಗ್ಯವುಳ್ಳವನೂ, ಉತ್ಕೃಷ್ಟವಾದ ಜ್ಞಾನವನ್ನು ಕೊಡುವವನೂ, ಅಜ್ಞನೂ, ಪಿತೃಪುತ್ರಾದಿ ಕಲ್ಪನೆ (ಆರೋಪ) ಇಲ್ಲದವನೂ, ಮೂರ್ಖರಿಂದ ಪಡೆಯಲಸಾಧ್ಯವಾದ ಶರೀರವುಳ್ಳವನೂ, ಕೋಮಲವಾದ ಸ್ವಭಾವವುಳ್ಳವನೂ, ಜಗತ್ತಿಗೆ ಕರ್ತನೂ, ಜಗತ್ತನ್ನು ಕಾಪಾಡುವವನೂ, ಜಗತ್ತನ್ನು ನಾಶಗೊಳಿಸುವವನೂ, ಪರಮಾತ್ಮನೂ, ಪಾರಮಾರ್ಥಿಕವಾಗಿ ಜಗದ್ರೂಪವಾದ ದೃಶ್ಯರಹಿತನೂ, ಜ್ಞಾನರೂಪವಾದ ಜ್ಯೋತಿಃ ಸ್ವಭಾವದವನೂ ಆದ ಬ್ರಹ್ಮನಿಗೆ ನಮಸ್ಕಾರವು. ॥೫೧-೫೨-೫೩-೫೪-೫೫-೫೬॥

ಪ್ರಪಂಚವನ್ನು ಮೀರಿರತಕ್ಕವನೂ, ವ್ಯಾಪಕನೂ, ಪ್ರಪಂಚಶೂನ್ಯನೂ, ಸರ್ವಸಾಕ್ಷಿಯೂ, ಪ್ರಮಾಣಾಂತರವಿಲ್ಲದೇ ಸ್ವಪ್ರಕಾಶದಿಂದಲೇ ಪ್ರಕಾಶಿಸತಕ್ಕ

ಸ್ತುತ್ಯಾಯ ಸ್ತುತಿಹೀನಾಯ ಸ್ತೋತ್ರರೂಪಾಯ ತತ್ವತಃ ।
ಸ್ತೋತೄಣಾಮಪಿ ಸರ್ವೇಷಾಂ ಸುಖದಾಯ ನಮೋನಮಃ ॥೫೮॥

॥ ಸೂತ ಉವಾಚ ॥

ಏವಂ ಬ್ರಹ್ಮಾಣ ಮಾದಿತ್ಯಾಃ ಸ್ತುತ್ವಾ ಭಕ್ತಿ ಪುರಸ್ಸರಂ ।
ಪೃಷ್ಟವಂತಸ್ತು ಸರ್ವೇಷಾಂ ವೇದಾನಾಮರ್ಥಮಾದರಾತ್ ॥೫೯॥

ಬ್ರಹ್ಮಾಽಪಿ ಬ್ರಹ್ಮವಿನ್ಮುಖ್ಯಃ ಸರ್ವದೇವೈರಭಿಷ್ಟುತಃ ।
ಪ್ರಾಹ ಗಂಭೀರಯಾ ವಾಚಾ ವೇದಾನಾಮರ್ಥ ಮುತ್ತಮಂ ॥೬೦॥

ಇತಿ ಶ್ರೀಸ್ಕಂದಪುರಾಣೇ ಸೂತಸಂಹಿತಾಯಾಂ ಚತುರ್ಥಸ್ಯ ಯಜ್ಞವೈಭವಖಂಡಸ್ಯೋಪರಿಭಾಗೇ ಬ್ರಹ್ಮಗೀತಾಸೂಪನಿಷತ್ಸು ಬ್ರಹ್ಮಗೀತಿರ್ನಾಮ ಪ್ರಥಮೋಽಧ್ಯಾಯಃ

ಪರಿಪೂರ್ಣನಾದ ಪರಮಾತ್ಮನಾದ ಸ್ತೋತ್ರಮಾಡಲು ಯೋಗ್ಯನೂ, ಪಾರಮಾರ್ಥಿಕವಾಗಿ ನಿರ್ಗುಣವಾದುದರಿಂದ ಸ್ತೋತ್ರಮಾಡಲಸಾಧ್ಯನೂ, ಸ್ತುತಿರೂಪನೂ, ಸ್ತೋತ್ರವನ್ನು ಮಾಡತಕ್ಕ ಎಲ್ಲರಿಗೂ ಸುಖವನ್ನು ಕೊಡುವವನೂ, ಆದ ಬ್ರಹ್ಮನಿಗೆ ಮತ್ತೆ ಮತ್ತೆ ನಮಸ್ಕಾರವು. ॥೫೭-೫೮॥

ಸೂತನು ಹೇಳಿದನು—ಈ ರೀತಿಯಲ್ಲಿ ಅದಿತಿಪುತ್ರರಾದ ದೇವತೆಗಳು ಬ್ರಹ್ಮನನ್ನು ಭಕ್ತಿಪೂರ್ವಕವಾಗಿ ಸ್ತೋತ್ರಮಾಡಿ, ಸಮಸ್ತ ವೇದವಾಕ್ಯಗಳಿಂದ ಪ್ರತಿಪಾದಿಸಲ್ಪಟ್ಟ ಮುಖ್ಯವಾದ ಅರ್ಥವು ಎಂತಹದೆಂದು ಕೇಳಿದರು. ಹೀಗೆ ದೇವತೆಗಳು ಕೇಳಲು, ಬ್ರಹ್ಮಜ್ಞಾನಿಗಳಲ್ಲಿ ಶ್ರೇಷ್ಠನೂ, ಸಮಸ್ತ ವೇದಗಳಿಂದ ಹೊಗಳಿಸಿಕೊಂಡವನೂ, ಆದ ಬ್ರಹ್ಮನು ಗಂಭೀರವಾದ ವಾಣಿಯಿಂದ ವೇದಗಳ ಉತ್ತಮವಾದ ಅರ್ಥಗಳನ್ನು ಹೀಗೆ ತಿಳಿಯ ಹೇಳಿದನು. ॥೫೯-೬೦॥

ಇಲ್ಲಿಗೆ ಸ್ಕಾಂದಪುರಾಣದ ಸೂತಸಂಹಿತೆಯಲ್ಲಿ ನಾಲ್ಕನೆಯ ಭಾಗವಾದ ಯಜ್ಞವೈಭವಖಂಡದಲ್ಲಿ ಎರಡನೆಯ ಭಾಗದಲ್ಲಿರುವ, ಬ್ರಹ್ಮನಿಂದ ಉಪದೇಶಿಸಲ್ಪಟ್ಟಿರುವ, ಉಪನಿಷತ್ತುಗಳ ಹಾಗೆ ತತ್ವವನ್ನು ತಿಳಿಯ ಹೇಳುವ, ಬ್ರಹ್ಮಗೀತೆಯಲ್ಲಿ ಮೊದಲನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಅಥಾಸ್ಯಾಃ ಶ್ರೀಮತ್ಸ್ಕಾಂದಪುರಾಣಾಂತರ್ಗತ ಸೂತಸಂಹಿತಾಯಾಶ್ಚತುರ್ಥಸ್ಯ ಯಜ್ಞವೈಭವಖಂಡಸ್ಯೋಪರಿಭಾಗೇ ಬ್ರಹ್ಮಗೀತಾ

॥ ದ್ವಿತೀಯೋಽಧ್ಯಾಯಃ ॥

ಎರಡನೆಯ ಅಧ್ಯಾಯವು

॥ ಬ್ರಹ್ಮೋವಾಚ ॥

ಅವಾಚ್ಯ ಏವ ವೇದಾರ್ಥಃ ಸರ್ವಥಾ ಸರ್ವಚೇತನೈಃ ।
ತಥಾಽಪಿ ವಕ್ಷ್ಯೇ ಭಕ್ತಾನಾಂ ಯುಷ್ಮಾಕಂ ಶೃಣುತಾದರಾತ್ ॥೧॥

ಹಿಂದಿನ ಅಧ್ಯಾಯದಲ್ಲಿ ದೇವತೆಗಳು ವೇದಾರ್ಥಗಳ ಮುಖ್ಯಾರ್ಥವನ್ನು ತಿಳಿಯಲು ಬ್ರಹ್ಮದೇವನನ್ನು ಪ್ರಾರ್ಥಿಸಿದುದರಿಂದ, ಬ್ರಹ್ಮನು ವೇದವೇದಾಂತಗಳ ತಾತ್ಪರ್ಯವನ್ನು ವಿವರಿಸಲು ಈ ರೀತಿಯಲ್ಲಿ ಪ್ರಾರಂಭಿಸಿ ಹೇಳಿದನು.

ಓ ದೇವತೆಗಳಿರಾ, ವೇದಗಳಲ್ಲಿ ಹೇಳಿರುವ ಮುಖ್ಯತಾತ್ಪರ್ಯ ವಿಷಯವಾದ ಪರಬ್ರಹ್ಮತತ್ವವು ಅದರ ಪಾರಮಾರ್ಥಿಕಸ್ವರೂಪದಲ್ಲಿ ನಿರ್ಗುಣವೂ ಆತ್ಮಸ್ವರೂಪವೂ ಅದ್ವಿತೀಯವೂ ವಾಙ್ಮನೋಽತೀತವೂ ಆಗಿರುವುದರಿಂದ ಯಾರಿಂದಲೂ ಯಾವ ಬಗೆಯಲ್ಲೂ ಸುಲಭವಾಗಿ ತಿಳಿಯಹೇಳಲು ಸಾಧ್ಯವಲ್ಲವು. ಏಕೆಂದರೆ ಜಾತಿ, ಗುಣ, ಕ್ರಿಯೆ ಮುಂತಾದ ವಿಶೇಷಗಳನ್ನು ಒಳಗೊಂಡಿರುವ ವಸ್ತುಗಳನ್ನು ಮಾತ್ರವೇ ನಮ್ಮ ಮಾತುಗಳಿಂದ ವಿವರಿಸಲಾಗುತ್ತದೆ. ಇವೊಂದೂ ಇಲ್ಲದ್ದನ್ನು ಶಬ್ದಪ್ರಮಾಣವೂ ವರ್ಣಿಸಲಾರದು. ಬ್ರಹ್ಮತತ್ವವಾದರೋ ನಿರ್ವಿಶೇಷನಾದುದು. ಇದೂ ಅಲ್ಲದೆ ಲೋಕದಲ್ಲಿ ನಾವು ತಿಳಿವಳಿಕೆಗಾಗಿ ಉಪಯೋಗಿಸುವ ಪ್ರಮಾಣಗಳೆಲ್ಲವೂ ಆತ್ಮನಿಗಿಂತ ಭಿನ್ನವಾಗಿ ಬೇರೆಯಾಗಿರುವ ಅರ್ಥಗಳನ್ನೇ ವಿಷಯೀಕರಿಸುತ್ತಿವೆ. ಎಲ್ಲಕ್ಕಿಂತಲೂ ಮೇಲಾಗಿ ಆತ್ಮತತ್ವವು ಎಲ್ಲ ಪ್ರಮಾಣಪ್ರಮೇಯವ್ಯವ

ಆತ್ಮಸಂಜ್ಞಃ ಶಿವಃ ಶುದ್ಧ ಏಕ ಏವಾದ್ವಯಃ ಸದಾ ।
ಅಗ್ರೇ ಸರ್ವಮಿದಂ ದೇವಾ ಆಸೀತ್ತನ್ಮಾತ್ರಮಾಸ್ತಿಕಾಃ ॥೨॥

ತತೋ ನಾನ್ಯತ್ ಮಿಷತ್ ಕಿಂಚಿತ್ ಸ ಪುನಃ ಕಾಲಪಾಕತಃ ।
ಪ್ರಾಣಿನಾಂ ಕರ್ಮಸಂಸ್ಕಾರಾತ್ ಸ್ವಶಕ್ತಿ ಗತಸತ್ವತಃ ॥೩॥
ಸ ಐಕ್ಷತ ಜಗತ್ಸರ್ವಂ ನು ಸೃಜಾಇತಿ ಶಂಕರಃ ।

ಹಾರಗಳಿಗೂ ಪ್ರೇರಕವಾಗಿ ಆಂತರವಾಗಿ ಅತೀತವಾದರೂ ಸಾಕ್ಷಿಯಾಗಿರುತ್ತದೆ. ಬ್ರಹ್ಮತತ್ವವೂ ಆತ್ಮತತ್ವವು ಸಚ್ಚಿದಾನಂದರೂಪದಲ್ಲಿ ಅಭಿನ್ನವಾಗಿ ಒಂದೇ ಆಗಿರುವುದರಿಂದ ಅದು ಯಾವ ಪ್ರಮಾಣಕ್ಕೂ ಗೋಚರವಾಗದು. ಅಂತಹದನ್ನು ಯಾವ ಪ್ರಮಾಣವೂ ವಿಷಯೀಕರಿಸಲಾರದು.

ಹಾಗಾದರೆ ಬ್ರಹ್ಮತತ್ವವನ್ನು ತಿಳಿಯಲಾಗುವುದೇ ಇಲ್ಲವೇ ? ನಮ್ಮ ಈ ಪ್ರಯತ್ನವೆಲ್ಲವೂ ನಿಷ್ಫಲವೇ ? ಅದನ್ನು ತಿಳಿಯಲು ನಾವು ಯಾವ ಪ್ರಯತ್ನವನ್ನೂ ಮಾಡಬೇಕಾಗಿಲ್ಲವೇ ? ಎಂದರೆ, ಹಾಗಲ್ಲವು. ಪ್ರತ್ಯಕ್ಷ, ಅನುಮಾನ, ಶಬ್ದಗಳಲ್ಲಿ ಶಬ್ದಪ್ರಮಾಣವು ಮಾತ್ರ ಎಂದರೆ ಶ್ರುತಿಯು ಮಾತ್ರ ಬ್ರಹ್ಮತತ್ವವನ್ನು ತಿಳಿಯಿಸಬಲ್ಲುದು. ಶಬ್ದ ಅಥವಾ ಪದಗಳಲ್ಲಿರುವ, ತಮ್ಮ ತಮ್ಮ ಅರ್ಥಗಳನ್ನು ತಿಳಿಸುವ, ಸಾಮರ್ಥ್ಯ ಅಥವಾ ಶಕ್ತಿಗೆ ವೃತ್ತಿ ಅಥವಾ ವ್ಯಾಪಾರವೆಂದು ಹೆಸರು. ಈ ವೃತ್ತಿಯು ಅಭಿಧಾ, ಲಕ್ಷಣಾ, ವ್ಯಂಜನಾ ಎಂದು ಮೂರು ಬಗೆಯಾಗಿದೆ ಎಂದೂ, ಅಭಿಧಾ, ಲಕ್ಷಣಾ ಎಂದು ಎರಡೇ ಬಗೆಯಾಗಿದೆ ಎಂದೂ ದಾರ್ಶನಿಕರು ಹೇಳುತ್ತಾರೆ. ಅದರಂತೆ ಶ್ರುತಿಯ ವಾಕ್ಯಗಳಲ್ಲಿರುವ ಪದಗಳು ಬ್ರಹ್ಮತತ್ವವನ್ನು ತಿಳಿಸುವ ಬಗೆಯು ವಾಚ್ಯವಾಚಕರೀತಿಯಿಂದ ಅಲ್ಲವು. ಮತ್ತೇನೆಂದರೆ ಲಕ್ಷ್ಯಲಕ್ಷಕರೀತಿಯಿಂದ ವಿವರಿಸುತ್ತಿದೆ. ಎಲೈ ದೇವತೆಗಳಿರಾ, ನೀವೂ ವೇದಾರ್ಥವಾದ ಬ್ರಹ್ಮತತ್ವವನ್ನು ತಿಳಿಯಲು ತುಂಬ ಆದರವುಳ್ಳವರಾಗಿರುವುದರಿಂದ ನಿಮಗೆ ಅದನ್ನು ಆ ರೀತಿಯಲ್ಲಿಯೇ ವಿವರಿಸಲು ಪ್ರಯತ್ನಿಸುವೆನು, ಕೇಳಿರಿ. ॥೧॥

ವೇದಗಳು ಋಕ್, ಯಜುಸ್, ಸಾಮನ್, ಅಥರ್ವನ್ ಎಂದು ನಾಲ್ಕು ಭಾಗವಾಗಿ ವಿಂಗಡಿಸಲ್ಪಟ್ಟಿವೆ. ಒಂದೊಂದರಲ್ಲಿಯೂ ಕರ್ಮ, ಉಪಾಸನೆ, ಜ್ಞಾನ ಎಂಬ ಮೂರು ಕಾಂಡಗಳಿವೆ. ಕರ್ಮಕಾಂಡದಲ್ಲಿ ಹೇಳಿರುವ ಯಜ್ಞಯಾಗಾದಿ ಕರ್ಮಗಳೆಲ್ಲವೂ ಚಿತ್ತಶುದ್ಧಿಗೂ, ಉಪಾಸನಾಕಾಂಡದ ಉಪಾಸನೆಗಳೆಲ್ಲವೂ ಚಿತ್ತದ ಏಕಾಗ್ರತೆ ಮತ್ತು ಸ್ಥೈರ್ಯಗಳಿಗೂ ಉಪಯುಕ್ತವಾಗಿ, ಜ್ಞಾನಕಾಂಡದಲ್ಲಿ ಹೇಳಿರುವ

ತತ್ವವನ್ನು ತಿಳಿಯಲು ನಮಗೆ ಸಹಕಾರಿಯಾದ ಸಾಧನಮಾತ್ರಗಳಾಗಿರುತ್ತವೆ. ಆದುದರಿಂದ ಜ್ಞಾನಕಾಂಡವು ಉಪದೇಶಿಸಿರುವ ತತ್ವವೇ ಎಲ್ಲ ವೇದಗಳ ಮುಖ್ಯ ತಾತ್ಪರ್ಯವಾಗಿರುತ್ತದೆ. ಅದನ್ನು ವಿವರಿಸಿದರೆ ವೇದಗಳ ಮುಖ್ಯಾರ್ಥವನ್ನು ತಿಳಿಯಹೇಳಿದಂತಾಗುತ್ತದೆ. ಆದುದರಿಂದ ಉಪನಿಷತ್ತುಗಳ, ಅದರಲ್ಲೂ ಮೊದಲನೆಯದಾದ ಋಗ್ವೇದಕ್ಕೆ ಸಂಬಂಧಿಸಿರುವ ಐತರೇಯೋಪನಿಷತ್ತಿನ ಅರ್ಥವನ್ನು ಈ ಶ್ಲೋಕಗಳಲ್ಲಿ ವಿವರಿಸಿದೆ. ಉಪನಿಷತ್ತುಗಳಲ್ಲೂ ಸಾಧನೆ, ಉಪಾಸನೆ ಮುಂತಾದ ವಿಷಯಗಳನ್ನು ಹೇಳಿದೆ. ಆದರೂ ಅವೆಲ್ಲವೂ ಬ್ರಹ್ಮತತ್ವದ ಜ್ಞಾನಕ್ಕೆ ಸಹಕಾರಿ ಕಾರಣಗಳಾದುದರಿಂದಲೂ, ದೇವತೆಗಳು ವೇದಗಳ ಮುಖ್ಯತಾತ್ಪರ್ಯಾರ್ಥವನ್ನೇ ಕೇಳಬಯಸಿರುವುದರಿಂದಲೂ, ಬ್ರಹ್ಮತತ್ವವನ್ನು ಬೋಧಿಸುವ ವಾಕ್ಯಗಳನ್ನೇ ಅವಲಂಬಿಸಿ ವಿವರಣೆಯನ್ನು ಮಾಡಿರುತ್ತದೆ.

ಆ ಐತರೇಯೋಪನಿಷತ್ತಿನ ವಾಕ್ಯವು ಹೀಗಿದೆ--“ಆತ್ಮಾವಾ ಇದಮೇಕ ಏವಾಗ್ರ ಆಸೀತ್ ನಾನ್ಯತ್ಕಿಂಚನ ಮಿಷತ್, ಸ ಈಕ್ಷತ ಲೋಕಾನ್ನು ಸೃಜಾ ಇತಿ.” ಇದರ ತಾತ್ಪರ್ಯವನ್ನೇ ಈ ಶ್ಲೋಕಗಳಲ್ಲಿ ಅನುವಾದಮಾಡಿದೆ. ಈ ಜಗತ್ತನ್ನು ಸೃಷ್ಟಿಸುವುದಕ್ಕಿಂತಲೂ ಮುಂಚೆ ಪರಮಾತ್ಮತತ್ವವು ಮಾತ್ರ ಒಂದೇ ಇದ್ದಿತು. ಆದಕ್ಕೇ ಆತ್ಮನೆಂದೂ,

ಯಚ್ಚಾಪ್ನೋತಿ ಯದಾದತ್ತೇ ಯಚ್ಚಾತ್ತಿ ವಿಷಯಾನಿಹ ।
ಯಚ್ಚಾಸ್ಯ ಸಂತತೋ ಭಾವಃ ತಸ್ಮಾದಾತ್ಮೇತಿ ಗೀಯತೇ ॥

ಶಿವನೆಂದೂ ಹೆಸರು. ಎಲ್ಲವನ್ನೂ ಯಾವಾಗಲೂ ವ್ಯಾಪಿಸಿರುವಂತೆ ಗೊತ್ತಾಗುವುದರಿಂದ ಆತ್ಮನೆಂದೂ, ದೋಷಲೇಶವೂ ಇಲ್ಲದ್ದರಿಂದ ಶಿವನೆಂದೂ, ಇದನ್ನು ಬಿಟ್ಟು ಇತರ ಯಾವ ಪದಾರ್ಥವೂ ಸ್ವತಂತ್ರವಾಗಿ ಇಲ್ಲದ್ದರಿಂದ ಅದ್ವಿತೀಯನೆಂದೂ, ತಿಳಿಯಬೇಕು. ಎಲ್ಲಕ್ಕೂ ಆತ್ಮಭೂತನಾದ ಆ ಪರಶಿವತತ್ವವು, “ಆನೀದವಾತಂ ಸ್ವಧಯಾತದೇಕಂ,” “ಏಕಂ ಸದ್ವಿಪ್ರಾಬಹುಧಾವದಂತಿ” ಎಂದು ಹೇಳಿರುವಂತೆ ಒಂದೇ ಆಗಿ, ತನ್ನಲ್ಲಿಯೇ ತಾನಾಗಿ, ಬದುಕಿ ಚೇತನವಾಗಿ ಇತ್ತು. ಇದನ್ನು ತಿಳಿದ ವಿದ್ವಾಂಸರು ಹಲವು ಬಗೆಯಲ್ಲಿ ನಾಮರೂಪಗಳುಳ್ಳಂತೆ ವರ್ಣಿಸುತ್ತಾರೆ. ಈ ಸ್ಥೂಲವಾದ ಸಗುಣರೂಪಗಳು, ಸ್ಥೂಲಾರುಂಧತೀನ್ಯಾಯದಿಂದ, ಪರತತ್ವವನ್ನು ತಿಳಿಯಬಯಸುವ ಜಿಜ್ಞಾಸುವಿಗೆ ಸೋಪಾನಕ್ರಮದಂತಿರುತ್ತವೆಯೇ ಹೊರತು, ಈ ಸಾಧನಗಳೇ ವಾಸ್ತವವಾದ ಪರತತ್ವಸ್ವರೂಪವಲ್ಲವೆಂಬುದನ್ನು ಮರೆಯಬಾರದು.

ಪ್ರಳಯಕಾಲದಲ್ಲಿ ಈ ಪ್ರಪಂಚವೆಲ್ಲವೂ ಇದಕ್ಕೆ ಮೂಲಕಾರಣವಾದ ಮಾಯೆಯಲ್ಲಿ ಲೀನವಾಗಿರುತ್ತದೆ. ಮಾಯೆ ಎಂದರೆ ಅದ್ವಿತೀಯಪರಮಾತ್ಮನಲ್ಲಿ ಅಡಗಿರುವ ಶಕ್ತಿರೂಪವಾಗಿದೆ. ಜೀವರೆಲ್ಲರೂ ಪ್ರಳಯಕಾಲದಲ್ಲಿ ಅವರವರಲ್ಲಿರಬಹು ದಾದ ಸಂಸ್ಕಾರದೊಡನೆ ಈ ಮಾಯೆಯಲ್ಲಿ ಲೀನರಾಗಿರುತ್ತಾರೆ. ಹೀಗೆ ಸೃಷ್ಟಿಗಿಂತ ಮುಂಚೆಯೂ ಪ್ರಳಯವಾದ ಮೇಲೂ ಈ ಮಾಯಾಶಕ್ತಿಯು ಇರುತ್ತದಾದರೂ, ಸೃಷ್ಟಿಸ್ಥಿತಿಗಳ ಕಾಲದಲ್ಲಿ ತೋರಿಬರುತ್ತಿರುವಂತೆ, ಪರಶಿವನಿಗಿಂತ ಸ್ವತಂತ್ರವಾಗಿ ಭಿನ್ನವಾದುದಾವುದೂ ಕಾಣಬರುವುದಿಲ್ಲವಾದುದರಿಂದ ಆಗಲೂ ಆ ಪರಮಾತ್ಮನು ಅದ್ವಿತೀಯನಾಗಿರುತ್ತಾನೆಂದು ಹೇಳುವುದು ಸರಿಯಾಗಿದೆ. ಅಲ್ಲದೆ ಈ ಪರಶಿವನ ಶಕ್ತಿರೂಪವಾದ ಮಾಯೆಯು ಈ ಶಕ್ತಿಯುಳ್ಳತತ್ವಕ್ಕಿಂತ ಭಿನ್ನವೆಂದಾಗಲಿ, ಅದರಿಂದ ತತ್ವವು ಸದ್ವಿತೀಯವಾಯಿತೆಂದಾಗಲಿ ಹೇಳಲಾಗುವುದಿಲ್ಲ. ಏಕೆಂದರೆ ಅಗ್ನಿಯಲ್ಲಿರುವ ದಾಹಶಕ್ತಿಯಿಂದ ಅಗ್ನಿಯು ಭಿನ್ನನೂ ಅಲ್ಲವು, ಸದ್ವಿತೀಯನೂ ಆಗಲಾರನು. ಹಾಗೆಯೇ ಬ್ರಹ್ಮತತ್ವವು ಸರ್ವಪ್ರಪಂಚದ ಲಯರೂಪವಾದ ಮಾಯಾಶಕ್ತಿಸಹಿತನಾಗಿದ್ದರೂ ಅದ್ವಯಸ್ವರೂಪನೇ ಆಗಿರುತ್ತಾನೆಂಬುದು ನಿಜವೂ, ಅವಿರುದ್ಧವೂ, ಸಮಂಜಸವೂ ಆಗಿದೆ. ಈ ಅಂಶವನ್ನು ಶ್ರೀಶಂಕರಾಚಾರ್ಯರು ಬ್ರಹ್ಮಸೂತ್ರ ಅ. ೧. ಪಾ. ೩. ಸೂ. ೩೦ ದಲ್ಲಿ ಹೀಗೆ ವಿವರಿಸಿರುತ್ತಾರೆ. "ಪ್ರಲೀಯಮಾನಮಪಿಚೇದಂ ಜಗತ್ ಶಕ್ತ್ಯವಶೇಷಮೇವ ಪ್ರಲೀಯತೇ. ಶಕ್ತಿಮೂಲಮೇವ ಚ ಪ್ರಭವತಿ. ಇತರಥಾ ಆಕಸ್ಮಿಕತ್ವಪ್ರಸಂಗಾತ್.'' ಅ.೧.ಪಾ.೪.ಸೂ.೩. "ಅವಿದ್ಯಾತ್ಮಿಕಾಹಿ ಬೀಜಶಕ್ತಿಃ ಅವ್ಯಕ್ತಶಬ್ದನಿರ್ದೇಶ್ಯಾಪರಮೇಶ್ವರಾಶ್ರಯಾ ಮಾಯಾಮಯೀ ಮಹಾಸುಪ್ತಿಃ. ಯಸ್ಯಾಂ ಸ್ವರೂಪಪ್ರತಿಬೋಧರಹಿತಾಃ ಶೇರತೇ ಸಂಸಾರಿಣೋ ಜೀವಾಃ."

ಹೀಗಿರುವಲ್ಲಿ ಈ ಮಾಯೆಯಲ್ಲಿ ಲೀನರಾಗಿದ್ದ ಜೀವರ, ಪ್ರಾಣಿಗಳ, ಕರ್ಮ ಸಂಸ್ಕಾರಗಳು ಕಾಲಪರಿಣಾಮದಿಂದ ಪಕ್ವಗಳಾಗಿ ಫಲೋನ್ಮುಖವಾಗಲು ಎಂದರೆ, ಫಲವನ್ನು ಕೊಡಲು ಸಿದ್ಧವಾಗಲು, ಸೃಷ್ಟಿಕಾರ್ಯವನ್ನು ಮುಂದುವರಿಸಬೇಕಾಗುತ್ತದೆ. ಈ ಮಾಯೆಯು ಸತ್ವ, ರಜಸ್, ತಮಸ್, ಎಂಬ ಗುಣತ್ರಯರೂಪವಾಗಿದೆ. ಪ್ರಾಣಿಗಳ ಕರ್ಮಪರಿಪಾಕವಶದಿಂದ ಈ ಮಾಯೆಯು ಕ್ಷುಬ್ಧವಾಗುತ್ತದೆ. ಆಗ ಮಾಯೆಯು ಸೃಷ್ಟಿಗೆ ಅಭಿಮುಖವಾಗಲು, ಅದರ ಸಾತ್ವಿಕಾಂಶವನ್ನು ಅವಲಂಬಿಸಿ ಶ್ರೀಪರಶಿವನು,"ಪ್ರಪಂಚವನ್ನೆಲ್ಲವನ್ನೂ ಸೃಜಿಸುವೆನು." ಎಂದು ಆಲೋಚಿಸುತ್ತಾನೆ. ಈ ಸೃಷ್ಟಿಗೆ ಮೊಟ್ಟಮೊದಲೆನ್ನುವುದಿಲ್ಲವು. ಈ ಸೃಷ್ಟಿಗೆ ಪ್ರಾಣಿಕರ್ಮವು ಕಾರಣ

ಸ ಪುನಃ ಸಕಲಾನೇತಾನ್ ಲೋಕಾನಾತ್ಮೀಯ ಶಕ್ತಿತಃ ॥೪॥
ಯಥಾಪೂರ್ವಂ ಕ್ರಮೇಣೈವ ಸುರಾ ಅಸೃಜತ ಪ್ರಭುಃ ।

ವಾದಂತೆ, ಇದರ ಹಿಂದಿನ ಸೃಷ್ಟಿಗಳಿಗೂ ಆ ಆ ಪ್ರಾಣಿಗಳ ಕರ್ಮವೇ ಕಾರಣವಾದುದರಿಂದ ಕೃತಹಾನಿ, ಅಕೃತಾಭ್ಯಾಗಮ, ವೈಷಮ್ಯ, ನೈರ್ಘೃಣ್ಯ ಮುಂತಾದ ದೋಷಗಳು ಜೀವನಿಗಾಗಲೀ, ಶಿವನಿಗಾಗಲಿ, ಸಂಭವಿಸವು. ಈ ಸೃಷ್ಟಿಸ್ಥಿತಿಲಯಪರಂಪರೆ ಎಂಬ ಸಂಸಾರವು ಅನಾದಿಯಾಗಿರುತ್ತದೆ. ಈ ಆಪೇಕ್ಷಿಕವಾದ ಸೃಷ್ಟಿಯ ಆರಂಭದಲ್ಲಿ ಪರಬ್ರಹ್ಮಸ್ವರೂಪನಾದ ಪರಮಾತ್ಮ ಅಥವಾ ಪರಶಿವನಲ್ಲಿ ಉಂಟಾಗುವ ಈ ಪ್ರಥಮ ಸ್ಪಂದರೂಪವಾದ ವೃತ್ತಿಗೇ ಶಕ್ತಿ, ಅವ್ಯಕ್ತ, ಮಾಯೆ, ಪರಾಶಕ್ತಿ, ದೇವೀ ಎಂದೂ ಹೆಸರು. ॥೨-೩॥

ಓ ದೇವತೆಗಳಿರಾ, ಈ ರೀತಿಯಲ್ಲಿ ಸಂಕಲ್ಪಿಸಿ, ಆ ಪರಶಿವನು ಆಕಾಶ, ವಾಯು, ತೇಜಸ್, ಜಲ, ಪೃಥಿವೀ ಎಂಬ ಐದು ಬಗೆಯಾದ ಸೂಕ್ಷ್ಮಭೂತಗಳನ್ನು ಹಿಂದಿನ ಸೃಷ್ಟಿಯಲ್ಲಿದ್ದಂತೆಯೇ ಕ್ರಮವಾಗಿ ಸೃಜಿಸಿದನು. ಆಮೇಲೆ ಪಂಚೀಕರಣ ಪ್ರಕ್ರಿಯೆಯಿಂದ ಸ್ಥೂಲವಾದ ಪಂಚಭೂತಗಳನ್ನೂ, ಅವುಗಳಿಂದ ಈ ಸಮಸ್ತ ಲೋಕಗಳಿಂದ ಕೂಡಿದ ಬ್ರಹ್ಮಾಂಡಗಳನ್ನೂ (ಈ ಪಂಚೀಕರಣದಿಂದ ತನ್ಮಾತ್ರೆಗಳು ವ್ಯವಹಾರಯೋಗ್ಯಗಳಾಗುತ್ತವೆ.) ಸ್ಥೂಲಭೂತಗಳಿಂದ ನಿರ್ಮಿಸಿದನು. ಈ ಸೃಷ್ಟಿಯು ಹೊಸದೇನೂ ಅಲ್ಲವು. ಮೊದಲಿನದೂ ಅಲ್ಲವು. ಇದರಿಂದ ಜಗತ್ತಿನ ಸೃಷ್ಟಿ ಸ್ಥಿತಿ ಸಂಹಾರಗಳು ಲೆಕ್ಕವಿಲ್ಲದಷ್ಟು ಆಗಿದ್ದವು. ಮುಂದೆಯೂ ಆಗುವುವೆಂದು ತಿಳಿಯಬೇಕು. ಆದರೂ ಪ್ರತಿ ಸೃಷ್ಟಿಯಲ್ಲಿಯೂ ಪ್ರಪಂಚವು ಒಂದೇ ರೂಪವಾಗಿರುತ್ತದೆಂದು ತಿಳಿಯಬೇಕು. ಹಾಗೆಂದರೆ ಸೃಷ್ಟಿಯ ಮೂಲತತ್ವಗಳೂ ಭೂತಗಳ ಸ್ವಭಾವಗಳೂ ಹಿಂದಿನಂತೆಯೇ ಇರುತ್ತವೆಯೇ ಹೊರತು, ಬದಲಾವಣೆಯನ್ನು ಹೊಂದುವುದಿಲ್ಲವೆಂದು ತಾತ್ಪರ್ಯವು. ಎಲ್ಲ ಸೃಷ್ಟಿಗಳಲ್ಲೂ ಅಗ್ನಿಯು ಉಷ್ಣವಾಗಿಯೇ ಇರುತ್ತದೆಯೇ ಹೊರತು ಯಾವಾಗಲೂ ತಣ್ಣಗಿರುವುದಿಲ್ಲವು. ಹಾಗೆಯೇ ಧರ್ಮಾಧರ್ಮಗಳೂ ಅವುಗಳ ಫಲಗಳಾದ ಸುಖದುಃಖಗಳೂ ವ್ಯತ್ಯಾಸವನ್ನು ಪಡೆಯುವುದಿಲ್ಲವು. ಆದರೆ ಭೂತಗಳ ಸನ್ನಿವೇಶ, ರೂಪ, ಆಕಾರಗಳು ಬದಲಾಯಿಸಿರಬಹುದು. ಆದರೂ ಒಂದುಕಾಲದಲ್ಲಿ ಧರ್ಮವಾದುದು ಇನ್ನೊಂದು ಸೃಷ್ಟಿಯಲ್ಲಿ ಅಧರ್ಮವಾಗಲಾರದೆಂದು ಭಾವವು. ॥೪॥

ತಂ ಹರಂ ಕೇಚಿದಿಚ್ಛಂತಿ ಕೇಚಿದ್ವಿಷ್ಣುಂ ಸುರೋತ್ತಮಾಃ ॥೫॥

ಕೇಚಿನ್ಮಾಮೇವ ಚೇಚ್ಛಂತಿ ಕೇಚಿದಿಂದ್ರಾದಿ ದೇವತಾಃ ।
ಕೇಚಿತ್ಪ್ರಧಾನಂ ತ್ರಿಗುಣಂ ಸ್ವತಂತ್ರಂ ಕೇವಲಂ ಜಡಂ ॥೬॥

ಅಣವಃ ಕೇಚಿದಿಚ್ಛಂತಿ ಶಬ್ದಂ ಕೇಚನ ಮೋಹಿತಾಃ ।
ಕ್ಷಣ ಪ್ರಧ್ವಂಸಿ ವಿಜ್ಞಾನಂ ಕೇಚನ ಭ್ರಾಂತ ಚೇತಸಃ ॥೭॥

ಶೂನ್ಯ ಸಂಜ್ಞಂ ಸುರಾಃ ಕೇಚಿನ್ನಿರುಪಾಖ್ಯಂ ವಿಮೋಹಿತಾಃ ।
ಕೇಚಿದ್ಭೂತಾನಿ ಚೇಚ್ಛಂತಿ ನಿಸರ್ಗಂ ಕೇಚನ ಭ್ರಮಾತ್ ॥೮॥

ಮೇಲೆ ಹೇಳಿದಂತೆ ಮಾಯೆ ಎಂಬ ಉಪಾಧಿವಿಶಿಷ್ಟನಾದ ಪರಮಾತ್ಮನಿಂದ ಈ ಎಲ್ಲ ಪ್ರಪಂಚಗಳೂ ಉಂಟಾಗುತ್ತವೆಂಬುದು ಶ್ರುತಿಪ್ರಮಾಣದಿಂದ ಗೊತ್ತಾಗಿರುವ ಸಿದ್ಧಾಂತವಾಗಿದೆ. ಈ ಮಾಯಾವಿಶಿಷ್ಟಬ್ರಹ್ಮದ ಉಪಾಧಿಯಾದ ಮಾಯೆಯಲ್ಲಿನ ಗುಣತ್ರಯಗಳಲ್ಲಿ ಒಂದೊಂದೂ ಪ್ರಧಾನವಾದ ಉಪಾಧಿಯಾಗಲು ಬ್ರಹ್ಮ ವಿಷ್ಣು ರುದ್ರರೂ, ಮಾಯಾಶಕ್ತಿಯ ಅಂಶರಾದ ವಾಣೀ, ಲಕ್ಷ್ಮೀ, ಪಾರ್ವತೀದೇವಿಯರೂ ಉಂಟಾಗುತ್ತಾರೆ. ಇದರಿಂದ ಇತರ ಸೃಷ್ಟಿಯೆಲ್ಲವೂ ಮುಂದುವರಿಯುತ್ತಿರುತ್ತದೆ. ಹೀಗಿದ್ದರೂ ತಿಳಿದವರಲ್ಲಿಯೂ ಕೆಲವರು ಹಲವು ಬಗೆಯಾಗಿ ವಿವರಿಸುತ್ತಾರೆ. ಅವರಲ್ಲಿ ಶೈವರು ಶಿವನೇ ಜಗತ್ಕಾರಣನೆಂದೂ, ವೈಷ್ಣವರು ವಿಷ್ಣುವೇ ಪ್ರಪಂಚಕಾರಣನೆಂದೂ, ಬ್ರಹ್ಮನೆಂದು ಹೈರಣ್ಯಗರ್ಭರೂ, ಹಾಗೆಯೇ ಇಂದ್ರ, ಶಕ್ತಿ, ಗಣೇಶ, ಸೂರ್ಯ, ಮುಂತಾದ ದೇವತಾಭಕ್ತರು, ಆ ಇಂದ್ರ, ಶಕ್ತಿ, ಗಣೇಶ, ಸೂರ್ಯ ಮುಂತಾದವರನ್ನೇ ಈ ಜಗತ್ತುಗಳಿಗೆ ಮುಖ್ಯಸ್ವತಂತ್ರಕಾರಣರೆಂದೂ ಸಂಸ್ಕಾರ ಮತ್ತು ರುಚಿಭೇದದಿಂದ ವರ್ಣಿಸುತ್ತಿದಾರೆ. ಹಾಗೆಯೇ ಸಾಂಖ್ಯರು ಜಡನಾದರೂ ತ್ರಿಗುಣಗಳ ಸಾಮ್ಯಾವಸ್ಥಾರೂಪವಾದ ಪ್ರಧಾನವೇ ಸ್ವತಂತ್ರವಾಗಿ ಜಗತ್ತನ್ನು ಸೃಜಿಸುವುದೆಂದು ಹೇಳುತ್ತಾರೆ. ವೈಶೇಷಿಕರು ಪರಮಾಣುಗಳಿಂದಲೇ ಪ್ರಪಂಚವು ಉಂಟಾಗುವುದೆನ್ನುತ್ತಾರೆ. ವೈಯಾಕರಣರು ಸ್ಫೋಟರೂಪವಾದ ಶಬ್ದದಿಂದಲೇ ಪ್ರಪಂಚಗಳು ಒಡೆದು ಮೂಡುತ್ತವೆನ್ನುತ್ತಾರೆ. ಬೌದ್ಧರಲ್ಲಿ ಕೆಲವರು ಕ್ಷಣಿಕವಿಜ್ಞಾನವೇ ಪ್ರಪಂಚಕಾರಣವೆಂದೂ, ಮತ್ತೆ ಕೆಲವರು ನಿರುಪಾಖ್ಯವಾದ ಶೂನ್ಯವೇ ಜಗತ್ಕಾರಣವೆಂದೂ ವಾದಿಸುತ್ತಾರೆ. ಚಾರ್ವಾಕರಲ್ಲಿ ಕೆಲವರು ಪೃಥಿವೀ, ಜಲ, ಅಗ್ನಿ, ವಾಯುಗಳೆಂಬ ನಾಲ್ಕು ಭೂತಗಳಿಂದ ಜಗತ್ತು ಉಂಟಾಗುವುದೆಂದೂ,

ತತ್ರ ತತ್ರೈವ ತರ್ಕಾಂಶ್ಚ ಪ್ರವದಂತಿ ಯಥಾಬಲಾತ್ ।
ಸರ್ವೇ ವಾದಾಃ ಶ್ರುತಿಸ್ಮೃತ್ಯೋರ್ವಿರುದ್ಧಾ ಇತಿ ಮೇ ಮತಿಃ ॥೯॥

ಇನ್ನು ಕೆಲವರು ಜಗತ್ತುಗಳೆಲ್ಲವೂ ಸ್ವಾಭಾವಿಕವಾಗಿಯೇ ಹೀಗೆ ಆಗಿರುತ್ತವೆ. ಎಂದೂ, ಮಾರ್ಪಡುತ್ತಿರುತ್ತದೆಂದೂ, ಇದಕ್ಕೊಂದು ಕಾರಣವೇ ಇಲ್ಲದುದರಿಂದ ಅದನ್ನು ಹುಡುಕುವ ವಿಮರ್ಶೆಯ ಪ್ರಯತ್ನವು ಅನಾವಶ್ಯಕವೂ ಆಗಿದೆ ಎಂದೂ ಪ್ರತಿಪಾದಿಸುತ್ತಿರುತ್ತಾರೆ. ||೫-೬-೭-೮||

ಅಷ್ಟೇ ಅಲ್ಲದೆ "ನ ಹಿ ಪ್ರತಿಜ್ಞಾ ಮಾತ್ರೇಣ ಅರ್ಥಸಿದ್ಧಿಃ" ಎಂಬ ಸೂಕ್ತಿಯನ್ನು ಮನ್ನಿಸಿ ಈ ವಾದಿಗಳು ತಮ್ಮ ಅಭಿಪ್ರಾಯಕ್ಕೆ ತಕ್ಕ ಯುಕ್ತಿಗಳನ್ನೂ ತಮ್ಮ ತಮ್ಮ ಬುದ್ಧಿಶಕ್ತಿಗೆ ಸಾಧ್ಯವಾದಷ್ಟನ್ನು ಹೇಳುತ್ತಿದಾರೆ. ಹೇಗೆಂದರೆ, ಈ ಜಗತ್ತೆಲ್ಲವೂ ಜಡವಾಗಿರುವುದರಿಂದ ಇದರ ಮೂಲಕಾರಣವೂ ಜಡವೇ ಆಗಿರಬೇಕು. ಅಂತಹ ಪ್ರಧಾನವನ್ನೇ ಪ್ರಪಂಚಕಾರಣವೆಂದು ಒಪ್ಪುವ ನಮ್ಮ ಮತವೇ ಯುಕ್ತವಾದುದೆಂದು ಸಾಂಖ್ಯರು ವಾದಿಸುತ್ತಾರೆ. ಈ ಲೋಕದಲ್ಲಿಯೂ ಸಣ್ಣ ವಸ್ತುಗಳು ಒಟ್ಟುಗೂಡುವುದರಿಂದ ದೊಡ್ಡ ವಸ್ತುಗಳಾಗುತ್ತಿರುವುದು ಕಂಡುಬರುತ್ತಿದೆ. ಆದುದರಿಂದ ಪರಮಾಣುಗಳಿಂದಲೇ ಪ್ರಪಂಚವು ಉಂಟಾಗುವುದು ಉಚಿತವೂ ನ್ಯಾಯವೂ ಆಗಿದೆ ಎಂದು ವೈಶೇಷಿಕರು ಹೇಳುತ್ತಾರೆ. ಸ್ಪಂದರೂಪವಾದ ಶಬ್ದಾರ್ಥಗಳೆರಡಕ್ಕೂ ನಿಕಟಸಂಬಂಧವಿರುವುದು ಗೊತ್ತಾಗಿರುವುದರಿಂದ ಶಬ್ದವೇ ಅರ್ಥರೂಪವಾದ ಪ್ರಪಂಚಾಕಾರವಾಗಿ ವಿವರ್ತವಾಗುವುದೆಂದು ಸ್ಫೋಟವಾದಿಗಳಾದ ವೈಯಾಕರಣಿಗಳು ಹೇಳುತ್ತಾರೆ. ಹುಟ್ಟುವುದಕ್ಕೆ ಮೊದಲು ಎಲ್ಲ ಪದಾರ್ಥವೂ ಅಭಾವವಾಗಿಯೇ ಇರುತ್ತದೆ. ಆದುದರಿಂದ ಶೂನ್ಯದಿಂದಲೇ ಜಗದ್ರಚನೆಯಾಗುತ್ತದೆಂದು ಬೌದ್ಧರ ವಾದವಾಗಿದೆ. ಜಗತ್ತಿಗೆ ಸೃಷ್ಟಿಯು ಹೇಗಾಯಿತು? ಪ್ರಳಯವು ಹೇಗಾಗುವುದು? ಇವೇ ಮುಂತಾದ ವಿಷಯಗಳಿಗೆ ಎಲ್ಲರಿಗೂ ಒಪ್ಪಿಗೆಯಾಗುವ ಯುಕ್ತಿಯನ್ನು ಸಮಂಜಸವಾಗಿ ವಿವರಿಸಲಾಗುವುದಿಲ್ಲ. ಆದುದರಿಂದ ಪ್ರಪಂಚವೂ ಯಾವಾಗಲೂ ಹೀಗೆಯೇ ಇದ್ದಿತು, ಮತ್ತು ಮಾರ್ಪಡುತ್ತಲೇ ಇರುವುದು ಎಂದು ಮೀಮಾಂಸಕರೂ ವಾದಿಸುತ್ತಾರೆ. ಹೀಗೆ ಈ ಮತಗಳ ಮತ್ತು ದರ್ಶನಗಳ ಪ್ರವರ್ತಕರು ತಮ್ಮ ತಮ್ಮ ಬುದ್ಧಿಶಕ್ತಿಗೆ ಅನುಗುಣವಾಗಿ ಯುಕ್ತಿಗಳನ್ನು ಹೇಳುತ್ತಿದಾರೆ. ಇವೆಲ್ಲವೂ ವಿರುದ್ಧವೂ, ಅಸಂಬದ್ಧವೂ, ಅನುಪಯುಕ್ತವೂ ಆಗಿದೆ ಎಂದು ತಿಳಿಯಬಾರದು. ಜಿಜ್ಞಾಸುವಾದ ವಿಮರ್ಶಕನು ಜ್ಞಾನಮಾರ್ಗದಲ್ಲಿ ಪಡೆಯುವ ಮಜಲುಗಳಂತೆ ಇವು ಇರುತ್ತ

ಪಾಪಿಷ್ಠಾನಾಂ ತು ಜಂತೂನಾಂ ತತ್ರ ತತ್ರ ಸುರರ್ಷಭಾಃ ।
ಪ್ರಾಕ್ಸಂಸಾರ ವಶಾದೇವ ಜಾಯತೇ ರುಚಿರಾಸ್ತಿಕಾಃ ॥೧೦॥

ವೆಂಬುದನ್ನು ಗಮನಿಸಬೇಕು. ಸ್ವಾಭಾವಿಕವಾದ ಪ್ರಗತಿಯ ಏಣಿಯಲ್ಲಿನ ಮೆಟ್ಟಿಲುಗಳಂತೆ ಇವು ಮುಮುಕ್ಷುವನ್ನು ಮೇಲು ಮೇಲಿನ ಅಂತಸ್ತುಗಳಿಗೆ ತಲಪಿಸುತ್ತಿರುತ್ತವೆ. ಎಂದು ಮನಗಾಣಬಹುದು.

ಓ ದೇವತೆಗಳಿರಾ, ಆದರೂ ಈ ಮತದರ್ಶನಗಳಲ್ಲಿನ ವಾದಗಳೆಲ್ಲವೂ ಶ್ರುತಿಯಲ್ಲಿನ ಕಡೆಯ ವೇದಾಂತ ಸಿದ್ಧಾಂತಗಳಿಗೆ ವಿರೋಧವಾಗಿವೆ ಎಂದೇ ನನಗೆ ತೋರುತ್ತದೆ. ಏಕೆಂದರೆ, ಈ ಪುರುಷರ ದೋಷ, ಅಶಕ್ತಿ, ಲೋಪ, ನ್ಯೂನತೆಗಳಿಂದ ಏರ್ಪಟ್ಟ ಯುಕ್ತಿಗಳು ಪ್ರಬಲತರಗಳಾದ ಯುಕ್ತಿಗಳಿಂದ ಬಾಧಿತವಾಗುತ್ತವೆ. ಹೀಗಾಗಿ "ತರ್ಕಾಪ್ರತಿಷ್ಠಾನಾತ್" ಎಂಬಂತೆ ಸರ್ವಸಮ್ಮತವಾದುದಾಗಬಲ್ಲ ಅಬಾಧ್ಯವಾದ ಸಿದ್ಧಾಂತವು ಏರ್ಪಡಲಾರದು. ಆದುದರಿಂದ ಲೌಕಿಕವಿಷಯಗಳಲ್ಲೂ ಸಿದ್ಧಾಂತಗಳು ಯುಕ್ತಿಗಳನ್ನು ಅವಲಂಬಿಸಿದ್ದರೂ ಸಿದ್ಧಾಂತವು ಸರ್ವಮಾನ್ಯವಾಗದೆ ಇರುವಲ್ಲಿ, ಅತೀಂದ್ರಿಯವೂ ಅಲೌಕಿಕವೂ ಆದ ಜಗತ್ಕಾರಣ ಮತ್ತು ಆತ್ಮತತ್ವಸ್ವರೂಪ ಇಂತಹ ವಿಷಯಗಳಲ್ಲಿ ಪುರುಷಬುದ್ಧಿಗಳು ಸ್ವತಂತ್ರವಾಗಿ ಪ್ರವರ್ತಿಸಲಾರವು. ಇಂತಹ ಅಲೌಕಿಕವಿಷಯಗಳಲ್ಲಿ ಅಲೌಕಿಕಪ್ರಮಾಣವಾದ ಶ್ರುತಿಯನ್ನೇ ಅವಲಂಬಿಸಬೇಕಾದುದು ಅತ್ಯಾವಶ್ಯಕವೂ ಶ್ರೇಯಸ್ಕರವೂ ಆಗಿದೆ. ಈ ದಾರ್ಶನಿಕರು ಹೀಗೆ ಶ್ರಮಪಟ್ಟರೂ ಸಾರ್ಥಕವಾಗದಿರುವುದರಿಂದ ಜಗತ್ಕಾರಣವು ಮತ್ತು ಆತ್ಮತತ್ವಸ್ವರೂಪವು ಲೌಕಿಕ ಯುಕ್ತಿಗಳಿಗೆ ನಿಲುಕದಂತಹುದೆಂದು ತಿಳಿಯಬೇಕೇ ಹೊರತು, ಆ ತತ್ವವೇ ಇಲ್ಲವೆಂಬ ನಾಸ್ತಿಕವಾದಕ್ಕೆ ಇಳಿಯಬಾರದೆಂದು "ಇಹ ಚೇದವೇದೀತ್ ಅಥ ಸತ್ಯಮಸ್ತಿ ನ ಚೇದಿಹಾವೇದೀತ್ ಮಹತೀ ವಿನಷ್ಟಿಃ" "ಅಸ್ತೀತ್ಯೇವೋಪಲಬ್ಧವ್ಯ ಸ್ತತ್ವಭಾವೇನ ಚೋಭಯೋಃ ಅಸ್ತೀತ್ಯೇವೋಪಲಬ್ಧಸ್ಯ ತತ್ತ್ವಭಾವಃ ಪ್ರಸೀದತಿ" ಕ. ಉ. ೬-೧೩. ಎಂದು ಮುಂತಾದ ಶ್ರುತಿಗಳು ಎಚ್ಚರಿಸುತ್ತಿವೆ. ಆದರೆ ತತ್ವವೆಂಬುದು ಒಂದೇ ರೂಪವುಳ್ಳದ್ದೇ ಹೊರತು ಅನೇಕ ರೂಪವುಳ್ಳದಲ್ಲವು. ಈ ದರ್ಶನ ಸಿದ್ಧಾಂತಗಳಲ್ಲಿ ಶ್ರುತಿಗೂ ಶ್ರುತ್ಯನುಸಾರಿಯಾದ ಯುಕ್ತಿಗೂ ಅನುಗುಣವಾದ ಸಿದ್ಧಾಂತವೇ ಯುಕ್ತವೆಂದು ಒಪ್ಪಬೇಕಾದುದು ವಿವೇಕಿಗಳ ಕಾರ್ಯವಾಗಿದೆ. ಆದರೂ ಇವೂ ಜನಾದರಪಾತ್ರವಾಗಿರುವುದೇಕೆಂದರೆ, ॥೯॥

ಸಾಂಖ್ಯಾದಿ ಶಾಸ್ತ್ರಗಳು ಶ್ರುತಿಸ್ಮೃತಿ ವಿರುದ್ಧವಾದರೆ ಅವುಗಳಲ್ಲಿ ಶಾಸ್ತ್ರಕಾರರಿಗೆ ಪ್ರವೃತ್ತಿ ಹೇಗೆ? ಎಂದರೆ ಅದಕ್ಕೆ ಉತ್ತರವನ್ನು ಹೇಳುತ್ತಾನೆ—ಎಲೈ ಸುರ

ತೇಽಪಿ ಕಾಲ ವಿಪಾಕೇನ ಶುದ್ಧಯಾ ಪೂತಯಾಽಪಿ ಚ ।
ಪುರಾತನೇನ ಪುಣ್ಯೇನ ದೇವತಾನಾಂ ಪ್ರಸಾದತಃ ॥೧೧॥

ಕಾಲೇನ ಮಹತಾ ದೇವಾಃ ಸೋಪಾನ ಕ್ರಮತಃ ಪುನಃ ।
ವೇದಮಾರ್ಗಮಿಮಂ ಮುಖ್ಯಂ ಪ್ರಾಪ್ನುವಂತಿ ಚಿರಂತನಂ ॥೧೨॥

ಪ್ರಾಕ್ಸಂಸಾರ ವಶಾದೇವ ಯೇ ವಿಚಿಂತ್ಯ ಬಲಾಬಲೇ ।
ವಿವಶಾ ವೇದಮಾಪನ್ನಾಸ್ತೇಽಪಿ ಕೈವಲ್ಯಭಾಗಿನಃ ॥೧೩॥

ವೇದಮಾರ್ಗ ಮಿಮಂ ಮುಕ್ತ್ವಾ ಮಾರ್ಗಮನ್ಯಂ ಸಮಾಶ್ರಿತಃ ।
ಹಸ್ತಸ್ಥಂ ಪಾಯಸಂ ತ್ಯಕ್ತ್ವಾ ಲಿಹೇತ್ಕೂರ್ಪರಮಾತ್ಮನಃ ॥೧೪॥

ವಿನಾ ವೇದೇನ ಜಂತೂನಾಂ ಮುಕ್ತಿಃ ಮಾರ್ಗಾಂತರೇಣ ಚೇತ್ ।
ತಮಸಾಽಪಿ ವಿನಾಽಽಲೋಕಂ ತೇ ಪಶ್ಯಂತಿ ಘಟಾದಿಕಂ ॥೧೫॥

ಶ್ರೇಷ್ಠರೇ, ತಮ್ಮ ಪ್ರಾಚೀನವಾದ ಸಂಸ್ಕಾರದಿಂದ ಪಾಪಶೇಷವುಳ್ಳ ಜನರಿಗೆ ಶ್ರುತಿ ಬಾಹ್ಯವಾದ ಶಾಸ್ತ್ರಗಳಲ್ಲಿ ಪ್ರವೃತ್ತಿಯುಂಟಾಗುತ್ತದೆ. ಅಂತಹವರೂ ಸಹ ಕಾಲಪರಿ ಪಾಕದಿಂದಲೂ, ಪರಿಪೂತವಾದ ಆಸ್ತಿಕಬುದ್ಧಿಯಿಂದಲೂ, ದೇವತಾನುಗ್ರಹದಿಂದಲೂ, ಕೆಲವುಕಾಲ ಕಳೆದಮೇಲೆ ತಮ್ಮ ತಮ್ಮ ಶಾಸ್ತ್ರದಿಂದಲೂ ಆತ್ಮಾನಾತ್ಮವಿವೇಕವನ್ನು ಸಾಮಾನ್ಯವಾಗಿ ತಿಳಿದು, ಆತ್ಮಾನಾತ್ಮ ವಿವೇಕವನ್ನು ಚನ್ನಾಗಿ ತಿಳಿಯಲು ಪರಂಪರೆ ಯಾಗಿ ಬಹಳ ಪ್ರಾಚೀನವಾದ ಅತಿಮುಖ್ಯವಾದ ಈ ವೇದಾಂತಮಾರ್ಗವನ್ನು ಕಡೆಗೆ ಹೊಂದುತ್ತಾರೆ. ||೧೦-೧೧-೧೨||

ಯಾರು ತಮ್ಮ ಪ್ರಾಚೀನ ಸಂಸ್ಕಾರದಿಂದ ತಮ್ಮ ಶಾಸ್ತ್ರದಲ್ಲಿಯೂ, ವೇದ ದಲ್ಲಿಯೂ, ಇರತಕ್ಕ ಬಲಾಬಲಗಳನ್ನು ಯೋಚಿಸಿ, ಶಾಸ್ತ್ರವು ಪುರುಷ ಕರ್ತೃಕವು ಅತ ಏವ ಭ್ರಮಪ್ರಮಾದಾದಿಗಳಿಂದ ದುಷ್ಟವಾದುದು. ವೇದವು ನಿತ್ಯನಿರ್ದುಷ್ಟ ವಾದುದು, ಎಂದು ಯೋಚಿಸಿ ವೇದಮಾರ್ಗವನ್ನು ಸ್ವೀಕರಿಸುತ್ತಾರೆಯೋ, ಅಂತಹ ವರು ಮುಕ್ತಿಭಾಗಿಗಳಾಗುವರು. ಅಲ್ಲದೆ ಯಾವನು ಈ ಪರಮ ಪವಿತ್ರವಾದ ವೇದ ಮಾರ್ಗವನ್ನು ಬಿಟ್ಟು ಕಡೆಯ ವರೆಗೂ ಇನ್ನೊಂದು ಮಾರ್ಗವನ್ನಾಶ್ರಯಿಸುತ್ತಾ ನೆಯೋ ಆವನು ತನ್ನ ಅಂಗೈಯ್ಯಲ್ಲಿರತಕ್ಕ ಪಾಯಸವನ್ನು ಬಿಟ್ಟು ಮುಂಗೈಯ್ಯನ್ನು ಆಸ್ವಾದಿಸಿದವನಂತೆ ಆಗುತ್ತಾನೆ. ವೇದಮಾರ್ಗವಲ್ಲದೆ ಇತರ ಮಾರ್ಗಗಳಿಂದಲೇ ಮೋಕ್ಷವು ಪ್ರಾಣಿಗಳಿಗೆ ಉಂಟಾಗುತ್ತದೆಂದು ಯಾರು ಹೇಳುವರೋ ಅವರು

ತಸ್ಮಾ ದ್ವೇದೋದಿತೋ ಹ್ಯರ್ಥಃ ಸತ್ಯಂ ಸತ್ಯಂ ಮಯೋದಿತಂ ।
ಅನ್ಯೇನ ವೇದಿತೋ ಹ್ಯರ್ಥೋ ನ ಸತ್ಯಃ ಪರಮಾರ್ಥತಃ ॥೧೬॥

ಪರಮಾರ್ಥೋ ದ್ವಿಧಾಪ್ರೋಕ್ತೋ ಮಯಾ ಹೇ ಸ್ವರ್ಗವಾಸಿನಃ ।
ಏಕಃ ಸ್ವಭಾವತಃ ಸಾಕ್ಷಾತ್ಪರಮಾರ್ಥಃ ಸದೈವ ತು ॥೧೭॥

ಸ ಶಿವಃ ಸತ್ಯ ಚೈತನ್ಯ ಸುಖಾನಂತ ಸ್ವಲಕ್ಷಣಃ ।
ಅಪರಃ ಕಲ್ಪಿತಃ ಸಾಕ್ಷಾದ್ಬ್ರಹ್ಮಣ್ಯಧ್ಯಸ್ತ ಮಾಯಯಾ ॥೧೮॥

ದೀಪವು ಇಲ್ಲದೆ ಅಂಧಕಾರದಲ್ಲಿ ಘಟಾದಿವಸ್ತುಗಳನ್ನು ನೋಡಿರಬಹುದು. ಎಂದರೆ ಅಂಧಕಾರದಲ್ಲಿ ಹೇಗೆ ಘಟಾದಿವಸ್ತುಗಳು ತೋರುವುದು ಅಸಂಭವವೋ ಹಾಗೆ ವೇದಾಂತಮಾರ್ಗವನ್ನು ಅವಲಂಬಿಸದೆ ಸ್ವತಂತ್ರವಾಗಿ ಪುರುಷಬುದ್ಧಿಯನ್ನೇ ಅವಲಂಬಿಸುವುದರಿಂದ ಮೋಕ್ಷವು ಪ್ರಾಪ್ತವಾಗುವುದು ಅಸಂಭವವು. ||೧೩-೧೪-೧೫||

ಆದುದರಿಂದ ಅಪೌರುಷೇಯವಾದಕಾರಣ ನಿರ್ದುಷ್ಟವಾದ ವೇದದಿಂದ ಬೋಧಿತವಾದ ಅರ್ಥವೇ ಸತ್ಯವಾದುದು. ಅನ್ಯಮಾರ್ಗದಿಂದ ಬೋಧಿತವಾದ ಅರ್ಥವು ಪರಮ ಸತ್ಯವಾದುದಲ್ಲವು. ||೧೬||

ವೇದದಲ್ಲಿ ಪ್ರತಿಪಾದಿತವಾದುದು ಸಮಸ್ತವೂ ಸತ್ಯವಾದರೆ, ಕ್ರಿಯಾಕಾರಕಾದಿ ಜಗತ್ತೂ ಸಹ ಆತ್ಮನಂತೆ ವೇದಪ್ರತಿಪಾದಿತವಾಗಿರುವುದರಿಂದ ಅದೂ ಸಹ ಸತ್ಯವೇ ? ಎಂದರೆ ಹಾಗಲ್ಲ. ಎರಡು ವಿಧವಾದ ಸತ್ಯತ್ವವಿದೆಯೆಂದು ಹೇಳುತ್ತಾನೆ. ಎಲೈ ಸ್ವರ್ಗವಾಸಿಗಳೇ, ಸತ್ಯತ್ವವು ಎರಡು ವಿಧವಾಗಿದೆ. ಒಂದು ಪಾರಮಾರ್ಥಿಕ ಸತ್ಯತ್ವ, ಮತ್ತೊಂದು ವ್ಯಾವಹಾರಿಕಸತ್ಯತ್ವ. ಇವಲ್ಲಿ ಪಾರಮಾರ್ಥಿಕ ಸತ್ಯತ್ವವೆಂದರೆ ಜ್ಞಾನ ಕಾಂಡದಲ್ಲಿ ಹೇಳಿದ ಸತ್ಯಚೈತನ್ಯಸುಖಸ್ವರೂಪನಾದ ಸಾಕ್ಷಾತ್ ಶಿವನೇ. ಈ ಶಿವನ ಸತ್ಯತ್ವವು ಕಾಲತ್ರಯದಲ್ಲಿಯೂ ಅಬಾಧಿತವಾದುದು. ಏವಂಚ ಆತ್ಮಸ್ವರೂಪವು ಅನಾರೋಪಿತವಾಗಿ ಪಾರಮಾರ್ಥಿಕ ಸತ್ಯವಾದುದು. ಕರ್ಮಕಾಂಡದಲ್ಲಿ ಪ್ರತಿಪಾದಿತ ವಾದ ಸ್ವರ್ಗ, ಅಪೂರ್ವ, ದೇವತಾದಿರೂಪವಾದ ಪ್ರಪಂಚಸತ್ಯತ್ವವು ಸತ್ಯಜ್ಞಾನಾತ್ಮಕ ನಾದ ಆತ್ಮನಲ್ಲಿ ಕಲ್ಪಿತವಾದ ಮಾಯೆಯಿಂದ ಅಧ್ಯಸ್ತವಾದುದು, ವ್ಯಾವಹಾರಿಕ ಸತ್ಯ ತ್ವವು. ಇದು ಸಂಸಾರ ದೆಸೆಯಲ್ಲಿ ವ್ಯವಹಾರಕಾಲದಲ್ಲಿ ಮಾತ್ರ ತೋರುತ್ತಾ ಇರು ತ್ತದೆ. ಇದು ಮೋಕ್ಷಕಾಲದಲ್ಲಿ ಬ್ರಹ್ಮಜ್ಞಾನದಿಂದ ಬಾಧಿತವಾಗುತ್ತದೆ. ||೧೭-೧೮||

ಕಲ್ಪಿತಾನಾ ಮವಸ್ತೂನಾಂ ಮಧ್ಯೇ ಕೇಚನ ಮಾಯಯಾ ।
ಪರಮಾರ್ಥ ತಯಾ ಕ್ಲ್ಪಪ್ತಾ ವ್ಯವಹಾರೇ ಸುರರ್ಷಭಾಃ ॥೧೯॥

ವ್ಯವಹಾರೇ ತು ಸಂಕ್ಲ್ಪಪ್ತಾಃ ಕೇಚನಾ ಪರಮಾರ್ಥತಃ ।
ಆಕಾಶಾದಿ ಜಗತ್ ಶುಕ್ತಿ ರೂಪ್ಯೇ ತೇ ಕಥಿತೇ ಮಯಾ ॥೨೦॥

ವ್ಯಾವಹಾರಿಕ ಸತ್ಯಾರ್ಥಂ ಸಾಕ್ಷಾತ್ಸತ್ಯಾರ್ಥ ಚಿದ್ಘನಂ ।
ಉಭಯಂ ವಕ್ತಿ ವೇದಸ್ತು ಮಾರ್ಗಾ ನೈವಂ ವದಂತಿ ಹಿ ॥೨೧॥

ಸ್ವಪ್ನಾ ವಸ್ಥಾಸು ಸಂಕ್ಲ್ಪಪ್ತ ಸತ್ಯಾರ್ಥೇನ ಸಮಾ ನಿಮಾನ್ ।
ಅರ್ಥಾನೇವಾ ಮನಂತ್ಯನ್ಯೇ ಮಾರ್ಗಾ ಹೇ ಸ್ವರ್ಗವಾಸಿನಃ ॥೨೨॥

ಎಲೈ ದೇವಶ್ರೇಷ್ಠರೇ, ವ್ಯವಹಾರಕಾಲದಲ್ಲಿ ಕಲ್ಪಿತವಾದ ವಸ್ತುಗಳ ಮಧ್ಯದಲ್ಲಿ ಕೆಲವು ಪರಮಾರ್ಥಗಳಾಗಿವೆ. ಎಂದರೆ ವ್ಯಾವಹಾರಿಕ ಸತ್ತೆಯುಳ್ಳವುಗಳು. ಅವುಗಳಲ್ಲಿ ಆಕಾಶಾದಿಪಂಚಕಗಳಿಗೆ ಮೋಕ್ಷಪರ್ಯಂತ ಭಾಧೆಯಿಲ್ಲದೇ ಇರೋಣದರಿಂದ ಅವುಗಳು ವ್ಯಾವಹಾರಿಕ ಸತ್ಯಗಳು. ಶುಕ್ತಿರೂಪ್ಯಾದಿಗಳೆಲ್ಲವೂ ಆಗಲೇ ಅಧಿಷ್ಠಾನ ಸಾಕ್ಷಾತ್ಕಾರದಿಂದ ನಿವೃತ್ತವಾಗುವುದರಿಂದ ಅವುಗಳು ಪ್ರಾತಿಭಾಸಿಕ ಸತ್ತೆಯುಳ್ಳವುಗಳು. ಏವಂಚ ಆಕಾಶಾದಿಗಳೂ, ಶುಕ್ತಿರೂಪ್ಯಾದಿಗಳೂ ಸಹ ಮಾಯೆಯಿಂದ ಅಧ್ಯಸ್ತಗಳಾದಾಗ್ಯೂ ಆಕಾಶಾದಿಗಳು ವ್ಯವಹಾರಕಾಲಗಳಲ್ಲಿ ಬಾಧೆಯಿಲ್ಲದಕಾರಣ, ವ್ಯಾವಹಾರಿಕಗಳೂ, ಶುಕ್ತಿರೂಪ್ಯವು ವ್ಯವಹಾರಕಾಲದಲ್ಲಿಯೇ ಬಾಧಿತವಾಗುವುದರಿಂದ ಪ್ರಾತಿಭಾಸಿಕವೂ ಆಗಿರುತ್ತವೆ. ॥೧೯-೨೦॥

ಜಗತ್ತಿಗೂ ವ್ಯಾವಹಾರಿಕ ಸತ್ಯತ್ವವನ್ನು ಅಂಗೀಕಾರಮಾಡಿದ್ದರಿಂದ ವೇದಾರ್ಥದ ಸತ್ಯತ್ವಕ್ಕೆ ಹಾನಿಯಿಲ್ಲವು ಎಂಬ ವಿಚಾರವನ್ನು ಹೇಳುತ್ತಾನೆ.—ಪ್ರಮಾತನು ಇರುತ್ತಿರಲಾಗಿ ಬಾಧವಿಲ್ಲದ ಪ್ರಪಂಚವು ವ್ಯಾವಹಾರಿಕ ಸತ್ಯವಾದುದು. ಸಚ್ಚಿದಾನಂದರೂಪವಾದ, ಲವಣ ಖಂಡದಂತೆ ಜ್ಞಾನ ಘನವಾದ, ಬ್ರಹ್ಮಸ್ವರೂಪವು ಪರಮಾರ್ಥ ಸತ್ಯವಾದುದು. ಎಂದು ಎರಡು ಬಗೆಯ ಸತ್ತೆಯನ್ನು ವೇದವು ಹೇಳುತ್ತದೆ. ಮಾರ್ಗಾಂತರಗಳಾದರೋ ಹೀಗಿಲ್ಲ. ॥೨೧॥

ಆ ಮಾರ್ಗಾಂತರಗಳಿಂದ ಪ್ರತಿಪಾದಿತವಾದುದು ಯಾವುದೆಂದರೆ:—ಎಲೈ ಸ್ವರ್ಗವಾಸಿಗಳೇ, ಸೌಗತರಿಂದ ನಿರೂಪಿತವಾದ ಮಾರ್ಗಗಳು ಸ್ವಪ್ನಾವಸ್ಥೆಯಿಂದ ಪರಿಕಲ್ಪಿತವಾದ ಸತ್ಯಾರ್ಥಸದೃಶವಾದ ಜಾಗ್ರತ್ಕಾಲದ ಅರ್ಥಗಳನ್ನು ಪ್ರತಿಪಾದಿಸು

ಜಾಗ್ರತ್ಕಾಲೇ ತು ಸಂಕ್ಲೃಪ್ತ ಸತ್ಯಾರ್ಥೇನ ಸಮಾನಿಮಾನ್ ।
ಮಾರ್ಗಾ ಏವಾ ಮನಂತ್ಯರ್ಥಾನ್ ಕಾ ಕಥಾ ಕಸ್ಯ ಚಿದ್ಘನೇ ॥೨೩॥

ತಸ್ಮಾದೇಕೈಕಯಾ ದೃಷ್ಟ್ಯಾ ಮಾರ್ಗಾಃ ಸತ್ಯಾರ್ಥಭಾಷಿಣಃ ।
ದೃಷ್ಟ್ಯಂತರೇಣ ತೇ ಭ್ರಾಂತಾ ಇತಿ ಸಮ್ಯಙ್ನಿರೂಪಿತಂ ॥೨೪॥

ಚೈತನ್ಯಾ ಪೇಕ್ಷಯಾ ಚೇತ್ಯಂ ವ್ಯೋಮಾದಿ ಸಕಲಂ ಜಗತ್ ।
ಅಸತ್ಯಂ ಸತ್ಯರೂಪಂ ತತ್ ಕುಂಭಕುಡ್ಯಾದ್ಯಪೇಕ್ಷಯಾ ॥೨೫॥

ತ್ತವೆ. ಸಾಕ್ಷಾತ್ಸತ್ಯವಾದ ಆತ್ಮನನ್ನು ನಿರೂಪಿಸುವುದಿಲ್ಲ. ವೈಶೇಷಿಕಾದಿ ಮಾರ್ಗಗಳು ಜಾಗ್ರದವಸ್ಥೆಯಲ್ಲಿ ವ್ಯಾವಹಾರಿಕ ಸತ್ಯವೆಂಬುದಾಗಿ ಮಾಯಾಕಲ್ಪಿತವಾಗಿದೆ. ಎಂದು ವೇದಾಂತಿಗಳು ಒಪ್ಪಿರತಕ್ಕ ಪದಾರ್ಥಗಳನ್ನು, ದ್ರವ್ಯಗುಣ ಕರ್ಮರೂಪವಾದ ಅರ್ಥಗಳನ್ನು ಮಾತ್ರ ಪ್ರತಿಪಾದಿಸುತ್ತವೆ. ಹೀಗೆ ಅವುಗಳ ದೃಷ್ಟಿಯು ಅಪೂರ್ಣವಾದುದು. ||೨೨||

ಜಾಗ್ರತ್ಕಾಲದಲ್ಲಿ ಕ್ಲೃಪ್ತವಾದ ಸತ್ಯಾರ್ಥಸದೃಶವಾದ ಪದಾರ್ಥಗಳನ್ನು ಮಾತ್ರ ಆ ಮಾರ್ಗಗಳು ಹೇಳುತ್ತವೆ. ಆದುದರಿಂದ ಸತ್ಯಚಿದ್ಘನವಾಗಿಯೂ, ಪಾರಮಾರ್ಥಿಕಸತ್ಯವಾಗಿಯೂ, ಇರತಕ್ಕ ಬ್ರಹ್ಮನಿರೂಪಣೆಯಲ್ಲಿ ಆ ಮಾರ್ಗಗಳಿಗೆ ಪ್ರತಿಪಾದನ ಪ್ರಯುಕ್ತಿಯೇ ಇರುವುದಿಲ್ಲವು. ಹೀಗೆ ಅವುಗಳು ಪೂರ್ಣ ಅನುಭವದ ದೃಷ್ಟಿಯುಳ್ಳವಲ್ಲವು. ||೨೩||

ಆದುದರಿಂದ ವ್ಯಾವಹಾರಿಕ ದೃಷ್ಟಿಯಿಂದ ಇತರ ಮಾರ್ಗಗಳು ಆಕಾಶಾದಿ ಪ್ರಪಂಚವನ್ನು ಸತ್ಯವೆಂದು ಪ್ರತಿಪಾದಿಸುತ್ತವೆ. ಆದರೆ ಆ ಮಾರ್ಗಗಳು ವ್ಯಾವಹಾರಿಕ ಪ್ರಪಂಚವನ್ನೇ ಪಾರಮಾರ್ಥಿಕವೆಂದು ಪ್ರತಿಪಾದಿಸುವುದರಿಂದ ಅವು ಭ್ರಾಂತವಾಗಿವೆ. ||೨೪||

ಪರಮ ಕಾರಣವಾದ ಚೈತನ್ಯದ ದೃಷ್ಟಿಯಿಂದ ಕಾರ್ಯಭೂತವಾದ ವಿಯದಾದಿ ಪ್ರಪಂಚವು ಅಸತ್ಯವಾದುದು. ಎಂದರೆ ವ್ಯಾವಹಾರಿಕ ಸತ್ಯವಾದುದೇ ಹೊರತು ಪಾರಮಾರ್ಥಿಕ ಸತ್ಯವಾದುದಲ್ಲವು. ಹಾಗೆಯೇ ಘಟಕುಡ್ಯಾದಿ ಕಾರ್ಯಾಪೇಕ್ಷೆಯಿಂದ ಕಾರಣವಾದ ವಿಯದಾದಿ ಜಗತ್ತು ಸತ್ಯವಾದುದು. ||೨೫||

ಕುಂಭ ಕುಡ್ಯಾದಯೋ ಭಾವಾ ಅಪಿ ವ್ಯೋಮಾದ್ಯಪೇಕ್ಷಯಾ ।
ಅಸತ್ಯಾಃ ಸತ್ಯರೂಪಾಸ್ತೇ ಶುಕ್ತಿರೂಪ್ಯಾದ್ಯಪೇಕ್ಷಯಾ ॥೧೬॥

ಜಾಗ್ರದಿತ್ಯುದಿತಾವಸ್ಥಾ ಮುಪೇಕ್ಷ್ಯ ಸ್ವಪನಾಭಿಧಾ ।
ಅವಸ್ಥಾಽಸತ್ಯರೂಪಾ ಹಿ ನ ಸತ್ಯಾ ಹಿ ದಿವೌಕಸಃ ॥೧೭॥

ತಥಾಽಪಿ ಸ್ವಪ್ನದೃಷ್ಟಂ ತು ವಸ್ತು ಸ್ವರ್ಗನಿವಾಸಿನಃ ।
ಸೂಚಕಂ ತು ಭವತ್ಯೇವ ಜಾಗ್ರತ್ಸತ್ಯಾರ್ಥಸಿದ್ಧಯೇ ॥೧೮॥

ತಥೈವ ಮಾರ್ಗಾಃ ಸುಭ್ರಾಂತಾ ಅಪಿ ವೇದೋದಿತಸ್ಯತು ।
ಅರ್ಥಸ್ಯ ಪ್ರಾಪ್ತಿಸಿದ್ಧ್ಯರ್ಥಾ ಭವಂತ್ಯೇವ ನ ಸಂಶಯಃ ॥೧೯॥

ಘಟಕುಡ್ಯಾದಿಕಾರ್ಯ ಪದಾರ್ಥಗಳು ತಮಗೆ ಕಾರಣವಾದ ಆಕಾಶಾದಿ ಪಂಚಕಕ್ಕಿಂತಲೂ ಅಸತ್ಯವಾದವುಗಳು. ಆ ಘಟಾದಿಗಳು ಶುಕ್ತಿರೂಪ್ಯಾದಿ ಪ್ರಾತಿಭಾಸಿಕ ಪದಾರ್ಥಗಳಿಗಿಂತಲೂ ಸತ್ಯವಾದವುಗಳು. ॥೧೬॥

ಓ ದೇವತೆಗಳೇ, ಜಾಗ್ರದವಸ್ಥೆಗಿಂತಲೂ ಸ್ವಪ್ನಾವಸ್ಥೆಯು ಅಸತ್ಯವಾದುದು. ಈ ರೀತಿಯಾಗಿ ಪದಾರ್ಥಗಳಿಗೆ ದೃಷ್ಟಿಭೇದದಿಂದ ಸತ್ಯತ್ವಾಸತ್ಯತ್ವಗಳು ವಿರುದ್ಧವಲ್ಲವು. ಹೀಗೆ ಪ್ರಾತಿಭಾಸಿಕವಾದುದರಿಂದ ಹೆಚ್ಚು ಅಸತ್ಯವಾದ ಪದಾರ್ಥಗಳೂ, ವ್ಯಾವಹಾರಿಕವಾದ ಹೆಚ್ಚು ಸತ್ಯವಾದ ಸಂಗತಿಗಳಿಗೆ ಸೂಚಕವಾಗಬಹುದು. ॥೧೭॥

ಎಲೈ ಸ್ವರ್ಗವಾಸಿಗಳೇ, ಸ್ವಪ್ನದೃಷ್ಟವಾದ ಪದಾರ್ಥವು ಮಿಥ್ಯಾಭೂತವಾಗಿದ್ದಾಗ್ಯೂ ಜಾಗ್ರತ್ಕಾಲದಲ್ಲಿ ಒದಗತಕ್ಕ ಭಾವೀಶುಭಾಶುಭರೂಪವಾದ ವ್ಯಾವಹಾರಿಕ ಸತ್ಯಸೂಚಕವಾಗುತ್ತದೆ. ಈ ರೀತಿ ಸ್ವಪ್ನದೃಷ್ಟವಾದುದು ವ್ಯಾವಹಾರಿಕಕ್ಕೆ ಸೂಚಕವೆಂದು ಶ್ರುತಿಯೂ ಹೇಳುತ್ತದೆ. ಬ್ರಹ್ಮಸೂತ್ರದಲ್ಲಿಯೂ "ಸೂಚಕಶ್ಚ ಹಿ ಶ್ರುತೇರಾಚಕ್ಷತೇ ಚ ತದ್ವಿದಃ" ೩.೨.೪. ಎಂದು ಹೇಳಿದೆ.

ಯದಾ ಕರ್ಮಸು ಕಾಮ್ಯೇಷು ಸ್ತ್ರಿಯಂ ಸ್ವಪ್ನೇಷು ಪಶ್ಯತಿ ।
ಸಮೃದ್ಧಿಂ ತತ್ರ ಜಾನೀಯಾತ್ತಸ್ಮಿನ್ ಸ್ವಪ್ನ ನಿದರ್ಶನೇ ॥ ಛಾ. ೫. ೨. ೯.

ಪುರುಷಂ ಕೃಷ್ಣಂ ಕೃಷ್ಣದಂತಂ ಪಶ್ಯತಿ ಸ ಏನಂ ಹಂತಿ" ಎಂದು ಹೇಳಿದೆ. ॥೧೮॥

ಹಾಗೆಯೇ ಭ್ರಾಂತವಾದ ಈ ವೈದಿಕವಲ್ಲದ ಮಾರ್ಗಗಳು ವೇದದಿಂದ ಹೇಳಲ್ಪಟ್ಟ ಅರ್ಥಗಳ ಪ್ರಾಪ್ತಿಗೆ ಸಾಧನಗಳು. ಈ ವಿಷಯದಲ್ಲಿ ಯಾವ ಸಂದೇಹವೂ

ತಾಸ್ಮಾದ್ವೇದೇತರಾ ಮಾರ್ಗಾ ನೈವ ತ್ಯಾಜ್ಯಾ ನಿರೂಪಣೇ ।
ವೇದನಿಷ್ಠಸ್ತು ತಾನ್ಮಾರ್ಗಾನ್ ಕದಾಚಿದಪಿ ನ ಸ್ಪೃಶೇತ್ ॥೩೦॥

ವೇದನಿಷ್ಠಸ್ತು ಮಾರ್ಗಾಂಸ್ತಾನ್ಮೋಹೇನಾಪಿ ಸ್ಪೃಶೇದ್ಯದಿ ।
ಪ್ರಾಯಶ್ಚಿತ್ತೀ ಭವತ್ಯೇವ ನಾತ್ರ ಕಾರ್ಯಾ ವಿಚಾರಣಾ ॥೩೧॥

ಏತಸ್ಯಾಮಪಿ ತೈಃ ಸಾರ್ಧಂ ಪಂಙ್ತೌ ವೇದೈಕಸಂಸ್ಥಿತಃ ।
ಮೋಹೇನಾಪಿ ನ ಭುಂಜೀತ ಭುಕ್ತ್ವಾ ಚಾಂದ್ರಾಯಣಂ ಚರೇತ್ ॥೩೨॥

ಇಜ್ಯಾದಾನ ವಿವಾಹಾದಿ ಕಾರ್ಯ ಮಧ್ಯಯನಂ ಶ್ರುತೇಃ ।
ಯದಿ ತೈ ರ್ಮೋಹಿತಃ ಕುರ್ಯಾತ್ ಕುರ್ಯಾಚ್ಚಾಂದ್ರಾಯಣತ್ರಯಂ॥೩೩॥

ಧರ್ಮಾಧರ್ಮಾದಿ ವಿಜ್ಞಾನಂ ನಾದಧೀತ ಶ್ರುತೌ ಸ್ಥಿತಃ ।
ತೇಭ್ಯೋ ಮೋಹಾದಪಿ ಪ್ರಾಜ್ಞಃ ಶ್ರೇಯಸ್ಕಾಮೀ ಕದಾಚನ ॥೩೪॥

ಇಲ್ಲ. ಆದುದರಿಂದ ಪದಾರ್ಥಗಳನ್ನು ನಿರೂಪಣೆಮಾಡಬೇಕಾದರೆ ವೇದಕ್ಕಿಂತಲೂ ಬೇರೆಯದಾದ ಮಾರ್ಗಗಳನ್ನು ಬಿಡಬಾರದು. ಆದರೆ ವೇದವೇ ಪ್ರಮಾಣವೆಂದು ಆಸಕ್ತಿಯುಳ್ಳವನು ಆ ಮಾರ್ಗಗಳನ್ನು ಆಶ್ರಯಿಸಬಾರದು. ॥೨೯-೩೦॥

ಒಂದು ವೇಳೆ ವೇದನಿಷ್ಠನಾದವನು ಆ ವೇದಭಿನ್ನವಾದ ಮಾರ್ಗವನ್ನು ವಿಚಾರಮಾಡದೇ ಅನುಸರಿಸಿದರೆ ಪ್ರಾಯಶ್ಚಿತ್ತಕ್ಕೆ ಯೋಗ್ಯನಾಗುತ್ತಾನೆ. ಅಂತಹವನ ಜೊತೆಯಲ್ಲಿ ವೈದಿಕನು ಒಂದು ಪಂಙ್ತಿಯಲ್ಲಿ ಎಲ್ಲಿಯೂ ಸಹ ಊಟವನ್ನು ಮಾಡಕೂಡದು. ಒಂದುವೇಳೆ ಅಜ್ಞಾನದಿಂದ ಮಾಡಿದರೆ ಚಾಂದ್ರಾಯಣ ವ್ರತವನ್ನಾಚರಿಸಬೇಕು. ಇದನ್ನು "ನಹಿನಿಂದಾ" ನ್ಯಾಯದಿಂದ ಹೇಳಿದೆ. ॥೩೧-೩೨॥

ಅಂತಹವರೊಂದಿಗೆ ಯಾಗ ದಾನ ವಿವಾಹ ಮುಂತಾದ ಕಾರ್ಯಗಳನ್ನು ವೇದಾಧ್ಯಯನಗಳನ್ನೂ ಸಹ ಮಾಡಬಾರದು. ಒಂದು ವೇಳೆ ತಿಳಿಯದೇಮಾಡಿದರೆ ಮೂರು ಚಾಂದ್ರಾಯಣ ವ್ರತಗಳನ್ನು ಪ್ರಾಯಶ್ಚಿತ್ತಾರ್ಥವಾಗಿ ಮಾಡಿಕೊಳ್ಳಬೇಕು. ಅವೈದಿಕಮಾರ್ಗಗಳಿಗಿಂತ ವೈದಿಕಮಾರ್ಗವೇ ಶ್ರೇಯಸ್ಕರವೆಂದು ತಾತ್ಪರ್ಯವು. ॥೩೩॥

ತನಗೆ ಉತ್ತರೋತ್ತರ ಕಲ್ಯಾಣವಾಗಬೇಕೆಂದು ಬಯಸುವವನು ಅಂತಹವರಿಗೆ ಇದು ಅಧರ್ಮ ಇದು ಧರ್ಮ ಎಂಬಿವೇ ಮುಂತಾದ ಧರ್ಮಾಧರ್ಮಾದಿ

ವೇದ ಬಾಹ್ಯೇಷು ಮಾರ್ಗೇಷು ಸಂಸ್ಥಿತಾ ಯೇ ನರಾಃ ಸುರಾಃ ।
ತೇ ಹಿ ಪಾಷಂಡಿನಃ ಸಾಕ್ಷಾತ್ತಥಾ ತೈಃ ಸಹ ವಾಸಿನಃ ॥೩೫॥

ಕಲೌ ಜಗದ್ವಿಧಾತಾರಂ ಶಿವಂ ಸತ್ಯಾದಿಲಕ್ಷಣಂ ।
ನಾರ್ಚಯಿಷ್ಯಂತಿ ವೇದೇನ ಪಾಷಂಡೋಪಹತಾ ಜನಾಃ ॥೩೬॥

ವೇದಸಿದ್ಧಂ ಮಹಾದೇವಂ ಸಾಂಬಂ ಚಂದಾರ್ಧಶೇಖರಂ ।
ನಾರ್ಚಯಿಷ್ಯಂತಿ ವೇದೇನ ಪಾಷಂಡೋಪಹತಾಜನಾಃ ॥೩೭॥

ವೇದೋಕ್ತೇನೈವ ಮಾರ್ಗೇಣ ಭಸ್ಮನೈವ ತ್ರಿಪುಂಡ್ರಕಂ ।
ಧೂಲನಂ ನಾ ಚರಿಷ್ಯಂತಿ ಪಾಷಂಡೋಪಹತಾಜನಾಃ ॥೩೮॥

ರುದ್ರಾಕ್ಷಧಾರಣಂ ಭಕ್ತ್ಯಾ ವೇದೋಕ್ತೇನೈವ ವರ್ತ್ಮನಾ ।
ನ ಕರಿಷ್ಯಂತಿ ಮೋಹೇನ ಪಾಷಂಡೋಪ ಹತಾಜನಾಃ ॥೩೯॥

ಲಿಂಗೇ ದಿನೇದಿನೇ ದೇವಂ ಶಿವರುದ್ರಾದಿ ಸಂಜ್ಞಿತಂ ।
ನಾರ್ಚಯಿಷ್ಯಂತಿ ವೇದೇನ ಪಾಷಂಡೋಪಹತಾ ಜನಾಃ ॥೪೦॥

ವಿವೇಕವನ್ನು ಅಜ್ಞಾನದಿಂದಲೂ ಸಹ ಹೇಳಬಾರದು. ಎಲೈ ಸುರರೇ, ವೇದಬಾಹ್ಯವಾದ ಮಾರ್ಗದಲ್ಲಿ ಯಾರು ಆಸಕ್ತರಾಗಿರುತ್ತಾರೆಯೋ ಮತ್ತು ಅವರ ಸಹವಾಸವನ್ನು ಯಾರು ಮಾಡುತ್ತಾರೆಯೋ, ಅಂತಹವರು ಸಾಕ್ಷಾತ್ ಪಾಷಂಡಿಗಳು ಎಂದರೆ ನಾಸ್ತಿಕರು. ॥೩೪-೩೫॥

ಕಲಿಯುಗದಲ್ಲಿ ಯಾವ ಮನುಷ್ಯರು ಜಗನ್ನಿಯಾಮಕನಾಗಿಯೂ, ಸತ್ಯಜ್ಞಾನಾನಂದಸ್ವರೂಪನಾಗಿಯೂ, ಇರತಕ್ಕ ಶಿವನನ್ನು ವೇದೋಕ್ತ ಕ್ರಮದಿಂದ ಪೂಜಿಸುವುದಿಲ್ಲವೋ, ವೇದೈಕವೇದ್ಯನೂ, ಮಹಾದೇವನೂ, ಅರ್ಧಚಂದ್ರನೇ ಶಿರೋಭೂಷಣವುಳ್ಳವನಾಗಿಯೂ, ಅಂಬಾಸಹಿತನಾಗಿಯೂ ಇರತಕ್ಕ ಶಿವನನ್ನು ವೇದಮಾರ್ಗದಿಂದ ಪೂಜಿಸುವುದಿಲ್ಲವೋ ಅವರು ಪಾಷಂಡಿಗಳು. ॥೩೬-೩೭॥

ವೇದೋಕ್ತರೀತಿಯಿಂದ ಭಸ್ಮತ್ರಿಪುಂಡ್ರಗಳನ್ನೂ ಭಸ್ಮದಿಂದ ಲೇಪನವನ್ನೂ ಸಹ ಯಾರು ಆಚರಿಸುವುದಿಲ್ಲವೋ ಮತ್ತು ವೇದೋಕ್ತವಾದ ರೀತಿಯಿಂದ ಭಕ್ತಿಪೂರ್ವಕವಾಗಿ ರುದ್ರಾಕ್ಷಿಧಾರಣೆಯನ್ನು ಅಜ್ಞಾನದಿಂದ ಮಾಡುವುದಿಲ್ಲವೋ, ಪ್ರತಿ

ದೇವಕಾರ್ಯಂ ನ ಕುರ್ವಂತಿ ಪಿತೃಕಾರ್ಯಂ ವಿಶೇಷತಃ ।
ಔಪಾಸನಂ ನ ಕುರ್ವಂತಿ ಪಾಷಂಡೋಪ ಹತಾ ಜನಾಃ ॥೪೧॥

ಪಂಚ ಯಜ್ಞಂ ನ ಕುರ್ವಂತಿ ತಥೈವಾತಿಥಿಪೂಜನಂ ।
ವೈಶ್ವದೇವಂ ನ ಕುರ್ವಂತಿ ಪಾಷಂಡೋಪ ಹತಾ ಜನಾಃ ॥೪೨॥

ವೇದ ಬಾಹ್ಯೇನ ಮಾರ್ಗೇಣ ಪೂಜಯಂತಿ ಜನಾರ್ದನಂ ।
ನಿಂದಂತಿ ಶಂಕರಂ ಮೋಹಾತ್ ಪಾಷಂಡೋಪ ಹತಾ ಜನಾಃ ॥೪೩॥

ಬ್ರಹ್ಮಾಣಂ ಕೇಶವಂ ರುದ್ರಂ ಭೇದಭಾವೇನ ಮೋಹಿತಾಃ ।
ಪಶ್ಯಂತ್ಯೇಕಂ ನ ಜಾನಂತಿ ಪಾಷಂಡೋಪಹತಾ ಜನಾಃ ॥೪೪॥

ಅದಕ್ಷಿಣ ಮನಭ್ಯಂಗ ಮಧೌತ ಚರಣಂ ತಥಾ ।
ಕುರ್ವಂತ್ಯನಗ್ನಿಕಂ ಶ್ರಾದ್ಧಂ ಪಾಷಂಡೋಪಹತಾ ಜನಾಃ ॥೪೫॥

ದಿವಸದಲ್ಲಿಯೂ ಶಿವ, ರುದ್ರ, ಸಾಂಬ ಇತ್ಯಾದಿ ನಾಮಾಂಕಿತನಾದ ಶಿವನನ್ನು ವೇದ ಕ್ರಮದಿಂದ ಪೂಜಿಸುವುದಿಲ್ಲವೋ ಅಂತಹ ಜನರು ಪಾಷಂಡಿಗಳು. ॥೩೮-೩೯-೪೦॥

ವ್ರತಪೂಜಾದಿ ದೇವತಾಕಾರ್ಯಗಳನ್ನೂ, ಶ್ರಾದ್ಧತರ್ಪಣಾದಿ ಪಿತೃಕಾರ್ಯಗಳನ್ನೂ, ನಿತ್ಯವಾದ ಔಪಾಸನ ಹೋಮವನ್ನೂ ಸಹ ಯಾರು ಆಚರಿಸುವುದಿಲ್ಲವೋ ಅಂತಹವರು ಪಾಷಂಡಿಗಳಾಗುತ್ತಾರೆ. ॥೪೧॥

ಪಂಚಯಜ್ಞಗಳನ್ನೂ, ಅತಿಥಿಸತ್ಕಾರವನ್ನೂ ವೈಶ್ವದೇವವನ್ನೂ ಯಾರು ಆಚರಿಸುವುದಿಲ್ಲವೋ, ವೇದಬಾಹ್ಯವಾದ ಮಾರ್ಗದಿಂದ ವಿಷ್ಣುವನ್ನು ಮಾತ್ರ ಪೂಜಿಸಿ, ಶಂಕರನನ್ನು ಯಾರು ನಿಂದಿಸುತ್ತಾರೆಯೋ, ಅಂತಹವರೂ ಸಹ ಪಾಷಂಡಿಗಳು. ॥೪೨-೪೩॥

ಯಾರು ಅಜ್ಞಾನದಿಂದ ಬ್ರಹ್ಮನನ್ನೂ, ವಿಷ್ಣುವನ್ನೂ, ಶಿವನನ್ನೂ ಭೇದ ದೃಷ್ಟಿಯಿಂದ ನೋಡುತ್ತಾ ಅಜ್ಞಾನದಿಂದ ಏಕತ್ವವನ್ನು ಅವರಲ್ಲಿ ತಿಳಿಯುವುದಿಲ್ಲವೋ ಮತ್ತು ದಕ್ಷಿಣಾಹೀನವಾಗಿಯೂ, ಅಭ್ಯಂಗವಿಲ್ಲದೆಯೂ, ಕಾಲನ್ನು ತೊಳೆಯದೆಯೂ, ಅನಗ್ನಿಕವಾಗಿಯೂ, ಸಹ ಯಾರು ಶ್ರಾದ್ಧವನ್ನು ಆಚರಿಸುತ್ತಾರೆಯೋ ಅಂತಹವರು ಪಾಷಂಡಿಗಳು. ॥೪೫॥

ಏಕಾದಶ್ಯಾ ಮಥಾಷ್ಟಮ್ಯಾಂ ಚತುರ್ದಶ್ಯಾಂ ವಿಶೇಷತಃ ।
ಉಪವಾಸಂ ನ ಕುರ್ವಂತಿ ಪಾಷಂಡೋಽಪ ಹತಾ ಜನಾಃ ॥೪೬॥

ಶತರುದ್ರೀಯ ಚಮುಕೈ ಸ್ತಥಾ ಪೌರುಷ ಸೂಕ್ತಕೈಃ ।
ನಾಭಿಷಿಂಚಂತಿ ದೇವೇಶಂ ಪಾಷಂಡೋಽಪ ಹತಾ ಜನಾಃ ॥೪೭॥

ಚಿರಂತನಾನಿ ಸ್ಥಾನಾನಿ ಶಿವಸ್ಯ ಪರಮಾತ್ಮನಃ ।
ನ ದ್ರಕ್ಷ್ಯಂತಿ ಮಹಾಭಕ್ತ್ಯಾ ಪಾಷಂಡೋಽಪ ಹತಾ ಜನಾಃ ॥೪೮॥

ಶ್ರೀಮದ್ದಕ್ಷಿಣ ಕೈಲಾಸೇ ವರ್ತನಂ ಶ್ರದ್ಧಯಾ ಸಹ ।
ವತ್ಸರಂ ನ ಕರಿಷ್ಯಂತಿ ಪಾಷಂಡೋಽಪ ಹತಾ ಜನಾಃ ॥೪೯॥

ಶ್ರೀಮದ್ವ್ಯಾಘ್ರ ಪುರೇ ಪುಣ್ಯೇ ವರ್ತನಂ ಭುಕ್ತಿ ಮುಕ್ತಿದಂ ।
ವತ್ಸರಂ ನ ಕರಿಷ್ಯಂತಿ ಪಾಷಂಡೋಽಪ ಹತಾ ಜನಾಃ ॥೫೦॥

ಅನ್ಯೇಷು ಚ ವಿಶಿಷ್ಟೇಷು ಶಿವಸ್ಥಾನೇಷು ವರ್ತನಂ ।
ವತ್ಸರಂ ನ ಕರಿಷ್ಯಂತಿ ಪಾಷಂಡೋಽಪ ಹತಾ ಜನಾಃ ॥೫೧॥

ಯಾರು ಏಕಾದಶೀ, ಅಷ್ಟಮಿ, ಚತುರ್ದಶೀ, ಇಂತಹ ತಿಥಿಗಳಲ್ಲಿ ವಿಶೇಷವಾಗಿ ಉಪವಾಸವ್ರತಗಳನ್ನು ಆಚರಿಸುವುದಿಲ್ಲವೋ ಅಂತಹವರು ಪಾಷಂಡಿಗಳು. ॥೪೬॥

ಚಮುಕಸಹಿತವಾದ ಶತವಾರ ರುದ್ರದಿಂದಲೂ, ಪುರುಷಸೂಕ್ತಗಳಿಂದಲೂ, ದೇವದೇವನಾದ ಪರಮಾತ್ಮನನ್ನು ಯಾರು ಅಭಿಷೇಕಮಾಡುವುದಿಲ್ಲವೋ ಅಂತಹ ಜನರು ಪಾಷಂಡಿಗಳು. ॥೪೭॥

ಯಾರು ಪರಮಾತ್ಮನಾದ ಶಿವನ ಪ್ರಾಚೀನಕಾಲದ ಸ್ಥಳವನ್ನು ಹೆಚ್ಚಾದ ಭಕ್ತಿಯಿಂದ ದರ್ಶನಮಾಡುವುದಿಲ್ಲವೋ, ಯಾರು ಅತ್ಯಂತ ಶ್ರದ್ಧಾಪೂರ್ವಕವಾಗಿ ದಕ್ಷಿಣಕೈಲಾಸವೆಂಬ ಶಿವಕ್ಷೇತ್ರದಲ್ಲಿ ಒಂದು ವರ್ಷ ವಾಸಮಾಡುವುದಿಲ್ಲವೋ ಮತ್ತು ಯಾರು ಅತ್ಯಂತ ಪವಿತ್ರವಾದ ಭೋಗಮೋಕ್ಷಗಳನ್ನು ನೀಡತಕ್ಕ ವ್ಯಾಘ್ರಪುರವೆಂಬ ಶಿವಕ್ಷೇತ್ರದಲ್ಲಿ ಒಂದು ವರ್ಷದವರೆಗೆ ವಾಸಮಾಡುವುದಿಲ್ಲವೋ ಅವರೆಲ್ಲರೂ ಪಾಷಂಡಿಗಳಾಗುತ್ತಾರೆ. ॥೪೮-೪೯-೫೦॥

ಇನ್ನೂ ಅನೇಕವಾದ ಶ್ರೇಷ್ಠವಾದ ಶಿವನ ಸ್ಥಾನಗಳಲ್ಲಿ ಯಾರು ಒಂದು ವರ್ಷದವರೆಗೆ ವಾಸಮಾಡುವುದಿಲ್ಲವೋ ಅವರು ಪಾಷಂಡಿಗಳಾಗುತ್ತಾರೆ. ॥೫೧॥

ದಿನೇದಿನೇ ತು ವೇದಾಂತ ಮಹಾವ್ಯಾಕಾರ್ಥ ನಿರ್ಣಯಂ ।
ಆಚಾರ್ಯಾ ನ್ನ ಕರಿಷ್ಯಂತಿ ಪಾಷಂಡೋಪ ಹತಾ ಜನಾಃ ॥೫೨॥

ಸನ್ಯಾಸಂ ಪರಹಂಸಾಖ್ಯಂ ನಾಂಗೀಕುರ್ವಂತಿ ಮೋಹಿತಾಃ ।
ಪ್ರದ್ವೇಷಂ ಚ ಕರಿಷ್ಯಂತಿ ಪಾಷಂಡೋಪ ಹತಾ ಜನಾಃ ॥೫೩॥

ಅನ್ಯಾನಿ ಯಾನಿ ಕರ್ಮಾಣಿ ವೇದೇನೈವೋದಿತಾನಿ ತು ।
ನಾ ಚರಿಷ್ಯಂತಿ ತಾನ್ಯೇವ ಪಾಷಂಡೋಪ ಹತಾ ಜನಾಃ ॥೫೪॥

ಸ್ಮಾರ್ತಾನ್ಯಪಿ ಚ ಕರ್ಮಾಣಿ ಯಾನಿ ಯಾನಿ ಸುರೋತ್ತಮಾಃ ।
ನಾಚರಿಷ್ಯಂತಿ ತಾನ್ಯೇವ ಪಾಷಂಡೋಪಹತಾಜನಾಃ ॥೫೫॥

ಊರ್ಧ್ವಪುಂಡ್ರಂ ಲಲಾಟೇ ತು ವರ್ತುಲಂ ಚಾರ್ಧಚಂದ್ರಕಂ ।
ಧಾರಯಿಷ್ಯಂತಿ ನೋಹೇನ ಷಾಷಂಡೋಪಹತಾ ಜನಾಃ ॥೫೬॥

ಶಂಖ ಚಕ್ರ ಗದಾ ವಜ್ರೈರಂಕನಂ ವಿಗ್ರಹೇ ಸ್ವಕೇ ।
ನೋಹೇನೈವ ಕರಿಷ್ಯಂತಿ ಪಾಷಂಡೋಪ ಹತಾ ಜನಾಃ ॥೫೭॥

ಪ್ರತಿದಿವಸದಲ್ಲಿಯೂ ಯಾರು "ಅಹಂ ಬ್ರಹ್ಮಾಸ್ಮಿ" "ತತ್ವಮಸಿ" "ಅಯಮಾತ್ಮಾ ಬ್ರಹ್ಮ" "ಬ್ರಹ್ಮವಿತ್ ಬ್ರಹ್ಮೈವ ಭವತಿ" "ಸರ್ವಂ ಖಲ್ವಿದಂ ಬ್ರಹ್ಮ" ಇತ್ಯಾದಿ ಮಹಾವಾಕ್ಯಾರ್ಥ ವೇದಾಂತವಿಚಾರವನ್ನು ಗುರುಮುಖದಿಂದ ನಿರ್ಣಯ ಮಾಡಿಕೊಳ್ಳುವುದಿಲ್ಲವೋ, ಯಾರು ಅಜ್ಞಾನದಿಂದ ಪರಮಹಂಸವೆಂಬ ಸಂನ್ಯಾಸಾಶ್ರಮವನ್ನು ಸ್ವೀಕರಿಸುವುದಿಲ್ಲವೋ ಮತ್ತು ಅದನ್ನು ದ್ವೇಷಿಸುತ್ತಾರೆಯೋ ಅವರೆಲ್ಲರೂ ಪಾಷಂಡಿಗಳಾಗುತ್ತಾರೆ. ॥೫೨-೫೩॥

ಓ ಸುರೋತ್ತಮರೇ, ಇನ್ನೂ ಅನೇಕವಿಧವಾದ ವೇದೋಕ್ತವಾದ ಕರ್ಮಗಳನ್ನು ಮತ್ತು ಸ್ಮೃತ್ಯುಕ್ತವಾದ ಕರ್ಮಗಳನ್ನೂ ಸಹ ಯಾರು ಆಚರಿಸುವುದಿಲ್ಲವೋ ಅವರು ಪಾಷಂಡಿಗಳಾಗುತ್ತಾರೆ. ॥೫೪-೫೫॥

ಯಾರು ಅಜ್ಞಾನದಿಂದ ಲಲಾಟಪ್ರದೇಶದಲ್ಲಿ ಉರುಟಾಗಿಯೂ, ಅರ್ಧಚಂದ್ರಾಕಾರವಾಗಿಯೂ, ಇರುವ ಊರ್ಧ್ವಪುಂಡ್ರವನ್ನು ಧರಿಸುತ್ತಾರೆಯೋ ಯಾರು ಶಂಖ, ಚಕ್ರ, ಗದೆ, ವಜ್ರ ಇವುಗಳಿಂದ ತಮ್ಮ ಶರೀರದಲ್ಲಿ ಅಜ್ಞಾನದಿಂದ ಗುರುತು ಮಾಡಿಕೊಳ್ಳುತ್ತಾರೆಯೋ, ಯಾರು ತಮ್ಮ ಹೆಸರಿಂದಾಗಲಿ ತಮ್ಮ ಆಕಾರದಿಂದ

ಮನುಷ್ಯಾಣಾಂ ಚ ನಾಮ್ನಾತು ತೇಷಾಮಾಕಾರತೋಽ ಪಿ ವಾ ।
ಲಾಂಛಿತಾಶ್ಚ ಭವಿಷ್ಯಂತಿ ಪಾಷಂಡೋಪಹತಾ ಜನಾಃ ॥೫೮॥

ಬಹುನೋಕ್ತೇನ ಕಿಂ ವೇದ ಮರ್ಯಾದಾ ಭೇದನಂ ಸುರಾಃ ।
ಶ್ರದ್ಧಯೈವ ಕರಿಷ್ಯಂತಿ ಪಾಷಂಡೋಪ ಹತಾ ಜನಾಃ ॥೫೯॥

ಧೀರಾ ವಿಶಿಷ್ಟಾಶ್ಚ ಮಹೇಶ್ವರಸ್ಯ ।
ಪ್ರಸಾದ ಯುಕ್ತಾಶ್ಚ ಮಹತ್ತಮಾಶ್ಚ ॥
ವೇದೋದಿತಂ ಕೇವಲ ಮೇವ ದೇವಾ ।
ಮುದಾ ಕರಿಷ್ಯಂತಿ ವಿಮುಕ್ತಿ ಸಿದ್ಧ್ಯೈ ॥೬೦॥

ಇತಿ ಶ್ರೀಸ್ಕಂದಪುರಾಣೇ ಸೂತಸಂಹಿತಾಯಾಂ ಚತುರ್ಥಸ್ಯ ಯಜ್ಞವೈಭವಖಂಡಸ್ಯೋಪರಿಭಾಗೇ ಬ್ರಹ್ಮಗೀತಾಸೂಪನಿಷತ್ಸು ವೇದಾರ್ಥ ವಿಚಾರೋನಾಮ ದ್ವಿತೀಯೋಽಧ್ಯಾಯಃ

ಲಾಗಲೀ, ಅಜ್ಞಾನದಿಂದಾಗಲಿ, ಗುರುತುಮಾಡಿಕೊಳ್ಳುತ್ತಾರೋ ಅವರೆಲ್ಲರೂ ಪಾಷಂಡಿಗಳಾಗುತ್ತಾರೆ. ಹೆಚ್ಚು ಹೇಳಿ ಏನುಪ್ರಯೋಜನ? ವೇದದ ಮರ್ಯಾದೆಯನ್ನು ಯಾರು ಶ್ರದ್ಧೆಯಿಲ್ಲದೆ ಮೀರುತ್ತಾರೆಯೋ ಅವರು ಪಾಷಂಡಿಗಳಾಗುತ್ತಾರೆ. ||೫೬-೫೭-೫೮-೫೯||

ಎಲೈ ದೇವತೆಗಳೇ, ಧೀರರಾಗಿಯೂ, ಶಿಷ್ಟರಾಗಿಯೂ, ಪರಮೇಶ್ವರನ ಅನುಗ್ರಹ ಉಳ್ಳವರಾಗಿಯೂ, ಮಹಾತ್ಮರಾಗಿಯೂ ಇರತಕ್ಕವರು ತಮಗೆ ಮುಕ್ತಿ ಸಿಕ್ಕಬೇಕೆಂದು ವೇದದಲ್ಲಿ ಮಾತ್ರ ಹೇಳಿದ ಕರ್ಮಗಳನ್ನು ಅನುಷ್ಠಾನ ಮಾಡುತ್ತಾರೆ. ಅವರು ವೇದಕ್ಕಿಂತಲೂ ಬೇರೆ ಮಾರ್ಗವನ್ನಾಶ್ರಯಿಸುವುದಿಲ್ಲವು. ||೬೦||

ಇಲ್ಲಿಗೆ ಸ್ಕಾಂದಪುರಾಣದ ಸೂತಸಂಹಿತೆಯಲ್ಲಿ ನಾಲ್ಕನೆಯ ಭಾಗವಾದ
ಯಜ್ಞವೈಭವಖಂಡದಲ್ಲಿ ಎರಡನೆಯ ಭಾಗದಲ್ಲಿರುವ,
ಉಪನಿಷತ್ತುಗಳಂತಿರುವ ಬ್ರಹ್ಮಗೀತೆಯಲ್ಲಿ ವೇದಗಳ ಮುಖ್ಯ ತಾತ್ಪರ್ಯಾರ್ಥವನ್ನು
ವಿಮರ್ಶಿಸಿ ತಿಳಿಯಿಸುವ ಎರಡನೆಯ ಅಧ್ಯಾಯವು ಮುಗಿದುದು.

|| ಶ್ರೀಃ ||

ಅಥಾಸ್ಯಾಃ ಶ್ರೀಮತ್ಸ್ಕಾಂದಪುರಾಣಾಂತರ್ಗತ ಸೂತಸಂಹಿತಾಯಾಶ್ಚತುರ್ಥಸ್ಯ ಯಜ್ಞವೈಭವಖಂಡಸ್ಯೋಪರಿಭಾಗೇ ಬ್ರಹ್ಮಗೀತಾ

|| ತೃತೀಯೋಽಧ್ಯಾಯಃ ||

ಮೂರನೆಯ ಅಧ್ಯಾಯವು

|| ಬ್ರಹ್ಮೋವಾಚ ||

ಸರ್ವಾತ್ಮಾ ಶಂಕರೋ ನಾಮ ಸಾಕ್ಷ್ಯೇವ ಸಕಲಸ್ಯತು ।
ಸಾಕ್ಷ್ಯಭಾವೇ ಜಗತ್ಸಾಕ್ಷ್ಯಂ ಕಥಂ ಭಾತಿ ಸುರೋತ್ತಮಾಃ ॥೧॥

ಹಿಂದಿನ ಅಧ್ಯಾಯದಲ್ಲಿ "ತಂ ಹರಂ ಕೇಚಿದಿಚ್ಛಂತಿ" ಇತ್ಯಾದಿ ರೀತಿಯಿಂದ ದರ್ಶನಗಳ ಪ್ರವರ್ತಕರಾದ ವಾದಿಗಳ ವಿಪ್ರತಿಪತ್ತಿಯನ್ನು ತಕ್ಕ ಯುಕ್ತಿವಿವರಣೆಗಳಿಂದ ಹೋಗಲಾಡಿಸಿ ಶ್ರುತಿಸಿದ್ಧನಾದ ಪರಮೇಶ್ವರನೇ ಸಮಸ್ತವನ್ನೂ ಸೃಷ್ಟಿಸಿದವನೆಂದು ಹೇಳಿಯಾಯಿತು. ಆ ಪರಮೇಶ್ವರನೇ ಸೃಷ್ಟಿಸಿದ ದೇಹಗಳಲ್ಲಿ "ತಂ ಪ್ರಪದಾಭ್ಯಾಂ ಪ್ರಾಪದ್ಯತ ಬ್ರಹ್ಮೇಮಂ ಪುರುಷಂ" ಎಂಬ ಶ್ರುತ್ಯನುಸಾರವಾಗಿ ಕ್ರಿಯಾಶಕ್ತ್ಯಾತ್ಮಕವಾದ ಪ್ರಾಣರೂಪದಿಂದ ಇರುತ್ತಾನೆ. ಮತ್ತೂ "ಸ ಏತ ಮೇವ ಸೀಮಾನಂ ವಿದಾರ್ಯೈತಯಾದ್ವಾರಾ ಪ್ರಾಪದ್ಯತ" ಎಂಬ ಶ್ರುತ್ಯನುಸಾರವಾಗಿ ಚಿಚ್ಛಕ್ತಿರೂಪದಿಂದ ಬ್ರಹ್ಮರಂಧ್ರದ ಮಾರ್ಗವಾಗಿ ಪ್ರವೇಶಿಸಿರುತ್ತಾನೆ. ಈ ರೀತಿಯಾಗಿ ಪಾದದ ಮಾರ್ಗದಿಂದಲೂ, ಬ್ರಹ್ಮರಂಧ್ರದ ಮಾರ್ಗದಿಂದಲೂ, ಪ್ರವೇಶಿಸಿರುವ ಆ ಪರಮೇಶ್ವರನು ಪ್ರಾಣರೂಪನೋ ಅಥವಾ ಚಿಚ್ಛಕ್ತಿಸ್ವರೂಪನೋ? ಎಂಬ ಪ್ರಶ್ನೆಗೆ ಶ್ರುತಿಯು ಹೀಗೆ ಉತ್ತರವನ್ನು ಹೇಳುತ್ತದೆ. "ಯೇನವಾ ಪಶ್ಯತಿ ಯೇನವಾ ಶೃಣೋತಿ" ಎಂದು ಶಬ್ದವೇ ಮುಂತಾದ ಪ್ರತ್ಯಕ್ಷಗಳಿಗೆ ಸಾಕ್ಷಿರೂಪನಾಗಿದ್ದಾನೆಂದು ತಿಳಿಯುತ್ತದೆ. ಅದೇ ಶ್ರುತಿಯ ಅರ್ಥವನ್ನು ಇಲ್ಲಿ ನಿರೂಪಿಸಿರುತ್ತಾನೆ. ಬ್ರಹ್ಮನು

ಸ್ವತೋ ಭಾನ ವಿಹೀನಂ ಹಿ ಜಗತ್ಸರ್ವಂ ಚರಾಚರಂ।
ಜಡತ್ವಾಜಡತಾ ಚಾಸ್ಯ ಜಗತೋ ಭಾನವತ್ತಯಾ ॥೨॥

ಭಾನಂ ವಿಜ್ಞಾನತೋ ಜನ್ಯಮಿತಿ ಕೈಶ್ಚಿದುದೀರ್ಯತೇ।
ತನ್ನ ಸಂಗತ ಮೇವಸ್ಯಾ ಜ್ಜನ್ಯಂ ಚೇಜ್ಜಡ ಮೇವ ತತ್।
ಜಡಾನಾಮೇವ ಜನ್ಯತ್ವಂ ಕುಂಭಾದೀನಾಂ ಹಿ ಸಂಮತಂ ॥೩॥

ಹೇಳಿದನು.—ಎಲೈ ದೇವಶ್ರೇಷ್ಠರೇ, ಎಲ್ಲ ಶರೀರಗಳಲ್ಲೂ ಆತ್ಮರೂಪನಾಗಿರುವ ಸರ್ವಾತ್ಮನಾದ ಶಂಕರನು ಸಕಲ ಪದಾರ್ಥಗಳಿಗೂ ಸಾಕ್ಷಿರೂಪನಾಗಿರುತ್ತಾನೆ. ಸಾಕ್ಷೀ ಎಂದರೆ ತಾನು ಉದಾಸೀನನಾಗಿ, ರಾಗದ್ವೇಷಗಳಿಲ್ಲದೆ ನೋಡಿ ತಿಳಿಯತಕ್ಕವನು ಎಂದರ್ಥವು. ಚೈತನ್ಯರೂಪನಾದ ಸಾಕ್ಷಿಯಿಲ್ಲದಿದ್ದರೆ ಜಡವಾದ ಜಗತ್ತು ಹೇಗೆ, ಎಲ್ಲಿ ಪ್ರಕಾಶಿಸೀತು? ಸೂರ್ಯನು ಇಲ್ಲದಿದ್ದರೆ ಹೇಗೆ ಪದಾರ್ಥಗಳು ಕಾಣುವುದಿಲ್ಲವೋ ಹಾಗೆಯೇ ಚೈತನ್ಯರೂಪನಾದ ಸಾಕ್ಷಿಯಿಲ್ಲದಿದ್ದರೆ ಜಡವಾದ ಜಗತ್ತು ಪ್ರಕಾಶಿಸಲಾರದು. ॥೧॥

ಸಾಕ್ಷಿಯಂತೆ ಜಗತ್ತೂ ತಾನೇ ಏಕೆ ಸ್ಫುರಣವಾಗಬಾರದು? ಎಂದರೆ ಸ್ಥಾವರ ಜಂಗಮವಾದ ಈ ಸಮಸ್ತ ಪ್ರಂಪಂಚವೂ, ಜಡವಾದುದರಿಂದ ಸ್ವತಃ ಪ್ರಕಾಶ ಶೂನ್ಯವಾಗಿರುವುದು. ಆದುದರಿಂದ ಸಾಕ್ಷಿಯ ಸ್ಫುರಣೆಯಿಲ್ಲದಿದ್ದರೆ ಜಡವಾದ ಪ್ರಪಂಚವು ಪ್ರಕಾಶಿಸಲಾರದು. ಮತ್ತು ಪ್ರಪಂಚವು ಭಾನವಿಷಯವಾದ್ದರಿಂದ ಆತ್ಮಸ್ವರೂಪವು ಜ್ಞಾನರೂಪವಾಗಿಯೂ ಪ್ರಪಂಚವು ಜಡವಾಗಿಯೂ ಇರುವುದು. ಅಲ್ಲದೇ ಭಾನಕ್ಕೆ ವಿಷಯವಾದಾಗ ಜಗತ್ತೂ ಅಜಡವೆನಿಸಿಕೊಳ್ಳಲೂ ಬಹುದು. ಭಾನವೇ ಸಾಕ್ಷಿಯ ಸ್ವರೂಪವು. ॥೨॥

ಭಾನವು ಚಕ್ಷುರಾದಿಗಳಂತೆ ವಿಲೀನವಾದ ವಿಜ್ಞಾನದಿಂದ ಹುಟ್ಟುತ್ತದೆ ಎಂದು ಭಾಟ್ಟಮೀಮಾಂಸಕರು ಹೇಳುತ್ತಾರೆ. ಅದು ಸರಿಯಲ್ಲ. ಏಕೆಂದರೆ—ಮೃತ್ತಿನಿಂದ ಉಂಟಾದ ಘಟಾದಿಗಳು ಹೇಗೆ ಭಾವವಾಗಿ ಜಡವಾಗಿರುತ್ತವೆಯೋ ಹಾಗೆ ಜಡವಾಗಬೇಕಾಗುತ್ತದೆ. ಲೋಕದಲ್ಲಿ ಜಡವಾದ ಪದಾರ್ಥಕ್ಕೇ ಉತ್ಪತ್ತಿಯು ಕಂಡುಬರುತ್ತದೆ. ಆದುದರಿಂದ ಭಾನಕ್ಕೂ ವಿಷಯಕ್ಕೂ ಹುಟ್ಟುವಿಕೆಯಿಂದ ಸಾಮ್ಯ ಉಂಟಾಗೋಣದರಿಂದ ಜಡಕ್ಕೆ ಸ್ಫೂರ್ತಿಯು, ಜ್ಞಾನಸ್ವರೂಪವು, ಬರಲಾರದು. ಏಕೆಂದರೆ ಜ್ಞಾನದಲ್ಲಿ ಪರಿಣಾಮವಿಕಾರಗಳು ಸಂಭವಿಸವು. ॥೩॥

ವಿಜ್ಞಾನಂ ಚಾಪಿ ಭಾನಸ್ಯ ನೈವೋತ್ಪಾದಕ ಮಿಷ್ಯತೇ ।
ಜ್ಞಾನಸ್ಯ ಭಾನರೂಪೇಣ ಪರಿಣಾಮೋ ನ ಸಿಧ್ಯತಿ ॥೪॥

ಅವಿಕ್ರಿಯತ್ವಾತ್ ಜ್ಞಾನಸ್ಯ ಯದಿ ತಸ್ಯಾಪಿ ವಿಕ್ರಿಯಾ ।
ತರ್ಹಿ ಕ್ಷೀರಾದಿವಚ್ಚೇತ್ಯಂ ಭವೇತ್ತನ್ನೈವ ವೇದನಂ ॥೫॥

ತಥಾ ಭಾನಸ್ಯ ವಿಜ್ಞಾನಂ ನೈವಾರಂ ಭಕಮಿಷ್ಯತೇ ।
ಅದ್ರವ್ಯತ್ವಾದ್ಗುಣತ್ವೇನ ಪರೈರಂಗೀಕೃತತ್ವತಃ ॥೬॥

ಹಾಗೆಯೇ, ವಿಜ್ಞಾನವೂ ಭಾನಕ್ಕೆ ಉತ್ಪಾದಕವಾಗಲಾರದು. ಭಾನವು ಜ್ಞಾನ ರೂಪದುದರಿಂದ ಎಂದರೆ ಸಾಕ್ಷಿಚೈತನ್ಯರೂಪವಾಗಿರುವುದರಿಂದ, ನಿತ್ಯವಾಗಿಯೂ, ನಿರ್ವಿಕಾರವಾಗಿಯೂ ಇರುವುದರಿಂದ, ಪರಿಣಮಿಸಲಾರದು. ಒಂದುವೇಳೆ ಅವಿಕ್ರಿಯ ವಾದ ಜ್ಞಾನವು ಪರಿಣಮಿಸುವುದೇ ಆದರೆ, ಅದೂ ಕ್ಷೀರಾದಿಗಳಂತೆ ಜ್ಞಾನವಿಷಯವೇ ಆಗಿ ಜಡವೂ ಆಗಬೇಕಾಗುತ್ತದೆ. ಆದುದರಿಂದ, ಜ್ಞಾನವು ಕ್ರಿಯಾಶೂನ್ಯವಾದುದ ರಿಂದ, ಅದು ಕ್ಷೀರಾದಿಗಳಂತೆ ಪರಿಣಾಮವನ್ನು ಹೊಂದಲಾರದು. ವಿಜ್ಞಾನವು ಭಾನಕ್ಕೆ ಕಾರಣವೆನ್ನುವವರನ್ನು ಹೀಗೆ ಕೇಳಬೇಕು. ವಿಜ್ಞಾನವು ಭಾನವಾಗಿ ಪರಿಣಮಿಸುತ್ತ ದೆಯೇ? ಅಥವಾ ಭಾನಕ್ಕೆ ವಿಜ್ಞಾನವು ಕಾರಣವಾಗಿದೆಯೇ? ಮೊದಲನೆಯದು ಸಾಂಖ್ಯ ಮತವು, ಎರಡನೆಯದು ತಾರ್ಕಿಕಮತವು. ಮೊದಲನೆಯದಾಗದು, ಏಕೆಂ ದರೆ ಭಾನವು ವಿಕಾರವಲ್ಲವು. ವಿಕಾರಿಯೂ ಆಗದು. ಎಂದು ಹೇಳಿ ಎರಡನೆಯದೂ ಅಲ್ಲವೆನ್ನುತ್ತಾರೆ. ॥೪-೫॥

ವಿಜ್ಞಾನವನ್ನು ತಾರ್ಕಿಕಾದಿಗಳು ದ್ರವ್ಯವಲ್ಲವೆಂದೂ, ಗುಣವೆಂದೂ ಹೇಳು ತ್ತಾರೆ. ಆದುದರಿಂದ ಗುಣರೂಪವಾದ ವಿಜ್ಞಾನವು ಭಾನಕ್ಕೆ ಆರಂಭಕವಾಗಲಾರದು. ದ್ರವ್ಯವೇ ಆರಂಭಕ (ಕಾರಣ) ವಾಗಬೇಕೇ ಹೊರತು ಗುಣವು ಆರಂಭಕವಾಗಲಾ ರದು. ದ್ರವ್ಯಕ್ಕೆ ದ್ರವ್ಯವೇ ಕಾರಣವಾಗಬಲ್ಲದೇ ಹೊರತು ಗುಣವು ಆರಂಭಕ ಕಾರಣ ವಾಗಲಾರದೆಂದು ಭಾವವು. ॥೬॥

ಆರಂಭವಾದದಲ್ಲಿ ಕಾರ್ಯವು ಉತ್ಪತ್ತಿಯಾಗುವುದಕ್ಕೆ ಪೂರ್ವದಲ್ಲಿ ಅಸತ್ತಾಗಿ ತ್ತೆಂದು ಸಿದ್ಧಾಂತವಿದೆ. ಹಾಗೆ ಅಸತ್ತಾಗಿರತಕ್ಕ ಭಾನಕ್ಕೆ ಜ್ಞಾನವು ಕಾರಣವೆಂಬುದು ಯುಕ್ತವಾದುದಲ್ಲ. ಒಂದುವೇಳೆ ಅಸತ್ತಾಗಿರತಕ್ಕ ಭಾನಕ್ಕೆ ಜ್ಞಾನವು ಆರಂಭಕವಾಗು

ಅಸದ್ರೂಪಸ್ಯ ಭಾನಸ್ಯ ಜ್ಞಾನಂ ನಾರಂಭಕಂ ಭವೇತ್ ।
ವಂಧ್ಯಾ ಸೂನೋರಪಿ ಜ್ಞಾನಂ ತದಾ ಹ್ಯಾರಂಭಕಂ ಭವೇತ್ ॥೭॥

ಪ್ರಾಗ ಸದ್ರೂಪ ಭಾನಸ್ಯ ಜ್ಞಾನಂ ನಾರಂಭಕಂ ಭವೇತ್ ।
ಅಸತಃ ಪ್ರಾಕ್ತ್ವಪೂರ್ವಾಣಾಂ ವಿಶೇಷಾಣಾಮು ಭಾವತಃ ॥೮॥

ಅತೋ ವಿಜ್ಞಾನ ಜನ್ಯತ್ವಂ ನಾಸ್ತಿ ಭಾನಸ್ಯ ಸರ್ವದಾ ॥೯॥

ಜ್ಞಾನಸ್ಯಾಪಿ ನ ಜನ್ಯತ್ವಮುಸ್ತಿ ಹೇ ಸ್ವರ್ಗವಾಸಿನಃ ।
ಉಕ್ತನ್ಯಾಯೇನ ಜನ್ಯತ್ವ ಪ್ರತೀತಿಃ ಭ್ರಾಂತಿ ರೇವ ಹಿ ॥೧೦॥

ಭಾನಸ್ಯಾಪಿ ತಥಾ ಭ್ರಾಂತಿಃ ಜನ್ಯತ್ವಪ್ರತಿಭಾ ಸುರಾಃ ।
ಭಾವತ್ವೇ ಸತ್ಯಜನ್ಯತ್ವಾದ್ಭಾನಂ ನಿತ್ಯಂ ಸುರೋತ್ತಮಾಃ ॥೧೧॥

ವುದೇ ಆದರೆ ಆ ಜ್ಞಾನವು ಅಸತ್ತಾಗಿರತಕ್ಕ ವಂಧ್ಯಾಪುತ್ರನಿಗೂ ಏಕೆ ಕಾರಣವಾಗಲಾರದು? ಎಂದು ಆಪಾದನೆ ಮಾಡಿದರೆ ಸಮಾಧಾನವಿಲ್ಲವಾಗುವುದು. ||೭||

ಅತ್ಯಂತಾಸತ್ತಾಗಿರತಕ್ಕ ವಂಧ್ಯಾ ಪುತ್ರಾದಿಗಳಿಗೆ ಕಾರಣವಿರುವುದಿಲ್ಲ. ಇದ್ದಿದ್ದರೆ ಅವುಗಳೂ ಕೂಡ ಯಾವಾಗಲಾದರೂ ಹುಟ್ಟಬೇಕಾದ ಪ್ರಸಂಗಬರಬಹುದು. ಭಾನಕ್ಕಾದರೋ ಯಾವ ಕಾಲದಲ್ಲಿಯಾದರೂ, ವಿಜ್ಞಾನದಿಂದ ಉತ್ಪತ್ತಿಯಾಗುವಿಕೆಯು ಇರುವುದೇ ಇಲ್ಲವು. ಏಕೆಂದರೆ ಭಾನವು ನಿತ್ಯವಾದ ಚೈತನ್ಯಸ್ವರೂಪವಾಗಿರುತ್ತದೆ. ||೮-೯||

ಎಲೈ ಸ್ವರ್ಗವಾಸಿಗಳಾದ ದೇವತೆಗಳೇ, ಭಾನಕ್ಕೆ ಹೇಗೆ ಉತ್ಪತ್ತಿಯಿಲ್ಲವೋ ಹಾಗೆಯೇ ಜ್ಞಾನಕ್ಕೂ ಉತ್ಪತ್ತಿಯಿಲ್ಲ. ಒಂದು ವೇಳೆ ಜ್ಞಾನವು ಉತ್ಪತ್ತಿಯಾಗುತ್ತದೆಯೆಂದು ಒಪ್ಪಿಕೊಂಡರೆ ಉತ್ಪತ್ತಿಯುಳ್ಳ ಘಟಾದಿಗಳು ಹೇಗೆ ಜಡವಾಗಿರುವುವೋ ಹಾಗೆ ಜ್ಞಾನಕ್ಕೂ ಜಡತ್ವವು ಪ್ರಾಪ್ತವಾಗುತ್ತದೆ. ಆದರೆ ರೂಪಾದಿ ವಿಷಯಕವಾದ, ಇಂದ್ರಿಯಸಂಬಂಧದಿಂದುಂಟಾದ, ಅಂತಃಕರಣ ಪರಿಣಾಮರೂಪವಾದ, ವೃತ್ತಿಯು ಉತ್ಪತ್ತಿಯಾಗುತ್ತದೆ. ಆ ವೃತ್ತಿಯಲ್ಲಿರತಕ್ಕ ಉತ್ಪತ್ತಿಯನ್ನು ಚೈತನ್ಯದಲ್ಲಿ ಆರೋಪಿಸಿ ಭ್ರಾಂತಿಯಿಂದ ಚೈತನ್ಯದಲ್ಲಿಯೂ ಉತ್ಪತ್ತಿಯಿದೆಯೆಂದು ತಿಳಿಯುತ್ತೇವೆ. ||೧೦||

ಎಲೈ ದೇವಶ್ರೇಷ್ಠರೇ, ಘಟಾದಿ ವಿಷಯ ಸ್ಫುರಣವಾದ ಭಾನವು ಉತ್ಪತ್ತಿಯಾಗುತ್ತದೆಯೆಂಬುದು ಭ್ರಾಂತಿಯೇ ಆಗಿರುತ್ತದೆ. ಮತ್ತು ಭಾನವು ಭಾವರೂಪವಾದ ಮತ್ತು ಅಜನ್ಯವಾದ ಕಾರಣದಿಂದ ಅದು ನಿತ್ಯವಾದುದೆಂದು ತಿಳಿಯಬೇಕು. ||೧೧||

ಯಜ್ಜಗದ್ಭಾಸಕಂ ಭಾನಂ ನಿತ್ಯಂ ಭಾತಿ ಸ್ವತಃ ಸುರಾಃ ।
ಸ ಏವ ಜಗತಃ ಸಾಕ್ಷೀ ಸರ್ವಾತ್ಮಾ ಶಂಕರಾ ಭಿಧಃ ॥೧೨॥

ತೇನ ಕಲ್ಪಿತ ಸಂಬಂಧಾ ದಜ್ಞಾನಂ ಭಾತಿ ನ ಸ್ವತಃ ।
ಅಜ್ಞಾನಜನ್ಯಂ ಚಿತ್ತಂ ಚ ರಾಗದ್ವೇಷಾದಯಸ್ತಥಾ ॥
ಅಜ್ಞಾನ ಸ್ಪೃಷ್ಟ ಚೈತನ್ಯಾದೇವ ಭಾಂತಿ ಚ ನ ಸ್ವತಃ ॥೧೩॥

ಪ್ರಾಣಶ್ಚಾಪಿ ತಥಾ ಬಾಹ್ಯಕರಣಾನಿ ವಪುಸ್ತಥಾ ।
ಚಿತ್ತವೃತ್ತ್ಯಭಿಸಂಬಂಧ ದ್ವಾರೇಣೈವ ದೃಗನ್ವಯಾತ್ ॥೧೪॥

ವಿಭಾಂತಿ ನ ಸ್ವತೋ ಬಾಹ್ಯ ವಿಷಯಾಶ್ಚ ತಥೈವ ಚ ॥೧೫॥

ಈ ರೀತಿಯಾಗಿ ಸಮಸ್ತ ಜಗತ್ತಿಗೂ ಭಾಸಕವಾಗಿಯೂ, ನಿತ್ಯವಾಗಿಯೂ ಇರತಕ್ಕ ಯಾವ ಭಾನಸ್ವರೂಪವಿದೆಯೋ ಅದೇ ಶಂಕರನೆಂದು ಪ್ರಸಿದ್ಧನಾದ, ಸರ್ವ ದೇಹದಲ್ಲಿಯೂ ಇರತಕ್ಕ ಸರ್ವಾತ್ಮನೆಂದು ತಿಳಿಯಬೇಕು. ಅವನೇ ಸಮಸ್ತ ಜಗತ್ತಿಗೆ ಸಾಕ್ಷಿರೂಪನಾಗಿ ಪ್ರಕಾಶವನ್ನು ಕೊಡತಕ್ಕವನಾಗಿರುತ್ತಾನೆ. ॥೧೨॥

"ಅಸಂಗೋಹ್ಯಯಂ ಪುರುಷಃ" ಎಂಬ ಶ್ರುತ್ಯನುಸಾರವಾಗಿ ಭಾನರೂಪನಾದ ಪರಶಿವನಿಗೆ ಯಾವುದೊಂದು ಪದಾರ್ಥದೊಡನೆಯೂ ಪಾರಮಾರ್ಥಿಕವಾದ ಸಂಬಂಧವನ್ನು ಹೇಳಲು ಸಾಧ್ಯವಿಲ್ಲ. ಆದುದರಿಂದ ಅಜ್ಞಾನದಂತೆ ಸಂಬಂಧವೂ ಕೂಡ ಸಾಕ್ಷಿಯಲ್ಲಿ ಕಲ್ಪಿತವಾಗಿರುವುದರಿಂದ ಸಾಕ್ಷಿ ಭಾನಪ್ರಯುಕ್ತವಾಗಿ, ಚಂದ್ರಪ್ರಕಾಶದಿಂದ ರಾಹುವಿನ ತಿಳಿವಳಿಕೆಯೂ ಆಗುವಂತೆ, ಅಜ್ಞಾನವು ಪ್ರಕಾಶಿಸುವುದು. ಅಜ್ಞಾನಕ್ಕೆ ಸ್ವತಃ ಪ್ರಕಾಶವಿಲ್ಲವು. ಮತ್ತು ಅಜ್ಞಾನದಿಂದ ಉತ್ಪನ್ನವಾದ ಸತ್ವಗುಣದ ಪರಿಣಾಮವಾದ ಅಂತಃಕರಣವೂ, ರಾಗದ್ವೇಷಾದಿ ಅಂತಃಕರಣ ಧರ್ಮಗಳೂ, ರಾಗದ್ವೇಷಾದಿಗಳಿಗೆ ಉಪಾದಾನಕಾರಣವಾದ ಅಜ್ಞಾನಸಂಬಂಧವೂ ಚೈತನ್ಯದಲ್ಲಿ ಆರೋಪಿತವಾಗುವುದರಿಂದಲೇ ಪ್ರಕಾಶಿಸುತ್ತವೆ. ॥೧೩॥

ಪ್ರಾಣ, ಇಂದ್ರಿಯಗಳು, ಶರೀರ ಇವುಗಳು, ತಮಗೆ ಉಪಾದಾನಕಾರಣವಾದ ಅಜ್ಞಾನಪರಿಣಾಮವಾದ ಚಿತ್ತವೃತ್ತಿಗಳು, ಚೈತನ್ಯದಲ್ಲಿ ಆರೋಪಿತಸಂಬಂಧದಿಂದಲೇ ಪ್ರಕಾಶಿಸುತ್ತವೆ. ಮತ್ತು ಹೊರಗಿನ ಘಟಪಟಾದಿ ಪದಾರ್ಥಗಳೂ ಸಹ ಆರೋಪಿತವಾದ ಸಾಕ್ಷಿಸಂಬಂಧದಿಂದಲೇ ಪ್ರಕಾಶಿಸುತ್ತವೆ. ॥೧೪-೧೫॥

ಅನುಮಾನಾದಿವೃತ್ತಿಸ್ಥಂ ಚೈತನ್ಯಂ ಸುರಸತ್ತಮಾಃ ।
ಅರ್ಥಾನಾಮಪಿ ಕೇಷಾಂಚಿದ್ಭಾಸಕಂ ತೇನ ಶಂಕರಃ ॥೧೬॥

ಸರ್ವಾವಭಾಸಕಃ ಪ್ರೋಕ್ತಸ್ತೇನ ಭಾತಮಿದಂ ಜಗತ್ ।
ಅತೋ ರೂಪಾಣಿ ತೇನೈವ ಪಶ್ಯತೀ ಶೇನ ಮಾನವಃ ॥೧೭॥

ಶೃಣೋತ್ಯನೇನ ಶಬ್ದಾಂಶ್ಚ ಗಂಧಾನಾಜಿಘ್ರತಿ ಪ್ರಿಯಾನ್ ।
ಅನೇನೈವ ಸದಾ ವಾಚಂ ವ್ಯಾಕರೋತಿ ತು ಮಾನವಃ ।
ಅನೇನ ಸ್ವಾದು ಚಾಸ್ವಾದು ವಿಜಾನಾತಿ ಚ ಮಾನವಃ ॥೧೮॥

ಎಲೈ ದೇವಶ್ರೇಷ್ಠರೇ, ಅನುಮಾನ, ಶಬ್ದ ಇವೇ ಮುಂತಾದುವುಗಳಿಂದ ಉಂಟಾದ ವೃತ್ತ್ಯಭಿವ್ಯಕ್ತವಾದ ಚೈತನ್ಯರೂಪನೂ ಆದ ಶಂಕರನು ಸಮಸ್ತ ಪದಾರ್ಥಗಳಿಗೂ ಭಾಸಕನಾಗಿರುತ್ತಾನೆ. ಅವನೇ ಸರ್ವಕ್ಕೂ ಪ್ರಕಾಶವನ್ನು ಕೊಡತಕ್ಕವನು. ಈ ರೀತಿ ಜೀವರೂಪದಿಂದ ಈ ಶರೀರದಲ್ಲಿ ಪ್ರವೇಶಮಾಡಿರತಕ್ಕ ಸಾಕ್ಷಾತ್ಪರಶಿವನು ಸಾಕ್ಷಿರೂಪನೂ, ಕೇವಲ ಜ್ಞಾನರೂಪನೂ, ಆಗಿರುತ್ತಾನೆ. ಅವನ ಮೂಲಕವಾಗಿಯೇ ಸಮಸ್ತಮನುಷ್ಯರೂ ಇಂದ್ರಿಯಗಳ ದ್ವಾರಾ ರೂಪಾದಿ ವಿಷಯಗಳನ್ನು ತಿಳಿಯುತ್ತಾರೆ. ಏವಂಚ "ಕತರಃ ಸ ಆತ್ಮಾ" ಎಂಬ ಪ್ರಶ್ನೆಗೆ ಶರೀರದಲ್ಲಿ ಶಿರಸ್ಸಿನ ಪ್ರದೇಶದಿಂದ ಪ್ರವೇಶಿಸತಕ್ಕವನೇ ಆತ್ಮನು, ಸರ್ವಭಾಸಕನು ಮತ್ತು ಚಿದ್ರೂಪನು ಎಂದು ಉತ್ತರವನ್ನು ಹೇಳಿದಂತೆ ಆಯಿತು. ಪಾದಪ್ರದೇಶದಿಂದ ಪ್ರವೇಶಮಾಡಿದವನು ಆತ್ಮನಲ್ಲ. ಒಟ್ಟಿನಲ್ಲಿ "ತಸ್ಯಭಾಸಾ ಸರ್ವಮಿದಂ ವಿಭಾತಿ" ಎಂಬ ಶ್ರುತ್ಯನುಸಾರವಾಗಿ ಯಾವನ ಪ್ರಕಾಶದಿಂದ ಸಮಸ್ತ ಪ್ರಪಂಚವೂ ಬೆಳಗುತ್ತದೆಯೋ ಅಂತಹ ಸರ್ವಪ್ರಕಾಶಕನಾದ ಸಮಸ್ತಕ್ಕೂ ಸಾಕ್ಷಿಯಾದ ಚಿತ್ಸ್ವರೂಪನಾದವನೇ ಆತ್ಮನು. ಅವನೇ ಪರಶಿವಸ್ವರೂಪನಾದ ಶಂಕರನು. ॥೧೬-೧೭॥

ಹಾಗೆಯೇ ಶಬ್ದವನ್ನೂ, ಸುಗಂಧವನ್ನೂ, ವಾಕ್ಕನ್ನೂ, ಮಧುರಾದಿಗಳನ್ನೂ ಸಹ ಮನುಷ್ಯನು ಆತ್ಮನ ಮೂಲಕವಾಗಿಯೇ ತಿಳಿದುಕೊಳ್ಳುತ್ತಾನೆ. ಇಲ್ಲಿ ಶಬ್ದರೂಪ ಮುಂತಾದುವುಗಳ ವಿಷಯ ಪ್ರತ್ಯಕ್ಷ ಹೇಗೆ ಉಂಟಾಗುತ್ತದೆ? ಎಂದರೆ, ಮೊದಲು ಚಕ್ಷುರಾದಿ ಇಂದ್ರಿಯಗಳಿಗೂ ಘಟವೇ ಮುಂತಾದ ವಿಷಯಗಳಿಗೂ, ಸಂಯೋಗ ಉಂಟಾಗುತ್ತದೆ. ಆ ಮೇಲೆ ತೇಜೋರೂಪವಾದ ಅಂತಃಕರಣವು ಆ ಇಂದ್ರಿಯ ದ್ವಾರಾ ವಿಷಯ ದೇಶಕ್ಕೆ ಹೋಗಿ ಆ ವಿಷಯಾಕಾರವಾಗಿ ಪರಿಣಮಿಸುತ್ತದೆ. ಅದಕ್ಕೆ ವೃತ್ತಿಯೆಂದು ಹೆಸರು. ಆ ವೃತ್ತಿಯಲ್ಲಿ ಘಟಾದಿ ವಿಷಯಗಳಿಗೆ

ಶಂಕರಾಖ್ಯಂ ತು ವಿಜ್ಞಾನಂ ಬಹುಧಾ ಶಬ್ದ್ಯತೇ ಬುಧೈಃ ।
ಕೇಚಿದ್ಧೃದಯ ಮಿತ್ಯಾಹುಃ ಬ್ರಾಹ್ಮಣಾ ಹೇ ಸುರೋತ್ತಮಾಃ ॥೧೯॥

ಮನ ಇತ್ಯಪರೇ ಸಂತಃ ಸಂಜ್ಞಾನಮಿತಿ ಕೇಚನ ।
ಅಜ್ಞಾನಮಿತಿ ವಿದ್ವಾಂಸಃ ಕೇಚಿತ್ ಹೇ ಸ್ವರ್ಗವಾಸಿನಃ ॥೨೦॥

ವಿಜ್ಞಾನಮಿತಿ ಚಾಪ್ಯನ್ಯೇ ಪ್ರಜ್ಞಾನಮಿತಿ ಕೇಚನ ।
ಮೇಧೇತಿ ಬ್ರಾಹ್ಮಣಾಃ ಕೇಚಿದ್ದೃಷ್ಟಿ ರಿತ್ಯಪರೇ ಬುಧಾಃ ॥೨೧॥

ಅಧಿಷ್ಠಾನವಾದ ಚೈತನ್ಯವು ಪ್ರತಿಬಿಂಬಿಸುತ್ತದೆ. ಆಮೇಲೆ ಅಂತಃಕರಣವೃತ್ತಿಯಲ್ಲಿ ಪ್ರತಿಬಿಂಬಿಸಿರತಕ್ಕ ಚೈತನ್ಯಕ್ಕೂ, ವಿಷಯಾಧಿಷ್ಠಾನ ಚೈತನ್ಯಕ್ಕೂ ಅಭೇದ ಉಂಟಾಗಿ ಅದಕ್ಕೆ ರೂಪಜ್ಞಾನ, ರಸಜ್ಞಾನ ಎಂಬೀ ಹೆಸರುಗಳು ಸಂಕಲ್ಪ, ವಿಕಲ್ಪಾದಿಗಳೂ, ಅನುಮಿತ್ಯಾದಿಗಳೂ ಉಂಟಾಗುತ್ತವೆ. ಆದರೆ ಅನುಮಿತ್ಯಾದಿ ಸ್ಥಳಗಳಲ್ಲಿ ಇಂದ್ರಿಯಾದಿಗಳಿಗೆ ಬಹಿರ್ನಿರ್ಗಮಾದಿಗಳು ಇರುವುದಿಲ್ಲ. ಇದರಂತೆಯೇ ಪ್ರತ್ಯಕ್ಷದ ವಿಷಯದಲ್ಲೂ ಒಪ್ಪುವುದು ಉಚಿತವೆಂದು ತೋರುತ್ತದೆ. ಏಕೆಂದರೆ, ಸೂರ್ಯಾದಿ ಬಹುದೂರವಾದ ಸ್ಥಾನಗಳಿಂದ ಹೊರಟ ಪ್ರಕಾಶವು ಎಲ್ಲೆಡೆಯಲ್ಲೂ ವ್ಯಾಪಿಸಿರುತ್ತದೆ. ಕಣ್ಣನ್ನು ತೆರೆದ ಕೂಡಲೇ ಅದು ತನ್ನ ಸ್ಪಂದವಿಶೇಷಗಳನ್ನು ನಾಡಿಗಳ ದ್ವಾರಾ ಮನಸ್ಸನ್ನು ಪಡೆಯುತ್ತದೆ. ಅನಂತರದಲ್ಲಿ ರೂಪಾದಿ ಪ್ರತ್ಯಕ್ಷವಾಗುತ್ತದೆ. ಹಾಗಿಲ್ಲದೆ ತೈಜಸವಾದ ಅಂತಃಕರಣವು ಸೂರ್ಯಾದಿದೇಶಗಳಿಗೆ ಹೋಗಿ ಬರುವುದು ನಿಮೇಷದ ಒಂದು ಭಾಗದಷ್ಟು ಕಾಲದಲ್ಲಿ ಸಂಭವಿಸಲಾರದೆಂದು ತೋರುತ್ತದೆ. ಅಲ್ಲದೆ ಅಂತಃಕರಣದ ಬಹಿಃ ಗಮನಾಗಮನಗಳು ಅನುಭವಕ್ಕೂ ಬರುತ್ತಿಲ್ಲವು. ಈಗಿನ ಭೌತಶಾಸ್ತ್ರಗಳಲ್ಲಿ ವಿವರಿಸಿರುವ ರೀತಿಯಲ್ಲೂ ಪ್ರಕಾಶವೇ ಇಂದ್ರಿಯಗಳ ಮೂಲಕ ಒಳಕ್ಕೆ ಹೋಗಿ ಪ್ರತ್ಯಕ್ಷವಾಗುತ್ತದೆ. ಇದು ಎಲ್ಲರ ಅನುಭವಕ್ಕೂ ಬರುತ್ತಿದೆ. ॥೧೮॥

ತತ್ವದರ್ಶಿಗಳಾದ ಬ್ರಾಹ್ಮಣರು ಈ ಚಿತ್ಸ್ವರೂಪನಾದ ಶಂಕರನೆಂಬ ವಿಜ್ಞಾನವನ್ನು ಅನೇಕವಿಧವಾಗಿ ಹೇಳುತ್ತಾರೆ. ಕೆಲವರು "ಯದೇತದ್ಧೃದಯಂ ಮನಶ್ಚೈತತ್" ಎಂಬ ಶ್ರುತಿಯನ್ನು ಅನುಸರಿಸಿ ಹೃದಯವೆಂದು ಹೇಳುತ್ತಾರೆ. ॥೧೯॥

ಎಲೈ ಸ್ವರ್ಗವಾಸಿಗಳೇ, ಕೆಲವು ವಿದ್ವಾಂಸರು ಈ ಜ್ಞಾನವನ್ನು ಮನಸ್ಸೆಂಬುದಾಗಿಯೂ, ಇನ್ನು ಕೆಲವರು ಸಂಜ್ಞಾನವೆಂಬುದಾಗಿಯೂ, ಇನ್ನು ಕೆಲವರು ಅಜ್ಞಾನವೆಂದೂ ಕರೆಯುತ್ತಾರೆ. ॥೨೦॥

ಇನ್ನು ಕೆಲವು ಪಂಡಿತರು, ವಿಜ್ಞಾನ, ಪ್ರಜ್ಞಾನ ಮೇಧಾ, ದೃಷ್ಟಿ, ಧೃತಿ,

ಧೃತಿರಿತ್ಯ ಪರೇ ಪ್ರಾಜ್ಞಾ ಮತಿರಿತ್ಯಪಿ ಕೇಚನ ।
ಮನೀಷೇತಿ ಮಹಾಪ್ರಾಜ್ಞಾ ಜೂತಿರಿತ್ಯಪರೇ ಬುಧಾಃ ॥೨೨॥

ಸ್ಮೃತಿರಿತ್ಯಾಸ್ತಿಕಾಃ ಕೇಚಿತ್ಸಂಕಲ್ಪ ಇತಿ ಕೇಚನ ।
ಕ್ರತುರಿತ್ಯಪರೇ ಪ್ರಾಜ್ಞಾಃ ಕಾಮ ಇತ್ಯಪರೇ ಜನಾಃ ॥೨೩॥

ವಶ ಇತ್ಯಾಸ್ತಿಕಾಃ ಕೇಚಿತ್ಸರ್ವಾಣ್ಯೇತಾನಿ ಸಂತತಂ ।
ಪ್ರಜ್ಞಾನಸ್ಯ ಶಿವಸ್ಯಾಸ್ಯ ನಾಮಧೇಯಾನ್ಯ ಸಂಶಯಂ ॥೨೪॥

ಏಷ ಬ್ರಹ್ಮೈಷ ಏವೇಂದ್ರ ಏಷ ಏವ ಪ್ರಜಾಪತಿಃ ।
ಏಷ ಏವ ಹಿ ದೇವಾಶ್ಚ ಭೂತಾನಿ ಭುವನಾನಿ ಚ ॥೨೫॥

ಅಂಡಜಾ ಜಾರುಜಾಶ್ಚೈವ ಸ್ವೇದಜಾ ಉದ್ಭಿಜಾ ಅಪಿ ।
ಅಶ್ವಾ ಗಾವಶ್ಚ ಮರ್ತ್ಯಾಶ್ಚ ಹಸ್ತಿಪೂರ್ವಾಸ್ತಥೈವಚ ॥೨೬॥

ಮತಿ, ಮನೀಷಾ, ಜೂತಿ, ಸ್ಮೃತಿ, ಸಂಕಲ್ಪ, ಕ್ರತು, ಕಾಮ, ವಶ, ಇತ್ಯಾದಿ ಶಬ್ದಗಳಿಂದಲೂ ಇದನ್ನೇ ವ್ಯವಹರಿಸುತ್ತಾರೆ. ಈ ರೀತಿ ಹಿಂದೆ ಹೇಳಿದ ಸಮಸ್ತವೂ, ಜ್ಞಾನಸ್ವರೂಪನಾದ ಪರಶಿವನ ನಾಮಧೇಯಗಳು. ||೨೧-೨೨-೨೩-೨೪||

ಈ ರೀತಿಯಾಗಿ ಅತಃಕರಣ ವೃತ್ತ್ಯಾರೂಢವಾದ ರೂಪವೇ ಮುಂತಾದ ವಸ್ತುಗಳಿಗೆ ಪ್ರಕಾಶಕವಾದ ನಿತ್ಯವೂ, ಸ್ವಪ್ರಕಾಶವೂ, ಸಾಕ್ಷಿಯೂ, ಆಗಿರತಕ್ಕದ್ದೇ ಆತ್ಮಸ್ವರೂಪವೆಂದು ಹೇಳಿದಂತಾಯಿತು. ಅದೇ ಆತ್ಮಸ್ವರೂಪವು ಬ್ರಹ್ಮಾದಿಸ್ತಂಬಪರ್ಯಂತವಾದ ಸಮಸ್ತ ಪ್ರಾಣಿಗಳಲ್ಲಿಯೂ ಜೀವರೂಪದಿಂದಲೂ, ಉಪಾದಾನವಾಗಿಯೂ ಇದೆಯೆಂದು ಸರ್ವವ್ಯಾಪಕತ್ವವೂ, ಕೂಡ ಇಲ್ಲಿ ನಿರೂಪಿಸಲ್ಪಟ್ಟಿದೆ. ಹಿಂದೆ ಹೇಳಿದ ಸರ್ವಕ್ಕೂ ಪ್ರಕಾಶಕವಾದ, ಸರ್ವಕ್ಕೂ ಸಾಕ್ಷಿಯಾದ ಚೈತನ್ಯರೂಪವಾದ ಆತ್ಮಸ್ವರೂಪವು ಪಂಚೀಕೃತವಾದ ಪಂಚ ಪೃಥಿವ್ಯಾದಿ ಮಹಾಭೂತಗಳ ಕಾರ್ಯವಾದ ಸಮಷ್ಟಿಲಿಂಗಶರೀರೋಪಹಿತನಾದ ಹಿರಣಗರ್ಭನೆಂಬ ಬ್ರಹ್ಮವಾಗಿರುತ್ತದೆ. ಪರಮೈಶ್ವರ್ಯ ಉಳ್ಳ ಇಂದ್ರನೂ, ಪಂಚೀಕೃತವಾದ ಭೂತಗಳಿಂದುಂಟಾದ ಬಹ್ಮಾಂಡದಲ್ಲಿರತಕ್ಕ ಮೊದಲು ಹುಟ್ಟಿದ ಪ್ರಜಾಪತಿಯೂ, ಅಗ್ನ್ಯಾದಿ ದೇವತೆಗಳೂ, ಸಮಸ್ತ ಶರೀರಕ್ಕೆ ಕಾರಣಗಳಾದ ಪೃಥಿವ್ಯಾದಿಭೂತಗಳೂ, ಚತುರ್ದಶಲೋಕಗಳೂ, ಆ ಲೋಕದಲ್ಲಿರತಕ್ಕ, ಮೊಟ್ಟೆಯಿಂದ ಹುಟ್ಟಿದ, ಪಕ್ಷ್ಯಾದಿಗಳೂ, ಮನುಷ್ಯ ಪಶ್ವಾದಿಗಳೂ, ಬೆವರಿನಿಂದ ಹುಟ್ಟಿದ ಪ್ರಾಣಿಗಳೂ, ಭೂಮಿಯನ್ನು ಒಡೆದುಕೊಂಡು ಹುಟ್ಟಿದ ವೃಕ್ಷಾದಿಗಳೂ,

ಸ್ಥಾವರಂ ಜಂಗಮಂ ಚೈವ ತಥಾನ್ಯದಪಿ ಕಿಂಚನ ।
ಸರ್ವಮೇತದಯಂ ಶಂಭುಃ ಪ್ರಜ್ಞಾನ ಘನ ಲಕ್ಷಣಃ ॥೨೭॥

ಪ್ರತಿಷ್ಠಾ ಸರ್ವವಸ್ತೂನಾಂ ಪ್ರಜ್ಞೈಕಾ ಪಾರಮೇಶ್ವರೀ ।
ಪ್ರಜ್ಞಾನಮೇವ ತದ್ಬ್ರಹ್ಮ ಶಿವರುದ್ರಾದಿ ಸಂಜ್ಞಿತಂ ॥೨೮॥

ಕುದುರೆ, ಮನುಷ್ಯ, ಆನೆಯೇ ಮುಂತಾದ ಪ್ರಾಣಿಗಳೂ ಸಹ ಆತ್ಮಸ್ವರೂಪಗಳು. ||೨೫-೨೬||

ಸಂಚರಿಸಲು ಸಾಮರ್ಥ್ಯವಿಲ್ಲದ ವೃಕ್ಷಾದಿಗಳೂ, ಸಂಚರಿಸಲು ಸಾಮರ್ಥ್ಯ ಉಳ್ಳ ಪ್ರಾಣಿಗಳೂ, ರೆಕ್ಕೆಗಳ ಮೂಲಕ ಆಕಾಶದಲ್ಲಿ ಹಾರಾಡುವ ಪಕ್ಷ್ಯಾದಿಗಳೂ, ಇವು ಸಮಸ್ತವೂ ಕೂಡ, ಲವಣ ಖಂಡದಂತೆ ಏಕರೂಪವಾದ, ಜ್ಞಾನರೂಪವಾದ ಪರಮಾತ್ಮನೇ ಆಗಿರುತ್ತವೆ. ಎಂದರೆ ಸಮಸ್ತ ಚರಾಚರಾತ್ಮಕವಾದ ಪ್ರಪಂಚವೂ ಪರಮಾತ್ಮನಲ್ಲಿ ಅಧ್ಯಸ್ತವಾಗಿದೆ. ಪರಮಾತ್ಮನು ಅಧಿಷ್ಠಾನವು. ಅಧ್ಯಸ್ತವಾದ ಪ್ರಪಂಚದಲ್ಲಿ ಅಧಿಷ್ಠಾನಕ್ಕಿಂತಲೂ ಬೇರೆಯದಾದ ಸತ್ತೆಯು ಇಲ್ಲದ ಪ್ರಯುಕ್ತ ಸಮಸ್ತವೂ ಕೂಡ (ಬೇರೆಯದಾದ) ಅಧಿಷ್ಠಾನವಾದ ಸರ್ವಪ್ರತ್ಯಗ್ರೂಪವಾದ ಸರ್ವಸಾಕ್ಷಿಯಾದ ಬ್ರಹ್ಮಸ್ವರೂಪವೇ ಆಗಿರುತ್ತದೆ. ಒಟ್ಟಿನಲ್ಲಿ ಈ ಶ್ಲೋಕದಿಂದ "ಸರ್ವಂ ತತ್ಪ್ರಜ್ಞಾನೇತ್ರಂ" ಎಂಬ ಐತರೇಯೋಪನಿಷತ್ತಿನ ಅರ್ಥವು ಸಂಗೃಹೀತವಾಯಿತು. ||೨೭||

"ಪ್ರಜ್ಞಾನೇ ಪ್ರತಿಷ್ಠಿತಂ" ಎಂಬ ಐತರೇಯ ಶ್ರುತಿಯಂತೆ ಯಾವ ಆತ್ಮಸ್ವರೂಪವು ಸಮಸ್ತಕ್ಕೂ ಸಾಕ್ಷಿಯಾಗಿದೆಯೋ, ಮತ್ತು ಅಧ್ಯಸ್ತವಾದ ಪ್ರಪಂಚಕ್ಕೆ ಅಧಿಷ್ಠಾನವಾಗಿದೆಯೋ, ಅಂತಹ ಆತ್ಮಸ್ವರೂಪವನ್ನೇ ತಿಳಿದುಕೊಳ್ಳಬೇಕೆಂದು ಹಿಂದೆ ನಿರ್ದೇಶಿಸಿ, ಈಗ ಅದನ್ನು ಅನುವಾದ ಮಾಡಿ ಅದಕ್ಕೆ "ಪ್ರಜ್ಞಾಪ್ರತಿಷ್ಠಾ ಪ್ರಜ್ಞಾನಂ ಬ್ರಹ್ಮ" ಎಂಬ ಐತರೇಯ ಶ್ರುತಿಯು ಬ್ರಹ್ಮಾತ್ಮತ್ವವನ್ನು ಪ್ರತಿಪಾದಿಸುತ್ತದೆ. ಆ ಶ್ರುತ್ಯರ್ಥವನ್ನು ಇಲ್ಲಿ ಸಂಗ್ರಹಿಸುತ್ತಾರೆ. ಜೀವರೂಪದಿಂದಿರತಕ್ಕ ಪರಮಾತ್ಮನ ಸರ್ವಸಾಕ್ಷಿಯಾದ ಚಿತ್ತು ಸಮಸ್ತ ಜಗತ್ತಿಗೆ ಉಪಾದಾನವಾದ ಅವಿದ್ಯೆಯಿಂದ ಕಲ್ಪಿತವಾದ ಜಗತ್ತಿನ ಉತ್ಪತ್ತಿ ಸ್ಥಿತಿ ಲಯಗಳಿಗೆ ಆಶ್ರಯವಾಗಿರುತ್ತದೆ. ಮತ್ತು ಸಕಲ ಕಲ್ಪನೆಗಳಿಗೆ ಆಸ್ಪದವಾಗಿಯೂ ಯಾವಾಗಲೂ, ಎಲ್ಲಾ ವಸ್ತುಗಳಿಗೂ ಭಾಸಕವಾಗಿಯೂ, ಸಾಕ್ಷಿರೂಪವಾಗಿಯೂ ಇರತಕ್ಕ ಯಾವ ಜ್ಞಾನಜ್ಯೋತಿಯು ಸಾಧಕನ ಹೃದಯಮಧ್ಯದಲ್ಲಿ ತೋರುತ್ತದೆಯೋ ಅದೇ ಶಿವ, ರುದ್ರ ಇತ್ಯಾದಿ ನಾಮಗಳಿಂದ ವ್ಯವಹರಿಸಲ್ಪಡುತ್ತದೆ. ಅದೇ ಬ್ರಹ್ಮಸ್ವರೂಪವು. ಒಟ್ಟಿನಲ್ಲಿ ಇಲ್ಲಿ

ಏವಂ ರೂಪ ಪರಿಜ್ಞಾನಾದೇವ ಮರ್ತ್ಯೋಽಮೃತೋ ಭವೇತ್ ।
ನ ಕರ್ಮಣಾ ನ ಪ್ರಜಯಾ ನ ಚಾನ್ಯೇನಾಪಿ ಕೇನ ಚಿತ್ ॥೨೯॥

ಬ್ರಹ್ಮ ವೇದನಮಾತ್ರೇಣ ಬ್ರಹ್ಮಾಽಪ್ನೋತ್ಯೇವ ಮಾನವಃ ।
ಅತ್ರ ನಾಸ್ತ್ಯೇವ ಸಂದೇಹ ಸ್ತ್ರಿರ್ವಃ ಶಪಥಯಾ ಮ್ಯಹಂ ॥೩೦॥

ಹೀಗೆ ತಿಳಿಯಬೇಕು. ಹೇಗೆ "ಸೋಽಯಂ ದೇವದತ್ತಃ" ಎಂಬುವಲ್ಲಿ ವಿರುದ್ಧವಾದ ಆಯಾಯಾ ದೇಶಕಾಲಗಳನ್ನು ಬಿಟ್ಟು ಕೇವಲದೇವದತ್ತಸ್ವರೂಪ ಮಾತ್ರವನ್ನು ಸ್ವೀಕರಿಸುವುದರಿಂದ ಜ್ಞಾನ ಉಂಟಾಗುತ್ತದೆಯೋ ಹಾಗೆ ಪ್ರತ್ಯಕ್ ಸ್ವಪ್ರಕಾಶ, ಸಾಕ್ಷಿ ಚಿದ್ವಾಚಿಯಾದ ಪ್ರಜ್ಞಾನಶಬ್ದಕ್ಕೂ, ಜಗತ್ಕಾರಣಪರವಾದ ಶಿವವಾಚಿಯಾದ ಬ್ರಹ್ಮಶಬ್ದಕ್ಕೂ ಸಾಮಾನಾಧಿಕರಣ್ಯವು ತೋರುತ್ತದೆ. ಇಲ್ಲಿಯೂ ಕೂಡ ಸಂಸಾರ ಸಾಕ್ಷಿತ್ವ, ಜಗತ್ಕರ್ತೃತ್ವಾದಿ ವಿರುದ್ಧಧರ್ಮಗಳನ್ನು ತ್ಯಜಿಸಿದರೆ ಜ್ಞಾನೈಕರಸ ವಾಗಿಯೂ, ಸಮಸ್ತವಾದ ಉಪಾಧಿಶೂನ್ಯವಾಗಿಯೂ, ಇರತಕ್ಕ ಪರಮಾತ್ಮನ ಸ್ವರೂಪವನ್ನು ಅಜ್ಞಾನದಿಂದ ಕಲ್ಪಿತವಾದ ಭ್ರಾಂತಿ ನಿವೃತ್ತಿಯ ಮೂಲಕ ತಿಳಿಯ ಬಹುದು. ||೨೮||

"ಸ ಏ ತೇನ ಪ್ರಜ್ಞಾನಾತ್ಮನಾಽಸ್ಮಾಲ್ಲೋಕಾದುತ್ಕ್ರಮ್ಯ" ಎಂಬ ಐತರೇಯ ಶ್ರುತಿಯಲ್ಲಿ ಯಾವ ಬ್ರಹ್ಮಾತ್ಮೈಕ್ಯವು ಅಮೃತತ್ವರೂಪವಾದ ಮೋಕ್ಷಕ್ಕೆ ಸಾಧನ ವೆಂದು ಹೇಳಿದೆಯೋ ಅದನ್ನು ಇಲ್ಲಿ ಸಂಗ್ರಹಿಸಲಾಗಿದೆ. ಪಾರಮಾರ್ಥಿಕವಾದ ಪರಮಾತ್ಮಸ್ವರೂಪಜ್ಞಾನವೇ ಮೋಕ್ಷಸಾಧನವು. ಸಂಸಾರವು ಆತ್ಮಸ್ವರೂಪಪರಿಜ್ಞಾನ ವಿಲ್ಲದೇ ಇದ್ದುದರಿಂದ ಬಂದಿರುತ್ತದೆ. ಸ್ವರೂಪಜ್ಞಾನದಿಂದ ಅಜ್ಞಾನವು ನಿವೃತ್ತಿ ಯಾಗಲು ತನ್ಮೂಲಕ ಸಂಸಾರಾದಿ ಸಮಸ್ತ ಅನರ್ಥನಿವೃತ್ತಿಯಾಗುತ್ತದೆ. ಆ ರೀತಿ ಸ್ವರೂಪಜ್ಞಾನವನ್ನು ಪಡೆದ ಮರಣಸ್ವಭಾವ ಉಳ್ಳಜೀವನೂ ಸಹ ಅಮೃತನಾಗು ತ್ತಾನೆ. ಆದರೆ ಅಮೃತವಾದ ಮುಕ್ತಿಗೆ ಜ್ಞಾನ ಒಂದೇ ಸಾಧನವೇ ಹೊರತು ಸ್ವರ್ಗಾದಿ ಪ್ರಾಪ್ತಿಸಾಧನವಾದ ಕರ್ಮಾದಿಗಳೂ, ಈ ಲೋಕಕ್ಕೆ ಸಾಧನವಾದ ಪ್ರಜೆಗಳೂ, ಮುಕ್ತಿಗೆ ಸಾಧನಗಳಲ್ಲವು. ಈ ಅಭಿಪ್ರಾಯದಿಂದಲೇ "ನಕರ್ಮಣಾನ ಪ್ರಜಯಾ ಧನೇನ" ಎಂಬ ತೈತ್ತರೀಯ ಶ್ರುತಿಯು ಕರ್ಮಾದಿಗಳು ಸಾಕ್ಷಾತ್ತಾಗಿ ಮೋಕ್ಷಸಾಧನ ಗಳಲ್ಲವೆಂದು ನಿಷೇಧಿಸುತ್ತದೆ. ||೨೯||

ಮನುಷ್ಯನು ಬ್ರಹ್ಮರೂಪವನ್ನು ತಿಳಿದಮಾತ್ರದಿಂದಲೇ ಬ್ರಹ್ಮವನ್ನು ಪಡೆಯುತ್ತಾನೆ. ಇಲ್ಲಿ ವೇದನಮಾತ್ರೇಣ ಎಂದು ಮಾತ್ರಪದವನ್ನು ಹೇಳಿದ್ದರಿಂದ

**ತದ್ವಿದ್ಯಾ ವಿಷಯಂ ಬ್ರಹ್ಮ ಸತ್ಯಜ್ಞಾನ ಸುಖಾದ್ವಯಂ ।
ಸಂಸಾರಕೇ ಗುಹಾವಾಚ್ಯೇ ಮಾಯಾಽಜ್ಞಾನಾದಿ ಸಂಜ್ಞಿತೇ ।
ನಿಹಿತಂ ಬ್ರಹ್ಮಯೋ ವೇದ ಪರಮವ್ಯೋಮ ಸಂಜ್ಞಿತೇ ॥೩೦॥**

ವೇದನ (ಜ್ಞಾನ) ಒಂದೇ ಮೋಕ್ಷಸಾಧನವೇ ಹೊರತು ಜ್ಞಾನಕರ್ಮಸಮುಚ್ಚಯ ಸಮೂಹವೇ ಆಗಲಿ, ಕೇವಲ ಕರ್ಮವೇ ಆಗಲಿ ಮೋಕ್ಷಸಾಧನವಲ್ಲವೆಂದು ತಿಳಿಯಬೇಕು. ಇಲ್ಲಿ "ಬ್ರಹ್ಮಾಪ್ನೋತಿ" ಬ್ರಹ್ಮವನ್ನು ಪಡೆಯುತ್ತಾನೆ. ಎಂದು ಹೇಳಿದೆ. ಬ್ರಹ್ಮನನ್ನು ಪಡೆಯುವಿಕೆಯೆಂದರೆ ಗ್ರಾಮಪ್ರಾಪ್ತಿಯಂತೆ ಅಲ್ಲ, ಹಾಗೆ ಗ್ರಾಮಪ್ರಾಪ್ತಿಯಂತೆ ಕ್ರಿಯಾರೂಪವಾದ ಪ್ರಾಪ್ತಿಯು ಜೀವನಿಗೆ ಇರುವುದಿಲ್ಲ. ಒಂದುವೇಳೆ ಕ್ರಿಯೆಯನ್ನು ಒಪ್ಪಿಕೊಂಡರೆ ಸಾವಯವವೂ ವಿಕಾರಿಯೂಅಲ್ಪವೂ ಆಗಿ ನಶಿಸಬೇಕಾಗುತ್ತದೆ. ಮತ್ತು ಜೀವಸ್ವರೂಪವೇ ಬ್ರಹ್ಮಸ್ವರೂಪವಾದುದರಿಂದ ಹೇಗೆ ಕ್ರಿಯಾರೂಪವಾದ ಪ್ರಾಪ್ತಿಯುಂಟಾದೀತು? ಎರಡು ಪದವಿದ್ದರೆ ಪ್ರಾಪ್ತಿಯಾಯಿತೆಂದು ಹೇಳಬಹುದು. ಆದುದರಿಂದ ಇಲ್ಲಿ ಪ್ರಾಪ್ತಿಯೆಂಬ ಮಾತಿಗೆ ಅಜ್ಞಾನನಿವೃತ್ತಿ ಪೂರ್ವಕಸ್ವರೂಪಜ್ಞಾನವೆಂದೇ ತಿಳಿಯಬೇಕು. ಅಥವಾ ಅಜ್ಞಾನನಿವೃತ್ತಿಯ ಪ್ರಾಪ್ತಿಯೆಂದು ಬೇಕಾದರೂಹೇಳಬಹುದು. ಏನಂಚ ಬ್ರಹ್ಮಜ್ಞಾನಿಯು ಬ್ರಹ್ಮರೂಪವನ್ನು ಪಡೆಯುತ್ತಾನೆಂಬ ವಿಷಯದಲ್ಲಿ ಯಾವ ಸಂದೇಹವೂ ಇಲ್ಲ. ಈ ವಿಷಯವನ್ನು ನಾನು ಮೂರಾವೃತ್ತಿ ಶಪಥವನ್ನು ಮಾಡಿ ಹೇಳುತ್ತೇನೆ. ಈ ಅಭಿಪ್ರಾಯದಿಂದಲೇ "ಬ್ರಹ್ಮವೇದ ಬ್ರಹ್ಮೈವ ಭವತಿ" ಮುಂಡಕ "ಬ್ರಹ್ಮವಿದಾಪ್ನೋತಿಪರಂ" ಎಂದು ತೈತ್ತಿರೀಯ ಶ್ರುತಿಯೂ ಹೇಳುತ್ತದೆ. ॥೩೦॥

ಈ ರೀತಿಯಾಗಿ ಐತರೇಯೋಪನಿಷತ್ತಿನ ಅರ್ಥವನ್ನು ಪರಿಶೀಲಿಸುತ್ತಿರಲಾಗಿ ಕರ್ಮಾದಿಗಳ ಅಪೇಕ್ಷೆಯಿಲ್ಲದೇ ಬ್ರಹ್ಮಾತ್ಮೈಕ್ಯಸಾಕ್ಷಾತ್ಕಾರವು ಮೋಕ್ಷಸಾಧನವೆಂದು ತಿಳಿದಹಾಗಾಯಿತು. ತೈತ್ತಿರೀಯೋಪನಿಷತ್ತನ್ನು ಪರಿಶೀಲಿಸಿದರೂ ಸಹ ಮೇಲ್ಕಂಡ ಅರ್ಥವು ತಿಳಿಯುತ್ತದೆಂದು ಈಗ ನಿರೂಪಿಸಲ್ಪಡುತ್ತಿದೆ. ತೈತ್ತರೀಯದಲ್ಲಿ "ಬ್ರಹ್ಮವಿದಾಪ್ನೋತಿ ಪರಂ" ಎಂಬ ವಾಕ್ಯವು ಬ್ರಹ್ಮವನ್ನು ತಿಳಿಸಲೋಸುಗ ಹೊರಟ ಸಮಸ್ತ ತೈತ್ತರೀಯ ಉಪನಿಷತ್ತಿಗೆ ಸೂತ್ರರೂಪವಾಗಿದೆ. ಈ ವಾಕ್ಯವು ಈ ಜನ್ಮದಲ್ಲಾಗಲಿ, ಜನ್ಮಾಂತರದಲ್ಲಾಗಲಿ ಫಲಾನಭಿಸಂಧಿಯಿಂದ ಅನುಷ್ಠಿಸಿದ ನಿತ್ಯನೈಮಿತ್ತಿಕ ಕರ್ಮಗಳಿಂದ ಚಿತ್ತನೈರ್ಮಲ್ಯ ಉಳ್ಳ, ಸಾಧನಚತುಷ್ಟಯ ಸಂಪನ್ನನಾದ ಬ್ರಹ್ಮಜಿಜ್ಞಾಸುವಿಗೆ ಅವಿದ್ಯಾತತ್ಕಾರ್ಯರಹಿತವಾಗಿಯೂ, ನಿರತಿಶಯವಾದ

ಆನಂದರೂಪವಾಗಿಯೂ, ನಿತ್ಯಶುದ್ಧರೂಪವಾಗಿಯೂ, ಇರತಕ್ಕ ಬ್ರಹ್ಮಸ್ವರೂಪವನ್ನು ಬೋಧಿಸುತ್ತದೆ. ಅದರಲ್ಲಿ ಶ್ರೋತೃಗಳಿಗೆ ಪ್ರವೃತ್ತಿಗೋಸ್ಕರ ಸುಖವಾಗಿ ತಿಳಿಯಲು ಹಿಂದಿನ ವಾಕ್ಯದ ವ್ಯಾಖ್ಯಾನರೂಪವವಾಗಿ ತೈತ್ತರೀಯದಲ್ಲಿಯೇ "ಸತ್ಯಂ ಜ್ಞಾನ ಮನಂತಂ ಬ್ರಹ್ಮ" "ಯೋ ವೇದ ನಿಹಿತಂ ಗುಹಾಯಾಂ ಪರಮೇವ್ಯೋಮನ್" "ಸೋಽಶ್ನುತೇ ಸರ್ವಾನ್ಕಾಮಾನ್ಸಹ" "ಬ್ರಹ್ಮಣಾ ವಿಪಶ್ಚಿತೇತಿ" ಎಂಬುದಾಗಿ ಆಮ್ನಾತವಾಗಿದೆ. ಹಾಗೆ ಪ್ರಕೃತದಲ್ಲಿಯೂ ಜಿಜ್ಞಾಸುಗಳಾದ ದೇವತೆಗಳಿಗೆ "ಬ್ರಹ್ಮವಿದಾಪ್ನೋತಿ ಪರಂ" ಎಂಬ ಸೂತ್ರರೂಪವಾದ ವಾಕ್ಯಾರ್ಥವನ್ನು ಹೇಳಿ ಅದರ ವ್ಯಾಖ್ಯಾನವಾದ ಮೇಲ್ಕಂಡ ವಾಕ್ಯಗಳ ಅರ್ಥವನ್ನು ಸಂಗ್ರಹಿಸಿ ಬ್ರಹ್ಮನು ಹೇಳುತ್ತಾನೆ. ಬ್ರಹ್ಮಸ್ವರೂಪವು ಹೀಗಿದೆ. ಬ್ರಹ್ಮಶಬ್ದವು, "ಬೃಹೀ ವೃದ್ಧೌ" ಎಂಬ ಧಾತುವಿನಿಂದ ನಿಷ್ಪನ್ನವಾಗಿದೆ. ವೃದ್ಧಿಯಾದರೋ ಅತಿ ಮಹತ್ವವೆಂದು ತಿಳಿಯಬೇಕು. ತಥಾ ಚ ಆಕಾಶಾದಿಗಳಿಗೂ ಬ್ರಹ್ಮವು ಕಾರಣವಾದುದರಿಂದ ಅವುಗಳಿಗಿಂತಲೂ ವ್ಯಾಪಕವಾಗಿರುವುದಕ್ಕೆ ಬೇರೆ ವಸ್ತುವಿನಿಂದ ಪರಿಚ್ಛೇದವೂ ಸಹ ಇರುವುದಿಲ್ಲ. ಸಮಸ್ತ ವಸ್ತುಗಳೂ ಅದರಲ್ಲಿಯೇ ಕಲ್ಪಿತವಾದ್ದರಿಂದ ಕಲ್ಪಿತವಾದ ವಸ್ತುವಿಗೆ ಅಧಿಷ್ಠಾನಾತಿರಿಕ್ತವಾದ ಸತ್ತೆ ಇಲ್ಲದೇ ಇರುವ ಪ್ರಯುಕ್ತ, ವಸ್ತುತಃ ಬ್ರಹ್ಮಸ್ವರೂಪಕ್ಕಿಂತಲೂ ವಸ್ತುಗಳು ಅತಿರಿಕ್ತವಲ್ಲ. ದೇಶ ಕಾಲ ಪರಿಚ್ಛೇದವೂ ಇರುವುದಿಲ್ಲ. ಇಂತಹ ದೇಶ ಕಾಲ ವಸ್ತುಗಳ ಪರಿಚ್ಛೇದವಿಲ್ಲದೆ ಬ್ರಹ್ಮಸ್ವರೂಪವು ಉಪನಿಷದ್ರೂಪವಾದ ಸದ್ವಿದ್ಯೆಗೆ ವಿಷಯವಾಗಿದೆ. ಯಾವ ವಿದ್ಯೆಯಿಂದ ಬ್ರಹ್ಮವು ಬೋಧ್ಯವಾಗುತ್ತದೆಯೋ ಅದಕ್ಕೆ ಸದ್ವಿದ್ಯಾ, ಪರಾವಿದ್ಯಾ ಎಂಬ ಹೆಸರು ಮತ್ತು ಭೂತಭವಿಷ್ಯದ್ವರ್ತಮಾನಗಳೆಂಬ ಕಾಲತ್ರಯದಲ್ಲಿಯೂ ಬಾಧೆ ಇಲ್ಲದೇ ಇರತಕ್ಕ ಸತ್ಯಸ್ವರೂಪವಾಗಿಯೂ, ಸುಖಸ್ವರೂಪವಾಗಿಯೂ, ತನಗೆ ಅಧಿಕವೂ ಸಮಾನವೂ ಆದ ಇನ್ನೊಂದು ವಸ್ತು ಇಲ್ಲದುದಾಗಿಯೂ, ಇರುವುದು. ಈ ಅಭಿಪ್ರಾಯದಿಂದಲೇ "ಸತ್ಯಂ ಜ್ಞಾನಮನಂತಂ ಬ್ರಹ್ಮ" ಎಂದು ತೈತ್ತಿರೀಯದಲ್ಲಿ ಹೇಳಿದೆ. ಈ ರೀತಿಯಾದ ಆತ್ಮಸ್ವರೂಪವು ಇನ್ನೊಂದಕ್ಕೆ ಶೇಷವಾಗದೆಯೇ ಇರುವುದರಿಂದ ಅದು ಆನಂದರೂಪವಾಗಿದೆಯೆಂದು ತಿಳಿಯಬೇಕು. ಅದು ಆನಂದರೂಪವಲ್ಲದಿದ್ದರೆ ಬ್ರಹ್ಮಾತ್ಮೈಕ್ಯಪ್ರಾಪ್ತಿಯೇ ಮುಕ್ತಿಯಾದುದರಿಂದ ಮುಕ್ತನಿಗೆ ಹೇಗೆ ಆನಂದಾವಾಪ್ತಿಯಾದೀತು? ಹಾಗೆಯೇ ಅದು ಸತ್ಯವಲ್ಲದಿದ್ದಲ್ಲಿ ಒಂದಾನೊಂದು ಕಾಲದಲ್ಲಿ ಅದಕ್ಕೆ ನಾಶವು ಸಂಭವಿಸಬಹುದಾದ ಪ್ರಯುಕ್ತ ನಿತ್ಯವು ಹೇಗಾದೀತು? ಅದ್ವಿತೀಯವಲ್ಲದಿದ್ದರೆ ಭಯವು ಹೇಗೆ ಹೋದೀತು? "ದ್ವಿತೀಯಾದ್ವೈ ಭಯಂ ಭವತಿ" ಆದುದರಿಂದ, ಸತ್ಯಜ್ಞಾನ ಸುಖಾದ್ವಯಂ" ಎಂಬ ಉಕ್ತಿಯು ಅತ್ಯಂತ ಸಮಂಜಸವಾಗಿದೆ.

ಸೋಽಶ್ನುತೇಸಕಲಾನ್ಕಾಮಾ ನಕ್ರಮೇಣ ಸುರರ್ಷಭಾಃ ।
ವಿದಿತ ಬ್ರಹ್ಮರೂಪೇಣ ಜೀವನ್ಮುಕ್ತೋ ನ ಸಂಶಯಃ ॥೩೨॥

ಈ ರೀತಿಯಾಗಿ ವೇದ್ಯಸ್ವರೂಪವನ್ನು ಹೇಳಿ, ವೇದನ, ತಿಳಿದುಕೊಳ್ಳುವಿಕೆಯ, ಪ್ರಕಾರವನ್ನು ಹೇಳುತ್ತಾನೆ. ಅವ್ಯಾಕೃತವಾದ “ ಗುಹಾ ” ಎಂಬ ಶಬ್ದದಿಂದ ಹೇಳಲ್ಪಟ್ಟಿರುವ ಮಾಯಾ, ಅಜ್ಞಾನ, ಎಂಬ ಇವೇ ಮುಂತಾದ ಶಬ್ದಗಳಿಂದ ವ್ಯವಹರಿಸಲ್ಪಡುತ್ತಿರುವ ಪರಮವ್ಯೋಮ ಎಂದು ಶ್ರುತಿಯಲ್ಲಿ ಪ್ರಸಿದ್ಧವಾದ ಅವ್ಯಾಕೃತಾಕಾಶದಲ್ಲಿ ಉಪಲಬ್ಧಿಯುಳ್ಳ ಬ್ರಹ್ಮಸ್ವರೂಪವನ್ನು ಯಾವನು ತಿಳಿಯುತ್ತಾನೆಯೋ ಅವನಿಗೆ ಫಲವನ್ನು ಮುಂದಿನ ಶ್ಲೋಕದಿಂದ ಹೇಳುತ್ತಾನೆ. “ ಎತಸ್ಮಿನ್ನು ಖಲ್ವಕ್ಷರೇ ಗಾರ್ಗ್ಯಾಕಾಶ ಓತಶ್ಚ ಪ್ರೋತಶ್ಚ” ಎಂಬ ಬೃಹದಾರಣ್ಯಕಶ್ರುತ್ಯನುಸಾರವಾಗಿ ಅವ್ಯಾಕೃತ, ಆಕಾಶ ಇವೆರಡೂ ಒಂದೇ ಎಂದು ತಿಳಿಯಬೇಕು. ॥೩೧॥

ಎಲೈ ದೇವಶ್ರೇಷ್ಠರೇ, ಈರೀತಿಯಾಗಿ ಬ್ರಹ್ಮಸ್ವರೂಪವನ್ನು ತಿಳಿಯತಕ್ಕವನು ಒಂದೇಕಾಲದಲ್ಲಿ ಒಂದೇಕ್ಷಣದಲ್ಲಿ ಸಮಸ್ತಸುಖಗಳನ್ನೂ ಅನುಭವಿಸುತ್ತಾನೆ. ಯಾವ ರೂಪವಾಗಿ ಸುಖವನ್ನು ಅನುಭವಿಸುತ್ತಾನೆ? ಎಂದರೆ, “ ನಾನೇ ಬ್ರಹ್ಮನು.” ಎಂದು ಸಾಕ್ಷಾತ್ಕೃತವಾದ ಜ್ಞಾನದಿಂದ ಅವಿದ್ಯಾರೂಪವಾದ ಆವರಣವು ಹೋಗಿ ಎಲ್ಲಾ ಕಡೆಯಲ್ಲಿಯೂ, ಯಾವಾಗಲೂ ಸೂರ್ಯನ ಪ್ರಕಾಶದಂತೆ ಸಕಲ ವಸ್ತ್ವವಭಾಸಕವಾಗಿಯೂ, ಸ್ವಯಂ ಪ್ರಕಾಶವಾಗಿಯೂ, ಚಿದ್ರೂಪವಾಗಿಯೂ, ಇರತಕ್ಕ ಬ್ರಹ್ಮಸ್ವರೂಪದಿಂದ ಸಕಲಕಾಮಗಳನ್ನೂ, ಭುಜಿಸುತ್ತಾನೆ. ಬ್ರಹ್ಮವಿತ್ತಾಗಿರತಕ್ಕ ಜ್ಞಾನಿಯು ಈ ರೀತಿಯಾದ ಸರ್ವಜಗದ್ರೂಪವಾದ ಬ್ರಹ್ಮಸ್ವರೂಪನಾಗಿ, ತತ್ವಜ್ಞಾನದಿಂದ ಭೇದಭ್ರಮಕ್ಕೆ ಹೇತುವಾದ ಅವಿದ್ಯೆಯು ಸಮೂಲವಾಗಿ ನಷ್ಟವಾಗಿರುವುದರಿಂದ, ನಿರತಿಶಯವಾದ ಆನಂದದ ಆವಿರ್ಭಾವವಾಗಲು, ಅದರ ಲೇಶಭೂತವಾದ ಸಮಸ್ತ ಕಾಮಗಳನ್ನೂ ಧರ್ಮಾದ್ಯಪೇಕ್ಷೆಯಿಲ್ಲದೆ ಸ್ವರೂಪ ಭೂತವಾದ ಸ್ವಪ್ರಕಾಶ ರೂಪವಾದ ಚೈತನ್ಯದಿಂದ ಏಕಕಾಲದಲ್ಲಿ ವ್ಯಾಪಿಸಿರುತ್ತಾನೆ. ಈ ರೀತಿಯಾಗಿ ಬ್ರಹ್ಮಜ್ಞಾನಿಯು ಪ್ರಾರಬ್ಧಕರ್ಮಗಳ ಶೇಷದಿಂದ ದೇಹೇಂದ್ರಿಯಾದಿಗಳನ್ನು ಧಾರಣೆ ಮಾಡುತ್ತಾ ಸಾಮಾನ್ಯ ಮನುಷ್ಯನಂತೆ ಇದ್ದಾಗ್ಯೂ ಮುಕ್ತನಾಗಿಯೇ ಇರುತ್ತಾನೆ. ಅವನಿಗೆ ಸಂಸಾರ, ಸುಖ, ದುಃಖಗಳ ಸಂಬಂಧದ ಆಶಂಕೆಯೂ ಸಹ ಇರುವುದಿಲ್ಲವು. ॥೩೨॥

ಪ್ರತ್ಯಗಜ್ಞಾನ ವಿಜ್ಞಾನ ಮಾಯಾಶಕ್ತೇಸ್ತು ಸಾಕ್ಷಿಣಂ ।
ಏಕಂ ಬ್ರಹ್ಮ ಚ ಸಂ ಪಶ್ಯನ್ ಸಾಕ್ಷಾದ್ಬ್ರಹ್ಮ ವಿದುತ್ತಮಃ ॥೩೩॥

ಬ್ರಹ್ಮರೂಪಾತ್ಮನಸ್ತಸ್ಮಾದೇತ ಸ್ಮಾಚ್ಛಕ್ತಿ ಮಿಶ್ರಿತಾತ್ ।
ಅಪಂಚೀ ಕೃತ ಆಕಾಶಃ ಸಂಭೂತೋ ರಜ್ಜು ಸರ್ಪವತ್ ॥೩೪॥

ಜೀವನಲ್ಲಿರುವ ಬ್ರಹ್ಮಾಭೇದವನ್ನು ಆಚ್ಛಾದಿಸತಕ್ಕ ಅಜ್ಞಾನವೇನು, ಮತ್ತು ಅಂತಃಕರಣವೇನು, ಈ ಎರಡು ರೂಪವಾಗಿರತಕ್ಕ ಮತ್ತು ಸತ್ವರಜಸ್ತಮೋಗುಣಾತ್ಮಕವಾಗಿಯೂ ಇರತಕ್ಕ ಮಾಯಾಶಕ್ತಿಗೆ (ಇದಕ್ಕೆ ಕಾರಣ ಶರೀರವೆಂದು ಹೆಸರು.) ಸಾಕ್ಷಿಯಾಗಿ, ಪಂಚಕೋಶದೊಳಗಿರುವ ಚಿತ್ಸ್ವರೂಪನಾದ, ಸಾಕ್ಷಿಯಾದ ಆತ್ಮನೂ ಮತ್ತು "ಸತ್ಯಂ ಜ್ಞಾನಮನಂತಂ ಬ್ರಹ್ಮ" ಎಂಬ ಶ್ರುತಿಯಂತೆ ಸತ್ಯಜ್ಞಾನಾನಂದ ರಸವಾಗಿರತಕ್ಕ ಬ್ರಹ್ಮತತ್ವವೂ ಇವೆರಡನ್ನೂ ಯಾವನು ಸಂಶಯ ವಿಪರ್ಯಯವಿಲ್ಲದೇ ಒಂದನ್ನಾಗಿ (ಅಹಂಬ್ರಹ್ಮಾಸ್ಮಿ) ಎಂದು ತಿಳಿಯುತ್ತಾನೆಯೋ, ಅವನೇ ಬ್ರಹ್ಮಜ್ಞಾನಿಗಳಲ್ಲಿ ಉತ್ತಮನು. ||೩೩||

ತೈತ್ತರೀಯಶ್ರುತಿಯಲ್ಲಿ ಸೂತ್ರಿತವಾದ ಅರ್ಥದ ಸಂಗ್ರಹದ ವ್ಯಾಖ್ಯಾನವನ್ನು ಮಾಡಿ, ಸಂಭವಿಸಬಹುದಾದ ಶಂಕೆಗಳನ್ನು ಹೋಗಲಾಡಿಸಲು "ತಸ್ಮಾದ್ವೈ" ಎಂದು ಆರಂಭಿಸಿ, "ಇತ್ಯುಪನಿಷತ್" ಎಂಬ ಪರ್ಯಂತವಾಗಿ ವಿಸ್ತಾರವಾಗಿ ವಾಖ್ಯಾನಮಾಡಲ್ಪಟ್ಟಿದೆ. ಅದೇ ಅರ್ಥವು ಇಲ್ಲಿ ಸಂಗ್ರಹಿಸಿ ಪ್ರತಿಪಾದಿಸಲ್ಪಟ್ಟಿದೆ. ಅದರಲ್ಲಿಯೂ "ಸತ್ಯಂ ಜ್ಞಾನಮನಂತಂ ಬ್ರಹ್ಮ" ತೈ.ಉ. ಎಂಬಲ್ಲಿ ಬ್ರಹ್ಮನಿಗೆ ಆನಂತ್ಯವು ಹೇಳಲ್ಪಟ್ಟಿದೆ. ಅದು ಸಂಭವಿಸುವುದಿಲ್ಲ. ಏಕೆಂದರೆ:—ಆಕಾಶವೇ ಮುಂತಾದ ಪರಿಚ್ಛೇದಕವಾದ ಪದಾರ್ಥಗಳು ಬೇರೇ ಇರುವುದರಿಂದ ಪೂರ್ವದಲ್ಲಿ ಪ್ರತಿಜ್ಞಾತವಾದ ಆನಂತ್ಯವು ಸಂಭವಿಸುವುದಿಲ್ಲ. ಎಂಬ ಶಂಕೆಯನ್ನು ಹೋಗಲಾಡಿಸಲು, ಆ ಬ್ರಹ್ಮನಿಗೆ ಆನಂತ್ಯವನ್ನು ಉಪಪಾದನೆಮಾಡಲು, ಆ ಬ್ರಹ್ಮನಿಂದ ಸಕಲ ವಿಯದಾದಿಗಳ ಸೃಷ್ಟಿಯು ನಿರೂಪಿಸಲ್ಪಡುತ್ತದೆ. "ಬ್ರಹ್ಮವಿದಾಪ್ನೋತಿ ಪರಂ" ಎಂಬ ತೈ. ವಾಕ್ಯದಿಂದ ಸೂಚಿತವಾಗಿಯೂ, ಸತ್ಯಜ್ಞಾನಾನಂತನಾಗಿಯೂ ಪ್ರಾಣಿಗಳ ಕರ್ಮಪರಿಪಾಕದಿಂದ ಸೃಷ್ಟಿಮಾಡಬೇಕಾದ ವಿಯದಾದಿ ಪ್ರಪಂಚರೂಪವಾದ ಕಾರ್ಯೋನ್ಮುಖವಾಗಿಯೂ, ಬ್ರಹ್ಮಾಶ್ರಿತವಾಗಿಯೂ, ಇರತಕ್ಕ ಮಾಯಾಶಕ್ತಿಯಿಂದ ವಿಶಿಷ್ಟನಾದ ಪರಮಾತ್ಮನಿಂದ ಸೂಕ್ಷ್ಮಶಬ್ದಗುಣಕವಾದ ಆಕಾಶವು, ಹೇಗೆ ಹಗ್ಗವು ಯಾವವಿಧವಾದ ವಿಕಾರವನ್ನೂ ಹೊಂದದೆ ಅಜ್ಞಾನದಿಂದ ಸರ್ಪಾಕಾರವಾಗಿ ವಿವರ್ತವನ್ನು

ಆಕಾಶಾದ್ವಾಯು ಸಂಜ್ಞಸ್ತು ಸ್ಪರ್ಶೋऽಪಂಚೀಕೃತಃ ಪುನಃ ।
ವಾಯೋರಗ್ನಿಸ್ತಥಾ ಚಾಗ್ನೇರಾಪ ಅದ್ಭ್ಯೋ ವಸುಂಧರಾ ॥೩೫॥

ಹೊಂದುತ್ತದೆಯೋ ಹಾಗೆ, ಅಧಿಷ್ಠಾನವಾದ ಬ್ರಹ್ಮಸ್ವರೂಪಕ್ಕೆ ಉಪಮರ್ದನವಿಲ್ಲದೇ ಮಾಯಾಶಕ್ತಿವಶಾತ್ ವಿವರ್ತವಾಯಿತು. ಕೇವಲ ಸಚ್ಚಿದಾನಂದಾತ್ಮಕನಾದ ಪರಮಾತ್ಮನಿಗೆ ಸ್ರಷ್ಟೃತ್ವವಿಲ್ಲದುದರಿಂದ ಶಕ್ತಿಮಿಶ್ರಿತಾತ್ "ಎಂದು ಹೇಳಿದೆ. ಏವಂಚ ಮಾಯಾ ಶಬಳಿತನಾದ ಪರಮಾತ್ಮನಿಗೆ ವಿಯದಾದಿ ಪ್ರಪಂಚ ಕರ್ತೃತ್ವವು ಇಲ್ಲಿ ಪಂಚಮೀವಿಭಕ್ತಿಯಿಂದ ಹೇಳಿದೆ. ಇದು ಜನಿಕರ್ತುಃ ಪ್ರಕೃತಿಃ" ಎಂಬ ಪಾಣಿನಿಯ ವ್ಯಾಕರಣ ಸೂತ್ರಾನುಸಾರವಾಗಿ ಉಪಾದಾನಕಾರಣ ಯಾವುದೋ ತದ್ವಾಚಕಪದವು ಪಂಚಮ್ಯಂತವಾಗುತ್ತದೆಂದು ವಿಧಿಸಿರುತ್ತದೆ. ಏವಂಚ ಆತ್ಮನು ಆಕಾಶಾದಿಗಳ ಉಪಾದಾನಕಾರಣನಾಗಿಯೂ, ಆಕಾಶಾದಿಗಳು ಉಪಾದೇಯಗಳಾಗಿಯೂ, ತೋರುವುದರಿಂದ "ತದನನ್ಯತ್ವ" ಬ್ರ. ಸೂ. ೨.೧.೧೪. ದಂತೆ ಉಪಾದೇಯವಾದ ಆಕಾಶಾದಿಗಳು ಉಪಾದಾನವಾದ ಬ್ರಹ್ಮಸ್ವರೂಪಕ್ಕಿಂತಲೂ ಅತಿರಿಕ್ತವಲ್ಲವೆಂದು ತಿಳಿಯಬೇಕು. ಮತ್ತು "ಪ್ರಕೃತಿಶ್ಚ ಪ್ರತಿಜ್ಞಾದೃಷ್ಟಾಂತಾನು ರೋಧಾತ್" ಎಂಬ ಬ್ರಹ್ಮಸೂತ್ರ ೧.೪.೨೩. ದಂತೆ ಬ್ರಹ್ಮವು ಉಪಾದಾನಕಾರಣವೂ, ನಿಮಿತ್ತ ಕಾರಣವೂ ಆಗುತ್ತದೆ. ಇದಕ್ಕೆ ಅಭಿನ್ನನಿಮಿತ್ತೋಪಾದಾನಕಾರಣ ಎಂದು ವ್ಯವಹರಿಸುತ್ತಾರೆ. ಒಟ್ಟಿನಲ್ಲಿ ಬ್ರಹ್ಮಕಾರ್ಯವಾದ ಆಕಾಶವು ಕಾರಣವಾದ ಬ್ರಹ್ಮಕ್ಕಿಂತಲೂ ಅತಿರಿಕ್ತವಲ್ಲದಕಾರಣ ಆಕಾಶರೂಪವಾದ ವಸ್ತ್ವಂತರದಿಂದ ಬ್ರಹ್ಮನಿಗೆ ಪರಿಚ್ಛೇದವು ಪ್ರಾಪ್ತವಾಗುವುದಿಲ್ಲ. ಮತ್ತು ಅಧಿಷ್ಠಾನವಾದ ಬ್ರಹ್ಮಸ್ವರೂಪ ಒಂದೇ ಸತ್ಯವಾಗಿಯೂ, ಕಾರ್ಯವು ಅನಿರ್ವಚನೀಯವಾದ ಪ್ರಯುಕ್ತವೂ ಸಹ ತತ್ಕೃತಪರಿಚ್ಛೇದವಿಲ್ಲ. ಈ ಶ್ಲೋಕದಿಂದ "ತಸ್ಮಾದ್ವಾ ಏತಸ್ಮಾದಾತ್ಮನ ಆಕಾಶಃ ಸಂಭೂತಃ" ಎಂಬ ತೈತ್ತರೀಯೋಪನಿಷತ್ತಿನ ೨.೧.೧. ವಾಕ್ಯಾರ್ಥವು ಹೇಳಲ್ಪಟ್ಟಿತು. ॥೩೪॥

"ಅಕಾಶಾದ್ವಾಯುಃ । ವಾಯೋರಗ್ನಿಃ ಅಗ್ನೇರಾಪಃ । ಅದ್ಭ್ಯಃ ಪೃಥಿವೀ । ಎಂಬ ತೈತ್ತರೀಯೋಪನಿಷತ್ತಿನ ವಾಕ್ಯಾರ್ಥವನ್ನು ಹೇಳುತ್ತಾನೆ. ಆಕಾಶಭಾವಾಪನ್ನನಾದ ಪರಮಾತ್ಮನಿಂದ, ತನಗೆ ಕಾರಣವಾದ ಆಕಾಶದ ಗುಣವಾದ ಶಬ್ದಸಹಿತವಾಗಿಯೂ, ತನ್ನಗುಣವಾದ ಸ್ಪರ್ಶಸಹಿತವಾಗಿಯೂ, ಇರತಕ್ಕ ವಾಯುವು ಉತ್ಪನ್ನವಾಯಿತು. ಮುಂದೆಯೂ ಹೀಗೆಯೇ ಕಾರಣಗುಣ, ತನ್ನಗುಣ ಸಹಿತವಾಗಿಯೇ ಕಾರ್ಯವು ಹುಟ್ಟುತ್ತದೆಂದು ತಿಳಿಯಬೇಕು. ವಾಯುವಿನಿಂದ ಶಬ್ದಸ್ಪರ್ಶರೂಪಗುಣಗಳಲ್ಲಿ ಅಗ್ನಿಯೂ, ಅದರಿಂದ ಶಬ್ದಸ್ಪರ್ಶರೂಪ ರಸಗಳುಳ್ಳ ಜಲವೂ,

ತಾನಿ ಭೂತಾನಿ ಸೂಕ್ಷ್ಮಾಣಿ ಪಂಚೀಕೃತ್ಯ ಶಿವಾಜ್ಞಯಾ ।
ತೇಭ್ಯ ಏವ ಸುರಾಃ ಸೃಷ್ಟಂ ಬ್ರಹ್ಮಾಂಡಾಖ್ಯಮಿದಂ ಮಯಾ ॥೩೬॥

ಭುವನಾನಿ ವಿಶಿಷ್ಟಾನಿ ನಿರ್ಮಿತಾನಿ ಶಿವಾಜ್ಞಯಾ ।
ಬ್ರಹ್ಮಾಂಡಸ್ಯೋದರೇ ದೇವಾ ದೇವಾಶ್ಚ ವಿವಿಧಾ ಅಮೀ ॥೩೭॥

ದೇವಾದಯೋ ಮನುಷ್ಯಾಶ್ಚ ತಥಾ ಪಶ್ವಾದಯೋ ಜನಾಃ ।
ತತ್ತತ್ಕರ್ಮಾನುರೂಪೇಣ ಮಯಾ ಸೃಷ್ಟಾಃ ಶಿವಾಜ್ಞಯಾ ॥೩೮॥

ಅಸ್ಥಿಸ್ನಾಯ್ವಾದಿರೂಪಂ ಯಚ್ಛರೀರಂ ಭಾತಿ ದೇಹಿನಾಂ ।
ತಸ್ಮಾತ್ಪ್ರಾಣಮಯೋ ಹ್ಯಾತ್ಮಾ ವಿಭಿನ್ನಶ್ಚಾಽಂತರೋ ಯತಃ ॥೩೯॥

ಅದರಿಂದ ಶಬ್ದಸ್ಪರ್ಶರೂಪರಸಗಂಧಗಳುಳ್ಳ ಪೃಥಿವಿಯೂ, ಹುಟ್ಟಿತು. ಶಬ್ದ, ಸ್ಪರ್ಶ, ರೂಪ, ರಸ, ಗಂಧ, ಇವುಗಳು ಕ್ರಮವಾಗಿ ಆಕಾಶ, ವಾಯು, ಅಗ್ನಿ, ಜಲ, ಪೃಥಿವಿ, ಇವುಗಳಗುಣಗಳು ಉಳಿದ ಎಲ್ಲವೂ, ಸ್ವಕಾರಣಗಳಿಂದ ಬಂದವುಗಳಾಗಿರುತ್ತವೆ. ಇಲ್ಲಿ ಜಡವಾದ ಆಕಾಶಾದಿಗಳಿಗೆ ಕರ್ತೃತ್ವವಿಲ್ಲದಪ್ರಯುಕ್ತ ತದ್ಭಾವಾಪನ್ನನಾದ ಪರಮಾತ್ಮನೇ ಆಯಾಯಾ ಕಾರ್ಯಗಳಿಗೆ ಕರ್ತನೆಂದು ತಿಳಿಯಬೇಕು. ||೩೫||

ಪೃಥಿವ್ಯಾ ಓಷಧಯಃ । ಓಷದೀಭ್ಯೋಽನ್ನಂ । ಅನ್ನಾತ್ಪುರುಷಃ । ಎಂದು ತೈತ್ತಿರೀಯ ಉಪನಿಷತ್ತಿನ ಆನಂದವಲ್ಲಿಯ ಮೊದಲನೆಯ ಅನುವಾಕದಲ್ಲಿ ಭೌತ ವಸ್ತು, ಭೋಕ್ತೃಗಳ ಸೃಷ್ಟಿಯನ್ನು ಹೇಳಿದೆ. ಅದನ್ನು ಸಂಗ್ರಹಿಸಿ ಹೇಳುತ್ತಾನೆ. ಓ ದೇವತೆಗಳೇ, ಶಿವನಿಂದ ಸೃಷ್ಟವಾದ ಸೂಕ್ಷ್ಮವಾದ ಆಕಾಶಾದಿಪಂಚಭೂತಗಳಿಂದ, ಅವನ ಆಜ್ಞೆಯಂತೆ ನಾನು ಆ ಭೂತಗಳನ್ನು ಸ್ಥೂಲವನ್ನಾಗಿಮಾಡಿ ಬ್ರಹ್ಮಾಂಡ ವನ್ನು ರಚಿಸಿದೆನು. ಎಂದರೆ ಬ್ರಹ್ಮನ ಪ್ರಥಮಾಪತ್ಯನಾದ ಹಿರಣ್ಯಗರ್ಭನಿಂದ ಬ್ರಹ್ಮಾಂಡವು ರಚಿಸಲ್ಪಟ್ಟಿತು. ಆ ಬ್ರಹ್ಮಾಂಡದಲ್ಲಿ ನಾನಾ ವಿಧವಾದ ಲೋಕ ಗಳನ್ನೂ, ನಾನಾ ಪ್ರಕಾರವಾದ ದೇವತೆಗಳನ್ನೂ, ಕರ್ಮದೇವತೆಗಳನ್ನೂ, ಮನುಷ್ಯ ರನ್ನೂ, ಪಶುಪಕ್ಷ್ಯಾದಿಗಳನ್ನೂ ಸಹ ಆ ಪರಶಿವನ ಅಪ್ಪಣೆಯ ಪ್ರಕಾರವಾಗಿಯೂ. ಅವರವರ ಕರ್ಮಾನುಸಾರವಾಗಿಯೂ, ಸೃಷ್ಟಿಸಲಾಯಿತು. ಎಂದು ಭಾವವು, ||೩೬-೩೭-೩೮||

ಅನ್ನದ ಪರಿಣಾಮರೂಪವಾದ ಶರೀರದ ತಾದಾತ್ಮ್ಯವನ್ನು ಹೊಂದಿರತಕ್ಕ ಆತ್ಮನಿಗೆ ಸರ್ವಾಂತರತ್ವವನ್ನು ಪ್ರತಿಪಾದಿಸಬೇಕು. ಅದರಲ್ಲಿ ಸುಲಭವಾಗಿ ಆತ್ಮನನ್ನು

ತಿಳಿಯಲು " ಸವಾ ಏಷಪುರುಷೋಽನ್ನರಸಮಯಃ " ಎಂದು ತೈತ್ತಿರೀಯ ಶ್ರುತಿಯು ಬಾಹ್ಯಾಂಭ್ಯಂತರ ಭಾವದಿಂದ ಅನ್ನಮಯ, ಪ್ರಾಣಮಯ, ಮನೋಮಯ, ವಿಜ್ಞಾನಮಯ, ಆನಂದಮಯಗಳೆಂಬ ಒಂದರೊಳಗೊಂದಿರುವ ಪಂಚಕೋಶ, ಚೀಲ ಅಥವಾ ದೇಹಗಳನ್ನು ಪ್ರತಿಪಾದಿಸುತ್ತದೆ. ಕೋಶವೆಂದರೆ ಹರಿತವಾದ ಖಡ್ಗಾದಿ ಆಯುಧಗಳನ್ನು ಇಡಲು ಯೋಗ್ಯವಾದ ಚೀಲವೆಂದರ್ಥ. ಆ ಶ್ರುತ್ಯರ್ಥ ವನ್ನು ಸಂಗ್ರಹಿಸಿ ಹೇಳುತ್ತಾನೆ. ಜೀವಭಾವದಿಂದಿರತಕ್ಕ ಪರಮಾತ್ಮನಿಗೆ ಸ್ಥೂಲ, ಸೂಕ್ಷ್ಮ, ಕಾರಣಗಳೆಂಬ ಶರೀರತ್ರಯಗಳಿವೆ. ಅವುಗಳಲ್ಲಿ ಅನ್ನರಸ ಪರಿಣಾಮವಾಗಿ, ಸಕಲರಿಗೂ ಗೊತ್ತಿರುವುದು, ಸ್ಥೂಲ ಶರೀರವು. ಅದರ ತಾದಾತ್ಮ್ಯವನ್ನು ಹೊಂದಿದ ಆತ್ಮನು ಅನ್ನಮಯನೆನಿಸುತ್ತಾನೆ. ತೈತ್ತಿರೀಯದಲ್ಲಿ " ಸವಾ ಏಷಪುರುಷೋಽನ್ನ ರಸಮಯಃ "ಎಂಬಲ್ಲಿ ತಚ್ಛಬ್ದದಿಂದ ಪ್ರಕೃತನಾದ ಆತ್ಮನನ್ನು ಪರಾಮರ್ಶಮಾಡಿ, ಅವನಿಗೆ ಅನ್ನಮಯತ್ವವು ಪ್ರತಿಪಾದಿಸಲ್ಪಟ್ಟಿದೆ. ಈದೇ ರೀತಿಯಾಗಿ ಮುಂದೆ ಹೇಳುವ ಪ್ರಾಣಾದಿತಾದಾತ್ಮ್ಯವನ್ನು ಹೊಂದಿದ ಆತ್ಮನಿಗೆ ಪ್ರಾಣಮಯನೆಂದು ಪ್ರತಿಪಾದಿಸುತ್ತಾನೆ. ಆ ಅನ್ನಪರಿಣಾಮವಾದ ಸ್ಥೂಲಶರೀರದ ಮಧ್ಯದಲ್ಲಿ, ಅಪಂಚೀಕೃತವಾಗಿ ಸೂಕ್ಷ್ಮವಾದ ಭೂತಗಳಿಂದ ಉಂಟಾದ, ಸಪ್ತದಶ (ಹದಿನೇಳು) ಸಂಖ್ಯಾತವಾದ ಅಂಶಗಳನ್ನು ಒಳಗೊಂಡಿರುವ, ಲಿಂಗಶರೀರವು, ಸೂಕ್ಷ್ಮಶರೀರವು ಪಂಚಪ್ರಾಣಮನೋಬುದ್ಧಿದಶೇಂದ್ರಿಯ ಸಮನ್ವಿತಂ । ಅಪಂಚೀಕೃತಭೂತೋತ್ಥಂ ಸೂಕ್ಷ್ಮಾಂಗಂಭೋಗಸಾಧನಂ ॥ ಜೀವಾತ್ಮನಿಗೆ ಸಂಬಂಧಿಸಿದೆ. ಈ ಎರಡು ಶರೀರಗಳಿಗೆ ಕಾರಣವಾಗಿಯೂ, ಮಲಿನ ಸತ್ವಪ್ರಧಾನವಾಗಿಯೂ, ಸುಷುಪ್ತಿ ಯಲ್ಲಿ ಭಾಸಮಾನವಾಗಿಯೂ, ಇರತಕ್ಕ ಅವಿದ್ಯೆಯು ಆತ್ಮನಿಗೆ ಕಾರಣಶರೀರವಾಗಿದೆ. ಅದರಲ್ಲಿ ಪ್ರಾಣಮಯ ಮನೋಮಯ ವಿಜ್ಞಾನಮಯಗಳೆಂಬ ಮೂರು ಕೋಶಗಳು ಸೂಕ್ಷ್ಮಶರೀರದಲ್ಲಿ ಅಂತರ್ಭಾವವನ್ನು ಹೊಂದುತ್ತವೆ. ಆನಂದಮಯಕೋಶವನ್ನು ಕಾರಣಶರೀರವೆಂದು ತಿಳಿಯಬೇಕು. ಸತ್ವರಜಸ್ತಮೋಗುಣಾತ್ಮಕವಾದ ಮಾಯೆಯ ಕಾರ್ಯವಾದುದರಿಂದ ಭೂತಗಳೂ ಸಹ ಗುಣತ್ರಯಾತ್ಮಕವಾದವುಗಳು. ಅದರಲ್ಲಿ ಆಕಾ ಶವೇ ಮುಂತಾದ ಭೂತಸೂಕ್ಷ್ಮಗಳ ಐದು ರಜೋಽಂಶಗಳಿಂದ ವಾಕ್ಪಾಣಿಪಾದ ಪಾಯೂಪಸ್ಥಗಳೆಂಬ ಐದು ಕರ್ಮೇಂದ್ರಿಯಗಳು ಆಬದ್ಧವಾಗಿವೆ. ಅದೇ ಭೂತಗಳ ರಜೋಽಂಶ ಸಮುದಾಯಾತ್ಮಕವಾದ ಪ್ರಾಣನವೇ ಮುಂತಾದ ಕ್ರಿಯಾಹೇತುವಾದ, ಕ್ರಿಯಾಶಕ್ತ್ಯಾತ್ಮಕವಾದ, ಪ್ರಾಣವು ಉಂಟಾಗಿದೆ. ಅದಕ್ಕೆ ಪ್ರಾಣಾಪಾನ ವ್ಯಾನೋ ದಾನಸಮಾನಗಳೆಂಬ ಐದು ವೃತ್ತಿಗಳು. ಈರೀತಿಯಾಗಿ ಪಂಚಪ್ರಾಣ ಕರ್ಮೇಂದ್ರಿಯ ರೂಪವಾದ ಪ್ರಾಣಮಯ ಕೋಶದಿಂದ ವಿಶಿಷ್ಟನಾದ ಆತ್ಮನ ಉಪದೇಶದಿಂದ

ಯೋಽಯಂ ಪ್ರಾಣಮಯೋ ಹ್ಯಾತ್ಮಾ ಭಾತಿ ಸರ್ವಶರೀರಿಣಾಂ ।
ತಸ್ಮೋ ಮನೋಮಯೋ ಹ್ಯಾತ್ಮಾ ವಿಭಿನ್ನಶ್ಚಾಂತರತ್ವತಃ ॥೪೦॥

ಬಾಹ್ಯವಾದದ್ದು ಅನಾತ್ಮವೆಂದೂ, "ತಸ್ಮಾದ್ವಾಏತಸ್ಮಾದನ್ನ ರಸಮಯಾತ್" ಅನ್ಯೋಽಂತರ ಆತ್ಮಾಪ್ರಾಣಮಯಃ" ಎಂದು ತೈ. ಶ್ರುತಿಯು ಪ್ರತಿಪಾದಿಸುತ್ತದೆ. ಅದೇ ಅರ್ಥವು ಇಲ್ಲಿಯೂ ಹೇಳಲ್ಪಡುತ್ತದೆ. ಅನ್ನಮಯನಾದ ಆತ್ಮನಿಗೆ ಉಪಾಧಿ ಭೂತವಾಗಿಯೂ, ಎಲುಬು, ನರ, ರಕ್ತ, ಇವುಗಳಿಂದ ತುಂಬಿರತಕ್ಕದ್ದಾಗಿಯೂ, ಅನ್ನದ ಕಾರ್ಯವಾಗಿಯೂ ಇರತಕ್ಕ ಸ್ಥೂಲಶರೀರವು ಸಮಸ್ತ ಪ್ರಾಣಿಗಳಿಗೂ ಸ್ಪಷ್ಟ ವಾಗಿ ತಿಳಿಯುತ್ತದೆ. ಇದಕ್ಕಿಂತಲೂ ಪ್ರಾಣಮಯಕೋಶ ವಿಶಿಷ್ಟನಾದ ಆತ್ಮನು ಬೇರೆಯುವನಾಗಿರುತ್ತಾನೆ. ಏಕೆಂದರೆ ದೇಹಮಧ್ಯದಲ್ಲಿ ಆಂತರವಾಗಿ ಉಪಲಬ್ಧ ವಾಗೋಣದರಿಂದ ಬೇರೆಯೆಂದು ತಿಳಿಯಬೇಕು. ಆದುದರಿಂದ ಬಾಹ್ಯದೇಹಕ್ಕಿಂತಲೂ ಪ್ರಾಣಮಯನಾದ ಆತ್ಮನನ್ನು ವಿವೇಕದಿಂದ ತಿಳಿಯಬೇಕು. ಖಡ್ಗದ ಕೋಶವು ಯಾವರೀತಿಯಲ್ಲಿ ಖಡ್ಗವನ್ನುಮುಚ್ಚುತ್ತದೆಯೋ ಹಾಗೆ ಅದೇ ಸಾಮ್ಯವು ಇರೋಣದ ರಿಂದ ಅನ್ನಮಯವಾದ ಶರೀರವು ಆತ್ಮನಿಗೆ ಆಚ್ಛಾದಕವಾದುದರಿಂದ ಕೋಶವೆನ್ನಿ ಸಲ್ಪಡುತ್ತದೆ. ಹೀಗೆ ಮುಂದೆಯೂ ಕೂಡ ಪ್ರಾಣಮಯ ಮನೋಮಯ ಇತ್ಯಾದಿ ಕೋಶಗಳನ್ನೂ ತಿಳಿಯಬೇಕು. ಇವುಗಳಲ್ಲಿ ಆತ್ಮತ್ವೋಪದೇಶವನ್ನು ಮಾಡಿ, ಪೂರ್ವ ಪೂರ್ವವಾದದ್ದು ಬಾಹ್ಯವಾದುದರಿಂದ ಅವುಗಳಲ್ಲಿ ಆತ್ಮತ್ವಭ್ರಮವನ್ನು ಬಿಟ್ಟು ವಿವೇಕದಿಂದ ಆಂತರನಾದ ಆತ್ಮನನ್ನು ತಿಳಿಯಬೇಕು. ಎಂದು ಹೇಳಿದೆ. ॥೩೯॥

ಹೀಗೆ ಪ್ರಾಣಮಯವಾದ ಕೋಶದಿಂದ ಬಾಹ್ಯವಾದ ಅನ್ನಮಯವು ಆತ್ಮ ವೆಂದು ಪ್ರತಿಪಾದಿಸಿ, ಪ್ರಾಣಮಯವೂ ಕೋಶರೂಪವಾದುದರಿಂದ ಅದೂ ಸಹ ಅನಾತ್ಮವೆಂದು ಪ್ರತಿಪಾದಿಸಲು ಪ್ರಾಣಮಯಕ್ಕೂ ಅಂತರನಾದ ಮನೋಮಯ ನಾದ ಆತ್ಮನನ್ನು "ತಸ್ಮಾದ್ವಾ ಏತಸ್ಮಾತ್ಪ್ರಾಣಮಯಾತ್ । ಅನ್ಯೋಽಂತರ ಆತ್ಮಾ ಮನೋಮಯಃ" । ಎಂದು ತೈ. ಶ್ರುತಿಯು ಹೇಳುತ್ತದೆ. ಆ ಶ್ರುತ್ಯರ್ಥವನ್ನು ಇಲ್ಲಿ ಹೇಳಲಾಗಿದೆ. ಸರ್ವ ಪ್ರಾಣಿಗಳಿಗೂ ತೋರುತ್ತಿರುವ ಯಾವ ಪ್ರಾಣಮಯನಾದ ಆತ್ಮನಿದ್ದಾನೆಯೋ ಅವನಿಗೂ, ಮನೋಮಯಾತ್ಮನು ಭಿನ್ನನಾಗಿಯೂ, ಅಂತರ ನಾಗಿಯೂ ಇದ್ದಾನೆಂದು ತಿಳಿಯಬೇಕು. ಒಳಗಿರತಕ್ಕ ಆತ್ಮರೂಪವಾದ ಚೈತನ್ಯಕ್ಕೆ ಅಭಿವ್ಯಂಜಕರೂಪವಾದ ಸ್ವಭಾವಭೇದದಿಂದ ಆಂತರತ್ವವೆಂದು ತಿಳಿಯಬೇಕು. ॥೪೦॥

ಯೋಽಯಂ ಮನೋಮಯೋ ಹ್ಯಾತ್ಮಾ ಭಾತಿ ಸರ್ವಶರೀರಿಣಾಂ ।
ವಿಜ್ಞಾನಮಯ ಆತ್ಮಾ ಚ ತತೋಽನ್ಯಶ್ಚಾಂತರೋ ಯತಃ ॥೪೧॥

ವಿಜ್ಞಾನಮಯ ಆತ್ಮಾ ಯೋ ವಿಭಾತಿ ಸಕಲಾತ್ಮನಾಂ ।
ಆನಂದಮಯ ಆತ್ಮಾ ಚ ತತೋಽನ್ಯಶ್ಚಾಂತರೋ ಯತಃ ॥೪೨॥

ಮನೋಮಯಕ್ಕೂ ಅನಾತ್ಮತ್ವವನ್ನು ಪ್ರತಿಪಾದಿಸಲು ಅದಕ್ಕೂ ಅಂತರವಾದ ವಿಜ್ಞಾನಮಯಾತ್ಮನನ್ನು ತೈ. ಶ್ರುತಿಯು "ತಸ್ಮಾದ್ವಾ ಏತಸ್ಮಾನ್ಮನೋಮಯಾತ್ ಅನ್ಯೋಽಂತರ ಆತ್ಮಾ ವಿಜ್ಞಾನಮಯಃ" ಎಂದು ಹೇಳುತ್ತದೆ. ಅದರ ಅರ್ಥವು ಇಲ್ಲಿ ಸಂಗ್ರಹಿಸಿ ಹೇಳಲ್ಪಡುತ್ತದೆ. ಚಕ್ಷುರಾದೀಂದ್ರಿಯಸಹಾಯದಿಂದ ಉಂಟಾದ ನಿಶ್ಚಯಜ್ಞಾನದ ವೃತ್ತಿಗೆ ಬುದ್ಧಿಯೆಂದು ಹೆಸರು. ಆ ಅಂತಃಕರಣವಿಶಿಷ್ಟನಾದ ಆತ್ಮನು ವಿಜ್ಞಾನಮಯನು. ಸಮಸ್ತರಿಗೂ ಗೋಚರವಾದ ವಿಮರ್ಶರೂಪವಾದ ಮನೋಮಯಕ್ಕಿಂತಲೂ ಭಿನ್ನನಾಗಿಯೂ, ರಜಸ್ಸಿನ ಸಂಪರ್ಕವಿಲ್ಲದ, ಒಳಗಿರತಕ್ಕ ಆತ್ಮನಿಗೆ ನಿಶ್ಚಯರೂಪದಿಂದ ವಿಶೇಷವಾಗಿ ಅಭಿವ್ಯಕ್ತವಾಗೋಣದರಿಂದ ಆಂತರನಾಗಿ ವಿಜ್ಞಾನಮಯನು ಇರುತ್ತಾನೆ. ಆದುದರಿಂದಲೇ "ವಿಜ್ಞಾನಂ ಯಜ್ಞಂ ತನುತೇ ಕರ್ಮಾಣಿ ತನುತೇಽಪಿ ಚ" ಎಂದು ತೈತ್ತಿರೀಯ ಶ್ರುತಿಯು ಅನುಷ್ಠಾನಮಾಡುವುದಕ್ಕೆ ಬೇಕಾದ ಪದಾರ್ಥಗಳ ನಿಶ್ಚಯಜ್ಞಾನ ಉಳ್ಳವನಿಗೇ ವಿದ್ಯಾ ಮತ್ತು ಕರ್ಮಗಳಲ್ಲಿ ಅಧಿಕಾರವೆಂದು ಅಭಿಪ್ರಾಯಪಟ್ಟು ವಿಜ್ಞಾನಮಯಾತ್ಮನಿಗೆ ಯಜ್ಞಾದಿಗಳಲ್ಲಿ ಕರ್ತೃತ್ವವನ್ನು ಹೇಳುತ್ತದೆ. ॥೪೧॥

ಮನೋಮಯದಂತೆಯೇ ವಿಜ್ಞಾನಮಯಕೋಶವೂ ಬಾಹ್ಯವಾದುದರಿಂದ ಅದನ್ನೂ ಸಹ ಅನಾತ್ಮವೆಂದು ಪ್ರತಿಪಾದಿಸಲು ವಿಜ್ಞಾನಮಯಕ್ಕೂ ಆಂತರನಾದ ಆನಂದಮಯಾತ್ಮನನ್ನು "ಅನ್ಯೋಽಂತರ ಆತ್ಮಾಽಽನಂದಮಯಃ" ಎಂದು ತೈ. ಶ್ರುತಿಯಿಂದ ಉಪದಿಷ್ಟವಾಗಿದೆ. ಅದರ ಅರ್ಥವು ಸಂಗ್ರಹಿಸಲ್ಪಡುತ್ತದೆ. ವಿದ್ಯಾ ಕರ್ಮಗಳಿಗೆ ಫಲಭೂತವಾದ ಸುಖವೇ ಆನಂದವು. ಈ ಆನಂದಾಭಿವ್ಯಂಜಕವಾದ ಉಪಾಧಿವಿಶಿಷ್ಟನಾದ ಆತ್ಮನೇ ಆನಂದಮಯನು. ಈ ಆನಂದಮಯನು ಫಲರೂಪನಾದುದರಿಂದ ಫಲರೂಪವಲ್ಲದ ವಿಜ್ಞಾನಮಯಕ್ಕಿಂತಲೂ ಆಂತರನಾಗಿಯೂ, ಭಿನ್ನನಾಗಿಯೂ, ಇದ್ದಾನೆ. ವಿಜ್ಞಾನಮಯನಾದರೋ ಫಲಸಾಧನಭೂತಗಳಾದ ವಿದ್ಯೆ ಮತ್ತು ಕರ್ಮಗಳ ಉಂಟುಮಾಡುವಿಕೆಯಿಂದ ಬಹಿರಂಗವಾದುದರಿಂದ ವಿಜ್ಞಾನಮಯವು ಅನಾತ್ಮವು. ಈ ರೀತಿಯಾಗಿ ಪ್ರಾಣಮಯಾದಿ ಮೂರು

ಯೋಽಯ ಮನ್ನಮಯಃ ಸೋಽಯಂ ಪೂರ್ಣಃ ಪ್ರಾಣಮಯೇನ ತು ।
ಮನೋಮಯೇನ ಪ್ರಾಣೋಽಪಿ ತಥಾ ಪೂರ್ಣಃ ಸ್ವಭಾವತಃ ॥೪೩॥

ತಥಾ ಮನೋಮಯೋ ಹ್ಯಾತ್ಮಾ ಪೂರ್ಣೋ ಜ್ಞಾನಮಯೇನ ತು ।
ಆನಂದೇನ ಸದಾ ಪೂರ್ಣಸ್ತಥಾ ಜ್ಞಾನಮಯಃ ಸುರಾಃ ॥೪೪॥

ಕೋಶದ ವಿವೇಕದಿಂದ, ಸೂಕ್ಷ್ಮಶರೀರದಿಂದಲೂ ಆತ್ಮವು ಭಿನ್ನವೆಂದು ಸಿದ್ಧವಾಗುತ್ತದೆ. ಇಲ್ಲಿ ಆನಂದಮಯನೂ ಸಹ ವಿಕಾರಿಯಾದುದರಿಂದ ಅವನಿಗೂ ಆಂತರನಾದ ಪರಮೇಶ್ವರನಿದ್ದಾನೆಂದು ತಿಳಿಯಬೇಕು. ಈ ಪರಮಾತ್ಮನೇ ಸರ್ವಾಂತರನಾಗಿರುತ್ತಾನೆ. ಈ ಆತ್ಮನೇ ಮುಖ್ಯಾತ್ಮನು. ಇವನನ್ನು ತಿಳಿದರೇ ಪರಮಪುರುಷಾರ್ಥಲಾಭವು. ಈತನನ್ನು ತಿಳಿಯುವುದಕ್ಕಾಗಿಯೇ ಬಾಹ್ಯವಾದ ಅನಾತ್ಮವಾದ ಪಂಚಕೋಶಗಳು ಶ್ರುತಿಯಲ್ಲಿ ಉಪದಿಷ್ಟವಾಗಿವೆ. ಏವಂಚ "ಬ್ರಹ್ಮಪುಚ್ಛಂ ಪ್ರತಿಷ್ಠಾ" ಎಂಬ ತೈ. ಪುಚ್ಛವಾಕ್ಯನಿರ್ದಿಷ್ಟವಾದ ಬ್ರಹ್ಮವೇ ಆನಂದಮಯಾದಿಗಳಿಗೆ ಪ್ರಧಾನವಾಗಿಯೂ, ಆಂತರವಾಗಿಯೂ ಇದೆಯೆಂದು ಮುಖ್ಯವಾಗಿ ತಿಳಿಯಬೇಕು. ಮತ್ತು "ಅಸನ್ನೇವ ಸ ಭವತಿ" ಎಂಬ ತೈ. ವಾಕ್ಯಗಳಿಂದ ಬ್ರಹ್ಮವನ್ನು ತಿಳಿದರೆ ಪರಮಪುರುಷಾರ್ಥ ಯೋಗ್ಯನೂ, ತಿಳಿಯದಿದ್ದರೆ ಪುರುಷಾರ್ಥಕ್ಕೆ ಅಯೋಗ್ಯನೂ, ಆಗುತ್ತಾನೆಂದು ಹೇಳಿದ್ದರಿಂದ, ಆನಂದಮಯಕ್ಕಿಂತಲೂ, ಆಂತರವಾದ, ಪುಚ್ಛವಾಕ್ಯ ನಿರ್ದಿಷ್ಟವಾದ, ಬ್ರಹ್ಮವನ್ನು ಅವಶ್ಯವಾಗಿ ತಿಳಿಯಬೇಕು. ಆನಂದಮಯರೂಪವಾದ ಕಾರಣ ಶರೀರಕ್ಕಿಂತಲೂ, ಬ್ರಹ್ಮವನ್ನು ವಿವೇಚನೆಮಾಡಿ ತಿಳಿಯಬೇಕು. ॥೪೨॥

ಪಂಚಕೋಶಗಳನ್ನು ಹೇಳಿಯಾಯಿತು. ಅವುಗಳಲ್ಲಿ ಬಾಹ್ಯ ಬಾಹ್ಯವಾದದ್ದು ಆಂತರ ಆಂತರವಾಗಿರತಕ್ಕ ಕೋಶಗಳಿಂದ ಪೂರ್ಣವಾಗಿದೆಯೆಂದು "ತೈನೈಷಪೂರ್ಣಃ" ಎಂದು ತೈ.,ಶ್ರುತಿಯು ಉಪದೇಶಿಸುತ್ತದೆ. ಅದರ ಅರ್ಥವು ಇಲ್ಲಿ ಹೇಳಲ್ಪಡುತ್ತದೆ. ತಿಳಿಯುವುದಕ್ಕೆ ಸುಲಭವಾಗುವುದಕ್ಕೋಸ್ಕರ ಶಿರಃಪುಚ್ಛಪಕ್ಷಾದಿ ತಲೆ, ಪುಕ್ಕ, ರೆಕ್ಕೆ ಮುಂತಾದ ಭೇದದಿಂದ ಕಲ್ಪಿತವಾದ ಅನ್ನಮಯಕೋಶವು ತನಗೆ ಆಂತರವಾದ, ಅದೇರೀತಿ ಕಲ್ಪಿತವಾದ, ಪ್ರಾಣಮಯ ಕೋಶದಿಂದಲೂ, ಪ್ರಾಣಮಯವು ಮನೋಮಯದಿಂದಲೂ, ಮನೋಮಯವು ವಿಜ್ಞಾನಮಯದಿಂದಲೂ, ಅದು ಆನಂದಮಯಕೋಶದಿಂದಲೂ ಪೂರ್ಣವಾಗಿದೆ. ಎಂದು ಹೇಳಿದೆ. ॥೪೩-೪೪॥

ತಥಾಽಽನಂದಮಯಶ್ಚಾಪಿ ಬ್ರಹ್ಮಣಾಽನ್ಯೇನ ಸಾಕ್ಷಿಣಾ ।
ಸರ್ವಾಂತರೇಣ ಸಂಪೂರ್ಣೋ ಬ್ರಹ್ಮ ನಾನ್ಯೇನ ಕೇನ ಚಿತ್ ॥೪೫॥

ಯದಿದಂ ಬ್ರಹ್ಮ ಪುಚ್ಛಾಖ್ಯಂ ಸತ್ಯಜ್ಞಾನಾದ್ವಯಾತ್ಮಕಂ ।
ಸ ರಸಃ ಸರ್ವದಾ ಸಾಕ್ಷಾನ್ನಾನ್ಯಥಾ ಸುರಪುಂಗವಾಃ ॥೪೬॥

ಆನಂದಮಯನೂ ಸಹ "ಬ್ರಹ್ಮ ಪುಚ್ಛಂ ಪ್ರತಿಷ್ಠಾ" ತೈ. ಎಂದು ಆನಂದ ಮಯಕ್ಕೂ ಆಧಾರವಾಗಿಯೂ, ಸಚ್ಚಿದಾನಂದಸ್ವರೂಪವಾಗಿಯೂ, ತನ್ನಲ್ಲಿ ಮಾಯೆ ಯಿಂದ ಕಲ್ಪಿತವಾದ ಅನ್ನಮಯಾದಿ ಅನಾತ್ಮವಾದ ಸಕಲವಸ್ತುಗಳಿಗೆ ಸಾಕ್ಷಿಯಾದ ಪಂಚಕೋಶಾಂತರ್ಗತವಾದ, ಸರ್ವಾಂತರವಾದ ಮತ್ತು ಯಾವ ಬ್ರಹ್ಮದ ತಾದಾತ್ಮ್ಯಾಧ್ಯಾಸದಿಂದ ಅನ್ನಮಯಾದಿಗಳೂ ಆತ್ಮವಾಗುತ್ತವೆಯೋ ಅಂತಹ ಸರ್ವಾಧಿಷ್ಠಾನವಾದ ಸಾಕ್ಷಿಚೈತನ್ಯರೂಪವಾದ ಬ್ರಹ್ಮದಿಂದ ವ್ಯಾಪ್ತನಾಗಿರುತ್ತಾನೆ. ಆದರೆ ಹಿಂದೆ ಹೇಳಿದ ಬ್ರಹ್ಮಸ್ವರೂಪವು ದೇಶಕಾಲ ಮತ್ತು ವಸ್ತು ಇವುಗಳಿಂದ ಉಂಟಾದ ತ್ರಿವಿಧವಾದ ಪರಿಚ್ಛೇದವು ಇಲ್ಲದ ಪ್ರಯುಕ್ತ ಯಾವುದರಿಂದಲೂ, ವ್ಯಾಪ್ತವಾಗಿಲ್ಲ. ಬ್ರಹ್ಮತತ್ವವು ತಾನೇ ಸರ್ವವನ್ನೂ ವ್ಯಾಪಿಸಿಕೊಂಡಿದೆ. ॥೪೫॥

ಈ ರೀತಿಯಲ್ಲಿ ಬ್ರಹ್ಮವು ಹೃದಯರೂಪ ಗುಹಾ ನಿಹಿತವಾದುದೆಂದು ಹೇಳಿ ಯಾಯಿತು. ಅಂತಹ ಬ್ರಹ್ಮಸ್ವರೂಪವನ್ನು ತಿಳಿಯಲು ಪಂಚಕೋಶಗಳೂ ಸಹ ನಿರೂಪಿಸಲ್ಪಟ್ಟವು. ಹಾಗೆ ಸರ್ವಾಂತರವಾದ ಬ್ರಹ್ಮವನ್ನು ಉಪದೇಶಿಸಿ, ಅದು ನಿರ್ವಿ ಶೇಷವಾದುದರಿಂದ ವಾಕ್ಕಿಗೂ ಮನಸ್ಸಿಗೂ ಅತೀತವಾಗಿರುವುದರಿಂದ ಅಸತ್ತಾಗಿರಬಹು ದೆಂದು ಆಶಂಕಿಸಿ "ಅಸನ್ನೇವ ಸ ಭವತಿ। ಅಸದ್ಬ್ರಹ್ಮೇತಿ ವೇದಚೇತ್। ಅಸ್ತಿ ಬ್ರಹ್ಮೇತಿ ಚೇದ್ವೇದ ಸಂತಮೇನಂ ತತೋವಿದುಃ।" ಎಂದು ಮಂತ್ರವು ಅದನ್ನೂ ನಿರಾಕರಣೆ ಮಾಡುತ್ತದೆ. ಯದ್ಯಪಿ ಬ್ರಹ್ಮವು ಸತ್ತಾದುದೇ ಆದರೂ ಬ್ರಹ್ಮ ಇದೆಯೆಂದು ತಿಳಿಯಬೇಕೆಂದು ತೋರೋಣದರಿಂದ ಹೀಗೆ ಸಂದೇಹ ಉಂಟಾಗಬಹುದು. ಬ್ರಹ್ಮವು ಸತ್ತೋ? ಅಸತ್ತೋ? ಮತ್ತು ಬ್ರಹ್ಮವು ಸರ್ವವ್ಯಾಪಕವಾದುದರಿಂದ ವಿದ್ವಾಂಸನಲ್ಲದವನೂ ಸಹ ಬ್ರಹ್ಮವನ್ನು ಹೊಂದುತ್ತಾನೆಯೋ? ಇಲ್ಲವೋ? ಒಂದು ವೇಳೆ ಪಡೆಯದೇ ಇದ್ದರೆ ಅದರಂತೆ ವಿದ್ವಾಂಸನೂ ಕೂಡ ಬ್ರಹ್ಮವನ್ನು ಹೊಂದು ತ್ತಾನೆಯೋ? ಇಲ್ಲವೋ? ಈ ರೀತಿ ವಿದ್ವದ ವಿದ್ವದ್ವಿಷಯಕವಾದ ಪ್ರಶ್ನೆಗಳನ್ನು "ಉತಾ ವಿದ್ವಾನಮುಂ ಲೋಕಂ ಪ್ರೇತ್ಯಕಶ್ಚನ ಗಚ್ಛತಿ। ಆಹೋವಿದ್ವಾನಮುಂ ಲೋಕಂ ಪ್ರೇತ್ಯಕಶ್ಚಿತ್ಸಮಶ್ನುತಾ ಉ।" ಎಂಬ ತೈ. ಶ್ರುತಿಯೇ ತೋರಿಸುತ್ತದೆ.

ಏತಮೇವ ರಸಂ ಸಾಕ್ಷಾಲ್ಲಬ್ಧ್ವಾ ದೇಹೀ ಸನಾತನಂ ।
ಸುಖೀ ಭವತಿ ಸರ್ವತ್ರ ನಾನ್ಯಥಾ ಸುರಸತ್ತಮಾಃ ॥೪೭॥

ಅಸತ್ಯಸ್ಮಿನ್ ಪರಾನಂದೇ ಸ್ವಾತ್ಮಭೂತೇಽಖಿಲಾತ್ಮನಾಂ ।
ಕೋ ಜೀವತಿ ನರೋ ದೇವಾಃ ಕೋ ವಾ ನಿತ್ಯಂ ವಿಚೇಷ್ಟತೇ ॥೪೮॥

ಈ ಪ್ರಶ್ನೆಗಳಿಗೆ "ಸೋಽಕಾಮಯತ" ಎಂಬ ತೈ. ಶ್ರುತಿಯು ಉತ್ತರವನ್ನು ಹೇಳುತ್ತದೆ. "ರಸೋವೈಸಃ" ಇತ್ಯಾದಿ ಶ್ರುತಿಯು ಬ್ರಹ್ಮರಸರೂಪವಾದುದರಿಂದ ಬ್ರಹ್ಮ ಸ್ವರೂಪವಿದೆಯೆಂದು ಹೇಳುತ್ತದೆ. ಅದರ ಅರ್ಥವನ್ನು ಇಲ್ಲಿ ಸಂಗ್ರಹಿಸಿ ಹೇಳುತ್ತಾನೆ. "ಬ್ರಹ್ಮಪುಚ್ಛಂ ಪ್ರತಿಷ್ಠಾ" ಎಂಬ ವಾಕ್ಯದಲ್ಲಿ ಸರ್ವಾಧಾರತ್ವೇನ ನಿರ್ದಿಷ್ಟವಾಗಿಯೂ, ಪಂಚಕೋಶಗಳೊಳಗೆ ಅಪರೋಕ್ಷವಾಗಿ ಭಾಸಮಾನವಾಗಿಯೂ, ಸತ್ಯಸ್ವರೂಪವಾಗಿಯೂ, ಜ್ಞಾನಸ್ವರೂಪವಾಗಿಯೂ, ಅದ್ವಿತೀಯವಾಗಿಯೂ, ಯಾವಾಗಲೂ ಯೋಗಿಗಳಿಂದ ಆಸ್ವಾದಮಾಡಲ್ಪಡುವುದರಿಂದ ಮಧುರಾದಿ ರಸಗಳಂತೆ ಏಕರಸವಾಗಿಯೂ, ಬ್ರಹ್ಮವು ಪ್ರತ್ಯಕ್ಷವಾಗಿರುತ್ತದೆ. ॥೪೬॥

ಓ ಸುರಶ್ರೇಷ್ಠರೇ, ಸಾಧಕನಾದವನು ನಿತ್ಯವಾದ, ನಿರತಿಶಯಾನಂದರೂಪವಾದ ಆತ್ಮರೂಪವಾದ ರಸವನ್ನು ಪ್ರತ್ಯಕ್ಷವಾಗಿ ಅನುಭವಿಸುತ್ತಾ ಎಲ್ಲಾ ಕಾಲಗಳಲ್ಲಿಯೂ, ದೇಶಗಳಲ್ಲಿಯೂ, ಸುಖಿಯಾಗಿರುತ್ತಾನೆ. ಆದರೆ ಅನಿತ್ಯವಾದ ಮಧುರಾದಿ ರಸಾನುಭವವು ಹಾಗಲ್ಲ. ಒಂದು ಕಾಲದಲ್ಲಿ ದುಃಖದಾಯಕವೂ ಆಗಬಹುದು. ಆದುದರಿಂದ ವಿದ್ವಾಂಸರ ಅನುಭವ ಬಲದಿಂದ ಬ್ರಹ್ಮವು ಅಖಂಡೈಕರಸಾತ್ಮಕವಾದುದು ಎಂದು ಗೊತ್ತಾಗಿದೆ. ಆದುದರಿಂದಲೇ ಬ್ರಹ್ಮದ ಅಸ್ತಿತ್ವವು ಸಿದ್ಧವಾಗುತ್ತದೆ. ॥೪೭॥

"ಕೋಹ್ಯೇವಾನ್ಯಾತ್ಕಃ ಪ್ರಾಣ್ಯಾತ್ । ಯದೇಷ ಆಕಾಶ ಆನಂದೋ ನ ಸ್ಯಾತ್ ॥" ಎಂಬ ತೈತ್ತರೀಯ ಶ್ರುತಿಯ ಅರ್ಥವನ್ನು ಹೇಳುತ್ತಾನೆ. ಪ್ರಾಣಿಗಳ ಶರೀರ ಮಧ್ಯದಲ್ಲಿ ಪರಮವ್ಯೋಮವೆಂಬ ಹೆಸರುಳ್ಳ ಅವ್ಯಾಕೃತಾಕಾಶದಲ್ಲಿ ದಹರಾಕಾಶದಲ್ಲಿ ಸ್ವಾತ್ಮಭೂತನಾಗಿಯೂ, ನಿರತಿಶಯವಾದ ಆನಂದರೂಪನಾಗಿಯೂ ಇರತಕ್ಕ ಆತ್ಮನು ಇಲ್ಲದಿದ್ದರೆ ಯಾವ ಜೀವಿಯು ಪ್ರಾಣಧಾರಣೆಮಾಡೀತು? ಅಥವಾ ಯಾವ ಜೀವಿಯು ಬದುಕಬಹುದು? ಆದುದರಿಂದ ಒಳಗೆ ಬ್ರಹ್ಮತತ್ವವು ಧಾರಕವಾಗಿಯೂ, ಪ್ರೇರಕವಾಗಿಯೂ ಇದೆಯೆಂದು ಒಪ್ಪಿಕೊಳ್ಳಬೇಕು ಎಂದು ಭಾವವು. ॥೪೮॥

ತಸ್ಮಾತ್ಸರ್ವಾತ್ಮನಾಂ ಚಿತ್ತೇ ಭಾಸಮಾನೋ ರಸೋ ಹರಃ ।
ಆನಂದಯತಿ ದುಃಖಾಢ್ಯಂ ಜೀವಾತ್ಮಾನಂ ಕೃಪಾಬಲಾತ್ ॥೪೯॥

ಯದಾ ಹ್ಯೇವೈಷ ಏತಸ್ಮಿನ್ ಅದೃಶ್ಯತ್ವಾದಿಲಕ್ಷಣೇ ।
ನಿರ್ಭೇದಂ ಪರಮೇಕತ್ವಂ ವಿಂದತೇ ಸುರಸತ್ತಮಾಃ ॥೫೦॥

ತದೈವಾ ಭಯ ಮತ್ಯಂತಂ ಕಲ್ಯಾಣಂ ಪರಮಾಮೃತಂ ।
ಸ್ವಾತ್ಮಭೂತಂ ಪರಂ ಬ್ರಹ್ಮ ಸ ಯಾತಿ ಸ್ವರ್ಗವಾಸಿನಃ ॥೫೧॥

ಯದಾ ಹ್ಯೇವೈಷ ಏತಸ್ಮಿನ್ ಅಲ್ಪಮಪ್ಯಂತರಂ ನರಃ ।
ವಿಜಾನಾತಿ ತದಾ ತಸ್ಯ ಭಯಂ ಸ್ಯಾನ್ನಾತ್ರ ಸಂಶಯಃ ॥೫೨॥

ಆದುದರಿಂದ ಸಕಲರ ಹೃದಯದಲ್ಲಿಯೂ ಭಾಸಮಾನನಾದ ಮತ್ತು ಅಹಂ, ನಾನು, ಎಂಬ ವೃತ್ತಿಯಿಂದ ಪ್ರಕಾಶಮಾನನಾದ, ಸದಾ ಏಕರಸನಾದ ಹರನೆಂಬ ಪರಮಾತ್ಮನು ಸಂಸಾರದಿಂದ ದುಃಖಪಡುತ್ತಿರುವ ಜೀವಾತ್ಮನನ್ನು ಅವನ ಧರ್ಮಾನುಸಾರವಾಗಿ ದಯೆಯಿಂದ ಸ್ವಸ್ವರೂಪಸುಖಾನುಭವವನ್ನು ಉಂಟುಮಾಡುತ್ತಾ ಸಂತೋಷಗೊಳಿಸುತ್ತಾನೆ. ॥೪೯॥

ಬ್ರಹ್ಮವೇದನವಿಲ್ಲದಿದ್ದರೆ ಭಯಾದಿ ಅನರ್ಥಸಮೂಹವೂ, ಬ್ರಹ್ಮವೇದನದಿಂದ ಅನರ್ಥನಿವೃತ್ತಿಯೂ, ಆಗುತ್ತದೆಂದು ಶ್ರುತಿಯಲ್ಲಿ ಹೇಳಿದ ಅಂಶವನ್ನು ಸಂಗ್ರಹಿಸಿ ಉಪದೇಶಿಸುತ್ತಾನೆ. ಎಲೈ ಸ್ವರ್ಗವಾಸಿಗಳಾದ ದೇವೋತ್ತಮರೇ, ಯಾವನು ಯಾವಕಾಲದಲ್ಲಿ ದೃಶ್ಯಪ್ರಪಂಚರಹಿತವಾಗಿಯೂ, ಸಾಕ್ಷಿಸ್ವರೂಪವಾಗಿಯೂ, ಸ್ಥೂಲಶರೀರ, ಸೂಕ್ಷ್ಮಶರೀರ, ಕಾರಣಶರೀರರಹಿತವಾಗಿಯೂ, ಉತ್ಕೃಷ್ಟವಾಗಿಯೂ, ಏಕವಾಗಿಯೂ ಇರತಕ್ಕ ಬ್ರಹ್ಮವನ್ನು ತಿಳಿಯುತ್ತಾನೆಯೋ, ಆವಾಗಲೇ ಅವನು ಅತ್ಯಂತ ಅಭಯವಾಗಿಯೂ, ಮಂಗಲಸ್ವರೂಪವಾಗಿಯೂ, ಅಮೃತಸ್ವರೂಪವಾಗಿಯೂ, ಸ್ವಾತ್ಮಭೂತವಾದ ಬ್ರಹ್ಮವನ್ನು ಅಲ್ಲಿಯೇ ಹೊಂದುತ್ತಾನೆ. ॥೫೦-೫೧॥

ಮನುಷ್ಯನು ಹಿಂದೆ ಹೇಳಿದ ಆನಂದರೂಪವಾದ ಬ್ರಹ್ಮಸ್ವರೂಪದಲ್ಲಿ, ನಾನು ಬೇರೆ, ಬ್ರಹ್ಮವು ಬೇರೆ ಇತ್ಯಾದಿ ಸ್ವಲ್ಪವಾದರೂ ಭೇದವನ್ನು ಎಣಿಸುತ್ತಾನೆಯೋ ಅವನಿಗೆ "ಅಥ ತಸ್ಯ ಭಯಂ ಭವತಿ" ಎಂಬ ತೈ. ಶ್ರುತ್ಯನುಸಾರವಾಗಿ ಖಂಡಿತವಾಗಿಯೂ ಭಯ ಉಂಟಾಗುತ್ತದೆ. ॥೫೨॥

ಸರ್ವೇಷಾ ಮಾತ್ಮಭೂತಂ ಯದ್ಬ್ರಹ್ಮ ಸತ್ಯಾದಿಲಕ್ಷಣಂ ।
ಉದಾಸ್ತೇ ತತ್ಸುರಶ್ರೇಷ್ಠಾ ಯಥಾಜಾತ ಜನಂ ಪ್ರತಿ ॥೫೩॥

ಸಮ್ಯಜ್ಜ್ಞಾನೈಕ ನಿಷ್ಠಾನಾಂ ತದೇವ ಪರಮಂ ಪದಂ ।
ತದಾ ಸ್ವಾತ್ಮತಯಾ ಭಾತಿ ಕೇವಲಂ ಕೃಪಯಾ ಸುರಾಃ ॥೫೪॥

ತಸ್ಮೇ ವಾಧೀತ ವೇದಸ್ಯ ಸಹಾಂಗೈಃ ಸುರಸತ್ತಮಾಃ ।
ಮನನೇನ ವಿಹೀನಸ್ಯ ಭಯಹೇತುಃ ಸದಾ ಭವೇತ್ ॥೫೫॥

ಆದರೆ ಬ್ರಹ್ಮಸ್ವರೂಪವು ಎಲ್ಲಾ ಕಡೆಯಲ್ಲಿಯೂ ಇರುವುದರಿಂದಲೂ, ಪಕ್ಷಪಾತವಿಲ್ಲದೇ ಇರೋಣವರಿಂದಲೂ, ಭೇದದರ್ಶಿಗೂ ಸಹ ಅಭಯಪ್ರಾಪ್ತಿಯು ಏಕೆ ಆಗಲಾರದು ? ಎಂದು ಶಂಕೆಯು ಬರಬಹುದು. ಅದಕ್ಕೆ ಇಲ್ಲಿ ಸಮಾಧಾನ ಹೇಳುತ್ತಾನೆ.–ಓ ಸುರಶ್ರೇಷ್ಠರೇ, ಭೇದದರ್ಶಿಯ ಮತ್ತು ಅಭೇದದರ್ಶಿಯ ಹೃದಯಮಧ್ಯದಲ್ಲಿ ಆತ್ಮಭೂತವಾಗಿಯೂ, ಸತ್ಯಾನಂದಾದಿ ಸ್ವರೂಪವಾಗಿಯೂ, ಇರತಕ್ಕ ಬ್ರಹ್ಮಸ್ವರೂಪವು ಉಪಲಭ್ಯಮಾನವಾದಾಗ್ಯೂ ಮೂರ್ಖಜನರ ವಿಷಯದಲ್ಲಿ ಬ್ರಹ್ಮಸ್ವರೂಪವು ಉದಾಸೀನವಾಗಿ ಸಾಕ್ಷಿಯಾಗಿಯೇ ಇರುತ್ತದೆ. ಎಂದರೆ ಮೂರ್ಖನು ಬ್ರಹ್ಮವಿಚಾರವನ್ನು ಮಾಡುವುದಿಲ್ಲವಾದಕಾರಣ ಅವನಿಗೆ ಬ್ರಹ್ಮವು ಪ್ರಕಾಶಿಸುವುದಿಲ್ಲ. ಅಭೇದದರ್ಶಿಯಾದ ಪಂಡಿತನಿಗೆ "ಅಹಂ ಬ್ರಹ್ಮಾಸ್ಮಿ" ಎಂಬ ಆತ್ಮಾನುಭವವಿರುತ್ತದೆ. ಎಂದು ಭಾವವು. ॥೫೩॥

ಎಲೈ ದೇವತೆಗಳೇ, ಯಾರು ನಿರತಿಶಯವಾದ ಬ್ರಹ್ಮವಿಷಯದಲ್ಲಿ ನಿಶ್ಚಯಾತ್ಮಕವಾದ ಜ್ಞಾನನಿಷ್ಠರಾಗಿರುತ್ತಾರೆಯೋ ಅವರಿಗೆ ತಿಳಿಯಲು ಯೋಗ್ಯವಾಗಿಯೂ, ಸರ್ವೋತ್ಕೃಷ್ಟವಾಗಿಯೂ ಇರತಕ್ಕ ಆತ್ಮಸ್ವರೂಪವು ದಯೆಯಿಂದ ಅಂತಹವರಿಗೆ ಪ್ರಕಾಶಿಸುತ್ತದೆ. ಈ ಅಭಿಪ್ರಾಯದಿಂದಲೇ ಶ್ರುತಿಯಲ್ಲಿ "ನಾಯಮಾತ್ಮಾ ಪ್ರವಚನೇನ ಲಭ್ಯೋ ನ ಮೇಧಯಾ ನ ಬಹುನಾ ಶ್ರುತೇನ । ಯಮೇ ವೈಷ ವೃಣುತೇ ತೇನ ಲಭ್ಯಃ ತಸ್ಯೈಷ ಆತ್ಮಾ ವಿವೃಣುತೇತನುಂ ಸ್ವಾಂ" ಉ. ಕ. ಉ. ೨.೨೩. ಎಂದು ಹೇಳಿದೆ. ॥೫೪॥

ಯಾರು ಯೋಗ್ಯತೆ ಅಧಿಕಾರವಿದ್ದಾಗ್ಯೂ ಮನನಾದಿಸಾಧನಗಳಿಂದ ಬ್ರಹ್ಮಸಾಕ್ಷಾತ್ಕಾರಮಾಡಿಕೊಳ್ಳುವುದಿಲ್ಲವೋ ಅಂತಹ ಆಲಸ್ಯವುಳ್ಳವನಿಗೆ ಬ್ರಹ್ಮವು ಭಯಕಾರಣವೆಂದು ಪ್ರತಿಪಾದಿಸಲ್ಪಟ್ಟಿತು. ಈಗ "ತತ್ತ್ವೇವ ಭಯಂ ವಿದುಷೋಽಮನ್ವಾ

ಭೀಷಾಽಸ್ಮಾತ್ಪವತೇ ವಾಯುರ್ಭೀಷೋದೇತಿ ದಿವಾಕರಃ ।
ಭೀಷಾಽಸ್ಮಾದಗ್ನಿರಿಂದ್ರಶ್ಚ ಮೃತ್ಯುರ್ಧಾವತಿ ಪಂಚಮಃ ॥೫೬॥

ಅಸ್ಯೈವಾನಂದ ಲೇಶೇನ ಸ್ತಂಭಾಂತಾ ವಿಷ್ಣುಪೂರ್ವಕಾಃ ।
ಭವಂತಿ ಸುಖಿನೋ ದೇವಾಸ್ತಾರತಮ್ಯ ಕ್ರಮೇಣ ತು ॥೫೭॥

ನಸ್ಯ" ತೈ. ಉ. ೨. ೭. ಎಂಬ ಶ್ರುತ್ಯರ್ಥವನ್ನು ಸಂಗ್ರಹಿಸುತ್ತಾನೆ.—ಓ ಸುರೋತ್ತಮರೇ, ಶಿಕ್ಷಾದ್ಯಂಗಸಹಿತವಾದ ಅಧ್ಯಯನವನ್ನು ಮಾಡಿ ಯಾವನು ಬ್ರಹ್ಮಸಾಕ್ಷಾತ್ಕಾರಕ್ಕೆ ಹೇತುವಾದ ಮನನಾದಿಗಳನ್ನು ಮಾಡುವುದಿಲ್ಲವೋ ಅಂತಹವನಿಗೆ ಬ್ರಹ್ಮವು ಸದಾ ಭಯಹೇತುವಾಗುತ್ತದೆ. ಆ ಶ್ರುತಿಯ ಅರ್ಥವು ಹೀಗಿದೆ. ॥೫೫॥

ಪರಮಾತ್ಮನ ಭಯದಿಂದ ವಾಯುವು ಬೀಸುತ್ತದೆ. ಸೂರ್ಯನು ಉದಯಿಸುತ್ತಾನೆ. ಅಗ್ನಿಯೂ, ಇಂದ್ರನೂ ಸಹ ಪರಮಾತ್ಮನ ಭೀತಿಯಿಂದ ತಮ್ಮ ತಮ್ಮ ಕಾರ್ಯಗಳನ್ನು ಮಾಡುತ್ತಾರೆ. ಐದನೆಯವನಾದ ಯಮನೂ ಕೂಡ ವಿಶ್ರಾಂತಿಯಿಲ್ಲದೇ ಓಡುತ್ತಿರುತ್ತಾನೆ. ಒಟ್ಟಿನಲ್ಲಿ ಸಮಸ್ತ ಜಗತ್ತಿನ ವ್ಯಾಪಾರದಲ್ಲಿ ಅಧಿಕೃತರಾಗಿಯೂ, ಮಹಾಪ್ರಭಾವಶಾಲಿಗಳಾಗಿಯೂ, ಇರತಕ್ಕ ವಾಯ್ವಾದಿ ದೇವತೆಗಳಿಗೂ ಸಹ ಬ್ರಹ್ಮವು ಭಯಹೇತುವಾಗಿರುತ್ತದೆ. ಈ ಅಭಿಪ್ರಾಯವು "ಭೀಷಾಽಸ್ಮಾದ್ವಾತಃ ಪವತೇ । ಭೀಷೋಽದೇತಿಸೂರ್ಯಃ । ಭೀಷಾಽಸ್ಮಾದಗ್ನಿಶ್ಚೇಂದ್ರಶ್ಚ । ಮೃತ್ಯುರ್ಧಾವತಿ ಪಂಚಮ ಇತಿ ॥" ಎಂದು ತೈತ್ತರೀಯದಲ್ಲಿಹೇಳಿದೆ. ॥೫೬॥

ಈ ರೀತಿಯಾಗಿ ಬ್ರಹ್ಮವು ಭಯಾಭಯ ಹೇತುವಾದುದರಿಂದ ಬ್ರಹ್ಮಾಸ್ತಿತ್ವವು ಸಿದ್ಧವಾಯಿತು. "ಯದೇಷ ಆಕಾಶ ಆನಂದೋ ನ ಸ್ಯಾತ್ । ಏಷಹ್ಯೇವಾನಂದಯಾತಿ" ಎಂಬ ತೈತ್ತಿರೀಯ ಶ್ರುತ್ಯನುಸಾರವಾಗಿ ಬ್ರಹ್ಮನಿಗೆ ನಿರತಿಶಯವಾದ ಆನಂದರೂಪವನ್ನು ಉಪಪಾದಿಸಲು ಸಾರ್ವಭೌಮ ಮೊದಲುಗೊಂಡು ಹಿರಣ್ಯಗರ್ಭ ಪರ್ಯಂತರವಾಗಿ ಉತ್ತರೋತ್ತರವಾಗಿ ಶತಗುಣ ಅಧಿಕವಾದ ಆನಂದಪ್ರವಾಹವು "ಸೈಷಾ ಆನಂದಸ್ಯ" ಎಂದು ಆರಂಭಿಸಿ, "ಸ ಏಕೋಬ್ರಹ್ಮಣ ಆನಂದಃ" ಎಂದು ತೈ. ಶ್ರುತಿಯಲ್ಲಿ ಪ್ರತಿಪಾದಿತವಾಗಿದೆ. ಅದನ್ನು ಸಂಗ್ರಹಿಸಿ ಹೇಳುತ್ತಾನೆ. ಎಲೈ ದೇವತೆಗಳೇ, ಸ್ತಂಬ (ಕೀಟ, ಹುಳು) ಮೊದಲುಗೊಂಡು ವಿಷ್ಣುಪರ್ಯಂತರ ಜೀವರೂ ಸಹ ನಿರತಿಶಯವಾದ ಬ್ರಹ್ಮಾನಂದ ಲೇಶವನ್ನು ಆಯಾಯಾ ಸಮಸ್ತವಾದ ಉಪಾಧಿಗನುಸಾರವಾಗಿ ಅನುಭವಿಸುತ್ತಾ ಸುಖಿಗಳಾಗಿರುತ್ತಾರೆ. ॥೫೭॥

ತತ್ತತ್ಪದ ವಿರಕ್ತಸ್ಯ ಶ್ರೋತ್ರಿಯಸ್ಯ ಪ್ರಸಾದಿನಃ ।
ಸ್ವರೂಪಭೂತ ಆನಂದಃ ಸ್ವಯಂ ಭಾತಿ ಪದೇ ಯಥಾ ॥೫೮॥

ಅಯಮೇವ ಶಿವಃ ಸಾಕ್ಷಾದಾದಿತ್ಯ ಹೃದಯೇ ತಥಾ ।
ಅನ್ಯೇಷಾಂ ಹೃದಯೇ ಚೈವ ಭಾತಿ ಸಾಕ್ಷಿತಯಾ ಸ್ವಯಂ ॥೫೯॥

ತೈತ್ತರೀಯದಲ್ಲಿ ಸಾರ್ವಭೌಮಾದ್ಯಾನಂದವಿಶೇಷವನ್ನು ಉಪನ್ಯಾಸಮಾಡಿ "ಶ್ರೋತ್ರಿಯಸ್ಯ ಚಾ ಕಾಮುಹತಸ್ಯ" ಎಂದು ಆಮ್ನಾತವಾಗಿದೆ. ಅದರ ಅಭಿಪ್ರಾಯವನ್ನು ಹೇಳುತ್ತಾನೆ. ಆಯಾಯ ಸಾರ್ವಭೌಮಾದಿಪದಗಳಲ್ಲಿ ಆನಂದವು ಸಾತಿಶಯವಾದುದರಿಂದ ಅನಿತ್ಯವಾದುದೆಂದು ತಿಳಿದು ಅವುಗಳಲ್ಲಿ ವಿರಕ್ತನಾದ ಏಷಣಾತ್ರಯ ವಿನಿರ್ಮುಕ್ತನಾದ ಶ್ರವಣಮನನಾದಿ (ಕಲಾಪವನ್ನು) ಸಾಧನಕಲಾಪವನ್ನು ಅನುಷ್ಠಾನಮಾಡಿರತಕ್ಕ ಶ್ರೋತ್ರಿಯನಾಗಿರತಕ್ಕ ಬ್ರಹ್ಮಜ್ಞಾನಿಗೆ ಅನವಚ್ಛಿನ್ನವಾದ ಆನಂದರೂಪವಾದ, ಬ್ರಹ್ಮಶ್ರವಣದಿಂದ ಅದರ ಲೇಶವಾದ ಯಾವ ಆನಂದವು ಸಾರ್ವಭೌಮಾದಿಗಳಿಗೆ ಇರುತ್ತದೆಯೋ, ಅದು ಸ್ವರೂಪಭೂತವಾಗಿರುತ್ತದೆ. ಯಾವ ರೀತಿಯಾಗಿ ಸಾರ್ವಭೌಮಾದಿ ಸ್ಥಾನದಲ್ಲಿರತಕ್ಕವನು ಆನಂದಲೇಶವನ್ನನುಭವಿಸುತ್ತಾನೆಯೋ ಹಾಗೆ ಬ್ರಹ್ಮಜ್ಞಾನಿಯು ಸಾಧನಾಂತರಾಪೇಕ್ಷೆಯಿಲ್ಲದೇ ಅಂತಹ ಆನಂದವನ್ನು ಅನುಭವಿಸುತ್ತಾನೆ. ॥೫೮॥

ಸಾರ್ವಭೌಮನು ಮೊದಲುಗೊಂಡು ಹಿರಣ್ಯಗರ್ಭಪರ್ಯಂತರವಾಗಿ ತಾರತಮ್ಯವಾಗಿರತಕ್ಕ ಸಮಸ್ತ ಆನಂದವಿಶೇಷಗಳು ಬ್ರಹ್ಮನಲ್ಲಿ ಜಲತರಂಗಬುದ್ಬುದನ್ಯಾಯದಿಂದ ಕಲ್ಪಿತವಾದುವುಗಳು. ಇಂತಹ ಅದ್ವಿತೀಯವಾದ ಬ್ರಹ್ಮಸ್ವರೂಪವು ಬೇರೇ ಇನ್ನೊಂದರ ಪರಿಚ್ಛೇದವಿಲ್ಲದಪ್ರಯುಕ್ತ ನಿರತಿಶಯಾನಂದರೂಪವಾಗಿರುತ್ತದೆ. ಅದು ಸಿದ್ಧವಾಗಬೇಕಾದರೆ ಜೀವೇಶಭೇದಭ್ರಮವು ಹೋಗಬೇಕು. ತೈತ್ತಿರೀಯಶ್ರುತಿಯು "ಸ ಯಶ್ಚಾಯಂ ಪುರುಷೇ ಯಶ್ಚಾಸಾವಾದಿತ್ಯೇ ಸ ಏಕಃ" ಎಂದು ಭೇದಭ್ರಮವನ್ನು ಹೋಗಲಾಡಿಸುತ್ತದೆ. ಆ ಶ್ರುತ್ಯಭಿಪ್ರಾಯವು ಇಲ್ಲಿ ನಿರೂಪಿಸಲ್ಪಡುತ್ತದೆ. ಆಕಾಶಾದಿ ನಿಖಿಲಜಗತ್ತಿಗೆ ಕಾರಣವಾಗಿಯೂ, ವಿದ್ವಾಂಸನಿಂದಸ್ವರೂಪಭೂತವಾಗಿ ಅನುಭವಿಸಲ್ಪಡತಕ್ಕದ್ದಾಗಿಯೂ, ನಿರತಿಶಯಾನಂದವಾಗಿಯೂ, ಪರಶಿವನೆಂಬ ಬ್ರಹ್ಮಸ್ವರೂಪವು ಆದಿತ್ಯನಲ್ಲಿಯೂ, ಬೇರೇ ಸಮಸ್ತ ಪ್ರಾಣಿಗಳ ಹೃದಯದಲ್ಲಿಯೂ, ಸಾಕ್ಷಿಯಾಗಿ ಸ್ವಯಂಪ್ರಕಾಶಿಸುತ್ತದೆ. ಇಲ್ಲಿ ಆದಿತ್ಯನೆಂದರೆ "ಸತ್ರೇಧಾಽಽತ್ಮಾನಂ ವ್ಯಾಕುರುತ ಆತ್ಮಾನಂ ತೃತೀಯಂ ವಾಯುಂ ತೃತೀಯಂ" ಬೃ. ಉ. ೧.೨.೩. ಎಂಬ

ವಿಹಾಯ ಸಾಕ್ಷ್ಯಂ ದೇಹಾದಿ ಮಾಯಾಂತಂ ತು ವಿವೇಕತಃ ।
ಸರ್ವಸಾಕ್ಷಿಣಮಾತ್ಮಾನಂ ಯಃ ಪಶ್ಯತಿ ಸ ಪಶ್ಯತಿ ॥೬೦॥

ರುದ್ರ ನಾರಾಯಣಾದೀನಾಂ ಸ್ತಂಬಾಂತಾನಾಂ ಚ ಸಾಕ್ಷಿಣಂ ।
ಏವಂ ತರ್ಕ ಪ್ರಮಾಣಾಭ್ಯಾಂ ಯಃ ಪಶ್ಯತಿ ಸ ಪಶ್ಯತಿ ॥೬೧॥

ಶ್ರುತ್ಯನುಸಾರವಾಗಿ ಹಿರಣ್ಯಗರ್ಭನೆಂದು ತಿಳಿಯಬೇಕು. ಪ್ರಥಮಾಪತ್ಯನಾದ ಆ ಹಿರಣ್ಯಗರ್ಭನ ಹೃದಯದಲ್ಲಿ ಪರಮಾತ್ಮನು ವಿಶುದ್ಧಸತ್ವಪ್ರಧಾನವಾದ ಮಾಯೋಪಾಧಿಕನಾಗಿರುತ್ತಾನೆ. ಸಾಕ್ಷಾತ್ ಎಂದು ಹೇಳಿದ್ದರಿಂದ ಜ್ಞಾನವು ಆವೃತ ವಾಗಿಲ್ಲವೆಂದು ಹೇಳಿದ ಹಾಗಾಯಿತು. ಏವಂ ಚ ಅನಾವೃತಜ್ಞಾನನಾದ ಸರ್ವಜ್ಞ ನಾದ ಈಶ್ವರನಾಗಿ ಪರಮಾತ್ಮನು ಪ್ರಕಾಶಿಸುತ್ತಾನೆ. ಹಾಗೆ ಜೀವರ ಹೃದಯದಲ್ಲಿ ಪಂಚಕೋಶಮಧ್ಯದಲ್ಲಿ ಮಲಿನಸತ್ವಪ್ರಧಾನಾವಿದ್ಯೋಪಾಧಿಕನಾಗಿ ಅಲ್ಪಜ್ಞನಾಗಿ ಪರಮಾತ್ಮನು ಸಂಸಾರಸಾಕ್ಷಿಯಾಗಿರುತ್ತಾನೆಂದು ತಿಳಿಯಬೇಕು. ॥೫೯॥

ಈ ರೀತಿಯಾಗಿ ವಿರುದ್ಧಸ್ವಭಾವವುಳ್ಳ ಜೀವೇಶ್ವರರ ಐಕ್ಯವನ್ನು ತಿಳಿದು ಕೊಳ್ಳಲು ಉಪದೇಶಿಸುತ್ತಾನೆ. ಶರೀರ ಮೊದಲ್ಗೊಂಡು ಸತ್ವರಜಸ್ತಮೋಗುಣಾತ್ಮ ಕವಾದ ಸಮಸ್ತ ಸಾಕ್ಷ್ಯವನ್ನು ವಿಚಾರಮಾಡಿ ಅವುಗಳನ್ನು ಬಿಟ್ಟು ಯಾವನು ಸರ್ವಕ್ಕೂ ಸಾಕ್ಷಿಯಾದ ಪರಮಾತ್ಮನನ್ನು ತಿಳಿಯುತ್ತಾನೆಯೋ ಅವನೇ ಯಥಾರ್ಥ ದರ್ಶಿಯು. ಎಂದರೆ ಸ್ಥೂಲಶರೀರಕ್ಕೆ ಕಾರಣವಾದ ಮಾಯಾಪರ್ಯಂತವಾದ ಸರ್ವಜ್ಞತ್ವ, ಕಿಂಚಿಜ್ಞತ್ವಭ್ರಮೆಗೆ ಕಾರಣವಾದ ಸಮಸ್ತ ಸಾಕ್ಷ್ಯವೂ ಅನಾತ್ಮವೆಂದು ತಿಳಿದು, ಜೀವೇಶ್ವರಾನುಸ್ಯೂತವಾದ ಚಿನ್ಮಾತ್ರವನ್ನು ಯಾವನು ತಿಳಿಯುತ್ತಾನೆಯೋ ಅವನೇ ಯಥಾರ್ಥದರ್ಶಿಯೆಂದು ಅಭಿಪ್ರಾಯವು. ॥೬೦॥

ಪರಶಿವನ ಅವತಾರಿಗಳಾಗಿಯೂ, ಲೀಲಾವಿಗ್ರಹಧಾರಿಗಳಾಗಿಯೂ, ಇರತಕ್ಕ ವರು ರುದ್ರ ನಾರಾಯಣ ಮೊದಲ್ಗೊಂಡು ಸ್ತಂಬಾಂತವಾದ ಸಮಸ್ತಜೀವರಿಗೂ ಸಾಕ್ಷಿಯಾದ ಪರಮಾತ್ಮನನ್ನು ಯಾವ ಮಹಾತ್ಮನು ಯುಕ್ತಿಯಿಂದಲೂ, ಪ್ರಮಾಣ ದಿಂದಲೂ ತಿಳಿಯುತ್ತಾನೆಯೋ ಆತನೇ ಬ್ರಹ್ಮಜ್ಞಾನಿಯು. ಈ ರೀತಿಯಾಗಿ ಸಚ್ಚಿದಾನಂದರೂಪನಾದ ಪರಶಿವನಲ್ಲಿ ಜೀವ ಈಶ್ವರ ಎಂಬ ಉಪಾಧಿಕೃತವಾದ ಪರಿ ಚ್ಛೇದವನ್ನು ನಿರಾಸಮಾಡಿದ್ದರಿಂದ ಪರಮಾತ್ಮನು ಅಪರಿಚ್ಛಿನ್ನನೂ, ನಿರತಿಶಯ ನಾದ ಆನಂದಜ್ಞಾನಸ್ವರೂಪನೂ, ಲವಣಪಿಂಡದಂತೆ ಸದಾ ಏಕರಸನೂ, ಆಗಿರುತ್ತಾ ನೆಂದು ಪ್ರತಿಪಾದನೆಮಾಡಿದಂತಾಯಿತು. ಈ ರೀತಿಯಾಗಿ ಪರಮಾತ್ಮನ ಸ್ವರೂಪ

ಯಸ್ಯೈವಂ ತರ್ಕಮಾನಾಭ್ಯಾಮಸ್ತಿ ವಿಜ್ಞಾನಮಾಸ್ತಿಕಾಃ ।
ಸ ಲೋಕಾದಖಿಲಾದಸ್ಮಾದ್ವಿಭಿದ್ಯಾತ್ಮಾನಮಾತ್ಮನಾ ॥೬೨॥

ಅನ್ನಾದೀನಖಿಲಾನ್ಕೋಶಾ ನಾಭಾಸೇನ ವಿಭಾಸಿತಾನ್ ।
ಉಪಸಂಕ್ರಾಮತೀಶಸ್ಯ ಪ್ರಸಾದಾದೇವ ಕೇವಲಾತ್ ॥೬೩॥

ವನ್ನು ಹೇಳಿದ್ದರಿಂದ ಬ್ರಹ್ಮವು ಇದೆಯೋ? ಇಲ್ಲವೋ? ಎಂಬ ಸಂದೇಹವು ನಿರಾಕರಿಸಲ್ಪಟ್ಟಿತು. ॥೬೧॥

ವಿದ್ವಾಂಸನೂ ಬ್ರಹ್ಮವನ್ನು ಹೊಂದುವುದಿಲ್ಲವೆಂಬ ಪ್ರಶ್ನೆಗೆ ಉತ್ತರವನ್ನು ತೈತ್ತರೀಯದಲ್ಲಿ ಹೀಗೆ ಹೇಳಿದೆ. "ಯ ಏವಂ ವಿದ್ವಾನ್" ಎಂದು ಆರಂಭಿಸಿ "ಏತಮಾನಂದಮಯಮಾತ್ಮಾನ ಮುಪಸಂಕ್ರಾಮತಿ" ಎಂದು, ಅದರ ಅರ್ಥವನ್ನು ಸಂಗ್ರಹಿಸುತ್ತಾನೆ. ಎಲೈ ಆಸ್ತಿಕರಾದ ದೇವತೆಗಳೇ, ಯಾವನಿಗೆ ಹಿಂದೆ ಹೇಳಿದ ಪ್ರಕಾರವಾಗಿ ನಿರತಿಶಯಾನಂದರೂಪವಾದ ಬ್ರಹ್ಮಪ್ರಾಪ್ತಿಯಿರುತ್ತದೆಯೋ ಅಂತಹ ಬ್ರಹ್ಮಜ್ಞಾನಿಯು ದೃಷ್ಟಾದೃಷ್ಟಸಮುಯರೂಪವಾದ ಪೃಥಿವ್ಯಂತರೂಪವಾದ ಲೋಕಗಳನ್ನು ತನ್ನ ಬುದ್ಧಿಯಿಂದ ಯುಕ್ತಿಪ್ರಮಾಣಗಳಿಂದ ಇವೆಲ್ಲವೂ ಅನಿತ್ಯವಾದುವುಗಳೆಂದು ನಿಶ್ಚಯಿಸುತ್ತಾನೆ. ಹಾಗೆ ಅನ್ನಮಯವೇ ಆತ್ಮವೆಂದು ತಿಳಿದು ಆಮೇಲೆ ಅದನ್ನೂ ಅನಾತ್ಮವೆಂದು ತಿಳಿದು, ಅದಕ್ಕೂ ಆಂತರವಾದ ಪ್ರಾಣಮಯಾದಿಗಳನ್ನು ಆರಂಭಿಸಿ, ಬಾಹ್ಯಕೋಶಗಳೆಲ್ಲವೂ ಅನಾತ್ಮವೆಂದು ನಿಶ್ಚಯಿಸಿ, ಪಂಚಕೋಶಗಳಿಗೂ ಆಂತರವಾಗಿಯೂ, ಸರ್ವಜಗತ್ತಿನ ಕಲ್ಪನೆಗೆ ಆಸ್ಪದವಾಗಿಯೂ, ಸತ್ಯಜ್ಞಾನಾನಂದೈಕರಸವಾಗಿಯೂ, "ಬ್ರಹ್ಮಪುಚ್ಛಂ ಪ್ರತಿಷ್ಠಾ" ಎಂಬ ಪುಚ್ಛವಾಕ್ಯದಲ್ಲಿ ಸರ್ವಾಧಾರನೆಂದು ನಿರ್ದಿಷ್ಟವಾದ ಬ್ರಹ್ಮನನ್ನು ಹೊಂದುತ್ತಾನೆ. ಎಂದರೆ ಸಾಧಕನಾದವನು ಪರಶಿವಾರ್ಪಣಬುದ್ಧಿಯಿಂದ ಯಜ್ಞಾದಿಗಳನ್ನು ಆಚರಿಸುತ್ತಾನೆ. ಅದರಿಂದ ಪರಮೇಶ್ವರನು ಸಂತುಷ್ಟನಾಗಲು ಅವನ ಅನುಗ್ರಹದಿಂದ ವಿದ್ಯೋದಯವಾಗುತ್ತದೆ. ಹಾಗೆ ವಿದ್ಯೋದಯವಾಗಲು ಭೇದಭ್ರಮಕ್ಕೆ ಹೇತುವಾದ ಅವಿದ್ಯೆಯು ತಾನಾಗಿ ನಷ್ಟವಾಗುತ್ತದೆ. ಬ್ರಹ್ಮವು ಸರ್ವಗತವಾಗಿ ನಿತ್ಯಪ್ರಾಪ್ತವಾಗಿದ್ದಾಗ್ಯೂ ಕಂಠದೇಶದಲ್ಲಿರತಕ್ಕ ಚಾಮೀಕರನ್ಯಾಯದಿಂದ ಬ್ರಹ್ಮವನ್ನು ಹೊಂದುತ್ತಾನೆ. ಒಟ್ಟಿನಲ್ಲಿ ವಿದ್ವಾಂಸನೇ ಬ್ರಹ್ಮವನ್ನು ಹೊಂದುತ್ತಾನೆಂದು ಪ್ರತಿಪಾದನೆ ಮಾಡಿದ್ದರಿಂದ ವಿದ್ವಾಂಸನಲ್ಲದವನು ಪಡೆಯುತ್ತಾನೆಯೋ? ಇಲ್ಲವೋ? ಎಂಬ ಪ್ರಶ್ನೆಯು ಹೋಗಲಾಡಿಸಲ್ಪಟ್ಟಿತು. ॥೬೩॥

ಯತೋ ವಾಚೋ ನಿವರ್ತಂತೇ ನಿಮಿತ್ತಾನಾಮಭಾವತಃ ।
ನಿರ್ವಿಶೇಷೇ ಶಿವೇ ಶಬ್ದಃ ಕಥಂ ದೇವಾಃ ಪ್ರವರ್ತತೇ ॥೬೪॥

ವಿಶೇಷಂ ಕಂಚಿದಾಶ್ರಿತ್ಯ ಖಲು ಶಬ್ದಃ ಪ್ರವರ್ತತೇ ।
ಯಸ್ಮಾದೇತನ್ಮನಃ ಸೂಕ್ಷ್ಮಂ ವ್ಯಾವೃತ್ತಂ ಸರ್ವಗೋಚರಂ ॥೬೫॥

ಈ ರೀತಿಯಲ್ಲಿ ಬ್ರಹ್ಮವೇದನಮಾತ್ರದಿಂದ ಬ್ರಹ್ಮಪ್ರಾಪ್ತಿಯಾಯಿತೆಂದು ತಿಳಿಯಿತು. ಜ್ಞಾನಮಾತ್ರದಿಂದ ಲಭ್ಯವಾದ ಬ್ರಹ್ಮವಿಷಯದಲ್ಲಿ "ಯತೋವಾಚೋ ನಿವರ್ತಂತೇ ಅಪ್ರಾಪ್ಯಮನಸಾ ಸಹ । ಆನಂದಂ ಬ್ರಹ್ಮಣೋ ವಿದ್ವಾನ್ । ನಬಿಭೇತಿ ಕುತಶ್ಚನ" ಎಂದು ತೈತ್ತರೀಯ ಶ್ರುತಿಯಲ್ಲಿ ಹೇಳಿದೆ. ಅದರ ಅರ್ಥವನ್ನು ಸಂಗ್ರಹಿಸುತ್ತಾನೆ. ಓ ದೇವತೆಗಳೇ, ಯಾವ ವಿಶೇಷವೂ ಇಲ್ಲದ ನಿರ್ವಿಶೇಷರೂಪವಾದ ಸಚ್ಚಿದಾನಂದಸ್ವರೂಪವಾದ ಬ್ರಹ್ಮನ ವಿಷಯದಲ್ಲಿ ಶಬ್ದಪ್ರವೃತ್ತಿನಿಮಿತ್ತಗಳಾದ ಜಾತಿ, ಕ್ರಿಯಾ, ನಾಮಗುಣಗಳಿಲ್ಲದುದರಿಂದ ಅದನ್ನು ಶಬ್ದದಿಂದ ವ್ಯವಹರಿಸಲು ಸಾಧ್ಯವಿಲ್ಲ. ಎಂದರೆ ಲಕ್ಷಣಾಮುಖದಿಂದ ತಿಳಿಯಬೇಕೇ ಹೊರತು ಅಭಿಧಾವೃತ್ತಿಯಿಂದ ಬ್ರಹ್ಮತತ್ವವನ್ನು ತಿಳಿಯಲು ಸಾಧ್ಯವಿಲ್ಲ. ॥೬೪॥

ಲೋಕದಲ್ಲಿ ಶಬ್ದಪ್ರವೃತ್ತಿಯಿರಬೇಕಾದರೆ ಯಾವುದಾದರೊಂದು ಜಾತ್ಯಾದಿ ಧರ್ಮವಿಶೇಷವಿರಬೇಕು. ಬ್ರಹ್ಮವು ಜಾತ್ಯಾದಿಧರ್ಮಶೂನ್ಯವಾದುದರಿಂದ ಅಲ್ಲಿ ಶಬ್ದವು ಹೇಗೆ ಪ್ರವರ್ತಿಸೀತು? ಸರ್ವೇಂದ್ರಿಯಗಳಿಗೂ ಸಹಕಾರಿಯಾಗಿರೋಣದರಿಂದ ಸರ್ವಗೋಚರವಾದ, ಸೂಕ್ಷ್ಮವಾದ ಮನಸ್ಸೆಂಬ ಅಂತಃಕರಣವೂ ಸಹ ಬ್ರಹ್ಮನನ್ನು ತಿಳಿಯಲಾರದು. ಹಾಗಾದರೆ ಬ್ರಹ್ಮವು ಮನಸ್ಸಿಗೂ, ವಾಕ್ಕಿಗೂ ಗೋಚರವಾಗದೇ ಇದ್ದುದರಿಂದ ಶಶವಿಷಾಣಾದಿಗಳಂತೆ ಅಸತ್ತಾಯಿತಲ್ಲ? ಎಂದರೆ ಹಾಗಲ್ಲ. ಅಭಿಧಾವೃತ್ತಿಯಿಂದ ತಿಳಿಯಲಶಕ್ಯವಾಗಿದ್ದಾಗ್ಯೂ ಲಕ್ಷಣಾವೃತ್ತಿಯಿಂದ ತಿಳಿಯಬಹುದು. ಆದುದರಿಂದ ಶ್ರುತಿಯೂ ಸಹ "ನೇತಿ ನೇತಿ" ಎಂಬ ನಿಷೇಧಮುಖದಿಂದ ಬ್ರಹ್ಮವನ್ನು ಸೂಚಿಸುತ್ತದೆ. ಮತ್ತು "ತಂ ತ್ವೌಪನಿಷದಂ ಪೃಚ್ಛಾಮಿ" ಎಂದು ಹೇಳಿದ್ದರಿಂದ ಉಪನಿಷದ್ರೂಪ ಪ್ರಮಾಣೈಕಗಮ್ಯವಾಗಿರುತ್ತದೆ. ಮತ್ತು ಶಾಸ್ತ್ರಾಚಾರ್ಯೋಪದೇಶಸಹಕೃತವಾದ ಸೂಕ್ಷ್ಮವಾದ ಮನಸ್ಸಿನಿಂದಲೂ ತಿಳಿಯಬಹುದು. "ಅತ ಏವ ಮನಸೈವೇದಮಾಪ್ತವ್ಯಂ" ಎಂದು ಶ್ರುತಿಯಲ್ಲಿ ಆಮ್ನಾತವಾಗಿದೆ. ಆದುದರಿಂದ ಬ್ರಹ್ಮವು ತುಚ್ಛವಾದ ಶಶಶೃಂಗಾದಿಗಳಂತೆ ಇರುವುದು ಅಲ್ಲವು. ॥೬೫॥

ಯಸ್ಮಾಚ್ಛ್ರೋತ್ರ ತ್ವಗಕ್ಷ್ಯಾದಿ ಖಾನಿ ಕರ್ಮೇಂದ್ರಿಯಾಣಿ ಚ ।
ನ್ಯಾವೃತ್ತಾನಿ ಪರಾಗ್ವಸ್ತು ವಿಷಯಾಣಿ ಸುರೋತ್ತಮಾಃ ॥೬೬॥

ತದ್ಬ್ರಹ್ಮಾಽನಂದ ಮದ್ವಂದ್ವಂ ನಿರ್ಗುಣಂ ಸತ್ಯಚಿದ್ಘನಂ ।
ವಿದಿತ್ವಾ ಸ್ವಾತ್ಮರೂಪೇಣ ನ ಬಿಭೇತಿ ಕುತಶ್ಚನ ॥೬೭॥

ಏವಂ ಯಸ್ತು ವಿಜಾನಾತಿ ಸ್ವಗುರೋರುಪದೇಶತಃ ।
ಸ ಸಾಧ್ವಸಾಧುಕರ್ಮಭ್ಯಾಂ ಸದಾ ನ ತಪತಿ ಪ್ರಭುಃ ॥೬೮॥

ತಪ್ಯ ತಾಪಕ ರೂಪೇಣ ವಿಭಾತಮಖಿಲಂ ಜಗತ್ ।
ಪ್ರತ್ಯಗಾತ್ಮತಯಾ ಭಾತಿ ಜ್ಞಾನಾದ್ವೇದಾಂತ ವಾಕ್ಯಜಾತ್ ॥೬೯॥

ದೇವೋತ್ತಮರೇ, ಮತ್ತು ಹೊರಗಿನ ವಿಷಯಗಳನ್ನೇ ತಿಳಿಯತಕ್ಕ ಚಕ್ಷುರಾದಿ ಜ್ಞಾನೇಂದ್ರಿಯಗಳೂ, ವಾಕ್ಪಾಣ್ಯಾದಿ ಕರ್ಮೇಂದ್ರಿಯಗಳೂ ಸಹ ಅಂತರಾತ್ಮನನ್ನು ಹೇಗೆ ತಿಳಿಸಿಯಾವು? ಈ ಅಭಿಪ್ರಾಯದಿಂದ "ಪರಾಂಚಿಖಾನಿವ್ಯತೃಣತ್ ಸ್ವಯಂಭೂಃ" ೪. ೧. ಎಂಬುದಾಗಿ ಕಾಠಕೋಪನಿಷತ್ತಿನಲ್ಲಿ ಆತ್ಮನು ಇಂದ್ರಿಯಾಗೋಚರನೆಂದು ಹೇಳಿದೆ. ॥೬೬॥

ಈ ರೀತಿಯಾಗಿ ವಾಙ್ಮನಸಾತೀತವಾಗಿಯೂ, ಅದ್ವಿತೀಯವಾಗಿಯೂ, ಶೀತೋಷ್ಣಸುಖದುಃಖಾದಿ ಸಕಲ ದ್ವಂದ್ವಶೂನ್ಯವಾಗಿಯೂ, ನಿರ್ಗುಣವಾಗಿಯೂ, ಸತ್ಯಜ್ಞಾನಾನಂದೈಕರಸವಾಗಿಯೂ, ಇರತಕ್ಕ ಬ್ರಹ್ಮಸ್ವರೂಪವನ್ನು ಸಾಕ್ಷಾತ್ತಾಗಿ ತನ್ನಿಂದಲೇ "ಅಹಂ ಬ್ರಹ್ಮಾಸ್ಮಿ" ಎಂದು ಯಾವ ಮಹಾತ್ಮನು ತಿಳಿಯುತ್ತಾನೆಯೋ ಅವನು ಯಾವುದರಿಂದಲೂ ಭಯಪಡುವುದಿಲ್ಲ. ಏಕೆಂದರೆ, ಅವನಿಗೆ ಸಕಲವೂ ಆತ್ಮವಾಗಿ ತೋರುವುದರಿಂದ, ಭಯಕ್ಕೆ ಕಾರಣವಾದ ದ್ವಿತೀಯ ವಸ್ತುವು ಇಲ್ಲದಿರುವುದರಿಂದ ಅವನಿಗೆ ಭಯವಿಲ್ಲ. "ದ್ವಿತೀಯಾದ್ವೈ ಭಯಂ ಭವತಿ" ಎಂಬ ಬೃ. ಉ. ೧.೪.೨. ಉಕ್ತಿಯೂ ಇದೇ ಅಭಿಪ್ರಾಯವನ್ನು ಸೂಚಿಸುತ್ತದೆ. ॥೬೭॥

ತಪ್ತಿಕ್ರಿಯಾವಿಷಯವಾಗಿದ್ದ ಭೋಗ್ಯಭೋಕ್ತೃಪ್ರಪಂಚವೂ, ತಾಪಕವಾಗಿದ್ದ ಪುಣ್ಯಪಾಪಗಳೆಂಬ ಸಾಧ್ವಸಾಧುಕರ್ಮಗಳೂ ಸಹ ವೇದಾಂತವಾಕ್ಯಗಳಿಂದ ಉಂಟಾದ ಜ್ಞಾನದಿಂದ ತನ್ನ ಆತ್ಮಸ್ವರೂಪವಾಗಿ ತೋರುತ್ತವೆ. ॥೬೮-೬೯॥

ಕರ್ತಾ ಕಾರಯಿತಾ ಕರ್ಮ ಕರಣಂ ಕಾರ್ಯಮಾಸ್ತಿಕಾಃ ।
ಸರ್ವ ಮಾತ್ಮತಯಾ ಭಾತಿ ಪ್ರಸಾದಾತ್ಪರಮೇಶ್ವರಾತ್ ॥೭೦॥

ಪ್ರಮಾತಾ ಚ ಪ್ರಮಾಣಂ ಚ ಪ್ರಮೇಯಂ ಪ್ರಮಿತಿಸ್ತಥಾ ।
ಸರ್ವಮಾತ್ಮತಯಾ ಭಾತಿ ಪ್ರಸಾದಾತ್ಪರಮೇಶ್ವರಾತ್ ॥೭೧॥

ನಿಯೋಜ್ಯಶ್ಚ ನಿಯೋಗಶ್ಚ ಸಾಧನಾನಿ ನಿಯೋಜಕಃ ।
ಸರ್ವ ಮಾತ್ಮತಯಾ ಭಾತಿ ಪ್ರಸಾದಾತ್ಪರಮೇಶ್ವರಾತ್ ॥೭೨॥

ಭೋಕ್ತಾ ಭೋಜಯಿತಾ ಭೋಗೋ ಭೋಗೋಪಕರಣಾನಿ ಚ ।
ಸರ್ವ ಮಾತ್ಮತಯಾ ಭಾತಿ ಪ್ರಸಾದಾತ್ಪರಮೇಶ್ವರಾತ್ ॥೭೩॥

ಗ್ರಾಹಕಶ್ಚ ತಥಾ ಗ್ರಾಹ್ಯಂ ಗ್ರಹಣಂ ಸರ್ವತೋಮುಖಂ ।
ಸರ್ವ ಮಾತ್ಮತಯಾ ಭಾತಿ ಪ್ರಸಾದಾತ್ಪರಮೇಶ್ವರಾತ್ ॥೭೪॥

ಅನ್ಯಥಾ ಜ್ಞಾನ ಮಜ್ಞಾನಂ ಸಂಶಯ ಜ್ಞಾನ ಮೇವ ಚ ।
ಸರ್ವ ಮಾತ್ಮತಯಾ ಭಾತಿ ಪ್ರಸಾದಾತ್ಪರಮೇಶ್ವರಾತ್ ॥೭೫॥

ಎಲೈ ಆಸ್ತಿಕರಾದ ದೇವತೆಗಳೇ, ಕೆಲಸವನ್ನು ಮಾಡುವವನು, ಮಾಡಿಸತಕ್ಕವನು. ಅದಕ್ಕೆ ಸಾಧನ, ಕೆಲಸ, ಇವು ಸಮಸ್ತವೂ ಜ್ಞಾನಿಗೆ ಪರಮೇಶ್ವರನ ಅನುಗ್ರಹದಿಂದ ಆತ್ಮರೂಪವಾಗಿ ಸರ್ವದಾ ತೋರುತ್ತವೆ. ॥೭೦॥

ಪ್ರಮಾಣಗಳಿಂದ ಜ್ಞಾನವನ್ನು ಉಂಟುಮಾಡಿಕೊಳ್ಳುವವನೂ, ಜ್ಞಾನಕ್ಕೆ ಸಾಧನವೂ, ಜ್ಞಾನಕ್ಕೆ ವಿಷಯವಾದುದೂ, ಜ್ಞಾನವೂ, ಅಪ್ಪಣೆಯನ್ನು ಹೊಂದಿದವನೂ, ಅಪ್ಪಣೆಯೂ ಆ ಕರ್ಮಸಾಧನಗಳೂ, ಅಪ್ಪಣೆಮಾಡುವವನೂ, ಇವು ಸರ್ವವೂ, ಪರಮಾತ್ಮನ ಪ್ರಸಾದದಿಂದ ಆತ್ಮಸ್ವರೂಪವಾಗಿ ತೋರುತ್ತವೆ. ॥೭೧-೭೨॥

ಸುಖದುಃಖಗಳನ್ನು ಅನುಭವಿಸುವವನೂ, ಅವುಗಳನ್ನು ಅನುಭವಿಸುವಂತೆ ಮಾಡುವವನೂ, ಸುಖದುಃಖರೂಪಗಳ ಭೋಗವೂ, ಆ ಭೋಗಸಾಧನಗಳೂ, ಜ್ಞಾನವಿಷಯವಾದದ್ದೂ, ಜ್ಞಾನವನ್ನುಂಟುಮಾಡಿಕೊಳ್ಳುವವನೂ, ನಾನಾವಿಧವಾದ ಜ್ಞಾನವೂ, ಭ್ರಾಂತ್ಯಾತ್ಮಕವಾದ ಜ್ಞಾನವೂ, ಅಜ್ಞಾನವೂ, ಸಂಶಯಜ್ಞಾನವೂ, ಇವೆಲ್ಲವೂ ಬ್ರಹ್ಮಾತ್ಮೈಕ್ಯದ ಜ್ಞಾನಿಗೆ ಪರಮೇಶ್ವರನ ಅನುಗ್ರಹದಿಂದ ಆತ್ಮಸ್ವರೂಪವಾಗಿ ಕಾಣುತ್ತವೆ. ॥೭೩-೭೪-೭೫॥

ಘಟ ಜ್ಞಾನಂ ಪಟ ಜ್ಞಾನಂ ಕುಡ್ಯಾದಿ ಜ್ಞಾನಮೇವ ಚ ।
ಸರ್ವ ಮಾತ್ಮತಯಾ ಭಾತಿ ಪ್ರಸಾದಾತ್ಪಾರಮೇಶ್ವರಾತ್ ॥೨೬॥

ಘಟಂ ಕುಡ್ಯಂ ಕುಸೂಲಂಚ ಪಟಃ ಪಾತ್ರಂಚ ಪರ್ವತಃ ।
ಸರ್ವ ಮಾತ್ಮತಯಾ ಭಾತಿ ಪ್ರಸಾದಾತ್ಪಾರಮೇಶ್ವರಾತ್ ॥೨೭॥

ಪಾತಾಲಾದ್ಯಾಶ್ಚ ಲೋಕಾಶ್ಚ ಸತ್ಯಲೋಕಾದಯೋಽಪಿಚ ।
ಸರ್ವ ಮಾತ್ಮತಯಾ ಭಾತಿ ಪ್ರಸಾದಾತ್ಪಾರಮೇಶ್ವರಾತ್ ॥೨೮॥

ಬ್ರಹ್ಮಾಂಡಂ ತತ್ರ ಕ್ಲ್ಪಸ್ತಾನಾ ಮಂಡಾನಾಂ ಶತಕೋಟಯಃ ।
ಸರ್ವ ಮಾತ್ಮತಯಾ ಭಾತಿ ಪ್ರಸಾದಾತ್ಪಾರಮೇಶ್ವರಾತ್ ॥೨೯॥

ಸಮುದ್ರಾಶ್ಚ ತಟಾಕಾಶ್ಚ ನದ್ಯಃ ಸರ್ವ ನದಾ ಅಪಿ ।
ಸರ್ವ ಮಾತ್ಮತಯಾ ಭಾತಿ ಪ್ರಸಾದಾತ್ಪಾರಮೇಶ್ವರಾತ್ ॥೩೦॥

ಮೇರು ಮಂದರ ಪೂರ್ವಾಶ್ಚ ಪರ್ವತಾಶ್ಚ ಮಹತ್ತರಾಃ ।
ಸರ್ವ ಮಾತ್ಮತಯಾ ಭಾತಿ ಪ್ರಸಾದಾತ್ಪಾರಮೇಶ್ವರಾತ್ ॥೩೧॥

ವನಾನಿ ವನದೇಶಾಶ್ಚ ವನ್ಯಾನಿ ವಿವಿಧಾನಿ ಚ ।
ಸರ್ವ ಮಾತ್ಮತಯಾ ಭಾತಿ ಪ್ರಸಾದಾತ್ಪಾರಮೇಶ್ವರಾತ್ ॥೩೨॥

ಇದು ಘಟವೆಂಬ ಜ್ಞಾನವೂ, ಇದು ವಸ್ತ್ರವೆಂಬ ಜ್ಞಾನವೂ, ಇದು ಗೋಡೆಯೆಂಬ ಜ್ಞಾನವೂ, ಘಟ, ಗೋಡೆ ಪಟ, ಪಾತ್ರೆ, ಕಣಜ, ಪರ್ವತ, ಇವೆಲ್ಲವೂ, ಪಾತಾಳಲೋಕ, ಮೊದಲ್ಗೊಂಡು ಸತ್ಯಾದಿ ಚತುರ್ದಶಲೋಕಗಳೂ, ಸಮಸ್ತ ಬ್ರಹ್ಮಾಂಡವೂ, ಅದರಲ್ಲಿರತಕ್ಕ ಶತಕೋಟಿಸಂಖ್ಯಾಕವಾದ ಅಂಡಗಳೂ, ಸಮುದ್ರಗಳೂ, ಕೊಳಗಳೂ, ನದಿಗಳೂ, ಸಮಸ್ತವಾದ ನದ (ಗಂಡುನದಿ)ಗಳೂ, ಮೇರು, ಮಂದರ, ಹಿಮಾಲಯ ಮುಂತಾದ ಮಹಾಪರ್ವತಗಳೂ, ಇವೆಲ್ಲವೂ ಈಶ್ವರಾನುಗ್ರಹದಿಂದ ಜ್ಞಾನಿಗೆ ಆತ್ಮಸ್ವರೂಪವಾಗಿ ಪ್ರಕಾಶಿಸುತ್ತವೆ. ॥೨೬-೨೭-೨೮-೨೯-೩೦-೩೧॥

ಅರಣ್ಯಗಳೂ, ಅರಣ್ಯಪ್ರದೇಶಗಳೂ, ನಾನಾವಿಧವಾದ ಅರಣ್ಯದಲ್ಲಿ ಹುಟ್ಟಿದ ವಸ್ತುಗಳೂ, ನಾನಾವಿಧವಾದ ವೃಕ್ಷಗಳೂ, ಸಣ್ಣ ಸಣ್ಣ ಹುಲ್ಲು, ಕುರುಚಲುಗಿಡಗಳ

ವೃಕ್ಷಾಶ್ಚ ವಿವಿಧಾಃ ಕ್ಷುದ್ರತೃಣ ಗುಲ್ಮಾದಯೋಽಪಿಚ ।
ಸರ್ವ ಮಾತ್ಮತಯಾ ಭಾತಿ ಪ್ರಸಾದಾತ್ಪಾರಮೇಶ್ವರಾತ್ ॥೮೩॥

ಆಕಾಶಾದೀನಿ ಭೂತಾನಿ ಭೌತಿಕಾ ನ್ಯಖಿಲಾನ್ಯಪಿ ।
ಸರ್ವ ಮಾತ್ಮತಯಾ ಭಾತಿ ಪ್ರಸಾದಾತ್ಪಾರಮೇಶ್ವರಾತ್ ॥೮೪॥

ಶಬ್ದ ಸ್ಪರ್ಶಾದಿ ತನ್ಮಾತ್ರ ರೂಪಾಣಿ ಸಕಲಾನಿ ಚ ।
ಸರ್ವ ಮಾತ್ಮತಯಾ ಭಾತಿ ಪ್ರಸಾದಾತ್ಪಾರಮೇಶ್ವರಾತ್ ॥೮೫॥

ಕ್ರಿಮಿ ಕೀಟ ಪತಂಗಾಶ್ಚ ಕ್ಷುದ್ರಾ ಅಪಿ ಚ ಜಂತವಃ ।
ಸರ್ವ ಮಾತ್ಮತಯಾ ಭಾತಿ ಪ್ರಸಾದಾತ್ಪಾರಮೇಶ್ವರಾತ್ ॥೮೬॥

ಪಶವಶ್ಚ ಮೃಗಾಶ್ಚೈವ ಪನ್ನಗಾಃ ಪಾಪಯೋನಯಃ ।
ಸರ್ವ ಮಾತ್ಮತಯಾ ಭಾತಿ ಪ್ರಸಾದಾತ್ಪರಮೇಶ್ವರಾತ್ ॥೮೭॥

ಮನುಷ್ಯಾಶ್ಚೈವ ಮಾತಂಗಾ ಅಶ್ವಾ ಉಷ್ಟ್ರಾಃ ಖರಾ ಅಪಿ ।
ಸರ್ವ ಮಾತ್ಮತಯಾ ಭಾತಿ ಪ್ರಸಾದಾತ್ಪಾರಮೇಶ್ವರಾತ್ ॥೮೮॥

ಯಕ್ಷ ರಾಕ್ಷಸ ಗಂಧರ್ವ ಪ್ರಮುಖಾಃ ಸಿದ್ಧ ಕಿನ್ನರಾಃ ।
ಸರ್ವ ಮಾತ್ಮತಯಾ ಭಾತಿ ಪ್ರಸಾದಾತ್ಪಾರಮೇಶ್ವರಾತ್ ॥೮೯॥

ಕರ್ಮ ದೇವಾಶ್ಚ ದೇವಾಶ್ಚ ದೇವರಾಜೋಽ ವಿರಾಟ್ ಸ್ವರಾಟ್ ।
ಸರ್ವ ಮಾತ್ಮತಯಾ ಭಾತಿ ಪ್ರಸಾದಾತ್ಪಾರಮೇಶ್ವರಾತ್ ॥೯೦॥

ಸಮುದಾಯ ಮೊದಲಾದವುಗಳೂ, ಆಕಾಶವೇ ಮುಂತಾದ ಮಹಾಭೂತಗಳೂ, ಅವುಗಳಿಂದುಂಟಾದ ಸಮಸ್ತಪದಾರ್ಥಗಳೂ, ಶಬ್ದಸ್ಪರ್ಶಾದಿಗಳೂ ಮತ್ತು ಅವುಗಳ ಸೂಕ್ಷ್ಮಭಾಗಗಳೂ, ಇವೆಲ್ಲವೂ ಪರಶಿವನ ಅನುಗ್ರಹದಿಂದ ಬ್ರಹ್ಮಾತ್ಮೈಕ್ಯದ ಸಾಕ್ಷಾತ್ಕಾರವುಳ್ಳಜ್ಞಾನಿಗೆ ಆತ್ಮಭೂತವಾಗಿ ತೋರುತ್ತವೆ. ||೮೨-೮೩-೮೪-೮೫||

ಹುಳ ಹುಪ್ಪಟೆಗಳೂ, ಪಕ್ಷಿಗಳೂ, ಇನ್ನೂ ಕ್ಷುದ್ರವಾದ ಕೆಲವು ಜಂತುಗಳೂ, ಗ್ರಾಮವಾಸಿಗಳಾದ ಹಸುವೇ ಮುಂತಾದ ಪಶುಗಳೂ, ಅರಣ್ಯವಾಸಿಗಳಾದ ಹುಲಿ, ಸಿಂಹ ಮುಂತಾದ ಮೃಗಗಳೂ, ಯಕ್ಷ, ರಾಕ್ಷಸ, ಗಂಧರ್ವರೇ ಮೊದಲಾದವರೂ, ಸಿದ್ಧರೂ, ಕಿನ್ನರರೂ, ಮನುಷ್ಯರೂ, ಆನೆಗಳೂ, ಕುದುರೆಗಳೂ, ಒಂಟೆಗಳೂ,

ಅಹಂ ಚ ಮದ್ವಿಭೂತಿಶ್ಚ ವಿಷ್ಣುಭಕ್ತಾಶ್ಚ ದೇಹಿನಃ ।
ಸರ್ವ ಮಾತ್ಮತಯಾ ಭಾತಿ ಪ್ರಸಾದಾತ್ಪಾರಮೇಶ್ವರಾತ್ ॥೯೧॥

ವಿಷ್ಣು ರ್ವಿಷ್ಣು ವಿಭೂತಿಶ್ಚ ವಿಷ್ಣುಭಕ್ತಾಶ್ಚ ದೇಹಿನಃ ।
ಸರ್ವ ಮಾತ್ಮತಯಾ ಭಾತಿ ಪ್ರಸಾದಾತ್ಪಾರಮೇಶ್ವರಾತ್ ॥೯೨॥

ರುದ್ರೋ ರುದ್ರ ವಿಭೂತಿಶ್ಚ ರುದ್ರ ಭಕ್ತಾಶ್ಚ ದೇಹಿನಃ ।
ಸರ್ವ ಮಾತ್ಮತಯಾ ಭಾತಿ ಪ್ರಸಾದಾತ್ಪಾರಮೇಶ್ವರಾತ್ ॥೯೩॥

ಈಶ್ವರ ಸ್ತ ದ್ವಿಭೂತಿಶ್ಚ ತದೀಯಾಃ ಸರ್ವದೇಹಿನಃ ।
ಸರ್ವ ಮಾತ್ಮತಯಾ ಭಾತಿ ಪ್ರಸಾದಾತ್ಪಾರಮೇಶ್ವರಾತ್ ॥೯೪॥

ಸದಾಶಿವ ಸಮಾಖ್ಯಸ್ತು ಶಿವಸ್ತಸ್ಯ ವಿಭೂತಯಃ ।
ಸರ್ವ ಮಾತ್ಮತಯಾ ಭಾತಿ ಪ್ರಸಾದಾತ್ಪಾರಮೇಶ್ವರಾತ್ ॥೯೫॥

ದಿಶಶ್ಚ ವಿದಿಶಶ್ಚೈವ ಸಾಭ್ರಂ ನಕ್ಷತ್ರಮಂಡಲಂ ।
ಸರ್ವ ಮಾತ್ಮತಯಾ ಭಾತಿ ಪ್ರಸಾದಾತ್ಪಾರಮೇಶ್ವರಾತ್ ॥೯೬॥

ವಾಸುದೇವಃ ಸಂಕರ್ಷಣಃ ಪ್ರದ್ಯುಮ್ನಶ್ಚಾ ನಿರುದ್ಧಕಃ ।
ಸರ್ವ ಮಾತ್ಮತಯಾ ಭಾತಿ ಪ್ರಸಾದಾತ್ಪಾರಮೇಶ್ವರಾತ್ ॥೯೭॥

ಕರ್ತೃಗಳೂ, ಕರ್ಮದಿಂದ ದೇವತ್ವವನ್ನು ಹೊಂದಿದ ಕರ್ಮದೇವತೆಗಳೂ, ಇಂದ್ರಾದಿ ದೇವತೆಗಳೂ, ದೇವರಾಜನಾದ ಇಂದ್ರನೂ, ವಿರಾಟ್ಪುರುಷನೂ, ರಾಜನೂ, ಇವೆಲ್ಲವೂ ಕೂಡ ಪರಮಾತ್ಮನ ಅನುಗ್ರಹದಿಂದ ಜ್ಞಾನಿಗೆ ಆತ್ಮರೂಪವಾಗಿ ತೋರುತ್ತವೆ. ॥೮೬-೮೭-೮೮-೮೯-೯೦॥

ನಾನೂ (ಬ್ರಹ್ಮನು) ನನ್ನ ಮಹಿಮೆಯೂ, ನನ್ನ ಭಕ್ತರೂ, ವಿಷ್ಣುವೂ, ಅವನ ಭಕ್ತರೂ, ಅವನ ಮಹಿಮೆಯೂ, ರುದ್ರನೂ, ಅವನ ಮಾಹಾತ್ಮ್ಯವೂ, ಅವನ ಭಕ್ತರೂ, ಈಶ್ವರನೂ, ಅವನ ಮಹಿಮೆಯೂ, ಅವನ ಸಕಲ ಭಕ್ತರೂ, ಸದಾಶಿವನೆಂಬ ಪರಶಿವನೂ, ಅವನ ಮಹಿಮೆಯೂ, ಅವನ ಭಕ್ತರೂ, ಈ ಸಮಸ್ತವೂ ಜ್ಞಾನಿಗೆ ಆತ್ಮಸ್ವರೂಪವಾಗಿ ತೋರುತ್ತದೆ. ॥೯೧-೯೨-೯೩-೯೪-೯೫॥

ದಿಕ್ಕುಗಳೂ, ಮತ್ತು ವಿದಿಕ್ಕುಗಳೂ, ಮೇಘಸಹಿತವಾದ ನಕ್ಷತ್ರಮಂಡಲವೂ ವಾಸುದೇವ, ಸಂಕರ್ಷಣ, ಅನಿರುದ್ಧಪ್ರದ್ಯುಮ್ನರೆಂಬ ಭಗವಂತನ ಅವತಾರ ವಿಶೇಷ

ಮತ್ಸ್ಯಃ ಕೂರ್ಮೋ ವರಾಹಶ್ಚ ನಾರಸಿಂಹೋಽಥ ವಾಮನಃ ।
ತದ್ಭಕ್ತಾಶ್ಚ ತಥಾ ಭಾತಿ ಪ್ರಸಾದಾತ್ಪಾರಮೇಶ್ವರಾತ್ ॥೯೮॥

ಆಶ್ರಮಾಶ್ಚ ತಥಾ ವರ್ಣಾಃ ಸಂಕರಾ ವಿವಿಧಾ ಅಪಿ ।
ಸರ್ವ ಮಾತ್ಮತಯಾ ಭಾತಿ ಪ್ರಸಾದಾತ್ಪಾರಮೇಶ್ವರಾತ್ ॥೯೯॥

ನಿಷಿದ್ಧಂ ಚಾನಿಷಿದ್ಧಂ ನಿಷೇಧಾ ದಥಯೋಽಪಿ ಚ ।
ಸರ್ವ ಮಾತ್ಮತಯಾ ಭಾತಿ ಪ್ರಸಾದಾತ್ಪಾರಮೇಶ್ವರಾತ್ ॥೧೦೦॥

ಶರೀರಮಿಂದ್ರಿಯಂ ಪ್ರಾಣೋ ಮನೋಬುದ್ಧಿರಹಂಕೃತಿಃ ।
ಸರ್ವ ಮಾತ್ಮತಯಾ ಭಾತಿ ಪ್ರಸಾದಾತ್ಪಾರಮೇಶ್ವರಾತ್ ॥೧೦೧॥

ಕಾಮ ಕ್ರೋಧಾದಯಃ ಸರ್ವೇ ತಥಾ ಶಾಂತ್ಯಾದಯೋಽಪಿ ಚ ।
ಸರ್ವ ಮಾತ್ಮತಯಾ ಭಾತಿ ಪ್ರಸಾದಾತ್ಪಾರಮೇಶ್ವರಾತ್ ॥೧೦೨॥

ಜೀವಾತ್ಮಾ ಪರಮಾತ್ಮಾಚ ತಯೋರ್ಭೇದಶ್ಚ ಭೇದಕಃ ।
ಸರ್ವ ಮಾತ್ಮತಯಾ ಭಾತಿ ಪ್ರಸಾದಾತ್ಪಾರಮೇಶ್ವರಾತ್ ॥೧೦೪॥

ಅಸ್ತಿ ಶಬ್ದೋದಿತಾ ಅರ್ಥಾ ನಾಸ್ತಿ ಶಬ್ದೋದಿತಾ ಅಪಿ ।
ಸರ್ವ ಮಾತ್ಮತಯಾ ಭಾತಿ ಪ್ರಸಾದಾತ್ಪಾರಮೇಶ್ವರಾತ್ ॥೧೦೫॥

ಗಳೂ, ಭಗವಂತನ ಅವತಾರಮೂರ್ತಿಗಳಾದ ಮತ್ಸ್ಯ, ಕೂರ್ಮ, ವರಾಹ, ನರಸಿಹ್ಮ ಮುಂತಾದವರೂ, ಇವರ ಭಕ್ತರೂ, ಬ್ರಹ್ಮಚರ್ಯಾದ್ಯಾಶ್ರಮಗಳೂ, ಬ್ರಾಹ್ಮಣಾದಿ ವರ್ಣಗಳೂ, ನಿಷಾದಾದಿ ಸಂಕರಜಾತಿಯವರೂ, ನಿಷಿದ್ಧವಾದ ಮತ್ತು ನಿಷಿದ್ಧವಲ್ಲದ ವಸ್ತುಗಳೂ, ನಿಷೇಧವೂ, ವಿಧಿಗಳೂ, ಇವೆಲ್ಲವೂ ಪರಬ್ರಹ್ಮನ ಅನುಗ್ರಹದಿಂದ ಬ್ರಹ್ಮಾತ್ಮೈಕ್ಯಸಾಕ್ಷಾತ್ಕಾರವುಳ್ಳ ಜ್ಞಾನಿಗೆ ಆತ್ಮಸ್ವರೂಪವಾಗಿ ತೋರುತ್ತವೆ. ॥೯೬-೯೭-೯೮-೯೯-೧೦೦॥

ಶರೀರ, ಇಂದ್ರಿಯ, ಪ್ರಾಣ, ಮನಸ್ಸು, ಬುದ್ಧಿ, ಅಹಂಕಾರ, ಕಾಮ, ಕ್ರೋಧ, ಲೋಭ, ಮೋಹ, ಮದ, ಮಾತ್ಸರ್ಯಗಳೆಂಬ ಅರಿಷಡ್ವರ್ಗಗಳೂ, ಶಾಂತ್ಯಾದಿಗಳೂ, ಜೀವನೂ, ಪರಮಾತ್ಮನೂ, ಅವರ ಭೇದವೂ, ಅಭೇದವನ್ನುಂಟುಮಾಡುವುದೂ, ಜಡಶಕ್ತಿವಿಶೇಷಗಳೂ, ಚಿಚ್ಛಕ್ತಿಗಳೂ, ಅಸ್ತಿ ನಾಸ್ತಿ ಎಂಬ ಶಬ್ದದಿಂದ ವ್ಯವಹರಿಸಲ್ಪಡುವ ಪದಾರ್ಥಗಳೂ, ಇವೆಲ್ಲವೂ ಪರಶಿವನ ಅನುಗ್ರಹದಿಂದ ಆತ್ಮಸ್ವರೂಪವಾಗಿ

ಆತ್ಮಾ ನಾಮ ಸುರಾಃ ಸ್ವೇನ ಭಾಸಾ ಯೋ ಭಾತಿ ಸಂತತಂ ।
ತನೋವ ತಮಹಂ ಶಬ್ದ ಪ್ರತ್ಯಯಾಭ್ಯಾಂ ತು ಜಂತವಃ ॥೧೦೬॥

ವ್ಯವಹಾರೇ ವಿಜಾನಂತಿ ನ ಜಾನಂತ್ಯೇವ ತೇಽರ್ಥತಃ ।
ಅರ್ಥತಶ್ಚಾಸ್ಯ ವೇತ್ತಾರೋ ನ ವಿದ್ಯಂತೇಽದ್ವಯತ್ವತಃ ॥೧೦೭॥

ಏವಮಾತ್ಮಾನ ಮುದ್ವೈತ ಮಾತ್ಮನಾ ವೇದ ಯಃ ಸ್ಥಿರಂ ।
ಸೋಽಯಮರ್ಥ ಮಿದಂ ನಿತ್ಯಂ ಗಾಯನ್ನಾಸ್ತೇ ಸ್ವಭಾವತಃ॥೧೦೮॥

ತೋರುತ್ತದೆ. ಒಟ್ಟನಲ್ಲಿ ಸಮಸ್ತ ಪ್ರಪಂಚವೂ ಬ್ರಹ್ಮಸ್ವರೂಪದಲ್ಲಿ ಕಲ್ಪಿತವಾದುದ ರಿಂದ, ಕಲ್ಪಿತವಾದದ್ದು ಅಧಿಷ್ಠಾನಕ್ಕಿಂತಲೂ ಬೇರೆಯಾದ ಸತ್ತಾಶೂನ್ಯವಾದುದರಿಂದ, ಬ್ರಹ್ಮಜ್ಞಾನಿಗೆ ಬ್ರಹ್ಮಸತ್ತೆಯೊಂದೇ, ಸದ್ರೂಪಬ್ರಹ್ಮವೇ ತೋರುತ್ತದೆ. ಎಂದು ಈ ಶ್ಲೋಕಗಳ ಅಭಿಪ್ರಾಯವನ್ನು ತಿಳಿದುಕೊಳ್ಳಬೇಕು.॥೧೦೧-೧೦೨-೧೦೩-೧೦೪-೧೦೫॥

ಬ್ರಹ್ಮಜ್ಞಾನಿಗೆ ಸರ್ವವೂ ಆತ್ಮರೂಪವಾಗಿ ತೋರಿದರೆ ಆತ್ಮನು ಸವಿಶೇಷ ನೆಂಬ ಶಂಕೆಯನ್ನು ಹೋಗಲಾಡಿಸುತ್ತಾನೆ. ಎಲೈ ಸುರರೇ, ಆತ್ಮವು ಯಾವಾಗಲೂ ತನ್ನ ಜ್ಯೋತಿಯಿಂದಲೇ ಪ್ರಕಾಶಿಸುತ್ತದೆ. ಸಮಸ್ತ ಜಗತ್ತೂ ಸಹ ಆತ್ಮನಲ್ಲಿ, ಶುಕ್ತಿ ಯಲ್ಲಿ ರಜತವು ಅಧ್ಯಸ್ತವಾದಂತೆ, ಅಧ್ಯಸ್ತವಾಗಿದೆ. ಈ ಆತ್ಮನನ್ನೇ ಸರ್ವರೂ ನೀನು ನಾನು, ಎಂಬ ಶಬ್ದದಿಂದಲೂ, ಪ್ರತ್ಯಯದಿಂದಲೂ ವ್ಯವಹಾರಮಾಡುತ್ತಾರೆಯೇ ಹೊರತು ಸ್ವರೂಪವನ್ನು ಯಾರೂ ತಿಳಿಯುವುದಿಲ್ಲ. ಅದ್ವಿತೀಯವಾದದ್ದೇ ಆತ್ಮ ಸ್ವರೂಪವು. ಇದನ್ನು ತತ್ವತಃ ಯಾರೂ ತಿಳಿಯುವುದಿಲ್ಲ. ಆದುದರಿಂದ ಆತ್ಮವು ನಿರಸ್ತವಾದ ಸಮಸ್ತ ಉಪಾಧಿಯುಳ್ಳದ್ದಾಗಿಯೂ, ಚಿನ್ಮಾತ್ರಸ್ವರೂಪವುಳ್ಳದ್ದಾಗಿಯೂ, ಅದ್ವಿತೀಯವಾಗಿಯೂ, ಜಡಪ್ರಪಂಚಕ್ಕೆ ಸಾಕ್ಷಿಯಾಗಿಯೂ ಇದೆ. ತೋರುವ ಪ್ರಪಂ ಚವು ಮಾಯಾಕಲ್ಪಿತವಾದುದರಿಂದ ಬ್ರಹ್ಮವು ವಾಸ್ತವವಾಗಿ ಸವಿಶೇಷವಾಗಿಲ್ಲವು. ॥೧೦೬-೧೦೭॥

ವಿದ್ವಾಂಸನು ಹೇಗೆ ಬ್ರಹ್ಮವನ್ನು ತಿಳಿಯುತ್ತಾನೆಂದರೆ—ಶ್ರವಣಾದಿ ಸಾಧನ ದಿಂದ ಜನಿತವಾದ ನಿರಸ್ತವಾದ ಸಮಸ್ತೋಪಾಧಿಕವಾದ ಬ್ರಹ್ಮಾತ್ಮವಿಷಯಕವಾದ ಮನೋವೃತ್ತಿಯಿಂದ ಆವರಣರೂಪವಾದ ಅಜ್ಞಾನವು ಹೋಗಲು, ಅದ್ವಿತೀಯವಾದ ಆತ್ಮಸ್ವರೂಪವನ್ನು ಸ್ವರೂಪ ಪ್ರಕಾಶದಿಂದಲೇ ಸಾಕ್ಷಾತ್ಕರಿಸಿ ಅನುಭವಿಸುತ್ತಾನೆ. ॥೧೦೮॥

ಯಥಾ ನರ್ತನ ಮೀಶಸ್ಯ ಸ್ವಭಾವಾ ಲ್ಲೋಕರಕ್ಷಕಂ ।
ತಥಾ ವಿದ್ಯಾ ವಿನೋದಾಽಖ್ಯಾ ಗೀತಿರ್ಲೋಕೋಪಕಾರಿಣೀ ॥೧೦೯॥

ಯಥೈವಾದಿ ಗುರೋರ್ಗೀತಿ ರ್ಲೋಕಾನಾಂ ಹಿತಕಾರಿಣೀ ।
ತಥೈವಾಸ್ಯ ಗುರೋರ್ಗೀತಿ ರ್ಲೋಕಾನಾಂ ಹಿತಕಾಮ್ಯಯಾ॥೧೧೦॥

ಆಪ್ತಕಾಮಸ್ಯ ರುದ್ರಸ್ಯ ಗೀತಿರ್ವ್ಯಾಖ್ಯಾನ ಲಕ್ಷಣಾ ।
ಪರೋಪಕಾರಿಣೀ ತದ್ವದ್ಗೀತಿರಸ್ಯಾಪಿ ಸದ್ಗುರೋಃ ॥೧೧೧॥

ಲೌಕಿಕೇಷ್ವಪಿ ಗಾನೇಷು ಪ್ರಸಾದಂ ಕುರುತೇ ಶಿವಃ ।
ಕಿಂ ಪುನ ರ್ವೈದಿಕೇ ಗಾನೇ ತತೋ ಗಾನಂ ಸಮಾಶ್ರಯೇತ್॥೧೧೨॥

ವ್ಯಾಖ್ಯಾ ಗಾನೇ ಷ್ವಶಕ್ತಸ್ತು ಶಿವಮುದ್ದಿಶ್ಯ ಭಕ್ತಿತಃ ।
ಲೌಕಿಕೀಮಪಿ ವಾ ಗೀತಿಂ ಕುರ್ಯಾನ್ನಿತ್ಯ ಮತಂದ್ರಿತಃ ॥೧೧೩॥

ಯಾವರೀತಿಯಾಗಿ ಪರಮೇಶ್ವರನ ನರ್ತನವು ಸ್ವಭಾವಸಿದ್ಧವಾಗಿ ಲೋಕೋಪಕಾರಿಯಾದುದೋ ಹಾಗೆ ವಿನೋದಾಖ್ಯವಾದ ವಿದ್ಯಾರೂಪವಾದ ಗೀತೆಯೂ ಲೋಕೋಪಕಾರಕವಾದುದು. ॥೧೦೯॥

ಯಾವ ರೀತಿಯಲ್ಲಿ ಆದಿಗುರುವಾದ ಪರಶಿವನ ಗೀತೆಯು ಲೋಕೋಪಕಾರಕವಾದುದೋ ಹಾಗೆ ಈ ಗುರುವಿನ ಪರತತ್ವವ್ಯಾಖ್ಯಾನರೂಪವಾದ ಕೂರ್ಮಪುರಾಣದಲ್ಲಿ ಪ್ರಸಿದ್ಧವಾದ ಈಶ್ವರಗೀತೆಯೂ ಕೂಡ ಲೋಕೋಪಕಾರಕವಾದುದು. ಪರತತ್ವೋಪದೇಶದಿಂದ ಗೀತಿಯು ಹೇಗೆ ಲೋಕೋಪಕಾರಕವಾದುದೋ ಹಾಗೆ ವಿದ್ವಾಂಸನಾದ ಸದ್ಗುರುವಿನ ಗೀತೆಯೂ ಕೂಡ ಪರತತ್ವೋಪದೇಶವನ್ನು ಪ್ರತಿಪಾದಿಸುವುದರಿಂದ ಜಗದನುಗ್ರಹಾರ್ಥವಾಗಿರುತ್ತದೆ. ॥೧೧೦-೧೧೧॥

ಶಿವನು ಲೌಕಿಕವಾದ ಗಾನದಿಂದಲೇ ಸಂತುಷ್ಟನಾಗಿ ಅನುಗ್ರಹಿಸುತ್ತಾನೆ. ಹೀಗಿರುತ್ತಿರಲಾಗಿ ವೈದಿಕವಾದ ಗಾನವನ್ನು ಮಾಡಿದರೆ ಅವನು ಅನುಗ್ರಹಿಸುತ್ತಾನೆಂದು ಹೇಳಬೇಕಾದುದೇ ಇಲ್ಲ. ಆದುದರಿಂದ ಗಾನವನ್ನಾಶ್ರಯಿಸಬೇಕು. ॥೧೧೨॥

ಸಂಸ್ಕೃತಶಬ್ದರೂಪವಾದ, ಗದ್ಯಪದ್ಯರೂಪದ ಗಾನದಲ್ಲಿ ಅಶಕ್ತನಾದವನು ತನ್ನ ದೇಶಭಾಷೆಯಿಂದಲೂ ಗಾನಮಾಡಬಹುದು. ಈ ರೀತಿಯಾಗಿ ವಿಷಯಾಂತರದಲ್ಲಿ ಮನಸ್ಸನ್ನು ಇಡದೇ, ಮಾಡಿರತಕ್ಕ ಗಾನವು ಶಿವಪ್ರಾಪ್ತಿಗೆ ಕಾರಣವಾಗುತ್ತದೆ.

ಗೀತಿ ಜ್ಞಾನಂ ಶಿವಪ್ರಾಪ್ತೇಃ ಸುತರಾಂ ಕಾರಣಂ ಭವೇತ್ ।
ಗೀತಿ ಜ್ಞಾನೇನ ಯೋಗಃ ಸ್ಯಾತ್ ಯೋಗಾದೇವ ಶಿವೈಕ್ಯತಾ॥೧೧೪॥

ಗೀತಿಜ್ಞೋ ಯದಿ ಯೋಗೇನ ನ ಯಾತಿ ಪರಮೇಶ್ವರಂ ।
ಪ್ರತಿಬಂಧಕ ಬಾಹುಲ್ಯಾ ತ್ತಸ್ಯೈವಾನು ಚರೋ ಭವೇತ್ ॥೧೧೫॥

ಕೇವಲಂ ಲೌಕಿಕಂ ಗಾನಂ ನ ಕುರ್ಯಾನ್ಮೋಹತೋಽಪಿ ವಾ ।
ಯದಿ ಕುರ್ಯಾತ್ಪ್ರಮಾದೇನ ಪ್ರಾಯಶ್ಚಿತ್ತೀ ಭವೇದ್ವಿಜಃ ॥೧೧೬॥

ಅತಸ್ತು ಸಂಸಾರ ವಿನಾಶನೇ ರತಃ ।
ಶ್ರುತಿಪ್ರಮಾಣೇನ ಚ ತರ್ಕ ವರ್ತ್ಮನಾ ॥
ಪ್ರಬೋಧ ಮಾಸಾದ್ಯ ಶಿವಸ್ಯ ತಂ ಪುನಃ ।
ಸದೈವ ಗಾಯನ್ ವಿಚರೇ ದಿಮಾಂ ಮಹೀಂ ॥೧೧೭॥

ಇತ್ಯುಪನಿಷತ್ಪರತತ್ವವಿಷಯಾ ವಃ ।
ಸತ್ಯಮುದಿತಾ ಸಕಲ ದುಃಖ ನಿಹಂತ್ರೀ ॥
ಕಷ್ಟಹೃದಯಸ್ಯ ಮನುಜಸ್ಯ ನ ದೇಯಾ ।
ಭಕ್ತಿಸಹಿತಸ್ಯ ತು ಶಿವಸ್ಯ ಖಲು ದೇಯಾ ॥೧೧೮॥

ಒಂದು ವೇಳೆ ಗೀತಿಜ್ಞನಾಗಿ ಪಾಪಾದಿ ಪ್ರತಿಬಂಧಕವಶಾತ್ ಶಿವೈಕ್ಯವನ್ನು ಹೊಂದದೇ ಇದ್ದಾಗ್ಯೂ ಅವನು ಶಿವನ ಅನುಚರನಾಗುತ್ತಾನೆ. ಯಾವನು ಲೌಕಿಕವಾದ ಗಾನವನ್ನೂ ಸಹ ಮಾಡದಿರುತ್ತಾನೆಯೋ, ಅಥವಾ ಮಾಡಿದರೂ ಚಿತ್ತೈಕಾಗ್ರತೆ ಇಲ್ಲದೇ ಮಾಡುತ್ತಾನೆಯೋ ಅಂತಹ ದ್ವಿಜನು ಪ್ರಾಯಶ್ಚಿತ್ತವನ್ನು ಮಾಡಿಕೊಳ್ಳ ಬೇಕು. ॥೧೧೩-೧೧೪-೧೧೫-೧೧೬॥

ಜನನಮರಣರೂಪವಾದ ಸಂಸಾರನಿವೃತ್ತಿಯನ್ನು ಅಪೇಕ್ಷಿಸುವವನು ಶ್ರುತಿ ಪ್ರಮಾಣದಿಂದಲೂ, ತರ್ಕದಿಂದಲೂ, ಶಿವಸಾಕ್ಷಾತ್ಕಾರವನ್ನು ಮಾಡಿಕೊಂಡು ಅವನನ್ನೇ ಗಾನಮಾಡುತ್ತಾ ಯಾವಾಗಲೂ ಈ ಭೂಲೋಕದಲ್ಲಿ ತೀರ್ಥಯಾತ್ರೆ ದೇವದರ್ಶನಗಳಲ್ಲಿ ಆಸಕ್ತನಾಗಿರುತ್ತಾ ಸಂಚರಿಸಬೇಕು. ॥೧೧೭॥

ಈ ರೀತಿಯಾಗಿ ನಿಮಗೆ ಪರಮಾತ್ಮತತ್ವೋಪದೇಶರೂಪವಾಗಿರುವ, ಸಮಸ್ತ ದುಃಖವನ್ನೂ ದೂರಮಾಡುವುದಾಗಿಯೂ, ಇರತಕ್ಕ ರಹಸ್ಯವು ಹೇಳಲ್ಪಟ್ಟಿತು.

ಇತಿ ಶ್ರೀಸ್ಕಾಂದಪುರಾಣೇ ಸೂತಸಂಹಿತಾಯಾಂ ಚತುರ್ಥಸ್ಯ ಯಜ್ಞವೈಭವಖಂಡಸ್ಯೋಪರಿಭಾಗೇ ಬ್ರಹ್ಮಗೀತಾಸೂಪನಿಷತ್ಸು ಸಾಕ್ಷಿಶಿವಸ್ವರೂಪಕಥನಂ ನಾಮ ತೃತೀಯೋಽಧ್ಯಾಯಃ

ಇದನ್ನು ಮೂರ್ಖನಿಗೆ ಉಪದೇಶಮಾಡಕೂಡದು. ಭಕ್ತಿಯುಳ್ಳವರಿಗೆ ಇದರ ಉಪದೇಶವನ್ನು ಮಾಡಬೇಕು. ||೧೧೮||

ಇಲ್ಲಿಗೆ ಸ್ಕಾಂದಪುರಾಣದ ಸೂತಸಂಹಿತೆಯಲ್ಲಿ ನಾಲ್ಕನೆಯ ಭಾಗವಾದ
ಯಜ್ಞವೈಭವಖಂಡದಲ್ಲಿ ಎರಡನೆಯ ಭಾಗದಲ್ಲಿರುವ,
ಉಪನಿಷತ್ತುಗಳಂತಿರುವ ಬ್ರಹ್ಮಗೀತೆಯಲ್ಲಿ ನಿರ್ಲಿಪ್ತವಾಗಿ ಸಾಕ್ಷಿರೂಪನಾಗಿರುವ
ಶಿವತತ್ವವನ್ನು ವಿವರಿಸುವ ಮೂರನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಅಥಾಸ್ಯಾಃ ಶ್ರೀಮತ್ಸ್ಕಾಂದಪುರಾಣಾಂತರ್ಗತ ಸೂತಸಂಹಿತಾಯಾಶ್ಚತುರ್ಥಸ್ಯ ಯಜ್ಞವೈಭವಖಂಡಸ್ಯೋಪರಿಭಾಗೇ ಬ್ರಹ್ಮಗೀತಾ

॥ ಚತುರ್ಥೋಽಧ್ಯಾಯಃ ॥

ನಾಲ್ಕನೆಯ ಅಧ್ಯಾಯವು

॥ ಬ್ರಹ್ಮೋವಾಚ ॥

ಅಸ್ತಿ ದೇವಃ ಸ್ವತಃ ಸಿದ್ಧಃ ಸಾಕ್ಷೀ ಸರ್ವಸ್ಯ ಸರ್ವದಾ ।
ಸಂಸಾರಾರ್ಣವ ಮಗ್ನಾನಾಂ ಸಾಕ್ಷಾತ್ಸಂಸಾರ ಮೋಚಕಃ । ॥೧॥

ಬ್ರಹ್ಮನು ಹೇಳಿದನು—ಹಿಂದಿನ ಅಧ್ಯಾಯದಲ್ಲಿ ಐತರೇಯ ಮತ್ತು ತೈತ್ತಿರೀಯ ಉಪನಿಷತ್ತಿನ ಸಾರವು ಸಂಗೃಹೀತವಾಯಿತು. ಈ ಅಧ್ಯಾಯದಲ್ಲಿ ಸಾಮಶಾಖೆಯ ಉಪನಿಷದರ್ಥವನ್ನು ಸಂಗ್ರಹಿಸಿ ಪ್ರತಿಪಾದಿಸುತ್ತಾನೆ. ಹಿಂದೆ ಹೇಳಿದ ಬ್ರಹ್ಮಸ್ವರೂಪವು ಕೇವಲ ಉಪದೇಶಗಮ್ಯವೇ ಹೊರತು ಕರ್ಮಗಳಿಗೆ ವಿಷಯವಾದುದಲ್ಲವು. ಆದುದರಿಂದ ಪ್ರಶ್ನಪ್ರತಿವಚನಗಳಿಂದ ಬ್ರಹ್ಮವು ಉಪದೇಶಿಸಲ್ಪಡುತ್ತದೆ. "ಕೇನೇಷಿತಂ ಪತತಿ ಪ್ರೇಷಿತಂ ಮನಃ" "ಕೇನ ಪ್ರಾಣಃ ಪ್ರಥಮಃ ಪ್ರೈತಿಯುಕ್ತಃ ಕೇನೇಷಿತಾಂ ವಾಚಮಿಮಾಂ ವದಂತಿ ಚಕ್ಷುಃ ಶ್ರೋತ್ರಂ ಕ ಉ ದೇವೋಯುನಕ್ತಿ" ಎಂದು ಪ್ರಶ್ನೆಗೆ "ಶ್ರೋತ್ರಸ್ಯ ಶ್ರೋತ್ರಂ ಮನಸೋ ಮನೋಯದ್ವಾಚೋ ಹ ವಾಚಂ ಸ ಉಪ್ರಾಣಸ್ಯಪ್ರಾಣ" ಕೇನೋಪನಿಷತ್ ೧.೨. ಎಂದು ಉತ್ತರವಿದೆ. ಈ ಎರಡನ್ನೂ ಅರ್ಥದಿಂದ ಸಂಗ್ರಹಿಸುತ್ತಾನೆ. ಪ್ರಕಾಶಕಾಂತರಾಪೇಕ್ಷೆಯಿಲ್ಲದೇ ಪ್ರಕಾಶಮಾನನಾಗಿಯೂ, ಸರ್ವಕಾಲದಲ್ಲಿಯೂ ಪಾರಮಾರ್ಥಿಕಸತ್ಯನಾದ, ಸಮಸ್ತಪದಾರ್ಥಕ್ಕೆ ಯಾವಾಗಲೂ ಸ್ವಪರವ್ಯವಹಾರಕ್ಕೆ ಹೇತುವಾದ, ಚಿತ್ಪ್ರಕಾಶರೂಪನಾದ, ಸಾಕ್ಷ್ಯಪ್ರಪಂಚವನ್ನು ಒಳಗೊಂಡು ಕೂಟಸ್ಥನಿತ್ಯನಾದ, ಜನನಮರಣರೂಪ

ಸರ್ವೇಷಾಂ ತು ಮನಸ್ತೇನ ಪ್ರೇರಿತಂ ನಿಯಮೇನ ತು ।
ವಿಷಯೇ ಗಚ್ಛತಿ ಪ್ರಾಣಶ್ಚೇಷ್ಟತೇ ವಾಗ್ವದತ್ಯಪಿ ॥೨॥

ಚಕ್ಷುಃ ಪಶ್ಯತಿ ರೂಪಾಣಿ ಶ್ರೋತ್ರಂ ಶಬ್ದಂ ಶೃಣೋತ್ಯಪಿ ।
ಅನ್ಯಾನಿ ಖಾನಿ ಸರ್ವಾಣಿ ತೇನೈವ ಪ್ರೇರಿತಾನಿ ತು ॥೩॥

ಸ್ವಂಸ್ವಂ ವಿಷಯ ಮುದ್ದಿಶ್ಯ ಪ್ರವರ್ತಂತೇ ನಿರಂತರಂ ।
ಪ್ರವರ್ತಕತ್ವಂ ಚಾಪ್ಯಸ್ಯ ಮಾಯಯಾ ನ ಸ್ವಭಾವತಃ ॥೪॥

ವಾದ ಸಂಸಾರವೆಂಬ ಸಾಗರವನ್ನು ಸಾಕ್ಷಾತ್ತಾಗಿ ದಾಟಿಸತಕ್ಕ ಆತ್ಮನು ಅಂತರ್ಯಾಮಿಯಾಗಿ ಜ್ಞಾನಮಾರ್ಗದರ್ಶಕನಾಗಿ ಯಾವಾಗಲೂ ಇರುತ್ತಾನೆ. ॥೧॥

ಅಂತಹ ಸರ್ವಸಾಕ್ಷಿಯಾಗಿಯೂ, ಸರ್ವ ಸ್ವತಂತ್ರನಾಗಿಯೂ, ಸಕಲ ಪ್ರಾಣಿಗಳ ಹೃದಯದಲ್ಲಿ ಜೀವಭಾವದಿಂದಿರತಕ್ಕವನೂ, ಆದ ಪರಮೇಶ್ವರನ ಇಚ್ಛಾಮಾತ್ರದಿಂದ ಆತ್ಮತತ್ವ ವಿಷಯವಾದ ಮಂತ್ರದಲ್ಲಿ ಮನಸ್ಸು ಪ್ರವರ್ತಿಸುತ್ತದೆ. ದೇಹೇಂದ್ರಿಯಾದಿಗಳೇ ಮನಸ್ಸನ್ನು ಪ್ರೇರಿಸುತ್ತವೆ ಎಂದು ಹೇಳಲು ಸಾಧ್ಯವಿಲ್ಲ. ಏಕೆಂದರೆ, ಅವುಗಳು ಪ್ರತ್ಯಕ್ಷವಿಷಯಗಳಲ್ಲಿ ಮಾತ್ರ ಪ್ರವರ್ತಿಸಬಲ್ಲವು. ಆದುದರಿಂದ ದೇಹೇಂದ್ರಿಯಾದಿಗಳಿಗಿಂತಲೂ ಅಂತರವಾದ ಚಿನ್ಮಾತ್ರಜ್ಯೋತಿಯಾದ ಪರಮಾತ್ಮನಿಂದ ಮನಸ್ಸು ಆತ್ಮಜ್ಞಾನ ವಿಷಯದಲ್ಲಿ ಪ್ರೇರಿತವಾಗುತ್ತದೆ. ಹಾಗೆಯೇ ಪ್ರಾಣಾಪಾನಾದಿ ಪಂಚವೃತ್ತಿರೂಪವಾದ ಮುಖ್ಯಪ್ರಾಣವೂ ಸಹ ಆತ್ಮನಿಂದ ಪ್ರೇರಿತವಾಗಿ ಪ್ರಾಣನಾದಿ ವ್ಯಾಪಾರವನ್ನು ಮಾಡುತ್ತದೆ. ನಾನಾಶಬ್ದವ್ಯವಹಾರಹೇತುವಾದ ವಾಗಿಂದ್ರಿಯವೂ ಸಹ ಆತ್ಮನಿಂದ ಪ್ರೇರಿತವಾಗಿ ಅಭಿವದನ (ಹೇಳುವಿಕೆ) ರೂಪ ಕ್ರಿಯೆಯನ್ನು ಮಾಡುತ್ತದೆ. ॥೨॥

ಹಾಗೆಯೇ ಚಕ್ಷುರಿಂದ್ರಿಯವು ಆತ್ಮನಿಂದ ಪ್ರೇರಿತವಾಗಿ ರೂಪಾದಿಗಳನ್ನು ಗ್ರಹಿಸುತ್ತದೆ. ಶ್ರೋತ್ರೇಂದ್ರಿಯವೂ ಆತ್ಮನಿಂದ ಪ್ರೇರಿತವಾಗಿ ಶಬ್ದವನ್ನು ಗ್ರಹಿಸುತ್ತದೆ. ಇದೇ ರೀತಿಯಾಗಿ ಉಳಿದ ಎಲ್ಲ ಜ್ಞಾನೇಂದ್ರಿಯಗಳೂ, ಕರ್ಮೇಂದ್ರಿಯಗಳೂ ಸಹ ಚೇತನನಾದ ಆತ್ಮನಿಂದ ಪ್ರೇರಿತವಾಗಿ ತಮ್ಮ ತಮ್ಮ ವ್ಯಾಪಾರಗಳನ್ನು ಸದಾ ಮಾಡುತ್ತವೆ. ಆದರೆ, ಅಸಂಗನಾಗಿಯೂ, ಉದಾಸೀನನಾಗಿಯೂ ಕೂಟಸ್ಥ ನಿತ್ಯನಾಗಿಯೂ, ತರಂಗವಿಲ್ಲದ ಸಮುದ್ರದಂತಿರತಕ್ಕ ಚಿನ್ಮಾತ್ರರೂಪನಾದ ಆತ್ಮನಿಗೆ

ಇಂದ್ರಿಯಾಣಾಂ ತು ಸತ್ತಾ ಚ ನೈವ ಸ್ವಾಭಾವಿಕೀ ಮತಾ ।
ತಸ್ಮಾದ್ಯಃ ಪಿಂಡವತ್ತಸ್ಯ ಸತ್ತಯೈವ ಸುರರ್ಷಭಾಃ ॥೫॥

ಶ್ರೋತ್ರಮಾತ್ಮನಿ ಚಾಧ್ಯಸ್ತಂ ಸ್ವಯಂ ದೇವೋ ಮಹೇಶ್ವರಃ ।
ಅನುಪ್ರವಿಶ್ಯ ಶ್ರೋತ್ರಸ್ಯ ದದಾತಿ ಶ್ರೋತ್ರತಾಂ ಹರಃ ॥೬॥

ಸ್ವಭಾವತಃ ಪ್ರವರ್ತಕತ್ವವಿಲ್ಲದಿದ್ದಾಗ್ಯೂ ಸತ್ವಪ್ರಧಾನ ಮಾಯಾಪರಿಣಾಮವಾದ ದೇಹೇಂದ್ರಿಯಾದ್ಯುಪಾಧಿಯ ಸಂಪರ್ಕದಿಂದ ಪ್ರವರ್ತಕತ್ವವು ತೋರುತ್ತಿರುತ್ತದೆ. ||೩-೪||

ಆದರೆ ಮನಸ್ಸೇ ಮುಂತಾದವುಗಳು ಪ್ರೇರ್ಯವು. ಆತ್ಮನು ಪ್ರೇರಕನು. ಎಂಬ ಭೇದದಿಂದ ದ್ವೈತಾಪತ್ತಿಯುಂಟಾಯಿತೆಂದರೆ ಅದಕ್ಕೆ ಸಮಾಧಾನ ಹೇಳುತ್ತಾನೆ. ಓ ಸುರಶ್ರೇಷ್ಠರೇ, ಮನಸ್ಸೇ ಮುಂತಾದ ಇಂದ್ರಿಯಗಳು ಸದ್ರೂಪದಲ್ಲಿ ಕಲ್ಪಿತವಾದುದರಿಂದ ಅವುಗಳಿಗೆ ಸ್ವತಃ ಸತ್ತೆಯು ಇರುವುದಿಲ್ಲ. ಏಕೆಂದರೆ ಕಾಯಿಸಿದ ಕಬ್ಬಿಣದ ಉಂಡೆಯಲ್ಲಿ ಅಗ್ನಿಯ ಉಷ್ಣಸ್ಪರ್ಶವು ಹೇಗೆ ತೋರುತ್ತದೆಯೋ ಹಾಗೆ ಅಧಿಷ್ಠಾನವಾದ ಬ್ರಹ್ಮದ ಸತೆಯು ಅಧ್ಯಸ್ತವಾದ ಇಂದ್ರಿಯಗಳಲ್ಲಿ ತೋರುತ್ತದೆ. ಏವಂಚ ಅದು ಅಧ್ಯಾರೋಪಿತವಾದುದರಿಂದ ಅಧಿಷ್ಠಾನವ್ಯತಿರೇಕವಾಗಿ ಇಲ್ಲದಪ್ರಯುಕ್ತ ದ್ವೈತಕ್ಕೆ, ವಾಸ್ತವವಾದ ಭಿನ್ನವಸ್ತುವಿನ ಸಿದ್ಧಿಗೆ, ಅವಕಾಶವಿಲ್ಲ. ||೫||

ಮನಸ್ಸೇ ಮೊದಲಾದವುಗಳು ಯಾವನ ಇಚ್ಛಾಮಾತ್ರದಿಂದಲೇ ಪ್ರೇರಿಸಲ್ಪಡುತ್ತವೆಯೋ ಅವನ ಸ್ವರೂಪವು ಹೇಳಲ್ಪಡದೇ ಇದ್ದಾಗ್ಯೂ ಅರ್ಥಾತ್ ಅದನ್ನು ತಿಳಿದುಕೊಳ್ಳಬೇಕು. ಹೇಗೆಂದರೆ ಉತ್ತರವನ್ನು ಹೇಳುತ್ತಾನೆ. ಶ್ರೋತ್ರೇಂದ್ರಿಯವೂ ಇತರ ಜಡ ಪ್ರಪಂಚದಂತೆ ಅಧಿಷ್ಠಾನವಾದ, ಸಚ್ಚಿನ್ಮಾತ್ರವಾದ ಆತ್ಮನಲ್ಲಿ ಅಧ್ಯಸ್ತವಾದುದು. ಶ್ರೋತ್ರವೆಂದರೆ " ಶ್ರೂಯತೇ ಅನೇನ " ಎಂಬ ವ್ಯುತ್ಪತ್ತಿಯಿಂದ ಶ್ರವಣ ಸಾಧನವೆಂದರ್ಥವಾಗುತ್ತದೆ. ಏವಂಚ ಶ್ರವಣಸಾಧನವಾದ ಶ್ರೋತ್ರಕ್ಕೆ ಸ್ವಪ್ರಕಾಶ ಚಿದ್ರೂಪನಾದ ಮಹೇಶ್ವರನು ಅಧಿಷ್ಠಾನವಾಗಿದ್ದು ಶಬ್ದಶ್ರವಣಸಾಮರ್ಥ್ಯವನ್ನುಂಟು ಮಾಡುತ್ತಾನೆ. ಅವನೇ ಸರ್ವಾಂತರನಾಗಿಯೂ, ಸರ್ವಪ್ರೇರಕನಾಗಿಯೂ, ಸ್ವಪ್ರಕಾಶ ಚೈತನ್ಯ ರೂಪನಾಗಿಯೂ ಇರುವ ಆತ್ಮನಸಂಬಂಧದಿಂದಲೇ ಶ್ರವಣಕ್ಕೆ ವಿಷಯವಾದ ಶಬ್ದವನ್ನೂ ಶ್ರವಣೇಂದ್ರಿಯವನ್ನೂ ಪ್ರತ್ಯಕ್ಷಗೊಳಿಸುತ್ತಾನೆ. ಆದುದರಿಂದ ಶ್ರೋತ್ರಕ್ಕೂ ಕೂಡ ಶ್ರವಣಸಾಮರ್ಥ್ಯವನ್ನುಂಟುಮಾಡತಕ್ಕ ಸರ್ವಾಂತರವಾದ ಆತ್ಮಜ್ಯೋತಿಯು " ಶ್ರೋತಸ್ಯ ಶ್ರೋತ್ರಂ " ಎಂಬ ಕೇನಉ. ಶ್ರುತಿಯಿಂದ ಪ್ರತಿಪಾದಿಸಲ್ಪಟ್ಟಿತು. ||೬||

ಮನ ಆತ್ಮನಿ ಚಾಧ್ಯಸ್ತಂ ಪ್ರವಿಶ್ಯ ಪರಮೇಶ್ವರಃ ।
ಮನಸ್ತ್ವಂ ತಸ್ಯ ಸತ್ವಸ್ಥೋ ದದಾತಿ ನಿಯಮೇನ ತು ॥೭॥

ವಾಚೋ ವಾಕ್ತ್ವಮನುಪ್ರಾಪ್ಯ ಪ್ರಾಣಸ್ಯ ಪ್ರಾಣತಾಂ ಹರಃ ।
ದದಾತಿ ನಿಯಮೇನೈವ ಚಕ್ಷುಷ್ಟ್ವಂ ಚಕ್ಷುಷಸ್ತಥಾ ॥೮॥

ಅನ್ಯೇಷಾ ಮಿಂದ್ರಿಯಾಣಾಂ ತು ಕಲ್ಪಿತಾನಾ ಮಹೇಶ್ವರಃ ।
ತತ್ತದ್ರೂಪ ಮನುಪ್ರಾಪ್ಯ ದದಾತಿ ನಿಯಮೇನ ತು ॥೯॥

ಮನಸ್ಸು ಸಹ ಪರಮಾತ್ಮನಲ್ಲಿ ಅಧ್ಯಸ್ತವಾದುದು. ಸತ್ತ್ವಗುಣದಲ್ಲಿದ್ದ ಆ ಮನಸ್ಸಿಗೆ ಪರಮಾತ್ಮನು ಮನನಸಾಮರ್ಥ್ಯವನ್ನು ಉಂಟುಮಾಡುತ್ತಾನೆ. ॥೭॥

ಹಾಗೆಯೇ ಹರನು ತನ್ನಲ್ಲಿ ಅಧ್ಯಸ್ತವಾದ ವಾಗಿಂದ್ರಿಯಕ್ಕೆ ಶಬ್ದವನ್ನುಚ್ಚಾರಮಾಡತಕ್ಕ ಶಕ್ತಿಯನ್ನೂ ಪ್ರಾಣಕ್ಕೆ ಪ್ರಾಣನಶಕ್ತಿಯನ್ನೂ, ಚಕ್ಷುರಿಂದ್ರಿಯಕ್ಕೆ ರೂಪಾದಿಗ್ರಹಣಸಾಮರ್ಥ್ಯವನ್ನೂ ವಿನಿಯತವಾಗಿ ಕೊಡುತ್ತಾನೆ. ॥೮॥

ಇದೇ ರೀತಿಯಾಗಿ ಪರಮಾತ್ಮನಲ್ಲಿ ಕಲ್ಪಿತವಾದ ಉಳಿದ ಇಂದ್ರಿಯಗಳಿಗೆ ಪರಮಾತ್ಮನು ಅಧಿಷ್ಠಾನರೂಪದಿಂದ ಇದ್ದು ಆಯಾಯಾ ಕಾರ್ಯಜನನ ಸಾಮರ್ಥ್ಯವನ್ನುಂಟುಮಾಡುತ್ತಾನೆ. ಒಟ್ಟಿನಲ್ಲಿ ಇಂದ್ರಿಯಗಳು ಕರಣ (ಜ್ಞಾನಸಾಧನ) ವಾದುದರಿಂದ ಅವುಗಳಿಗೆ ಕರ್ತ್ರಪೇಕ್ಷೆ ಇದ್ದೇ ಇರುತ್ತದೆ. ಲೋಕದಲ್ಲಿ ಹಾಗೆಯೇ ಕಂಡು ಬರುತ್ತದೆ. ಸಾಮಾನ್ಯವಾಗಿ ಕರಣವು ಅಚೇತನವೂ ಕರ್ತೃವು ಚೇತನನೂ ಎಂದು ಲೋಕದಲ್ಲಿ ಕಂಡುಬರುತ್ತದೆ. ಸಾಧನವು ಕರ್ತೃವಿನಿಂದ ಪ್ರೇರಿತವಾದರೆ ಅದು ಕಾರ್ಯವನ್ನು ಮಾಡುತ್ತದೆ. ಉದಾಹರಣೆ—ಕುಂಬಾರನಿಂದ ಪ್ರೇರಿತವಾದ ದಂಡವು ಘಟವನ್ನು ಮಾಡುತ್ತದೆ. ಮತ್ತು ಕರ್ತೃ ಬೇರೆ, ಕರಣ ಬೇರೆ ಎಂಬುದಾಗಿಯೂ ಸಹ ಕಂಡುಬರುತ್ತದೆ. ಹಾಗೆ ಪ್ರಕೃತದಲ್ಲಿ ಚಕ್ಷುರಾದಿ ಇಂದ್ರಿಯಗಳು ಕರಣವಾದುದರಿಂದ ಅವಕ್ಕೆ ಕರ್ತ್ರಪೇಕ್ಷೆಯಿದೆ. ಆ ಕರ್ತನು ಅಚೇತನನಾದರೆ ಕರಣ ಪ್ರೇರಕತ್ವವು ಸಂಭವಿಸುವುದಿಲ್ಲವು. ಆದುದರಿಂದ ಜಡವಾದ ಜ್ಞಾನಸಾಧನಗಳಾದ ಚಕ್ಷುರಾದಿ ಇಂದ್ರಿಯಗಳಿಗಿಂತಲೂ ಭಿನ್ನನಾಗಿಯೂ, ಚೇತನನಾಗಿಯೂ, ಅವುಗಳಿಗೆ ಪ್ರೇರಕನಾಗಿ ಅವುಗಳಲ್ಲಿರುವ ಜ್ಞಾನ ಜನನ ಸಾಮರ್ಥ್ಯವನ್ನುಂಟುಮಾಡುವವನಾಗಿಯೂ ಇರತಕ್ಕ ಆತ್ಮನನ್ನು ಒಪ್ಪಿಕೊಳ್ಳಬೇಕೆಂದು ತಿಳಿಯಬೇಕು. ॥೯॥

ತತ್ರ ಚಕ್ಷುಶ್ಚ ವಾಕ್ಚೈವ ಮನಶ್ಚಾನ್ಯಾನಿ ಖಾನಿ ಚ ।
ನ ಗಚ್ಛಂತಿ ಸ್ವಯಂಜ್ಯೋತಿಃ ಸ್ವಭಾವೇ ಪರಮಾತ್ಮನಿ ॥೧೦॥

ಸ ದೇವೋ ವಿದಿತಾದನ್ಯ ಸ್ತಥೈವಾ ವಿದಿತಾದಪಿ ।
ವಾಚಾ ಚ ಮನಸಾ ಚೈವ ಚಕ್ಷುಷಾ ಚ ತಥೈವ ಚ ॥೧೧॥

ಶ್ರೋತ್ರೇಣಾಪಿ ಸುರಶ್ರೇಷ್ಠಾಃ ಪ್ರಾಣೇನಾನ್ಯೇನ ಕೇನ ಚಿತ್ ।
ನ ಶಕ್ಯೋ ಗೋಚರೀ ಕರ್ತುಂ ಸತ್ಯಮೇವ ಮಯೋದಿತಂ ॥೧೨॥

ಇಂತಹ ಆತ್ಮನು ಘಟಾದಿಗಳಂತೆ ಏಕೆ ತಿಳಿಯುವುದಿಲ್ಲವು? ಎಂದರೆ ಅದಕ್ಕೆ "ನ ತತ್ರ ಚಕ್ಷುರ್ಗಚ್ಛತಿ ನ ವಾಗ್ಗಚ್ಛತಿ ನೋ ಮನಃ" ಎಂದು ಕೇನ. ಶ್ರುತಿಯು ಉತ್ತರವನ್ನು ಹೇಳುತ್ತದೆ. ಆ ಶ್ರುತ್ಯರ್ಥವನ್ನು ಸಂಗ್ರಹಿಸುತ್ತಾನೆ. ಚಕ್ಷುರಿಂದ್ರಿಯವೂ ಶಬ್ದಾದಿವ್ಯಂಜಕವಾದ ವಾಗಿಂದ್ರಿಯವೂ, ಅದರಿಂದ ಅಭಿವ್ಯಂಗ್ಯವಾದ ಶಬ್ದವೂ, ಮನಸ್ಸೂ, ಉಳಿದರಸನ, ಘ್ರಾಣ ಇತ್ಯಾದಿ ಇಂದ್ರಿಯಗಳೂ, ವಾಕ್ಪಾಣ್ಯಾದಿ ಕರ್ಮೇಂದ್ರಿಯಗಳೂ ಸಹ ಮಾಯೆಯಿಂದ ಬ್ರಹ್ಮನಲ್ಲಿ ಕಲ್ಪಿತವಾದ ಪ್ರಯುಕ್ತ ಬ್ರಹ್ಮಾತ್ಮಕವಾಗಿವೆ. ಹೀಗಿರಲಾಗಿ ಸ್ವಾತ್ಮಭೂತವಾದ ಬ್ರಹ್ಮನಲ್ಲಿ ಆ ಇಂದ್ರಿಯಗಳಿಗೆ ಹೇಗೆ ಪ್ರವೃತ್ತಿಯುಂಟಾದೀತು? ಹಾಗೆ ವಿಷಯ ವಿಷಯಿಭಾವವು ಬರಬೇಕಾದರೆ ಭೇದಾಪೇಕ್ಷೆಯಿರುತ್ತದೆ. ಮತ್ತು ಸ್ವಯಂಜ್ಯೋತಿಃ ಸ್ವರೂಪವಾಗಿ ಸರ್ವಸಾಕ್ಷಿಯಾಗಿ ಬ್ರಹ್ಮಸ್ವರೂಪವು ಇರುವುದರಿಂದ ಅಲ್ಲಿ ಇಂದ್ರಿಯಗಳಿಗೆ ಪ್ರವೃತ್ತಿಯಿಲ್ಲವು. ॥೧೦॥

ಈ ರೀತಿಯಾದ ಚಕ್ಷುರಾದಿ ಸರ್ವಪ್ರಾಣವಿಷಯವಾದ ಪರಶಿವಸ್ವರೂಪವನ್ನು ಶ್ರುತಿಯಾದರೂ ಹೇಗೆ ತಿಳಿಸುತ್ತದೆ? ಎಂದರೆ ವಿದಿತಾವಿದಿತವ್ಯತಿರೇಕೇಣಪ್ರತಿಪಾದಿಸಲು ಸಾಧ್ಯವೆಂದು "ಅನ್ಯದೇವ ತದ್ವಿದಿತಾದಥೋ ಅವಿದಿತಾದಧಿ" ಎಂದು ಕಠ. ಶ್ರುತಿಯು ಹೇಳುತ್ತದೆ. ಅದರ ಅರ್ಥವನ್ನು ಸಂಗ್ರಹಿಸುತ್ತಾನೆ. ಶ್ರವಣಾದಿ ಇಂದ್ರಿಯಗಳಿಗೆ ಸಾಮರ್ಥ್ಯವನ್ನುಂಟುಮಾಡುವವನೂ, ಸರ್ವಾಂತರನೂ, ಸಾಕ್ಷಿಯೂ, ಸ್ವಪ್ರಕಾಶನೂ, ಚಿದ್ರೂಪನೂ ಆದ ಆತ್ಮನು ವಿದಿಕ್ರಿಯಾ ಫಲವುಳ್ಳ ವಿಷಯಕ್ಕಿಂತಲೂ ಭಿನ್ನವಾಗಿಯೂ ವಿದಿಕ್ರಿಯೆಗೆ ಅವಿಷಯಕ್ಕಿಂತಲೂ ಭಿನ್ನನಾಗಿಯೂ ಇರುತ್ತಾನೆ. ಎಂದರೆ ಒಂದು ವಸ್ತುವು ಲೋಕದಲ್ಲಿ ತಿಳಿದಿರಬೇಕು. ಅಥವಾ ತಿಳಿಯದೇ ಇರಬೇಕು. ತಿಳಿದ ವಸ್ತುವು ಇಂದ್ರಿಯಾದಿಗಳಿಗೆ ವಿಷಯವಾಗಿಯೂ,

ಯಸ್ಯೇದ ಮಖಿಲಂ ನಿತ್ಯಂ ಗೋಚರಂ ರೂಪವದ್ರವೇಃ ।
ತದೇವ ಪರಮಂ ಬ್ರಹ್ಮ ವಿತ್ತ ಯೂಯಂ ಸನಾತನಂ ॥೧೩॥

ಏವಂ ಜಾನಂತಿ ಯೇ ಧೀರಾ ಸ್ತರ್ಕತಶ್ಚ ಪ್ರಮಾಣತಃ ।
ಗುರೂಕ್ತ್ಯಾ ಸ್ವಾನುಭೂತ್ಯಾಚ ಭವಂತಿ ಖಲು ತೇಽಮೃತಾಃ ॥೧೪॥

ಅನಿತ್ಯವಾಗಿಯೂ ಇದೆ. ತಿಳಿಯದೇ ಇದ್ದುದು ಅಪ್ರಸಿದ್ಧವಾದ ಶಶಶೃಂಗಾದಿಗಳಂತೆ ಆಗುತ್ತದೆ. ಆದುದರಿಂದ ಆತ್ಮನು ತಿಳಿದರೆ ದೃಶ್ಯತ್ವವುಂಟಾಗಿ ಮಿಥ್ಯಾತ್ವವು ಸಂಭವಿಸುತ್ತದೆ. ಸರ್ವಥಾ ತಿಳಿಯದೇಹೋದರೆ ಶಶಶೃಂಗಾದಿಗಳಂತೆ ಆಗುತ್ತದೆಂದು "ವಿದಿತಾತ್ ಅವಿದಿತಾತ್ ಅನ್ಯಃ" ಎಂದು ಹೇಳಿದೆ. ಹೀಗೆ ಹೇಳಿದ್ದರಿಂದ ಘಟಾದಿದೃಶ್ಯಭಿನ್ನನಾಗಿಯೂ, ಸ್ವಪ್ರಕಾಶಚೈತನ್ಯಸ್ವರೂಪನಾಗಿಯೂ, ಸಹ ಆತ್ಮನಿರುತ್ತಾನೆಂದು ತಿಳಿಯಬೇಕು. ತಥಾ ಚ ಇಂತಹ ಆತ್ಮಸ್ವರೂಪವು ಇಂದ್ರಿಯಗೋಚರವಾಗದೇ ಆಗಮೈಕ ವೇದ್ಯವೆಂದು ತಿಳಿಯಬೇಕು. ಈ ರೀತಿ ಸ್ವಪ್ರಕಾಶಸ್ವರೂಪವಾದ ಆತ್ಮವು ಉಪದಿಷ್ಟವಾದಾಗ್ಯೂ ಇದಕ್ಕಿಂತಲೂ ಬೇರೆಯಾವುದನ್ನೋ ಉಪಾಸನೆಮಾಡಬಹುದಲ್ಲವೇ ? ಎಂಬ ಶಿಷ್ಯನ ಶಂಕೆಗೆ ಶ್ರುತಿಯು ಹೀಗೆ ಉತ್ತರವನ್ನು ಕೊಡುತ್ತದೆ. "ಯದ್ವಾಚಾಽನಭ್ಯುದಿತಂ ಯೇನವಾಗಭ್ಯುದ್ಯತೇ। ತದೇವ ಬ್ರಹ್ಮ ತ್ವಂ ವಿದ್ಧಿನೇದಂ ಯದಿದಮುಪಾಸತೇ" ಇತ್ಯಾದಿ. ಕಠ. ಶ್ರುತಿಯ ಅರ್ಥವನ್ನು ಸಂಗ್ರಹಿಸುತ್ತಾನೆ. ಎಲೈ ಸುರಶ್ರೇಷ್ಠರೇ, ವಾಗಿಂದ್ರಿಯದಿಂದಲೂ, ಮನಸ್ಸಿನಿಂದಲೂ, ಚಕ್ಷುಸ್ಸಿನಿಂದಲೂ, ಶ್ರೋತ್ರದಿಂದಲೂ, ಪ್ರಾಣದಿಂದಲೂ, ಉಳಿದ ಇಂದ್ರಿಯಗಳಿಂದಲೂ, ಸ್ವಪ್ರಕಾಶವಾದ ಆತ್ಮಸ್ವರೂಪವನ್ನು ತಿಳಿಯಲು ಶಕ್ಯವಿಲ್ಲ. ಈ ನನ್ನ ಮಾತು ಸತ್ಯವಾದುದು. ಆದರೆ ನಿತ್ಯನಾದ ಪರಮಾತ್ಮನು, ಸೂರ್ಯನು ರೂಪಾದಿಗಳನ್ನು ಪ್ರಕಾಶಪಡಿಸುವಂತೆ, ಸ್ವಪ್ರಕಾಶದಿಂದ ಜಗತ್ತನ್ನು ಬೆಳಗುತ್ತಾನೆ. ಏವಂಚ ಸ್ವಪ್ರಕಾಶವಾಗಿಯೂ, ಸರ್ವಾಂತರವಾಗಿಯೂ, ಚಕ್ಷುರಾದಿಗಳಿಗೆ ಪ್ರೇರಕವಾಗಿಯೂ, ಅವುಗಳಿಗೆ ಗೋಚರವಾಗದೇ ಸಾಕ್ಷಿಯೂ, ಆಗಿರತಕ್ಕಸ್ವರೂಪವನ್ನೇ ಬ್ರಹ್ಮವೆಂಬುದಾಗಿ ನೀವು ತಿಳಿಯಿರಿ. ॥೧೧-೧೨-೧೩॥

ಈ ರೀತಿಯಾಗಿ ಚಕ್ಷುರಾದಿಗಳಿಂದ ಭಿನ್ನವಾಯೂ, ಅವುಗಳಿಗೆ ಸಾಕ್ಷಿಯಾಗಿಯೂ, ಇರತಕ್ಕ ಆತ್ಮನಿಗೆ ಬ್ರಹ್ಮಾತ್ಮಜ್ಞಾನವು ಉಪದಿಷ್ಟವಾಗಿ ಆ ಜ್ಞಾನಕ್ಕೆ ಫಲವನ್ನು ಶ್ರುತಿಯು, "ಅತಿಮುಚ್ಯ ಧೀರಾಃ ಪ್ರೇತ್ಯಾಸ್ಮಾಲ್ಲೋಕಾದಮೃತಾ ಭವಂತಿ" ಎಂದು ಕ.ಶ್ರುತಿ ಹೇಳಿದೆ. ಅದರ ಅರ್ಥವನ್ನು ಸಂಗ್ರಹಿಸಿ ಹೇಳುತ್ತಾನೆ.

ಸುಜ್ಞಾತಮಿತಿ ತದ್ಬ್ರಹ್ಮ ಮನುಧ್ವಂ ಯದಿ ಹೇ ಸುರಾಃ ।
ದಭ್ರಮೇವ ಹಿ ತತ್ಸಾಕ್ಷಿ ಬ್ರಹ್ಮ ವೇದ್ಯಂ ಕಥಂ ಭವೇತ್ ॥೧೫॥

ಚಿತ್ತಸ್ಥೈರ್ಯವುಳ್ಳ ಯಾವ ವಿದ್ವಾಂಸರು ಹಿಂದೆ ಹೇಳಿದ ಪ್ರಕಾರವಾಗಿ ದೇಹೇಂದ್ರಿಯಾದಿಗಳನ್ನು ಆತ್ಮನಿಂದ ವಿವೇಚಿಸಿ ಆ ದೇಹಾದಿಗಳಿಂದ ವಿವಿಕ್ತನೂ ಅದ್ವಿತೀಯವೂ ಆದ ಬ್ರಹ್ಮಾತ್ಮತತ್ವವನ್ನು ತರ್ಕ (ಯುಕ್ತಿ) ದಿಂದಲೂ, ಶ್ರುತಿಪ್ರಮಾಣದಿಂದಲೂ, ಗುರುಮುಖದಿಂದಲೂ ತಿಳಿದು ಮನನನಿಧಿಧ್ಯಾಸನಾದಿಗಳಿಂದುಂಟಾದ ಸಂದೇಹವಿಲ್ಲದ ಸಾಕ್ಷಾತ್ಕಾರರೂಪವಾದ ಸ್ವಾನುಭಾವದಿಂದ ಯಾರು ಮನಗಾಣುತ್ತಾರೆಯೋ ಅಂತಹವರು ಜರಾಮರಣಾದ್ಯುಪದ್ರವಗಳಿಲ್ಲದೇ ನಿತ್ಯವಾದ ಮುಕ್ತಿಯನ್ನು ಹೊಂದುತ್ತಾರೆ. ॥೧೪॥

ಹೀಗೆ ಸ್ವಾತ್ಮರೂಪದಿಂದ ಉಪದಿಷ್ಟವಾದ ಬ್ರಹ್ಮಸ್ವರೂಪವನ್ನು ತಿಳಿಯತಕ್ಕ ಸಮಯದಲ್ಲಿ ಶಿಷ್ಯನು ನಾನು ಬ್ರಹ್ಮವನ್ನು ತಿಳಿದಿರುತ್ತೇನೆ ಎಂದು ಕರ್ತೃ ಕರ್ಮಭಾವರೂಪವಾದ ಭೇದವನ್ನು ಬ್ರಹ್ಮಸ್ವರೂಪದಲ್ಲಿ ತಿಳಿಯಬಹುದು. ಅದನ್ನು ಹೋಗಲಾಡಿಸಿ, ವಿಷಯವಲ್ಲದೆಯೂ, ಅಖಂಡೈಕರಸವಾಗಿಯೂ, ಇರತಕ್ಕ ಬ್ರಹ್ಮಾತ್ಮತತ್ವವನ್ನು ಸ್ವರೂಪಪ್ರಕಾಶದಿಂದಲೇ ತಿಳಿಯಬೇಕೆಂದು ಪ್ರಶ್ನಪ್ರತಿವಚನರೂಪವಾಗಿ ಶ್ರುತಿಯಲ್ಲಿ "ಯದಿಮನ್ಯಸೇಸುಸುವೇದೇತಿ ದಭ್ರಮೇವಾಪಿನೂನಂ" ಎಂಬ ಗುರುವಾಕ್ಯವೂ, "ನಾಹಂ ಮನ್ಯೇ ಸುವೇದೇತಿ" ಎಂಬ ಶಿಷ್ಯವಾಕ್ಯವೂ ಆಮ್ನಾತವಾಗಿದೆ. ಕೇ.ಉ. ೨.೧. ಅದರ ಅರ್ಥವನ್ನು ಬ್ರಹ್ಮನು ದೇವತೆಗಳಿಗೆ ಸಂಗ್ರಹಿಸಿ ಉಪದೇಶಿಸುತ್ತಾನೆ. ಓ ಸುರರೇ, ಸ್ವಾತ್ಮವಾದ ಬ್ರಹ್ಮತತ್ವವನ್ನು ನಾವು ಚನ್ನಾಗಿ ಬುದ್ಧಿವೃತ್ತಿಗೆ ವಿಷಯವನ್ನಾಗಿ ಮಾಡಿಕೊಂಡಿದ್ದೇವೆ. ಎಂದರೆ ತಿಳಿದಿದ್ದೇವೆಂದು ನೀವು ತಿಳಿದುಕೊಂಡಿದ್ದರೆ ಆ ಅರಿವು ಸ್ವಲ್ಪವೇ ಆಗಿರುತ್ತದೆ. ಏಕೆಂದರೆ ಬುದ್ಧಿವೃತ್ತಿಯಿಂದ ಪರಿಚ್ಛಿನ್ನವಾದ ಸ್ವರೂಪವನ್ನೇ ತಿಳಿದಹಾಗಾಯಿತೇ ಹೊರತು ಅಪರಿಚ್ಛಿನ್ನಸ್ವರೂಪವನ್ನು ತಿಳಿಯಲಿಲ್ಲ. ತಥಾಚ ಅಲ್ಪವಸ್ತುವಿಷಯಕವಾದ ಜ್ಞಾನವು ನಿಮಗುಂಟಾಗಿದೆಯೇಹೊರತು ಆತ್ಮತತ್ವವು ತಿಳಿಯಲಿಲ್ಲ. ಅಂತಹ ಬುದ್ಧಿ ವೃತ್ತಿಗೂ ಸಾಕ್ಷಿಯಾಗಿದ್ದು ಭಾಸಕವಾದ ಬ್ರಹ್ಮಸ್ವರೂಪವನ್ನು ಆ ಬುದ್ಧಿವೃತ್ತಿಯಿಂದ ಹೇಗೆ ತಿಳಿಯಲು ಸಾಧ್ಯ? ಆದುದರಿಂದ ಸ್ವಪ್ರಕಾಶಸಾಕ್ಷಿರೂಪವಾದ ಆತ್ಮಸ್ವರೂಪವು ವೇದ್ಯವಾದುದಲ್ಲ. ಈ ರೀತಿಯಲ್ಲಿ ಬುದ್ಧಿವೃತ್ತಿಯಿಂದ ವೇದ್ಯವಾದ ಉಪಾಧಿವಿಶಿಷ್ಟವಾದ ರೂಪವು ತಿಳಿಯಿತೇ ವಿನಾ ನಿರುಪಾಧಿಕಸ್ವರೂಪವು ತಿಳಿಯಲಿಲ್ಲ. ॥೧೫॥

ಯಸ್ಯ ಸ್ವಾತ್ಮತಯಾ ಬ್ರಹ್ಮ ವಿದಿತಂ ಕರ್ಮತಾಂ ವಿನಾ ।
ತಸ್ಯ ತಜ್ಜ್ಞಾನ ಕರ್ತೃತ್ವ ವಿಹೀನಸ್ಯ ಮತಂ ಹಿ ತತ್ ॥೧೬॥

ಯಸ್ಯಾಮತಂ ತಸ್ಯ ಮತಂ ಮತಂ ಯಸ್ಯ ನ ವೇದ ಸಃ ।
ಅವಿಜ್ಞಾತಂ ವಿಜಾನತಾಂ ವಿಜ್ಞಾತಮವಿಜಾನತಾಂ ॥೧೭॥

ಬ್ರಹ್ಮಜ್ಞಾನೇ ಘಟಜ್ಞಾನೇ ಭ್ರಾಂತಿಜ್ಞಾನೇಽಪಿ ಚಾಸ್ತಿಕಾಃ ।
ನೈವ ಕರ್ತೃ ನ ಕರ್ಮಾಪಿ ಬ್ರಹ್ಮ ತತ್ಕೇವಲಂ ಭವೇತ್ ॥೧೮॥

ಯಾವನಿಗೆ ಆ ಬ್ರಹ್ಮಸ್ವರೂಪವು ಜ್ಞಾನರೂಪಕ್ರಿಯೆಯಿಂದ ಉಂಟಾದ ಫಲಶಾಲಿತ್ವವಲ್ಲದೇ ಸ್ವಾತ್ಮಭೂತವಾಗಿ ಪ್ರತ್ಯಕ್ಸಾಕ್ಷಿಯಾಗಿ ಸ್ವರೂಪಪ್ರಕಾಶದಿಂದಲೇ ಪ್ರಕಾಶಿಸುತ್ತಿದೆಯೋ ಅಂತಹವನಿಗೆ ಆ ಪ್ರಕಾಶವು ನಿತ್ಯವಾಗಿಯೂ, ಕರ್ತೃತ್ವವಿಲ್ಲದ್ದಾಗಿಯೂ ಇರುತ್ತದೆ. ಅಂತಹ ವಿದ್ವಾಂಸನಿಗೆ ಅನವಚ್ಛಿನ್ನವಾದ ಮತ್ತು ಯಾವ ಉಪಾಧಿಯೂ ಇಲ್ಲದ ಬ್ರಹ್ಮವು ತಿಳಿದುದಾಗಿರುತ್ತದೆ. ॥೧೬॥

ಶಿಷ್ಯಾಚಾರ್ಯಸಂವಾದದಿಂದ ನಿರ್ಣೀತವಾದ ಶ್ರುತ್ಯರ್ಥವನ್ನು ಸಂಗ್ರಹಿಸಿ ಹೇಳುತ್ತಾನೆ. ಯಾವ ಸಾಧಕನಿಗೆ ಸ್ವಾತ್ಮಭೂತವಾದ ಬ್ರಹ್ಮವು ವೃತ್ತಿಗೆ ವಿಷಯವಾಗದೇ ಕೇವಲ ಸ್ವಪ್ರಕಾಶದಿಂದಲೇ ತಿಳಿದಿರುತ್ತದೆಯೋ ಅವನಿಗೆ ಬ್ರಹ್ಮವು ಜ್ಞಾತವಾಗಿದೆ. ಯಾವನ ಮನೋವೃತ್ತಿಗೆ ವಿಷಯವಾಗಿದೆಯೋ ಅವನು ಆತ್ಮತತ್ವವನ್ನು ತಿಳಿದುಕೊಂಡಿಲ್ಲ. ಆದುದರಿಂದ ನಾವು ಬ್ರಹ್ಮವನ್ನು ತಿಳಿದಿದ್ದೇವೆಂದು ಯಾರು ವಾದಿಸುತ್ತಾರೆಯೋ ಅವರು ವಿಷಯತ್ವೇನ ತಿಳಿದಿರುತ್ತಾರೆಯೇ ಹೊರತು ಸ್ವಾತ್ಮಭೂತವಾಗಿ ತಿಳಿಯಲಿಲ್ಲ. ಬುದ್ಧಿವೃತ್ತಿಗೆ ವಿಷಯವಾಗದೇ ಸ್ವರೂಪ ಪ್ರಕಾಶದಿಂದ ಯಾರು ಆತ್ಮನನ್ನು ಸಾಕ್ಷಾತ್ಕರಿಸಿಕೊಂಡಿರುತ್ತಾರೆಯೋ ಅವರು ಬ್ರಹ್ಮಜ್ಞಾನಿಗಳು. ಎಂದರೆ ಇಂದ್ರಿಯಗಳ ಮೂಲಕ ಬ್ರಹ್ಮವನ್ನು ವಿಷಯವಾಗದೇ ಸ್ವಾನುಭವದಿಂದಲೇ ತಿಳಿಯಬೇಕೆಂದು ಕೇ. ಉ. ನ ಅಭಿಪ್ರಾಯವು. ॥೧೭॥

"ಪ್ರತಿಬೋಧ ವಿದಿತಂ ಮತಂ" ಎಂಬ ಕೇ. ಉ. ೨.೪. ಶ್ರುತ್ಯರ್ಥವನ್ನು ಸಂಗ್ರಹಿಸುತ್ತಾನೆ. ಎಲೈ ಆಸ್ತಿಕರೇ, ಶ್ರವಣಮನನದಿಂದುಂಟಾದ ಯಾವ ಉಪಾಧಿಯೂ ಇಲ್ಲದ ಪರಮಾರ್ಥ ಸದ್ಬ್ರಹ್ಮವಿಷಯಕವಾದ ಜ್ಞಾನದಲ್ಲಿಯೂ, ಚಕ್ಷುರಾದಿ ಇಂದ್ರಿಯಗಳಿಂದುಂಟಾದ ವ್ಯಾವಹಾರಿಕ ಘಟಾದಿವಿಷಯಕವಾದ ಜ್ಞಾನದಲ್ಲಿಯೂ, ಪ್ರಾತೀತಿಕವಾದ ಶುಕ್ತಿರಜತಾದಿ ವಿಷಯಕವಾದ ಭ್ರಾಂತಿಜ್ಞಾನದಲ್ಲಿಯೂ ಸಹ

ಯಸ್ಯ ಕರ್ತೃತಯಾ ಭಾತಂ ಬ್ರಹ್ಮಾಕರ್ತೃ ಸುರೋತ್ತಮಾಃ ।
ತಸ್ಯ ಬ್ರಹ್ಮಾಮತಂ ಯಸ್ಮಾತ್ಕರ್ತೃ ತಸ್ಯ ಮತಂ ಹಿ ತತ್ ॥೧೯॥

ಯಸ್ಯ ಕರ್ಮತಯಾ ಭಾತಂ ಬ್ರಹ್ಮಾಕರ್ಮ ಸುರೋತ್ತಮಾಃ ।
ತಸ್ಯ ಬ್ರಹ್ಮಾಮತಂ ಯಸ್ಮಾತ್ಕರ್ಮ ತಸ್ಯ ಮತಂ ಹಿ ತತ್ ॥೨೦॥

ಅಕರ್ತ್ರ ವಿಷಯ ಪ್ರತ್ಯಕ್ಪ್ರಕಾಶಃ ಸ್ವಾತ್ಮನೈವ ತು ।
ವಿನಾ ತರ್ಕ ಪ್ರಮಾಣಾಭ್ಯಾಂ ಬ್ರಹ್ಮ ಯೋ ವೇದ ವೇದ ಸಃ ॥೨೧॥

ಏವಂ ರೂಪ ಪರಿಜ್ಞಾನ ಮಪಿ ದೃಶ್ಯತಯೈವ ತು ।
ಯಸ್ಯ ಭಾತಿ ಸ ತತ್ಸಾಕ್ಷೀ ಬ್ರೂತ ಬ್ರಹ್ಮಾತ್ಮವಿತ್ಕಥಂ ॥೨೨॥

ಬ್ರಹ್ಮವು ನಿರುಪಾಧಿಕವಾಗಿಯೂ, ಸ್ವಾತ್ಮಭೂತವಾಗಿಯೂ, ಚಿದೇಕರಸವಾಗಿಯೂ, ಯಾವ ವಿಕಾರವೂ ಇಲ್ಲದ್ದಾಗಿಯೂ, ಇರುವುದರಿಂದ ಕರ್ತೃವೂ, ಕರ್ಮವೂ ಸಹ ಆಗಲಾರದು. ಹಾಗೆ ಕರ್ತೃಕರ್ಮವಾಗದೇ ಆ ವೃತ್ತಿಜ್ಞಾನಗಳಿಗೆ ಸಾಕ್ಷಿಯಾಗಿದ್ದು ಭಾಸಕವಾಗಿ ಸ್ವಪ್ರಕಾಶಸ್ವರೂಪವಾಗಿರುತ್ತದೆ. ||೧೮||

ಆದರೆ ಅಕರ್ತೃವಾದ ಬ್ರಹ್ಮವು ಯಾವನ ದೃಷ್ಟಿಯಿಂದ ಕರ್ತೃವಾಗಿರುತ್ತದೆಯೋ ಅವನು ಬ್ರಹ್ಮಾತ್ಮತತ್ವವನ್ನು ತಿಳಿಯಲಿಲ್ಲ. ಏಕೆಂದರೆ ಹಿಂದೆ ಹೇಳಿದಂತೆ ನಿರ್ವಿಕಾರವಾದ ಚೈತನ್ಯದಲ್ಲಿ ಕರ್ತೃತ್ವಾದಿಗಳು ವಾಸ್ತವವಲ್ಲ. ಹಾಗೆ ಕರ್ತೃತ್ವವಿಶಿಷ್ಟವಾಗಿ ತಿಳಿದರೆ ಅದು ಭ್ರಾಂತಿಯೇ ಸರಿ. ||೧೯||

ಎಲೈ ಸುರಶ್ರೇಷ್ಠರೇ, ಕರ್ಮವಲ್ಲದ ಬ್ರಹ್ಮಸ್ವರೂಪವು ಯಾವನಿಗೆ ಕರ್ಮತ್ವವುಳ್ಳದ್ದಾಗಿ ಪ್ರಕಾಶಿಸುತ್ತದೆಯೋ ಅವನು ಬ್ರಹ್ಮವನ್ನು ತಿಳಿದವನಲ್ಲ. ||೨೦||

ಯಾವನು ಕರ್ತೃಸ್ವಭಾವವಿಲ್ಲದ, ಘಟಾದಿಗಳಂತೆ ವಿಷಯವಲ್ಲದ, ಒಳಗೆ ಇರತಕ್ಕ ಸ್ವಭಾವವುಳ್ಳ, ಸ್ವಪ್ರಕಾಶವಾದ ಆತ್ಮನನ್ನು ಯುಕ್ತಿಪ್ರಮಾಣಗಳಿಂದಲ್ಲದೇ ಸ್ವಾನುಭವದಿಂದಲೇ ಸಾಕ್ಷಾತ್ಕರಿಸಿಕೊಳ್ಳುತ್ತಾನೆಯೋ ಅಂತಹವನೇ ಬ್ರಹ್ಮವನ್ನು ತಿಳಿದಿರುತ್ತಾನೆ. ||೨೧||

ಇಂತಹ ಬ್ರಹ್ಮಸ್ವರೂಪವೂ ಸಹ ಯಾವನಿಗೆ ವಿಷಯವಾಗಿ ತೋರುವುದೋ ಅಂತಹವನು ಹೇಗೆ ಬ್ರಹ್ಮಜ್ಞಾನಿಯಾಗುವನು ? ||೨೨||

ಬ್ರಹ್ಮ ವಿದ್ಯಾಽಪಿ ಜ್ಞಾತಾ ಚೇದ್ವೇದ್ಯಾ ಭವತಿ ಕುಂಭವತ್ ।
ಅವೇದ್ಯಂ ಬ್ರಹ್ಮ ವೇದ್ಯಂ ಸ್ಯಾದ್ವೇದ್ಯ ವಿದ್ಯಾಽಭಿ ಸಂಗಮಾತ್ ॥೨೩॥

ವೇತ್ತಾಽಪಿ ವಿದ್ಯಾಸಂಬಂಧಾ ತ್ಸವಿಶೇಷೋ ಭವೇದ್ಧ್ರುವಂ ।
ನಿರ್ವಿಶೇಷಂ ಪರಂ ಬ್ರಹ್ಮ ತತೋ ವಿದ್ವಾನ್ನ ಚಾತ್ಮವಿತ್ ॥೨೪॥

ವಿದ್ಯಾಯಾ ಆಶ್ರಯತ್ವೇನ ವಿಷಯತ್ವೇನ ವಾ ಭವೇತ್ ।
ಬ್ರಹ್ಮ ನೈವಾನ್ಯಥಾ ತತ್ರ ಬ್ರಹ್ಮ ಬ್ರಹ್ಮಭವೇತ್ಕಥಂ ॥೨೫॥

ಬ್ರಹ್ಮ ಸಂಬಂಧಹೀನಾ ಚೇದ್ವಿದ್ಯಾ ಬ್ರಹ್ಮ ತು ವೇದಿತುಂ ।
ಅಶಕ್ಯಂ ತತ್ರ ಹೇ ದೇವಾಃ ಕೋ ವಾ ಬ್ರಹ್ಮಾತ್ಮವಿದ್ಭವೇತ್ ॥೨೬॥

ಬ್ರಹ್ಮವಿದ್ಯೆಯೂ ಸಹ ವೇದ್ಯವಾದರೆ ಘಟಾದಿಗಳಂತೆ ವಿಷಯವಾಗಬೇಕಾಗುತ್ತದೆ. ಹಾಗೆಯೇ ವೇದನೆಗೆ ವಿಷಯವಲ್ಲದ ಬ್ರಹ್ಮವೂ ಸಹ ವಿದ್ಯೆಯಿಂದಲೇ ತಿಳಿಯುವುದೇ ಆದರೆ ಘಟಾದಿಗಳಂತೆ ವಿಷಯವಾಗಬೇಕಾಗುತ್ತದೆ. ||೨೩||

ಯಾವ ವಿಶೇಷವೂ ಇಲ್ಲದ ಬ್ರಹ್ಮವನ್ನು ತಿಳಿದವನು ವಿದ್ಯಾಸಂಬಂಧದಿಂದ ಸವಿಶೇಷನಾಗುತ್ತಾನೆ. ಅಂತಹವನು ಆತ್ಮಜ್ಞಾನಿಯಲ್ಲವು. ಮತ್ತೇನೆಂದರೆ ಆತ್ಮನೇ ಆಗುತ್ತಾನೆ. ||೨೪||

ಬ್ರಹ್ಮವು ವಿದ್ಯೆಗೆ ಆಶ್ರಯವಾಗಲೀ, ವಿಷಯವಾಗಲೀ ಆಗಬೇಕು. ಅನ್ಯಥಾ ಆಗುವ ಹಾಗಿಲ್ಲ. ಹಾಗೆ ವೃತ್ತಿಜ್ಞಾನವುಳ್ಳವನು ಬ್ರಹ್ಮನಾಗುವುದು ಹೇಗೆ? ||೨೫||

ಬ್ರಹ್ಮನಿಗೆ ಕರ್ತೃಕರ್ಮರಾಹಿತ್ಯವನ್ನು ಉಪಪಾದಿಸುತ್ತಾನೆ--ಓ ಸುರರೇ, ಅವಿಕ್ರಿಯನಾಗಿಯೂ, ಅಸಂಗನಾಗಿಯೂ, ಇರತಕ್ಕ ಬ್ರಹ್ಮನಿಗೆ ವಿದ್ಯೆಯನ್ನು ಕುರಿತು ಆಶ್ರಯತ್ವವಾಗಲೀ, ವಿಷಯತ್ವವಾಗಲೀ ಸಂಭವಿಸುವುದಿಲ್ಲ. ಹಾಗೆ ಸಂಭವಿಸಿದರೆ ಆಶ್ರಯತ್ವ ವಿಷಯತ್ವರೂಪವಾದ ಧರ್ಮಸಂಬಂಧದಿಂದ ಬ್ರಹ್ಮನಿಗೆ ಪರಿಚ್ಛೇದ ಸಂಭವಿಸಬಹುದು. ಅಪರಿಚ್ಛಿನ್ನ (ಸಂಕೋಚವಿಲ್ಲದ) ವಾದ ಅರ್ಥವನ್ನು ಪ್ರತಿಪಾದಿಸತಕ್ಕ ಬ್ರಹ್ಮಶಬ್ದಪ್ರತಿಪಾದ್ಯತ್ವವು ಬರುವುದಿಲ್ಲ. ಆದುದರಿಂದ ಅಪರಿಚ್ಛಿನ್ನನಾದ ಬ್ರಹ್ಮನಿಗೆ ಯಾವ ಪದಾರ್ಥಗಳಿಂದಲೂ ಸಹ ಪಾರಮಾರ್ಥಿಕವಾದ ಸಂಬಂಧವನ್ನು ನಿರೂಪಣೆಮಾಡಲು ಸಾಧ್ಯವಿಲ್ಲವಾದಕಾರಣ, ವಿದ್ಯೆಯೂ ಪರಮಾರ್ಥತಃ ಬ್ರಹ್ಮಸಂಬಂಧರಹಿತವಾದುದೆಂದು ಸ್ವೀಕರಿಸಬೇಕು. ಈ ರೀತಿಯಾದ ವಿದ್ಯೆಯು ಬ್ರಹ್ಮವನ್ನುತಿಳಿಯಿಸಲು ಸಾಧ್ಯವಾಗಲಾರದು. ಹಾಗೆ ತಿಳಿಸಿದರೆ ಬ್ರಹ್ಮವು ವಿಕ್ರಿಯೆಗೆ

ಬ್ರಹ್ಮಣ್ಯಧ್ಯಸ್ತ ಮಾಯಾದಿ ನಿವೃತ್ತಿಂ ಕುರುತೇ ತು ಸಾ ।
ವಿದ್ಯಾ ಯದಿ ನ ಮಾಯಾಯಾಃ ಪ್ರತ್ಯಗಾತ್ಮನ್ಯಸಂಭವಾತ್ ॥೨೭॥

ಪ್ರತ್ಯಗಾತ್ಮಾ ಪರಂ ಜ್ಯೋತಿಃ ಮಾಯಯಾ ಸಾ ತು ಮಹತ್ತಮಃ ।
ತಥಾ ಸತಿ ಕಥಂ ಮಾಯಾ ಸಂಭವಃ ಪ್ರತ್ಯಗಾತ್ಮನಿ ॥೨೮॥

ತಸ್ಮಾತ್ತರ್ಕ ಪ್ರಮಾಣಾಭ್ಯಾಂ ಸ್ವಾನುಭೂತ್ಯಾ ಚ ಚಿದ್ಘನೇ ।
ಸ್ವಪ್ರಕಾಶೈಕ ಸಂಸಿದ್ಧೇಃ ನಾಸ್ತಿ ಮಾಯಾ ಪರಾತ್ಮನಿ ॥೨೯॥

ಆಶ್ರಯವಾಗಬೇಕಾಗುತ್ತದೆ. ಹೀಗಿರುತ್ತಿರಲಾಗಿ ಯಾವನು ಬ್ರಹ್ಮಾತ್ಮಜ್ಞಾನಿಯಾದಾನು ? ಮತ್ತೇನೆಂದರೆ ವಾಙ್ಮನಸಾತೀತವಾಗಿಯೂ, ಸ್ವಪ್ರಕಾಶಚಿತ್ಸ್ವರೂಪವಾಗಿಯೂ, ಇರತಕ್ಕ ಬ್ರಹ್ಮವೇ ಆಗುತ್ತಾನೆ. ॥೨೬॥

ಸ್ವಪ್ರಕಾಶವಾದ ಬ್ರಹ್ಮನಲ್ಲಿ ವಿದ್ಯೆಯಿಂದ ಅತಿಶಯವೇನೂ ಆಗದಿದ್ದಾಗ್ಯೂ ಬ್ರಹ್ಮಸ್ವರೂಪವನ್ನು ಆವರಿಸಿಕೊಂಡಿರುವ ಅವಿದ್ಯಾನಿವೃತ್ತಿಯನ್ನು, ಮಾತ್ರ ಉಂಟು ಮಾಡುವಿಕೆಯಿಂದ ಬ್ರಹ್ಮನ ಸಂಬಂಧವು ವಿದ್ಯೆಗೆ ಬರಬಹುದಲ್ಲವೆ? ಎಂದರೆ ಇಲ್ಲವೆಂದು ಹೇಳುತ್ತಾನೆ. ಒಂದುವೇಳೆ ವಿದ್ಯೆಯು ಬ್ರಹ್ಮನಲ್ಲಿ ಅಧ್ಯಸ್ತವಾದ ಮಾಯೆಯ ನಿವೃತ್ತಿಯನ್ನು ಮಾಡುತ್ತದೆಯೆಂದು ಇಟ್ಟುಕೊಂಡರೆ ಅದೂ ಸರಿಯಲ್ಲ. ಏಕೆಂದರೆ, "ಅಹಂಬ್ರಹ್ಮಾಸ್ಮಿ" ಎಂದು ಪ್ರತ್ಯಕ್ಷದಿಂದ ಸಾಕ್ಷಾತ್ಕೃತವಾದ ಪ್ರತ್ಯಕ್‌ರೂಪವಾದ ಯಾವ ದೋಷವೂ ಇಲ್ಲದ ಬ್ರಹ್ಮನಲ್ಲಿ ಮಾಯಾತತ್ಕಾರ್ಯವು ಸಂಭವಿಸುವುದಿಲ್ಲ. ಆದುದರಿಂದ ಅವಿದ್ಯಾನಿವೃತ್ತ್ಯರ್ಥಕವಾಗಿ ವಿದ್ಯೆಯು ಎಂಬುದೂ ಸಹ ವಿಚಾರ ಮಾಡಲು ಪಾರಮಾರ್ಥಿಕವಾಗಿ ನಿಜವಾದುದಲ್ಲ. ॥೨೭॥

"ತಮೇವ ಭಾಂತ ಮನುಭಾತಿ ಸರ್ವಂ ತಸ್ಯ ಭಾಸಾ ಸರ್ವಮಿದಂ ವಿಭಾತಿ ॥" "ಯೇನ ಸೂರ್ಯಸ್ತಪತಿ ತೇಜಸೇದ್ಧಃ" ಎಂಬ ಶ್ರುತಿಸ್ಮೃತಿಪ್ರಮಾಣಗಳಿಂದ ಬ್ರಹ್ಮವು ತೇಜೋದಾಯಕಗಳಾದ ಪ್ರಸಿದ್ಧವಾದ ಸೂರ್ಯಾದಿಗಳಿಗೂ ಸಹ ಚಿತ್ಪ್ರಕಾಶವನ್ನು ಕೊಡೋಣದರಿಂದ ಪರಂಜ್ಯೋತಿರೂಪವಾದುದು. ಮಾಯೆಯಾದರೋ ಗಾಢಾಂಧಕಾರವಾದ ಕತ್ತಲೆಯು ಸಮಸ್ತವನ್ನೂ ಆಚ್ಛಾದಿಸುವಂತೆ ಇರೋಣದರಿಂದ ಅಂಧಕಾರರೂಪವಾದುದು. ಹೀಗೆ ಪರಸ್ಪರ ವಿರುದ್ಧವಾದ ಪದಾರ್ಥಗಳಿಗೆ ಪಾರಮಾರ್ಥಿಕವಾದ ಸಂಬಂಧವು ಹೇಗೆತಾನೇ ಉಂಟಾದೀತು ? ಆದುದರಿಂದ ಯುಕ್ತಿಪ್ರಮಾಣ, ತನ್ನ ಅನುಭವ, ಈ ಪ್ರಮಾಣಗಳಿಂದ ವಿಚಾರಿಸಿದರೆ ಜ್ಞಾನ

ವ್ಯಾವಹಾರಿಕ ದೃಷ್ಟ್ಯೈವಂ ವಿದ್ಯಾಽವಿದ್ಯಾ ನ ಚಾನ್ಯಥಾ ।
ತತ್ತ್ವದೃಷ್ಟ್ಯಾತು ನಾಸ್ತ್ಯೇವ ತತ್ತ್ವಮೇವಾಸ್ತಿ ಕೇವಲಂ ॥೩೦॥

ವ್ಯಾವಹಾರಿಕ ದೃಷ್ಟಿಸ್ತು ಪ್ರಕಾಶಾ ವ್ಯಭಿಚಾರತಃ ।
ಪ್ರಕಾಶ ಏವ ಸತತಂ ತಸ್ಮಾದದ್ವೈತ ಮೇವ ಹಿ ॥೩೧॥

ರೂಪನಾದ, ಸ್ವಪ್ರಕಾಶದಿಂದ ಸಿದ್ಧನಾದ ಪರಮಾತ್ಮನಲ್ಲಿ ಮಾಯೆಯ ಸಂಬಂಧವೂ ಪಾರಮಾರ್ಥಿಕವಾಗಿ ಘಟಿಸಲಾರದು. ॥೨೮-೨೯॥

ಹಿಂದೆ ಹೇಳಿದ ಪ್ರಕಾರವಾಗಿ ವಿದ್ಯೆಯು ಆತ್ಮನಲ್ಲಿ ಏನನ್ನೂ ಮಾಡಲಾರದೆಂದು ಒಪ್ಪಿಕೊಂಡರೆ "ಬ್ರಹ್ಮವಿದಾಪ್ನೋತಿ ಪರಂ" ಇತ್ಯಾದಿ ಶ್ರುತಿಗಳಲ್ಲಿ ಬ್ರಹ್ಮಪ್ರಾಪ್ತಿಗೆ ವಿದ್ಯೆಯು ಸಾಧನವೆಂದು ಹೇಳಿದ್ದಕ್ಕೆ ವಿರೋಧಬರುತ್ತದೆಂದರೆ ಅದಕ್ಕೆ ಉತ್ತರವನ್ನು ಹೇಳುತ್ತಾನೆ. ಈ ವಿದ್ಯಾ ಮತ್ತು ಅವಿದ್ಯಾ ಇತ್ಯಾದಿಗಳು ವ್ಯವಹಾರ ಕಾಲದಲ್ಲಿಯೇ ಇರುವುವು. ವೇದವೂ ಸಹ ವ್ಯವಹಾರದೃಷ್ಟಿಯಿಂದ ಮಾತ್ರ ವಿದ್ಯೆಯು ಅವಿದ್ಯೆಗೆ ನಿವರ್ತಕವೆಂದು ತಿಳಿಸುತ್ತದೆ. ಪರಮಾರ್ಥದೃಷ್ಟಿಯಿಂದ ವಿಚಾರಿಸಿದರೆ ಅದ್ವಿತೀಯವಾಗಿಯೂ. ಸ್ವಪ್ರಕಾಶವಾಗಿಯೂ, ಚೈತನ್ಯವಾಗಿಯೂ ಇರತಕ್ಕ ಬ್ರಹ್ಮವೇ ಸತ್ಯವಾದುದು. ॥೩೦॥

ಈ ರೀತಿಯಾಗಿ ಪರಮಾರ್ಥವಾಗಿ ಬ್ರಹ್ಮವು ಅಸಂಗವಾದುದರಿಂದ ವಿದ್ಯಾ ಸಂಬಂಧವೂ ಇರುವುದಿಲ್ಲ. ಆ ಬ್ರಹ್ಮವು ಸಮಸ್ತ ಬುದ್ಧಿವೃತ್ತಿಗಳಿಗೂ ಭಾಸಕಸಾಕ್ಷಿಯಾಗಿ ಸ್ವಪ್ರಕಾಶವಾಗಿದೆಯೆಂದು ಬೋಧಿಸತಕ್ಕ "ಪ್ರತಿಬೋಧವಿದಿತಂ ಮತಂ" ಎಂಬ ಕೇನ. ಶ್ರುತ್ಯರ್ಥವನ್ನು ಉಪಸಂಹಾರಮಾಡುತ್ತಾನೆ. ವ್ಯವಹಾರದೃಷ್ಟಿಯಿಂದ ಪುರುಷನಿಗೆ ಘಟಪಟಾದಿ ವಿಷಯಕವಾದ ಮನೋವೃತ್ತಿಗಳಲ್ಲಿ ಸಾಕ್ಷಿಚಿತ್ಸ್ವಯಂ ಪ್ರಕಾಶಕವಾದ ಬ್ರಹ್ಮವು ನಿಯತವಾಗಿ ಸ್ವಪರವ್ಯವಹಾರಹೇತುವಾಗಿ ಆತ್ಮರೂಪವಾಗಿರುತ್ತದೆ. ಆದುದರಿಂದ ಅನಪಾಯಿಯಾಗಿಯೂ, ಚಿತ್ಪ್ರಕಾಶವಾಗಿಯೂ, ಇರತಕ್ಕ ಬ್ರಹ್ಮದಲ್ಲಿ ರಜ್ಜುವಿನ ಇದಂ ಎಂಬ ಶಬ್ದದಲ್ಲಿ ಎಂದರೆ ಅಂಶದಲ್ಲಿ ಸರ್ಪದಾರೆಯಂತೆ ವ್ಯಭಿಚಾರಿ, ಉತ್ಪತ್ತಿನಾಶ ಉಳ್ಳದ್ದು, ಯಾದ ಪ್ರಪಂಚವು ಕಲ್ಪಿತವಾಗಿ ಮಿಥ್ಯಾಭೂತವಾಗಿದೆ. ಪ್ರಕಾಶವಾದ ಅದ್ವಿತೀಯವಾದ ಬ್ರಹ್ಮ ಒಂದೇ ಯಾವಾಗಲೂ ನಿತ್ಯಸಿದ್ಧವಾಗಿರುತ್ತದೆ. ॥೩೧॥

ಅದ್ವೈತ ಮಿತಿ ಚೋಕ್ತಿಶ್ಚ ಪ್ರಕಾಶಾ ವ್ಯಭಿಚಾರತಃ ।
ಪ್ರಕಾಶ ಏವ ಸತತಂ ತಸ್ಮಾನ್ಮೌನಂ ಹಿ ಯುಜ್ಯತೇ ॥೩೨॥

ಪ್ರತ್ಯಕ್ಷಾದಿ ಪ್ರಮಾಣೈಶ್ಚ ತರ್ಕೈಃ ಶ್ರುತ್ಯಾ ತಥೈವಚ ।
ಸ್ವಗುರೋ ರುಪದೇಶೇನ ಪ್ರಸಾದೇನ ಶಿವಸ್ಯ ತು ॥೩೩॥

ಆರ್ಜಿತೈರಪಿ ಧರ್ಮೈಶ್ಚ ಕಾಲಪಾಕೇನ ಧಾರ್ಮಿಕಾಃ ।
ಅರ್ಥೋ ಮಹಾನಯಂ ಭಾತಿ ಶಾಂಕರಃ ಪುರುಷಸ್ಯ ತು ॥೩೪॥

ಅದ್ವೈತವೆಂದರೆ ದ್ವೈತನಿಷೇಧವಿಶಿಷ್ಟಬ್ರಹ್ಮವೆಂದರ್ಥ. ಹೀಗಿರುತ್ತಿರಲಾಗಿ ನಿರ್ವಿಶೇಷಬ್ರಹ್ಮಸಿದ್ಧಿಯು ಹೇಗೆಂದರೆ, ಅದಕ್ಕೆ ಉತ್ತರವನ್ನು ಹೇಳುತ್ತಾನೆ. ಅದ್ವೈತವೆಂಬ ಉಕ್ತಿಯೂ ಸಹ ಅವ್ಯಭಿಚರಿತವಾದ ಚಿತ್ಪ್ರಕಾಶಸ್ವರೂಪದಿಂದ ಏಕತ್ವವು ತಿಳಿಯುವುದರಿಂದ ಪ್ರಕಾಶಸ್ವರೂಪವಾಗಿದೆ. ಈ ರೀತಿಯಾದ ಸ್ವಪ್ರಕಾಶವಾದ ಚೈತನ್ಯದಲ್ಲಿ ಶಬ್ದದಿಂದಲಾಗಲೀ ಮನಸ್ಸಿನಿಂದಲಾಗಲಿ ತಿಳಿಯಲು ಹೋದರೆ ಉಪಾಧಿಸಂಬಂಧವು ಬರುವುದರಿಂದ ತೂಷ್ಣೀಂಭಾವವೇ (ಸುಮ್ಮನಿರುವಿಕೆ) ವಿದ್ವಾಂಸರಿಗೆ ಬ್ರಹ್ಮಸ್ವರೂಪವನ್ನು ತಿಳಿಯಲು ಉಪಾಯವಾಗಿರುತ್ತದೆ. ಎಂದರೆ ಮನಸ್ಸಿನಿಂದ ಕೂಡಿದ ಶ್ರೋತ್ರಾದಿ ಇಂದ್ರಿಯಗಳನ್ನು ಅವುಗಳ ವಿಷಯಗಳಿಂದ ತಿರುಗಿಸಬೇಕು. ಹೀಗೆ ತಿರುಗಿಸಿದಲ್ಲಿ ಹೊರಗಿನ ವಿಕ್ಷೇಪಗಳು ಹೋಗಲು ಅಂತಃಕರಣವು ಪ್ರಸನ್ನವಾಗಿ ಅಂತಃಕರಣಭಾಸಕವಾದ ಪ್ರತ್ಯಕ್ಚೈತನ್ಯರೂಪವಾದ ಬ್ರಹ್ಮವು ತಾನೇ ಪ್ರಕಾಶಿಸುತ್ತದೆ. ಇದರಿಂದ “ಯ ಸ್ಯಾಮತಂ ತಸ್ಯಮತಂ” ಎಂಬ ಕೇನ. ಶ್ರುತ್ಯರ್ಥವು ನಿರೂಪಿಸಲ್ಪಟ್ಟಿತು. ॥೩೨॥

ಮೌನಮಾತ್ರವೇ ಬ್ರಹ್ಮೋಪದೇಶವಾದರೆ ಎಲ್ಲರಿಗೂ ಆ ಮೌನದಿಂದ ಆ ಬ್ರಹ್ಮಪ್ರಾಪ್ತಿಯಾಗಬಹುದಲ್ಲವೇ ? ತಥಾ ಚ ಬ್ರಹ್ಮಪ್ರಾಪ್ತಿಗೆ ಪ್ರಯತ್ನವೇ ಬೇಡವೆಂದರೆ ಅದಕ್ಕೆ ಸಮಾಧಾನವನ್ನು ಹೇಳುತ್ತಾನೆ. ಎಲೈ ಧಾರ್ಮಿಕರಾದ ದೇವತೆಗಳೇ, ಪ್ರತ್ಯಕ್ಷಾದಿಪ್ರಮಾಣಗಳಿಂದಲೂ, ಯುಕ್ತಿಗಳಿಂದಲೂ, ಶ್ರುತಿಪ್ರಮಾಣದಿಂದಲೂ ಗುರೂಪದೇಶದಿಂದಲೂ, ಪರಮೇಶ್ವರನ ಅನುಗ್ರಹದಿಂದಲೂ, ಅನೇಕ ಜನ್ಮಗಳಿಂದ ಮಾಡಿದ ನಿಷ್ಕಾಮಕರ್ಮಗಳಿಂದಲೂ, ಕಾಲಮಹಿಮೆಯಿಂದಲೂ, ಸಹ ಸಾಧನಚತುಷ್ಟಯಸಂಪನ್ನನಾದ ಯಾವನೊಬ್ಬ ಮಹಾತ್ಮನಾದ ಪುರುಷನಿಗೆ ಸೂಕ್ಷ್ಮವಾದುದರಿಂದ ಅತಿಗಂಭೀರವಾದ ಬ್ರಹ್ಮಸ್ವರೂಪವಾದ ವೇದಾರ್ಥವು ಸ್ಫುರಿಸುತ್ತದೆ. ಅಷ್ಟೇ ಹೊರತು ಎಲ್ಲರಿಗೂ ತಿಳಿಯಲಾರದು. ॥೩೩-೩೪॥

ಯಸ್ಯ ಪ್ರಕಾಶಿತಃ ಸಾಕ್ಷಾದಯ ಮರ್ಥೋ ಮಹತ್ತರಃ ।
ತಸ್ಯ ನಾಸ್ತಿ ಕ್ರಿಯಾಃ ಸರ್ವಾ ಜ್ಞಾನಂ ಚಾಪ್ಯದ್ವಯತ್ವತಃ ॥೩೫॥

ಅಯಮರ್ಥೋ ಮಹಾನ್ಯಸ್ಯ ಸ್ವತ ಏವ ಪ್ರಕಾಶಿತಃ ।
ನ ಸ ಜೀವೋ ನ ಸ ಬ್ರಹ್ಮ ನ ಚಾನ್ಯದಪಿ ಕಿಂಚನ ॥೩೬॥

ಅಯಮರ್ಥೋ ಮಹಾನ್ಯಸ್ಯ ಸ್ವತಏವ ಪ್ರಕಾಶಿತಃ ।
ನ ತಸ್ಯ ವರ್ಣಾ ವಿದ್ಯಂತೇ ನಾಶ್ರಮಾಶ್ಚ ತಥೈವ ಚ ॥೩೭॥

ಅಯಮರ್ಥೋ ಮಹಾನ್ಯಸ್ಯ ಸ್ವತ ಏವ ಪ್ರಕಾಶಿತಃ ।
ನ ತಸ್ಯ ಧರ್ಮೋಽಧರ್ಮಶ್ಚ ನ ನಿಷೇಧೋ ವಿಧಿರ್ನ ಚ ॥೩೮॥

ಏತಮರ್ಥಂ ಮಹಾಂತಂ ಯಃ ಪ್ರಾಪ್ತಃ ಶಂಭೋಃ ಪ್ರಸಾದತಃ ।
ಸ ಶಂಭುರೇವನ್ನೈನಾನ್ಯ ಇತಿ ಮೇ ನಿಶ್ಚಿತಾ ಮತಿಃ ॥೩೯॥

"ಅಮೃತತ್ವಂ ಹಿ ವಿಂದತೇ" ಎಂದು ಕೇನೋಪನಿಷತ್ತಿನ ಶ್ರುತಿಯಲ್ಲಿ ಸಾಧನಾಂತರಾಪೇಕ್ಷೆಯಿಲ್ಲದೇ ಆದ ಬ್ರಹ್ಮಜ್ಞಾನವು ಮೋಕ್ಷಪ್ರಾಪ್ತಿಯೆಂದು ಹೇಳಿದೆ. ಅದರ ತಾತ್ಪರ್ಯವನ್ನು ವಿವರಿಸುತ್ತಾನೆ. ಅತಿ ಸೂಕ್ಷ್ಮವಾದುದರಿಂದ ಮಹತ್ತರ ವಾಗಿರತಕ್ಕ ಬ್ರಹ್ಮರೂಪವಾದ ಅರ್ಥವು ಯಾವನಿಗೆ "ಅಹಂ ಬ್ರಹ್ಮಾಸ್ಮಿ" ಎಂದು ಅಪರೋಕ್ಷವಾಗಿ ಪ್ರಕಾಶಿಸುತ್ತದೆಯೋ ಅವನಿಗೆ ಯಾವ ವಿಕ್ರಿಯೆಗಳೂ ಇರುವುದಿಲ್ಲ. ಏಕೆಂದರೆ, ತನ್ನ ಸ್ವರೂಪವು ಬ್ರಹ್ಮರೂಪವಾದುದರಿಂದ ಜ್ಞಾನಕರ್ಮರೂಪ ಸಾಧ ನಾಂತರವು ಅಂತಹ ಜ್ಞಾನಿಗೆ ತೋರುವುದಿಲ್ಲ. ॥೩೫॥

ವಿದ್ವಾಂಸನಿಗೆ ಭೇದದಿಂದ ಉಂಟಾದ ಯಾವ ವ್ಯವಹಾರವೂ, ಇಲ್ಲವೆಂದು ಹೇಳುತ್ತಾನೆ.—ಇಂತಹ ಪರಮ ಪೂಜ್ಯವಾದ ಬ್ರಹ್ಮರೂಪಾರ್ಥವು ಯಾವನಿಗೆ ತಾನೇ ಪ್ರಕಾಶಿಸುತ್ತದೆಯೋ ಅವನು ಜೀವನೂ ಅಲ್ಲ. ಬ್ರಹ್ಮನೂ ಅಲ್ಲ. ಉಳಿದ ಇನ್ನು ಯಾವ ಪದಾರ್ಥವೂ ಅಲ್ಲ. ॥೩೬॥

ವೇದೈಕವೇದ್ಯವಾಗಿಯೂ, ತಿಳಿಯಲು ಬಲು ಕಷ್ಟವಾದುದಾಗಿಯೂ, ಪರಮ ಗಂಭೀರವಾಗಿಯೂ, ಇರುವ ಬ್ರಹ್ಮಸ್ವರೂಪವಾದ ಅರ್ಥವು ಯಾವನಿಗೆ ಸಾಕ್ಷಾತ್ಕೃ ತವಾಗಿದೆಯೋ ಅಂತಹವನಿಗೆ ಪುಣ್ಯಪಾಪಗಳೂ, ವಿಧಿನಿಷೇಧಗಳೂ, ಸಹ ಇರುವು ದಿಲ್ಲ. ಇಂತಹ ಪರಮಪವಿತ್ರವಾದ ವಸ್ತುವನ್ನು ಯಾವನು ಶಿವನ ಅನುಗ್ರಹದಿಂದ

ಏತಮರ್ಥಂ ಮಹಾಂತಂ ಯಃ ಪ್ರಾಪ್ತಃ ಶಂಭೋಃ ಪ್ರಸಾದತಃ ।
ತಸ್ಯಾಹಂ ವೈಭವಂ ವಕ್ತುಂ ನ ಶಕ್ತಃ ಸತ್ಯ ಮೀರಿತಂ ॥೪೦॥

ಏತಮರ್ಥಂ ಮಹಾಂತಂ ಯಃ ಪ್ರಾಪ್ತಃ ಶಂಭೋಃ ಪ್ರಸಾದತಃ ।
ವೈಭವಂ ತಸ್ಯ ವಿಷ್ಣುಶ್ಚ ನ ಶಕ್ತೋ ವಕ್ತುಮಾಸ್ತಿಕಾಃ ॥೪೧॥

ಏತಮರ್ಥಂ ಮಹಾಂತಂ ಯಃ ಪ್ರಾಪ್ತಃ ಶಂಭೋಃ ಪ್ರಸಾದತಃ ।
ವೈಭವಂ ತಸ್ಯ ರುದ್ರಶ್ಚ ನ ಶಕ್ತೋ ವಕ್ತು ಮಾಸ್ತಿಕಾಃ ॥೪೨॥

ಏತಮರ್ಥಂ ಮಹಾಂತಂ ಯಃ ಪ್ರಾಪ್ತಃ ಶಂಭೋಃ ಪ್ರಸಾದತಃ ।
ವೈಭವಂ ತಸ್ಯ ವೇದಾಶ್ಚ ನ ಶಕ್ತಾ ವಕ್ತುಮಾಸ್ತಿಕಾಃ ॥೪೩॥

ತಿಳಿಯುತ್ತಾನೆಯೋ ಅಂತಹವನು ಸಾಕ್ಷಾತ್ ಶಿವನೇ ಆಗಿದ್ದಾನೆಂದು ನನ್ನ ನಿಶ್ಚಯವಾದ ಅಭಿಪ್ರಾಯವು. ಇಂತಹ ಪರಮಾರ್ಥವಸ್ತುವನ್ನು ಹೊಂದಿದವನ ಮಹಿಮೆಯನ್ನು ವರ್ಣಿಸಲು ನನ್ನಿಂದ ಸಾಧ್ಯವಿಲ್ಲ. ಇದು ಸತ್ಯವಾದ ಮಾತು. ||೩೭-೩೮-೩೯-೪೦||

"ಆತ್ಮನಾ ವಿಂದತೇ ವೀರ್ಯಂ" ಎಂಬ ಕೇನ. ಶ್ರುತಿಯಲ್ಲಿ ವಿದ್ಯೆಯಿಂದ ಪ್ರಕಾಶಿತವಾದ ಆತ್ಮಸ್ವರೂಪದಿಂದಲೇ ಅವಿದ್ಯಾನಿವೃತ್ತಿಸಾಮರ್ಥ್ಯವನ್ನು ವಿದ್ವಾಂಸನಾದವನು ಹೊಂದುತ್ತಾನೆಂದು ಹೇಳಿದೆ. ಅದನ್ನು ತೋರಿಸುತ್ತಾನೆ. ಎಲೈ ಆಸ್ತಿಕರೇ, ಯಾವನು ಪರಮೇಶ್ವರನ ಅನುಗ್ರಹದಿಂದ ಪರಮಪೂಜ್ಯವಾದ ಬ್ರಹ್ಮತತ್ವವನ್ನು ತಿಳಿದಿರುತ್ತಾನೆಯೋ ಅವನ ಮಹತ್ವವನ್ನು ವಿಷ್ಣುವೂ, ರುದ್ರನೂ, ವೇದಗಳೂ ಸಹ ಹೇಳಲು ಸಮರ್ಥರಲ್ಲ. ಎಂದರೆ ಧನಸಹಾಯದಿಂದಲೂ, ಮಣಿಮಂತ್ರೌಷಧಿಗಳಿಂದಲೂ, ಉಂಟಾದ ವೀರ್ಯವು ಅನಿತ್ಯವಾದ ವಸ್ತುಗಳಿಂದುಂಟಾದುದರಿಂದ ಮೋಕ್ಷಕ್ಕಿಂತಲೂ ಬೇರೆ ಫಲಕ್ಕೆ ಸಾಧನವಾದುದರಿಂದ ಪರಿಚ್ಛೇದಿಸಲು ಶಕ್ಯವಾಗುತ್ತದೆ. ಆತ್ಮವಿದ್ಯೆಯಿಂದ ಉಂಟಾದ ವೀರ್ಯವು ಅಂತಹದಲ್ಲದ್ದರಿಂದ ಅಳತೆಗೆ ಮೀರಿರುವ ಅದನ್ನು ಹೇಳಲು ಈಶನೂ ಸಹ ಸಮರ್ಥನಲ್ಲ. ಎಂದು ಅಭಿಪ್ರಾಯವು. ||೪೧-೪೨-೪೩||

ಅಸ್ಮಿನ್ದೇಹೇ ಯದಿ ಜ್ಞಾತಃ ಪುರೋಕ್ತೋಽರ್ಥೋಽ ಮಹಾನಯಂ ।
ಸ ಸಾಕ್ಷಾತ್ಸತ್ಯಮದ್ವೈತಂ ನಿರ್ವಾಣಂ ಯಾತಿ ಮಾನವಃ ॥೪೪॥

ಅಸ್ಮಿನ್ದೇಹೇ ನ ವಿಜ್ಞಾತಃ ಪೂರ್ವೋಕ್ತೋಽರ್ಥೋಽ ಮಹಾನ್ಯದಿ ।
ವಿನಷ್ಟಿ ರೇವ ಮಹತೀ ತಸ್ಯ ನೈವ ಪರಾ ಗತಿಃ ॥೪೫॥

ಸ್ವಶರೀರೇಽನ್ಯದೇಹೇಷು ಸಮಂ ನಿಶ್ಚಿತ್ಯ ತಂ ದೃಢಂ ।
ಅಥ ಧೀರಾ ನ ಜಾಯಂತೇ ಹ್ಯಮೃತಾಶ್ಚ ಭವಂತಿ ಹಿ ॥೪೬॥

ಇಂತಹ ಅಮೃತತ್ವಸಾಧನವಾದ ವಿದ್ಯೆಯು ಸುಕೃತದಿಂದಲೇ ಸಿಕ್ಕಬೇಕು. ಆದುದರಿಂದ ಮುಮುಕ್ಷುಗಳು ಈ ಶರೀರವಿರುವಾಗಲೇ ಬಹಳ ಪ್ರಯತ್ನಪಟ್ಟು ಇದನ್ನು ಸಂಪಾದಿಸಬೇಕು. ಎಂಬುದಾಗಿ "ಇಹಚೇದವೇದೀತ್ ಅಥ ಸತ್ಯಮಸ್ತಿ ನ ಚೇದಿಹಾ ವೇದೀನ್ಮಹತೀ ವಿನಷ್ಟಿಃ" ಎಂದು ಕೇನ. ಉ. ಶ್ರುತಿಯು ಉಪದೇಶಿಸುತ್ತದೆ. ಆ ಶ್ರುತ್ಯರ್ಥವನ್ನು ಹೇಳುತ್ತಾನೆ. ವಿದ್ಯೆಗೆ ಅಧಿಕಾರವುಳ್ಳ ಈ ಶರೀರದಲ್ಲಿಯೇ ಯಾವನು ಪ್ರತ್ಯಕ್ಷಬ್ರಹ್ಮರೂಪವಾದ ಅರ್ಥವನ್ನು ತಿಳಿಯುತ್ತಾನೆಯೋ ಅವನು ಪ್ರತ್ಯಕ್ಷವಾಗಿಯೂ, ಪಾರಮಾರ್ಥಿಕವಾಗಿಯೂ, ಯಾವ ಉಪಾಧಿಯೂ ಇಲ್ಲದ ಅದ್ವಿತೀಯಸ್ವರೂಪವಾದ ಬ್ರಹ್ಮಾತ್ಮೈಕ್ಯಪ್ರಾಪ್ತಿರೂಪವಾದ ಮೋಕ್ಷವನ್ನು ಹೊಂದುತ್ತಾನೆ. ॥೪೪॥

ಯಾವನು ಈ ವಿದ್ಯೆಗೆ ಅಧಿಕಾರ ಉಳ್ಳ ಶರೀರಸ್ಥಿತಿ ಕಾಲದಲ್ಲಿಯೇ ಆಲಸ್ಯದಿಂದ ಶ್ರವಣಾದಿಗಳನ್ನು ಮಾಡದೇ ಪರಮಾತ್ಮನನ್ನು ತಿಳಿಯುವುದಿಲ್ಲವೋ ಅವನಿಗೆ ನಿರತಿಶಯವಾದ ಆನಂದಪ್ರಾಪ್ತಿರೂಪವಾದ ಪುರುಷಾರ್ಥವು ಸಿಕ್ಕುವುದಿಲ್ಲ. ತಥಾಚ ಅಂತಹ ಅನಾತ್ಮಜ್ಞನಿಗೆ ಜನನಮರಣಪ್ರವಾಹರೂಪವಾದ ಸಂಸಾರವೇ ಹೊರತು, ತುಂಬ ನಷ್ಟವೇ ಹೊರತು, ಯಾವಾಗಲೂ ಮುಕ್ತಿಯಾಗಲಾರದು. ॥೪೫॥

ವಿದ್ಯೆಗೆ ಫಲವನ್ನು ಹೇಳುತ್ತಾನೆ. ಯಾವ ಪ್ರಾಜ್ಞರು ತನ್ನ ದೇಹದಲ್ಲಿಯೂ ಇತರರ ದೇಹಗಳಲ್ಲಿಯೂ, ಸಮನಾಗಿರತಕ್ಕ ಪರಮಾತ್ಮನನ್ನು ಶ್ರವಣಾದಿಗಳಿಂದ ತಿಳಿದು ದೃಢನಿಶ್ಚಯ ಉಳ್ಳವರಾಗಿ ಸಂಸಾರಭಯವಿಲ್ಲದವರಾಗಿರುತ್ತಾರೆಯೋ ಅವರು ಪುನರ್ಜನ್ಮವನ್ನು ಹೊಂದದೇ ಅಮರರಾಗುತ್ತಾರೆ. ಏಕೆಂದರೆ, ವಿದ್ಯೆಯಿಂದ ಸಮಸ್ತಕ್ಕೂ ಕಾರಣವಾದ ಅವಿದ್ಯೆಯು ನಾಶವಾದುದರಿಂದ, ತಿರುಗಿ ಅವರಿಗೆ ಜನ್ಮವೇ ಇಲ್ಲ. ಆದುದರಿಂದ ಅವರು ನಿತ್ಯವಾದ ಬ್ರಹ್ಮಸ್ವರೂಪವಾಗಿರುತ್ತಾರೆ. ॥೪೬॥

ಬದ್ಧೋ ಮುಕ್ತೋ ಮಹಾವಿದ್ವಾನಜ್ಞ ಇತ್ಯಾದಿ ಭೇದತಃ ।
ಏಕ ಏವ ಸದಾ ಭಾತಿ ನಾನೇವ ಸ್ವಪ್ನವತ್ಸ್ವಯಂ ॥೪೭॥

ಅತಃ ಸ್ವಮುಕ್ತ್ಯೈವಾऽನ್ಯೇಷಾ ಮಾಭಾಸಾನಾಮಪಿ ಧ್ರುವಂ ।
ಮುಕ್ತಿಂ ಜಾನಾತಿ ಹೇ ದೇವಾ ಆತ್ಮನಾ ಮಾತ್ಮವಿದ್ವರಃ ॥೪೮॥

ಸ್ವ ಸಂಸಾರ ದಶಾಯಾಂ ತು ಸ್ವಭ್ರಾಂತ್ಯಾ ಸರ್ವದೇಹಿನಾಂ ।
ಆಭಾಸಾನಾಂ ಚ ಸಂಸಾರಂ ವೇದ ಮುಕ್ತಿಂ ತಥೈವಚ ॥೪೯॥

ಒಬ್ಬನೇ ಆತ್ಮನು ಎಲ್ಲ ಶರೀರಗಳಲ್ಲಿ ಸಮನಾಗಿ ಹೇಗೆ ಇರುತ್ತಾನೆ? ಒಬ್ಬ ಬದ್ಧನು. ಒಬ್ಬ ಮುಕ್ತನು ಎಂಬ ಈ ರೀತಿಯಾದ ವ್ಯವಹಾರದಿಂದ ಭೇದವು ತೋರುವುದಲ್ಲವೇ? ಎಂದರೆ ಅದಕ್ಕೆ ಉತ್ತರವನ್ನು ಹೇಳುತ್ತಾನೆ. ಸ್ವಪ್ನಕಾಲದಲ್ಲಿ ತೈಜಸನಾದ ಆತ್ಮನು ರಥಾದಿ ನಾನಾರೂಪವಾಗಿ ಹೇಗೆ ತೋರುತ್ತಾನೆಯೋ ಹಾಗೆ ಒಬ್ಬನೇ ಆದ ಪರಮಾತ್ಮನು ತನ್ನ ಅವಿದ್ಯೆಯಿಂದ ಕಲ್ಪಿತವಾದ ಉಪಾಧಿಗಳಿಂದ ಬದ್ಧನು, ಮುಕ್ತನು, ದೊಡ್ಡ ವಿದ್ವಾಂಸನು, ಅಜ್ಞನು ಇತ್ಯಾದಿ ವ್ಯವಹಾರಾನುಸಾರ ವಾಗಿ ಅನೇಕ ರೂಪನಾಗಿರುವಂತೆ ತೋರುತ್ತಾನೆ. ॥೪೭॥

ಹಾಗಾದರೆ ಒಬ್ಬ ಆತ್ಮನಿಗೆ ಒಂದು ಉಪಾಧಿಯಲ್ಲಿ ವಿದ್ಯೆಯಿಂದ ಸಾಕ್ಷಾತ್ಕಾರ ಉಂಟಾಗಲು ಅವನ ಅವಿದ್ಯೆಯು ಹೋಗಿ ಮುಕ್ತನಾಗುತ್ತಾನೆ. ಮುಕ್ತನಾದ ಮೇಲೆ ಅವಿದ್ಯಾಸಂಬಂಧವು ಮತ್ತೆ ಇಲ್ಲದೇ ಇರೋಣದರಿಂದ ಸಕಲವಾದ ಭಾವ ಪ್ರಪಂಚಕ್ಕೆ ಮುಕ್ತಿಯು ಪ್ರಯತ್ನಮಾಡದೇ ಸಿಕ್ಕಬಹುದಲ್ಲವೇ? ಎಂದರೆ ಅದಕ್ಕೆ ಉತ್ತರವನ್ನು ಹೇಳುತ್ತಾನೆ. ಎಲೈ ದೇವತೆಗಳೇ, ಆತ್ಮಜ್ಞಾನಿಗಳಲ್ಲಿ ಶ್ರೇಷ್ಠನಾದ ವಿದ್ವಾಂಸನು ತನ್ನ ಮುಕ್ತಿಯಿಂದಲೇ ದರ್ಪಣದಲ್ಲಿ ಪ್ರತಿಬಿಂಬವಿರುವಂತೆ ಬ್ರಹ್ಮಪ್ರತಿಬಿಂಬರಾದ ಜೀವರಿಗೂ ಮುಕ್ತಿಯಾಯಿತೆಂದು ತಿಳಿಯುತ್ತಾನೆ. ಹಾಗಿದ್ದಾಗ್ಯೂ ಸಹ ತನ್ನ ಸಂಸಾರದೆಸೆಯಲ್ಲಿ ತನ್ನ ಅವಿದ್ಯೆಯಿಂದ ತನ್ನಲ್ಲಿಯೂ, ಇತರ ಜೀವರಲ್ಲಿಯೂ, ಸಂಸಾರವನ್ನು ತಿಳಿಯುತ್ತಾನೆ. ಭ್ರಾಂತಿಯು ನಿವೃತ್ತಿಯಾಗಲು ಮುಕ್ತಿಯನ್ನು ತಿಳಿಯುತ್ತಾನೆ. ಹಾಗೆಯೇ ಆಭಾಸರಾದ ಆತ್ಮರು ತಮ್ಮ ಸಂಸಾರಾವಸ್ಥೆಯಲ್ಲಿ ತಮ್ಮ ಅವಿದ್ಯೆಯಿಂದ ಕಲ್ಪಿತವಾದ ಸಂಸಾರವನ್ನು ವಿದ್ಯೆಯು ಉತ್ಪನ್ನವಾಗುವವರೆಗೆ ತಿಳಿಯುತ್ತಾರೆ. ಈ ರೀತಿಯಾಗಿ ವಿದ್ವಾಂಸನ ದೃಷ್ಟಿಯಿಂದ ಎಲ್ಲರೂ ಮುಕ್ತರೆಂದು ತೋರಿದಾಗ್ಯೂ ಅವಿದ್ವಾಂಸರಿಗೆ ಸಂಸಾರನಿವೃತ್ತಿಯು ಇಲ್ಲವು. ॥೪೮-೪೯॥

ಪ್ರಾರಬ್ಧಕರ್ಮಪರ್ಯಂತಂ ಕದಾಚಿತ್ಪರಮಾತ್ಮವಿತ್ ।
ಜಗಜ್ಜೀವಾದಿಕಂ ವೇದ ಕದಾಚಿನ್ನೈವ ವೇದ ತತ್ ॥೫೦॥

ಕದಾಚಿದ್ಬ್ರಹ್ಮ ಜಾನಾತಿ ಪ್ರತೀತ ಮಖಿಲಂ ಸುರಾಃ ।
ಕದಾಚಿನ್ನೈವ ಜಾನಾತಿ ಸ್ವಭಾವಾದೇವ ತತ್ತ್ವವಿತ್ ॥೫೧॥

ಅವಿದ್ವಾಂಸನಾದ ಅಜ್ಞಾನಿಗೆ ತನ್ನ ಅವಿದ್ಯೆಯಿಂದ ಜಗತ್ತು ತೋರುತ್ತದೆ. ವಿದ್ವಾಂಸನಿಗೆ ತನ್ನ ಅವಿದ್ಯೆಯು ನಿವೃತ್ತವಾಗಿರುವುದರಿಂದ ಆ ಅವಿದ್ಯೆಯ ಕಾರ್ಯವಾದ ಜಗತ್ತು ಹೇಗೆ ತೋರುತ್ತದೆ? ಎಂದರೆ ಅದಕ್ಕೆ ಉತ್ತರವನ್ನು ಹೇಳುತ್ತಾನೆ. ಕರ್ಮಗಳು ಎರಡು ವಿಧವಾಗಿವೆ. ಫಲವನ್ನು ಕೊಡುತ್ತಿರುವುದೊಂದು. ಫಲವನ್ನು ಕೊಡಲು ಆರಂಭಿಸದೆ ಇರುವುದೊಂದು. ಅವುಗಳಲ್ಲಿ ಫಲಾರಂಭವಾಗದಿರುವ ಕರ್ಮವು ಜ್ಞಾನದಿಂದ ನಷ್ಟವಾಗುತ್ತದೆ. ಫಲವನ್ನು ಕೊಡಲು ಆರಬ್ಧವಾದ ಕರ್ಮದ ಫಲವು ಜ್ಞಾನದಿಂದ ನಷ್ಟವಾಗದೇ ಇರುವುದರಿಂದ ಅದನ್ನು ಅನುಭವಿಸಿಯೇ ತೀರಬೇಕು. ಹೀಗಿರುವುದರಿಂದ ಆತ್ಮಜ್ಞಾನಿಯೂ ಒಂದು ಕಾಲದಲ್ಲಿ ಎಂದರೆ ಬಹಿರ್ಮುಖನಾಗಿರುವಾಗ ಫಲಭೋಗದ ಸಮಯದಲ್ಲಿ ಅದಕ್ಕೆ ಸಾಧನವಾದ ಭೋಕ್ತೃಭೋಗ್ಯವನ್ನೂ ತಿಳಿಯುತ್ತಾನೆ. ಹಾಗಿಲ್ಲದ ಕಾಲದಲ್ಲಿ ಎಂದರೆ ಅದ್ವಿತೀಯಾತ್ಮಾನುಸಂಧಾನ ಕಾಲದಲ್ಲಿ ಜೀವಾದಿ ಜಗತ್ತನ್ನು ತಿಳಿಯುವುದಿಲ್ಲ. ಈ ಅಭಿಪ್ರಾಯದಿಂದ "ಸಂತಮಸ ಬಹುರಾಲೋಕಯೋರಿವ ಕದಾಚಿದ್ದ್ವೈತದರ್ಶನಂ ಕದಾಚಿದದ್ವೈತದರ್ಶನಂ" ಎಂದು ಅಭಿಯುಕ್ತರು ಹೇಳಿರುತ್ತಾರೆ. ॥೫೦॥

ಅಜ್ಞನಂತೆ ಜ್ಞಾನಿಗೂ ಪ್ರಪಂಚವು ತೋರಿದರೆ, ಅಜ್ಞನಿಗಿಂತಲೂ ವಿದ್ವಾಂಸನಿಗೆ ವಿಶೇಷವೇನು? ಎಂದರೆ ಅದನ್ನು ಹೇಳುತ್ತಾನೆ.—ಓ ಸುರರೇ, ಸಮಸ್ತ ಪ್ರಪಂಚವೂ ಆ ಬ್ರಹ್ಮನಲ್ಲಿ ಅಧ್ಯಸ್ತವಾಗಿರೋಣದರಿಂದ ಸಮಸ್ತವನ್ನೂ ಬ್ರಹ್ಮವೆಂದು ಒಂದು ಸಮಯದಲ್ಲಿ ತಿಳಿಯುತ್ತಾನೆ. ಎಂದರೆ ಜ್ಞಾನಿಯು ಒಂದು ಸಮಯದಲ್ಲಿ ಆರೋಪಿತವಾದುದು ಅಧಿಷ್ಠಾನಾತಿರಿಕ್ತವಾಗಿ ಇಲ್ಲದೆ ಇರುವುದರಿಂದ ಅದನ್ನು ಬ್ರಹ್ಮಾತ್ಮರೂಪವನ್ನಾಗಿಯೇ ತಿಳಿಯುತ್ತಾನೆ. ಸಮಾಧಿಕಾಲದಲ್ಲಿ ಅಧಿಷ್ಠಾನವಾದ ಬ್ರಹ್ಮಯಾಥಾತ್ಮ್ಯಜ್ಞಾನದಿಂದ ಆರೋಪಿತವಾದುದು ಆತ್ಮನಲ್ಲಿ ಉಪಸಂಹೃತವಾದುದರಿಂದ ಸ್ವಸ್ವರೂಪವು ಪ್ರಪಂಚಶೂನ್ಯವಾಗಿದೆಯೆಂದು ತಿಳಿಯುತ್ತಾನೆ. ಆಗ ಅವನು ಜಗತ್ತನ್ನು ತಿಳಿಯುವುದಿಲ್ಲ. ಒಟ್ಟಿನಲ್ಲಿ ಜ್ಞಾನಿಗೆ ಅಧ್ಯಸ್ತವಾಗಿಯೇ ದಗ್ಧಪಟದಂತೆ ಒಂದು ಸಮಯದಲ್ಲಿ ತೋರುತ್ತದೆ. ಅಜ್ಞಾನಿಗಾದರೋ ಸತ್ಯವಾಗಿ

ಜಗಜ್ಜೀವಾದಿರೂಪೇಣ ಯದಾ ಬ್ರಹ್ಮ ವಿಭಾಸತೇ ।
ತದಾ ದುಃಖಾದಿ ಭೋಗೋಽಪಿ ಭಾತಿ ಚಾ ಭಾಸರೂಪತಃ ॥೫೨॥

ಯದಾ ಬ್ರಹ್ಮಾತ್ಮನಾ ಸರ್ವಂ ವಿಭಾತಿ ಸ್ವತ ಏವತು ।
ತದಾ ದುಃಖಾದಿ ಭೋಗೋಽಯ ಮಾಭಾಸೋ ನ ವಿಭಾಸತೇ ॥೫೩॥

ಜಗಜ್ಜೀವಾದಿರೂಪೇಣ ಪಶ್ಯನ್ನಪಿ ಪರಾತ್ಮವಿತ್ ।
ನ ತತ್ಪಶ್ಯತಿ ತದ್ರೂಪಂ ಬ್ರಹ್ಮವಸ್ತ್ವೇವ ಪಶ್ಯತಿ ॥೫೪॥

ಯಾವಾಗಲೂ ಪ್ರಪಂಚವು ತೋರುತ್ತಿರುತ್ತದೆ. ಇದೇ ಜ್ಞಾನಿಗೂ, ಅಜ್ಞಾನಿಗೂ ಇರತಕ್ಕ ವಿಶೇಷವು. ಎಂದು ತಿಳಿಯಬೇಕು. ಬ್ರಹ್ಮಾತ್ಮೈಕ್ಯಸಾಕ್ಷಾತ್ಕಾರವನ್ನು ಪಡೆದಿರುವ ಜ್ಞಾನಿಗೆ ಸಮಾಧಿಸ್ಥಿತಿಯಲ್ಲಿ ಹೊರಗಿನ ಪ್ರಪಂಚವು ತೋರುವುದೇ ಇಲ್ಲವು. ಬಹಿರ್ಮುಖವಾಗಿರುವಾಗಲೂ ದಗ್ಧಪಟದಂತೆ ಕಾರ್ಯಕಾರಿಯಾಗದೆ, ಎಂದರೆ ಸುಖದುಃಖರೂಪಫಲವನ್ನುಂಟುಮಾಡಲಾರದೆ ಇರುತ್ತದೆ. ಅಜ್ಞಾನಿಗಾದರೋ ಪ್ರಪಂಚವೂ ದ್ವೈತವೂ ಸರ್ವದಾ ತೋರುತ್ತಿರುವುದಲ್ಲದೆ ಸುಖದುಃಖರೂಪಫಲವನ್ನೂ ಉಂಟುಮಾಡುತ್ತಲೇ ಇರುತ್ತದೆ. ಎಂದು ತಾತ್ಪರ್ಯವು. ||೫೧||

ವಿದ್ವಾಂಸನಿಗೆ ಯಾವಾಗ ಎಂದರೆ, ವಿಕ್ಷೇಪಸಮಯದಲ್ಲಿ ಬ್ರಹ್ಮವು ಬಾಧ್ಯವಾದ ಭೋಕ್ತೃಭೋಗ್ಯರೂಪವಾದ ಪ್ರಪಂಚರೂಪವಾಗಿ ತೋರುತ್ತದೆಯೋ, ಆವಾಗ ಅದರಿಂದುಂಟಾದ ಸುಖಾದಿಭೋಗಗಳಿಗೂ ಕೂಡ ಸಾಧನವಾದದ್ದೋ ಎಂಬಂತೆ ಆಭಾಸವಾಗಿ ತೋರುತ್ತಿರುತ್ತದೆ. ||೫೨||

ಯಾವಾಗ ಸಮಾಧಿ ಸಮಯದಲ್ಲಿ ಮೊದಲು ತೋರುತ್ತಿದ್ದ ಈ ಸಮಸ್ತ ಜಗತ್ತು ವಿಲೀನವಾಗಿ ಬ್ರಹ್ಮತ್ವವಾಗಿ ತೋರುತ್ತದೆಯೋ ಆಗ ಜಗತ್ತು ದುಃಖಕ್ಕೆ ಸಾಧನವಾಗಿ ತೋರದೇ ಇರೋಣದರಿಂದ ಸಂಸಾರ ದುಃಖವೂ ಸಹ ಜ್ಞಾನಿಗೆ ತೋರುವುದಿಲ್ಲ. ||೫೩||

ಪರಮಾತ್ಮತತ್ವವನ್ನು ತಿಳಿದವನು ಜೀವಾದಿರೂಪದಿಂದ ನಾಮರೂಪಾತ್ಮಕವಾದ ಜಗತ್ತನ್ನು ನೋಡುತ್ತಿದ್ದಾಗ್ಯೂ ವಾಸ್ತವವಾದುದೆಂದು ನೋಡುವುದಿಲ್ಲ. ಮತ್ತೇನೆಂದರೆ ಆರೋಪಕ್ಕೆ ಅಧಿಷ್ಠಾನವಾದ, ಸಚ್ಚಿದಾನಂದಾತ್ಮಕವಾದ ಬ್ರಹ್ಮವನ್ನೇ ನೋಡುತ್ತಾನೆ. ||೫೪||

ಬ್ರಹ್ಮಣೋಽನ್ಯತ್ಸದಾ ನಾಸ್ತಿ ವಸ್ತುತೋಽವಸ್ತುತೋಽಪಿ ಚ ।
ತಥಾ ಸತಿ ಶಿವಾದನ್ಯತ್ಕಥಂ ಪಶ್ಯತಿ ತತ್ತ್ವವಿತ್ ॥೫೫॥

ಬ್ರಹ್ಮರೂಪೇಣ ವಾ ಸಾಕ್ಷಾತ್ ಜಗಜ್ಜೀವಾತ್ಮನಾಽಥವಾ ।
ಯಥಾ ಯಥಾ ಪ್ರಥಾ ಸಾಕ್ಷಾತ್ ಬ್ರಹ್ಮ ಭಾತಿ ತಥಾ ತಥಾ ॥೫೬॥

ಯಥಾ ಯಥಾಽವಭಾಸೋಽಯಂ ಸ್ವಭಾವಾದೇವ ಭಾಸತೇ ।
ತಥಾ ತಥಾಽನುಸಂಧಾನಂ ಯೋಗಿನಃ ಸ್ವಾತ್ಮವೇದನಂ ॥೫೭॥

ನಾಮತಶ್ಚಾರ್ಥತಶ್ಚಾಪಿ ಮಹಾದೇವೋ ಯದಿ ಪ್ರಭುಃ ।
ಕಿಂ ಜಹಾತಿ ತದಾ ವಿದ್ವಾನ್ ಕಿಂ ಗೃಹ್ಣಾತಿ ಸುರರ್ಷಭಾಃ ॥೫೮॥

"ನೇಹನಾಸ್ತಿ ಕಿಂಚನ" ಎಂಬ ಶ್ರುತ್ಯನುಸಾರವಾಗಿ ಬ್ರಹ್ಮಭಿನ್ನವಾಗಿ ಸತ್ಯವಾದುದು ಯಾವುದೂ ಯಾವಾಗಲೂ ಇರುವುದಿಲ್ಲ. ಹಾಗೆಯೇ ಅವಸ್ತುಭೂತವಾದ ಪ್ರಪಂಚವೂ ಸಹ ಬ್ರಹ್ಮನಲ್ಲಿ ಅಧ್ಯಸ್ತವಾದುದರಿಂದ ಅದೂ ಸಹ ಬ್ರಹ್ಮಭಿನ್ನವಾಗಿಲ್ಲ. ಹೀಗಿರುತ್ತಿರಲಾಗಿ ತತ್ವದರ್ಶಿಯು ಪರಶಿವನಿಗಿಂತಲೂ ಬೇರೆ ಯಾವುದನ್ನು ತಿಳಿದಾನು? ॥೫೫॥

ಅಧಿಷ್ಠಾನವಾದ ಬ್ರಹ್ಮರೂಪದಿಂದಲಾಗಲೀ, ಆರೋಪಿತವಾದ ಭೋಕ್ತೃಭೋಗ್ಯರೂಪವಾದ ಪ್ರಪಂಚರೂಪದಿಂದಲಾಗಲೀ, ವಿದ್ವಾಂಸನಿಗೆ ಹೇಗೆ ಹೇಗೆ ಜ್ಞಾನವುಂಟಾಗುತ್ತದೆಯೋ ಹಾಗೆಯೇ ಅವನಿಗೆ ಅದೆಲ್ಲವೂ ಸಾಕ್ಷಾದ್ರಹ್ಮವಾಗಿಯೇ ತೋರುತ್ತದೆ. ॥೫೬॥

ವಿದ್ವಾಂಸನಾದ ಯೋಗಿಗೆ ಯಾವ ಯಾವ ರೀತಿಯಲ್ಲಿ ಈ ಜಗತ್ತು ತೋರುತ್ತದೆಯೋ ಹಾಗೆ ಹಾಗೆ ಆತ್ಮನ ತಿಳಿವಳಿಕೆಯೆಂಬ ಅನುಸಂಧಾನವೇ ಉಂಟಾಗುತ್ತಿರುತ್ತದೆ. ॥೫೭॥

ಮಹಾದೇವ ಎಂಬ ಶಬ್ದವನ್ನು ಪರ್ಯಾಲೋಚಿಸಿದರೂ ಸಹ ವಿದ್ವಾಂಸನಿಗೆ ತನಗಿಂತಲೂ ಬೇರೆಯಾಗಿ ಹೇಯೋಪಾದೇಯವಾದ ವಸ್ತುವಿಲ್ಲವೆಂಬ ಅಂಶವನ್ನು ತಿಳಿಸುತ್ತಾನೆ. ಓ ಸುರಶ್ರೇಷ್ಠರೇ, ಮಹಾದೇವನು ಶಬ್ದದಿಂದಲೂ, ಅರ್ಥದಿಂದಲೂ, ಮಹತ್ತಾದ, ಪ್ರಭುವಾದ ದೇವನೆಂಬುದನ್ನು ಮನಗಂಡ ಮೇಲೆ ಬ್ರಹ್ಮಾತ್ಮೈಕ್ಯಜ್ಞಾನಿಯಾದ ವಿದ್ವಾಂಸನು ಯಾವುದನ್ನು ಬಿಟ್ಟಾನು? ಮತ್ತು ಯಾವುದನ್ನು

ಗ್ರಾಹ್ಯಂ ವಾ ಶಂಕರಾದನ್ಯತ್ ತ್ಯಾಜ್ಯಂ ವಾ ಯದಿ ವಿದ್ಯತೇ ।
ಮಹತ್ವಂ ತಸ್ಯ ಹೀಯೇತ ಸ್ವಭಾವೋ ನ ವಿಹನ್ಯತೇ ॥೫೯॥

ಮಹತ್ವಂ ನೈವ ಧರ್ಮೋಽಸ್ಯ ಭೇದಾಭಾವಾತ್ಪರಾತ್ಮನಃ ।
ಧರ್ಮಧರ್ಮಿತ್ವ ವಾರ್ತಾ ಚ ಭೇದೇ ಸತಿ ಹಿ ವಿದ್ಯತೇ ॥೬೦॥

ತೆಗೆದುಕೊಂಡಾನು ? ಎಂದರೆ ಸಕಲವೂ ತನ್ನ ರೂಪವೇ ಆದುದರಿಂದ ವಿದ್ವಾಂಸನ ದೃಷ್ಟಿಯಿಂದ ಹೇಯೋಪಾದೇಯವೇ ಇರುವುದಿಲ್ಲವು. ||೫೮||

ಶಂಕರನಿಗಿಂತಲೂ ಬೇರೆಯಾದ ವಸ್ತುವು ಸ್ವೀಕರಿಸಲು ಯೋಗ್ಯವಾದುದಾಗಲೀ, ಬಿಡಲು ಯೋಗ್ಯವಾದುದಾಗಲೀ ಯಾವುದಾದರೂ ವಾಸ್ತವವಾಗಿ ಇದ್ದರೆ ಅವನಿಗೆ ಮಹತ್ವವೇ ಬರಲಾರದು. ಎಂದರೆ ದೇಶ, ಕಾಲ, ವಸ್ತು ಇವುಗಳಿಂದ ಸಂಕೋಚವಿಲ್ಲದಿರುವಿಕೆಯೇ ಪರಮಾತ್ಮನಿಗೆ ಮಹತ್ವವು. ಪರಶಿವನಿಗಿಂತಲೂ ಬೇರೆಯಾಗಿ ಹೇಯೋಪಾದೇಯವಾದ ವಸ್ತುವನ್ನು ಸ್ವೀಕರಿಸಿದರೆ ಆ ಮಹತ್ವವು ಉಂಟಾಗಲಾರದು. ಮಹತ್ವವಾದರೋ ಪರಮಾತ್ಮನ ಸ್ವಭಾವವು. ಅದು ಹೋಗಲಾರದು. ಹಾಗಲ್ಲದೆ ಅದು ಹೋದರೆ ಅದು ಅವನ ಸ್ವಭಾವವಲ್ಲವೆಂದಾಗಲಿ, ಪರಮಾತ್ಮನೇ ಇಲ್ಲವೆಂದಾಗಲಿ ಹೇಳಬೇಕಾಗುತ್ತದೆ. ಇವೆರಡೂ ಅನಿಷ್ಟವೂ ಅಪ್ರಾಮಾಣಿಕವೂ ಆಗಿದೆ. ಎಂದು ತಿಳಿಯಬೇಕು. ||೫೯||

ಮಹತ್ವವು ಬ್ರಹ್ಮರೂಪವೆಂದು ಒಪ್ಪಿಕೊಳ್ಳದೇ ಬ್ರಹ್ಮನ ಧರ್ಮವೆಂದು ಒಪ್ಪಿದರೆ ತೋರುವ ದೋಷವು ಏನು ? ಎಂದರೆ ಅದಕ್ಕೆ ಉತ್ತರವನ್ನು ಹೇಳುತ್ತಾನೆ. "ಏಕಮೇವಾದ್ವಿತೀಯಂ" ಎಂಬ ಶ್ರುತಿಯಿಂದ ಬ್ರಹ್ಮಸ್ವರೂಪವು ತನಗೆ ಸಮಾನವಾದ ಮತ್ತು ವಿಜಾತೀಯವೂ ಆದ ವಸ್ತುವಿನ ಮತ್ತು ಸ್ವಗತವಾದ ಭೇದವೂ ಇಲ್ಲದ್ದೆಂದು ತಿಳಿಯುತ್ತಾನೆ. ಈ ರೀತಿ ಒಂದೇ ಆದುದರಿಂದ ಭೇದವಿಲ್ಲದ ಪ್ರಯುಕ್ತ ಮಹತ್ತ್ವವು ಬ್ರಹ್ಮಧರ್ಮವಾಗದೇ ಅದರ ಸ್ವರೂಪವಾಗಿದೆ. ಏಕೆಂದರೆ ಒಂದು ವಸ್ತುವು ತಾನೇ ಧರ್ಮಿ, ಧರ್ಮ ಎರಡೂ ಆಗಲಾರದು. ಧರ್ಮ, ಧರ್ಮಿ ವ್ಯವಹಾರವು ಭೇದಸಾಪೇಕ್ಷವಾದುದು. ಆದುದರಿಂದ ಬ್ರಹ್ಮಸ್ವರೂಪವು ಅದ್ವಿತೀಯವಾದುದರಿಂದ, ವ್ಯಾಪಕವಾದ ಭೇದವಾಗಲಿ, ವ್ಯಾಪ್ಯವಾದ ಧರ್ಮಧರ್ಮಿಭಾವವಾಗಲಿ ಸಿದ್ಧಿಸದೆ ಇರುವುದರಿಂದ, ಮಹತ್ವವು ಅದರ ಸ್ವರೂಪವೇ ಆಗಿರುತ್ತದೆ. ||೬೦||

ಭೇದೋಽಭೇದಸ್ತಥಾ ಭೇದಾಭೇದಃ ಸಾಕ್ಷಾತ್ಪರಾತ್ಮನಾ ।
ನಾಸ್ತಿ ಸ್ವಾತ್ಮಾಽತಿರೇಕೇಣ ಸ್ವಯಮೇವಾಸ್ತಿ ಸರ್ವದಾ ॥೬೧॥

ಬ್ರಹ್ಮೈವ ವಿದ್ಯತೇ ಸಾಕ್ಷಾತ್ ವಸ್ತುತೋಽವಸ್ತುತೋಽಪಿ ಚ ।
ತಥಾಸತಿ ಶಿವಜ್ಞಾನೀ ಕಿಂ ಗೃಹ್ಣಾತಿ ಜಹಾತಿ ಕಿಂ ॥೬೨॥

ಮಾಯಯಾ ವಿದ್ಯತೇ ಸರ್ವಮಿತಿ ಕೇಚನ ಮೋಹಿತಾಃ ।
ಶಿವರೂಪಾತಿ ರೇಕೇಣ ನಾಸ್ತಿ ಮಾಯಾ ಚ ವಸ್ತುತಃ ॥೬೩॥

ಮಾಯಯಾ ವಾ ಶಿವಾದನ್ಯದ್ವಿದ್ಯತೇ ಚೇಚ್ಛಿವಸ್ಯ ತು ।
ಮಹತ್ವಂ ಪರಮಂ ಸಾಕ್ಷಾದ್ಧೀಯತೇ ಸುರಪುಂಗವಾಃ ॥೬೪॥

ಘಟ, ಪಟ ಮುಂತಾದ ವಿಜಾತೀಯಪದಾರ್ಥಗಳಿಗಿರತಕ್ಕ ಭೇದವೂ ಸಜಾತೀಯವಾದ ಘಟಗಳಿಗೆ ಪರಸ್ಪರವಾಗಿರತಕ್ಕ ಅಭೇದವೂ, ಘಟ, ಮೃತ್ಪಿಂಡ; ಪಟ, ತಂತು; ಇತ್ಯಾದಿ ಕಾರ್ಯಕಾರಣಗಳಿಗಿರತಕ್ಕ ಭೇದಾಭೇದವೂ ಸಹ ಪರಮಾತ್ಮನಿಗಿಂತಲೂ ಭಿನ್ನವಾಗಿ ವಾಸ್ತವವಾಗಿ ಇಲ್ಲವು. ಆದರೆ ಯಾವಾಗಲೂ ಬ್ರಹ್ಮವು ತಾನೇ ಎಲ್ಲದರ ಸ್ವರೂಪವಾಗಿ ಇರುತ್ತದೆ. ||೬೧||

ಬ್ರಹ್ಮಸ್ವರೂಪಕ್ಕಿಂತಲೂ ವಸ್ತುತಃ ಯಾವುದೂ ಭಿನ್ನವಾಗಿರುವುದಿಲ್ಲ. ಹೀಗಿರಲು ಶಿವತತ್ವಜ್ಞಾನಿಯು, ಯಾವುದನ್ನು ಸ್ವೀಕರಿಸುತ್ತಾನೆ? ಯಾವುದನ್ನು ಬಿಡುತ್ತಾನೆ? ಏಕೆಂದರೆ ಅಧ್ಯಸ್ತವಾದ ಪ್ರಪಂಚವು ಸದಸದ್ವಿಲಕ್ಷಣವು. ಎಂದರೆ ಸತ್ತಾದರೆ ಬಾಧೆ ಬರಬಾರದು, ಅಸತ್ತಾದರೆ ತೋರಬಾರದು. ಆದುದರಿಂದ ವಸ್ತುತಃ ಎಂದರೆ ವಾಸ್ತವವಾಗಿ ಮತ್ತು ಅವಸ್ತುತಃ ಎಂದರೆ ಅವಾಸ್ತವವಾಗಿ ತೋರುವ ಎಲ್ಲವೂ ಅಧಿಷ್ಠಾನವಾದ ಬ್ರಹ್ಮಭಿನ್ನವಾಗಿ ತೋರದೆ ಇರೋಣದರಿಂದ ಬ್ರಹ್ಮವೇ ಎಲ್ಲೆಡೆಯಲ್ಲಿಯೂ ತೋರುತ್ತದೆ. ||೬೨||

ಭ್ರಾಂತರಾದ ಕೆಲವರು ಮಾಯೆಯಿಂದ ಸರ್ವವೂ ಇದೆಯೆಂದು ಹೇಳುತ್ತಾರೆ. ಅದು ವಸ್ತುತಃ ವಿಚಾರಮಾಡಿದರೆ ಶಿವನಿಗಿಂತಲೂ ಬೇರೆ ಮಾಯೆಯೇ ಇರುವುದಿಲ್ಲ. ಓ ಸುರಶ್ರೇಷ್ಠರೇ, ಹಾಗೆ ಮಾಯೆಯು ಪರಮಾತ್ಮನಿಗಿಂತಲೂ ಬೇರೆಯಾಗಿ, ವಾಸ್ತವವಾಗಿ, ಇದೆಯೆಂದು ಒಪ್ಪಿದರೆ, ಪರಮಾತ್ಮನ ಪರಮಮಹತ್ವಕ್ಕೆ ಹಾನಿಯುಂಟಾಗಿ ಪರಿಚ್ಛೇದವು ಪ್ರಾಪ್ತವಾಗುತ್ತದೆ. ||೬೩-೬೪||

ಮಹತ್ವಸ್ಯ ತು ಸಂಕೋಚೋ ನಾಸ್ತಿ ಸಮುಜ್ನಿರೂಪಣೇ ।
ಅಸ್ತಿಚೇದ ಪ್ರಮಾಣಂ ಸ್ಯಾಚ್ಛ್ರುತಿಃ ಸತ್ಯಾರ್ಥವಾದಿನೀ ॥೬೫॥

ತಸ್ಮಾದಸ್ತಿ ಮಹಾದೇವ ಏವ ಸಾಕ್ಷಾತ್ ಸ್ವಯಂಪ್ರಭುಃ ।
ಆನಂದ ರೂಪಃ ಸಂಪೂರ್ಣಃ ನ ತತೋಽನ್ಯತ್ತು ಕಿಂಚನ ॥೬೬॥

ಇಯ ಮೇವ ತು ತರ್ಕಾಣಾಂ ನಿಷ್ಠಾಕಾಷ್ಠಾ ಸುರೋತ್ತಮಾಃ ।
ಪ್ರತ್ಯಕ್ಷಾದಿ ಪ್ರಮಾಣಾನಾಂ ವೇದಾಂತಾನಾ ಮಪೀಶ್ವರಾಃ ॥೬೭॥

ಸ್ಮೃತೀನಾಂ ಚ ಪುರಾಣಾನಾಂ ಭಾರತಸ್ಯ ತಥೈವಚ ।
ವೇದಾನುಸಾರಿ ವಿದ್ಯಾನಾ ಮನ್ಯಸಾ ಮಾಸ್ತಿಕೋತ್ತಮಾಃ ॥೬೮॥

ಶೈವಾಗಮಾನಾಂ ಸರ್ವೇಷಾಂ ವಿಷ್ಣುಪ್ರೋಕ್ತಾಗಮಸ್ಯ ಚ ।
ಅಸ್ಮದುಕ್ತಾಗಮಸ್ಯಾಪಿ ಸುರಾಃ ಸೂಕ್ಷ್ಮನಿರೂಪಣೇ ॥೬೯॥

ಚೆನ್ನಾಗಿ ವಿಮರ್ಶಿಸಿ ನೋಡಿದರೆ ಆತ್ಮನ ಮಹತ್ವಕ್ಕೆ ಸಂಕೋಚವಿಲ್ಲ. ಒಂದುವೇಳೆ ಆಕಾಶಾದಿಗಳ ಮಹತ್ವದಂತೆ ಆತ್ಮನ ಮಹತ್ವವು ಆಪೇಕ್ಷಿಕವಾದರೆ "ಅನಂತಂ ಬ್ರಹ್ಮ", "ಏಕಮೇವಾದ್ವಿತೀಯಂ" ಇತ್ಯಾದಿ ಮೂರು ವಿಧವಾದ ಎಂದರೆ ಸಜಾತೀಯ, ವಿಜಾತೀಯ, ಸ್ವಗತ ಎಂಬ ಪರಿಚ್ಛೇದವಿಲ್ಲವೆಂದು ಪ್ರತಿಪಾದಿಸತಕ್ಕ ಶ್ರುತಿಯು ಪ್ರಮಾಣವಲ್ಲದೇ ಹೋದೀತು. ॥೬೫॥

ಆದುದರಿಂದ ಅರ್ಥದಿಂದಲೂ, ಶಬ್ದದಿಂದಲೂ, ಮಹಾದೇವನೇ, ಪ್ರತ್ಯಕ್ಷನೂ, ಸರ್ವಸಮರ್ಥನೂ, ಆನಂದರೂಪನೂ, ಸರ್ವದಲ್ಲಿಯೂ, ಪರಿಪೂರ್ಣನಾಗಿಯೂ, ಇರತಕ್ಕ ಪರಮಾತ್ಮನೇ ಸತ್ಯವಾಗಿರುತ್ತಾನೆ. ಆ ಪರಮಾತ್ಮನಿಗಿಂತಲೂ ಬೇರೆ ಯಾವುದೂ ಪಾರಮಾರ್ಥಿಕ ಸತ್ಯವಾಗಿಲ್ಲ. ಈಶ್ವರರಾದ ದೇವತೆಗಳೇ, ಈ ಪರಮಾತ್ಮನ ಸ್ವರೂಪವೇ ಸಮಸ್ತ ತರ್ಕಗಳಿಗೂ ಪ್ರತ್ಯಕ್ಷಾದಿಪ್ರಮಾಣಗಳಿಗೂ ಅವಧಿಯಾಗಿಯೂ, ಉಪದೇಶತಾತ್ಪರ್ಯದ ನಿಲುಗಡೆಯಾಗಿಯೂ ಇದೆ. ॥೬೬-೬೭॥

ಮನ್ವಾದಿಸ್ಮೃತಿಗಳೂ, ಪುರಾಣಗಳೂ, ಮಹಾಭಾರತವೂ ಬೇರೆಯದಾದ ವೇದವನ್ನು ಅನುಸರಿಸಿದ ವಿದ್ಯೆಗಳೂ, ಸಮಸ್ತವಾದ ಶೈವಾಗಮಗಳೂ, ವಿಷ್ಣುವುಹೇಳಿದ ವೈಖಾನಸ ಪಾಂಚರಾತ್ರವೆಂಬ ಆಗಮಗಳೂ, ಯಕ್ಷರು, ಗಂಧರ್ವರು, ಸಿದ್ಧರು ಇವರು ಹೇಳಿದ ಮತ್ತು ಬೌದ್ಧಜೈನ ಆಗಮಗಳೂ, ಇವೆಲ್ಲಕ್ಕೂ ಸಹ ಪರಮಾತ್ಮಸ್ವರೂಪವು ಅವಧಿಭೂತವಾಗಿದೆ. ಇಂತಹ ಪರಮಪವಿತ್ರವಾದ ಅದ್ವೈತವಿಜ್ಞಾನವು ಯಾವ

ಬುದ್ಧಾಗಮಾನಾಂ ಸರ್ವೇಷಾಂ ತಥೈವಾಹಾಗಮಸ್ಯ ಚ ।
ಯಕ್ಷಗಂಧರ್ವ ಸಿದ್ಧಾದಿ ನಿರ್ಮಿತಸ್ಯಾಗಮಸ್ಯ ಚ ॥೨೦॥

ಪರಮಾದ್ವೈತ ವಿಜ್ಞಾನಂ ಕಸ್ಯ ಮರ್ತ್ಯಸ್ಯ ಸಿಧ್ಯತಿ ।
ತ(ಕ)ಸ್ಯ ದೇವಸ್ಯ ವಾ ಸಾಕ್ಷಾತ್ ಶಿವಸ್ಯೈವಹಿ ಸಿಧ್ಯತಿ ॥೨೧॥

ಪರಮಾದ್ವೈತ ವಿಜ್ಞಾನಂ ಶಿವಸ್ಯಾ ಮಿತತೇಜಸಃ ।
ಸ್ವಭಾವಸಿದ್ಧಂ ದೇವಾಶ್ಚ ಶಿವಾಯಾ ಆಸ್ತಿಕೋತ್ತಮಾಃ ॥೨೨॥

ಪ್ರಸಾದಾ ದೇವ ರುದ್ರಸ್ಯ ಶಿವಾಯಾಶ್ಚ ತಥೈವ ಚ ।
ಪರಮಾದ್ವೈತ ವಿಜ್ಞಾನಂ ವಿಷ್ಣೋಃ ಸಾಕ್ಷಾನ್ಮಮಾಪಿಚ ॥೨೩॥

ವಿರಾಟ್ಸಂಜ್ಞಸ್ಯ ದೇವಸ್ಯ ಸ್ವರಾಟ್ಸಂಜ್ಞಸ್ಯ ಚಾತ್ಮನಃ ।
ಸಮ್ರಾಟ್ಸಂಜ್ಞಸ್ಯ ಚಾನ್ಯೇಷಾಂ ಪ್ರಸಾದಾದೇವ ವೇದನಂ ॥೨೪॥

ಯುಷ್ಮಾಕಮಪಿ ಸರ್ವೇಷಾಂ ಶಿವಸ್ಯ ಪರಮಾತ್ಮನಃ ।
ಪರಮಾದ್ವೈತ ವಿಜ್ಞಾನಂ ಪ್ರಸಾದಾದೇವ ನಾನ್ಯಥಾ ॥೨೫॥

ಯಕ್ಷರಾಕ್ಷಸಗಂಧರ್ವಸಿದ್ಧಾದೀನಾಮಪೀಶ್ವರಾಃ ।
ಪರಮಾದ್ವೈತವಿಜ್ಞಾನಂ ಪ್ರಸಾದಾದೇವ ಶೂಲಿನಃ ॥೨೬॥

ಮನುಷ್ಯನಿಗಾಗಲೀ ದೇವನಿಗಾಗಲಿ ಸಿದ್ಧಿಸೀತು ? ಮತ್ತೆ ಯಾರಿಗೆ ಸಿದ್ಧಿಸುತ್ತದೆ ಎಂದರೆ ಅಪ್ರತಿಹತವಾದ ತೇಜಸ್ಸುಳ್ಳ, ಸಾಕ್ಷಾತ್ ಶಿವನಿಗೂ ನಿತ್ಯವಾಗಿ ಸ್ವಭಾವಸಿದ್ಧವಾದ ಅದ್ವೈತ ವಿಜ್ಞಾನವು ಪಾರ್ವತಿಗೂ ಸಿದ್ಧಿಸುತ್ತದೆ. ||೧೮-೧೯-೨೦-೨೧-೨೨||

ಅತ್ಯಂತ ಉತ್ಕೃಷ್ಟವಾದ ವೇದಗಳ ಮುಖ್ಯಾರ್ಥವಾದ ಬ್ರಹ್ಮಾತ್ಮೈಕ್ಯ ವಿಜ್ಞಾನವು ಪಾರ್ವತೀಪರಮೇಶ್ವರರ ಅನುಗ್ರಹದಿಂದ ವಿಷ್ಣುವಿಗೂ, ನನಗೂ ವಿರಾಟ್ ಎಂಬ ದೇವತೆಗೂ ಸ್ವರಾಟ್ ಎಂಬ ಆತ್ಮನಿಗೂ, ಸಮ್ರಾಟ್ ಎಂಬ ಆತ್ಮನಿಗೂ, ಉಳಿದ ಜೀವರಿಗೂ ಕ್ರಮವಾಗಿ ಲಬ್ಧವಾಗುತ್ತದೆ. ಎಲೈ ದೇವತೆಗಳೇ, ನಿಮಗೂ ಸಹ ಅದ್ವೈತವಿಜ್ಞಾನವು ಪರಮಾತ್ಮನಾದ ಶಿವನ ಅನುಗ್ರಹದಿಂದಲೇ ದೊರೆಯಬೇಕು. ಬೇರೇ ಉಪಾಯವಿರುವುದಿಲ್ಲವು. ||೨೩-೨೪-೨೫||

ಯಕ್ಷ, ರಾಕ್ಷಸ, ಗಂಧರ್ವ, ಸಿದ್ಧ ಇವರುಗಳಿಗೂ, ಸ್ವಾಮಿಯಾದವರೂ, ಸಹ ಅಂತಹ ಜ್ಞಾನವನ್ನು ಶೂಲಪಾಣಿಯಾದ ಶಿವನ ಅನುಗ್ರಹದಿಂದಲೇ ಹೊಂದು

ಮನುಷ್ಯಾಣಾಂ ಚ ಸರ್ವೇಷಾಂ ಪಶ್ವಾದೀನಾಂ ತಥೈವ ಚ ।
ಪರಮಾದ್ವೈತವಿಜ್ಞಾನಂ ಪ್ರಸಾದಾದೇವ ಶೂಲಿನಃ ॥೭೭॥

ಪ್ರಸಾದೇ ಸತಿ ಕೀಟೋ ವಾ ಪತಂಗೋ ವಾ ನರೋಽಥವಾ ।
ದೇವೋ ವಾ ದಾನವೋ ವಾಽಪಿ ಲಭತೇ ಜ್ಞಾನಮುತ್ತಮಂ ॥೭೮॥

ಏಷ ಏವಹಿ ಜಂತೂನಾಂ ಪರಜ್ಞಾನಂ ದದಾತಿ ಚ ।
ನ ವಿಷ್ಣು ರ್ನಾಹ ಮನ್ಯಶ್ಚ ಸತ್ಯಮೇವ ಮಯೋದಿತಂ ॥೭೯॥

ಅದಾನೇ ಚ ತಥಾ ದಾನೇ ನ ಸ್ವತಂತ್ರೋ ಮಹಾನ್ ಹರಿಃ ।
ತಥೈವಾಹಂ ಸುರಶ್ರೇಷ್ಠಾಃ ಸತ್ಯಮೇವ ಮಯೋದಿತಂ ॥೮೦॥

ಸ್ವತಂತ್ರಃ ಶಿವ ಏವಾಯಂ ಸ ಹಿ ಸಂಸಾರ ಮೋಚಕಃ ।
ತಂ ವಿನಾ ನ ಮಯೋದ್ಧರ್ತುಂ ಶಕ್ಯತೇ ಸಂಸೃತೇರ್ಜನಃ ॥೮೧॥

ವಿಷ್ಣುನಾ ಚ ಪರೇಣಾ ಪಿ ಮಹಾದೇವಂ ಘೃಣಾನಿಧಿಂ ।
ವಿನಾ ಜಂತುಂ ಸಮುದ್ಧರ್ತುಂ ಶಕ್ಯತೇ ನ ಹಿ ಸತ್ತಮಾಃ ॥೮೨॥

ತ್ತಾರೆ. ಮನುಷ್ಯರಿಗೂ ಸಮಸ್ತ ಪಶ್ವಾದಿಪ್ರಾಣಿಗಳಿಗೂ ಸಹ ಶಿವನ ಅನುಗ್ರಹ ದಿಂದ ಜ್ಞಾನವು ಕ್ರಮವಾಗಿ ಸಿಗುತ್ತದೆ. ||೭೬-೭೭||

ಹೀಗೆ ಪರಶಿವನ ಅನುಗ್ರಹವಾಗಲು ಸಣ್ಣ ಹುಳುವಾಗಲೀ ದೀಪದ ಹುಳುವಾಗಲಿ, ಪಕ್ಷಿಯಾಗಲಿ, ಮನುಷ್ಯನಾಗಲಿ, ದೇವನಾಗಲಿ, ರಾಕ್ಷಸನಾಗಲಿ, ಯಾರಾದರೂ ಸರಿಯೇ, ಅವರು ಮೋಕ್ಷಸಾಧನವಾದ ಉತ್ಕೃಷ್ಟಜ್ಞಾನವನ್ನು ಹೊಂದುತ್ತಾರೆ. ಈ ಪರಶಿವನೇ ಸಮಸ್ತರಿಗೂ ಜ್ಞಾನವನ್ನು ಅನುಗ್ರಹಿಸುತ್ತಾನೆ. ಆ ಜ್ಞಾನವನ್ನು ಕೊಡತಕ್ಕ ವಿಷಯದಲ್ಲಿ ನಾನಾಗಲೀ, ವಿಷ್ಣುವಾಗಲೀ, ಸಮರ್ಥರಲ್ಲ. ಇದು ಸತ್ಯವಾದುದು. ಓ ಸುರಶ್ರೇಷ್ಠರೇ, ಕೊಡುವುದರಲ್ಲಿಯೂ, ತೆಗೆದುಕೊಳ್ಳುವುದರಲ್ಲಿಯೂ, ವ್ಯಾಪಕನಾದ ಹರಿಯೂ, ನಾನೂ, ಸ್ವತಂತ್ರರಲ್ಲವು. ಇದು ಸತ್ಯವಾದ ವಿಷಯ. ||೭೮-೭೯-೮೦||

ಆ ಶಿವನೇ ಸರ್ವಸ್ವತಂತ್ರನು. ಅವನು ಜ್ಞಾನವನ್ನು ನೀಡುವುದರ ಮೂಲಕ ಸಮಸ್ತ ಜಂತುಗಳ ಸಂಸಾರದುಃಖವನ್ನು ಹೋಗಲಾಡಿಸುತ್ತಾನೆ. ಆ ಪರಶಿವನನ್ನು ಬಿಟ್ಟು ಜಂತುಗಳನ್ನು ಉದ್ಧರಿಸಲು ನನಗೆ ಸಾಮರ್ಥ್ಯವಿಲ್ಲ. ದಯೆಗೆ

ದರ್ವೀ ನ್ಯಾಯೇನ ಸಂಸಾರಾ ದುದ್ಧರಾಮಿ ಜನಾನಿಮಾನ್ ।
ನ ಸ್ವಾತಂತ್ರ್ಯೇಣ ಹೇ ದೇವಾಃ ಸಾಕ್ಷಾದ್ವಿಷ್ಣುಸ್ತಥೈವ ಚ ॥೮೩॥

ದೇವದೇವಸ್ಯ ರುದ್ರಸ್ಯ ಸ್ವರೂಪಂ ತಸ್ಯ ವೈಭವಂ ।
ಕೋ ವಾ ಜಾನಾತಿ ನಾಸ್ತ್ಯೇವ ಸ್ವಯಂ ಜಾನಾತಿ ವಾ ನ ವಾ ॥೮೪॥

ದುರ್ವಿಜ್ಞೇಯೋ ಮಹಾದೇವೋ ಮಹತಾಮಪಿ ದೇಹಿನಾಂ ।
ಪ್ರಸಾದೇನ ವಿನಾ ದೇವಾಃ ಸತ್ಯಮೇವ ಮಯೋದಿತಂ ॥೮೫॥

ಪುರಾ ಸುರಾಣಾಂ ಸರ್ವೇಷಾ ಮಸುರಾಣಾಂ ದುರಾತ್ಮನಾಂ ।
ಮಹಾಮೋಹೇನ ಸಂಗ್ರಾಮಃ ಸಂಜಾತೋ ದುರ್ನಿವಾರಕಃ ॥೮೬॥

ಗಣಿಯಂತಿರತಕ್ಕ ಮಹಾದೇವನನ್ನು ಬಿಟ್ಟು ವಿಷ್ಣುವಿಗೂ, ಬೇರೆ ಯಾರಿಗೂ ಸಹ ಪ್ರಾಣಿಗಳ ಸಂಸಾರವನ್ನು ಹೋಗಲಾಡಿಸಲು ಶಕ್ತಿಯಿಲ್ಲವು. ॥೮೧-೮೨॥

ನಾನು ಈ ಸಮಸ್ತ ಜನರನ್ನೂ ದರ್ವೀನ್ಯಾಯದಿಂದ ಉದ್ಧಾರಮಾಡುತ್ತೇನೆಯೇ ಹೊರತು ಸ್ವತಂತ್ರವಾಗಿ ಸಂಸಾರದಿಂದ ಭಕ್ತಜನರನ್ನೂ ಉದ್ಧರಿಸಲು ನನಗೆ ಶಕ್ತಿಯಿಲ್ಲವು. ವಿಷ್ಣುವಿಗೂ ಸಾಧ್ಯವಿಲ್ಲವು. ದರ್ವೀನ್ಯಾಯದ ಅರ್ಥವು ಹೀಗಿದೆ. ದರ್ವೀ ಎಂದರೆ ಸೌಟು. ಸೌಟಿಗೆ ಸಾಕ್ಷಾತ್ತಾಗಿ ಪದಾರ್ಥಗಳನ್ನು ಬಡಿಸತಕ್ಕ ಸಾಮರ್ಥ್ಯವಿಲ್ಲ. ಯಾರಾದರೂ ಅದನ್ನು ಕೈಯ್ಯಲ್ಲಿ ಹಿಡಿದುಕೊಂಡು ಸಾರು, ಹುಳಿ, ಹಾಲು, ತುಪ್ಪ, ಮುಂತಾದವುಗಳನ್ನು ತುಂಬಿಕೊಂಡು ಬಡಿಸಬಹುದು. ಹಾಗೆ ನಾನೂ ಕೂಡ ಪರಮೇಶ್ವರನ ಮೂಲಕವಾಗಿಯೇ ಪ್ರಾಣಿಗಳನ್ನು ಉದ್ಧರಿಸುತ್ತೇನೆಯೇ ಹೊರತು ನಾನು ಸ್ವತಂತ್ರನಲ್ಲ. ದೇವತೆಗಳಿಗೂ ದೇವನಾದ ರುದ್ರನ ಸ್ವರೂಪವನ್ನೂ, ಮಹತ್ವವನ್ನೂ ಸಾಮಾನ್ಯಜನರು ತಿಳಿಯಲಸಾಧ್ಯವಾಗಿರುತ್ತದೆ. ಅದನ್ನು ತಿಳಿದವನು ಯಾವನೂ ಇಲ್ಲ. ಹೆಚ್ಚು ಹೇಳುವುದರಿಂದ ಏನು ? ರುದ್ರನೇ ತನ್ನ ಮಹಿಮೆಯನ್ನು ಸಂಪೂರ್ಣವಾಗಿ ತಿಳಿದುಕೊಂಡಿರುತ್ತಾನೆಯೋ, ಇಲ್ಲವೋ, ಹೇಳಲಾಗುವುದಿಲ್ಲ. ಅತ್ಯಂತ ಉತ್ಕೃಷ್ಟವಾದ ಜ್ಞಾನೈಶ್ವರ್ಯವುಳ್ಳವರಿಗೂ ಮಹಾದೇವನ ಪ್ರಸಾದವಿಲ್ಲದೇ ಅವನನ್ನು ಸಮಗ್ರವಾಗಿ ತಿಳಿಯುವುದು ಕಷ್ಟಸಾಧ್ಯವಾದುದು. ಇದು ಸತ್ಯವಾದ ಮಾತು. ॥೮೩-೮೪-೮೫॥

ಹಿಂದೆ ಹೇಳಿದ ಪರತತ್ವವು ಅತ್ಯಂತ ನಿರ್ವಿಶೇಷವಾದುದರಿಂದ ತಿಳಿಯಲಸಾಧ್ಯವಾಗಿಯೂ ಮಹಾಜ್ಞಾನಿಗಳಾದ ಇಂದ್ರಾದಿಗಳಿಗೂ ಸಹ ಉಪದೇಶದಿಂದಲೇ

ಅಸುರೈಃ ಪೀಡಿತಾ ದೇವಾಃ ಬಲವದ್ಭಿಃ ಪುರಾ ಭೃಶಂ ।
ತಾನ್ ದೃಷ್ಟ್ವಾ ಭಗವಾನೀಶಃ ಸರ್ವಜ್ಞಃ ಕರುಣಾಕರಃ ॥೮೭॥

ದೇವಾನಾಂ ವಿಜಯಂ ದೇವಾ ಅಸುರಾಣಾಂ ಪರಾಜಯಂ ।
ದದೌ ತೇನ ಸುರೈಃ ಶೀಘ್ರಮಸುರಾಶ್ಚ ಪರಾಜಿತಾಃ ॥೮೮॥

ಅವಿಜ್ಞಾಯ ಮಹಾದೇವ ವೈಭವಂ ಪರಿಮೋಹಿತಾಃ ।
ವಯಂ ವಿಜಯಮಾಪನ್ನಾ ಅಸುರಾಶ್ಚ ಪರಾಜಿತಾಃ ॥೮೯॥

ಇತ್ಯಹಂಮಾನಸಂಛನ್ನಾಃ ಸರ್ವೇ ದೇವಾಃ ಪುರಾತನಾಃ ।
ಅತೀವ ಪ್ರೀತಿಮಾಪನ್ನಾ ಅಭವನ್ ಸುರಪುಂಗವಾಃ ॥೯೦॥

ತಿಳಿಯಿತೆಂದೂ ಆ ಉಪದೇಶವೂ ಈಶ್ವರಪ್ರಸಾದದಿಂದ ಸಿಕ್ಕಬೇಕೆಂದೂ, ತಿಳಿಸಲು, "ಬ್ರಹ್ಮಹ ದೇವೇಭ್ಯೋ ವಿಜಿಗ್ಯೇ" ಎಂದು ಕೇನೋಪನಿಷತ್ ೩.೧. ರಲ್ಲಿ ಆಮ್ನಾತವಾಗಿದೆ. ಅದರ ಅರ್ಥವನ್ನು ಇಲ್ಲಿ ವಿವರಿಸಿ ಹೇಳುತ್ತಾನೆ. ಓ ದೇವತೆಗಳೇ, ಹಿಂದೆ ಒಂದಾನೊಂದು ಕಾಲದಲ್ಲಿ ಸಮಸ್ತ ದೇವತೆಗಳಿಗೂ, ದುಷ್ಟಸ್ವಭಾವವುಳ್ಳ ರಾಕ್ಷಸರಿಗೂ ಸಹ ಅಜ್ಞಾನ ಅಹಂಕಾರಮೂಲಕವಾಗಿ ಯಾರಿಂದಲೂ ತಡೆಯಲಸಾಧ್ಯವಾದ ಯುದ್ಧವು ನಡೆಯಿತು. ಈ ಯುದ್ಧದಲ್ಲಿ ಮಹಾಪರಾಕ್ರಮಶಾಲಿಗಳಾದ ರಾಕ್ಷಸರಿಂದ ದೇವತೆಗಳು ಬಹಳವಾಗಿ ಬಳಲಿದರು. ಇದನ್ನು ಸಹಿಸಲಾರದೆ ಸರ್ವವನ್ನೂ ತಿಳಿದವನಾದ, ಕರುಣಾಶಾಲಿಯಾದ, ಭವಾನೀಪತಿಯಾದ ಮಹೇಶ್ವರನು ದೇವತೆಗಳಿಗೆ ಜಯವನ್ನೂ, ರಾಕ್ಷಸರಿಗೆ ಅಪಜಯವನ್ನೂ ಉಂಟುಮಾಡಿದನು. ಆದುದರಿಂದ ದೇವತೆಗಳು ಗೆದ್ದರು. ರಾಕ್ಷಸರು ಸೋತುಹೋದರು. ಆದರೆ, ಓ ದೇವತೆಗಳಿರಾ, ವಸ್ತುಸ್ಥಿತಿಯು ಹೀಗಿದ್ದರೂ ಆ ದೇವತೆಗಳ ಮನೋಭಾವವನ್ನು ತಿಳಿಸಲು, ||೮೬-೮೭-೮೮||

"ತಸ್ಯಹ ಬ್ರಹ್ಮಣೋವಿಜಯೇ ದೇವಾ ಅಮಹೀಯಂತ" ಎಂಬ ಕೇನ. ಶ್ರುತ್ಯರ್ಥವನ್ನು ಉಪಪಾದಿಸುತ್ತಾನೆ. ಈ ರೀತಿಯಾಗಿ ದೇವತೆಗಳು ಯುದ್ಧದಲ್ಲಿ ಜಯವನ್ನು ಹೊಂದಿದ ಮೇಲೆ ಈ ಜಯವು ಮಹಾದೇವನ ಅನುಗ್ರಹದಿಂದ ಬಂದಿತೆಂದು ಆ ದೇವತೆಗಳು ಅಜ್ಞಾನದಿಂದ ತಿಳಿಯಲಾರದೆ, ನಾವು ನಮ್ಮ ಶಕ್ತಿಯಿಂದ ಗೆದ್ದೆವು! ರಾಕ್ಷಸರನ್ನು ಸೋಲಿಸಿದೆವು! ಎಂದು ಅಹಂಕಾರದಿಂದ ಹೆಮ್ಮೆಪಟ್ಟುಕೊಂಡರು. ಅವರ ಅಜ್ಞಾನವನ್ನು ಹೋಗಲಾಡಿಸಲು, ||೮೯-೯೦||

ಪುನರ್ವಿಶ್ವಾಧಿಕೋ ರುದ್ರೋ ಭಗವಾನ್ ಕರುಣಾನಿಧಿಃ ।
ಸ್ವಸ್ಯ ದರ್ಶಯಿತುಂ ತೇಷಾಂ ದುರ್ಜ್ಞೇಯತ್ವಂ ತಥೈವಚ ॥೬೧॥

ತೇಷಾಂ ಭ್ರಾಂತಿ ನಿವೃತ್ತ್ಯರ್ಥಮಪಿ ಸಾಕ್ಷಾನ್ಮಹೇಶ್ವರಃ ।
ಆವಿರ್ಬಭೂವ ಸರ್ವಜ್ಞೋ ಯಕ್ಷರೂಪೇಣ ಹೇ ಸುರಾಃ ॥೬೨॥

ತಂ ದೃಷ್ಟ್ವಾ ಯಕ್ಷ ಮತ್ಯಂತಂ ವಿಸ್ಮಯೇನ ಸಹಾಮರಾಃ ।
ವಿಚಾರ್ಯ ಸರ್ವೇ ಸಂಭೂಯ ಕಿಮಿದಂ ಯಕ್ಷ ಮಿತ್ಯಪಿ ॥೬೩॥

ಪುನರಗ್ನಿಂ ಸಮಾಹೂಯ ದೇವಾಃ ಸರ್ವೇ ವಿಮೋಹಿತಾಃ ।
ಅಬ್ರುವಂ ಸ್ತ್ವಂ ವಿಜಾನೀಹಿ ಕಿಮೇತದ್ಯಕ್ಷ ಮಿತ್ಯಪಿ ॥೬೪॥

ಅಗ್ನಿ ಸ್ತಥಾ ಕರೋಮೀತಿ ಪ್ರೋಚ್ಯ ಯಕ್ಷಂ ಗತೋಽಭವತ್ ।
ಯಕ್ಷರೂಪೋ ಮಹಾದೇವಃ ಕೋಽಸೀತ್ಯಾಹಾನಲಂ ಪ್ರತಿ ॥೬೫॥

"ತದ್ಧೈಷಾಂ ವಿಜಜ್ಞೌ ತೇಭ್ಯೋಽಹ ಪಾದುರ್ಬಭೂವ" ಎಂಬ ಶ್ರುತ್ಯರ್ಥವನ್ನು ಹೇಳುತ್ತಾನೆ. ಪ್ರಪಂಚವನ್ನು ಮೀರಿದವನೂ, ಷಡ್ಗುಣ್ಯೈಶ್ವರ್ಯಸಂಪನ್ನನೂ, ದಯೆಗೆ ಗಣಿಯಂತಿರತಕ್ಕವನೂ, ಸರ್ವಜ್ಞನೂ ಆದ ರುದ್ರನೆಂಬ ಮಹೇಶ್ವರನು ತನ್ನ ಮಹಿಮೆಯ ಸ್ವರೂಪವನ್ನು ಅಹಂಕಾರಿಗಳಾದ ಅಜ್ಞಾನಿಗಳು ತಿಳಿಯುವುದು ಕಷ್ಟವೆಂದು ತಿಳಿಸಲೋಸ್ಕರವೂ, ಆ ದೇವತೆಗಳ ಅಹಂಭಾವರೂಪವಾದ ಭ್ರಾಂತಿಯನ್ನು ಹೋಗಲಾಡಿಸಲೂ ಸಹ ಪೂಜ್ಯವೂ ಆಶ್ಚರ್ಯಕರವೂ ಆದ ಆಕೃತಿಯಿಂದ ಕೂಡಿದವನಾಗಿ ಆ ದೇವತೆಗಳ ಮುಂದೆ ಪ್ರತ್ಯಕ್ಷನಾಗಿ ಅವರಿಗೆ ಕಾಣಿಸಿಕೊಂಡನು. ॥೬೧-೬೨॥

ಆ ದೇವತೆಗಳು ಆ ವಿಶೇಷಸ್ವರೂಪದ ಯಕ್ಷನನ್ನು ನೋಡಿ ಬಹಳ ಆಶ್ಚರ್ಯವುಳ್ಳವರಾಗಿ ಎಲ್ಲ ದೇವತೆಗಳೂ ಸೇರಿ ಇದೇನಿರಬಹುದೆಂದು ವಿಚಾರಿಸಿ ತಿಳಿಯಲು ಅಪೇಕ್ಷಿಸಿದರು. ॥೬೩॥

ಹೀಗೆ ತಮ್ಮಲ್ಲಿಯೇ ವಿಚಾರಮಾಡಿ ದೇವತೆಗಳು ಭ್ರಾಂತರಾಗಿ ತಮ್ಮ ಮುಖಂಡರಲ್ಲಿ ಒಬ್ಬನಾದ ಅಗ್ನಿಯನ್ನು ಕರೆದು ಓ ಅಗ್ನಿಯೇ, ನೀನು ಹೋಗಿ ಆ ಯಕ್ಷನ ಸ್ವರೂಪವನ್ನು ತಿಳಿದುಕೊಂಡು ಬಾ. ಎಂದು ಹೇಳಿ, ಅವನನ್ನು ಆ ಯಕ್ಷನ ಹತ್ತಿರಕ್ಕೆ ಕಳುಹಿಸಿದರು. ಅಗ್ನಿಯು ಆಗಲೆಂದು ಒಪ್ಪಿ ಆ ಯಕ್ಷನ ಹತ್ತಿರಕ್ಕೆ ಹೋದನು. ಹೀಗೆ ಬಂದ ಅಗ್ನಿಯನ್ನು ಕುರಿತು ಯಕ್ಷರೂಪದಿಂದಿರತಕ್ಕ

ಅಗ್ನಿರ್ವಾ ಅಹಮಸ್ಮೀತಿ ಯಕ್ಷಂ ಪ್ರತ್ಯಾಹ ಸೋಽಪಿ ಚ ।
ಸೋಽಪಿ ಪ್ರೋವಾಚ ಭಗವಾನ್ ತ್ವಯಿ ಕಿಂ ವೀರ್ಯಮಿತ್ಯಪಿ ॥೯೬॥

ಇದಂ ಸರ್ವಂ ದಹೇಯಂ ಯದಿದಂ ಭೂಮ್ಯಾಂ ವ್ಯವಸ್ಥಿತಂ ।
ಇತ್ಯಾಹಾಗ್ನಿ ಸ್ತೃಣಂ ತಸ್ಮೈ ನಿಧಾಯ ಪರಮೇಶ್ವರಃ ॥೯೭॥

ಏತದ್ದಹೇತಿ ಭಗವಾನ್ ಸ್ಮಯಮಾನೋಽಭ್ಯಭಾಷತ ।
ಅಗ್ನಿಃ ಸರ್ವ ಜವೇನೈವ ತದ್ದಗ್ಧುಂ ತೃಣ ಮಾಸ್ತಿಕಾಃ ॥೯೮॥

ಅಶಕ್ತೋ ಲಜ್ಜಯಾ ಯುಕ್ತೋ ಭೀತೋಽಗಚ್ಛ ತ್ಸುರಾನ್ಪ್ರತಿ ।
ಮಯಾ ತಸ್ಯೈವ ವಿಜ್ಞಾತುಂ ನ ಶಕ್ಯಂ ವೈಭವಂ ಸುರಾಃ ॥೯೯॥

ವಿತ್ತಯಾಯಂ ಮಹಾಯಾಸಾದಿತ್ಯಾಹಾಗ್ನಿಃ ಸುರಾನ್ಪ್ರತಿ ।
ತಚ್ಛ್ರುತ್ವಾ ವಾಯು ಮಾಹೂಯ ವಿಜಾನೀಹೀತಿ ಚಾಬ್ರುವನ್ ॥೧೦೦॥

ಆ ಪರಮಾತ್ಮನು ಅಗ್ನಿಯನ್ನು ಕುರಿತು ನೀನು ಯಾರು? ಎಂದು ಕೇಳಿದನು. ಆಗ ಅಗ್ನಿಯು ಯಕ್ಷನನ್ನು ಕುರಿತು ನಾನು ಅಗ್ನಿಯು ಎಂದರೆ, "ಅಗ್ರೇಗಚ್ಛತೀತಿ" ಎಂಬ ವ್ಯುತ್ಪತ್ತಿಯಿಂದ ದೇವತೆಗಳಲ್ಲಿ ಮುಂದೆ (ಮೇಲೆ) ಹೋಗುವವನು ಎಂದು ಹೇಳಿದನು. ಈ ಮಾತನ್ನು ಕೇಳಿ ಭಗವಂತನು ಹಾಗಾದರೆ ನಿನ್ನಲ್ಲಿ ಏನು ಪರಾಕ್ರಮವಿದೆಯೆಂದು ಕೇಳಿದನು. ||೯೪-೯೫-೯೬||

ಈ ರೀತಿಯಾಗಿ ಪರಮಾತ್ಮನು ಕೇಳಲು ಅಗ್ನಿಯು ಈ ಭೂಮಿಯಲ್ಲಿರತಕ್ಕ ಸಮಸ್ತವನ್ನೂ ಸುಡುತ್ತೇನೆಂದು ಹೇಳಿದನು. ಈ ಮಾತನ್ನು ಕೇಳಿ ಭಗವಂತನಾದ ಪರಮಾತ್ಮನು ನಗುತ್ತಾ ಅವನ ಎದುರಿನಲ್ಲಿ ಒಂದು ಹುಲ್ಲಿನ ಕಡ್ಡಿಯನ್ನಿಟ್ಟು, ಇದನ್ನು ಸುಡು, ಎಂದು ಹೇಳಿದನು. ಅನಂತರ ಅಗ್ನಿಯು ಅದನ್ನು ಸುಡಬೇಕೆಂದು ತನ್ನಲ್ಲಿರತಕ್ಕ ಎಲ್ಲಾ ಶಕ್ತಿಯನ್ನೂ ಉಪಯೋಗಿಸಿದನು. ಆದರೆ ಅವನಿಂದ ಆ ಹುಲ್ಲನ್ನು ಸುಡಲು ಆಗದಿರಲು ಲಜ್ಜೆಯುಳ್ಳವನಾಗಿ ಹೆದರಿಕೆಯಿಂದ ದೇವತೆಗಳ ಸಮೀಪಕ್ಕೆ ಬಂದು ಓ ದೇವತೆಗಳೇ, ಆ ಯಕ್ಷನ ಮಹಿಮೆಯನ್ನು ತಿಳಿಯಲು ನನ್ನಿಂದ ಸಾಧ್ಯವಿಲ್ಲವೆಂದು ಹೇಳಿದನು. ||೯೭-೯೮-೯೯||

ಆ ಯಕ್ಷನ ಮಹಿಮೆಯನ್ನು ನೀವು ಬಹಳ ಪ್ರಯತ್ನಪಟ್ಟು ತಿಳಿಯಿರಿ. ಎಂದು ಅಗ್ನಿಯು ದೇವತೆಗಳಿಗೆ ಹೇಳಿದನು. ಈ ಮಾತನ್ನು ಕೇಳಿ ದೇವತೆಗಳು

ಸೋಽಪಿ ಗತ್ವಾ ತಥಾ ತೇನ ಯಕ್ಷರೂಪೇಣ ಶಂಭುನಾ ।
ಭೃಶಂ ಪ್ರತಿಹತೋ ಭೂತ್ವಾ ತಥಾಽಗಚ್ಛ ತ್ಸುರಾನ್ಪ್ರತಿ ॥೧೦೧॥

ಪುನರಿಂದ್ರಃ ಸ್ವಯಂ ಮೋಹಾದಹಂತಾಕಂಚುಕಾವೃತಃ ।
ವಿಜ್ಞಾತುಂ ಯಕ್ಷಮುಗಮತ್ಸ ತತ್ರೈವ ತಿರೋದಧೇ ॥೧೦೨॥

ಇಂದ್ರೋಽತೀವ ವಿಷಣ್ಣಸ್ತು ಮಹಾತಾಪ ಸಮನ್ವಿತಃ ।
ವಿದ್ಯಾರೂಪಾ ಮುಮಾಂ ದೇವೀಂ ಧ್ಯಾತ್ವಾ ಕಾರುಣಿಕೋತ್ತಮಾಂ ॥೧೦೩॥

ಲೌಕಿಕೈಃ ವೈದಿಕೈಃಸ್ತೋತ್ರೈ ಸ್ತುಷ್ಟಾವ ಪರಮೇಶ್ವರೀಂ ।
ಸಾ ಶಿವಾ ಕರುಣಾಮೂರ್ತಿರ್ಜಗನ್ಮಾತಾ ತ್ರಯೀಮಯೀ ॥೧೦೪॥

ಶಿವಾ ಭಿನ್ನಾ ಪರಾನಂದಾ ಶಂಕರಸ್ಯಾಪಿ ಶಂಕರೀ ।
ಸ್ವೇಚ್ಛಯಾ ಹಿಮವತ್ಪುತ್ರೀ ಸ್ವಭಕ್ತಜನವತ್ಸಲಾ · ॥೧೦೫॥

ವಾಯುವನ್ನು ಕರೆದು ಆ ಯಕ್ಷನನ್ನು ನೀನು ತಿಳಿದು ಬಾ ಎಂದು ಹೇಳಿ ಕಳುಹಿಸಿದರು. ॥೧೦೦॥

ವಾಯುವೂ ಸಹ ಯಕ್ಷರೂಪಿಯಾದ ಪರಮಾತ್ಮನ ಸಮೀಪಕ್ಕೆ ಹೋಗಿ ತನ್ನ ಪರಾಕ್ರಮವನ್ನು ಹೇಳಿಕೊಂಡನು. ಯಕ್ಷನು ಒಂದು ಹುಲ್ಲನ್ನು ಇಟ್ಟು ಇದನ್ನು ಹಾರಿಸೆನಲು ವಾಯುವು ಅದನ್ನು ಹಾರಿಸಲು ಸಮರ್ಥನಾಗದೇ ಲಜ್ಜೆಯಿಂದ ಕೂಡಿದವನಾಗಿ ದೇವತೆಗಳ ಹತ್ತಿರಕ್ಕೆ ಬಂದು ಆ ಯಕ್ಷನ ಸ್ವರೂಪವನ್ನು ತಿಳಿಯಲು ನನಗೆ ಶಕ್ತಿಯಿಲ್ಲವೆಂದು ಹೇಳಿದನು. ॥೧೦೧॥

ಹೀಗೆ ಹೆಮ್ಮೆಗೊಂಡಿದ್ದ ಸಮಸ್ತ ದೇವತೆಗಳೂ ಯಕ್ಷನಸ್ವರೂಪವನ್ನು ತಿಳಿಯಲು ಹೋಗಿ ಹತಾಶರಾದರು. ಅನಂತರ ಇಂದ್ರನು ಅಜ್ಞಾನದಿಂದ ಅಹಂಕಾರವೆಂಬ ಮುಸುಕುಳ್ಳವನಾಗಿ ಆ ಯಕ್ಷನ ಸಮೀಪಕ್ಕೆ ಹೋಗಲು ಆ ಯಕ್ಷನು ಮಾಯವಾದನು (ಕಣ್ಣಿಗೆ ಕಾಣಿಸಲಿಲ್ಲ). ಇದನ್ನು ನೋಡಿ ಆ ಇಂದ್ರನು ಬಹಳ ದುಃಖಸಂತಾಪಗಳಿಂದ ಕೂಡಿ, ವಿದ್ಯಾರೂಪಳಾಗಿಯೂ, ಕರುಣೆಯುಳ್ಳವರಲ್ಲಿ ಶ್ರೇಷ್ಠಳೂ ಆದ ಉಮಾದೇವಿಯನ್ನು ಧ್ಯಾನಮಾಡಿದನು. ॥೧೦೨-೧೦೩॥

ಇಂದ್ರನು ಪರಮೇಶ್ವರಿಯಾದ ಆ ಉಮಾದೇವಿಯನ್ನು ಲೌಕಿಕಸ್ತೋತ್ರಗಳಿಂದಲೂ, ವೇದೋಕ್ತವಾದ ಸ್ತೋತ್ರಗಳಿಂದಲೂ ಸಹ ಸ್ತೋತ್ರಮಾಡಿದನು.

ಮಹಾದೇವಸ್ಯ ಮಾಹಾತ್ಮ್ಯಂ ದುಜ್ಞೇಯಂ ಸರ್ವಜಂತುಭಿಃ ।
ಇತಿ ದರ್ಶಯಿತುಂ ದೇವೀ ತತ್ರೈವಾ ವಿರಭೂತ್ಸ್ವಯಂ ॥೧೧೬॥

ತಾಮಾರಾಧ್ಯ ಶಿವಾಮಿಂದ್ರಃ ಶೋಭಮಾನಾಂ ಚ ಸರ್ವತಃ ।
ಉಮಾಂ ಪರ್ವತರಾಜೇಂದ್ರ ಕನ್ಯಕಾಮಾಹ ವಜ್ರಭೃತ್ ॥೧೧೭॥

ಕಿಮೇತದ್ಯ ಕ್ಷಮತ್ರೈವ ಪ್ರಾದುರ್ಭೂತಂ ತಿರೋಹಿತಂ ।
ವಕ್ತುಮರ್ಹಸಿ ದೇವೇಶಿ ಮಮ ಕಾರುಣಿಕೋತ್ತಮೇ ॥೧೧೮॥

ದೇವೀ ಪರಮ ಕಾರುಣ್ಯಾದ್ಬ್ರಹ್ಮಣೋ ಪತಿರತ್ರ ತು ।
ಪ್ರಾದುರ್ಭೂತಂ ತಿರೋಭೂತ ಮಿತ್ಯಾಹಾ ಶೇಷನಾಯಿಕಾ ॥೧೧೯॥

ಹೀಗೆ ಇಂದ್ರನು ಸ್ತೋತ್ರಮಾಡಲು, ಶರೀರವನ್ನು ಧರಿಸಿದ ದಯೆಯೋ ಎಂಬಂತೆ ಇರತಕ್ಕ ಸಮಸ್ತ ಚರಾಚರಾತ್ಮಕವಾದ ಜಗತ್ತಿಗೆ ತಾಯಿಯಾದ, ಮೂರು ವೇದಗಳ ಸ್ವರೂಪಳಾದ, ಶಿವನಿಂದಲೂ ಬೇರೆಯವಳಲ್ಲದ, ಪರಮಾನಂದಳಾಗಿಯೂ, ಶಂಕರ ನಿಗೂ ಸಹ ಮಂಗಳವನ್ನುಂಟುಮಾಡುವವಳೂ, ತನ್ನ ಇಚ್ಛೆಯಿಂದಲೇ ತನ್ನ ಭಕ್ತರಲ್ಲಿ ವಿಶ್ವಾಸ ಉಳ್ಳವಳೂ, ಆದ ಹಿಮವಂತನ ಮಗಳಾದ ಉಮಾದೇವಿಯು ಮಹಾದೇವನ ಮಾಹಾತ್ಮ್ಯೆಯನ್ನು ಎಲ್ಲರಿಂದಲೂ ಸುಲಭವಾಗಿ ತಿಳಿಯಲು ಸಾಧ್ಯ ವಿಲ್ಲ ಎಂಬ ಅಂಶವನ್ನು ತೋರಿಸಲು ಆ ಇಂದ್ರನ ಎದುರಿಗೆ ಪ್ರತ್ಯಕ್ಷಳಾದಳು. ॥೧೧೪-೧೧೫-೧೧೬॥

ಈ ರೀತಿ ದೇವಿಯು ಪ್ರತ್ಯಕ್ಷಳಾಗಲು ವಜ್ರಪಾಣಿಯಾದ ಇಂದ್ರನು ಎಲ್ಲಾ ಕಡೆಯಲ್ಲಿಯೂ, ಪ್ರಕಾಶಮಾನಳಾಗಿಯೂ, ಪರ್ವತಗಳೆಲ್ಲವುಗಳಿಗೂ ರಾಜನಾದ, ಹಿಮವಂತನ ಮಗಳಾದ ಉಮಾದೇವಿಯನ್ನು ಪೂಜಿಸಿದನು. ಅನಂತರದಲ್ಲಿ ಅತ್ಯಂತ ದಯೆಯುಳ್ಳ, ದೇವಶ್ರೇಷ್ಠಳಾದ ಉಮಾದೇವಿಯನ್ನು ಸತ್ಕರಿಸಿದನು. ಅನಂತರದಲ್ಲಿ ದಯೆಯುಳ್ಳ, ದೇವಶ್ರೇಷ್ಠಳಾದ ಉಮೆಯೇ, ಇಲ್ಲಿ ಒಂದು ಯಕ್ಷವು ನಮ್ಮ ಕಣ್ಣುಗಳಿಗೆ ಕಂಡು ಮರೆಯಾಯಿತು! ಅದು ಏನು? ಎಂಬುದನ್ನು ದಯ ವಿಟ್ಟು ನನಗೆ ಹೇಳಬೇಕೆಂದು ಇಂದ್ರನು ದೇವಿಯನ್ನು ಕೇಳಿಕೊಂಡನು. ॥೧೧೭-೧೧೮॥

ಸಮಸ್ತಕ್ಕೂ ನಿಯಾಮಕಳಾದ ದೇವಿಯು ಇಂದ್ರನಲ್ಲಿ ಹೆಚ್ಚಾದ ದಯೆ

ದುರ್ವಿಜ್ಞೇಯೋ ಮಹಾದೇವಃ ವಿಷ್ಣೋಃ ಸಾಕ್ಷಾದಜಸ್ಯ ಚ ।
ಅನ್ಯೇಷಾಮಪಿ ದೇವಾನಾಂ ತವಾಪಿ ಮಘವನ್ ಭೃಶಂ ॥೧೧೦॥

ಪ್ರದರ್ಶಯಿತು ಮೀಶಾನೋ ದುರ್ಜ್ಞೇಯತ್ವಂ ಸ್ವಕಂ ಪರಂ ।
ಆವಿರ್ಭೂತೋ ನ ಚಾನ್ಯೇನ ಕಾರಣೇನ ಸುರಾಧಿಪ ॥೧೧೧॥

ಸ ಏವ ಸರ್ವದೇವಾನಾಂ ತವಾಪಿ ವಿಜಯಪ್ರದಃ ।
ಪರಾಜಯ ಕರೋಽನ್ಯೇಷಾಂ ತಮೇವ ಶರಣಂ ವ್ರಜ ॥೧೧೨॥

ಇತ್ಯುಕ್ತ್ವಾ ಸಾ ಮಹಾದೇವೀ ಚಿದ್ರೂಪಾ ಸರ್ವಸಾಕ್ಷಿಣೀ ।
ಭಕ್ತಾನಾಂ ಪಾಶಹಂತ್ರೀ ತು ತತ್ರೈವಾಂತರ್ಹಿತಾಽಭವತ್ ॥೧೧೩॥

ಪುನರ್ದೇವಾ ಮಹಾದೇವಂ ಮಹಾಕಾರುಣಿಕೋತ್ತಮಂ ।
ದುರ್ವಿಜ್ಞೇಯಂ ಸುರಶ್ರೇಷ್ಠಾಃ ಸ್ವತಂತ್ರಂ ಭುಕ್ತಿಮುಕ್ತಿದಂ ।
ವಿದುಃ ಸುನಿಶ್ಚಿತಂ ತ್ಯಕ್ತ್ವಾ ಮಾತ್ಸರ್ಯಂ ಭಯಕಾರಣಂ ॥೧೧೪॥

ಯಿಂದ ನನ್ನ ಪತಿಯಾದ ಬ್ರಹ್ಮನೇ ಈಗ ನಿನಗೆ ಕಂಡು ತಿರೋಹಿತನಾದನೆಂದು ಇಂದ್ರನಿಗೆ ಹೇಳಿದಳು. ॥೧೦೯॥

ಓ ಸುರಶ್ರೇಷ್ಠರೇ, ಅಧಿಪತಿಯಾದ ಇಂದ್ರನೇ, ಮಹಾದೇವನನ್ನು ತಿಳಿಯಲು ವಿಷ್ಣುವೂ, ಬ್ರಹ್ಮನೂ, ಉಳಿದ ಪ್ರಾಣಿಗಳೂ, ನೀನೂ ಸಹ ಯಾರೂ ಸಮರ್ಥರಲ್ಲ. ಈಶ್ವರನು ತನ್ನ ಸ್ವರೂಪವನ್ನು ತಿಳಿಯುವುದು ಬಹಳ ಕಷ್ಟಸಾಧ್ಯವೆಂದು ತಿಳಿಸಲು ಪ್ರತ್ಯಕ್ಷನಾದನು. ಇನ್ನು ಯಾವ ಕಾರಣದಿಂದಲೂ ಅಲ್ಲ. ॥೧೧೦-೧೧೧॥

ಆ ಶಿವನೇ ಸರ್ವದೇವತೆಗಳಿಗೂ, ನಿನಗೂ ಜಯವನ್ನು ಕೊಟ್ಟವನು. ಮತ್ತು ರಾಕ್ಷಸರಿಗೆ ಪರಾಜಯವನ್ನುಂಟುಮಾಡಿದವನು. ನೀನು ಆ ಪರಶಿವನನ್ನು ಶರಣುಹೊಂದು. ಎಂಬುದಾಗಿ ಹೇಳಿ, ಜ್ಞಾನಸ್ವರೂಪಳೂ, ಸರ್ವಕ್ಕೂ ಸಾಕ್ಷಿಸ್ವರೂಪಳೂ, ಭಕ್ತರ ಸಂಸಾರವೆಂಬ ಪಾಶ (ಹಗ್ಗ)ವನ್ನು ಹೋಗಲಾಡಿಸುವವಳೂ, ಆದ ಮಹಾದೇವಿಯು ಅಲ್ಲಿಯೇ ಮಾಯವಾದಳು. ॥೧೧೨-೧೧೩॥

ಎಲೈ ಸುರಶ್ರೇಷ್ಠರೇ, ಪುನಃ ದೇವತೆಗಳೂ, ಹೆಚ್ಚಾಗಿ ದಯೆಯುಳ್ಳವನೂ, ಸುಲಭವಾಗಿ ತಿಳಿಯಲಸಾಧ್ಯನೂ, ಸರ್ವವಿಷಯದಲ್ಲಿಯೂ ಸ್ವತಂತ್ರನೂ, ಭೋಗ,

ಪ್ರಸಾದೇ ಸತಿ ವಿಜ್ಞಾತುಂ ಶಕ್ಯತೇ ಪರಮೇಶ್ವರಃ ।
ಪ್ರಸಾದೇನ ವಿನಾ ನೈವ ಶಕ್ಯತೇ ಸರ್ವಜಂತುಭಿಃ ॥೧೧೫॥

ಪ್ರಸಾದೇನ ವಿನಾ ವಿಷ್ಣುರ್ನ ಜಾನಾತಿ ಮಹೇಶ್ವರಂ ।
ತಥಾ ಚಾಹಂ ನ ಜಾನಾಮಿ ದೇವತಾಃ ಸಕಲಾ ಅಪಿ ॥೧೧೬॥

ಪ್ರಸಾದಸ್ಯ ತು ಸಿದ್ಧ್ಯರ್ಥಂ ಖಲು ಸರ್ವಂ ಸುರರ್ಷಭಾಃ ।
ಪ್ರಸಾದೇನ ವಿನಾ ದೇವಂ ಯೇ ಜಾನಂತಿ ಸುರರ್ಷಭಾಃ ।

ತೇ ಜಾನಂತಿ ವಿನಾ ಘ್ರಾಣಂ ಗಂಧಂ ಹಸ್ತೇನ ಕೇವಲಂ ॥೧೧೭॥

ಪ್ರಸಾದೋ ನಾಮ ರುದ್ರಸ್ಯ ಕರ್ಮಸಾಮ್ಯೇ ತು ದೇಹಿನಾಂ ॥೧೧೮॥

ದೇಶಿಕಾ ಲೋಕನಾಜ್ಞಾತೋ ವಿಶಿಷ್ಟಾತಿಶಯಃ ಸುರಾಃ ।
ಪ್ರಸಾದಸ್ಯ ಸ್ವರೂಪಂ ತು ಮಯಾ ನಾರಾಯಣೇನ ತು ॥೧೧೯॥

ಮೋಕ್ಷಗಳನ್ನು ನೀಡತಕ್ಕ ಮಹಾದೇವನನ್ನು ಭಯಕ್ಕೆ ಕಾರಣವಾದ ಮಾತ್ಸರ್ಯವನ್ನೂ ಅಹಂಕಾರವನ್ನೂ ಬಿಟ್ಟು ತಿಳಿದರು. ॥೧೧೪॥

ಪರಮೇಶ್ವರನ ಪ್ರಸಾದದಿಂದ ಅವನನ್ನು ತಿಳಿಯಬಹುದು. ಅಲ್ಲದಿದ್ದರೆ ಯಾರಿಂದಲೂ ಶಿವನನ್ನು ತಿಳಿಯಲು ಸಾಧ್ಯವಿಲ್ಲ. ಪ್ರಸಾದವಿಲ್ಲದಿದ್ದರೆ ವಿಷ್ಣುವೂ ನಾನೂ ಸಕಲ ದೇವತೆಗಳೂ ಸಹ ಮಹೇಶ್ವರನನ್ನು ತಿಳಿಯಲಾರರು. ಓ ಸುರಶ್ರೇಷ್ಠರೇ, ಸಮಸ್ತವೂ ಸಹ ಪ್ರಪಂಚದಲ್ಲಿ ಪ್ರಸಾದಕ್ಕೋಸ್ಕರವೇ ಇರುತ್ತದೆ. ಯಾರು ಪ್ರಸಾದವಿಲ್ಲದೇ ಶಿವನನ್ನು ತಿಳಿಯಲು ಯತ್ನಿಸುವರೋ ಅವರು ಘ್ರಾಣೇಂದ್ರಿಯವಿಲ್ಲದೇ ಕೈಯಲ್ಲಿ ಗಂಧವನ್ನು ತಿಳಿಯುಬಹುದು. ಎಂದರೆ ಕೈಯ್ಯಿಂದ ಗಂಧವನ್ನು ತಿಳಿಯಲು ಹೇಗೆ ಸಾಧ್ಯವಿಲ್ಲವೋ ಹಾಗೆ ಮಹಾದೇವನ ಪ್ರಸಾದವಿಲ್ಲದೇ ಅವನನ್ನು ತಿಳಿಯಲು ಸಾಧ್ಯವಿಲ್ಲ. ಆದುದರಿಂದ ತತ್ವಜ್ಞಾನಬರಬೇಕಾದರೆ ಈಶ್ವರಾನುಗ್ರಹವು ಎಲ್ಲರಿಗೂ ಅತ್ಯವಶ್ಯಕವಾದುದು. ॥೧೧೫-೧೧೬-೧೧೭॥

ಪ್ರಸಾದದ ಸ್ವರೂಪವನ್ನು ಹೇಳುತ್ತಾನೆ. ಓ ಸುರಶ್ರೇಷ್ಠರೇ, ಶಿವನ ಪ್ರಸಾದವೆಂದರೆ ಪ್ರಾಣಿಗಳ ಸುಖದುಃಖಗಳಿಗೆ ಕಾರಣಗಳಾದ ಧರ್ಮಾಧರ್ಮಗಳು ನಷ್ಟವಾಗಲು ಎಂದರೆ, ಅವುಗಳ ಫಲಜನಕವಾದ ಶಕ್ತಿಯು ಜ್ಞಾನದಿಂದ ನಷ್ಟವಾಗಲು, ಅವೆರಡೂ ಫಲವನ್ನು ಕೊಡದೆ ಸಮನಾಗಿ ಕ್ಷೀಣಿಸಲು ಗುರೂಪದೇಶದಿಂದ

ರುದ್ರೇಣಾಽಪಿ ಸುರಾ ವಕ್ತುಂ ನ ಶಕ್ಯಂ ಕಲ್ಪಕೋಟಿಭಿಃ ।
ಕೇವಲಂ ಲಿಂಗಗಮ್ಯಂ ತು ನ ಪ್ರತ್ಯಕ್ಷಂ ಶಿವಸ್ಯ ಚ ॥೧೨೦॥

ಶಿವಾಯಯಾಶ್ಚ ಹರೇಃ ಸಾಕ್ಷಾನ್ಮಮನು ಚಾನ್ಯಸ್ಯ ಚಾಸ್ತಿಕಾಃ ।
ಪ್ರಹರ್ಷಃ ಸ್ವರ ನೇತ್ರಾಂಗವಿಕ್ರಿಯಾ ಕಂಪನಂ ತಥಾ ॥೧೨೧॥

ಸ್ತೋಭಃ ಶರೀರಪಾತಶ್ಚ ಭ್ರಮಣಂ ಚೋದ್ಗತಿಸ್ತಥಾ ।
ಆಕಾಶೇಽವಸ್ಥಿತಿರ್ದೇವಾಃ ಶರೀರಾಂತರ ಸಂಸ್ಥಿತಿಃ ॥೧೨೨॥

ಅದರ್ಶನಂ ಚ ದೇಹಸ್ಯ ಪ್ರಕಾಶತ್ವೇನ ಭಾಸನಂ ।
ಅನಧೀತಸ್ಯ ಶಾಸ್ತ್ರಸ್ಯ ಸ್ವತ ಏವ ಪ್ರಕಾಶನಂ ॥೧೨೩॥

ನಿಗ್ರಹಾನುಗ್ರಹೇ ಶಕ್ತಿಃ ಪರ್ವತಾದೇಶ್ಚ ಭೇದನಂ ।
ಏವಮಾದೀನಿ ಲಿಂಗಾನಿ ಪ್ರಸಾದಸ್ಯ ಸುರರ್ಷಭಾಃ ॥೧೨೪॥

ಬಂದ ಪ್ರಸಾದಕ್ಕೆ ಅನುಗ್ರಹವೆಂದು ಹೆಸರು. ಆ ಪ್ರಸಾದದ ಸ್ವರೂಪವನ್ನು ಸಮಗ್ರವಾಗಿ ಹೇಳಲು ನಾನೂ, ನಾರಾಯಣನೂ, ರುದ್ರನೂ ಸಹ ಅನೇಕ ಕೋಟಿ ವರ್ಷಗಳಾದಾಗ್ಯೂ ಶಕ್ತರಲ್ಲ. ಅದನ್ನು ಕೇವಲ ಕಾರ್ಯದಿಂದಲೇ ತಿಳಿಯಬೇಕು. ಶಿವನಿಗೂ, ಉಮಾದೇವಿಗೂ, ನನಗೂ, ಇನ್ನು ಯಾರಿಗೂ ಸಹ ಸಾಕ್ಷಾತ್ತಾಗಿ ಆ ಪ್ರಸಾದವು ಪ್ರತ್ಯಕ್ಷ, ಎಂದರೆ ಅಪರೋಕ್ಷವಾದ ಸಾಕ್ಷಾತ್ಕಾರದ ಅನುಭವ, ವಾಗಲಾರದು. ಆ ಪ್ರಸಾದವಿದ್ದರೆ ಹೆಚ್ಚಾದ ಸಂತೋಷವೂ, ನೇತ್ರ, ಶರೀರಾದಿಗಳ ಲಾಘವವೂ ಚಟುವಟಿಕೆಯೂ ಉಂಟಾಗುತ್ತದೆ. ॥೧೧೮-೧೧೯-೧೨೦-೧೨೧॥

ಕಂಬದಂತೆ ಚಲಿಸದೆ ಇರುವಿಕೆ, ಶರೀರವು ಬೀಳುವಿಕೆ, ತಿರುಗುವುದು, ಮೇಲಕ್ಕೆ ಹಾರುವುದು, ಆಕಾಶದಲ್ಲಿರುವುದು, ಬೇರೇ ಶರೀರದಲ್ಲಿರುವಿಕೆ, ದೇಹವು ಕಾಣದಂತಾಗುವಿಕೆ, ಪ್ರಕಾಶವಾಗಿ ತೋರುವಿಕೆ, ಅಭ್ಯಾಸಮಾಡದ ಶಾಸ್ತ್ರಾರ್ಥವು ತಾನಾಗಿಯೇ ಸ್ಫುರಿಸುವಿಕೆ, ನಿಗ್ರಹದಲ್ಲಿಯೂ, ಅನುಗ್ರಹದಲ್ಲಿಯೂ ಶಕ್ತಿ, ಪರ್ವತಗಳನ್ನೂ ಒಡೆಯುವಿಕೆ, ಇವೇ ಮುಂತಾದುವುಗಳು ಪ್ರಸಾದಕ್ಕೆ ಗುರುತುಗಳು. ಎಂದರೆ ಶಿವಪ್ರಸಾದದಿಂದ ಮೇಲ್ಕಂಡ ಕಾರ್ಯಗಳೆಲ್ಲವೂ ಆಗುತ್ತವೆ. ॥೧೨೨-೧೨೩-೧೨೪॥

ತೀವ್ರಾತ್ತೀವ್ರತರಃ ಶಂಭೋಃ ಪ್ರಸಾದೋ ನ ಸಮೋ ಭವೇತ್ ।
ಏವಂ ರೂಪಃ ಪ್ರಸಾದಶ್ಚ ಶಿವಯಾ ಚ ಶಿವೇನ ಚ ॥೧೨೫॥

ಜ್ಞಾಯತೇ ನ ಮಯಾ ನಾನ್ಯೈ ರ್ನೈವ ನಾರಾಯಣೇನ ಚ ।
ಅತಃ ಸರ್ವಂ ಪರಿತ್ಯಜ್ಯ ಶಿವಾದನ್ಯತ್ತು ದೈವತಂ ॥೧೨೬॥

ತಮೇವ ಶರಣಂ ಗಚ್ಛೇತ್ ಸದ್ಯೋ ಮುಕ್ತಿಂ ಯದೀಚ್ಛತಿ ।
ವಿಷ್ಣು ಭಕ್ತ್ಯಾ ಚ ಮದ್ಭಕ್ತ್ಯಾ ನಾಸ್ತಿ ನಾಸ್ತಿ ಪರಾ ಗತಿಃ ॥೧೨೭॥

ಶಂಭುಭಕ್ತ್ಯೈವ ಸರ್ವೇಷಾಂ ಸತ್ಯಮೇವ ಮಯೋದಿತಂ ।
ಶಂಭುಭಕ್ತಸ್ಯ ದೇಹೇಽಸ್ಮಿನ್ ಪ್ರಸಾದೋ ಗಮ್ಯತೇ ಯಥಾ ॥೧೨೮॥

ನ ತಥಾ ವಿಷ್ಣುಭಕ್ತಸ್ಯ ನ ಮದ್ಭಕ್ತಸ್ಯ ದೇಹಿನಃ ।
ತಸ್ಮಾನ್ಮುಮುಕ್ಷುರ್ಮಾಂ ವಿಷ್ಣುಮಪಿ ತ್ಯಕ್ತ್ವಾ ಮಹೇಶ್ವರಂ ॥೧೨೯॥
ಆಶ್ರಯೇತ್ಸರ್ವಭಾವೇನ ಪ್ರಸಾದಂ ಕುರುತೇ ಹಿ ಸಃ ।

ಶಿವನ ಪ್ರಸಾದವು ವೇಗವಾದ ಪದಾರ್ಥಕ್ಕಿಂತಲೂ ಬಹಳ ವೇಗವಾದುದು. ಅದಕ್ಕೆ ಸರಿಯಾದುದು ಯಾವುದೂ ಇರುವುದಿಲ್ಲ. ಇಂತಹ ಪ್ರಸಾದವನ್ನು ಶಿವನೂ, ಪಾರ್ವತಿಯೂ, ನಾನೂ, ನಾರಾಯಣನೂ, ಯಾರೂ ಸಮಗ್ರವಾಗಿ ತಿಳಿಯಲಾರರು. ಆದುದರಿಂದ ಶೀಘ್ರವಾಗಿ ಮುಕ್ತಿಯಾಗಬೇಕೆಂದು ಬಯಸುವವನು ಶಿವನ್ನಿಗಿಂತಲೂ ಬೇರೆ ದೇವರನ್ನು ಬಿಟ್ಟು ಅವನ ಪ್ರಸಾದವನ್ನು ಸಂಪಾದಿಸಲು ಶಿವನನ್ನೇ ಶರಣು ಹೊಂದಬೇಕು. ನನ್ನ ಭಕ್ತಿಯಿಂದಲಾಗಲೀ, ವಿಷ್ಣುವಿನ ಭಕ್ತಿಯಿಂದಲಾಗಲಿ, ಉತ್ತಮವಾದ ಗತಿಯು ಸಾಕ್ಷಾತ್ತಾಗಿ ಸ್ವತಂತ್ರವಾಗಿ ದೊರೆಯುವುದೇ ಇಲ್ಲ. ॥೧೨೫-೧೨೬-೧೨೭॥

ಸಮಸ್ತರಿಗೂ ಶಂಭುವಿನಲ್ಲಿ ಅಪಾರವಾದ ಭಕ್ತಿಯಿಂದಲೇ ಶ್ರೇಯಸ್ಸುಂಟಾಗುತ್ತದೆ. ಶಂಭುಭಕ್ತರಿಗೆ ಈ ಶರೀರದಲ್ಲಿಯೇ ಎಂತಹ ಪ್ರಸಾದವುಂಟಾಗುತ್ತದೆಯೋ ಅಂತಹ ಪ್ರಸಾದವು ನನ್ನ ಭಕ್ತರಿಗೂ, ವಿಷ್ಣುಭಕ್ತರಿಗೂ ಉಂಟಾಗಲಾರದು. ಆದುದರಿಂದ ಮುಮುಕ್ಷುವು ನನ್ನನ್ನೂ, ವಿಷ್ಣುವನ್ನೂ ಸಹ ಬಿಟ್ಟು ಸರ್ವ ವಿಧದಿಂದಲೂ, ಮಹೇಶ್ವರನನ್ನು ಆಶ್ರಯಿಸಬೇಕು. ಆ ಪರಶಿವನೂ ಸಹ ಅಂತಹ ಮುಮುಕ್ಷುವಿಗೆ ಪ್ರಸಾದವನ್ನು ಅನುಗ್ರಹಿಸುತ್ತಾನೆ. ॥೧೨೮-೧೨೯॥

ಪ್ರಸಾದೇ ಸತಿ ದೇವೇಶೋ ದುರ್ಜ್ಞೇಯೋಽಪಿ ಸುರರ್ಷಭಾಃ॥೧೩೦॥

ಶಕ್ಯತೇ ಮನುಜೈರ್ದ್ರಷ್ಟುಂ ಪ್ರತ್ಯಗಾತ್ಮತಯಾ ಸದಾ ।
ಪ್ರಸಾದೇ ಸತಿ ದೇವೇಶೋ ದುರ್ಜ್ಞೇಯೋಽಪಿ ಸುರರ್ಷಭಾಃ॥೧೩೧॥

ಶಕ್ಯತೇ ಮನುಜೈರ್ದ್ರಷ್ಟುಂ ಸದಾ ಮೂರ್ತ್ಯಾತ್ಮನೈವತು ।
ಪ್ರಸಾದೇ ಸತಿ ದೇವೇಶೋ ದುರ್ಜ್ಞೇಯೋಽಪಿ ಸುರರ್ಷಭಾಃ॥೧೩೨॥

ಶಕ್ಯತೇ ಮನುಜೈರ್ದ್ರಷ್ಟುಂ ಸದಾ ಸರ್ವಾತ್ಮರೂಪತಃ ।
ಸರ್ವಸಾಕ್ಷಿಣ ಮಾತ್ಮಾನಂ ವಿದಿತ್ವಾ ಸಕಲಂ ಜಗತ್ ॥೧೩೩॥

ಸಾಕ್ಷಿಮಾತ್ರತಯಾ ನಿತ್ಯಂ ಯಃ ಪಶ್ಯತಿ ಸ ಪಶ್ಯತಿ ।
ಪರಮಾದ್ವೈತ ನಿಷ್ಠಾ ಹಿ ನಿಷ್ಠಾ ಕಾಷ್ಠಾ ಸುದುರ್ಲಭಾ ॥೧೩೪॥

ಶಿವಾದನ್ಯತಯಾ ಭ್ರಾಂತ್ಯಾ ದ್ವೈತಂ ವಾ ವೇದ ಚೇತ್ಪಶುಃ ।
ಪರಮಾದ್ವೈತ ವಿಜ್ಞಾನೀ ಸ್ವಯಂ ತು ಪರದೇವತಾ ॥೧೩೫॥

ಓ ಸುರಶ್ರೇಷ್ಠರೇ, ಪರಮೇಶ್ವರನ ಪ್ರಸಾದವಾಗಲು ತತ್ವಜ್ಞಾನ ಉಂಟಾಗುತ್ತದೆ. ಪರಮಾತ್ಮನನ್ನು ತಿಳಿಯಲು ಕಷ್ಟಸಾಧ್ಯವಾದಾಗ್ಯೂ "ಅಹಂಬ್ರಹ್ಮಾಸ್ಮಿ" ಎಂಬ ಪ್ರತ್ಯಗಾತ್ಮರೂಪದಿಂದ ಪರಮೇಶ್ವರನನ್ನು ಎಲ್ಲರೂ ತಿಳಿಯಬಹುದು. ದೇವೇಶನಾದ ಪರಶಿವನ ಪ್ರಸಾದವುಂಟಾಗಲು ಅವನು ತಿಳಿಯಲಶಕ್ಯನಿದ್ದಾಗ್ಯೂ ಮೂರ್ತಿರೂಪದಿಂದ ಅವನನ್ನು ಎಲ್ಲರೂ ನೋಡಬಹುದು. ಮಹಾದೇವನ ಪ್ರಸಾದವುಂಟಾಗಲು, ಮಹಾದೇವನನ್ನು ಸುಲಭವಾಗಿ ತಿಳಿಯಲು ಸಾಧ್ಯವಿಲ್ಲದೇ ಇದ್ದಾಗ್ಯೂ ಸಹ ಆ ಮನುಷ್ಯರು ಪರಮಾತ್ಮನನ್ನು ಸಮಸ್ತರೂಪದಿಂದ ತಿಳಿಯಬಹುದು. ಸಮಸ್ತ ಜಗತ್ತೂ ಸಹ ಸರ್ವಸಾಕ್ಷಿಯಾದ ಪರಶಿವನಲ್ಲಿ ಅಧ್ಯಸ್ತವಾಗಿದೆ. ಸಾಕ್ಷಿಮಾತ್ರವೇ ಇರುವುದು. ಉಳಿದುದೆಲ್ಲವೂ ಕಲ್ಪಿತವಾಗಿದೆಯೆಂದು ಯಾವನು ತಿಳಿಯುತ್ತಾನೆಯೋ ಅವನೇ ಸಮ್ಯಗ್ದರ್ಶಿಯು. ಸರ್ವಕ್ಕೂ ಅವಧಿಯಾದ, ಪರಮವಾದ ಅದ್ವೈತ ನಿಷ್ಠೆಯನ್ನು ಪಡೆಯಲು ಅವನಿಗೇ ಸಾಧ್ಯವು. ॥೧೩೦-೧೩೧-೧೩೨-೧೩೩-೧೩೪॥

ಶಿವನಿಗಿಂತಲೂ ಬೇರೆಯಾಗಿ ಯಾವನು ದ್ವೈತಪ್ರಪಂಚವನ್ನು ಭ್ರಾಂತಿಯಿಂದ ನೋಡುತ್ತಾನೆಯೋ ಅವನು ಪಶುತುಲ್ಯನು. ಯಾವನು ಪರಮವಾದ ಅದ್ವೈತದ ಜ್ಞಾನ ಉಳ್ಳವನೋ ಅವನು ಸಾಕ್ಷಾತ್ತಾಗಿ ಪರದೇವತೆಯಾದ ಬ್ರಹ್ಮ

ತಸ್ಯೈವ ಪರಮಾ ಮುಕ್ತಿರ್ನ ಹಿ ಸಂಶಯಕಾರಣಂ ।
ಗೌತಮಸ್ಯ ಮುನೇಃ ಶಾಪಾತ್ ದಧೀಚಸ್ಯ ಚ ಶಾಪತಃ ॥೧೩೬॥

ಜನ್ಮಾಂತರ ಕೃತಾತ್ಪಾಪಾತ್ ಅಯಮರ್ಥೋ ನ ರೋಚತೇ ।
ಮಹಾಪಾಪವತಾಂ ನೃಣಾಂ ಪರಮಾದ್ವೈತ ವೇದನೇ ॥೧೩೭॥

ಪ್ರದ್ವೇಷೋ ಜಾಯತೇ ಸಾಕ್ಷಾದ್ವೇದಜನ್ಯೇ ಶಿವೇಽಪಿಚ ।
ಮಹಾಪಾಪವತಾಂ ನೃಣಾಂ ಶಿವಜ್ಞಾನಸ್ಯ ಸಾಧನೇ ॥೧೩೮॥

ಸರ್ವಾಂಗೋ ದ್ಧೂಲನೇ ತಿರ್ಯಕ್ತ್ರಿಪುಂಡ್ರಸ್ಯ ಚ ಧಾರಣೇ ।
ರುದ್ರಾಕ್ಷಧಾರಣೇ ರುದ್ರಲಿಂಗಸ್ಯೈವ ತು ಪೂಜನೇ ॥೧೩೯॥

ಪ್ರದ್ವೇಷೋ ಜಾಯತೇ ನಿತ್ಯಂ ಶಿವಶಬ್ದ ಜಪೇಽಪಿಚ ।
ಅನೇಕಜನ್ಮಸಿದ್ಧಾನಾಂ ಶ್ರೌತಸ್ಮಾರ್ತಾನುವರ್ತಿನಾಂ ॥೧೪೦॥

ಪರಮಾದ್ವೈತವಿಜ್ಞಾನಂ ಜಾಯತೇ ಸುರಪುಂಗವಾಃ ।
ಪರಮಾದ್ವೈತ ವಿಜ್ಞಾನೀ ಮಯಾಽಽರಾಧ್ಯಃ ಸದೈವ ತು ॥೧೪೧॥

ಸ್ವರೂಪನಾಗಿರುತ್ತಾನೆ. ಅಂತಹವನಿಗೇ ಉತ್ಕೃಷ್ಟವಾದ ಮುಕ್ತಿಯು ಉಂಟಾಗುತ್ತದೆ. ಈ ವಿಷಯದಲ್ಲಿ ಸಂಶಯವಿಲ್ಲ. ಗೌತಮಋಷಿಯ ಶಾಪದಿಂದಲೂ, ದಧೀಚಿ ಮಹರ್ಷಿಯ ಶಾಪದಿಂದಲೂ, ಜನ್ಮಾಂತರದಲ್ಲಿ ಸಂಪಾದಿಸಿದ ಪಾಪದಿಂದಲೂ, ಬ್ರಹ್ಮವು ರುಚಿಸುವುದಿಲ್ಲ. ಎಂದರೆ ಬ್ರಹ್ಮಜ್ಞಾನವನ್ನು ಸಂಪಾದಿಸಬೇಕೆಂಬ ಇಚ್ಛೆಯು ಹುಟ್ಟುವುದಿಲ್ಲ. ॥೧೩೫-೧೩೬॥

ಮಹಾಪಾಪಿಗಳಾದ ಜನರಿಗೆ ಅತ್ಯಂತ ಉತ್ತಮವಾದ ಬ್ರಹ್ಮಸ್ವರೂಪಜ್ಞಾನದಲ್ಲಿಯೂ, ವೇದೈಕತಾತ್ಪರ್ಯವಿಷಯನಾದ ಶಿವನಲ್ಲಿಯೂ, ಶಿವಜ್ಞಾನಕ್ಕೆ ಸಾಧನಗಳಾದ ಶ್ರವಣಾದಿಸಾಧನಗಳಲ್ಲಿಯೂ, ಭಸ್ಮೋದ್ಧೂಲನದಲ್ಲಿಯೂ, ಅಡ್ಡವಾಗಿ ಇಡತಕ್ಕ ಭಸ್ಮತ್ರಿಪುಂಡ್ರದಲ್ಲಿಯೂ, ರುದ್ರಾಕ್ಷಿಮಣಿಗಳ ಧರಿಸುವಿಕೆಯಲ್ಲಿಯೂ, ಶಿವಲಿಂಗಪೂಜೆಯಲ್ಲೂ, ನಿತ್ಯವೂ ಮಾಡತಕ್ಕ ಶಿವಪಂಚಾಕ್ಷರಜಪದಲ್ಲಿಯೂ, ಸಹ ದ್ವೇಷವುಂಟಾಗುತ್ತದೆ. ॥೧೩೭-೧೩೮-೧೩೯॥

ಎಲೈ ಸುರಶ್ರೇಷ್ಠರೇ, ಅನೇಕ ಜನ್ಮಗಳಿಂದ ನಿಷ್ಕಾಮಕರ್ಮಗಳನ್ನು ಅನುಷ್ಠಾನಮಾಡಿ, ಚಿತ್ತಶುದ್ಧಿಯುಳ್ಳವರಾಗಿಯೂ, ಈಗಲೂ ಶ್ರೌತಸ್ಮಾರ್ತಕರ್ಮಾ

ನಾರಾಯಣೇನ ರುದ್ರೇಣ ತಥಾ ದೇವೈರ್ವಿಶೇಷತಃ ।
ಪರಮಾದ್ವೈತ ವಿಜ್ಞಾನೀ ಯತ್ರಕುತ್ರ ಸ್ಥಿತಃ ಸುರಾಃ ॥೧೪೨॥

ತತ್ರ ಸನ್ನಿಹಿತಾ ಮುಕ್ತಿರ್ನಾತ್ರ ಕಾರ್ಯಾ ವಿಚಾರಣಾ ।
ಪರಮಾದ್ವೈತ ವಿಜ್ಞಾನ ನಿಷ್ಠಸ್ಯೈವ ಮಹಾತ್ಮನಃ ॥೧೪೩॥

ಶುಶ್ರೂಷಾ ಕ್ರಿಯತೇ ಯೇನ ತತ್ಪಾದೌ ಮಮ ಮಸ್ತಕೇ ।
ಪರಮಾದ್ವೈತ ವಿಜ್ಞಾನ ನಿಷ್ಠಸ್ಯ ಪರಯೋಗಿನಃ ॥೧೪೪॥

ಸಮಂ ದೇವಾ ನ ಪಶ್ಯಾಮಿ ನ ಹರಿರ್ನ ಮಹೇಶ್ವರಃ ।
ಪರಮಾದ್ವೈತ ವಿಜ್ಞಾನ ನಿಷ್ಠಾಯ ಪರಯೋಗಿನೇ ॥೧೪೫॥

ಶರೀರಮರ್ಥಂ ಪ್ರಾಣಾಂಶ್ಚ ಪ್ರದದ್ಯಾಚ್ಛ್ರದ್ಧಯಾ ಸಹ ।
ಪರಮಾದ್ವೈತ ವಿಜ್ಞಾನನಿಷ್ಠಸ್ಯ ಪರಯೋಗಿನಃ ॥೧೪೬॥
ಶುಶ್ರೂಷಾ ಶುದ್ಧವಿದ್ಯಾಯಾಃ ಸಾಧನಂ ಹಿ ನ ಸಂಶಯಃ ।

ಚರಣೆಯುಳ್ಳವರಾಗಿಯೂ ಇರತಕ್ಕವರಿಗೆ ಬ್ರಹ್ಮಾತ್ಮೈಕ್ಯಜ್ಞಾನವುಂಟಾಗುತ್ತದೆ. ಅಂತಹ ಜ್ಞಾನಿಯು ನನ್ನಿಂದಲೂ ಸಹ ಪೂಜಾರ್ಹನಾಗಿರುತ್ತಾನೆ. ||೧೪೦-೧೪೧||

ಅಂತಹ ಬ್ರಹ್ಮಜ್ಞಾನಿಯು ನಾರಾಯಣನಿಂದಲೂ, ರುದ್ರನಿಂದಲೂ, ಹೆಚ್ಚಾಗಿ ದೇವತೆಗಳಿಂದಲೂ, ಸಹ ಪೂಜೆಗೆ ಯೋಗ್ಯನಾಗಿರುತ್ತಾನೆ. ಎಲೈ ಸುರರೇ, ಬ್ರಹ್ಮಾತ್ಮಜ್ಞಾನಿಯು ಎಲ್ಲಿ ಬೇಕಾದರೂ ಇರಲಿ, ಅಲ್ಲಿ ಮುಕ್ತಿಯು ಸಿದ್ಧವಾಗಿರುತ್ತದೆ. ಈ ವಿಷಯದಲ್ಲಿ ಸ್ವಲ್ಪವೂ ಸಂದೇಹವಿಲ್ಲ. ಮಹಾತ್ಮನಾದ ಬ್ರಹ್ಮಜ್ಞಾನಿಯ ಸೇವಾಪೂಜೆಯನ್ನು ಯಾವನು ಮಾಡುತ್ತಾನೆಯೋ ಅವನ ಪಾದಗಳು ನನ್ನ ಶಿರಸ್ಸಿನಲ್ಲಿರುತ್ತವೆ. ||೧೪೨-೧೪೩||

ಪರಮಪೂಜ್ಯವಾದ ಅದ್ವೈತಜ್ಞಾನಿಯಾದ ಮಹಾಯೋಗಿಗೆ ಸಮವಾದುದು ಯಾವುದೂ ಇರುವುದಿಲ್ಲ. ನಾರಾಯಣನೂ, ಮಹೇಶ್ವರನೂ ಸಹ ಅವನಿಗೆ ಸಮಾನರಲ್ಲ. ಅಂತಹ ಮಹಾಜ್ಞಾನಿಯಾದ ಮಹಾಯೋಗಿಗೆ ವಿಶ್ವಾಸಪೂರ್ವಕವಾಗಿ ಶರೀರವನ್ನೂ, ಅರ್ಥವನ್ನೂ, ಪ್ರಾಣಗಳನ್ನೂ ಸಹ ಕೊಡಬೇಕು. ೧೪೪-೧೪೫||

ಅದ್ವೈತದ ಸ್ವರೂಪವನ್ನು ತಿಳಿದ ಯೋಗಿಯ ಶುಶ್ರೂಷೆಯೂ ಶುದ್ಧಜ್ಞಾನಕ್ಕೆ ಸಾಧನವು. ಇದರಲ್ಲಿ ಸಂದೇಹವಿಲ್ಲ. ||೧೪೬||

ವೇದಬಾಹ್ಯೇಷು ತಂತ್ರೇಷು ನರಾಣಾಂ ವಾಸನಾಽಪಿ ಚ ॥೧೪೭॥

ಕುಕರ್ಮ ವಾಸನಾ ಲೋಕವಾಸನಾ ಚ ಸುರರ್ಷಭಾಃ ।
ಪುತ್ರಮಿತ್ರ ಕಲತ್ರಾದೌ ವಾಸನಾ ಚಾರ್ಥವಾಸನಾ ॥೧೪೮॥

ದೇಹೇಂದ್ರಿಯ ಮನೋಬುದ್ಧಿ ಪ್ರಾಣಾದಾವಪಿ ವಾಸನಾ ।
ಪಾಂಡಿತ್ಯವಾಸನಾ ಭೋಗವಾಸನಾ ಕಾಂತಿವಾಸನಾ ॥೧೪೯॥

ಪ್ರದ್ವೇಷವಾಸನಾ ರುದ್ರವೇದ ನಾರಾಯಣಾದಿಷು ।
ಜ್ಞಾನಸಾಧನಭೂತೇಷು ತ್ರಿಪುಂಡ್ರೋದ್ಧೂಲನಾದಿಷು ॥೧೫೦॥

ಪ್ರದ್ವೇಷ ವಾಸನಾ ಪಾಪವಾಸನಾ ಸುರಪುಂಗವಾಃ ।
ಪರಮಾದ್ವೈತವಿಜ್ಞಾನ ಜನ್ಮನಃ ಪ್ರತಿಬಂಧಕಂ ॥೧೫೧॥

ತಸ್ಮಾನ್ಮುಮುಕ್ಷುಃ ಶ್ರದ್ಧಾಲುರ್ವಾಸನಾ ಮಖಿಲಾಮಿಮಾಂ ।
ವಿಸೃಜ್ಯ ಪರಮಾದ್ವೈತ ಜ್ಞಾನನಿಷ್ಠೋ ಭವೇತ್ಸದಾ ॥೧೫೨॥

ವೇದೋದಿತ ಮಹಾಜ್ಞಾನ ಪರಿಜ್ಞಾನಸ್ಯ ವೈಭವಂ ।
ನ ಶಕ್ಯಂ ವಕ್ತುಮಸ್ಮಾಭಿಸ್ತಸ್ಮಾದೇವೋ ಪರಮ್ಯತೇ ॥೧೫೩॥

ಮನುಷ್ಯರಿಗೆ ವೇದಬಾಹ್ಯಗಳಾದ ತಂತ್ರಗಳಲ್ಲಿಯೂ, ದುಷ್ಟವಾದ ಕರ್ಮಗಳಲ್ಲಿಯೂ, ಲೋಕದಲ್ಲಿಯೂ, ಪುತ್ರ, ಮಿತ್ರ, ಪತ್ನಿ, ದ್ರವ್ಯ ಇವುಗಳಲ್ಲಿಯೂ, ಪಾಂಡಿತ್ಯದ ವಿಷಯದಲ್ಲಿಯೂ, ಶರೀರದ ಕಾಂತಿ ಮುಂತಾದುದರ ವಿಷಯದಲ್ಲಿಯೂ, ರುದ್ರವೇದ, ನಾರಾಯಣ, ಇವರ ದ್ವೇಷದ ವಿಷಯದಲ್ಲಿಯೂ, ಜ್ಞಾನಸಾಧನಗಳಾದ ಶ್ರವಣಾದಿಗಳಲ್ಲಿಯೂ, ಭಸ್ಮ, ತ್ರಿಪುಂಡ್ರ, ಭಸ್ಮೋದ್ಧೂಲನ ಇವುಗಳ ಪ್ರದ್ವೇಷದ ವಿಷಯದಲ್ಲಿಯೂ, ಪಾಪಗಳಲ್ಲಿಯೂ, ಸಹ ಇರತಕ್ಕ ವಾಸನೆಗಳು ಜೀವ ಪರಮಾತ್ಮೈಕ್ಯಜ್ಞಾನಕ್ಕೆ ಪ್ರತಿಬಂಧಕಗಳು. ||೧೪೭-೧೪೮-೧೪೯-೧೫೦-೧೫೧||

ಆದುದರಿಂದ ಶ್ರದ್ಧೆಯಿಂದ ಕೂಡಿದ ಮುಮುಕ್ಷುವು ಮೇಲೆ ಹೇಳಿದ ಎಲ್ಲಾ ವಾಸನೆಗಳನ್ನೂ ಬಿಟ್ಟು ಯಾವಾಗಲೂ ಅದ್ವೈತಜ್ಞಾನನಿಷ್ಠನಾಗಬೇಕು. ವೇದದಲ್ಲಿ ಹೇಳಿದ ಅದ್ವೈತಜ್ಞಾನದ ಮಹಿಮೆಯನ್ನು ಹೇಳಲು ನಮ್ಮಿಂದ ಸಾಧ್ಯವಿಲ್ಲ. ಆದುದರಿಂದ ಇನ್ನೂ ಹೇಳಿ ಮುಗಿಸಲಾಗದೆ ವಿರಮಿಸಬೇಕಾಗಿದೆ. ||೧೫೨-೧೫೩||

ಕಥಿತ ಸಕಲದುಃಖಧ್ವಂಸಕಂ ವಃ ಸಮಸ್ತಂ ।
ಪರಮ ಸುಖ ಶಿವಾತ್ಮಪ್ರಾಪಕಂ ಸದ್ಯ ಏವ ॥
ವಿಗತಸಕಲದೋಷಾ ವೇದವೇದಾಂತನಿಷ್ಠಾಃ ।
ಹೃದಯ ಕುಹರನಿಷ್ಠಂ ಕರ್ತುಮರ್ಹಂತಿ ಚೈ ತತ್ ॥೧೫೪॥

ಇತಿ ಶ್ರೀಸ್ಕಂದಪುರಾಣೇ ಸೂತಸಂಹಿತಾಯಾಂ ಚತುರ್ಥಸ್ಯ
ಯಜ್ಞವೈಭವಖಂಡಸ್ಯೋಪರಿಭಾಗೇ ಬ್ರಹ್ಮಗೀತಾಸೂಪನಿಷತ್ಸು
ತಲವಕಾರೋಪನಿಷದ್ವ್ಯಾಖ್ಯಾನ ಕಥನಂ ನಾಮ ಚತುರ್ಥೋಽಧ್ಯಾಯಃ

ಸಮಸ್ತ ದುಃಖವನ್ನೂ ನಾಶಮಾಡತಕ್ಕ ನಿತ್ಯಸುಖಸ್ವರೂಪನಾದ ಶಿವನನ್ನು ಹೊಂದಿಸತಕ್ಕ ಉಪಾಯವನ್ನು ನಿಮಗೆ ಎಲ್ಲವನ್ನೂ ಹೇಳಿಯಾಯಿತು. ಯಾವ ದೋಷವೂ ಇಲ್ಲದವರೂ, ವೇದವೇದಾಂತವ್ಯಾಸಂಗದಲ್ಲಿ ನಿರತರೂ ಆಗಿ ಈ ಬ್ರಹ್ಮ ಪ್ರಾಪ್ತಿಯ ಸಾಧನವು ನಿಮ್ಮ ಹೃದಯದಲ್ಲಿರುವ ಹಾಗೆ ಮಾಡಿಕೊಳ್ಳಬೇಕು. ॥೧೫೪॥

ಇಲ್ಲಿಗೆ ಸ್ಕಾಂದಪುರಾಣದ ಸೂತಸಂಹಿತೆಯಲ್ಲಿ ನಾಲ್ಕನೆಯ ಭಾಗವಾದ
ಯಜ್ಞವೈಭವಖಂಡದಲ್ಲಿ ಎರಡನೆಯ ಭಾಗದಲ್ಲಿರುವ,
ಉಪನಿಷತ್ತುಗಳಂತಿರುವ ಬ್ರಹ್ಮಗೀತೆಯಲ್ಲಿ ತಲವಕಾರೋ (ಕೇನೋ)ಪನಿಷತ್ತಿನ
ತಾತ್ಪರ್ಯವನ್ನು ವಿವರಿಸಿರುವ ನಾಲ್ಕನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಅಥಾಸ್ಯಾಃ ಶ್ರೀಮತ್ಸ್ಕಾಂದಪುರಾಣಾಂತರ್ಗತ ಸೂತಸಂಹಿತಾಯಾಶ್ಚತುರ್ಥಸ್ಯ ಯಜ್ಞವೈಭವಖಂಡಸ್ಯೋಪರಿಭಾಗೇ ಬ್ರಹ್ಮಗೀತಾ

॥ ಪಂಚಮೋಽಧ್ಯಾಯಃ ॥

ಐದನೆಯ ಅಧ್ಯಾಯವು

॥ ಬ್ರಹ್ಮೋವಾಚ ॥

ಅತೀವ ಗುಹ್ಯಮಾದೇಶ ಮನಂತಾರ್ಥ ಪ್ರಕಾಶನಂ ।
ವಕ್ಷ್ಯೇ ಯುಷ್ಮಾಕ ಮದ್ಯಾಹಂ ಶೃಣುತ ಶ್ರದ್ಧಯಾ ಸಹ ॥೧॥

ಹಿಂದಿನ ಅಧ್ಯಾಯದಲ್ಲಿ ಸಾಮಶಾಖೆಯ ತಲವಕಾರೋ(ಕೇನೋ)ಪನಿಷತ್ತಿನ ಸಾರದಿಂದ ಬ್ರಹ್ಮಸ್ವರೂಪವು ತಿಳಿಸಲ್ಪಟ್ಟಿತು. ಹಾಗೆಯೇ ಈಗ ಅದೇ ಶಾಖೆಯ ಛಾಂದೋಗ್ಯೋಪನಿಷತ್ತೂ ಸಹ ಬ್ರಹ್ಮಾತ್ಮೈಕ್ಯಪ್ರತಿಪಾದಕವಾದುದರಿಂದ ಆ ಉಪನಿಷತ್ತಿನ ಸಾರವನ್ನು ಈ ಎರಡು ಅಧ್ಯಾಯಗಳಲ್ಲಿ ಉಪದೇಶಿಸುತ್ತಾನೆ. ಛಾಂದೋಗ್ಯದಲ್ಲಿ ಪ್ರಪಂಚಶೂನ್ಯವಾಗಿಯೂ, ಅದ್ವಿತೀಯವಾಗಿಯೂ ಇರತಕ್ಕ ಬ್ರಹ್ಮವೇ ಸ್ವಾತ್ಮವಾಗಿದೆಯೆಂದು ಉಪದೇಶಿಸಲು ಸಮಸ್ತ ಕಾರ್ಯಪ್ರಪಂಚವೂ ಸಹ ಕಾರಣವಾದ ಬ್ರಹ್ಮಸ್ವರೂಪಕ್ಕಿಂತಲೂ ಬೇರೆಯಲ್ಲವಾದುದರಿಂದ ಆ ಕಾರಣವಾದ ಬ್ರಹ್ಮಸ್ವರೂಪ ಒಂದನ್ನು ಮಾತ್ರ ತಿಳಿದರೆ ಅದರ ಸಮಸ್ತ ಕಾರ್ಯವೂ ತಿಳಿದಂತೆಯೇ ಆಗುತ್ತದೆಯೆಂದು ಹೇಳಿ, ಅದಕ್ಕೆ ದೃಷ್ಟಾಂತವೇನೆಂದು ಜಿಜ್ಞಾಸೆ ಬರಲು, ಶ್ರುತಿಯಲ್ಲಿ "ಉತ ತ ಮಾದೇಶಮಪ್ರಾಕ್ಷ್ಯೋ ಯೇನಾ ಶ್ರುತಂ ಶ್ರುತಂ ಭವತಿ" ಎಂದು ಆರಂಭಿಸಿ, ಏವಂ ಸೋಮ್ಯ ಸ ಆದೇಶೋಭವತಿ" ಎಂದು ಛಾ. ಉ. ನಲ್ಲಿ ಆಮ್ನಾತವಾಗಿದೆ. ಅದರತಾತ್ಪರ್ಯವನ್ನು ಬ್ರಹ್ಮನು ದೇವತೆಗಳನ್ನು ಕುರಿತು ಹೇಳುತ್ತಾನೆ. ಆ ಬ್ರಹ್ಮಸ್ವರೂಪವು ಅತ್ಯಂತ ರಹಸ್ಯವಾದುದರಿಂದ ಉಪದೇಶದಿಂದ ಗಮ್ಯವಾಗಿಯೂ, "ಆದಿಶ್ಯತೇ ಜ್ಞಾಪ್ಯತೇ ಽನೇನ"ಎಂಬ ಕರಣ ಅಥವಾ ಕರ್ಮವ್ಯುತ್ಪತ್ತಿಯಿಂದ ಸತ್ತಾಗಿಯೂ,

ಯಸ್ಯ ಶ್ರವಣ ಮಾತ್ರೇಣ ಶ್ರುತಮೇವಾಽಶ್ರುತಂ ಭವೇತ್ ।
ಅಮತಂ ಚ ಮತಂ ಜ್ಞಾತ ಮವಿಜ್ಞಾತಂ ಚ ಸತ್ತಮಾಃ ॥೨॥

ಏಕೇನೈವ ತು ಪಿಂಡೇನ ಮೃತ್ತಿಕಾಯಾ ಯಥಾ ಸುರಾಃ ।
ವಿಜ್ಞಾತಂ ಮನ್ಮಯಂ ಸರ್ವಂ ಮೃದಭಿನ್ನತ್ವತಃ ಸದಾ ॥೩॥

ಏಕೇನ ಲೋಹಮಣಿನಾ ಸರ್ವಂ ಲೋಹಮಯಂ ಯಥಾ ।
ವಿಜ್ಞಾತಂ ಸ್ಯಾದ್ಯಥೈಕೇನ ನಖಾನಾಂ ಕೃಂತನೇನ ಚ ॥
ಸರ್ವಂ ಕಾರ್ಷ್ಣಾಯಸಂ ಜ್ಞಾತಂ ತದಭಿನ್ನತ್ವತಃ ಸುರಾಃ ॥೪॥

ಅದ್ವಿತೀಯವಾಗಿಯೂ, ತನ್ನಲ್ಲಿ ಕಲ್ಪಿತವಾದ ನಿಖಿಲ ಜಡಕಾರ್ಯಗಳನ್ನೂ ಪ್ರಕಾಶಿಸುವುದಾಗಿಯೂ, ಇದೆ. ಇಂತಹ ಬ್ರಹ್ಮಸ್ವರೂಪವನ್ನು ಹೇಳುತ್ತೇನೆ. ಶ್ರದ್ಧೆಯಿಂದ ಕೇಳಿರಿ. ||೧||

ಆ ಆದೇಶವು ಎಂದರೆ ಉಪದೇಶ ಅಥವಾ ಬ್ರಹ್ಮವು ಹೀಗಿರುತ್ತದೆ. ಎಲೈ ದೇವಶ್ರೇಷ್ಠರೇ, ಬ್ರಹ್ಮಸ್ವರೂಪವುಸಮಸ್ತಕ್ಕೂ ಕಾರಣವಾಗಿದೆ. ಹಾಗೆ ಕಾರಣವಾದುದರಿಂದ ಶ್ರುತಿಜನಿತವಾದ ಬ್ರಹ್ಮವಿಷಯಕಜ್ಞಾನದಿಂದ ಅಶ್ರುತವಾದ ಸಮಸ್ತ ಜಗತ್ತೂ ಶ್ರುತವಾದಂತೆಯೇ ಸರಿ, ಕಾರ್ಯಕಾರಣಗಳಿಗೆ ಅಭೇದವಿರೋಣದರಿಂದ ಕಾರಣಸ್ವರೂಪವು ಶ್ರುತವಾದರೆ ಕಾರ್ಯವೂ ಶ್ರುತವಾದುದಾಗುತ್ತದೆ. ಹಾಗೆಯೇ ಅತರ್ಕಿತವಾದ ಜಗತ್ತೂ ಸಹ ಬ್ರಹ್ಮತತ್ವದ ಮನನದಿಂದ ತರ್ಕಿತವಾದಂತೆಯೇ ಸರಿ. ಮತ್ತು ಬ್ರಹ್ಮವು ನಿಶ್ಚಿತವಾದರೆ ಅದರ ಕಾರ್ಯವಾದ ಪ್ರಪಂಚವೂ ಅನಿಶ್ಚಿತ ಇದ್ದಾಗ್ಯೂ ನಿಶ್ಚಿತವಾಗುತ್ತದೆ. ||೨||

ಒಂದನ್ನು ತಿಳಿದರೆ ಅದರಂತಹ ಮತ್ತೊಂದನ್ನು ತಿಳಿಯುವುದು ಹೇಗೆಂದರೆ, ಎಲ್ಲಕ್ಕೂ ಅಧಿಷ್ಠಾನಕಾರಣವಾದ ಬ್ರಹ್ಮಕ್ಕೂ, ಕಾರ್ಯಪ್ರಪಂಚಕ್ಕೂ, ಅಭಿನ್ನ ನಿಮಿತ್ತೋಪಾದಾನರೂಪವಾದ ಕಾರ್ಯಕಾರಣಭಾವವಿರೋಣದರಿಂದ, ಕಾರಣವನ್ನು ತಿಳಿದರೆ ತದಭಿನ್ನವಾದ ಕಾರ್ಯವನ್ನೂ ತಿಳಿಯಬಹುದೆಂಬ ಅಂಶವನ್ನು ದೃಷ್ಟಾಂತಗಳಿಂದ ಉಪಪಾದಿಸುತ್ತಾನೆ. ಓ ಸುರರೇ, ಒಂದೇ ಮೃತ್ಪಿಂಡವನ್ನು ತಿಳಿದರೆ ಅದರಿಂದ ಹುಟ್ಟಿದ ಕುಡಿಕೆಮಡಿಕೆಗಳೂ ಹೇಗೆ ತಿಳಿದಂತಾಗುತ್ತವೋ, ಏಕೆಂದರೆ ಕುಡಿಕೆ ಮುಂತಾದವುಗಳು ಮೃತ್ಪಿಂಡದಿಂದ ಹುಟ್ಟಿದುವಾದುದರಿಂದ ಅವುಗಳೆರಡಕ್ಕೂ ಅಭೇದವಿರೋಣದರಿಂದ, ಮಣ್ಣನ್ನು ತಿಳಿದರೆ ಮಡಿಕೆ, ಕುಡಿಕೆ ಮುಂತಾದುವುಗಳನ್ನೂ ತಿಳಿಯಬಹುದು. ಹಾಗೆಯೇ ಒಂದು ಕಬ್ಬಿಣದ ತುಂಡನ್ನು ತಿಳಿದರೆ,

ಕಾರ್ಯಂ ತು ಕಾರಣಾಭಿನ್ನಂ ನ ಭಿನ್ನಂ ನೋಭಯಾತ್ಮಕಂ ॥೫॥

ಭಿನ್ನ ಪಕ್ಷೇ ತು ಸದ್ವಾಽಸತ್ಕಾರ್ಯಂ ಸದಸದೇವ ವಾ ।
ಸಚ್ಚೇತ್ಕಾರಣ ಸತ್ತಾ ವಾ ಕಾರ್ಯಸತ್ತಾಽಥವಾ ಪರಾ ॥೬॥

ಯದಿ ಕಾರಣಸತ್ತೈವ ಕಾರ್ಯಸತ್ತಾ ನ ಚಾಪರಾ ।
ತರ್ಹಿ ಕಾರಣಸತ್ತೈಕಾ ಕಥಂ ಸತ್ತಾ ಭಿದಾ ಭವೇತ್ ॥೭॥

ಆ ಲೋಹದಿಂದ ಉಂಟಾದ ಉಗುರನ್ನು ತೆಗೆಯಲು ಉಪಯೋಗಿಸುವ ಚಾಕು, ಕತ್ತಿ, ಕತ್ತರಿ ಮುಂತಾದುವುಗಳನ್ನೂ ಹೇಗೆ ತಿಳಿಯಲಾಗುವುದೋ, ಹಾಗೆ ಕಾರಣವಾದ ಬ್ರಹ್ಮಜ್ಞಾನದಿಂದ ಎಲ್ಲವನ್ನೂ ತಿಳಿದಂತಾಗುತ್ತದೆ. ॥೩-೪॥

ಕಾರಣವಾದ ಬ್ರಹ್ಮಕ್ಕೂ, ಕಾರ್ಯವಾದ ಪ್ರಪಂಚಕ್ಕೂ ಅಭೇದವನ್ನು ಸ್ವೀಕರಿಸಿದರೆ ಬ್ರಹ್ಮನಿಗೆ ಸವಿಶೇಷತ್ವವುಂಟಾಗುತ್ತದೆ. ಆದುದರಿಂದ ಜಗತ್ತು ಬೇರೆ ಬ್ರಹ್ಮ ಬೇರೆಯೆಂದು ಹೇಳಬೇಕಾಗುತ್ತದೆ ಎಂದರೆ ಅದಕ್ಕೆ ಉತ್ತರವನ್ನು ಹೇಳುತ್ತಾನೆ. ಕಾರ್ಯವು ಕಾರಣಕ್ಕಿಂತಲೂ ಅಭಿನ್ನವಾದುದು. ಎಂದರೆ ಕಾರ್ಯಕಾರಣಗಳಿಗೆ ಭೇದವಿಲ್ಲವು. ಆದುದರಿಂದ ಕಾರಣಾಪೇಕ್ಷೆಯಿಂದ ಕಾರಣವು ಭಿನ್ನವಲ್ಲವು. ಭಿನ್ನಾಭಿನ್ನವೂ ಎಂದರೆ ಉಭಯರೂಪವಾದುದೂ ಅಲ್ಲವು. ಇಲ್ಲಿ ಕಾರ್ಯಕಾರಣಗಳಿಗೆ ಅಭೇದವನ್ನು ಹೇಳಬೇಕೆಂದು ಪ್ರತಿಜ್ಞಾತವಾಗಿದೆ. ಅದಕ್ಕೋಸ್ಕರ ಕಾರ್ಯಕಾರಣಗಳಿಗೆ ಭೇದವು ಸಿದ್ಧಿಸುವುದಿಲ್ಲವೆಂಬುದನ್ನು ತೋರಿಸಿಕೊಡಲು ವಿಕಲ್ಪ ಮಾಡುತ್ತಾನೆ. ಕಾರ್ಯವು ಕಾರಣಕ್ಕಿಂತ ಭಿನ್ನ ಎಂಬ ಪಕ್ಷದಲ್ಲಿ ಕಾರ್ಯವು ಸತ್ತೋ ಎಂದರೆ ಸದ್ರೂಪವಾದುದೋ ? ಅಸದ್ರೂಪವಾದುದೋ ? ಅಥವಾ ಸದಸದ್ರೂಪವಾದುದೋ ? ಎಂದು ವಿಕಲ್ಪವನ್ನು ತಿಳಿಸಿ, ಇವುಗಳಲ್ಲಿ ಮೊದಲನೆಯ ವಿಕಲ್ಪವು ಸರಿಯಲ್ಲವು. ಏಕೆಂದರೆ, ಸತ್ತು ಎನ್ನುವ ಕಲ್ಪದಲ್ಲಿ ಕಾರ್ಯದಲ್ಲಿರುವ ಸತ್ತಾಧರ್ಮವು ಕಾರಣಸತ್ತೆಯೇ ? ಕಾರ್ಯಸತ್ತೆಯೇ ? ಅಥವಾ ಈ ಎರಡರ ಸತ್ತೆಗಿಂತಲೂ ಭಿನ್ನವಾದುದೋ ? ಎಂದು ಕೇಳಬೇಕು. ॥೫-೬॥

ಮೊದಲನೆಯ ವಿಕಲ್ಪದಲ್ಲಿ ಕಾರ್ಯವು ಕಾರಣಕ್ಕಿಂತಲೂ ಭಿನ್ನವಾಗಿಲ್ಲವೆಂದು ಆಗುತ್ತದೆಂದು ಹೇಳುತ್ತಾನೆ. ಒಂದುವೇಳೆ ಕಾರಣಗತಸತ್ತೆಯೇ ಕಾರ್ಯದಲ್ಲಿದೆಯೆಂದೂ ಅದು ಬೇರೆಯೆಂದೂ ಒಪ್ಪಿದರೆ, ಕಾರಣಸತ್ತೆ ಒಂದೇ ಉಳಿದ ಹಾಗಾಯಿತು. ಸತ್ತಾಭೇದವೇ ಇಲ್ಲವಾದುದರಿಂದ ತ್ರಿಕಾಲಾಬಾಧ್ಯವಾದ ಕಾರಣಗತ

ಸತ್ತೈಕಾಽಪಿ ಭವೇದ್ಭಿನ್ನಂ ಕಾರಣಾತ್ಕಾರ್ಯಸಂಜ್ಞಿತಂ ।
ಇತಿ ವಾರ್ತಾ ಚ ವಾರ್ತೈವ ಕಾರ್ಯಸಂಜ್ಞಮಸತ್ಖಲು ॥೮॥

ಸತ್ತಾಹೀನಸ್ಯ ಕಾರ್ಯಸ್ಯಾ ಸತ್ತ್ವಮೇವ ಹಿ ಯುಜ್ಯತೇ ।
ಪ್ರಾಪ್ತೇಽಸತ್ತ್ವೇ ತು ಕಾರ್ಯಸ್ಯ ಸತ್ಕಾರ್ಯೋಕ್ತಿ ರ್ವೃಥಾಭವೇತ್ ॥೯॥

ನೈವ ಕಾರಣ ಸತ್ತೈವ ಕಾರ್ಯಸತ್ತಾಽಪರೈವ ಚೇತ್ ।
ತರ್ಹಿ ಸಾ ಕಾರ್ಯ ಸತ್ತಾ ತು ತಯಾ ಕಾರಣಸತ್ತಯಾ ॥೧೦॥

ಸದ್ರೂಪೇಣೈವ ಭಿನ್ನಾ ಸ್ಯಾತ್ ಅಸದ್ರೂಪೇಣ ವಾ ಭವೇತ್ ।
ಸದ್ರೂಪೇಣೇತಿ ಚೇದೇಕಾ ಸತ್ತಾ ಭಿನ್ನಾನ ಸಾ ಭವೇತ್ ॥೧೧॥

ವಾದ ಒಂದೇ ಸತ್ತೆಯು ಸಿದ್ಧಿಸುತ್ತದೆ. ತಥಾಚ ಕಾರಣಸತ್ತೆಗಿಂತ ಕಾರ್ಯಕ್ಕೆ ಬೇರೇ ಸತ್ತೆಯೇ ಇಲ್ಲದುದರಿಂದ ಕಾರ್ಯಕಾರಣಗಳಿಗೆ ಅಭೇದವೇ ಸಿದ್ಧವಾಯಿತು. ॥೭॥

ಒಂದೇ ಸತ್ತೆ ಇದ್ದಾಗ್ಯೂ ಕಾರಣಕ್ಕಿಂತಲೂ ಕಾರ್ಯವು ಬೇರೆಯಾಗಿದೆ. ಎಂದರೆ ಉತ್ತರವನ್ನು ಹೇಳುತ್ತಾನೆ. ಸತ್ತೆ ಒಂದೇ ಆದಾಗ್ಯೂ ಕಾರಣಕ್ಕಿಂತಲೂ ಕಾರ್ಯವು ಬೇರೆಯಾಗಿದೆ. ಎಂಬ ವಾದವು ಯುಕ್ತಿಯಿಲ್ಲದ ವಾದವು. ಏಕೆಂದರೆ ಕಾರಣಸತ್ತೆಯೇ ಕಾರ್ಯಸತ್ತೆಯು ಎಂದು ಸ್ವೀಕರಿಸಿದುದರಿಂದ ಸ್ವಭಾವವಾಗಿ ಸತ್ತೆಗಿಂತ ಭಿನ್ನವಾದ ಕಾರ್ಯವು ಅಸತ್ತೇ ಸರಿ. ॥೮॥

ಸತ್ತಾಶೂನ್ಯವಾದ ಶಶಶೃಂಗಾದಿಗಳು ಹೇಗೆ ಅಸತ್ತೋ ಹಾಗೆ ಸತ್ತಾಶೂನ್ಯವಾದ ಕಾರ್ಯವೂ ಸಹ ಅಸತ್ತೆಂದು ಹೇಳುವುದು ಸರಿ. ಇನ್ನೊಂದರ ಸತ್ತೆಯಿಂದ ಮತ್ತೊಂದು ಸತ್ತಾಗಲಾರದು. ಹಾಗಾದರೆ ನರಶೃಂಗಾದಿಗಳೂ ಸಹ ಸತ್ತಾಗಬೇಕಾಗುತ್ತದೆ. ಆದುದರಿಂದ ಈ ಪಕ್ಷದಲ್ಲಿ ಕಾರ್ಯವು ಅಸತ್ತಾಗಿರಲು ಕಾರ್ಯವು ಸತ್ತು ಎಂಬ ಮಾತು ನಿರರ್ಥಕವೇ ಸರಿ. ॥೯॥

ಹಾಗಾದರೆ ಕಾರಣಗತಸತ್ತೆಗಿಂತಲೂ, ಕಾರ್ಯಗತಸತ್ತೆಯು ಬೇರೆಯಾಗಲಿ, ಒಂದಾಗುವುದು ಬೇಡವೆಂದರೆ ಅದು ಸರಿಯಲ್ಲ. ಏಕೆಂದರೆ, ಕಾರಣ ಸತ್ತೆಗಿಂತಲೂ ಕಾರ್ಯಸತ್ತೆಯು ಬೇರೆಯಾದುದಲ್ಲ. ಏಕೆಂದರೆ ॥೧೦॥

ಕಾರಣಸತ್ತೆಗಿಂತಲೂ ಬೇರೆಯಾದ ಕಾರ್ಯಸತ್ತೆಯು ಸದ್ರೂಪಕ್ಕಿಂತ ಭಿನ್ನವಾದುದೋ? ಅಥವಾ ಸದ್ರೂಪಕ್ಕಿಂತ ಅಭಿನ್ನವಾದುದೋ? ಎಂದು ವಿಕಲ್ಪಿಸಿ

ಅಸದ್ರೂಪೇಣ ಸಾ ಭಿನ್ನಾ ಕಾರ್ಯಸತ್ತಾ ತಯಾ ಯದಿ ।
ತರ್ಹಿ ಸಾ ನೈವ ಸತ್ತಾಸ್ಯಾದಸತ್ತ್ವಾದೇವ ಶೂನ್ಯವತ್ ॥೧೨॥

ಯದ್ಯ ಸತ್ಕಾರ್ಯ ಮಿಷ್ಯೇತ ನ ಕಾರ್ಯಂ ತರ್ಹಿ ತದ್ಭವೇತ್ ।
ವಂಧ್ಯಾ ಪುತ್ರೋ ನ ಕಸ್ಯಾಪಿ ವಸ್ತುನಃ ಕಾರ್ಯಮಿಷ್ಯತೇ ॥೧೩॥

ಪ್ರಧ್ವಂಸೋಽಪಿ ನಕಾರ್ಯಂ ಸ್ಯಾತ್ತಸ್ಯೋತ್ಪತ್ತೇ ರಸಂಭವಾತ್ ।
ನಾಸ್ತಿ ಕಾರಕ ಸಂಬಂಧಃ ಪ್ರಧ್ವಂಸಸ್ಯ ಸುರೋತ್ತಮಾಃ ।
ಶೂನ್ಯವನ್ನಿರುಪಾಖ್ಯತ್ವಾತ್ ತತೋ ನಾಸ್ತಿ ಜನಿಕ್ರಿಯಾ ॥೧೪॥

ಮೊದಲನೆಯ ಪಕ್ಷವನ್ನು ಖಂಡಿಸುತ್ತಾನೆ. ಕಾರ್ಯಗತಸತ್ತೆಯೂ, ಕಾರಣಗತ ಸತ್ತೆಯೂ ಸಹ ಸದ್ರೂಪದೊಂದಿಗೆ ಐಕ್ಯವಾಗಿ ತಿಳಿಯೋಣದರಿಂದ ಸದ್ರೂಪದಿಂದ ಕಾರ್ಯಸತ್ತೆಗೆ ಭೇದವು ಬರಲಾರದು. ತಥಾಚ ಸತ್ತೆಯು ಒಂದೇ ಆಯಿತು.॥೧೧॥

ಕಾರ್ಯಸತ್ತೆಯು ಸದ್ರೂಪಕ್ಕಿಂತಲೂ ಬೇರೆಯೆಂದು ಎರಡನೆಯ ವಿಕಲ್ಪ ವನ್ನು ಸ್ವೀಕರಿಸಬಹುದಲ್ಲವೇ? ಎಂದರೆ ಅದು ಸರಿಯಲ್ಲ. ಏಕೆಂದರೆ ಕಾರ್ಯವು ಅಸತ್ತಾದುದರಿಂದ ತದ್ಗತಸತ್ತೆಯೂ ಅಸತ್ತು ಆಗುತ್ತದೆ. ತಥಾಚ ಶಶವಿಷಾಣದಂತೆ ಅದು ಸತ್ತಾಗುವುದು ಅಸಂಭವವಾಗಿರುತ್ತದೆ. ॥೧೨॥

ಈ ರೀತಿಯಾಗಿ ಸತ್ಕಾರ್ಯಪಕ್ಷದಲ್ಲಿರುವ ದೋಷವನ್ನು ತಿಳಿಯಪಡಿಸಿ, ಕಾರ್ಯವು ಅಸತ್ತೂ ಮತ್ತು ಕಾರಣಕ್ಕಿಂತಲೂ ಕಾರ್ಯವು ಬೇರೆಯಾದುದೂ ಆಗಿದೆ ಯೆಂಬ ಪಕ್ಷವನ್ನು ನಿರಾಕರಿಸುತ್ತಾನೆ. ಉತ್ಪತ್ತಿಗಿಂತಲೂ ಪೂರ್ವದಲ್ಲಿ ಕಾರ್ಯವು ಇರಲಿಲ್ಲ. ಅನಂತರ ಕಾರಕವ್ಯಾಪಾರದಿಂದ ಸತ್ತಾಸಂಬಂಧವು ಬರುತ್ತದೆ ಎಂದು ಕೆಲವರು ಹೇಳುತ್ತಾರೆ. ಅದು ಸರಿಯಲ್ಲ. ಅಂತಹದು ಕಾರ್ಯವೇ ಆಗಲಾರದು. ಮೊದಲು ಅಸತ್ತಾಗಿ ನಂತರ ಸತ್ತಾಸಂಬಂಧವನ್ನು ಸ್ವೀಕರಿಸುವುದಾದರೆ ವಂಧ್ಯಾ ಪುತ್ರನಿಗೂ ಸತ್ತಾಸಂಬಂಧವುಂಟಾಗಿ ಅವನೂ ಸಹ ಯಾವುದಾದರೂ ಒಂದು ಪದಾರ್ಥದ ಕಾರ್ಯಭೂತನು ಎಂದು ಹೇಳಬೇಕಾಗುತ್ತದೆ. ಹಾಗೆ ವಂಧ್ಯಾಪುತ್ರನು ಇಂತಹ ಪದಾರ್ಥದ ಕಾರ್ಯಭೂತನಾದವನೆಂದು ಲೋಕದಲ್ಲಿ ವ್ಯವಹಾರವಿರುವು ದಿಲ್ಲ. ಆದುದರಿಂದ ಉತ್ಪತ್ತಿಯ ಪೂರ್ವದಲ್ಲಿ ಕಾರ್ಯವು ಅಸತ್ತೆಂಬ ಮಾತು ನಿರ್ಯುಕ್ತಿಕವಾದುದೇ ಸರಿ. ॥೧೩॥

ಪ್ರಧ್ವಂಸಾ ಭಾವದಂತೆ ಅಸತ್ತಾದಾಗ್ಯೂ ಕಾರ್ಯತ್ವವು ಏಕೆ ಬರಲಾರ ದೆಂದರೆ ಅದಕ್ಕೆ ಉತ್ತರವನ್ನು ಹೇಳುತ್ತಾನೆ. ಓ ದೇವಶ್ರೇಷ್ಠರೇ, ಪ್ರಧ್ವಂಸಾ

ಅಸತ್ವೇಽಪಿ ವಿಶೇಷೋಽಸ್ತಿ ಕಾರ್ಯಸ್ಯೇತಿ ಮತಿರ್ಯದಿ ॥೧೫॥

ಕೋ ವಿಶೇಷೋಽಸ್ಯ ಸಂಬಂಧಃ ಕಾರಕೈರ್ಯದಿ ತನ್ನ ಹಿ ।
ವಿಶೇಷೇ ಸತಿ ಸಂಬಂಧಃ ಸಂಬಂಧೋಽಸ್ಯ ಸ ಏವ ಹಿ ॥೧೬॥

ಜನಿಕ್ರಿಯಾಽಽಶ್ರಯತ್ವಂ ಚೇತ್ ವಿಶೇಷೋಽಸ್ಯ ತದಾಽಪಿತು ।
ಪೂರ್ವೋಕ್ತದೋಷಃ ಸಂಪ್ರಾಪ್ತಸ್ತಸ್ಯ ನಾಸ್ತಿ ನಿವಾರಕಃ ॥೧೭॥

ಭಾವಕ್ಕೂ ಉತ್ಪತ್ತಿಯಿಲ್ಲದುದರಿಂದ ಅದಕ್ಕೆ ಕಾರ್ಯತ್ವವು ಸಂಭವಿಸಲಾರದು. ಏಕೆಂದರೆ ಕರ್ತೃಕರಣ ಮುಂತಾದ ಕಾರಕಸಂಬಂಧವುಳ್ಳ ಘಟಾದಿಗಳಿಗೆ ಮಾತ್ರ ಉತ್ಪತ್ತಿರೂಪವಾದ ಕ್ರಿಯೆಯು ಇರುವುದೆಂದು ತಿಳಿದುಬರುತ್ತದೆ. ಪ್ರಧ್ವಂಸವಾದರೋ ಶಶವಿಷಾಣಾದಿಗಳಂತೆ ಅಸತ್ತಾದುದರಿಂದ ಯಾವ ಧರ್ಮಗಳ ಸಂಬಂಧವೂ ಸಹ ಇದರಲ್ಲಿ ಇಲ್ಲವು. ಹಾಗೆ ಕಾರಕಸಂಬಂಧರೂಪವಾದ ಧರ್ಮವನ್ನು ಧ್ವಂಸದಲ್ಲಿ ಒಪ್ಪಿಕೊಂಡರೆ ಘಟಾದಿಗಳಂತೆ ಭಾವಸ್ವರೂಪವಾಗಬೇಕಾಗುತ್ತದೆ. ಆದುದರಿಂದ ಅಸತ್ತಾದ ಧ್ವಂಸಕ್ಕೆ ಜನಿಕ್ರಿಯೆಯು ಸಂಭವಿಸಲಾರದಾದುದರಿಂದ ಅದಕ್ಕೆ ಕಾರ್ಯತ್ವವು ಬರಲಾರದು. ॥೧೪॥

ಕಾರ್ಯವು ಅಸತ್ತಾದಾಗ್ಯೂ ವಂಧ್ಯಾಪುತ್ರಾದಿಗಳಂತೆ ಅತ್ಯಂತ ಅಸತ್ತಲ್ಲವು. ಸ್ವಲ್ಪ ವಿಶೇಷವಿದೆ. ಆದುದರಿಂದ ಕಾರ್ಯತ್ವವು ಬರಬಹುದಲ್ಲವೇ? ಎಂದರೆ ಆ ವಿಶೇಷವನ್ನು ವಿಕಲ್ಪಮಾಡಿ ಪ್ರಶ್ನೆಮಾಡುತ್ತಾನೆ. ಆ ಕಾರಕ ಸಂಬಂಧವು ಉತ್ಪತ್ತಿರೂಪಕ್ರಿಯಾಶ್ರಯತ್ವವೇ? ಅಥವಾ ಸತ್ತಾ ಸಂಬಂಧವೇ? ಇವುಗಳಲ್ಲಿ ಮೊದಲಿನ ವಿಕಲ್ಪವು ಸರಿಯಲ್ಲವು. ಏಕೆಂದರೆ, ಯಾವ ವಿಶೇಷಣವೂ ಇಲ್ಲದ ಅಸತ್ತಿಗೆ ಕಾರಣಸಂಬಂಧವನ್ನು ಸ್ವೀಕರಿಸಿದರೆ ವಂಧ್ಯಾಪುತ್ರನಿಗೂ ಕಾರಕಸಂಬಂಧವು ಸಂಭವಿಸಬಹುದು. ಅದರಿಂದ ಅವನಿಗೂ ಕಾರ್ಯತ್ವಪ್ರಸಕ್ತಿಬರಬಹುದು. ಆದುದರಿಂದ ಅವಶ್ಯವಾಗಿ ಯಾವುದೋ ಒಂದು ವಿಶೇಷದಿಂದ ವಿಶೇಷವುಳ್ಳ ಅಸತ್ತಿಗೆ, ಇಲ್ಲದಿರುವಿಕೆಗೆ, ಕಾರಕಸಂಬಂಧವನ್ನು ಹೇಳಬೇಕು. ಆ ವಿಶೇಷವು ಕಾರಕಸಂಬಂಧರೂಪವಾದರೆ " ಸ್ವವಿಶಿಷ್ಟೇ ಸ್ವವೃತ್ತಿಃ " ಎಂದರೆ ವಿಶೇಷವಿಶಿಷ್ಟವಾದುದರಲ್ಲಿಯೇ ವಿಶೇಷದ ಇರುವಿಕೆಯೆಂದು ಸ್ವೀಕರಿಸಿದ ಹಾಗಾಗುವುದರಿಂದ ಆತ್ಮಾಶ್ರಯವೆಂಬ ದೋಷವುಂಟಾಗುತ್ತದೆ. ॥೧೫-೧೬॥

ಎರಡನೆಯ ವಿಕಲ್ಪಕ್ಕೆ ಉತ್ತರವನ್ನು ಹೇಳುತ್ತಾನೆ. ಕಾರ್ಯಕ್ಕೆ ಜನಿಕ್ರಿಯಾಶ್ರಯತ್ವವೇ ವಿಶೇಷವೆಂದರೆ ಅದೂ ಸರಿಯಲ್ಲವು. ಏಕೆಂದರೆ, ಜನಿಕ್ರಿಯಾಶ್ರಯತ್ವ

ಸತ್ತಾಸಂಬಂಧ ವತ್ತ್ವಂ ಚೇತ್ ವಿಶೇಷೋಽಸ್ಯ ನ ತತ್ಪಟು(ತ್ಕ್ವಚಿತ್) ।
ತದಾಽಪಿ ದೋಷಃ ಪೂರ್ವೋಕ್ತಃ ಪ್ರಾಪ್ನೋತ್ಯೇವ ನ ಸಂಶಯಃ ॥೧೮॥

ಅತೋಽಸತೋ ನ ಕಾರ್ಯತ್ವಂ ಸದಸತ್ವಂ ನ ಸಂಗತಂ ।
ಉಕ್ತದೋಷದ್ವಯಾ ಪತ್ತೇರತಃ ಕಾರ್ಯಂ ನ ಕಾರಣಾತ್ ।
ಅಭಿನ್ನಮೇವ ಭೇದಸ್ಯಾ ಸಂಭವಾದೇವ ವಸ್ತುತಃ ॥೧೯॥

ರೂಪವಾದ ವಿಶೇಷವೂ ಸಹ ಯಾವುದೋ ಒಂದು ವಿಶೇಷದಿಂದ ಕೂಡಿದ ಅಸತ್ತಿಗೆಂದು ಹೇಳಬೇಕು. ಇಲ್ಲದಿದ್ದರೆ ನರವಿಷಾಣಕ್ಕೂ ಅಂತಹ ವಿಶೇಷವು ಬರಬೇಕಾಗುತ್ತದೆ. ಆ ವಿಶೇಷವು ಜನಿಕ್ರಿಯಾಶ್ರಯತ್ವರೂಪವಾದುದಾದರೆ ಹಿಂದೆ ಹೇಳಿದಂತೆ ಆತ್ಮಾಶ್ರಯವೆಂಬ ದೋಷವುಂಟಾಗುತ್ತದೆ. ಆ ದೋಷವನ್ನು ನಿವಾರಿಸುವ ಯುಕ್ತಿಯೂ ಯಾವುದೂ ಇಲ್ಲವು. ||೧೭||

ಆತ್ಮಾಶ್ರಯತ್ವರೂಪದೋಷವು ಪ್ರಾಪ್ತವಾಗೋಣದರಿಂದ ಸತ್ತಾಸಂಬಂಧರೂಪವಾದ ವಿಶೇಷವನ್ನೂ ಸಹ ಒಪ್ಪುವಹಾಗಿಲ್ಲ. ಆದುದರಿಂದ ಸತ್ತಾಸಂಬಂಧರೂಪವಾದ ವಿಶೇಷವು ಕಾರ್ಯಕ್ಕೆ ಇದೆ. ಎಂಬ ಮೂರನೆಯ ಕಲ್ಪವೂ ಸಹ ಸರಿಯಲ್ಲವು. ಆದುದರಿಂದ ಅಸತ್ತಿಗೆ ಕಾರ್ಯತ್ವವು ಸರ್ವಥಾ ಬರಲಾರದು. ||೧೮||

ಹಿಂದೆ ಹೇಳಿದ ರೀತಿಯಲ್ಲಿ ನರವಿಷಾಣದಂತೆ ಅಸತ್ತಾದ್ದಕ್ಕೆ ಸಂಬಂಧವನ್ನು ನಿರೂಪಿಸಲು ಅಶಕ್ಯವಾದುದರಿಂದ ಅದಕ್ಕೆ ಕಾರ್ಯತ್ವವು ಯುಕ್ತವಾದುದಲ್ಲ. ಹಾಗಾದರೆ ಕಾರ್ಯವು ಸದಸದಾತ್ಮಕವಾದುದಾಗಿ ಇರುತ್ತದೆಯೆಂದು ಮೂರನೆಯ ವಿಕಲ್ಪವನ್ನು ಉದ್ಭಾವಿಸಿ, ಸಮಾಧಾನವನ್ನು ಹೇಳುತ್ತಾನೆ. ಕಾರ್ಯವು ಸದಸದಾತ್ಮಕವೂ ಆಗಲಾರದು. ಏಕೆಂದರೆ, ಸದಸತ್ತುಗಳು ಪರಸ್ಪರವಾಗಿ ಬಹಳ ವಿರುದ್ಧವಾದುದರಿಂದ ಏಕತ್ರ ಬರಲಾರವು. ಮತ್ತು ಆತ್ಮಾಶ್ರಯವೂ, ಅಸತ್ತಿಗೆ ಕಾರ್ಯತ್ವವಿಲ್ಲದಿರುವಿಕೆಯೂ, ಎಂಬ ಹಿಂದೆ ಹೇಳಿದ ಎರಡು ದೋಷಗಳೂ ಸಹ ಬರುತ್ತವೆ. ಆದುದರಿಂದ ಕಾರ್ಯವು ಕಾರಣಕ್ಕಿಂತಲೂ ಬೇರೆಯೆಂದು ಹೇಳಲು ಸಾಧ್ಯವಿಲ್ಲ. ವಸ್ತುತಃ ವಿಚಾರಿಸಿದರೆ ಭೇದವು ಸರ್ವಥಾ ಸಂಭವಿಸಲಾರದು. ಹಾಗೆ ಭೇದಪ್ರತೀತಿಬರಬೇಕಾದರೆ ಅನುಯೋಗಿ ಪ್ರತಿಯೋಗಿ (ಧರ್ಮಿಪ್ರತಿಯೋಗಿ) ಗಳಿಗೆ ಭೇದವು ಪ್ರತೀತವಾಗಬೇಕು. ಹೇಗೆಂದರೆ "ಘಟವು ಪಟವಲ್ಲ" ವೆಂಬಲ್ಲಿ, ಅಲ್ಲ ಎಂಬ ಭೇದವೂ, ಘಟ ಎಂಬ ಪ್ರತಿಯೋಗಿಯೂ, ಪಟವೆಂಬ ಅನುಯೋಗಿಯೂ, ಸಹ ತೋರುತ್ತವೆ.

ಭೇದಾಭೇದ ಸಮಾಖ್ಯಾ ತು ಸುತರಾಂ ನೈವ ಸಿಧ್ಯತಿ ।
ಕಾರಣಾತ್ಕಾರ್ಯಜಾತಸ್ಯ ಭೇದಾಭಾವಾಚ್ಚ ವಸ್ತುತಃ ॥೨೦॥

ಕಾರ್ಯಕಾರಣಭೇದಶ್ಚ ಕಾರಕವ್ಯಾಪೃತಿ ಸ್ತಥಾ ।
ಉತ್ಪತ್ತಿಶ್ಚ ವಿನಾಶಶ್ಚ ತಥೈವಾರ್ಥಕ್ರಿಯಾಽಪಿಚ ॥೨೧॥

ನಾಮರೂಪ ವಿಶೇಷಶ್ಚ ಸರ್ವಂ ಭ್ರಾಂತ್ಯಾ ಪ್ರಸಿಧ್ಯತಿ ॥೨೨॥

ಅತಃ ಸರ್ವೋಽ ವಿಕಾರಶ್ಚ ವಾಚಾ ಕೇವಲ ಮಾಸ್ತಿಕಾಃ ।
ಅಸ್ತೀತ್ಯಾರಭ್ಯತೇ ನಾಮಧೇಯ ಮಾತ್ರಂ ಹಿ ಸತ್ತದಾ ॥೨೩॥

ಅದರಂತೆ ಕಾರ್ಯಕಾರಣಗಳಾದ ಮೃದ್ಘಟವೆಂಬಲ್ಲಿ ಭೇದಾದಿಗಳು ತೋರುವುದಿಲ್ಲ. ಮತ್ತು ಅಭೇದಸಾಧಕಗಳಾದ ಸಾಮಾನಾಧಿಕರಣ್ಯಪ್ರತೀತಿಯೂ, ಭೇದಪ್ರತೀತಿಗೆ ವಿರೋಧವಾಗಿದೆ. ಆದುದರಿಂದ ಕಾರಣಾಪೇಕ್ಷೆಯಿಂದ ಕಾರ್ಯದ ಸ್ಥಿತಿಯು ದುರ್ನಿರೂಪವಾದುದರಿಂದ ಅವುಗಳಿಗೆ ಅಭೇದವನ್ನೇ ಸ್ವೀಕರಿಸಬೇಕು. ॥೧೯॥

ವಸ್ತುತಃ ವಿಚಾರಮಾಡಿ ನೋಡಿದರೆ ಮಣ್ಣೇ ಘಟವಾಗಿದೆ. ತಂತುಗಳೇ ಪಟವಾಗಿವೆ. ಎಂದು ತೋರುವುದರಿಂದ ಕಾರ್ಯಕಾರಣಗಳಿಗೆ ಭೇದವಿರುವುದಿಲ್ಲ. ಹೀಗಿರುತ್ತಿರಲಾಗಿ ಭೇದಾಭೇದವು ಪರಸ್ಪರ ವಿರುದ್ಧವಾದುದು. ಆದುದರಿಂದ ಅದು ಒಂದು ಕಡೆಯಲ್ಲಿ ಸರ್ವಥಾ ಬರಲಾರದು. ಈ ರೀತಿಯಲ್ಲಿ ಕಾರ್ಯಕಾರಣಗಳಿಗೆ ಭೇದಾಭೇದವು ಉಂಟೆಂಬ ವಾದವು ಯುಕ್ತಿಯಿಲ್ಲದುದರಿಂದ ಅನಾದೇಯವಾಗಿದೆ. ಹಾಗಾದರೆ ಕಾರ್ಯಕಾರಣಗಳಿಗೆ ಭೇದವು ತೋರುತ್ತಿದೆಯಲ್ಲವೆ? ಎಂದರೆ ಅದಕ್ಕೆ ಉತ್ತರ ಹೇಳುತ್ತಾನೆ. ವಸ್ತುತಃ ಕಾರ್ಯವು ಕಾರಣಕ್ಕಿಂತಲೂ ಅಭಿನ್ನವಾದಾಗ್ಯೂ ಅವಿದ್ಯಾಧೀನವಾಗಿ ಭ್ರಾಂತಿಯಿಂದ ಕಾರ್ಯಕಾರಣಗಳಿಗೆ ಭೇದವೂ ಕಾರಕವ್ಯಾಪಾರಗಳೂ, ಉತ್ಪತ್ತಿಯೂ, ನಾಶವೂ, ಆಯಾಯ ಕಾರ್ಯಗಳಲ್ಲಿ ತೋರತಕ್ಕ ಅರ್ಥಕ್ರಿಯೆ (ಕಾರ್ಯವಾದ ಜಲಾಹರಣ ಮುಂತಾದುವುಗಳು) ಗಳು, ಪಟವೆಂಬ ನಾಮ, ನೀಲವೆಂಬ ರೂಪ, ಇವೆಲ್ಲವೂ ಸಹ ತೋರುತ್ತವೆ. ॥೨೦-೨೧-೨೨॥

ಈ ರೀತಿಯಾಗಿ ಕಾರ್ಯವು ಕಾರಣಸ್ವರೂಪವೆಂದು ಪ್ರತಿಪಾದಿಸಿ ಹಿಂದೆ ಹೇಳಿದ ತಾತ್ಪರ್ಯಾರ್ಥದಲ್ಲಿ ಶ್ರುತಿಯನ್ನು ಸೇರಿಸುತ್ತಾನೆ. "ವಾಚಾರಂಭಣಂ ವಿಕಾರೋ ನಾಮಧೇಯಂ ಮೃತ್ತಿಕೇತ್ಯೇವ ಸತ್ಯಂ" ಛಾಂದೋಗ್ಯೋಪನಿಷತ್ ೬.೧.೪. ಎಂಬ ಶ್ರುತ್ಯರ್ಥವನ್ನು ಸಂಗ್ರಹಿಸುತ್ತಾನೆ. ಎಲೈ ಆಸ್ತಿಕರೇ, ಕಾರ್ಯಕಾರಣ

ಪ್ರಾತೀತಿ ಕೇನ ರೂಪೇಣ ವಿಕಾರೋಽಸತ್ಯ ಏವಹಿ ।
ಕಾರಣಾ ಕಾರ ಏವಾಸ್ಯ ಸತ್ಯಃ ಸಾಕ್ಷಾತ್ಸದಾ ಸುರಾಃ ॥೨೪॥

ಕಾರಣಾ ಭಿನ್ನರೂಪೇಣ ಕಾರ್ಯಂ ಕಾರಣ ಮೇವಹಿ ।
ಸದ್ರೂಪೇಣ ಸದಾ ಸತ್ಯಂ ಭೇದೇನೋಕ್ತಿಃ ಮೃಷಾ ಖಲು ॥೨೫॥

ಗಳ ಭೇದವು ಭ್ರಾಂತಿ ಪ್ರಯುಕ್ತವಾದುದರಿಂದ ಸಮಸ್ತ ಘಟಾದಿವಿಕಾರವು ವಾಕ್ಕಿನಿಂದ ಹೇಳಲ್ಪಡುತ್ತದೆ. ಘಟ, ಶರಾವ ಮುಂತಾದುದು ಹೆಸರು ಮಾತ್ರವೇ ಹೊರತು ಕಾರಣವಾದ ಮೃತ್ಸ್ವರೂಪಕ್ಕಿಂತಲೂ ಘಟಾದಿ ಪದಾರ್ಥಗಳು ಬೇರೆಯಾಗಿ ಇಲ್ಲವೇ ಇಲ್ಲ. ಕಾರ್ಯನಾಶಕಾಲದಲ್ಲಿ ಕಾರಣಮಾತ್ರವು ಹೇಗೆ ತೋರುತ್ತದೆಯೋ ಹಾಗೆ ಕಾರ್ಯಸ್ಥಿತಿಯ ಕಾಲದಲ್ಲಿಯೂ ಸಹ ಕಾರಣವೇ ತೋರುತ್ತಾ ಸತ್ತಾಗಿದೆ. ||೨೩||

ವಿಕಾರವು ನಾಮಮಾತ್ರವೆಂದು ಒಪ್ಪಿದರೆ ಅಸತ್ತು ಎಂದು ಅರ್ಥಾತ್ ಹೇಳಿದಂತಾಯಿತು. ಅಂತಹ ಅಸತ್ತಾದ ಕಾರ್ಯಕ್ಕೆ ಕಾರಣವಾದ ಸದ್ಬ್ರಹ್ಮನೊಂದಿಗೆ ಅಭೇದವು ಹೇಗೆ ಸಂಭವಿಸೀತು? ಸದಸತ್ತುಗಳಿಗೆ ಸಂಬಂಧ ಬರಲಾರದಲ್ಲವೇ? ಎಂದರೆ ಅದಕ್ಕೆ ಉತ್ತರವನ್ನು ಹೇಳುತ್ತಾನೆ. ಓ ಸುರರೇ, ಕಾರ್ಯಕ್ಕೆ ಎರಡು ರೂಪವಿದೆ. ಒಂದು, ದಪ್ಪವಾದ ತಲ ಮತ್ತು ಹೊಟ್ಟೆ, ಶಂಖದಂತಿರತಕ್ಕ ಕಂಠ, ಈ ರೂಪವಾದುದು. ಇದು ಪ್ರಾತೀತಿಕವು. ಇನ್ನೊಂದು, ಮೃತ್ಸ್ವರೂಪವಾದ ಪಾರಮಾರ್ಥಿಕ ರೂಪವು. ಇದು ಘಟಾಕಾರದೆಸೆಯಲ್ಲಿಯೂ ಸಹ "ಮದ್ಘಟಃ" ಎಂದು ಪ್ರತೀತಿ ಇರೋಣದರಿಂದ ಯಾವಾಗಲೂ ಕಾರ್ಯವನ್ನು ಅನುಸರಿಸಿಯೇ ಇರುತ್ತದೆ. ಏವಂಚ ಕಾರ್ಯಾಕಾರವು ಪ್ರಾತೀತಿಕವಾಗಿರೋಣದರಿಂದ ಅದು ಅಸತ್ಯವೇ ಸರಿ. ಕಾರ್ಯದಲ್ಲಿರತಕ್ಕ ಕಾರಣಾಕಾರವು ಮಾತ್ರ ಯಾವಾಗಲೂ ಸತ್ಯವಾದುದು. ||೨೪||

ಕಾರ್ಯಸಂಬಂಧಿಯಾದ ಕಾರಣರೂಪವೊಂದು, ಕಾರಣ ಒಂದು ಹೀಗೆ ಎರಡು ವಿಧ ವಿರೋಣದರಿಂದ ಅದ್ವಿತೀಯಕಾರಣತ್ವವಿರೋಧ ಬರುತ್ತದೆ ಎಂದರೆ ಅದಕ್ಕೆ ಉತ್ತರವನ್ನು ಹೇಳುತ್ತಾನೆ. ಹೇಗೆಂದರೆ ಕಾರ್ಯವು ಕಾರಣಾಭಿನ್ನರೂಪದಿಂದ ಕಾರಣವೇ ಆಗಿರುತ್ತದೆ. "ಮೃತ್ತಿಕೇತ್ಯೇವ ಸತ್ಯಂ" ಛಾ. ಉ. ೬.೧.೪. ಎಂಬ ಶ್ರುತ್ಯನುಸಾರವಾಗಿ ಕಾರಣರೂಪವು ಯಾವಾಗಲೂ ಸತ್ಯವಾದುದು. ಕಾರಣ ಬೇರೆ, ಕಾರ್ಯವು ಬೇರೆ, ಎಂಬ ಮಾತು ಅಸತ್ಯವಾಗಿದೆ. ಆದುದರಿಂದ ಕಾರ್ಯದ ಕಾರಣಸ್ವರೂಪವೊಂದೇ ಸತ್ಯವಾಗಿಯೂ, ಕಾರ್ಯರೂಪವು ಮಿಥ್ಯಾರೂಪವಾಗಿಯೂ ಇರುವುದು. ||೨೫||

ಅತಃ ಕಾರಣ ವಿಜ್ಞಾನಾತ್ಸರ್ವವಿಜ್ಞಾನಮಾಸ್ತಿಕಾಃ ।
ಸುತರಾಮುಪಪನ್ನಂ ಹಿ ನ ಸಂದೇಹೋಽಸ್ತಿಕಶ್ಚನ ॥೨೬॥

ತಚ್ಚ ಕಾರಣಮೇಕಂ ಹಿ ನ ಭಿನ್ನಂ ನೋಭಯಾತ್ಮಕಂ ।
ಭೇದಃ ಸರ್ವತ್ರ ಮಿಥ್ಯೈವ ಧರ್ಮ್ಯಾದೇರನಿರೂಪಣಾತ್ ॥೨೭॥

ಭೇದೇ ಜ್ಞಾತೇ ಹಿ ಧರ್ಮ್ಯಾದಿ ವಿಭಾಗಸ್ಯ ಚ ವೇದನಂ ।
ವಿಭೇದೇನೈವ(ನಹಿ) ಧರ್ಮ್ಯಾದೌ ವಿಜ್ಞಾತೇ ಭೇದವೇದನಂ ॥೨೮॥

ಭೇದಾನಿರೂಪಣಾದೇವ ಭೇದಾಭೇದೋ ನ ಸಂಗತಃ ।
ಅತಶ್ಚ ಕಾರಣಂ ನಿತ್ಯಮೇಕಮೇವಾದ್ವಯಂ ಸುರಾಃ ॥೨೯॥

ಲೋಕದಲ್ಲಿ ಮೃದಾದಿ ಕಾರಣಪದಾರ್ಥಗಳು ತಿಳಿದರೆ ಆ ಮೃದಾದ್ಯಪೇಕ್ಷೆಯಿಂದ ಭೇದವಿಲ್ಲದ ಮತ್ತು ಅದರ ಕಾರ್ಯಗಳಾಗಿಯೂ ಇರತಕ್ಕ ಮಡಿಕೆ, ಕುಡಿಕೆ ಮುಂತಾದುವುಗಳು ಕಾರಣಾಕಾರದಿಂದ ತಿಳಿಯುತ್ತವೆ. ಹಾಗೆಯೇ ಸಮಸ್ತ ನಾಮ ರೂಪವುಳ್ಳ ಜಗತ್ತೂ ಸಹ ಕಾರಣವಾದ ಸದ್ರೂಪವಾದ ಬ್ರಹ್ಮಸ್ವರೂಪವು ತಿಳಿದರೆ ಸಮಸ್ತವೂ ತಿಳಿಯುತ್ತದೆ. ಈ ವಿಷಯದಲ್ಲಿ ಸಂದೇಹವಿಲ್ಲ. ॥೨೬॥

ಈ ಸಮಸ್ತ ಜಗತ್ತಿಗೆ ಕಾರಣವಾಗಿಯೂ, ಸದ್ರೂಪವಾಗಿಯೂ ಇರತಕ್ಕ ಕಾರಣಸ್ವರೂಪವು ಏಕವಾಗಿದೆ. ಎಂದರೆ ತನಗೆ ಸಮಾನವಾದ ವಸ್ತುವಿಲ್ಲದ್ದಾಗಿದೆ. ಅದು ಭಿನ್ನವೂ ಅಲ್ಲ. ಭಿನ್ನಾಭಿನ್ನವೂ ಅಲ್ಲ. ಭೇದವು ಯಾವ ಕಾರಣಸ್ವರೂಪ ದಲ್ಲಿಯೂ ಸಹ ಇಲ್ಲದುದರಿಂದ ಅದು ಮಿಥ್ಯಾಭೂತವಾದುದು. ಅಲ್ಲದೆ ಘಟವು ಪಟವಲ್ಲವೆಂದು ಭೇದವು ಪ್ರತ್ಯಕ್ಷಸಿದ್ಧವಾಗಿದೆ ಎಂದರೆ ಅದಕ್ಕೆ ಉತ್ತರ ಹೇಳುತ್ತಾನೆ.—ಭೇದಜ್ಞಾನವುಂಟಾಗಬೇಕಾದರೆ ಭೇದಕ್ಕೆ ಅನುಯೋಗಿಯಾಗಿಯೂ, ಪ್ರತಿಯೋಗಿಯಾಗಿಯೂ ಇರತಕ್ಕ ಪದಾರ್ಥಗಳ ಜ್ಞಾನವು ಆವಶ್ಯಕವಾಗಿದೆ. ಹಾಗೆಯೇ ಪ್ರತಿಯೋಗಿ, ಮತ್ತು ಅನುಯೋಗಿ ಇವುಗಳ ಜ್ಞಾನವುಂಟಾಗಬೇಕಾದರೆ ಭೇದಜ್ಞಾನವು ಆವಶ್ಯಕ. ಈ ರೀತಿಯಾಗಿ ಒಂದು ಜ್ಞಾನವನ್ನು ನಿರೂಪಿಸಲು ಮತ್ತೊಂದು ಜ್ಞಾನಾಪೇಕ್ಷೆಯು ಇರೋಣದರಿಂದ ಭೇದವು ಸರ್ವತ್ರ ಮಿಥ್ಯಾಭೂತ ವಾದುದೆಂದೇ ತಿಳಿಯಬೇಕು. ॥೨೭-೨೮॥

ಓ ಸುರರೇ, ಕೆಲವರು ಕಾರ್ಯಕಾರಣಗಳಿಗೆ ಭೇದಾಭೇದಗಳನ್ನು ಸ್ವೀಕರಿಸುತ್ತಾರೆ. ಅದು ಹೇಗೆಂದರೆ, ಘಟವು ಹುಟ್ಟುವುದಕ್ಕಿಂತ ಮುಂಚೆ ಮೃದ್ರೂಪದಿಂದ

ಕುಲಾಲಾದೇರ್ಮೃದಾದೇಶ್ಚ ಭೇದೇ ದೃಷ್ಟೇಽಪಿ ಭೂತಲೇ ।
ಅಚೈತನ್ಯಾನ್ಮೃದಾದೇಸ್ತು ಕುಲಾಲಾದಿರಪೇಕ್ಷ್ಯತೇ ॥೩೦॥

ಅತ್ರ ಕಾರಣಮದ್ವೈತಂ ಶುದ್ಧಂ ಚೈತನ್ಯಮೇವ ಹಿ ।
ತೇನ ನಾಪೇಕ್ಷತೇ ಹ್ಯನ್ಯತ್ಕಾರಣಂ ಚೇತನಾತ್ಮಕಂ ॥೩೧॥

ಸ್ವಯಂ ಚೇತನ ಮಪ್ಯೇತತ್ಕಾರಣಂ ನ ಕುಲಾಲವತ್ ।
ಅಪೇಕ್ಷತೇ ಮೃದಾತುಲ್ಯ ಮಚಿದ್ರೂಪಂ ತು ಕಾರಣಂ ॥೩೨॥

ಘಟಕ್ಕೆ ಅಭೇದವೂ, ಅದು ಹುಟ್ಟಿದ ಮೇಲೆ ಭೇದವೂ ಇರುತ್ತದೆ. ಇದು ಸರಿಯಲ್ಲ. ಏಕೆಂದರೆ ಹಿಂದೆ ಹೇಳಿದಂತೆ ಭೇದವು ಉಂಟಾಗದೇ ಇರೋಣದರಿಂದ ಭೇದಾಭೇದವೂ ಸಹ ಸರ್ವಥಾ ಸಂಭವಿಸಲಾರದು. ಹೀಗಿರುವುದರಿಂದ ಭೇದಜ್ಞಾನವೂ ಸಹ ಪಾರಮಾರ್ಥಿಕವಾದುದಲ್ಲ. ಆದುದರಿಂದ ಕಾರಣಸ್ವರೂಪವೊಂದೇ ಮೂರು ಕಾಲದಲ್ಲಿಯೂ ಇರತಕ್ಕದ್ದಾಗಿಯೂ, ಪಾರಮಾರ್ಥಿಕವಾಗಿಯೂ ತನಗೆ ಸಮಾನವಾದ ಪದಾರ್ಥಾಂತರವಿಲ್ಲದ್ದಾಗಿಯೂ, ಇರುವುದು. ॥೨೯॥

ಲೋಕದಲ್ಲಿ ಘಟಾದಿಕಾರ್ಯಗಳಿಗೆ ಉಪಾದಾನ ಕಾರಣವೂ, ನಿಮಿತ್ತ ಕಾರಣವೂ ಬೇರೆಯಾಗಿ ತೋರುತ್ತವೆ. ಹಾಗೆಯೇ ಅದ್ವಿತೀಯವಾದ ಸದ್ವಸ್ತುವು ಜಗತ್ತಿಗೆ ನಿಮಿತ್ತವಾದುದರಿಂದ ಉಪಾದಾನಕಾರಣವಿಲ್ಲದ ಕಾರ್ಯವು ಹೇಗೆ ಉತ್ಪನ್ನವಾಗುತ್ತದೆ? ಎಂದರೆ, ಸದ್ರೂಪಕಾರಣವು ಉಪಾದಾನಕಾರಣರೂಪವಾಗಿಯೂ, ನಿಮಿತ್ತಕಾರಣರೂಪವಾಗಿಯೂ ಇದೆ ಎಂಬ ಅಂಶವನ್ನು ಪ್ರಕಟಿಸುತ್ತಾನೆ. ಮೃದಾದಿ ಕಾರಣಗಳು ಅಚೇತನವಾದುದರಿಂದ, ಅವುಗಳಿಗೆ ಸ್ವತಃ ಕಾರ್ಯಜನಕತ್ವಶಕ್ತಿಯಿಲ್ಲದುದರಿಂದ, ಚೇತನನಾದ ಕುಲಾಲಾದಿ ನಿಮಿತ್ತಕಾರಣಾಪೇಕ್ಷೆಯು ಅವುಗಳಿಗಿರುತ್ತವೆ. ಆದುದರಿಂದ ಘಟವು ಹುಟ್ಟತಕ್ಕ ಭೂಭಾಗವನ್ನು ನೋಡಿದರೆ ಮಣ್ಣು ಉಪಾದಾನ ಕಾರಣವಾಗಿಯೂ, ಕುಲಾಲನಾದ ಚೇತನನು ನಿಮಿತ್ತಕಾರಣನಾಗಿಯೂ, ಬೇರೆ ಬೇರೆಯಾಗಿ ತೋರುತ್ತದೆ. ಆದರೆ ಜಗದುತ್ಪತ್ತಿಯಲ್ಲಿ ಅದ್ವಿತೀಯವಾಗಿಯೂ, ಜಗದುತ್ಪತ್ತಿಗಳ ಸಂಬಂಧವಿಲ್ಲದಕಾರಣ ಶುದ್ಧವಾಗಿಯೂ ಇರತಕ್ಕ ಚೈತನ್ಯವೇ ಕಾರಣವಾದುದರಿಂದ ಅದೇ ಉಪಾದಾನಕಾರಣವಾಗಿಯೂ, ನಿಮಿತ್ತಕಾರಣವಾಗಿಯೂ ಇದೆ. ಕಾರಣವು ಚೇತನವಾದುದರಿಂದ ಇನ್ನೊಂದು ಕಾರಣವನ್ನು ಅಪೇಕ್ಷಿಸುವುದಿಲ್ಲ. ಕಾರಣವು ಅಚೇತನವಾಗಿದ್ದರೆ ಚೈತನ್ಯಾಪೇಕ್ಷೆಯಿರುತ್ತದೆ. ಇಂತಹ ರೂಪವಾದ

ಪ್ರತೀತ್ಯಾ ಕೇವಲಂ ಶಕ್ತಿರಚಿದ್ರೂಪಾ ತಮೋಮಯೀ ।
ಸರ್ವಪ್ರಕಾರೈ ರ್ವಿದ್ವದ್ಭಿರನಿರೂಪ್ಯಾಽಸ್ತಿ ಶಾಂಕರೀ ॥೩೩॥

ತಯಾ ದುರ್ಘಟಕಾರಿಣ್ಯಾ ತಾದಾತ್ಮ್ಯೇನೈವ ಸಂಗತಂ ।
ಕಾರಣಂ ಸಕಲ ಸೃಷ್ಟ್ಯ ಸರ್ವಸಂಹರ್ತೃ ಚಾಸ್ತಿಕಾಃ ॥೩೪॥

ಕಾರಣಸ್ವರೂಪವನ್ನು ಅಭಿನ್ನನಿಮಿತ್ತೋಪಾದಾನವೆಂದು ಕರೆಯುತ್ತಾರೆ. ಈ ಅಭಿನ್ನ ನಿಮಿತ್ತೋಪಾದಾನವು ಶ್ರುತಿಯಲ್ಲಿ ಹೇಳಿದೆ. “ ತದೈಕ್ಷತ ಬಹುಸ್ಯಾಂ ಪ್ರಜಾಯೇಯ ” ಛಾಂ. ಇಲ್ಲಿ ಐಕ್ಷತ ಎಂದು ಈಕ್ಷಣಕರ್ತೃತ್ವವು ಹೇಳಿದೆ. ಇದು ನಿಮಿತ್ತಕಾರಣದಲ್ಲಿ ಪ್ರಸಿದ್ಧವಾದುದರಿಂದ ಬ್ರಹ್ಮವು ಜಗತ್ತಿಗೆ ನಿಮಿತ್ತಕಾರಣವು. “ ಬಹುಸ್ಯಾಂ” ಎಂದು ಬಹುವಿಧವಾಗಿ ಆಗುತ್ತೇನೆಂಬ ಆಶಂಸನೆಯು ತೋರುವುದು. ಈ ಬಹುಭವನವು ಉಪಾದಾನಕಾರಣದಲ್ಲಿ ಪ್ರಸಿದ್ಧವಾದುದರಿಂದ ಬ್ರಹ್ಮವು ಉಪಾದಾನವೆಂದೂ ತಿಳಿಯುತ್ತದೆ. ಆದುದರಿಂದ ಬ್ರಹ್ಮವು ಜಗತ್ತಿಗೆ ಉಪಾದಾನಕಾರಣವಾಗಿಯೂ, ನಿಮಿತ್ತ ಕಾರಣವಾಗಿಯೂ ಇದೆ. ||೩೦-೩೧-೩೨||

ಈ ರೀತಿಯಾಗಿ ಪ್ರತಿಬೋಧ್ಯಮಾನವಾಗಿರೋಣದರಿಂದಲೇ ಅದ್ವಿತೀಯವಾಗಿಯೂ, ಅವಿಕ್ರಿಯವಾಗಿಯೂ, ಅಸಂಗವಾಗಿಯೂ ಇರತಕ್ಕ ಸದ್ರೂಪಬ್ರಹ್ಮಸ್ವರೂಪಕ್ಕೆ ಜಗತ್ತನ್ನು ಕುರಿತು ಕಾರಣತ್ವವು ಹೇಗೆ ಮಾಯೆಯಿಂದ ಬರುತ್ತದೆ? ದ್ವೈತಾಪತ್ತಿಯು ಹೇಗೆ? ಎಂದರೆ ಶಂಕೆಗೆ ಸಮಾಧಾನವನ್ನು ಹೇಳುತ್ತಾನೆ. ಪ್ರತೀತಿಯಿಂದ ಮಾತ್ರ ಸಿದ್ಧವಾಗಿಯೂ, ಪರಮಾತ್ಮನ ಶಕ್ತಿರೂಪವಾಗಿಯೂ, ಜಡವಾಗಿಯೂ, ಸ್ವಪ್ರಕಾಶಸ್ವರೂಪವನ್ನು ಮುಚ್ಚುವುದರಿಂದ, ಅಂಧಕಾರದಂತಿರುವುದರಿಂದ, ವಿದ್ವಾಂಸರಿಂದಲೂ ಸಹ ಸತ್ತು, ಅಸತ್ತು, ಭಾವ, ಅಭಾವ, ಭಿನ್ನ, ಅಭಿನ್ನ ಇತ್ಯಾದಿ ವಿಕಲ್ಪಗಳಿಂದ ನಿರೂಪಿಸಲು ಸಾಧ್ಯವಿಲ್ಲದ್ದಾಗಿಯೂ, ಪರಶಿವನ ಸಂಬಂಧವಾದ ಮಾಯೆಯು ಇದೆ. ||೩೩||

ಎಲೈ ಆಸ್ತಿಕರೇ, ಇಂತಹ ಅಘಟನಘಟನಸಮರ್ಥವಾದ ಅವಿದ್ಯೆಯು ಸದ್ರೂಪವಾದ ಬ್ರಹ್ಮಸ್ವರೂಪದಲ್ಲಿ ತಾತ್ಪರ್ಯದಿಂದ (ಅಭೇದದಿಂದ) ಅಧ್ಯಸ್ತವಾಗಿದೆ. ಹೀಗೆ ಅಧ್ಯಸ್ತವಾದುದರಿಂದ ಆಯಾಯಾ ಸಂಬಂಧವಾದ ಸತ್ತ್ವರಜಸ್ತಮೋಗುಣಗಳ ಸ್ವರೂಪಗಳಾದ ಉಪಾಧಿಗಳ ಭೇದದಿಂದ ಅವಿಕ್ರಿಯವಾದ ಬ್ರಹ್ಮವು ಸಮಸ್ತ

ಪಾಲಕಂ ಚ ಸದಾ ಸಚ್ಚ ಚಿದ್ರೂಪತ್ವಾತ್ಸುರೋತ್ತಮಾಃ ।
ಚಿದ್ರೂಪಸ್ಯ ತು ಸತ್ಯತ್ವಂ ಯುಕ್ತಮೇವಾಽಸ್ತಿಕಾಃ ಸದಾ ॥೩೫॥

ಅಚಿದ್ರೂಪಾ ಹಿ ರಜ್ಜ್ವಾದೇ ರ್ಮೃಷಾತ್ವಂ ಸಮ್ಮತಂ ಖಲು ।
ಅತಸ್ತತ್ಕಾರಣಂ ದೇವಾಃ ಸದೇವೈಕಂ ಚ ಶಾಶ್ವತಂ ॥೩೬॥

ಜಗತ್ತಿನ ಸೃಷ್ಟಿ, ಸ್ಥಿತಿ, ಲಯರೂಪವಾದ ವ್ಯಾಪಾರಕ್ಕೆ ಹೇತುವಾಗಬಹುದು. ಆದುದರಿಂದ ದ್ವೈತಾಪತ್ತಿಯಿಲ್ಲವು. ಏಕೆಂದರೆ ಮಾಯೆಯು ಅನಿರ್ವಚನೀಯವಾದುದರಿಂದ ಬ್ರಹ್ಮಾಪೇಕ್ಷೆಯಿಂದ ಇನ್ನೊಂದು ಸದ್ವಸ್ತುವಿಲ್ಲದ್ದರಿಂದಲೂ, ಸಹ ದ್ವೈತಕ್ಕೆ ಅವಕಾಶವೇ ಇಲ್ಲ. ||೩೪||

ಈ ರೀತಿಯಾಗಿ ಕಾರಣಸ್ವರೂಪವು ಅದ್ವಿತೀಯವಾದುದೆಂದು ಉಪಪಾದಿಸಲ್ಪಟ್ಟಿತು. ಈಗ ಅದಕ್ಕೆ ಸದ್ರೂಪತ್ವವನ್ನು ಸಾಧಿಸುತ್ತಾನೆ. "ವಿಜ್ಞಾನಮಾನಂದಂ ಬ್ರಹ್ಮ" ಎಂಬ ಬೃ. ಶ್ರುತ್ಯನುಸಾರವಾಗಿ ಚಿದ್ರೂಪವಾದ ಬ್ರಹ್ಮವು ಜಗತ್ತಿಗೆ ಕಾರಣವೆಂದು ತಿಳಿಯುತ್ತದೆ. ಈ ರೀತಿ ಚಿದ್ರೂಪವಾದುದರಿಂದ ತ್ರಿಕಾಲಬಾಧ್ಯವಾದ ಸತ್ಯವೂ ಆಗಿರುತ್ತದೆ. ಯಾವುದು ಸತ್ತಲ್ಲವೋ, ಅದು ಚಿದ್ರೂಪವಲ್ಲ. ಉದಾಹರಣೆ, ರಜ್ಜುಸರ್ಪ. ತಥಾ ಚ ರಜ್ಜುವಿನಲ್ಲಿ ಭ್ರಾಂತಿಯಿಂದ ತೋರತಕ್ಕ ಸರ್ಪವು ಸತ್ತಲ್ಲದ್ದರಿಂದ ಚಿತ್ತಲ್ಲ. ಬ್ರಹ್ಮವು ಚಿತ್ತಾದುದರಿಂದ ಅದು ಸತ್ತೆಂದು ಹೇಳುವುದು ಯುಕ್ತವಾಗಿದೆ. ಏಕೆಂದರೆ ಬ್ರಹ್ಮವು ಜಡಪ್ರಪಂಚದ ಬಾಧಾವಧಿಗೆ ಸಾಕ್ಷಿಯಾಗಿ ಯಾವಾಗಲೂ, ಇರುವುದರಿಂದ ಚಿದ್ರೂಪವಾದ ಬ್ರಹ್ಮಸ್ವರೂಪವು ಸಾರ್ವಕಾಲಿಕ ಸತ್ಯವಾಗಿದೆ. ||೩೫||

ಎಲೈ ದೇವತೆಗಳೇ, ಭ್ರಾಂತಿಯಿಂದ ಹಗ್ಗದಲ್ಲಿ ತೋರತಕ್ಕ ಸರ್ಪವು ಚಿದ್ರೂಪವಲ್ಲದುದರಿಂದ ಅದು ಸುಳ್ಳು ಎಂದು ಹೇಳಬೇಕು. ಆದುದರಿಂದ ಜಗತ್ಕಾರಣವಾದ ಸದ್ರೂಪ ಒಂದೇ ಶಾಶ್ವತವು. ಈ ಅಭಿಪ್ರಾಯದಿಂದ "ಸದೇವಸೋಮ್ಯೇದಮಗ್ರ ಆಸೀತ್" "ಏಕಮೇವಾದ್ವಿತೀಯಂ" ಎಂಬ ಶ್ರುತಿಯು ಪ್ರಳಯಕಾಲದಲ್ಲಿ ಬ್ರಹ್ಮವು ಕಾಲತ್ರಯದಲ್ಲೂ ಬಾಧೆಯಿಲ್ಲದ ಸದ್ರೂಪವಾಗಿಯೂ, ತನಗೆ ಸಮಾನವಾದ ಬೇರೆ ವಸ್ತುವಿಲ್ಲದ್ದಾಗಿಯೂ, ವಿಜಾತೀಯ ಪದಾರ್ಥವಿಲ್ಲದ್ದಾಗಿಯೂ, ಕಾರಣಸ್ವರೂಪವಾಗಿಯೂ ಇದ್ದಿತೆಂದು ಬೋಧಿಸುತ್ತದೆ. ||೩೬||

ಇದಂ ಸರ್ವಂ ಜಗತ್ಪೂರ್ವಂ ಸದೇವಾಸೀತ್ಸುರರ್ಷಭಾಃ ।
ಅಸದಾಸೀ ದಿತಿ ಭ್ರಾಂತ್ಯಾ ವದಂತಿ ಸುರಪುಂಗವಾಃ ॥೩೭॥

ಎಲೈ ದೇವಶ್ರೇಷ್ಠರೇ, ಹಿಂದೆ ಹೇಳಿದ ರೀತಿಯಾಗಿ ಸದ್ರೂಪವಾದ ಕಾರಣವು ಅದ್ವಿತೀಯವಾದುದರಿಂದ ಪ್ರತ್ಯಕ್ಷಾದಿಪ್ರಮಾಣಗೋಚರವಾದ ನಾಮ ರೂಪಾತ್ಮಕವಾದ ಈ ಜಗತ್ತು ಸೃಷ್ಟಿಯಾಗುವುದಕ್ಕಿಂತ ಪೂರ್ವದಲ್ಲಿ ಸದ್ರೂಪವಾದ ಬ್ರಹ್ಮಸ್ವರೂಪವಾಗಿತ್ತು. ನಾಮರೂಪವಾಗಿ ಬ್ರಹ್ಮಕ್ಕಿಂತ ಬೇರೆಯಾಗಿರಲಿಲ್ಲ. ಈ ರೀತಿಯಾಗಿ ಸತ್ಕಾರಣವಾದವನ್ನು ಆರಂಭಿಸಿ ಇದನ್ನು ದೃಢೀಕರಿಸಲು ಶ್ರುತಿಯಲ್ಲಿ ಶೂನ್ಯವಾದಿಗಳ ಮತವನ್ನು ಉಪನ್ಯಾಸಮಾಡಿ, ನಿರಾಸಮಾಡಿದೆ. ಆ ಶ್ರುತಿಯು ಹೀಗಿದೆ. "ತದ್ಧೈಕ ಆಹುಃ" ಎಂದು ಆರಂಭಿಸಿ, ಕಥಮಸತಃ ಸಜ್ಜಾಯೇತ" ಎಂಬ ಈ ಛಾಂ. ಉ. ಶ್ರುತ್ಯಭಿಪ್ರಾಯವನ್ನು ಉಪನ್ಯಾಸಮಾಡುತ್ತಾನೆ. ಓ ಋಷಿ ಶ್ರೇಷ್ಠರೇ, ಬೌದ್ಧರಲ್ಲಿ ಏಕದೇಶಿಗಳು ಶೂನ್ಯದಿಂದಲೇ ಎಲ್ಲವೂ ಉತ್ಪತ್ತಿಯಾಗು ತ್ತದೆಂದು ಹೇಳುತ್ತಾರೆ. ಆದುದರಿಂದ ಅವರಿಗೆ ಶೂನ್ಯವಾದಿಗಳೆಂದು ಹೆಸರು. ಅವರು ಹೀಗೆ ಅಭಿಪ್ರಾಯಪಡುತ್ತಾರೆ. ನಷ್ಟವಾದ ಬೀಜದಿಂದ ಅಂಕುರವು ಹುಟ್ಟುತ್ತದೆ. ನಷ್ಟವಾದ ಮೃತ್ಪಿಂಡದಿಂದ ಘಟವು ಹುಟ್ಟುತ್ತದೆ. ಬೀಜವು ನಷ್ಟ ವಾಗದಿದ್ದರೆ ಅಂಕುರವು ಹುಟ್ಟಲಾರದು. ಹೇಗೆಂದರೆ ಕಣಜದಲ್ಲಿರತಕ್ಕ ಭತ್ತವು ಅಂಕುರ ವಾಗುವುದಿಲ್ಲ. ಅದನ್ನು ಗದ್ದೆಯಲ್ಲಿ ಬಿತ್ತಿದರೆ ಅದು ಒಡೆದು ಅಂಕುರವಾಗುವುದು. ಈ ರೀತಿಯಾಗಿ ಸಮಸ್ತ ಕಾರ್ಯಗಳೂ, ಕಾರಣಸ್ವರೂಪನಾಶಪೂರ್ವಕವಾಗಿಯೇ ಉತ್ಪತ್ತಿಯಾಗುವುದು ಪ್ರತ್ಯಕ್ಷಸಿದ್ಧವಾಗಿದೆ. ಈ ದೃಷ್ಟಾಂತದಿಂದ ಜಗತ್ಕಾರಣವೂ ಸಹ ಅಂತಹ ಅಸದ್ರೂಪವೇ ಆಗಿರಬೇಕೆಂದು ತಿಳಿಯಬಹುದು. ಆದುದರಿಂದ ಅಸತ್ತೇ ಜಗತ್ತಿಗೆ ಕಾರಣವೆಂದು ಹೇಳುತ್ತಾ, ಸೃಷ್ಟಿಗಿಂತಪೂರ್ವದಲ್ಲಿ ಈ ಜಗತ್ತು ಅಸತ್ತಾಗಿದೆಯೆಂದು ಹೇಳುತ್ತಾರೆ. ಆದರೆ ಅವರು ಭ್ರಾಂತರು. ಏಕೆಂದರೆ ಮೃತ ನಾದ ಮನುಷ್ಯನಿಗೆ ಪುತ್ರೋತ್ಪತ್ತಿಸಾಮರ್ಥ್ಯವಿಲ್ಲದಿರುವಂತೆ ನಷ್ಟವಾದ ಕಾರಣಕ್ಕೆ ಕಾರ್ಯಜನಕತ್ವವು ಹೇಗೆ ಉಂಟಾದೀತು? ಮತ್ತು ಅಂಕುರವು ಹುಟ್ಟಿರುವಾಗ ಬೀಜವು ಅನುಸರಿಸಿಯೇ ಇರುವುದರಿಂದ (ಈ ಕಾರಣಸ್ವರೂಪದ ಅನುವರ್ತನವನ್ನು ದ್ವಿದಳಧಾನ್ಯದಿಂದ ಅಂಕುರವು ಹುಟ್ಟಿರತಕ್ಕ ಸ್ಥಳದಲ್ಲಿ ಅಂಕುರದಲ್ಲಿ ಚೆನ್ನಾಗಿ ನೋಡ ಬಹುದು.) ಅಸತ್ತೇಕಾರಣವೆಂದು ಹೇಳುವುದು ಸರಿಯಲ್ಲ. ಅಸತ್ತು ಕಾರಣವಾದರೆ ಶಶಶೃಂಗಾದಿಗಳೂ ಸಹ ಅಸತ್ತಾದುದರಿಂದ ಅವೂ ಸಹ ಒಂದಾನೊಂದು ಕಾಲದಲ್ಲಿ ಘಟಾದಿಗಳಿಗೆ ಕಾರಣವಾಗಲಿ, ಎಂದು ಆಪತ್ತಿ ಬರುತ್ತದೆ. ಆದುದರಿಂದ ಅಸತ್ತಿನಿಂದ

ಅಸನ್ನ ಕಾರಣಂ ಯುಕ್ತಂ ವಸ್ತುತತ್ವನಿರೂಪಣೇ ।
ವಂಧ್ಯಾಪುತ್ರೋಽಪಿ ಸರ್ವೇಷಾಂ ಕಾರಣಂ ಸ್ಯಾತ್ಸ್ವಯಂ ಖಲು ॥೩೮॥

ಸ್ವಶಕ್ತ್ಯಾಽಸಚ್ಚ ಸರ್ವೇಷಾಂ ಕಾರಣಂ ಭವತೀತಿ ಚೇತ್ ।
ಶಕ್ತಿರಪ್ಯಸತೋ ನಾಸ್ತಿ ತತೋ ಬೀಜಸ್ಯ ದರ್ಶನಾತ್ ॥೩೯॥

ಅಂಕುರೋತ್ಪಾದಿಕಾ ಶಕ್ತಿಃ ಸದ್ರೂಪಸ್ಯೈವ ದೃಶ್ಯತೇ ।
ಖಲು ಬೀಜಸ್ಯ ಸರ್ವತ್ರ ನಾಸತಸ್ತದದರ್ಶನಾತ್ ॥೪೦॥

ಸದುತ್ಪತ್ತಿಯು ಎಂಬ ವಾದವು ಭ್ರಾಂತಿಮೂಲಕವೇ ಸರಿ. ಆದುದರಿಂದ "ಭ್ರಾಂತ್ಯಾ ವದಂತಿ." ಎಂಬ ಮಾತು ಬಹಳ ಯುಕ್ತಿಯುಕ್ತವಾಗಿದೆ. ॥೩೭॥

ಪದಾರ್ಥಗಳ ಸ್ವರೂಪವನ್ನು ವಿಚಾರಿಸಿದರೂ ಅಸತ್ತು ಕಾರಣವಾಗಲಾರದು. ಕಾರಣತ್ವವೆಂಬುದು ಭಾವಪದಾರ್ಥದ ಧರ್ಮವಾದುದರಿಂದ ಅದು ಅಸತ್ತಿನಲ್ಲಿರಲಾರದು. ಹಾಗೆ ಅದರಲ್ಲಿ ಆ ಧರ್ಮವನ್ನು ಸ್ವೀಕರಿಸಿದರೆ, ಅದು ಅಸತ್ತಾಗದೇ ಭಾವರೂಪವೇ ಆಗಬೇಕಾಗುತ್ತದೆ. ಆದುದರಿಂದ ಅದಕ್ಕೆ ಕಾರಣತ್ವವು ಹೇಗೆ ಉಂಟಾದೀತು ? ಒಂದುವೇಳೆ ಅಸತ್ತೂ ಸಹ ಕಾರಣವಾಗಬಹುದೆಂದು ಸ್ವೀಕರಿಸಿದರೆ ಅಸತ್ತಾದ ವಂಧ್ಯಾಪುತ್ರನು ಸಮಸ್ತ ಕಾರ್ಯಗಳಿಗೆ ಏಕೆ ಕಾರಣನಾಗಲಾರನು ? ಆದುದರಿಂದ ಅಸತ್ತಾದ ವಂಧ್ಯಾಪುತ್ರನಿಗೆ ಕಾರಣತ್ವವು ಹೇಗೆ ಸಂಭವಿಸಲಾರದೋ ಹಾಗೆ ಅಸತ್ತಿಗೂ ಕಾರಣತ್ವವು ಸಂಭವಿಸಲಾರದು. ॥೩೮॥

ಅಸತ್ತಿಗೂ ಸಹ ತನ್ನ ಶಕ್ತ್ಯಧೀನವಾಗಿ ಸಮಸ್ತಕ್ಕೂ ಕಾರಣತ್ವವು ಏಕೆ ಸಂಭವಿಸಲಾರದು? ಎಂದರೆ ಅದು ಸರಿಯಲ್ಲ. ಏಕೆಂದರೆ ಅಂತಹ ಶಕ್ತಿಯೂ ಸಹ ಅಸತ್ತಿಗಿಲ್ಲ. ಸತ್ತಾಗಿರತಕ್ಕ ಬೀಜಾದಿಗಳಲ್ಲಿ ಅಂಕುರ (ಮೊಳಕೆ)ಜನನಸಾಮರ್ಥ್ಯವು ಕಂಡುಬರುತ್ತದೆಯೇ ಹೊರತು ಅಸತ್ತಿಗೆ ಶಕ್ತಿಯಿಲ್ಲ. ॥೩೯॥

ಅಂಕುರೋತ್ಪಾದನ ಶಕ್ತಿಯೂ ಸಹ ಸದ್ರೂಪವಾದ ಬೀಜದಲ್ಲಿಯೇ ಪ್ರತ್ಯಕ್ಷವಾಗಿ ಕಂಡುಬರುತ್ತಿದೆ. ಅಸತ್ತಿಗೆ ಶಕ್ತಿಯು ಎಲ್ಲಿಯೂ ಕಂಡುಬಂದಿಲ್ಲ. ಆದುದರಿಂದ ಪ್ರತ್ಯಕ್ಷವಿರುದ್ಧವಾಗಿ ಅಸತ್ತು ಕಾರಣವೆಂಬುದು ಸರಿಯಲ್ಲ. ॥೪೦॥

ಸಾಽಪಿ ಶಕ್ತಿಃ ಸತೀ ಕಿಂ ವಾಽಸತೀ ಸದಸತೀ ತು ವಾ ।
ಸತೀ ಚೇತ್ಸಾ ಸತೀ ಶಕ್ತಿಃ ಕಥಂ ವಂಧ್ಯಾಸುತಾಶ್ರಯಾ ।
ಆಶ್ರಯತ್ವಂ ಸತೋ ದೃಷ್ಟಂ ಖಲು ಲೋಕೇ ನ ಚಾಸತಃ ॥೪೧॥

ಸಾಽಸತೀಚೇತ್ಕಥಂ ಶಕ್ತಿಃ ಕಾರ್ಯನಿರ್ವಾಹಿಕಾಽಸತೀ ॥೪೨॥

ವಂಧ್ಯಾಪುತ್ರಃ ಸ್ವಯಂ ನೈವ ಕಾರ್ಯನಿರ್ವಾಹಕಃ ಖಲು ।
ನಿರ್ವಾಹಕತ್ವ ಧರ್ಮಶ್ಚ ಸತ ಏವಹಿ ದೃಶ್ಯತೇ ॥೪೩॥

ಶಕ್ತಿಃ ಸದಸತೀ ಸಾ ಚೇದ್ದ್ವೋಷದ್ವಯ ಸಮಾಗಮಃ ।
ಅತಃ ಸ್ವಶಕ್ತ್ಯಾ ಚಾ ಸತ್ತು ಸರ್ವೇಷಾಂ ನೈವ ಕಾರಣಂ ॥೪೪॥

ಆ ಕಾರ್ಯೋತ್ಪಾದಕಶಕ್ತಿಯು ಸತ್ತೇ? ಅಸತ್ತೇ? ಈ ವಿಕಲ್ಪಗಳಲ್ಲಿ ಮೊದಲನೆಯ ವಿಕಲ್ಪವು ಸರಿಯಲ್ಲ. ಏಕೆಂದರೆ, ಆ ಶಕ್ತಿಯು ಭಾವರೂಪವಾದುದರಿಂದ ನಿರುಪಾಖ್ಯ (ಸ್ವರೂಪವೇ ಇಲ್ಲವೆಂದು ತಾತ್ಪರ್ಯ) ವಾದ ಅಸತ್ತಿನ ಧರ್ಮವು ಹೇಗಾದೀತು? ಅತ್ಯಂತ ಅಸತ್ತಾದ ವಂಧ್ಯಾಪುತ್ರಾದಿಗಳಲ್ಲಿ ಅಂತಹ ಶಕ್ತಿಯಿಲ್ಲವೂ ಇಲ್ಲ. ಇದೆ ಎಂದರೆ ಅದು ಸರಿಯಾದುದೂ ಅಲ್ಲ. ಲೋಕದಲ್ಲಿ ಅಂತಹ ಶಕ್ತ್ಯಾಶ್ರಯತ್ವವು ಸತ್ತಾದ ಬೀಜಾದಿಗಳಲ್ಲಿ ತೋರುತ್ತದೆಯೇ ವಿನಾ ಅಸತ್ತಾದ ಶಶಶೃಂಗಾದಿಗಳಲ್ಲಿ ಕಾಣುವುದಿಲ್ಲ. ಅಂತಹ ಶಕ್ತ್ಯಾಶ್ರಯತ್ವವನ್ನು ಅಸತ್ತಿಗೆ ಒಪ್ಪಿದರೆ ಅದು ಅಸತ್ತು ಹೇಗಾದೀತು? ಭಾವಧರ್ಮಾಶ್ರಿತವಾದುದರಿಂದ ಭಾವವೇ ಆಗಬೇಕೇ ಹೊರತು ಅಭಾವಸ್ವರೂಪವಾಗಲಾರದು. ಆದುದರಿಂದ ಮೊದಲನೆಯ ಕಲ್ಪವು ಸರಿಯಲ್ಲ. ||೪೧||

ಶಕ್ತಿಯು ಅಸತ್ತೆಂಬ ದ್ವಿತೀಯ ವಿಕಲ್ಪವನ್ನು ಖಂಡಿಸುತ್ತಾನೆ. ಅಸತ್ತಿಗೆ ಕಾರಣತ್ವವನ್ನು ಸ್ವೀಕರಿಸಲು ಒಂದು ಶಕ್ತಿಯನ್ನು ಕಲ್ಪಿಸಬೇಕು. ಆ ಶಕ್ತಿಯು ಅಸತ್ತೆಂಬ ಪಕ್ಷದಲ್ಲಿ ಅದು ವಂಧ್ಯಾಪುತ್ರನಂತೆ ನಿರುಪಾಖ್ಯವಾದುದರಿಂದ ಅದು ಹೇಗೆ ಕಾರ್ಯವನ್ನುಂಟುಮಾಡೀತು? ಲೋಕದಲ್ಲಿ ಕಾರ್ಯನಿರ್ವಾಹಕತ್ವ ಶಕ್ತಿಯು ಸತ್ತಾದ ಮೃದಾದಿಗಳಲ್ಲಿ ತೋರುತ್ತದೆಯೇ ಹೊರತು ಅಸತ್ತಿನಲ್ಲಿ ತೋರುವುದಿಲ್ಲ. ಆದುದರಿಂದ ಅಂತಹ ಶಕ್ತಿಯನ್ನು ಕಲ್ಪಿಸಿದಾಗ್ಯೂ ಅದು ವಂಧ್ಯಾಪುತ್ರಾದಿಗಳಂತೆ ಸರ್ವಥಾ ಕಾರಣವಾಗಲಾರದು. ||೪೨-೪೩||

ಶಕ್ತಿಯು ಸದಸದ್ರೂಪವಾದುದು ಎಂಬ ಮೂರನೆಯ ವಿಕಲ್ಪವನ್ನು ದೂಷಿಸಿ

ತಸ್ಮಾತ್ಸೋಽಯ ಮಸದ್ವಾದೋ ಜಲ್ಪಮಾತ್ರಂ ನ ಯುಕ್ತಿತಃ ।
ಅತಃ ಸದೇವ ಸರ್ವೇಷಾಂ ಕಾರಣಂ ನಾಸ ದಾಸ್ತಿಕಾಃ ॥೪೫॥

ಸೃಷ್ಟೇಸ್ತು ಪ್ರಾಗಿದಂ ಸರ್ವಂ ಸದೇವಾಸೀತ್ತು ಕಾರಣಂ ।
ತಚ್ಚ ಕಾರಣ ಮಾದ್ಯಂತ ವಿನಿರ್ಮುಕ್ತಂ ಸದದ್ವಯಂ ॥೪೬॥

ನಿವಾರಿಸುತ್ತಾನೆ. ಅದು ಸದಸದ್ರೂಪವೆಂದು ಹೇಳಲೂ ಸಾಧ್ಯವಿಲ್ಲ. ಏಕೆಂದರೆ ಹಿಂದೆ ಹೇಳಿದ ಎರಡು ದೋಷಗಳೂ ಸಹ ಬರುತ್ತವೆ. ಎಂದರೆ ಸತ್ತೆಂಬ ಪಕ್ಷದಲ್ಲಿ ಸತ್ತಿನಿಂದಲೇ ಸತ್ತು ಹುಟ್ಟಿದಂತೆ ಆಗುತ್ತದೆ. ತಥಾಚ ಅಸತ್ತಿನಿಂದ ಸತ್ತು ಹುಟ್ಟು ತ್ತದೆ. ಎಂಬ ಪೂರ್ವಪಕ್ಷಿಯುಮತವೂ ಹಾಳಾಗುತ್ತದೆ. ಅಸತ್ತೆಂದರೆ ವಂಧ್ಯಾಪುತ್ರನೂ ಅಸತ್ತಾದುದರಿಂದ ಅವನಿಗೂ ಕಾರಣತ್ವವು ಬರಬೇಕಾಗುತ್ತದೆ. ಮತ್ತು ಸದಸತ್ತ್ವ ರೂಪವಾದ ಧರ್ಮವು ಪರಸ್ಪರ ವಿರುದ್ಧವಾದುದರಿಂದ ಅಂತಹ ಎರಡು ಧರ್ಮವೂ ಒಂದು ಕಡೆಯಲ್ಲಿ ಬರಲಾರದು. ಆದುದರಿಂದ ಅಸತ್ತು ತನ್ನ ಶಕ್ತಿಯಿಂದ ಸಮಸ್ತಕ್ಕೂ ಕಾರಣವೆಂಬುದು ಸರಿಯಲ್ಲ. ||೪೪||

ಓ ಆಸ್ತಿಕರೇ, ಆದುದರಿಂದ ಅಸತ್ತು ಸಮಸ್ತಕ್ಕೂ ಕಾರಣ ಎಂಬ ಮಾತು ಹುರುಳಿಲ್ಲದೆ ಯುಕ್ತಿಯುಕ್ತವಾದುದಲ್ಲವು. ತಥಾಚ ಸದ್ರೂಪವೇ ಸಮಸ್ತಕ್ಕೂ ಕಾರಣವಾಗಿರುತ್ತದೆ. ||೪೫||

ಈ ರೀತಿಯಾಗಿ ಏಕ ವಿಜ್ಞಾನದಿಂದ ಎಂದರೆ ಒಂದು ತತ್ವದ ತಿಳಿವಳಿಕೆ ಯಿಂದ, ಸರ್ವವಿಜ್ಞಾನವನ್ನೂ ಎಂದರೆ ಎಲ್ಲ ಕಾರ್ಯಪದಾರ್ಥಗಳ ತಿಳಿವಳಿಕೆಯೂ ಆಗುತ್ತದೆ. ಎಂದು ಪ್ರತಿಜ್ಞೆಮಾಡಿ, ಆ ಪ್ರತಿಜ್ಞೆಯನ್ನು ಉಪಪಾದಿಸಲು ಮೃದಾದಿ ದೃಷ್ಟಾಂತಗಳಿಂದ ಕಾರ್ಯವು ಕಾರಣಾಪೇಕ್ಷೆಯಿಂದ ಅಭಿನ್ನವಾದುದೆಂದು ಹೇಳಿ ಯಾಯಿತು. ಆ ಕಾರಣವಾದ, ಏಕವಾದ ವಸ್ತುವು ಯಾವುದೆಂದು ಜಿಜ್ಞಾಸೆ ಬರಲು "ಸದೇವಸೌಮ್ಯೇದಮಗ್ರ ಆಸೀತ್" ಛಾ. ಉ. ೬.೨.೧. ಎಂಬ ಶ್ರುತಿಯು ಅದ್ವಿ ತೀಯವಾದ, ಸತ್ತಾದ ಬ್ರಹ್ಮವೇ ಕಾರಣವೆಂದು ಉಪದೇಶಿಸುತ್ತದೆ. ಜಗತ್ತು ಬ್ರಹ್ಮದ ಕಾರ್ಯವಾದುದರಿಂದ ಕಾರಣವಾದ ಬ್ರಹ್ಮಸ್ವರೂಪವನ್ನು ತಿಳಿದರೆ ಕಾರ್ಯವಾದ ಜಗತ್ತನ್ನು ತಿಳಿಯಬಹುದೆಂದು "ತದೈಕ್ಷತ ಬಹುಸ್ಯಾಂ ಪ್ರಜಾಯೇಯ" ಎಂಬ ಛಾಂ. ಶ್ರುತಿಯು ಬ್ರಹ್ಮಸಿಂದ ಸೃಷ್ಟಿಯನ್ನು ಪ್ರತಿಪಾದಿಸುತ್ತದೆ. ಈ ವಿಷಯವನ್ನು ಸಂಗ್ರಹಿಸಿ ಹೇಳುತ್ತಾನೆ. ಪ್ರತ್ಯಕ್ಷಾದಿಪ್ರಮಾಣಗಮ್ಯವಾದ ನಾಮರೂಪಾತ್ಮಕವಾದ ಈ ಸಮಸ್ತ ಜಗತ್ತೂ ಸೃಷ್ಟಿಗಿಂತಲೂ ಪೂರ್ವದಲ್ಲಿ ಕಾರಣಸ್ವರೂಪವಾದ ಒಂದೇ

ಪೂರ್ವಕಲ್ಪಪ್ರಪಂಚೋತ್ಥ ಸಂಸ್ಕಾರೇಣಾನು ರಂಜಿತಂ ।
ಕಾಲ ಕರ್ಮ ವಿಪಾಕೇನ ಸತ್ವ ವೃತ್ತಿ ಸಮಾಶ್ರಿತಂ ॥೪೭॥

ಸೃಷ್ಟ್ಯರ್ಥ ಮೈಕ್ಷತ ಪ್ರಾಜ್ಞಾ ಬಹು ಸ್ಯಾಮಿತಿ ಶಕ್ತಿಮತ್ ।
ಪುನ ಸ್ತತ್ಪೂರ್ವ ಸಂಸ್ಕಾರಾ ದಾಕಾಶಂ ವಾಯುಮಾದಿತಃ ॥೪೮॥

ತತ್ವವಾಗಿಯೇ ಇದ್ದಿತು. ಎಂದರೆ ವ್ಯವಹಾರಕಾಲದಲ್ಲಿ ಇದು ಘಟ, ಇದು ಪಟ ಎಂದು ವಿವಿಕ್ತವಾಗಿ ವ್ಯವಹಾರಮಾಡಬಹುದು. ಸೃಷ್ಟಿಗಿಂತಲೂ ಪೂರ್ವದಲ್ಲಿ ಆ ವ್ಯವಹಾರವನ್ನು ಮಾಡಲು ಸಾಧ್ಯವಿಲ್ಲ. ಎಲ್ಲವೂ ಅನಭಿವ್ಯಕ್ತನಾಮರೂಪಾತ್ಮಕ ವಾಗಿ ಸುಷುಪ್ತಿಕಾಲದಂತೆ ಇದ್ದಿತು. ಸುಷುಪ್ತಿಕಾಲದಲ್ಲಿ ಇದು ಘಟ, ಇದು ಪಟ ಎಂದು ಬೇರೆ ಬೇರೆಯಾಗಿ ವ್ಯವಹರಿಸಲು ಹೇಗೆ ಸಾಧ್ಯವಿಲ್ಲವೋ ಹಾಗೆ ಸೃಷ್ಟಿ ಪೂರ್ವದಲ್ಲಿ ಕಾರ್ಯಗಳೆಲ್ಲವೂ ಕಾರಣರೂಪದಲ್ಲಿ ಲೀನವಾಗಿರುವುದರಿಂದ ಬೇರೆ ಬೇರೆಯಾಗಿ ವ್ಯವಹರಿಸಲು ಸಾಧ್ಯವಿಲ್ಲ. ಆ ಕಾರಣಸ್ವರೂಪವಾದರೋ ಉತ್ಪತ್ತಿ ನಾಶವಿಲ್ಲದ್ದಾಗಿಯೂ, ತನಗೆ ಸಮಾನವಾದ ಬೇರೆ ವಸ್ತುವಿಲ್ಲದ್ದಾಗಿಯೂ, ವಿಜಾತೀ ಯವಾದ ಇತರ ವಸ್ತು ಶೂನ್ಯವಾಗಿಯೂ, ಸತ್ತಾರೂಪವಾಗಿಯೂ ಇದೆ. ॥೪೬॥

ಅದ್ವಿತೀಯವಾಗಿಯೂ, ಸದ್ರೂಪವಾಗಿಯೂ, ಏಕರೂಪವಾಗಿಯೂ, ಇರತಕ್ಕ ಬ್ರಹ್ಮಸ್ವರೂಪದಿಂದ ಅನೇಕವಿಧವಾದ ಜಗತ್ತು ಹೇಗೆ ಉಂಟಾಗುತ್ತದೆ? ಎಂದರೆ, ಹಿಂದಿನ ಕಲ್ಪದಲ್ಲಿ ವ್ಯವಹಾರದಲ್ಲಿದ್ದ ಪ್ರಾಪಂಚಿಕವಾದ ಸಂಸಾರದಿಂದ ಸಂಭವಿಸಿದ ಯಾವ ವಾಸನೆಯು ಇದ್ದಿತೋ ಮತ್ತು ಆ ಪ್ರಪಂಚಾನುಭವದಿಂದ ಉಂಟಾದ ಯಾವ ಸಂಸ್ಕಾರವುಂಟೋ, ಈ ಎರಡರಿಂದಲೂ ಸೇರಿ ರೂಪಗೊಂಡುದಾಗಿಯೂ, ಕಾಲಾಧೀನವಾಗಿ, ಫಲವನ್ನು ಕೊಡಲು ಉನ್ಮುಖವಾದ ಪ್ರಾಣಿಗಳ ಧರ್ಮಾ ಧರ್ಮಗಳಿಂದುಂಟಾದ ಪುಣ್ಯಪಾಪರೂಪವಾದ ಕರ್ಮಾಧೀನವಾಗಿಯೂ, ಅಂತಃ ಕರಣಕ್ಕೆ ಉಪಾದಾನಕಾರಣವಾದ, ಸತ್ವಪರಿಣಾಮರೂಪವಾದ ಸ್ರಷ್ಟವ್ಯವಾದ ಎಂದರೆ ಮುಂದೆ ಸೃಷ್ಟಿಮಾಡಲು ಯೋಗ್ಯವಾಗಿರುವ, ಪ್ರಪಂಚವಿಷಯಕವಾದ, ಈಶ್ವರನ ಮಾಯಾಶಕ್ತಿಪರಿಣಾಮರೂಪವಾದ ಮನೋವೃತ್ತಿಯಲ್ಲಿ ಪ್ರತಿಬಿಂಬಿತ ವಾಗಿಯೂ, ಇರತಕ್ಕ ಚೈತನ್ಯವುತನ್ನ ಈಕ್ಷಣಸಂಕಲ್ಪಗಳಿಂದ ಅನೇಕಾಕಾರವಾದ ಪ್ರಪಂಚಕ್ಕೆ ಕಾರಣವಾಗಿರುತ್ತದೆ. ॥೪೭॥

ಓ ಪ್ರಾಜ್ಞರಾದ ದೇವತೆಗಳೇ, ಮಾಯಾಶಕ್ತಿಯುಳ್ಳ ಬ್ರಹ್ಮವು ಸೃಷ್ಟಿಗೋ ಸ್ಕರವಾಗಿ ಈಕ್ಷಣಮಾಡಿತು. ಇಲ್ಲಿ ಈಕ್ಷಣವೆಂದರೆ – ಪ್ರಾಣಿಗಳ ಕರ್ಮಗಳು

ಸೃಷ್ಟ್ವಾ ತೇಜಸ್ತತಃ ಸೃಷ್ಟ್ವಾ ಪುನಃ ಸೃಷ್ಟ್ವಾತ್ವಪಸ್ತಪಃ ।
ಅನ್ನ ಶಬ್ದೋದಿತಾ ದೇವಾಃ ಸಸರ್ಜ ಪೃಥಿವೀಂ ಪರಾಂ ॥೪೯॥

ಫಲವನ್ನು ಕೊಡಲು ಉನ್ಮುಖವಾಗಲು ಸೃಜ್ಯಮಾನಪ್ರಪಂಚಾಕಾರವಾದ ಮಾಯಾ ವೃತ್ತಿಯು ಉತ್ಪನ್ನವಾಗುತ್ತದೆ. ಆ ವೃತ್ತಿಯಲ್ಲಿ ಪ್ರತಿಬಿಂಬಿತವಾದ ಚೈತನ್ಯವು ಈಕ್ಷಣವೆಂದು ಹೇಳಲ್ಪಡುವುದು. ನಿತ್ಯಶುದ್ಧಬುದ್ಧಸ್ವರೂಪವಾದ ಬ್ರಹ್ಮಸ್ವರೂಪಕ್ಕೆ ಕಾರಣತ್ವವು ಇಲ್ಲದೇ ಇದ್ದಾಗ್ಯೂ ಮಾಯಾಶಕ್ತಿವಿಶಿಷ್ಟವಾದ ಬ್ರಹ್ಮಕ್ಕೆ ಕಾರಣತ್ವವು ಸಂಭವಿಸಬಹುದು. ಸತ್ವರಜಸ್ತಮೋಗುಣಾತ್ಮಕವಾದ, ಸ್ವತಂತ್ರವಾದ ಪ್ರಕೃತಿಯು ಜಗತ್ತಿಗೆ ಕಾರಣವೆಂದು ಸಾಂಖ್ಯರು ಹೇಳುತ್ತಾರೆ. ಅವರ ಮತವನ್ನು ನಿರಾಕರಿಸಲು ಪರಮಾತ್ಮನ ಶಕ್ತಿಯೆಂದು ಹೇಳಿದೆ. ಪರಮಾತ್ಮನ ಶಕ್ತಿಯು ಶ್ವೇತಾಶ್ವತರದಲ್ಲಿ "ಪರಾಸ್ಯಶಕ್ತಿರ್ವಿವಿಧೈವ ಶ್ರೂಯತೇ" ಎಂದು ಹೇಳಿದೆ. ತಥಾಚ, ಶಕ್ತಿಯು ಪದಾರ್ಥದ ಧರ್ಮವಾದುದರಿಂದ ಅಂತಹ ಮಾಯಾರೂಪಶಕ್ತಿಯು ಪರಮೇಶ್ವರಾ ಧೀನವಾಗಿ ಕಾರಣವಾಗಬೇಕೇ ಹೊರತು ಸ್ವತಂತ್ರವಾಗಿ ಕಾರಣವಾಗಲಾರದು. "ಬಹುಸ್ಯಾಂ ಪ್ರಜಾಯೇಯ" ಎಂದು ಹೇಳಿದ್ದರಿಂದ ಬೇರೆ ಉಪಾದಾನಕಾರಣದ ಅಪೇಕ್ಷೆಯಿಲ್ಲದೇ ತನ್ನ ಸ್ವರೂಪದಿಂದಲೇ ಬಹುವಿಧವಾದ ಜಗದ್ಭೇದವುಳ್ಳ ಬ್ರಹ್ಮಾಂಡವನ್ನು ಸೃಷ್ಟಿಸುತ್ತಾನೆಂದು ಹೇಳಿದಂತಾಯಿತು. ಇದರಿಂದ ಬ್ರಹ್ಮವು ಸಮಸ್ತ ಪ್ರಪಂಚಕ್ಕೆ ವಿವರ್ತೋಪಾದಾನವೆಂದೂ, ನಿಮಿತ್ತಕಾರಣವೆಂದೂ, ಪ್ರಕೃತಿ ಅಥವಾ ಮಾಯೆಯ ಶಕ್ತಿಯು ಪರಿಣಾಮೋಪಾದಾನವೆಂದೂ, ಸೂಚಿಸಿದ ಹಾಗಾ ಯಿತು. "ಐಕ್ಷತ" ಎಂದು ಹೇಳಿದ್ದರಿಂದ ಚೇತನವಸ್ತುವೇ ಜಗತ್ಕಾರಣವೆಂದು ತಿಳಿಯುತ್ತದೆ. ಹೀಗೆ ಈಕ್ಷಣವನ್ನು ಸೂಚಿಸಿದ್ದರಿಂದ ಅಚೇತನವಾದ ಪ್ರಕೃತಿಯು ಜಗತ್ಕಾರಣವೆಂದು ಹೇಳತಕ್ಕ ಸಾಂಖ್ಯಮತವು ನಿರಾಕೃತವಾಯಿತು. ಏಕೆಂದರೆ ಈಕ್ಷಣವು ಚೇತನದ ಧರ್ಮವಾದುದರಿಂದ, ಜಡವಾದ ಪ್ರಕೃತಿಗೆ ಆ ಈಕ್ಷಣವು ಬರಲಾರದಾದುದರಿಂದ, ಜಗತ್ಸ್ರಷ್ಟೃತ್ವವೂ ಸಹ ಅದಕ್ಕೆ ಸಂಭವಿಸಲಾರದು. ಇಂತಹ ಶಕ್ತಿವಿಶಿಷ್ಟವಾದ ಬ್ರಹ್ಮಸ್ವರೂಪವು ಪೂರ್ವಸಂಸ್ಕಾರದಿಂದ ಆಕಾಶವನ್ನೂ ಅನಂತರ ವಾಯು, ತೇಜಸ್ಸು, ಜಲ, ಪೃಥಿವೀ, ಇವುಗಳನ್ನು ಆಯಾಯಾ ಪೂರ್ವ ಸ್ವರೂಪಕಾರಣವಾಗಿದ್ದುಕೊಂಡು ಸೃಷ್ಟಿಸಿತು. ಈ ಅಧ್ಯಾಯವು ಛಾಂದೋಗ್ಯೋಪ ನಿಷತ್ತಿನ ಸಾರವಾದುದರಿಂದ ಛಾಂದೋಗ್ಯದಲ್ಲಿ ಹೇಳಿದಂತೆ ತೇಜಸ್ಸು, ಜಲ, ಪೃಥಿವೀ ಈ ಮೂರು ಭೂತಗಳ ಉತ್ಪತ್ತಿಯನ್ನೇ ಹೇಳಬಹುದಾಗಿತ್ತು. ಆದರೂ

ತತ್ಪುನಃ ಕಾರಣಂ ಬ್ರಹ್ಮ ತಾನಿ ಭೂತಾನಿ ಪಂಚ ಚ ।
ಏಕೈಕಂ ದ್ವಿವಿಧಂ ಕೃತ್ವಾ ತೇಷಾಂ ಮಧ್ಯೇ ಸುರೋತ್ತಮಾಃ ॥೫೦॥

ಅಂಶಾನ್ಪಂಚ ಸಮಾದಾಯ ತೇಷಾ ಮೇಕೈಕ ಮಾಸ್ತಿಕಾಃ ।
ಕೃತ್ವಾ ಚತುರ್ಧಾ ತೇಷ್ವಂಶಾ ನಾದಾಯ ಚತುರಃ ಸುರಾಃ ॥೫೧॥

ಸಹ ಅನುಕ್ತಮನ್ಯತೋಗ್ರಾಹ್ಯಂ ಎಂಬ ನ್ಯಾಯವನ್ನು ಅನುಸರಿಸಿ, ತೈತ್ತರೀಯದಲ್ಲಿ ಆಕಾಶಾದಿ ಪಂಚಭೂತಗಳ ಉತ್ಪತ್ತಿಯು ಆಮ್ನಾತವಾಗಿರುವುದರಿಂದ, ಎಲ್ಲಾ ಶ್ರುತ್ಯರ್ಥಗಳೂ, ಏಕಮುಖವಾದ ತಾತ್ಪರ್ಯವುಳ್ಳವುಗಳಾದುದರಿಂದ, ತೈತ್ತರೀಯ ದಲ್ಲಿ ಹೇಳಿದ ವಾಯು, ಆಕಾಶ, ಈ ಎರಡು ಭೂತಗಳನ್ನೂ ಇಲ್ಲಿ ಅಧ್ಯಾಹಾರದಿಂದ ಇಟ್ಟುಕೊಳ್ಳಬೇಕು. ಇದಕ್ಕೆ ಗುಣೋಪಸಂಹಾರ ನ್ಯಾಯವೆಂದು ಹೆಸರು.॥೪೮-೪೯॥

"ತಾಸಾಂ ತ್ರಿವೃತಂ ತ್ರಿವೃತಮೇಕೈಕಾಮುಕರೋತ್" ಎಂದು ಛಾಂ. ಉ. ೬.೩.೩. ಶ್ರುತಿಯಲ್ಲಿ ತ್ರಿವೃತ್ಕರಣ ಪ್ರಕ್ರಿಯೆಯು ಹೇಳಿದೆ. ಇದು ಹಿಂದೆ ಹೇಳಿದ ಗುಣೋಪಸಂಹಾರದ ನ್ಯಾಯದಿಂದ ಪಂಚೀಕರಣಕ್ಕೆ ಉಪಲಕ್ಷಕವೆಂದು ತಿಳಿಯ ಬೇಕು. ತಥಾಚ ಹಿಂದೆ ಬ್ರಹ್ಮವು ಪಂಚೀಕೃತವಾದ ಆಕಾಶಾದಿ ಪಂಚಭೂತಗಳನ್ನು ಸೃಜಿಸಿತೆಂದು ಹೇಳಿಯಾಯಿತು. ಈಗ ವ್ಯವಹಾರ ಸಿದ್ಧಿಗೋಸ್ಕರ ಪಂಚೀಕರಣವನ್ನು ಹೇಳುತ್ತಾನೆ. ಎಲೈ ಆಸ್ತಿಕರಾದ ಸುರೋತ್ತಮರೇ, ಹಿಂದೆ ಹೇಳಿದ ಸಮಸ್ತಕ್ಕೂ ಕಾರಣವಾದ ಪರಬ್ರಹ್ಮವು ಕ್ರಮವಾಗಿ ಆ ಪಂಚಭೂತಗಳಲ್ಲಿಯೂ ಒಂದೊಂದನ್ನೂ ಎರಡು ವಿಭಾಗವಾಗಿ ಮಾಡಿ ಅವುಗಳಲ್ಲಿ ಒಂದೊಂದು ಅರ್ಧಾಂಶವನ್ನು ಹಾಗೆಯೇ ಇಟ್ಟುಇನ್ನೊಂದು ಅರ್ಧಾಂಶವನ್ನು ನಾಲ್ಕು ನಾಲ್ಕು ವಿಭಾಗವನ್ನಾಗಿ ಮಾಡಿ, ಆ ನಾಲ್ಕು ವಿಧವಾಗಿ ವಿಭಾಗಿಸಲ್ಪಟ್ಟ ನಾಲ್ಕು ಅಂಶಗಳಲ್ಲಿ ಒಂದನ್ನು ಇತರ ಆಕಾಶ ಮುಂತಾದುದರ ಅರ್ಧಾಂಶಗಳೊಡನೆ ಸೇರಿಸಿತು. ಹೀಗೆ ಮಾಡಿದುದರಿಂದ ಒಂದೊಂದು ಭೂತದಲ್ಲೂ ಅದರದೇ ಆದ ಒಂದು ಅರ್ಧವೂ, ಇತರ ನಾಲ್ಕು ಭೂತಗಳಲ್ಲಿ ಪ್ರತಿಯೊಂದರ ಎಂಟನೆಯ ಒಂದಂಶವೂ ಸೇರಿರುತ್ತದೆ. ಆದರೂ ಬಹು ಭಾಗವಾದ ಅರ್ಧಾಂಶವನ್ನು ಅವಲಂಬಿಸಿ ಆಯಾ ಭೂತವೆಂದು ವ್ಯವಹಾರವು. ಇದಕ್ಕೇ ಪಂಚೀಕರಣವೆಂದು ಹೆಸರಿದೆ. ಆದುದರಿಂದ ಎಲ್ಲವೂ ಪಾಂಚಭೌತಿಕವೆನಿಸು ತ್ತದೆ. ॥೫೦-೫೧॥

ಯಥಾಕ್ರಮೇಣ ಭೂತಾನಾಂ ಚತುರಸ್ತಾಂಶ್ಚ ಕಾರಣಂ ।
ಯಥಾಕ್ರಮೇಣ ಭೂತಾರ್ಧೇ ನೇಕೇನೈಕಂ ಕರೋತಿ ತತ್ ॥೫೨॥

ಏವಂ ಮಂಶಾಂತರಾನೇತಾ ನಾದಾಯ ಚತುರಃ ಸ್ವಯಂ ।
ಏಕಂ ಭೂತಾಂತರಾರ್ಧೇನ ಕರೋತಿ ಕ್ರಮಶಃ ಸುರಾಃ ॥೫೩॥

ಏವಂ ಭೂತಾನಿ ಸರ್ವಾಣಿ ಪಂಚೀಕೃತ್ಯ ಸುರರ್ಷಭಾಃ ।
ಅಂಡಾನಿ ಭುವನಾನ್ಯಾಶು ಕರೋತಿ ಬ್ರಹ್ಮಕಾರಣಂ ॥೫೪॥

ಅಂಡಜಂ ಜಾರು(ರ)ಜಂ ಚೈವ ಸ್ವೇದಜಂ ಚೋದ್ಭಿಜಂ ತಥಾ ।
ಕರೋತಿ ಕಾಲಪಾಕೇನ ಪ್ರಾಣಿ ಕರ್ಮವಶೇನ ಚ ॥೫೫॥

ಆಕಾಶ, ವಾಯು, ಅಗ್ನಿ, ಜಲ, ಪೃಥಿವೀ, ಈ ಯಥಾಕ್ರಮವಾಗಿ ಒಂದೊಂದರ ಎಂಟನೆಯ ಒಂದಂಶವನ್ನು ತೆಗೆದುಕೊಂಡು ಆಕಾಶಾದಿ ಭೂತಗಳ ಅರ್ಧಾಂಶಗಳೊಡನೆ ಸೇರಿಸಿ ಪಂಚೀಕರಣ ಮಾಡಿದನು. ಹೀಗೆಯೇ ಉಳಿದ ಭೂತಗಳ ಎಂಟನೆಯ ಒಂದು ಭಾಗವಾದ ನಾಲ್ಕಂಶಗಳನ್ನು ತೆಗೆದುಕೊಂಡು ಭೂತಾಂತರಾರ್ಧಾಂಶದಿಂದ ಸೇರಿಸಿ ಆಕಾಶ, ವಾಯು, ತೇಜಸ್ಸು, ಜಲ, ಪೃಥಿವೀ, ಈ ಪ್ರಕಾರವಾಗಿ ಕ್ರಮವಾಗಿ ಸ್ಥೂಲ ಭೂತಗಳನ್ನು ಸೃಷ್ಟಿಸಿದನು. ಈ ಪಂಚೀಕರಣದಿಂದ ಪ್ರತಿಯೊಂದು ಭೂತದಲ್ಲೂ ಪಂಚಭೂತಗಳ ಎಂಟನೆಯ ಅಂಶವು ಸೇರಿರುವುದರಿಂದ ಪಾಂಚಭೌತಿಕವೆಂದೂ, ಬಹುಭಾಗದಿಂದ ಇದು ಜಲ, ಇದು ಪೃಥಿವೀ ಇತ್ಯಾದಿ ವ್ಯವಹಾರವೂ ಸಿದ್ಧಿಸುತ್ತದೆ. ಹಾಗಿಲ್ಲದಿದ್ದಲ್ಲಿ ವ್ಯವಹಾರವು ಎಂದರೆ ಅರ್ಥಕ್ರಿಯಾಕಾರಿತ್ವವು ನಡೆಯಲಾರದು. ||೫೨-೫೩||

ಓ ಸುರಶ್ರೇಷ್ಠರೇ, ಈ ರೀತಿಯಾಗಿ ಕಾರಣವಾದ ಬ್ರಹ್ಮವು ಸಮಸ್ತವಾದ ಭೂತಗಳನ್ನೂ ಪಂಚೀಕರಣಮಾಡಿ ಅವುಗಳಿಂದ ಬ್ರಹ್ಮಾಂಡಗಳನ್ನು ಸೃಷ್ಟಿಮಾಡಿದನು. ||೫೪||

"ಅಂಡಜಂ ಜಾರುಜ ಮುದ್ಭಿಜ್ಜಮಿತಿ" ಎಂಬ ಛಾಂದೋಗ್ಯ ಶ್ರುತ್ಯರ್ಥವನ್ನು ಹೇಳುತ್ತಾನೆ. ಓ ಸತ್ವಗುಣಪ್ರಧಾನರಾದ ದೇವತೆಗಳೇ, ಅನಂತರ ಪರಮಾತ್ಮನು ಕಾಲಾಧೀನವಾಗಿಯೂ, ಉದ್ಬುದ್ಧವಾದ ಪ್ರಾಣಿಗಳ ಕರ್ಮಾನುಸಾರವಾಗಿಯೂ, ಸಹ ಮೊಟ್ಟೆಯಿಂದ ಹುಟ್ಟುವ ಪಕ್ಷ್ಯಾದಿಗಳನ್ನೂ, ಬೆವರಿನಿಂದ ಹುಟ್ಟುವ ಹೇನು, ತಿಗಣೆ ಮುಂತಾದ ಪ್ರಾಣಿಗಳನ್ನೂ, ಭೂಮಿಯನ್ನು ಒಡೆದು ಹುಟ್ಟುವ ವೃಕ್ಷ, ಲತಾದಿಗಳನ್ನೂ, ಗರ್ಭದಲ್ಲಿ ಚೀಲದಲ್ಲಿ ಬೆಳೆದು ಹೊರಟುಬರುವ

ಬ್ರಹ್ಮ ಸರ್ವತ್ರ ಚಿದ್ರೂಪೇಣೈವಾನುಪ್ರಾಪ್ಯ ಸಾತ್ತ್ವಿಕಾಃ ।
ಪೃಥಙ್ನಾಮಾನಿ ರೂಪಾಣಿ ಕುರುತೇ ಪೂರ್ವಕಲ್ಪವತ್ ॥೫೬॥

ಇದಂ ಸರ್ವಂ ಜಗತ್ಸತ್ಯಮಿವ ಭಾತಮಪಿ ಸ್ವತಃ ।
ಕಾರಣವ್ಯತಿರೇಕೇಣ ನಾಸ್ತ್ಯೇವಾತ್ರ ನ ಸಂಶಯಃ ॥೫೭॥

ಮಾನವಾದಿಗಳನ್ನೂ, ಸಹ ಸೃಷ್ಟಿಸಿದನು. "ಸೇಯಂದೇವತೇ ಮಾಸ್ತಿಸ್ರೋ ದೇವತಾ ಅನೇನೈವ ಜೀವೇನಾತ್ಮನಾಽನುಪ್ರವಿಶ್ಯ ನಾಮರೂಪೇ ವ್ಯಾಕರೋತ್" ಎಂಬ ಛಾ. ಶ್ರುತ್ಯರ್ಥವನ್ನು ಸಂಗ್ರಹಿಸಿ ಹೇಳುತ್ತಾನೆ. ಸಮಸ್ತಕ್ಕೂ ಕಾರಣವಾದ ಪರಮಾತ್ಮನು ಜಲತರಂಗಾದಿಗಳಲ್ಲಿ ಸೂರ್ಯನ ಪ್ರತಿಬಿಂಬದಂತೆ ಸಮಸ್ತ ಇಂದ್ರ ಚಂದ್ರಾದಿ ಶರೀರಗಳಲ್ಲಿ ಚಿದ್ರೂಪದಿಂದ ಪ್ರವೇಶಿಸಿ ಹಿಂದಿನ ಸೃಷ್ಟಿಕ್ರಮವನ್ನು ಅನುಸರಿಸಿ, ದೇವದತ್ತಾದಿ ನಾಮಗಳನ್ನೂ ನೀಲಾದಿರೂಪಗಳನ್ನೂ, ಬೇರೆ ಬೇರೆಯಾಗಿ ಸೃಷ್ಟಿಸಿದನು. ಇಲ್ಲಿ "ಚಿದ್ರೂಪೇಣೈವಾನುಪ್ರವಿಶ್ಯ" ಎಂದು ಹೇಳಿದುದರಿಂದ ಪರಮಾತ್ಮನ ಆಭಾಸವೇ ಜೀವನೆಂದು ಹೇಳಿದಂತಾಯಿತು. ಲೋಕದಲ್ಲಿ ಬಿಂಬ ಪ್ರತಿಬಿಂಬಗಳಿದ್ದಂತೆ ಜೀವಪರಮಾತ್ಮರು ಇರುತ್ತಾರೆ. ಬಿಂಬವು ಸತ್ಯವಾಗಿ ಸರ್ವಕ್ಕೂ ಅಧಿಷ್ಠಾನವಾಗಿರುತ್ತದೆ. ಉಪಾಧ್ಯಧೀನವಾಗಿ ಅಜ್ಞಾನದಿಂದ ಕೂಡಿರುವ ಪ್ರತಿಬಿಂಬವು ಕಡೆಗೆ ಜ್ಞಾನದಿಂದ ಅಧಿಷ್ಠಾನರೂಪವಾದ ಬಿಂಬವಾಗುತ್ತದೆ. ಈ ರೀತಿಯಾಗಿ ಇಟ್ಟುಕೊಂಡರೆ ಬ್ರಹ್ಮಜ್ಞಾನದಿಂದ ಮುಕ್ತಿಯು ಎಂಬ ಮಾತೂ ಸರಿಹೋಗುತ್ತದೆ. ಇದಲ್ಲದೇ ಬ್ರಹ್ಮನು ಬೇರೆ, ಜೀವನು ಬೇರೆ ಎಂದು ಒಪ್ಪಿದರೆ ಬ್ರಹ್ಮಜ್ಞಾನದಿಂದ ಜೀವನ ಜೀವತ್ವವು ಹೇಗೆ ಹೋದೀತು? ಅನ್ಯಜ್ಞಾನದಿಂದ ಅನ್ಯವಿಷಯಕವಾದ ಅಜ್ಞಾನವು ನಿವೃತ್ತಿ ಆಗಲಾರದು. ಜೀವಪರಮಾತ್ಮರಿಗೆ ಅಭೇದವನ್ನು ಒಪ್ಪಿದರೆ ಜೀವತ್ವವು ಅಜ್ಞಾನದಿಂದ ಕಲ್ಪಿತವಾಗಿಯೂ, ಬ್ರಹ್ಮಸ್ವರೂಪವು ಸತ್ಯವಾಗಿಯೂ ಇರುವುದರಿಂದ ಜೀವಾಭಿನ್ನನಾದ ಪರಮಾತ್ಮನ ಜ್ಞಾನದಿಂದ ಅಜ್ಞಾನನಿವೃತ್ತಿಯಾಗಿ ಮೋಕ್ಷವುಂಟಾಗುತ್ತದೆ ಎಂಬ ಮಾತು ಸರಿಹೋಗುತ್ತದೆ. ಶ್ರುತಿಯಲ್ಲಿಯೂ ಸಹ "ಅನೇನ ಜೀವೇನಾತ್ಮನಾ" ಎಂದು ಜೀವನಲ್ಲಿ ಆತ್ಮ ಶಬ್ದಪ್ರಯೋಗದಿಂದ ಪರಮಾತ್ಮನೇ ಜೀವನಾಗಿದಾನೆಂದು ತಿಳಿಯುತ್ತದೆ. ಆದುದರಿಂದ "ಚಿದ್ರೂಪೇಣೈವಾನುಪ್ರವಿಶ್ಯ" ಎಂಬ ಮಾತು ಬಹಳ ಸಮೀಚೀನವಾಗಿರುತ್ತದೆ. ॥೫೫-೫೬॥

ಮೃದಾದಿ ದೃಷ್ಟಾಂತಗಳಿಂದ ಕಾರ್ಯವು ಕಾರಣಾಪೇಕ್ಷೆಯಿಂದ ಬೇರೆಯಲ್ಲವೆಂದು ಹೇಳಿಯಾಯಿತು. ಪುನಃ ಅದನ್ನು ದೃಢೀಕರಿಸಲು ತ್ರಿವೃತ್ಕರಣದಿಂದಾದ

ಯದಗ್ನೇ ರೋಹಿತಂ ರೂಪಂ ತದ್ರೂಪಂ ತೇಜಸಃ ಸದಾ ।
ಯಚ್ಛುಕ್ಲಂ ತದಪಾಂ ರೂಪಂ ಯತ್ಕೃಷ್ಣಂ ಭೌಮಮೇವ ತತ್ ॥೫೮॥

ನಾಸ್ತಿ ರೂಪಾತಿರೇಕೇಣ ಸದಾ ಸೋಽಗ್ನಿಃ ಸುರರ್ಷಭಾಃ ।
ವಾಚಾರಂಭಣ ಮಾತ್ರೋ ಹಿ ವಿಕಾರೋ ವಹ್ನಿಸಂಜ್ಞಿತಃ ॥೫೯॥

ಕಾರ್ಯಪ್ರಪಂಚವು ಅತ್ರಿವೃತ್ಕೃತವಾದ ಕಾರಣ ತೇಜೋಬನ್ನಮಾತ್ರವಾಗಿರುತ್ತದೆ ಎಂಬ ಅಂಶವು ಅಗ್ನಿಯೇ ಮುಂತಾದ ನಾಲ್ಕು ಉದಾಹರಣೆಗಳಿಂದ "ಯದಗ್ನೇ ರೋಹಿತಂ ರೂಪಂ ತೇಜಸಸ್ತದ್ರೂಪಂ" ಎಂಬ ಛಾಂ. ಶ್ರುತಿಯಲ್ಲಿ ಪ್ರತಿಪಾದಿಸಲ್ಪಟ್ಟಿದೆ. ಈಗ ಕಾರಣಮಾತ್ರಸತ್ಯವೇ ಹೊರತು ಕಾರ್ಯವು ಸತ್ಯವಲ್ಲವೆಂಬ ಅಂಶವನ್ನೂ ಹೇಳುತ್ತಾನೆ. ನಮ್ಮ ಪ್ರತ್ಯಕ್ಷಾದಿ ಪ್ರಮಾಣಗಳಿಗೆ ಗೋಚರವಾದ ಸಮಸ್ತ ಪ್ರಪಂಚವು ಸತ್ಯವೆಂದು ಕಂಡಾಗ್ಯೂ ಸಹ ಅದು ಕಾರಣವಾದ ಸದ್ರೂಪಕ್ಕಿಂತ ಭಿನ್ನವಾಗಿಲ್ಲ. ಈ ವಿಷಯದಲ್ಲಿ ಸಂದೇಹವಿಲ್ಲ. ಏಕೆಂದರೆ ಕಾರ್ಯವು ಅಜ್ಞಾನದಿಂದ ಸದ್ರೂಪಾಧಿಷ್ಠಾನದಲ್ಲಿ ಕಲ್ಪಿತವಾದುದರಿಂದ ಅಜ್ಞಾನನಿವೃತ್ತಿಯಿಂದ ಕಾರ್ಯಕ್ಕೆ ನಿವೃತ್ತಿಯಿರುವುದರಿಂದಲೂ ಸಹ, ಕಾರ್ಯವು ಕಾರಣ ಮಾತ್ರ ಸ್ವರೂಪವಾಗಿದೆ. ಅದು ಸದ್ರೂಪವಾದುದರಿಂದ ಅದಕ್ಕೆ ಯಾವುದೂ ನಿವರ್ತಕವಿಲ್ಲವು. ಆದುದರಿಂದ ಕಾರ್ಯವು ಕಾರಣಾತಿರೇಕವಾಗಿ ಸತ್ಯವಾಗಿಲ್ಲ. ||೫೭||

ಕಾರ್ಯವು ಕಾರಣಕ್ಕಿಂತ ಅತಿರಿಕ್ತವಲ್ಲವೆಂಬ ಅಂಶವನ್ನು ಉಪಪಾದಿಸುತ್ತಾನೆ. ತ್ರಿವೃತ್ಕೃತವಾದ ಅಗ್ನಿಯಲ್ಲಿ ರಕ್ತವರ್ಣವೂ, ಶುಕ್ಲವರ್ಣವೂ, ಕೃಷ್ಣವರ್ಣವೂ, ಸಹ ತೋರುತ್ತವೆ. ಅವುಗಳಲ್ಲಿ ರಕ್ತವು ಅತ್ರಿವೃತ್ಕೃತವಾದ ತೇಜಸ್ಸಿನಲ್ಲಿರತಕ್ಕದ್ದಾಗಿಯೂ, ಶುಕ್ಲವು ಅತ್ರಿವೃತ್ಕೃತವಾದ ಜಲದ್ದಾಗಿಯೂ, ಕೃಷ್ಣವು, (ಕಪ್ಪು) ಪೃಥಿವಿಯದಾಗಿಯೂ ಇರುತ್ತವೆ. ಕಾರಣಗಳಲ್ಲಿರತಕ್ಕ ಆ ರೂಪಗಳು ಕಾರ್ಯದಲ್ಲಿ ತೋರುತ್ತವೆ. ||೫೮||

ಓ ಸುರಶ್ರೇಷ್ಠರೇ, ಹಿಂದೆ ಹೇಳಿದ ಮೂರು ರೂಪಗಳಿಗಿಂತ ಅತಿರಿಕ್ತವಾದ, ಅಗ್ನಿಯೆಂಬ ವಸ್ತುವು ಯಾವಾಗಲೂ ಇರುವುದಿಲ್ಲ. ಏವಂಚ, ರಕ್ತ, ಶುಕ್ಲ, ಕೃಷ್ಣಗಳೆಂಬ ರೂಪಗಳು ಸೇರಿ ಅಗ್ನಿಯೆಂದು ಹೇಳಲ್ಪಡುತ್ತವೆ. ಹಾಗಾದರೆ ದಾಹ, ಪಾಕಾದಿ ಸಮರ್ಥವಾದ ಅಗ್ನಿಯು ಪ್ರತ್ಯಕ್ಷಸಿದ್ಧವಾಗಿರುತ್ತಿರಲಾಗಿ ಆ ಅಗ್ನಿಯು ರೂಪತ್ರಯಭಿನ್ನವಾಗಿರಲಾರದೆಂದು ಹೇಗೆ ಸ್ವೀಕರಿಸಲು ಸಾಧ್ಯ? ಎಂದರೆ ಅದಕ್ಕೆ ಸಮಾಧಾನವನ್ನು ಹೇಳುತ್ತಾನೆ. ವಹ್ನಿಗೆ ಕಾರಣವಾದ ರೂಪತ್ರಯವ್ಯತಿರಿಕ್ತವಾಗಿ

ತ್ರೀಣಿ ರೂಪಾಣಿ ಹೇ ದೇವಾ ಏವ ಸತ್ಯಂ ನ ಚಾನಲಃ ।
ಯದ್ಭಾನೋ ರೋಹಿತಂ ರೂಪಂ ತದ್ರೂಪಂ ತೇಜಸಸ್ಸದಾ ॥೬೦॥

ಯಚ್ಛುಕ್ಲಂ ತದಪಾಂ ರೂಪಂ ಯತ್ಕೃಷ್ಣಂ ಭೌಮಮೇವ ತತ್ ।
ನಾಸ್ತಿ ರೂಪಾತಿರೇಕೇಣ ಸದಾಽದಿತ್ಯೋ ನ ಸಂಶಯಃ ॥೬೧॥

ಭ್ರಾಂತ್ಯಾ ಕೇವಲ ಮಾದಿತ್ಯ ಇತ್ಯಾಹು ರವಿವೇಕಿನಃ ।
ಏವಂ ಚಂದ್ರಶ್ಚ ವಿಜ್ಞೇಯೋ ವಿದ್ಯುಚ್ಚ ಸುರಪುಂಗವಾಃ ॥೬೨॥

ಘಟ ಕುಡ್ಯಾದಯೋ ಭಾವಾ ಭೂತಾನಿ ಭುವನಾನಿ ಚ ।
ಸರ್ವಂ ಬ್ರಹ್ಮಾತಿರೇಕೇಣ ನಾಸ್ತಿ ಬ್ರಹ್ಮೈವ ಸತ್ಸದಾ ॥೬೩॥

ಅಗ್ನಿಯೆಂದು ಹೇಳಲ್ಪಡುವ ವಿಕಾರಗಳು ಕೇವಲ ವಾಕ್ಕಿನಿಂದ ಹೇಳಲ್ಪಡುತ್ತಿದೆಯೇ ವಿನಾ ವಸ್ತುಸತ್ತಾಗಿಲ್ಲ. ಆದುದರಿಂದ ಓ ದೇವತೆಗಳೇ, ಮೂರು ರೂಪಗಳು ಸತ್ಯವಾದುವುಗಳು. ಅದರಿಂದ ಹುಟ್ಟಿದ ಅಗ್ನಿ ಎಂಬುವುದು ವಾಕ್ಕಿನಿಂದ ಹೇಳಲ್ಪಡುವುದೇ ವಿನಾ ವಸ್ತುವಿಲ್ಲ. ಅಗ್ನಿಯಂತೆಯೇ ಆದಿತ್ಯನಲ್ಲಿ ತೋರತಕ್ಕ ಪೂರ್ಣವಾದ ರಕ್ತರೂಪವು ತ್ರಿವೃತ್ಕೃತವಾದ ತೇಜಸ್ಸಿನದಾಗಿದ್ದರೆ ಅಲ್ಲಿರತಕ್ಕ ಶುಕ್ಲರೂಪವು ಜಲದ್ದಾಗಿಯೂ, ಕೃಷ್ಣರೂಪವು ಪೃಥಿವೀಸಂಬಂಧಸೂಚಕವಾದುದಾಗಿಯೂ ಇರುತ್ತವೆ. ಆದುದರಿಂದ ಮೂರು ರೂಪಗಳನ್ನು ಬಿಟ್ಟು ಆದಿತ್ಯನೆಂಬ ಪದಾರ್ಥವು ವಾಕ್ಕಿಗೆ ವಿಷಯವಾಗಿದೆಯೇ ಹೊರತು ಅದು ಸತ್ಯವಸ್ತುವಾಗಿಲ್ಲವು.॥೫೯-೬೦-೬೧॥

ಓ ಸುರಶ್ರೇಷ್ಠರೇ, ಆದಿತ್ಯನು ಮೂರು ರೂಪಕ್ಕಿಂತಲೂ ಬೇರೆಯವನಾಗಿ ಇಲ್ಲದಿದ್ದಾಗ್ಯೂ ಕಾರಣ ಬೇರೆ, ಕಾರ್ಯ ಬೇರೆ, ಎಂಬ ಭ್ರಾಂತಿಯಿಂದ ತಿಳಿವಳಿಕೆಯಿಲ್ಲದವರು ಇದನ್ನು ಆದಿತ್ಯನೆಂದು ವ್ಯವಹರಿಸುತ್ತಾರೆ. ವಸ್ತುತಃ ರೂಪತ್ರಯ ಭಿನ್ನವಾಗಿ ಆದಿತ್ಯನಿಲ್ಲವು. ಇದರಂತೆಯೇ ಚಂದ್ರನಲ್ಲಿಯೂ, ವಿದ್ಯುತ್ತಿ (ಮಿಂಚಿ) ನಲ್ಲಿಯೂ ಸಹ ತೋರತಕ್ಕ ರಕ್ತ, ಶುಕ್ಲ, ರೂಪಗಳು ತೇಜಸ್ಸು, ಪೃಥಿವೀ ಇವುಗಳದ್ದೆಂದು ತಿಳಿಯಬೇಕು. ಆ ರೂಪಕ್ಕಿಂತಲೂ ಬೇರೆಯದಾಗಿ ಚಂದ್ರನೂ ವಿದ್ಯುತ್ತೂ ಸಹ ಇರುವುದಿಲ್ಲ. ಭ್ರಾಂತಿಯಿಂದ ನಾಮರೂಪಗಳ ವ್ಯವಹಾರಮಾತ್ರವು ಇದೆ. ॥೬೨॥

ಅಗ್ನ್ಯಾದಿಗಳು ಹೇಗೆ ಕಾರಣಾತಿರೇಕವಾಗಿಲ್ಲವೋ ಹಾಗೆಯೇ ಘಟ ಕುಡ್ಯಾದಿ ಸಮಸ್ತ ಪದಾರ್ಥಗಳೂ ಆಕಾಶಾದಿ ಮಹಾಭೂತಗಳೂ, ಚತುರ್ದಶಭುವನಗಳೂ ಸಹ ಪರಮ ಕಾರಣವಾದ ಬ್ರಹ್ಮಸ್ವರೂಪಕ್ಕಿಂತ ಬೇರೆಯಾಗಿಲ್ಲ. ಭ್ರಾಂತಿಯಿಂದ

ಪೂರ್ವ ಪೂರ್ವ ಭ್ರಮೋತ್ಪನ್ನ ವಾಸನಾಯಾ ಬಲೇನ ತು ।
ದೇಹೇಂದ್ರಿಯಾದಿ ಸಂಘಾತೇಽಹಂ ಮತಿರ್ಜಾಯತೇ ದೃಢಂ ॥೬೪॥

ದೇಹೇಂದ್ರಿಯಾದಯೋ ಭಾವಾ ನಾಹಮರ್ಥಾ ನಿರೂಪಣೇ ।
ಭೌತಿಕತ್ವಾಚ್ಚ ಭೂತಾಂಶ್ಯೈಃ ಸದೈವಾಪ್ಯಾಯಿ ತತ್ವತಃ ॥೬೫॥

ಉಂಟಾಗಿರುವ ನಾಮರೂಪಗಳ ವ್ಯವಹಾರಮಾತ್ರವಿದೆ. ಆದರೆ ಇವೆಲ್ಲಕ್ಕೂ ಅದಿಷ್ಠಾನಕಾರಣವಾದ ಬ್ರಹ್ಮಸ್ವರೂಪವಾದರೋ ಯಾವಾಗಲೂ ಸತ್ತಾಗಿ ಅಬಾಧಿತ ವಾಗಿರುತ್ತದೆ. ॥೬೩॥

ಬ್ರಹ್ಮವು ಪರಮಾರ್ಥವಾದರೆ "ತತ್ವಮಸಿ" ಎಂದು ಛಾಂದೋಗ್ಯೋಪನಿಷತ್ ೬.೮.೭ ; ೬.೯.೪ ; ೬.೧೪.೩. ರಲ್ಲಿ ಮುಂದೆ ಜೀವಬ್ರಹ್ಮಾಭೇದವನ್ನು ಶ್ರುತಿಯು ಉಪದೇಶಿಸುವುದರಿಂದ ಜೀವನೂ ಸಹ ಪರಮಾರ್ಥವಾಗಿರುವುದರಿಂದ ಜೀವೈಕ್ಯ ವಿಷಯವಾದ ಅಹಂ ಪ್ರತ್ಯಯ ವಿಷಯವು (ನಾನು ಎಂಬ ಜ್ಞಾನ) ಅಸತ್ಯವಾದ ದೇಹೇಂದ್ರಿಯಾದಿಗಳಲ್ಲಿ ನಾನು ಮನುಷ್ಯನು ಎಂಬ ಪ್ರತೀತಿಯು ಹೇಗೆ ಉಂಟಾಗುತ್ತದೆ? ಎಂದರೆ ಅದಕ್ಕೆ ಉತ್ತರವನ್ನು ಹೇಳುತ್ತಾನೆ. ಹಿಂದಿನ ಜನ್ಮದಿಂದುಂಟಾದ ಭ್ರಮವು ವಾಸನಾಮೂಲಕವಾಗಿ ದೇಹೇಂದ್ರಿಯಾದಿ ಸಮುದಾಯಗಳಲ್ಲಿ "ನಾನು" ಎಂಬ ಬಲವಾದ ಅಜ್ಞಾನವುಂಟಾಗುತ್ತದೆ. ಆ ಹಿಂದಿನ ಜನ್ಮವ್ಯವಹಾರವು ಅದಕ್ಕಿಂತಲೂ ಹಿಂದಿನ ಜನ್ಮದ ಭ್ರಾಂತಿವಾಸನೆಯಿಂದ ಉಂಟಾಗುತ್ತದೆ. ಹೀಗೆ ಅನಾದಿಯಾಗಿ ನಾನು ಎಂಬ ವ್ಯವಹಾರವು ನಡೆದುಬರುತ್ತಿದೆ. ಹೀಗೆ "ಅಹಂ" ಎಂಬ ವ್ಯವಹಾರವು ಅನಾದಿಯಾದುದರಿಂದ ಅನವಸ್ಥಾ ಎಂಬ ದೋಷಕ್ಕೆ ಪ್ರತೀತಿಯಿಲ್ಲವು. ॥೬೪॥

"ಅನ್ನಮಶಿತಂ ಇತ್ಯಾರಭ್ಯ ದಧ್ನಃಸೋಮ್ಯ" ಛಾಂದೋಗ್ಯೋಪನಿಷತ್ ೬.೫.೧. ಎಂಬ ಶ್ರುತಿಗಿಂತ ಹಿಂದಿನ ಶ್ರುತಿಯು ಮನಸ್ಸು, ವಾಕ್ಕು, ಪ್ರಾಣ, ಮಾಂಸ, ಲೋಹಿತ, ಮಜ್ಜಾಭೂಯಿಷ್ಠವಾದ ಶರೀರವು ಜಡವಾದ ತೇಜಸ್ಸು ಜಲ, ಅನ್ನ ಇವುಗಳಿಂದ ಹುಟ್ಟಿದುದರಿಂದ ಅದೂ ಜಡವಾಗಿದೆ. ಆದುದರಿಂದಲೇ ಶರೀರದಲ್ಲಿ "ಅಹಂ" ಎಂಬ ಪ್ರತೀತಿಯು ಪರಮಾರ್ಥವಿಷಯಕವಾದುದಲ್ಲವೆಂದು ಪ್ರಪಂಚಿಸಲ್ಪಟ್ಟಿತು. ಅದನ್ನೇ ಸಂಗ್ರಹಿಸಿ ಹೇಳುತ್ತಾನೆ. ದೇಹೇಂದ್ರಿಯಗಳು ಅಹಮರ್ಥಗಳಲ್ಲ. ಆದರೆ ಭ್ರಾಂತಿಯಿಂದ ಅಹಮರ್ಥಗಳಾಗಬಹುದು. ವಸ್ತುಗಳನ್ನು ವಿವೇಚಿಸಿದರೆ ಅವುಗಳು ಅಹಮರ್ಥಗಳಾಗಲಾರವು. ಏಕೆಂದರೆ ಶರೀರವು ಪಿತ್ರ

ಮೃದಂಭಸಾ ಯಥಾ ಭಿತ್ತಿರ್ನಿರ್ಮಿತಾ ವೈ ಮೃದಂಭಸಾ ।
ಆಪ್ಯಾಯತೇ ತಥಾ ಭುಕ್ತೈರ್ಭೂತೈರ್ದೇಹಾದಯೋಽಪಿ ಚ ॥೬೬॥

ಅತೋ ದೇಹಾದಿ ಸಂಘಾತೇಽಹಂ ಮಮೇತ್ಯಾದಿಕಾಂ ಮತಿಂ ।
ವಿಸೃಜ್ಯ ಸಾಕ್ಷಿ ಚೈತನ್ಯೇ ವಿದ್ವಾನ್ಕುರ್ಯಾದಹಂ ಮತಿಂ ॥೬೭॥

ದಧ್ನಃ ಸರ್ಪಿರ್ಯಥಾ ಜಾತಂ ಮಂಥನೇನ ಸುರರ್ಷಭಾಃ ।
ತಥಾ ಬುದ್ಧ್ಯಾದಯೋ ಭಾವಾ ಭೂತೇಭ್ಯಶ್ಚೋದ್ಭವಂತಿ ಹಿ ॥೬೮॥

ಭೌತಿಕಂ ದೇಹಸಂಘಾತಂ ವಿಸೃಜ್ಯಮತಿಮಾನ್ಬುಧಃ ।
ಸರ್ವಸಾಕ್ಷಿಣಿ ಚಿದ್ರೂಪೇ ಕುರ್ಯಾನ್ನಿತ್ಯಮಹಂ ಮತಿಂ ॥೬೯॥

ಮಾತೃಗಳಿಂದ ಉಪಭುಕ್ತವಾದ ಭೂತಗಳ ಕಾರ್ಯಗಳಾಗಿಯೂ ತಾನು ಭುಂಜಿಸಿದ ತೇಜೋಽಬನ್ನಗಳ ಅಂಶಗಳಿಂದ ವೃದ್ಧಿಯಾದುದರಿಂದಲೂ, ಸಹ ಶರೀರವು ಅಹಮರ್ಥವಾಗಲಾರದು. ॥೬೫॥

ಮಣ್ಣಿನಿಂದಲೂ, ನೀರಿನಿಂದಲೂ ಹೇಗೆ ಗೋಡೆಯು ಪ್ರತಿದಿವಸದಲ್ಲಿಯೂ ವೃದ್ಧಿಯನ್ನು ಹೊಂದುತ್ತದೆಯೋ ಹಾಗೆ ಶರೀರವು ಅಶಿತಪೀತವಾದ, ತಿಂದು ಕುಡಿದ, ಭೂತಗಳ ಸ್ಥೂಲವಾದ, ಮಧ್ಯಮವಾದ, ಸೂಕ್ಷ್ಮವಾದ, ಭಾಗಗಳಿಂದ ವೃದ್ಧಿ ಹೊಂದುತ್ತದೆ. ಆದುದರಿಂದ ಶರೀರ, ಅಂತಃಕರಣ ಇತ್ಯಾದಿ ಸಮುದಾಯವು ಕೇವಲವಾಗಿಂದ್ರಿಯಕ್ಕೆ ಮಾತ್ರ ವಿಷಯವಾದುದರಿಂದ ಅನೃತವಾಗಿಯೂ, ಭೂತತ್ರಯ ಕಾರ್ಯವಾದುದರಿಂದ ಅನಾತ್ಮವಾಗಿಯೂ, ಇರುವುದರಿಂದ ಅದರಲ್ಲಿ ಬುದ್ಧಿಯುಳ್ಳವನು ನಾನು, ನನ್ನದು ಎಂಬ ಜ್ಞಾನವನ್ನು ಇಡಬಾರದು. ಕೂಟಸ್ಥ ನಿತ್ಯನಾದ ಸರ್ವಸಾಕ್ಷಿಯಾದ ಆತ್ಮನಲ್ಲಿ ಅಹಂ, ಮಮ, ಇತ್ಯಾದಿ ಬುದ್ಧಿಯನ್ನು ಮಾಡಬೇಕು. ॥೬೬-೬೭॥

ಎಲೈ ಸುರಶ್ರೇಷ್ಠರೇ, ಮೊಸರನ್ನು ಚೆನ್ನಾಗಿ ಕಡೆದರೆ ಅದರಿಂದ ಬೆಣ್ಣೆ ಯುಂಟಾಗಿ ತುಪ್ಪವಾಗುತ್ತದೆ. ಅದು ಹೇಗೋ ಹಾಗೆ ನಮ್ಮಿಂದ ಭುಕ್ತವಾದ ತೇಜಸ್ಸು, ಜಲ, ಅನ್ನ ಇವುಗಳು ಜಠರಾಗ್ನಿಯಿಂದ ಪಾಕವಾಗಿ ದೇಹ, ಇಂದ್ರಿಯ ಮನಸ್ಸು ಇವುಗಳ ರೂಪವಾಗಿ ಪರಿಣಾಮಹೊಂದುತ್ತವೆ. ॥೬೮॥

ತುಪ್ಪವು ಹೇಗೆ ಮೊಸರಿನ ಪರಿಣಾಮವೋ ಹಾಗೆ ಶರೀರೇಂದ್ರಿಯಾದಿ ಸಂಘಾತವೂ ಸಹ ಭೂತಗಳ ಪರಿಣಾಮವಾಗಿರುತ್ತದೆ. ಆದುದರಿಂದ ಬುದ್ಧಿವಂತ

ಅನ್ನೇನಾಪ್ಯಾಯಿತೇ ಭುಕ್ತೇ ನಾಧೀತಂ ತಸ್ಯ ಭಾಸತೇ ।
ತತೋಽಪಿ ಬುದ್ಧಿರನ್ನಸ್ಯ ಕಾರ್ಯಮೇವ ನ ಸಂಶಯಃ ॥೨೦॥

ಅತೋಽಪಿ ಬುದ್ಧಿಮನ್ನಸ್ಯ ಕಾರ್ಯಂ ತ್ಯಕ್ತ್ವಾ ವಿವಿಕ್ತಧೀಃ ।
ಸರ್ವಸಾಕ್ಷಿಣಿ ಚಿದ್ರೂಪೇ ಕುರ್ಯಾನ್ನಿತ್ಯ ಮಹಂ ಮತಿಂ ॥೨೧॥

ದೇಹೇಂದ್ರಿಯಾದಿ ಸಂಘಾತೇಽಹಂ ಮಮೇತ್ಯಾದಿಕಾಂ ಮತಿಂ ।
ತ್ಯಕ್ತ್ವಾಸ್ವಾತ್ಮನಿ ಚಿದ್ರೂಪೇ ಯದಾ ಪೀತೋ ಭವತ್ಯಯಂ ॥೨೨॥

ನಾಗಿರುವವನು ಅಂತಹ ಶರೀರದಲ್ಲಿ ನಾನು, ನನ್ನದು, ಎಂಬ ಜ್ಞಾನವನ್ನು ಬಿಟ್ಟು ಸರ್ವಸಾಕ್ಷಿಯಾದ ಚಿದ್ರೂಪವಾದ ಆತ್ಮಸ್ವರೂಪದಲ್ಲಿ ಅಂತಹ ಬುದ್ಧಿಯನ್ನಿಡಬೇಕು. ॥೧೯॥

ವಾಕ್ಕು, ಪ್ರಾಣ ಇವುಗಳು ಕಾರ್ಯಗಳಾದುದರಿಂದ ಭೌತಿಕವಾಗಲೀ, ಮನಸ್ಸುಮಾತ್ರ ನಿತ್ಯವಾಗಿದೆಯೆಂದು ವೈಶೇಷಿಕರು ಹೇಳುವುದರಿಂದ ಅವು ಭೂತಗಳಿಂದ ಹೇಗೆ ಉತ್ಪನ್ನಗಳಾಗುತ್ತವೆ? ಎಂದು ಪುತ್ರನಾದ ಶ್ವೇತಕೇತುವು "ಭೂಯ ಏವ ಮಾ ಭಗವಾನ್ವಿಜ್ಞಾಪಯತು" ಛಾ. ಎಂದು ಕೇಳಲು ತಂದೆಯಾದ ಉದ್ದಾಲಕನು "ಷೋಡಶಕಲಃ" ಇತ್ಯಾದಿ ಉತ್ತರವನ್ನು ಹೇಳುತ್ತಾನೆ. ಹದಿನಾರು ದಿವಸಗಳ ಪರ್ಯಂತಲೂ ಊಟಮಾಡದಿದ್ದರೆ ಅಭ್ಯಾಸಮಾಡಿದ ವೇದ, ವೇದಾರ್ಥಗಳು ಮನಸ್ಸಿಗೆ ಹೊಳೆಯುವುದಿಲ್ಲ. ಊಟಮಾಡಿದರೆ ಸ್ಫುರಿಸುತ್ತದೆ. ಆದುದರಿಂದ ಮನಸ್ಸೂ ಸಹ ಅನ್ನಮಯವಾಗಿದೆ ಎಂದು ತಂದೆಯು ಉತ್ತರವನ್ನು ಹೇಳುತ್ತಾನೆ. ಈ ಅರ್ಥವನ್ನು ಸಂಗ್ರಹಿಸುತ್ತಾನೆ. ಅನ್ನದಿಂದ ವೃದ್ಧಿಹೊಂದಿದ ಮನಸ್ಸು ಅನ್ನವಿಲ್ಲದಿದ್ದರೆ ಅದು ಕ್ಷೀಣವಾಗಿ ವೇದವೇದಾರ್ಥಗಳು ಸ್ಫುರಿಸುವುದಿಲ್ಲವು. ಈ ರೀತಿ ಅನ್ವಯವ್ಯತಿರೇಕ (ಅನ್ನವಿದ್ದರೆ ವೃದ್ಧಿ, ಅನ್ನವಿಲ್ಲದಿದ್ದರೆ ವೃದ್ಧಿಯಾಗದಿರುವಿಕೆ) ಇರೋಣದರಿಂದ ಮನಸ್ಸು ಅನ್ನದ ಕಾರ್ಯವೆಂದೇ ಹೇಳಬೇಕು. ಈ ವಿಷಯದಲ್ಲಿ ಸಂದೇಹವಿರುವುದಿಲ್ಲ. ॥೨೦॥

ಆದುದರಿಂದ ವಿವೇಚನ ಸಮರ್ಥನಾದವನು ಅನ್ನದಿಂದ ಉಂಟಾದ ಮನಸ್ಸಿನಲ್ಲಿ ನಾನು, ನನ್ನದು ಎಂಬ ಬುದ್ಧಿಯನ್ನು ಬಿಟ್ಟು ಸರ್ವಸಾಕ್ಷಿಯಾದ ಚಿದ್ರೂಪದಲ್ಲಿ ಯಾವಾಗಲೂ ಅಂತಹ ಬುದ್ಧಿಯನ್ನಿಡಬೇಕು. ॥೨೧॥

ದೇಹೇಂದ್ರಿಯಾದಿಗಳಲ್ಲಿ ನಾನು, ನನ್ನದು, ಎಂಬ ಬುದ್ಧಿಯನ್ನು ಬಿಟ್ಟು ಯಾವನು ಚಿದ್ರೂಪವಾದ ತನ್ನ ಆತ್ಮನಲ್ಲಿ ಬುದ್ಧಿಯನ್ನು ಯಾವಾಗ್ಯೆ ಇಡುತ್ತಾ

ತದಾ ಸ್ವಪಿತಿ ದುಃಖಾದಿ ದರ್ಶನಂ ಚ ನ ವಿದ್ಯತೇ ।
ಸ್ವಾತ್ಮರೂಪ ಸುಖಪ್ರಾಪ್ತಿರೇವಂ ದೃಷ್ಟ್ವಾಽಸ್ಯ ದೇಹಿನಃ ॥೭೩॥

ಅತೋಽಪಿ ಮತಿಮಾನ್ನಿತ್ಯಂ ತ್ಯಕ್ತ್ವಾ ದೇಹಾದಿಗಾಂ ಧಿಯಂ ।
ಸರ್ವಸಾಕ್ಷಿಣಿ ಚಿದ್ರೂಪೇ ಸಾಕ್ಷಾತ್ಕುರ್ಯಾದಹಂ ಮತಿಂ ॥೭೪॥

ಯದಿದಂ ಸಾಕ್ಷಿಣಾ ವೇದ್ಯಂ ತತ್ಸರ್ವಂ ಬ್ರಹ್ಮಕೇವಲಂ ।
ತತ್ಸತ್ಯಂ ಪೂರ್ಣ ಚೈತನ್ಯಂ ತತ್ವಮರ್ಥೋ ನ ಸಂಶಯಃ ॥೭೫॥

ನೆಯೋ ಆಗ ಅವನು ಊಟಮಾಡಿದಂತೆ ಆಗುವುದಿಲ್ಲ. ಅವನು ಆಗ ನಿದ್ರೆಯನ್ನು ಅನುಭವಿಸುತ್ತಾ ದುಃಖಾದಿಗಳ ಪ್ರತ್ಯಕ್ಷವಿಲ್ಲದೇ ಸ್ವರೂಪಸುಖವನ್ನು ಮಾತ್ರ ಅನುಭವಿಸುತ್ತಾನೆ. ನಿದ್ರೆಯ ಕಾಲದಲ್ಲಿ ಇಂದ್ರಿಯಗಳು ತಮ್ಮ ತಮ್ಮ ವ್ಯಾಪಾರ ಗಳನ್ನು ಮಾಡದಿರುವುದರಿಂದ ನಿತ್ಯಸ್ಫುರಣವಾದ ಆತ್ಮಾನಂದವನ್ನು ಅನುಭವಿಸು ತ್ತಾನೆ. ಆದುದರಿಂದ "ಸುಖಮಹಮಸ್ವಾಪ್ಸಂ ನ ಕಿಂಚಿದವೇದಿಷಂ" ಎಂದು ಎಚ್ಚರವಾದ ಮೇಲೆ ಎಲ್ಲರೂ ಹೇಳುತ್ತಾರೆ. ಆದುದರಿಂದ ಬುದ್ಧಿವಂತನಾದವನು ದೇಹದಲ್ಲಿ ನಾನು, ಎಂಬ ಬುದ್ಧಿಯನ್ನು ದೂರಮಾಡಿ, ಸರ್ವಸಾಕ್ಷಿಯಾದ, ಚಿತ್ಸ್ವ ರೂಪನಾದ ತನ್ನ ಆತ್ಮನಲ್ಲಿ ಯಾವಾಗಲೂ ನಾನು, ನನ್ನದು ಎಂಬ ಬುದ್ಧಿಯ ನ್ನಿಡಬೇಕು. ||೭೨-೭೩-೭೪||

"ಏಕಮೇವಾದ್ವಿತೀಯಂ" ಛಾ. ಎಂದು ಅದ್ವಿತೀಯವಾದ ಬ್ರಹ್ಮಸ್ವರೂಪ ವನ್ನು ಪ್ರತಿಜ್ಞೆಮಾಡಿ, ತೇಜಸ್ಸು, ಜಲ, ಅನ್ನರೂಪಗಳಾದ ಭೂತತ್ರಯಗಳಿಂ ದುಂಟಾದ ಭೋಗ್ಯಸಮುದಾಯವೂ, ಭೋಗಾಯತನ (ಸುಖದುಃಖಾನುಭವಗಳಿಗೆ ಆಶ್ರಯ)ಗಳಾದ ಶರೀರಗಳೂ, ಆ ಭೋಗಗಳಿಗೆ ಸಾಧನಗಳಾದ ಇಂದ್ರಿಯಗಳೂ, ಸಹ ಭೂತಕಾರ್ಯಗಳಾದುದರಿಂದ, ವಾಗಿಂದ್ರಿಯಕ್ಕೆ ಮಾತ್ರ ವಿಷಯಗಳಾದುದ ರಿಂದ, ಅಸತ್ಯವಾಗಿ ಅನೃತಗಳಾಗಿರುತ್ತವೆ. ಈ ರೀತಿ ಇರತಕ್ಕ ಪದಾರ್ಥಗಳ ಭೇದ ದಿಂದ ಪರಮಾತ್ಮನ ಅದ್ವಿತೀಯವಾದ ಸ್ವರೂಪಕ್ಕೆ ಯಾವ ವಿಧವಾದ ಕ್ಷತಿಯೂ ಇರುವುದಿಲ್ಲ. ಎರಡು ಪದಾರ್ಥಗಳು ಸತ್ಯವಾಗಿದ್ದರೆ ಆಗ ಪರಸ್ಪರ ಭೇದವುಂಟಾಗಿ ಅದ್ವಿತೀಯತ್ವಕ್ಕೆ ಹಾನಿಬರಬಹುದು. ಪ್ರಕೃತದಲ್ಲಿ ಹಾಗಿಲ್ಲ. ಅಧಿಷ್ಠಾನಭೂತವಾದ ಬ್ರಹ್ಮವು ಪರಮಾರ್ಥವಾಗಿಯೂ, ಅಧ್ಯಸ್ತವಾದ ಸಕಲ ದೃಶ್ಯಗಳು ಮಿಥ್ಯಾಭೂತಗ ಳಾಗಿಯೂ, ಇವೆ. ಆದುದರಿಂದ ಅದ್ವಿತೀಯಪ್ರತಿಜ್ಞಾಭಂಗವು ಬರಲಾರದೆಂದು

ತ್ವಂ ಶಬ್ದಾರ್ಥೋಽ ಯ ಆಭಾತಿ ಸೋಽಹಂ ಶಬ್ದಾರ್ಥ ಏವಹಿ ।
ಯೋಽಹಂ ಶಬ್ದಾರ್ಥ ಆಭಾತಿ ಸ ತ್ವಂ ಶಬ್ದಾರ್ಥ ಏವಹಿ ॥೭೬॥

ಇಲ್ಲಿಯ ವರೆಗೆ ಛಾಂದ್ಯೋಗ್ಯದ ಷಷ್ಠಾಧ್ಯಾಯದ ಪ್ರಥಮಭಾಗಾರ್ಥವು ನಿರೂಪಿಸಲ್ಪಟ್ಟಿತು. ಇನ್ನು ಮುಂದೆ ಶ್ರುತಿಯಲ್ಲಿ ಶಂಕಾಸಮಾಧಾನಗಳು ಹೇಳಲ್ಪಟ್ಟಿವೆ. ಹೇಗೆಂದರೆ, ಭೋಗ್ಯಪ್ರಪಂಚವು ಅಸತ್ಯವಾದಾಗ್ಯೂ ಭೋಕ್ತೃಗಳಾದ ಜೀವರು ಸತ್ಯವಾಗಿರುತ್ತಾರೆ. ಅವರಿಗೂ ಪರಮಾತ್ಮನಿಗೂ ಪರಸ್ಪರಭೇದವಿರೋಣದರಿಂದ ಅದ್ವಿತೀಯಪ್ರತಿಜ್ಞಾಭಂಗಬಂದಿತೆಂಬ ಶಂಕೆಗೆ ಉತ್ತರವನ್ನು "ಉದ್ದಾಲಕೋ ಹಾರುಣಿಃ" ಎಂಬ ಛಾ. ಶ್ರುತಿಯು ಹೇಳುತ್ತದೆ. ಆದರೆ ಭೋಗ್ಯಗಳಂತೆ ಭೋಕ್ತೃವಾದ ಜೀವನು ಕಲ್ಪಿತನಲ್ಲ. ಮತ್ತೇನೆಂದರೆ ಪರಮಾತ್ಮನ ಸ್ವರೂಪವಾಗಿಯೇ ಇರುತ್ತಾನಾದ್ದರಿಂದ ಜೀವನಿಂದ ಪರಮಾತ್ಮನಿಗೆ ಭೇದವುಂಟಾಗಲಾರದೆಂದು "ಐತದಾತ್ಮ್ಯಮಿದಂ ಸರ್ವಂ" ಛಾ. ಶ್ರುತಿಯು ಹೇಳುತ್ತದೆ. ಈ ಶ್ರುತ್ಯರ್ಥವನ್ನು ಹೇಳುತ್ತಾನೆ. ಸಾಕ್ಷಿಸ್ಫುರಣೆಗೆ ವಿಷಯುವಾದ ಈ ಸಮಸ್ತವೂ ಸಹ ಸಾಕ್ಷಿಯಲ್ಲಿ ಅಧ್ಯಸ್ತವಾದುದರಿಂದ ಅಧ್ಯಸ್ತವಾದುದು ಅಧಿಷ್ಠಾನವಾದ ಬ್ರಹ್ಮಸ್ವರೂಪಕ್ಕಿಂತ ಅತಿರಿಕ್ತವಾಗದೇ ಕೇವಲ ಬ್ರಹ್ಮರೂಪವಾಗಿರುವುದು. ಯಾವುದು ಸರ್ಪವಾಗಿ ತೋರುತ್ತಿತ್ತೋ ಅದು ಹಗ್ಗವು. ಎಂಬಂತೆ ಬಾಧೆಯಿಂದ ಸಾಮಾನಾಧಿಕರಣ್ಯವು ತೋರುತ್ತಿದೆ. ಅಂತಹ ಅಧಿಷ್ಠಾನಭೂತವಾದ ಬ್ರಹ್ಮಸ್ವರೂಪವೇ ಮೂರುಕಾಲಗಳಲ್ಲಿ ಬಾಧೆಯಿಲ್ಲದ್ದಾಗಿಯೂ, ವ್ಯಾಪಕವಾಗಿ, ಎಲ್ಲಾ ಕಡೆಗಳಲ್ಲಿ ಪರಿಪೂರ್ಣವಾಗಿಯೂ ಚೈತನ್ಯಸ್ವರೂಪವಾಗಿಯೂ ಇದೆ. ಇಂತಹ ಬ್ರಹ್ಮಸ್ವರೂಪವೇ ತ್ವಂಶಬ್ದಾರ್ಥವಾದ ಜೀವಸ್ವರೂಪವಾಗಿರುತ್ತದೆ. ಪರಮಾರ್ಥವಾಗಿ ಜೀವನು ಪರಿಪೂರ್ಣಬ್ರಹ್ಮನೇ ಆಗಿರುತ್ತಾನೆಯೇ ವಿನಾ ದೃಶ್ಯಗಳಂತೆ ಬ್ರಹ್ಮನಲ್ಲಿ ಕಲ್ಪಿತನಲ್ಲವು. ॥೭೫॥

ತ್ವಂ ಶಬ್ದವು ಹೊರಗಿನ ಪದಾರ್ಥಗಳನ್ನು ತಿಳಿಸುತ್ತದೆ. ಅಹಂ ಶಬ್ದವು ಒಳಗಿರತಕ್ಕ ಆತ್ಮನನ್ನು ತಿಳಿಸುತ್ತದೆ. ಈ ರೀತಿಯಾಗಿ ತ್ವಂ ಶಬ್ದವೂ, ಅಹಂ ಶಬ್ದವೂ, ಪರಸ್ಪರ ವಿರುದ್ಧಗಳಾಗಿರುತ್ತವೆ. ಹೀಗಿರುತ್ತಿರಲು "ತತ್ವಮಸಿ" ಎಂಬ ಶ್ರುತಿಯಿಂದ ಹೊರಗಿನ ಪದಾರ್ಥಕ್ಕೆ ಬ್ರಹ್ಮತ್ವೋಪದೇಶವು ಹೇಗೆ? ಎಂದರೆ, ಅದಕ್ಕೆ ಉತ್ತರವನ್ನು ಹೇಳುತ್ತಾನೆ. ದೇವದತ್ತನು ಒಬ್ಬನೇ ಆದಾಗ್ಯೂ ಪುತ್ರನು ತಂದೆಯೆಂದು ಹೇಳುತ್ತಾನೆ. ತಂದೆಯು ಮಗನೆಂದು ಕರೆಯುತ್ತಾನೆ. ಹೀಗೆ ವಕ್ತೃಭೇದದಿಂದ ದೇವದತ್ತನಿಗೆ ಅನೇಕ ಭೇದಗಳು. ದೇವದತ್ತನು ವಸ್ತುತಃ ಒಬ್ಬನೇ.

ತ್ವಮಹಂ ಶಬ್ದ ಲಕ್ಷ್ಯಾರ್ಥಃ ಸಾಕ್ಷಾತ್ಪ್ರತ್ಯಕ್ಚಿತಿಃ ಪರಾ ।
ತಚ್ಛಬ್ದಸ್ಯ ಚ ಲಕ್ಷ್ಯಾರ್ಥಃ ಸೈವ ನಾತ್ರ ವಿಚಾರಣಾ ॥೭೭॥

ಹಾಗೆಯೇ ಜೀವನಿಗೆ ಬ್ರಹ್ಮತಾದಾತ್ಮ್ಯ (ಅತ್ಯಂತಾಭೇದ) ಇರುವುದರಿಂದ ಆ ಅಭೇದವನ್ನು ಜೀವನು ಅನುಭವಿಸುತ್ತಾ "ಅಹಂ ಬ್ರಹ್ಮಾಸ್ಮಿ" ಎಂದು ಭಾವಿಸುತ್ತಾನೆ. ಇದನ್ನೇ "ತತ್ವಮಸಿ" ಎಂದು ಉಪದೇಶಿಸುತ್ತಾನೆ. ಆದುದರಿಂದ "ತ್ವ ಮಹಂ" ಶಬ್ದಗಳಿಗೆ ಸಾಮಾನಾಧಿಕರಣ್ಯವು ಮುಖ್ಯವಾಗಿ ತೋರುತ್ತದೆ. ॥೭೬॥

"ತತ್ವಮಸಿ" "ಅಹಂಬ್ರಹ್ಮಾಸ್ಮಿ" ಎಂಬಲ್ಲಿ ಪರಸ್ಪರ ವಿರೋಧವಿಲ್ಲದೇ ಅಭೇದವು ಜೀವಬ್ರಹ್ಮರುಗಳಿಗೆ ತೋರಬಹುದು. ಆದರೆ ತ್ವಮಹಂ ಶಬ್ದಗಳಿಂದ ಅಜ್ಞನಾಗಿಯೂ, ಸಂಸಾರಿಯಾಗಿಯೂ ಇರತಕ್ಕ ಜೀವನು ಬೋಧಿತನಾಗುತ್ತಾನೆ. "ತತ್" ಎಂಬ ಪದದಿಂದಲಾದರೋ, ಅಸಂಸಾರಿಯಾಗಿಯೂ, ಸರ್ವಜ್ಞನಾಗಿಯೂ ಇರತಕ್ಕ ಈಶ್ವರನು ಬೋಧಿತನಾಗುತ್ತಾನೆ. ಇಂತಹ ವಿರುದ್ಧಸ್ವಭಾವವುಳ್ಳವರಿಗೆ ಹೇಗೆ ಅಭೇದವೆಂಬ ತಾತ್ಪರ್ಯವುಂಟಾದೀತು? ಎಂದರೆ, ಅದಕ್ಕೆ ಉತ್ತರವನ್ನು ಹೇಳುತ್ತಾನೆ. ಸತ್ಯಜ್ಞಾನಾನಂತಾನಂದಾತ್ಮಕವಾದ ಎಂಬುದಾಗಿ ಹಿಂದೆ ಹೇಳಿದ ಅಖಂಡವಾಗಿಯೂ, ಅದ್ವಿತೀಯವಾಗಿಯೂ, ಉತ್ಪತ್ತಿನಾಶರಹಿತವಾಗಿಯೂ, ಇರತಕ್ಕ ವಸ್ತುವು ಪರಮಾರ್ಥವಾದುದು. ಸತ್ವರಜಸ್ತಮೋಗುಣಾತ್ಮಕವಾಗಿಯೂ, ಪ್ರಕೃತಿಯಾಗಿಯೂ, ಉತ್ಪತ್ತಿಯಿಲ್ಲದೇ ನಾಶವುಳ್ಳದ್ದಾಗಿಯೂ, ತತ್ವಜ್ಞಾನದಿಂದ ಮಾತ್ರ ನಿವೃತ್ತಿಯುಳ್ಳದ್ದಾಗಿಯೂ, ಇರತಕ್ಕದ್ದು. ಮಿಥ್ಯಾಭೂತವಾಗಿ ಪರಿಕಲ್ಪಿತವಾದುದರಿಂದ ವಸ್ತುಭೂತವಾದುದಲ್ಲ. ಈ ಮಾಯೆಯು ಎರಡು ವಿಧವಾಗಿದೆ. ರಜಸ್ತಮಸ್ಸುಗಳನ್ನು ತಿರಸ್ಕರಿಸಿ ಸತ್ತ್ವಗುಣಪ್ರಧಾನವಾಗಿರತಕ್ಕದ್ದು ಒಂದು. ಇದು ಮಾಯಾ ಎನ್ನಲ್ಪಡುತ್ತದೆ. ರಜಸ್ತಮಸ್ಸುಗಳ ತಿರಸ್ಕಾರದಿಂದ ಮಲಿನಸತ್ವವೇ ಪ್ರಧಾನವಾಗಿವುಳ್ಳದ್ದು ಒಂದು. ಇದು ಅವಿದ್ಯೆಎನ್ನಲ್ಪಡುತ್ತದೆ. ಅವುಗಳಲ್ಲಿ ಮಾಯೆಯ ಸತ್ವಾಂಶದಲ್ಲಿ ಪ್ರತಿಬಿಂಬವಾಗಿರತಕ್ಕವನು ಪರಮೇಶ್ವರನು. ಆ ಮಾಯೆಯನ್ನು ತನ್ನ ಅಧೀನವಾಗಿಟ್ಟುಕೊಂಡು ಸರ್ವಜ್ಞನಾಗಿಯೂ, ಸರ್ವೇಶ್ವರನಾಗಿಯೂ, ಇರುತ್ತಾನೆ. ಅವಿದ್ಯೆಯ ಸತ್ವಾಂಶದಲ್ಲಿ ಪ್ರತಿಬಿಂಬಿತನಾದ ಪರಮೇಶ್ವರನು ಅದಕ್ಕೆ ಅಧೀನನಾಗಿ, ಅಸ್ವತಂತ್ರನಾಗಿ ಕರ್ತೃಭೋಕ್ತೃವಾಗಿ, ಜೀವನಾಗುತ್ತಾನೆ. ಅದೇ ಪರಮಾತ್ಮನೇ ತಮೋಗುಣಪ್ರಧಾನವಾದ ಪ್ರಕೃತಿಯೇ ಉಪಾಧಿಯುಳ್ಳವನಾಗಿ

ತ್ವಮಹಂ ಶಬ್ದ ವಾಚ್ಯಾರ್ಥಸ್ಯೈವ ದೇಹಾದಿವಸ್ತುನಃ ।
ನ ತಚ್ಛಬ್ದಾರ್ಥತಾಂ ವಕ್ತಿ ಶ್ರುತಿಸ್ತತ್ವಮಸೀತಿ ಸಾ ॥೭೮॥

ಭೂತಭೌತಿಕಪ್ರಪಂಚರೂಪವಾದ ಭೋಗ್ಯರೂಪವಾಗಿ ವಿವರ್ತವನ್ನು ಹೊಂದುತ್ತಾನೆ. ಏವಂ ಚ ಪರಮಾತ್ಮನು ಒಬ್ಬನೇ ಆದಾಗ್ಯೂ ತಮಃ ಪ್ರಧಾನವಾದ ಪ್ರಕೃತಿಯೇ ಉಪಾಧಿಯುಳ್ಳವನಾಗಿ ಜಗತ್ತಿಗೆ ಉಪಾದಾನಕಾರಣನಾಗುತ್ತಾನೆ. ಶುದ್ಧ ಸತ್ವಗುಣಪ್ರಧಾನವಾದ ಪ್ರಕೃತಿಯೇ ಉಪಾಧಿಯುಳ್ಳವನಾಗಿ ನಿಮಿತ್ತಕಾರಣನಾಗುತ್ತಾನೆ. ಒಟ್ಟಿನಲ್ಲಿ ಪರಮಾತ್ಮನಿಗೆ ಅಭಿನ್ನನಿಮಿತ್ತೋಪಾದಾನಕಾರಣತ್ವವನ್ನು ಹೇಳಿದಂತಾಯಿತು. ಇಂತಹ ಕಾರಣತ್ವವು "ಸದೇವಸೋಮ್ಯೇದಂ" ಎಂಬಲ್ಲಿ ಹೇಳಲ್ಪಟ್ಟಿತು. "ತದೈಕ್ಷತ" ಎಂಬಲ್ಲಿ ಈಕ್ಷಣವು ಚೇತನನ ಧರ್ಮವಾದುದರಿಂದ ನಿಮಿತ್ತಕಾರಣತ್ವವು ಹೇಳಲ್ಪಟ್ಟಿತು. "ಬಹುಸ್ಯಾಂ" ಎಂಬಲ್ಲಿ ಕಾರ್ಯಕಾರಣವಾಗಿ ವಿವರ್ತಮಾನಸ್ವರೂಪವಾದ ಉಪಾದಾನಕಾರಣತ್ವವು ಹೇಳಲ್ಪಟ್ಟಿತು. ಅಂತಹ ಅಭಿನ್ನನಿಮಿತ್ತೋಪಾದಾನಕಾರಣವಾದ ಬ್ರಹ್ಮವು "ತತ್ವಮಸಿ" ಎಂಬಲ್ಲಿರತಕ್ಕ ತಚ್ಛಬ್ದದಿಂದ ಪರಾಮೃಷ್ಟವಾಗುತ್ತದೆ. ತ್ವಂ ಶಬ್ದದಿಂದ ಅವಿದ್ಯೋಪಾಧಿಕನಾದ ಜೀವನು ಹೇಳಲ್ಪಡುತ್ತಾನೆ. ಇಂತಹ ಜೀವ, ಪರಮಾತ್ಮರುಗಳ ಮಾಯೆ, ಅವಿದ್ಯಾರೂಪಗಳಾದ ಅತ್ಯಂತ ವಿರುದ್ಧವಾದ ಉಪಾಧಿಗಳನ್ನು ತ್ಯಾಗಮಾಡಿದರೆ, ಆ ಉಪಾಧಿದ್ವಯದಲ್ಲಿ ಅನುಗತವಾದ ಶುದ್ಧಚೈತನ್ಯಮಾತ್ರವೇ ಬೋಧಿತವಾಗುತ್ತದೆ. "ಏವಂ ಉಪಾಧಿವಶಾತ್ ಜೀವಪರಮಾತ್ಮಭೇದಃ" ಎಂಬಂತೆ ಅಜ್ಞತ್ವ, ಸರ್ವಜ್ಞತ್ವಾದಿಗಳು ಔಪಾಧಿಕವಾದ ವ್ಯವಹಾರಗಳೇ ಹೊರತು ವಾಸ್ತವಿಕವಾಗಿಲ್ಲ. ಇದಕ್ಕೆ ಭಾಗತ್ಯಾಗಲಕ್ಷಣಾ, ಜಹದಜಹತ್‌ಲಕ್ಷಣಾ ಎಂದು ಶಾಸ್ತ್ರದಲ್ಲಿ ವ್ಯವಹಾರವುಂಟು. ಈ ರೀತಿ ಲಕ್ಷಣಮಾಡಿದರೆ ಶುದ್ಧಚೈತನ್ಯಸ್ವರೂಪಬೋಧಮಾತ್ರ ಉಂಟಾಗುತ್ತದೆ. ಸರ್ವಜ್ಞತ್ವಾದಿಗಳು ಅಜ್ಞಾನದಿಂದ ಕಲ್ಪಿತವಾದವುಗಳು.ಎಂದೂ ಗೊತ್ತಾಗುತ್ತದೆ. ॥೭೭॥

ಚಿದಂಶದಲ್ಲಿ ಅಭೇದತೋರತಕ್ಕ ವಿಷಯದಲ್ಲಿ ವಿರೋಧವಿಲ್ಲದಿದ್ದಾಗ್ಯೂ ತ್ವಂ, ಅಹಂ ಎಂಬಲ್ಲಿ ತ್ವಂ ಶಬ್ದದ ವಾಚ್ಯಾರ್ಥಕ್ಕೂ ತತ್ಪದ ವಾಚ್ಯಾರ್ಥಕ್ಕೂ ಸಹ ಪರಸ್ಪರ ವಿರೋಧವಿದೆಯಲ್ಲವೇ ? ಎಂದರೆ, ವಿರೋಧವಿದೆ. ಆದರೆ ಇಲ್ಲಿ ವಾಚ್ಯಾರ್ಥಗಳು ವಿವಕ್ಷಿತಗಳಲ್ಲ. ಎಂದು ಉತ್ತರವನ್ನು ಹೇಳುತ್ತಾನೆ. ತ್ವಂ, ಅಹಂ ಎಂಬ ಶಬ್ದಗಳ ವಾಚ್ಯಾರ್ಥವಾದ ದೇಹಾದಿಗಳೂ, ತಚ್ಛಬ್ದಾರ್ಥವೆಂದು "ತತ್ವಮಸಿ" ಎಂಬ ಶ್ರುತಿಯು ಹೇಳುವುದಿಲ್ಲ. ಎಂದರೆ ಸಂಸಾರಿಸ್ವರೂಪನನ್ನು ಸರ್ವಜ್ಞನೆಂದು ಹೇಳ

ತದರ್ಥೈಕ್ಯ ವಿರುದ್ಧಾಂಶಂ ತ್ಯಕ್ತ್ವಾ ವಾಚ್ಯಗತಂ ಶ್ರುತಿಃ ।
ಅವಿರುದ್ಧಚಿದಾಕಾರಂ ಲಕ್ಷಯಿತ್ವಾ ಬ್ರವೀತಿ ಹಿ ॥೭೯॥

ತದರ್ಥೇ ಚ ತ್ವಮರ್ಥೈಕ್ಯ ವಿರುದ್ಧಾಂಶಂ ವಿನೈವ ತು ।
ಕಾರಣತ್ವಾದಿ ವಾಚ್ಯಸ್ಥಂ ಲಕ್ಷಯಿತ್ವಾ ತು ಕೇವಲಂ ॥೮೦॥

ಚಿದಾಕಾರಂ ಪುನಸ್ತಸ್ಯ ತ್ವಮರ್ಥೈಕ್ಯಂ ಬ್ರವೀತಿ ಚ ।
ತತ್ತ್ವಂ ಶಬ್ದಾರ್ಥ ಲಕ್ಷ್ಯಸ್ಯ ಚಿನ್ಮಾತ್ರಸ್ಯ ಪರಾತ್ಮನಃ ॥೮೧॥

ತಕ್ಕ ವಿಷಯದಲ್ಲಿ ಶ್ರುತಿಗೆ ತಾತ್ಪರ್ಯವಿಲ್ಲ. ಅದನ್ನು ಉದಾಸೀನವಾಗಿ ಬಿಟ್ಟು, ಲಕ್ಷ್ಯವಾದ ಅಖಂಡಚೈತನ್ಯವನ್ನು ಮಾತ್ರ ಬೋಧಿಸುವುದರಿಂದ ಲಕ್ಷ್ಯಾರ್ಥದಲ್ಲಿ ಆಶ್ರುತಿಗೆ ತಾತ್ಪರ್ಯವು. ॥೭೮॥

ಶಬ್ದದಿಂದ ಹೇಳಲ್ಪಡುವ ಸಂಸಾರಿತ್ವಾದಿವಾಚ್ಯಾರ್ಥಗಳಲ್ಲಿ ತಾತ್ಪರ್ಯವಿಲ್ಲ. ಎಂಬ ವಿಷಯದಲ್ಲಿ ಕಾರಣವನ್ನು ಹೇಳುತ್ತಾನೆ. "ತತ್ವಮಸಿ" ಎಂಬ ಶ್ರುತಿಯು ಪ್ರತ್ಯಭಿಜ್ಞಾವಾಕ್ಯದಂತೆ ಅಭೇದವನ್ನು ಹೇಳುತ್ತದೆ. ಆದುದರಿಂದ ವಾಚ್ಯವಾದ ಸರ್ವಜ್ಞತ್ವ, ಕಿಂಚಿಜ್ಞತ್ವ, ಮುಂತಾದ ಐಕ್ಯಬೋಧನ ವಿರುದ್ಧಾಂಶಗಳನ್ನು ಗಮನಿಸದೆ ಬಿಟ್ಟು, ಅವಿರುದ್ಧವಾದ ಶುದ್ಧಜ್ಞಾನಸ್ವರೂಪವನ್ನೇ ಲಕ್ಷಣೆಯಿಂದ ಬೋಧಿಸುತ್ತದೆ. ಎಂದು ತಿಳಿಯಬೇಕು. ಹೇಗೆಂದರೆ "ಸೋಽಯಂ ದೇವದತ್ತಃ" ಎಂಬ ಪ್ರತ್ಯಭಿಜ್ಞಾ ವಾಕ್ಯದಲ್ಲಿ ಆಯಾಯ ಹಿಂದಿನ ಮತ್ತು ಈಗಿನ ದೇಶಕಾಲಗಳು ವಿಶಿಷ್ಟ ದೇವದತ್ತರೂಪವಾದ ವ್ಯಕ್ತಿಬೋಧದಲ್ಲಿ ವಿರುದ್ಧವಾಗಿ ತೋರೋಣದರಿಂದ ಆಯಾಯಾ ದೇಶಕಾಲಗಳ ಅಂಶಗಳನ್ನು ಪರಿತ್ಯಾಗಮಾಡಿದರೆ, ಕೇವಲ ದೇವದತ್ತಜ್ಞಾನಮಾತ್ರ ತೋರಲು, ಆ ದೇವದತ್ತನೇ ಇವನು, ಎಂದು ಪ್ರತ್ಯಭಿಜ್ಞಾನ ಉಂಟಾಗುವಂತೆ ತತ್ತ್ವಮಸಿ ಎಂಬಲ್ಲಿಯೂ ಅಭೇದಬೋಧಕ್ಕೆ ವಿರೋಧಿಗಳಾದ ಸರ್ವಜ್ಞತ್ವ ಅಲ್ಪಜ್ಞತ್ವಾದಿಗಳನ್ನು ಗಮನಿಸದೆ ಬಿಟ್ಟು, ತತ್ಪದಾರ್ಥದಲ್ಲೂ ತ್ವಂಪದಾರ್ಥದಲ್ಲೂ ಸಮಾನವಾಗಿರುವ ಶುದ್ಧಚೈತನ್ಯಬೋಧವನ್ನು ಮಾತ್ರ ಶ್ರುತಿಯು ಉಂಟುಮಾಡುತ್ತದೆ. ॥೭೯॥

ತತ್ಪದ ವಾಚ್ಯವಾದ ಪರಮಾತ್ಮನಲ್ಲಿರುವ ಜಗತ್ಕಾರಣತ್ವ ಸರ್ವಜ್ಞತ್ವಾದಿಗಳೊಂದಿಗೆ ವಿರುದ್ಧವಾದ ಜೀವರಲ್ಲಿರುವ ಅಲ್ಪಶಕ್ತಿತ್ವ, ಅಲ್ಪಜ್ಞತ್ವ, ಸಂಸಾರಿತ್ವಾದಿಗಳು ಭಿನ್ನವಾಗಿರುತ್ತವೆ. ಅದುದರಿಂದ ಇವಕ್ಕೆ ಅಭೇದವನ್ನು ಬೋಧಿಸುವುದರಲ್ಲಿ ಶ್ರುತಿಗೆ ತಾತ್ಪರ್ಯವಿಲ್ಲವು. ಮತ್ತೇನೆಂದರೆ ತತ್ಪದಕ್ಕೆ ಸರ್ವಜ್ಞತ್ವ, ಜಗತ್ಕಾ

ಐಕ್ಯತ್ವಂ ಯತ್ಸ್ವತಃ ಸಿದ್ಧಂ ಸ ಹಿ ವಾಕ್ಯಾರ್ಥ ಆಸ್ತಿಕಾಃ ।
ಇತೋಽನ್ಯಥಾ ಯೋ ವಾಕ್ಯಾರ್ಥಃ ಸೋಽವಾಕ್ಯಾರ್ಥೋऽ ನ ಸಂಶಯಃ॥೮೨॥

ಏಕತ್ವಪ್ರಮಿತಿಂ ವಾಕ್ಯಂ ನ ಕರೋತಿ ಸುರರ್ಷಭಾಃ ।
ವ್ಯಾವಹಾರಿಕಮಜ್ಞಾನಂ ಬಾಧತೇ ವಿದ್ಯಯೈವ ತು ॥೮೩॥

ರಣತ್ವಾದಿ ವಿಶಿಷ್ಟಚೈತನ್ಯವೆಂದರ್ಥವು. ತ್ವಂ ಪದಕ್ಕೆ ಕಿಂಚಿಜ್ಞತ್ವ ಸಂಸಾರಿತ್ವಾದಿ ವಿಶಿಷ್ಟಚೈತನ್ಯವು ಎಂದರ್ಥವು. ಇವೆರಡರ್ಥಗಳಲ್ಲಿ ಸರ್ವಜ್ಞತ್ವ, ಕಿಂಚಿತ್‌ಜ್ಞತ್ವಾದಿ ವಿಶೇಷಣಾಂಶಗಳನ್ನು ಬಿಟ್ಟು ವಿಶೇಷ್ಯವಾದ ಲಕ್ಷ್ಯಾರ್ಥಭೂತವಾದ ಅಖಂಡಚೈತನ್ಯೈಕ್ಯದ ಬೋಧನೆಯಲ್ಲಿಯೇ ಶ್ರುತಿಗೆ ತಾತ್ಪರ್ಯವು ಇದೆ. ಆದುದರಿಂದ ತತ್‌ತ್ವಂಪದಗಳಿಗೆ ಲಕ್ಷ್ಯಾರ್ಥವಾದ ಶುದ್ಧಚೈತನ್ಯಾಕಾರವಾದ ಪರಮಾತ್ಮಬೋಧದಲ್ಲಿಯೇ ಮುಖ್ಯ ತಾತ್ಪರ್ಯವು ಎಂದು ತಿಳಿಯಬೇಕು. ||೮೦-೮೧||

ಓ ಆಸ್ತಿಕರೇ, ಹಿಂದೆ ಹೇಳಿದಂತೆ ತತ್ತ್ವಂ ಶಬ್ದಗಳಿಂದ ಲಕ್ಷ್ಯವಾಗಿಯೂ, ಚಿನ್ಮಾತ್ರನಾಗಿಯೂ, ಯಾವ ಉಪಾಧಿಯೂ ಇಲ್ಲದ ಸ್ವರೂಪವೇ ಶುದ್ಧಚೈತನ್ಯ ಸ್ವರೂಪವೇ ಪರಮಾತ್ಮಸ್ವರೂಪವು. ಅಂತಹ ಪರಮಾತ್ಮನ ಮೂರು ವಿಧವಾದ, ಸಂಕೋಚವಿಲ್ಲದ, ಸ್ವಾಭಾವಿಕವಾದ ಏಕತ್ವವೆಂಬ ಅಭೇದವನ್ನು "ತತ್ತ್ವಮಸಿ" ಎಂಬ ಶ್ರುತಿಯು ಉಪದೇಶಿಸುತ್ತದೆ. ಅಷ್ಟೇ ಹೊರತು ಹಿಂದೆ ಇಲ್ಲದ ಜೀವ ಪರಮಾತ್ಮರ ಅಭೇದವನ್ನು ಉಂಟುಮಾಡುವುದಿಲ್ಲ. ಅಜ್ಞಾನದಿಂದ ತಿರೋಹಿತವಾಗಿದ್ದ ಅಭೇದಜ್ಞಾನವನ್ನು ಉಂಟುಮಾಡುವುದರ ಮೂಲಕ ಇರತಕ್ಕ ಏಕತ್ವವನ್ನೇ ತಿಳಿಸುತ್ತದೆ. ಇದನ್ನು ಬಿಟ್ಟು ಜೀವೇಶ್ವರರು ಭಿನ್ನರು. ಅವರಿಗೆ ಈಶ್ವರಾನುಗ್ರಹದಿಂದ ಅಭೇದವುಂಟಾಗುತ್ತದೆಯೆಂಬ ಮುಂತಾದ ವಾಕ್ಯಾರ್ಥವು ಸರಿಯಾದುದಲ್ಲ. ಏಕೆಂದರೆ ಹಿಂದೆ ಇಲ್ಲದ್ದು ಈಗ ಬಂದಿತೆಂದು ಸ್ವೀಕರಿಸಿದರೆ ಅದು ಅನಿತ್ಯವಾದುದರಿಂದ ಬ್ರಹ್ಮಾತ್ಮೈಕ್ಯಪ್ರಾಪ್ತಿರೂಪವಾದ ಮೋಕ್ಷವು ಹೇಗೆ ನಿತ್ಯವಾದೀತು? ಅದೂ ಅನಿತ್ಯವಾದರೆ ಪರಮಪುರುಷಾರ್ಥವಾಗಲಾರದು. ಆದುದರಿಂದ ಅವರಿಗಿರತಕ್ಕ ಅಭೇದಾಭಿವ್ಯಕ್ತಿಬೋಧನೆಯಲ್ಲಿಯೇ ಶ್ರುತಿಗೆ ಮುಖ್ಯತಾತ್ಪರ್ಯವು. ಇದು ನಿತ್ಯವಾದುದರಿಂದ ಮೋಕ್ಷವು ಅನಿತ್ಯವಾಗುವುದೆಂಬ ದೋಷವೂ ಇಲ್ಲವು. ||೮೨||

ತತ್ತ್ವಮಸ್ಯಾದಿವಾಕ್ಯಗಳು ಸ್ವಪ್ರಕಾಶವಾದ ಬ್ರಹ್ಮಸ್ವರೂಪದ ಏಕತ್ವಪ್ರಮಿತಿಯನ್ನು ಉಂಟುಮಾಡುವುದಿಲ್ಲ. ಮತ್ತೇನೆಂದರೆ ವಾಕ್ಯದಿಂದ ವಿದ್ಯೆಯು ಉಂಟಾಗು

ಸದಾ ಪ್ರಮಿತಮೇಕತ್ವಂ ಸ್ವತ ಏವ ನ ಚಾನ್ಯತಃ ।
ಅತೋ ನ ಪ್ರಮಿತಿಂ ವಾಕ್ಯಂ ಕುರುತೇಽಜ್ಞಾನಬಾಧಕಂ ॥೬೪॥

ವಸ್ತುತೋ ನಾಸ್ತಿ ಚಾಜ್ಞಾನಂ ಚಿತ್ಪ್ರಕಾಶವಿರೋಧತಃ ।
ಅತೋ ವಾಕ್ಯಂ ನ ಚಾಜ್ಞಾನ ಬಾಧಕಂ ಚ ನಿರೂಪಣೇ ॥೬೫॥

ತ್ತದೆ. ಅದರಿಂದ ಬ್ರಹ್ಮಾತ್ಮೈಕ್ಯವಿಷಯಕವಾದ ಮನೋವೃತ್ತಿಯು ಉಂಟಾಗುತ್ತದೆ. ಅದರಿಂದ ಭೇದಕಾರಣವಾಗಿದ್ದ ಅಜ್ಞಾನವು ಹೋಗುತ್ತದೆ. ಏವಂ ಚ ವಿದ್ಯೋತ್ಪತ್ತಿ ದ್ವಾರಾ ಅಜ್ಞಾನವನ್ನು ನಾಶಮಾಡುವುದರಿಂದ ಶ್ರುತಿವಾಕ್ಯವು ನಿಷ್ಪ್ರಯೋಜನವಲ್ಲವು. ॥೬೩॥

ಏಕತ್ವಬೋಧನೆಯಲ್ಲಿ ವಾಕ್ಯದ ವ್ಯಾಪಾರವಿಲ್ಲದಿದ್ದರೆ ಪ್ರಮಾಣಕ್ಕೆ ವಿಷಯವಲ್ಲ ಎಂದು ಹೇಳಿದಂತಾಯಿತು. ಏವಂಚ ಶಶಶೃಂಗಾದಿಗಳಂತೆ ಪ್ರಮಾಣಕ್ಕೆ ವಿಷಯವಾಗಲಾರದಾದುದರಿಂದ ಅಸತ್ತಾಗಬೇಕಾಯಿತಲ್ಲವೇ ? ಎಂದರೆ, ಅದಕ್ಕೆ ಉತ್ತರವನ್ನು ಹೇಳುತ್ತಾನೆ. ಇನ್ನೊಂದರಿಂದ ಪ್ರಕಾಶಿಸತಕ್ಕ ವಸ್ತುವು ಪ್ರಮಾಣವಿಷಯವಾಗದಿದ್ದರೆ ಅದು ಅಸತ್ತೆಂದು ಹೇಳಬಹುದು. ಆದರೆ ಈ ಏಕತ್ವವಾದರೋ ಯಾವಾಗಲೂ ಸ್ವಯಂಪ್ರಕಾಶಮಾನವಾದುದರಿಂದ ಅದರ ಪ್ರಮಿತಿ ಅಥವಾ ಬೋಧನೆಯಲ್ಲಿ ಪ್ರಮಾಣಾಂತರದ ಅಪೇಕ್ಷೆಯಿರುವುದಿಲ್ಲವು. ಆದುದರಿಂದ ತತ್ವಮಸಿ ಮುಂತಾದ ವಾಕ್ಯವು ಜೀವರಲ್ಲಿ ತೋರುತ್ತಿರುವ ಸ್ವಸ್ವರೂಪದ ಅಜ್ಞಾನವೆಂಬ ಆವರಣದ ನಿವೃತ್ತಿಯಲ್ಲಿ ಮಾತ್ರ ಉಪಯೋಗವುಳ್ಳದೇ ಹೊರತು ಸ್ವರೂಪವನ್ನು ಪ್ರಕಾಶಿಸುವುದರಲ್ಲಿಯೂ ಉಪಯೋಗವುಳ್ಳದ್ದೆಂದು ಅರ್ಥವಲ್ಲವು. ॥೬೪॥

ಅಲ್ಲದೆ ಪರಮಾರ್ಥವಾಗಿ ವಿಚಾರಿಸಿದರೆ ಈ ಅಜ್ಞಾನವೂ ಕೂಡ ಇಲ್ಲವು ಎನ್ನಬೇಕು. ಏಕೆಂದರೆ, ಬ್ರಹ್ಮಸ್ವರೂಪವು ಸದಾ ಭಾನರೂಪವಾದುದರಿಂದ ಬೆಳಕಿನಂತೆ ಇರುತ್ತದೆ. ಅಜ್ಞಾನವು ತಮೋರೂಪವಾದುದರಿಂದ ಕತ್ತಲೆಯು ಹಾಗಿದೆ. ಆದುದರಿಂದ ತಮಃಪ್ರಕಾಶಗಳಂತೆ ಅವುಗಳಿಗೆ ವಿರೋಧವು. ಹಾಗೆ ವಾಸ್ತವವಾಗಿ ಅಜ್ಞಾನಾವರಣವನ್ನು ಒಪ್ಪಿದರೆ ಚೈತನ್ಯವು ಸ್ವಪ್ರಕಾಶವು ಹೇಗಾದೀತು ? ಆದುದರಿಂದ ಭ್ರಾಂತಿಯಿಂದ ಅಜ್ಞಾನಸಂಬಂಧದ ಕಲ್ಪನೆಮಾತ್ರವೇ ಹೊರತು, ಈ ಅಜ್ಞಾನವು ವಾಕ್ಯಜನ್ಯವಿದ್ಯೆಯಿಂದ ನಿವೃತ್ತಿಯಾಗುತ್ತದೆಯೆಂಬುದೂ ವ್ಯಾವಹಾರಿಕದೃಷ್ಟಿಯಿಂದ ಹೇಳತಕ್ಕ ಮಾತೇ ಹೊರತು, ವಸ್ತುತಃ ವಿಚಾರಿಸಿದರೆ ವಾಕ್ಯಜನ್ಯಜ್ಞಾನವೂ

ಏಕತ್ವಂ ಯತ್ಪುರಾ ಪ್ರೋಕ್ತಂ ತತ್ಸ್ವಯಂ ಸೇದ್ಧುಮರ್ಹತಿ ।
ನ ಪ್ರಮಾಣೇನ ಮಾನಾನಿ ತಸ್ಮಿನ್ಕುಂಠೀ ಭವಂತಿ ಹಿ ॥೮೬॥

ವ್ಯಾವಹಾರಿಕಮಜ್ಞಾನಮಪಿ ಬ್ರಹ್ಮೈವ ವಸ್ತುತಃ ।
ಅಜ್ಞಾನ ಮಿತಿ ವಾರ್ತಾಽಪಿ ತ್ವಥ(ಥಾ)ಽಸದ್ಭಾವ ಏವಹಿ ॥೮೭॥

ಸಹ ಅಜ್ಞಾನನಿವರ್ತಕವಲ್ಲವು. ಎಂದು ಹೇಳಬೇಕು. ಇದು ಪಾರಮಾರ್ಥಿಕ ದೃಷ್ಟಿಯಿಂದ ಒಪ್ಪಬೇಕಾದ ಸಿದ್ಧಾಂತವಾಗಿದೆ. ॥೮೫॥

ತತ್ವಮಸಿ ಮುಂತಾದ ವಾಕ್ಯದಿಂದ ಉಂಟಾಗುವ ಅದ್ವಿತೀಯ ಬ್ರಹ್ಮವಿಷಯಕವಾದ ಅಂತಃಕರಣವೃತ್ತಿಯು ತನಗೆ ವಿಷಯವಾದ ಬ್ರಹ್ಮಸ್ವರೂಪಕ್ಕೆ ಆವರಣವಾಗಿದ್ದ ಅಜ್ಞಾನಕ್ಕೆ ನಿವರ್ತಕವಾಗಿ ಉತ್ಪತ್ತಿಯಾಗುತ್ತದೆ. ಇಂತಹ ವೃತ್ತಿಗೆ ಘಟಪಟಾದಿವಿಷಯಕವಾದ ವೃತ್ತಿಗಳಂತೆ ಸ್ವವಿಷಯವನ್ನು ಪ್ರಕಾಶಿಸುವುದರಲ್ಲಿಯೂ ಏಕೆ ಸಾಮರ್ಥ್ಯವಿಲ್ಲ? ಎಂದರೆ, ಅದಕ್ಕೆ ಉತ್ತರವನ್ನು ಹೇಳುತ್ತಾನೆ. ಹಿಂದೆ ಹೇಳಿದ ಬ್ರಹ್ಮಸ್ವರೂಪದ ಸ್ವಾಭಾವಿಕವಾದ ಏಕತ್ವವು ಸ್ವಪ್ರಕಾಶಬ್ರಹ್ಮಸ್ವರೂಪಕ್ಕಿಂತಲೂ ಅತಿರಿಕ್ತವಲ್ಲವಾದುದರಿಂದ ಪ್ರಮಾಣಾಂತರದ ಅಪೇಕ್ಷೆಯಿಲ್ಲದೇ ತಾನೇ ಸ್ಫುರಿಸುತ್ತಿರುತ್ತದೆ. ಏಕೆಂದರೆ, ಸ್ವರೂಪವನ್ನು ಪ್ರಕಾಶಗೊಳಿಸಲು ಪ್ರವೃತ್ತವಾದ ಪ್ರಮಾಣಗಳು ಸ್ವಪ್ರಕಾಶಬ್ರಹ್ಮಸ್ವರೂಪದಲ್ಲಿ, ಸೂರ್ಯಪ್ರಕಾಶದಿಂದ ಪ್ರದೀಪವು ತಿರಸ್ಕೃತವಾಗುವಂತೆ, ಸಾಮರ್ಥ್ಯವಿಲ್ಲದವುಗಳಾಗುತ್ತವೆ. ಸಾಕ್ಷಿಭಾನಪ್ರಯುಕ್ತವಾಗಿ ಪ್ರಮಾಣಗಳಿಗೆ ಭಾನವೇ ಹೊರತು ಪ್ರಮಾಣಗಳು ಸಾಕ್ಷಿಯನ್ನು ವಿಷಯೀಕರಿಸಲಾರವು. "ನತತ್ರ ಚಕ್ಷುರ್ಗಚ್ಛತಿ ನ ವಾಕ್ ಗಚ್ಛತಿ ನೋಮನಃ" ಕೇನೋಪನಿಷತ್ ೧.೩. "ಯತೋ ವಾಚೋ ನಿವರ್ತಂತೇ ಅಪ್ರಾಪ್ಯ ಮನಸಾ ಸಹ" ತೈತ್ತಿರೀಯೋಪನಿಷತ್ ೨.೪.೫. ಇತ್ಯಾದಿ ಶ್ರುತಿಯಲ್ಲಿಯೂ ಸಹ ಸ್ವಪ್ರಕಾಶಸ್ವರೂಪವು ಪ್ರಮಾಣಗಳಿಗೆ ವಿಷಯವಲ್ಲವೆಂದು ತಿಳಿಯುತ್ತದೆ. ॥೮೬॥

ತಮಃ ಪ್ರಕಾಶಗಳಂತೆ ಅವುಗಳಿಗೆ ವಿರೋಧವು. ಹಾಗೆ ಅಲ್ಲದೆ ಅಜ್ಞಾನಾವರಣವನ್ನು ಒಪ್ಪಿದರೆ ಸ್ವಪ್ರಕಾಶವು ಹೇಗಾದೀತು? ಅದುದರಿಂದ ಭ್ರಾಂತಿಯಿಂದ ಅಜ್ಞಾನಸಂಬಂಧದ ಕಲ್ಪನೆ ಮಾತ್ರ. ಈ ಅಜ್ಞಾನವು ವಾಕ್ಯಜನ್ಯವಿದ್ಯೆಯಿಂದ ನಿವೃತ್ತಿಯಾಗುತ್ತದೆಯೆಂಬುದೂ ವ್ಯಾವಹಾರಿಕದೃಷ್ಟಿಯಿಂದ ಹೇಳತಕ್ಕ ಮಾತು. ವಸ್ತುತಃ ವಿಚಾರಿಸಿದರೆ ವಾಕ್ಯಜನ್ಯಜ್ಞಾನವೂ ಸಹ ಅಜ್ಞಾನನಿವರ್ತಕವಲ್ಲವು. ॥೮೬॥

ಸತ ಏವಹಿ ಸದ್ಭಾವೋ ನಾಸತೋ ಸೂಕ್ಷ್ಮದರ್ಶನೇ ।
ಸದಸತ್ಕೋಟಿ ನಿರ್ಮುಕ್ತ ಮಿತ್ಯುಕ್ತಿಶ್ಚಾರ್ಥ ಭಾಸನೇ ॥೮೮॥

ಖಲು ನಾಽಽಭಾಸತೇ ಭಾನಂ ಬ್ರಹ್ಮವಸ್ತ್ವೇವ ಕೇವಲಂ ।
ಭಾನ ಸಂಬಂಧತೋಽಭಾನಮಿತಿ ವಾರ್ತಾಽಪ್ಯಸಂಗತಾ ॥೮೯॥

ಸಂಬಂಧಿರೂಪ ಸದ್ಭಾವೇ ಸತಿ ಸಂಬಂಧ ಸಂಭವಃ ।
ಸದ್ಭಾವೇ ಸತಿ ಸಂಬಂಧಿರೂಪಂ ಬ್ರಹ್ಮೈವ ಕೇವಲಂ ॥೯೦॥

ವ್ಯವಹಾರಬಲದಿಂದಲೇ ಅಜ್ಞಾನಕ್ಕೆ ಸದ್ಭಾವವುಂಟಾಗಬಹುದಲ್ಲವೇ ? ಎಂದರೆ ಅದಕ್ಕೆ ಉತ್ತರವನ್ನು ಹೇಳುತ್ತಾನೆ. ಸದ್ರೂಪವಾದ ವಸ್ತುವಿಗೆ ಸದ್ಭಾವವು. ಸದ್ರೂಪವಲ್ಲದ್ದಕ್ಕೆ ಆ ಸದ್ಭಾವವುಂಟಾಗಲಾರದು. " ಸನ್ ಘಟಃ " ಎಂಬ ವ್ಯವಹಾರದಲ್ಲಿ ಅಧಿಷ್ಠಾನವಾದ ಬ್ರಹ್ಮಗತಸತ್ತೆಯು ಆರೋಪಿವಾದ ಘಟಾದಿಗಳಲ್ಲಿ ತೋರುತ್ತದೆಯೇ ವಿನಾ ಅವುಗಳಲ್ಲಿ ಪಾರಮಾರ್ಥಿಕಸತ್ತೆಯಿಲ್ಲವು. ಅಜ್ಞಾನಪ್ರತೀತಿಯೂ, ಜ್ಞಾನದಿಂದ ಅದಕ್ಕೆ ಬಾಧೆಯೂ ಸಹ ಇರೋಣದರಿಂದ ಅದು ಸದಸತ್ತೆಂದಾದರೂ ಹೇಳಬಹುದಲ್ಲವೇ ? ಎಂದರೆ ಅದಕ್ಕೆ ಉತ್ತರವನ್ನು ಹೇಳುತ್ತಾನೆ. ಸದಸದ್ವಿಲಕ್ಷಣ್ಯ ಎಂದರೆ ಅಜ್ಞಾನವು ಬ್ರಹ್ಮನಂತೆ ಸತ್ತಾದರೆ ಬಾಧೆ ಬರಬಾರದು. ಶಶಶೃಂಗಾದಿಗಳಂತೆ ಅಸತ್ತಾದರೆ ಪ್ರತೀತಿ ಬರಬಾರದು. ಆದುದರಿಂದ ಸದಸದ್ವಿಲಕ್ಷಣ ಎಂದು, ಪ್ರತಿಪಾದನವೂ ಸಹ ಆ ಅಜ್ಞಾನವನ್ನು ನಿರೂಪಿಸಲು ಸಾಧ್ಯವಿಲ್ಲದೆ ಹೇಳತಕ್ಕ ಮಾತಾಗಿದೆ. ಆದುದರಿಂದ ಇಂತಹ ಪದಾರ್ಥ ಪ್ರಕಾಶದಲ್ಲಿ ಅಜ್ಞಾನವು ಸದಸದ್ವಿಲಕ್ಷಣವಾದುದೆಂಬ ವ್ಯವಹಾರವೂ ತೋರುವುದಿಲ್ಲ. ಅಜ್ಞಾನದಿಂದ ವಿನಿರ್ಮುಕ್ತವಾದ, ಭಾನಸ್ವರೂಪವಾದ ಬ್ರಹ್ಮಸ್ವರೂಪವಸ್ತುಮಾತ್ರ ಪ್ರಕಾಶಿಸುತ್ತದೆ. ಆದುದರಿಂದ ಅಜ್ಞಾನಕ್ಕೆ ಭಾನವು ಉಂಟು. ಎಂಬುದೂ ಸರಿಯಾದುದಲ್ಲ. ॥೮೮॥

ಅಜ್ಞಾನವು ಸ್ವತಃ ಅಪ್ರಕಾಶಮಾನವಾದಾಗ್ಯೂ ಭಾನರೂಪವಾದ ಬ್ರಹ್ಮ ಸಂಬಂಧದಿಂದ ಪ್ರಕಾಶಿಸಬಹುದಲ್ಲವೇ? ಎಂದರೆ ಅದೂ ಸರಿಯಲ್ಲ. ಏಕೆಂದರೆ, ಸಂಬಂಧ ಉಂಟಾಗಬೇಕಾದರೆ ಸಂಬಂಧಿಗಳಾದ ಎರಡು ಪದಾರ್ಥಗಳು ಆವಶ್ಯಕವಾಗಿ ಬೇಕು. ಬ್ರಹ್ಮದಂತೆ ಅಜ್ಞಾನಕ್ಕೆ ಸಹ ಸ್ವರೂಪಸದ್ಭಾವವು ಆವಶ್ಯಕವಾಗಿ ಒಪ್ಪಿಕೊಳ್ಳಬೇಕು. ಆ ಅಜ್ಞಾನದ ಸದ್ಭಾವವಾದರೋ ಅಧಿಷ್ಠಾನಗತವಾದ ಬ್ರಹ್ಮವೇ ಆಗಿರುತ್ತದೆ. ಅಷ್ಟೇ ಹೊರತು ಅದಕ್ಕಿಂತ ಬೇರೆಯಾಗಿ ಅಜ್ಞಾನವು ಇಲ್ಲ. ಆದುದ

ಅನಿರೂಪಿತ ರೂಪೇಣ ಸದ್ಭಾವ ಇತಿ ಚೇನ್ಮತಂ ।
ಅನಿರೂಪಿತ ರೂಪಸ್ಯ ರೂಪಂ ತು ಬ್ರಹ್ಮ ಕೇವಲಂ ॥೯೧॥

ಅಸ್ತಿ ಚೇದ ಪರಸ್ಯಾಪಿ ರೂಪಂ ತರ್ಹಿ ಸುರೋತ್ತಮಾಃ ।
ರೂಪರೂಪೇಣ ರೂಪಂ ಚ ಬ್ರಹ್ಮರೂಪಂ ಭವೇತ್ಖಲು ॥೯೨॥

ಬ್ರಹ್ಮರೂಪೇಣ ನಾನ್ಯಸ್ಯ ರೂಪಂ ರೂಪಾಂತರೇಣ ಚೇತ್ ।
ತರ್ಹಿ ರೂಪಾಂತರಂ ರೂಪಾದ್ಭಿನ್ನಂ ವಾಽಭಿನ್ನಮೇವ ವಾ ॥೯೩॥

ಭಿನ್ನಾಭಿನ್ನಂ ನವಾ ಭಿನ್ನಂ ಯದಿರೂಪಾದ್ವಿಭೇದತಃ ॥೯೪॥

ತುಚ್ಛವತ್ತದ ರೂಪಂ ಸ್ಯಾದಭಿನ್ನಂ ಚೇತ್ತದೇವ ತತ್ ।
ಉಕ್ತದೋಷದ್ವಯಾ ಪತ್ತೇರ್ಭಿನ್ನಾಭಿನ್ನಂ ನ ತದ್ಭವೇತ್ ॥೯೫॥

ರಿಂದ ಸಂಬಂಧಿಗಳಾದ ಎರಡು ಪದಾರ್ಥಗಳಿಲ್ಲದುದರಿಂದ ಸಂಬಂಧವನ್ನೂ ಸಹ ನಿರೂಪಿಸಲು ಸಾಧ್ಯವಿಲ್ಲ. ॥೮೯-೯೦॥

ಬ್ರಹ್ಮದಂತೆ ಅಜ್ಞಾನಕ್ಕೆ ಪಾರಮಾರ್ಥಿಕ ಸದ್ಭಾವವಿಲ್ಲದಿದ್ದಾಗ್ಯೂ ಆರೋಪಿತವಾದ ಸದ್ಭಾವವಿರೋಣದರಿಂದ ಅದರಿಂದ ಸಂಬಂಧವು ಬರಬಹುದಲ್ಲವೇ ? ಎಂದರೆ ಅದಕ್ಕೆ ಉತ್ತರವನ್ನು ಹೇಳುತ್ತಾನೆ.—ವಿಚಾರಿಸಲು ಸಾಧ್ಯವಿಲ್ಲದ ಆಕಾರದಿಂದ ಅಜ್ಞಾನದ ಸಂಬಂಧವೆಂದರೆ ಅದು ಸರಿಯಲ್ಲ. ಏಕೆಂದರೆ, ಅಂತಹ ಅವಿಚಾರಿತರಮಣೀಯವಾದುದು ಅಧ್ಯಸ್ತವಾದುದರಿಂದ ಅದಕ್ಕೂ ಅಧಿಷ್ಠಾನರೂಪವೇ ಹೊರತು ಬೇರೆ ಸ್ವರೂಪ ಅದಕ್ಕಿಲ್ಲ. ಅಜ್ಞಾನ, ತತ್ಕಾರ್ಯಗಳು ಅಧ್ಯಸ್ತವಾಗಿ ಅವು ನಿಸ್ಸ್ವರೂಪವಾದುದರಿಂದ ಪ್ರಕಾಶ ಬ್ರಹ್ಮಸಂಬಂಧವು ಉಂಟಾಗಲಾರದು. ॥೯೧॥

ಎಲೈ ಸುರೋತ್ತಮರೇ, ನಿರೂಪಣೆ ಮಾಡಲು ಯೋಗ್ಯವಾದ ರೂಪವು ಬ್ರಹ್ಮಕ್ಕಿಂತಲೂ ಬೇರೆಯಾದ ವಸ್ತುವಿಗೆ ಇದ್ದರೆ ಅದೂ ಸಹ ನಿರೂಪಿಸಲು ಯೋಗ್ಯವಾದ ಬ್ರಹ್ಮಸ್ವರೂಪವೇ ಆಗುತ್ತದೆ. ಏಕೆಂದರೆ, ರೂಪತ್ವರೂಪಧರ್ಮದಿಂದ ಅವೆರಡಕ್ಕೂ ಭೇದವಿಲ್ಲ. ॥೯೨॥

ಅಜ್ಞಾನದ್ವಯರೂಪವು ಬ್ರಹ್ಮಸ್ವರೂಪಕ್ಕಿಂತಲೂ ಬೇರೆಯಾಗಿರುತ್ತದೆ. ಬ್ರಹ್ಮನ ರೂಪವೇ ಅದಕ್ಕೆ ರೂಪವಲ್ಲವೆಂದರೆ, ಹಾಗಾದರೆ ಆ ರೂಪವು ನಿರೂಪಿಸಲು

ಅತ ಏವ ಸುರಶ್ರೇಷ್ಠಾ ಅನಿರೂಪಿತರೂಪತಃ ।
ಸದ್ಭಾವ ಇತಿ ವಾರ್ತಾ ಚ ವಾರ್ತೈವ ಖಲು ಕೇವಲಂ ॥೯೬॥

ತಸ್ಮಾದ ಜ್ಞಾನ ಮೇವೈತದ್ಬ್ರಹ್ಮೈವ ಸತತೋದಿತಂ ।
ಅಜ್ಞಾನಮಯ ಮೇವೇದಂ ಸರ್ವಮಿತ್ಯಪಿ ಭಾಷಣಂ ।
ನೈವಭಾಷಣ ಮಜ್ಞಾನಾ ಭಾವಾದೇವ ಶಿವಂ ವಿನಾ ॥೯೭॥

ತಸ್ಮಾದಜ್ಞಾನಮಜ್ಞಾನಕಾರ್ಯಂ ಚ ಸುರಪುಂಗವಾಃ ॥೯೮॥

ಯೋಗ್ಯವಾದ ವಸ್ತುರೂಪಕ್ಕಿಂತ ಭಿನ್ನ(ಬೇರೆ)ವಾದುದೇ? ಅಭಿನ್ನವಾದುದೇ? ಅಥವಾ ಭಿನ್ನಾಭಿನ್ನವಾದುದೇ? ಈ ವಿಕಲ್ಪಗಳಲ್ಲಿ ಮೊದಲನೆಯ ವಿಕಲ್ಪವು ಸರಿಯಲ್ಲ. ಏಕೆಂದರೆ ನಿರೂಪಿಸಲು ಯೋಗ್ಯವಾದ ಆ ರೂಪವು ವಸ್ತುಸ್ವರೂಪಕ್ಕಿಂತ ಬೇರೆಯಾದುದರಿಂದ ಶಶಶೃಂಗಾದಿಗಳಂತೆ ಆರೂಪವು ಅಸತ್ತಾಗಬೇಕಾಗುತ್ತದೆ. ಎರಡನೆಯ ವಿಕಲ್ಪವೂ ಸರಿಯಲ್ಲ. ಏಕೆಂದರೆ ಬ್ರಹ್ಮಕ್ಕಿಂತ ಬೇರೆಯಾದ ಅಜ್ಞಾನಕ್ಕೆ ಸ್ವರೂಪಪ್ರಾಪ್ತಿಯೇ ಇರುವುದಿಲ್ಲ. ಮೂರನೆಯ ವಿಕಲ್ಪದಲ್ಲಿ ಹಿಂದೆ ಹೇಳಿದ ಎರಡು ದೋಷಗಳೂ ಬರುತ್ತವೆ. ಆದುದರಿಂದ ಬ್ರಹ್ಮಸ್ವರೂಪದಿಂದಲೇ ವ್ಯಾವಹಾರಿಕವಾದ ಅಜ್ಞಾನದ ಸ್ವರೂಪವೇ ಹೊರತು ಅದರಲ್ಲಿ ಬೇರೆ ಸ್ವರೂಪವನ್ನು ನಿರೂಪಿಸಲು ಸಾಧ್ಯವೇ ಇಲ್ಲ. ॥೯೩-೯೪-೯೫॥

ಎಲೈ ಸುರಶ್ರೇಷ್ಠರೇ, ನಿರೂಪಿಸಲು ಅಸಾಧ್ಯವಾದ ರೂಪದಿಂದ ಅಜ್ಞಾನದ ಸದ್ಭಾವವೆಂಬ ಮಾತು ಬರಿಯ ಮಾತಿನ ಪ್ರವಾದವೇ ವಿನಾ ನಿರೂಪಿಸಿ ತೋರಿಸಲು ಸಾಧ್ಯವಿಲ್ಲ. ॥೯೬॥

ಈ ರೀತಿಯಾಗಿ ಅಜ್ಞಾನಕ್ಕೆ ಬೇರೇ ಸ್ವರೂಪಪ್ರಾಪ್ತಿಯಿಲ್ಲದ್ದರಿಂದ ವ್ಯಾವಹಾರಿಕವಾದ ಅಜ್ಞಾನವೂ ಸಹ ವಸ್ತುತಃ ಬ್ರಹ್ಮಸ್ವರೂಪವೇ ಎಂಬ ಪ್ರತಿಜ್ಞಾತವಾದ ವಿಷಯವನ್ನು ಉಪಸಂಹರಿಸುತ್ತಾನೆ. ಸಮಸ್ತ ಜಗತ್ತೂ ಸಹ ಅಜ್ಞಾನದ ಕಾರ್ಯವು ಎಂಬ ಮಾತಿಗೆ ಅರ್ಥವಿಲ್ಲವು. ಏಕೆಂದರೆ, ಅಧಿಷ್ಠಾನವಾದ ಪರಶಿವಸ್ವರೂಪಕ್ಕಿಂತ ಅಜ್ಞಾನವನ್ನು ನಿರೂಪಿಸಲು ಸಾಧ್ಯವಿಲ್ಲ. ಆದುದರಿಂದ ಅಧಿಷ್ಠಾನಮಾತ್ರ ಸತ್ಯವಾಗಿಯೂ, ಉಳಿದ ಸಮಸ್ತ ವ್ಯಾವಹಾರಿಕಪದಾರ್ಥವೂ ಸಹ ಮಿಥ್ಯಾಭೂತವಾಗಿಯೂ ತೋರುತ್ತದೆ ಎಂದು ತಿಳಿಯಬೇಕು. ॥೯೭॥

ಏಕಂ ಬ್ರಹ್ಮೈವ ನೈವಾನ್ಯದಿತಿ ಮೇ ನಿಶ್ಚಿತಾ ಮತಿಃ ।
ಐತದಾತ್ಮ್ಯಮಿದಂ ಸರ್ವಮಿತ್ಯಾಹ ಹಿ ಪರಾ ಶ್ರುತಿಃ ॥೯೯॥

ಸಾಕ್ಷಾದರ್ಥಸ್ವಭಾವೇನ ಶ್ರುತಿಃ ಸೇಯಂ ಪ್ರವರ್ತತೇ ।
ಶ್ರೋತುಶ್ಚಿತ್ತ ವಿಪಾಕೇನ ವಿಷಣ್ಣಾ ವಿವಶಾ ಶ್ರುತಿಃ ॥೧೦೦॥

ಓ ಸುರಶ್ರೇಷ್ಠರೇ, ಅಜ್ಞಾನವೂ, ಅದರ ಕಾರ್ಯಗಳೂ ಸಹ ಏಕವಾದ ಬ್ರಹ್ಮಸ್ವರೂಪವೇ ಹೊರತು ಅದಕ್ಕಿಂತ ಬೇರೆಯಾಗಿಲ್ಲವು ಎಂದು ನನ್ನ ನಿಶ್ಚಯವು. "ಐತದಾತ್ಮ್ಯಮಿದಂ ಸರ್ವಂ" ಎಂಬ ಛಾಂದೋಗ್ಯೋಪನಿಷತ್ ೬.೮.೭. ಶ್ರುತಿಯು ಈ ಸಮಸ್ತ ಪ್ರಪಂಚವೂ ಬ್ರಹ್ಮಸ್ವರೂಪವೆಂದೂ, ಅಧಿಷ್ಠಾನವಾದ ಬ್ರಹ್ಮಸ್ವರೂಪ ವೊಂದೇ ಸತ್ಯವಾದುದೆಂದೂ ಹೇಳುತ್ತದೆ. ||೯೮-೯೯||

"ಆತ್ಮನ ಆಕಾಶಃ ಸಂಭೂತಃ" ತೈ. ಉ. "ಜ್ಯೋತಿಷ್ಟೋಮೇನ ಯಜೇತ ಸ್ವರ್ಗಕಾಮಃ" ಇತ್ಯಾದಿ ಶ್ರುತಿಗಳು ಕ್ರಿಯಾಕಾರಕ ಫಲರೂಪವಾಗಿರುವ ಭಿನ್ನ ಪದಾರ್ಥಗಳನ್ನು ತಿಳಿಸುತ್ತಾ ಭೇದವನ್ನು ಸಹ ಬೋಧಿಸುವುದರಿಂದ ಸಮಸ್ತವೂ ಬ್ರಹ್ಮಾತ್ಮಸ್ವರೂಪವು ಎಂದು ಹೇಗೆ ಒಪ್ಪುವುದು ? ಎಂದರೆ ಅದಕ್ಕೆ ಉತ್ತರವನ್ನು ಹೇಳುತ್ತಾನೆ. "ಐತದಾತ್ಮ್ಯಮಿದಂ ಸರ್ವಂ" ಎಂಬ ಶ್ರುತಿಯು ಅರ್ಥಸ್ವಭಾವ ದಿಂದ ಸಾಕ್ಷಾತ್ತಾಗಿರತಕ್ಕ ಪದಾರ್ಥವನ್ನು ಪ್ರತಿಪಾದಿಸಲು ಪ್ರವೃತ್ತವಾಗಿದೆ. ಏಕೆಂದರೆ ಇಂತಹ ಕಡೆಯ ಸಿದ್ಧಾಂತದ ಅರ್ಥವನ್ನು ಬೋಧಿಸುವುದೇ ಶ್ರುತಿಯ ಉದ್ದೇಶವು. ಆದರೆ ಅಸಂಸ್ಕೃತವಾದ ಮತಿಯುಳ್ಳ ಜನಗಳಿಂದ ಈ ತತ್ವವನ್ನು ತಿಳಿಯಲು ಅಸಾಧ್ಯವಾದುದರಿಂದ, ಅವರ ಮನಸ್ಸಿನ ಪರಿಪಾಕಾನುಸಾರವಾಗಿ ಭೇದ ಶ್ರುತಿಯು ಮಾಯೆಯಿಂದ ವ್ಯವಹಾರಸಿದ್ಧವಾದ ಭೇದವನ್ನು ಅನುವಾದ ಮಾಡುತ್ತಾ, ಶ್ರುತಿಯಲ್ಲಿ ಹೇಳಿರುವ ಧರ್ಮ, ಫಲಗಳಲ್ಲಿ ಜನರಿಗೆ ನಂಬಿಕೆಯ ನ್ನುಂಟುಮಾಡಿ, ರುಚಿಯನ್ನು ಹೆಚ್ಚಿಸುತ್ತಾ, ಸಾಧ್ಯಸಾಧನಫಲರೂಪವಾದ ಜಗತ್ತಿನ ವೈಚಿತ್ರ್ಯವನ್ನು ಪ್ರತಿಪಾದಿಸುತ್ತದೆ. ಹೀಗೆ ಅನೇಕ ಜನ್ಮ, ಕಾಲಗಳು ಕಳೆದ ಮೇಲೆ "ದೃಷ್ಟವದಾನುಶ್ರವಿಕಃ ಸತ್ವವಿಶುದ್ಧಿ ಕ್ಷಯಾತಿಶಯಯುಕ್ತಃ" ಎಂಬಂತೆ ಈ ಸಾಧನ, ಸಾಧ್ಯ, ಫಲಗಳಲ್ಲಿ ವೈರಾಗ್ಯವುಂಟಾಗಲು ಆ ಜನರ ಮನಸ್ಸನ್ನು ತಿರುಗಿಸಿ ಅದ್ವೈತವೇದಾಂತತತ್ವವನ್ನು ತಿಳಿಯುವುದರಲ್ಲಿ ಆಸಕ್ತಿಯನ್ನುಂಟುಮಾಡಿ, ಬ್ರಹ್ಮ ಸತ್ಯಂ ಜಗನ್ಮಿಥ್ಯಾ, ಎಂಬುವ ಸಿದ್ಧಾಂತವನ್ನು ಮನಗಾಣಿಸಿ, ಕಡೆಗೆ ಜೀವಬ್ರಹ್ಮೈಕ್ಯ

ಕ್ವಚಿತ್ಕದಾಚಿದನ್ಯಾರ್ಥಂ ವಕ್ತಿ ಚ ಬ್ರಹ್ಮಣಃ ಪೃಥಕ್ ।
ಸಾಧ್ಯಸಾಧನ ಸಂಬಂಧ ಕಥನಂ ಫಲಭಾಷಣಂ ॥೧೦೧॥

ಜಗದ್ವೈಚಿತ್ರ್ಯ ನಿರ್ದೇಶೋ ಧರ್ಮಾಧರ್ಮಾರ್ಥಭಾಷಣಂ ।
ವರ್ಣಾಶ್ರಮ ವಿಭಾಗೋಕ್ತಿ ಸ್ತದ್ಧರ್ಮೋಕ್ತಿ ಸ್ತಥೈವ ಚ ॥೧೦೨॥

ಶೋಭನಾಶೋಭನೋಕ್ತಿಶ್ಚ ಭೂತಭೌತಿಕಭಾಷಣಂ ।
ಶಬ್ದಾನಾಂ ಭೇದನಿರ್ದೇಶ ಸ್ತಥಾರ್ಥಾನಾಂ ಚ ಭಾಷಣಂ ॥೧೦೩॥

ಸಾಕ್ಷಾತ್ಕಾರರೂಪವಾದ ಮೋಕ್ಷದ ಉಪದೇಶದಲ್ಲಿ ವಾಸ್ತವವಾದ ಉದ್ದೇಶವುಳ್ಳದ್ದೇ ಹೊರತು ಶ್ರುತಿಯು ಪರಮಾರ್ಥವಾಗಿಯೇ ಜಗತ್ತನ್ನು ಬೋಧಿಸುವುದಿಲ್ಲ. ||೧೦೦||

ಒಂದೊಂದು ಕಡೆಯಲ್ಲಿ ಶ್ರುತಿಯು ಬ್ರಹ್ಮಸ್ವರೂಪಕ್ಕಿಂತ ಬೇರೆಯಾಗಿ ಸಾಧ್ಯವಾದ ಸ್ವರ್ಗಾದಿಗಳಿಗೂ, ಸಾಧನಗಳಾದ ಜ್ಯೋತಿಷ್ಟೋಮಾದಿ ಯಾಗಗಳಿಗೂ ಸಹ ಸಂಬಂಧವನ್ನೂ, ಆಯಾಯಾ ಕರ್ಮಗಳಿಗೆ ಫಲವಿಶೇಷಗಳನ್ನೂ ಪ್ರತಿಪಾದಿಸುತ್ತದೆ. ||೧೦೧||

ಕೆಲವು ಕಡೆಗಳಲ್ಲಿ ಜಗತ್ತಿನ ಸುಖದುಃಖಾದಿರೂಪವಾದ ವೈಚಿತ್ರ್ಯಗಳನ್ನೂ ಅವಕ್ಕೆ ಕಾರಣಗಳಾದ ಧರ್ಮ, ಅಧರ್ಮಗಳನ್ನೂ, ಅವುಗಳಿಂದಾಗುವ ಫಲಗಳನ್ನೂ, ಬ್ರಾಹ್ಮಣ, ವೈಶ್ಯ, ಶೂದ್ರರೆಂಬ ನಾಲ್ಕು ವರ್ಣಗಳ ವಿಭಾಗಗಳನ್ನೂ, ಆಯಾಯ ವರ್ಣದ ಧರ್ಮಗಳನ್ನೂ ಸಹ ಶ್ರುತಿಯು ಪ್ರತಿಪಾದಿಸುತ್ತದೆ. ಇವಲ್ಲಿ ರುಚಿಯುಳ್ಳ ಜೀವರು ಇವನ್ನು ಆಚರಿಸುತ್ತಾ ಪ್ರಗತಿಮಾರ್ಗದಲ್ಲಿ ಮುಂದುವರಿಯುತ್ತಾರೆ.||೧೦೨||

ಶುಭಾಶುಭಗಳನ್ನೂ, ಆಕಾಶಾದಿ ಭೂತಗಳನ್ನೂ ಮತ್ತು ಅವುಗಳಿಂದುಂಟಾದ ಭೌತಿಕಗಳನ್ನೂ, ಶಬ್ದಭೇದಗಳನ್ನೂ, ಅರ್ಥಭೇದಗಳನ್ನೂ ಸಹ ಶ್ರುತಿಯು ಅಲ್ಲಲ್ಲಿ ನಿರ್ದೇಶಿಸುತ್ತದೆ. ಇದರಿಂದ ಜನ್ಯವಾದ ಸ್ವರ್ಗಾದಿಫಲಗಳು ಅನಿತ್ಯಗಳೆಂದೂ, ದುಃಖಮಿಶ್ರಗಳೆಂದೂ, ಅಸೂಯಾದಿಗಳಿಗೆ ಕಾರಣಗಳೆಂದೂ, ಕೆಲವರಿಗಾದರೂ ತಿಳಿವಳಿಕೆಯು ಕಾಲಕ್ರಮದಲ್ಲಿ ಉಂಟಾಗಿ, ನಿತ್ಯಾನಿತ್ಯವಿವೇಕದಿಂದ, ಅನಿತ್ಯಸುಖಾಭಾಸದಲ್ಲಿ ವೈರಾಗ್ಯವೂ, ನಿತ್ಯಸುಖದಲ್ಲಿ ಆಸಕ್ತಿಯೂ ಉಂಟಾಗುತ್ತದೆ. ||೧೦೩||

ಆತ್ಮನೋಽನ್ಯಸ್ಯ ಸರ್ವಸ್ಯ ಸದ್ಭಾವೋಕ್ತಿಃ ಸುರರ್ಷಭಾಃ ।
ಮಿಥ್ಯಾತ್ವ ಭಾಷಣಂ ತಸ್ಯ ಮಾಯಯಾ ಸದ್ಭಾವಭಾಷಣಂ ॥೧೦೪॥

ಮಾಯಯಾತ್ಮೋಕ್ತಿಶ್ಚ ಮಾಯಯಾಯಾ ಬಂಧ ಇತ್ಯಪಿ ಭಾಷಣಂ ।
ಗುರು ಶಿಷ್ಯ ಕಥೋಕ್ತಿಶ್ಚ ಬ್ರಹ್ಮವಿದ್ಯಾಽಭಿ ಭಾಷಣಂ ॥೧೦೫॥

ಶಾಸ್ತ್ರಾಣಾಮಪಿ ನಿರ್ದೇಶಸ್ತರ್ಕಾಣಾಮಪಿ ಭಾಷಣಂ ।
ಅನ್ಯದ್ವಿತರ್ಕಜಾಲಂ ಯತ್ತದುಕ್ತಿಶ್ಚ ಸಮಾಸತಃ ।
ಅನ್ಯಾರ್ಥೇನ ಪರಂ ಬ್ರಹ್ಮ ಶ್ರುತಿಃ ಸಾಧ್ವೀ ನ ತತ್ಪರಾ ॥೧೦೬॥

ಚಿತ್ತ ಪಾಕಾನುಗುಣ್ಯೇನ ಶ್ರೋತ್ರ್ಯಾಣಾಂ ಪರಮಾ ಶ್ರುತಿಃ ।
ಸೋಪಾನ ಕ್ರಮತೋ ದೇವಾ ಮಂದಂ ಮಂದಂ ಹಿತಂ ನೃಣಾಂ ॥೧೦೭॥

ಉಪದಿಶ್ಯ ವಿಷಣ್ಣಾಽಪಿ ಪುನಃ ಪಕ್ವಾಧಿ ಕಾರಿಣಃ ।
ಏತದಾತ್ಮ್ಯಮಿದಂ ಸರ್ವಮಿತ್ಯಾಹ ಪರಮಾದ್ವಯಂ ॥೧೦೮॥

ಓ ಸುರಶ್ರೇಷ್ಠರೇ, ಆತ್ಮನಿಗಿಂತ ಬೇರೆಯಾಗಿ ಸಮಸ್ತವೂ ಇದೆ ಎಂದು ಹೇಳುವಿಕೆಯೂ, ಸಮಸ್ತವೂ ಅಸತ್ಯವೆಂದು (ತಿಳಿಯಿಸುವಿಕೆಯೂ), ಅದು ಮಾಯೆಯಿಂದ ವ್ಯಾವಹಾರಿಕದೃಷ್ಟಿಯಿಂದ ಮಾತ್ರ ಇದೆಯೆಂದು ಹೇಳುವಿಕೆಯೂ, ಶ್ರುತಿಗೆ ಪರಮೋದ್ದೇಶವೇ ಹೊರತು, ಹಾಗೆಯೇ ಮಾಯೆಯು ಬಂಧವೆಂದು ಹೇಳುವಿಕೆಯೂ, ಗುರುಶಿಷ್ಯರ ಸಂವಾದವನ್ನು ಹೇಳುವಿಕೆಯೂ, ಬ್ರಹ್ಮವಿದ್ಯೆಯನ್ನು ಹೇಳುವಿಕೆಯೂ, ಶಾಸ್ತ್ರನಿರ್ದೇಶ, ಯುಕ್ತಿಗಳನ್ನು ಹೇಳುವಿಕೆ, ಕುಯುಕ್ತಿಗಳನ್ನು ಸಂಕ್ಷೇಪವಾಗಿ ಹೇಳುವಿಕೆ, ಈ ಎಲ್ಲದರಲ್ಲಿಯೂ ಕೂಡ ಶ್ರುತಿಗೆ ಪರಮ ತಾತ್ಪರ್ಯವಿರುವುದರಿಂದ ಲೋಕಸಿದ್ಧವಾದ ಸಾಧನ, ಸಾಧ್ಯ, ಫಲಗಳ ಭೇದದ ಅನುವಾದವನ್ನು ಮಾತ್ರ ಮಾಡುತ್ತದೆ. ಆದುದರಿಂದ ಶ್ರುತಿಗೆ ಪರಬ್ರಹ್ಮಸ್ವರೂಪವನ್ನು ತಿಳಿಸತಕ್ಕ ವಿಷಯದಲ್ಲಿ ಮುಖ್ಯ ತಾತ್ಪರ್ಯವಿರುವುದು. ॥೧೦೪-೧೦೫-೧೦೬॥

ಶ್ರೋತೃಗಳಾದ ಅಧಿಕಾರಿಗಳ ಮನಸ್ಸಿನ ಪರಿಪಾಕಾನುಸಾರವಾಗಿ ಶ್ರುತಿಯು ಕರ್ಮಕಾಂಡದಲ್ಲಿ ಅಗ್ನಿಹೋತ್ರಾದಿ ಧರ್ಮಗಳನ್ನು ಕ್ರಮವಾಗಿ ಉಪದೇಶಿಸಿ ಅವುಗಳಿಂದ ಸಂಸ್ಕೃತಮತಿಯುಳ್ಳವರಿಗೆ ಉಪಾಸನೆಗಳನ್ನು ಉಪದೇಶಿಸುತ್ತದೆ. ಚಿತ್ತೈಕಾಗ್ರತೆಯುಳ್ಳ, ನಿತ್ಯಾನಿತ್ಯಾವಿವೇಕ ಮುಂತಾದ ಸಾಧನಚತುಷ್ಟಯ ಸಂಪನ್ನ

ಜಗಜ್ಜೀವೇಶ್ವರತ್ವಾದಿ ವಿಚಿತ್ರ ವಿಭವಂ ವಿನಾ ।
ಕೇವಲಂ ಚಿತ್ಸದಾನಂದ ಬ್ರಹ್ಮಾತ್ಮೈಕ್ಯಪರಾ ಶ್ರುತಿಃ ॥೧೦೯॥

ಜಗಜ್ಜೀವೇಶ್ವರತ್ವಾದಿ ಸರ್ವಂ ಬ್ರಹ್ಮೈವ ಕೇವಲಂ ।
ಇತಿ ಸ್ವಪೂರ್ಣತಾಜ್ಞಾನಂ ಪರಮಾದ್ವೈತವೇದನಂ ॥೧೧೦॥

ಇತೋಽನ್ಯದ್ಯತ್ಪರಿಜ್ಞಾನಂ ತದಜ್ಞಾನಂ ನ ಸಂಶಯಃ ।
ವಿಚಾರೇಣಾ ಯುಮೇವಾರ್ಥಃ ಸ್ವಯುಮೇವಾವಿಚಾರಣೇ ॥೧೧೧॥

ನ ಕದಾಚಿದ್ವಿಶೇಷೋಽಸ್ತೀತ್ಯೇತತ್ಜ್ಞಾನಂ ಸುದುರ್ಲಭಂ ॥೧೧೨॥

ರಾದ ಉತ್ತಮಾಧಿಕಾರಿಗಳಿಗಾದರೋ ಈ ಪರಿದೃಶ್ಯಮಾನವಾದ ಸರ್ವವೂ ಕಲ್ಪಿತವೆಂದೂ, ಅಧಿಷ್ಠಾನ ಬ್ರಹ್ಮಸ್ವರೂಪವೆಂದೂ, ತಿಳಿಸಿ, ಅದ್ವಿತೀಯವಾದ ಬ್ರಹ್ಮಸ್ವರೂಪವನ್ನು ಉಪದೇಶಮಾಡುತ್ತದೆ. ||೧೦೭-೧೦೮||

ಸಚ್ಚಿದಾನಂದಾತ್ಮಕವಾದ ಬ್ರಹ್ಮಸ್ವರೂಪವನ್ನು ಬೋಧಿಸುವುದರಲ್ಲಿಯೇ, ಪರಮ ತಾತ್ಪರ್ಯವುಳ್ಳ ಶ್ರುತಿಯು ಅಧ್ಯಾರೋಪ ಅಪವಾದನ್ಯಾಯದಿಂದ ಜಗತ್ತು, ಜೀವ, ಈಶ, ಇತ್ಯಾದಿ ಭೇದಗಳಿಲ್ಲದೇ ಅದ್ವೈತವನ್ನೇ ಬೋಧಿಸುತ್ತದೆ. ಭೋಕ್ತೃ, ಭೋಗ್ಯಪ್ರದರೂಪವಾದ ಸಮಸ್ತ ಜಗತ್ತೂ ಕೇವಲ ಅಧಿಷ್ಠಾನಬ್ರಹ್ಮಸ್ವರೂಪವೇ ಆಗಿದೆಯೆಂದು ತಿಳಿಸಿ ಬ್ರಹ್ಮಾತ್ಮೈಕ್ಯಪೂರ್ಣತೆಯ ಬೋಧನೆಯಿಂದ ಅದ್ವೈತಬ್ರಹ್ಮಸ್ವರೂಪದ ತಿಳಿಸುವಿಕೆಯೇ ಶ್ರುತಿಗೆ ಉದ್ದೇಶವಾಗಿದೆ. ||೧೦೯-೧೧೦||

ಸರ್ವಾತ್ಮಕವಾದ ಬ್ರಹ್ಮಸ್ವರೂಪದ ಜ್ಞಾನಕ್ಕಿಂತಲೂ, ಬೇರೆಯಾದ ನಾನು ಬೇರೆ, ಬ್ರಹ್ಮವು ಬೇರೆ, ಎಂಬ ತಿಳಿವಳಿಕೆಯು ಅಜ್ಞಾನವೇ ಸರಿ. "ಅಥಯೋಽನ್ಯಾಂದೇವತಾಮುಪಾಸ್ತೇಽನ್ಯೋಽಸಾ ವನ್ಯೋಽಹ ಮಸ್ಮೀತಿ ನ ಸ ವೇದ ಯಥಾ ಪಶುಃ ||" ಎಂದು ಶ್ರುತಿಯೂ ಸಹ ಭೇದಜ್ಞಾನವುಳ್ಳವನು ಪಶುವಿನಂತೆ ಅಜ್ಞನೆಂದು ಭೇದಜ್ಞಾನವನ್ನು ನಿಂದಿಸಿ ತಿಳಿಸುತ್ತದೆ. ವಿಚಾರಮಾಡಿದರೂ ಸಹ ಯಾವ ವಿಶೇಷವೂ ಇಲ್ಲದ ಪರತತ್ವ ಜ್ಞಾನವು ದೊರೆಯುವುದು ಬಹಳ ಕಷ್ಟ. ಎಂದರೆ ನಿರ್ವಿಶೇಷಬ್ರಹ್ಮಾತ್ಮೈಕ್ಯ ಸಾಕ್ಷಾತ್ಕಾರವು ಆಯಾಯಾ ವರ್ಣಾಶ್ರಮಧರ್ಮಗಳಿಂದ ಸಂತೋಷಗೊಳಿಸಲ್ಪಟ್ಟ ಪರಮೇಶ್ವರನ ಪ್ರಸಾದದಿಂದ ಮಾತ್ರ ದೊರೆಯಬೇಕಾದುದರಿಂದ ಅದನ್ನು ಸಂಪಾದಿಸುವುದು ಬಹಳ ಕಷ್ಟಸಾಧ್ಯವೇ ಸರಿ. ||೧೧೧-೧೧೨||

ಯಥಾ ಯಥಾ ಸ್ವಭಾವೇನ ಯದ್ಯದ್ಭಾತಿ ಸುರರ್ಷಭಾಃ ।
ತಥಾ ತಥಾ ಶಿವೋ ಭಾತಿ ಸ್ವಯಮೇವ ನ ಚಾಪರಃ ॥೧೧೩॥

ಯಥಾ ಯಥಾ ಪ್ರಭಾ ಸಾಕ್ಷಾಚ್ಚಾಂಭವೀ ಸಾ ನ ಚಾಪರಾ ।
ಇತಿ ನಿಶ್ಚಯ ವಿಜ್ಞಾನಂ ಪರಮಾದ್ವೈತ ವೇದನಂ ॥೧೧೪॥

ಯಥಾ ಯಥಾಽವಭಾಸೋಽಯಂ ಶಿವ ಏವೇತಿ ಪಶ್ಯತಿ ।
ತಥಾ ತಥಾ ಮಹಾದೇವಂ ಭಜತೇಽಯತ್ನತಸ್ತು ಸಃ ॥೧೧೫॥

ಓ ಸುರಶ್ರೇಷ್ಠರೇ, ಘಟ, ಪಟಾದಿ ಪದಾರ್ಥಗಳು ಜೀವರಿಗೆಯಾವ ಯಾವ ರೀತಿಯಾಗಿ ಅವರವರ ಸ್ವಭಾವಾನುಸಾರವಾಗಿ ತೋರುತ್ತದೆಯೋ ಆಯಾಯ ರೀತಿಯಾಗಿ ಆ ಘಟಾದಿಗಳಿಗೆ ಅಧಿಷ್ಠಾನಭೂತನಾದ ಶಿವನೇ ಸ್ಫುರಿಸುತ್ತಾನೆ. ಇದು ಹೊರತು ಇನ್ನು ಯಾವುದೂ ಸಂಸ್ಕೃತನಾದ ಜ್ಞಾನಿಗೆ ತೋರುವುದಿಲ್ಲ. ||೧೧೩||

ಈ ರೀತಿಯಾಗಿ ಭಾನಸಾಮಾನ್ಯವೂ ಸಹ ಪಾರಮಾರ್ಥಿಕದೃಷ್ಟಿಯಿಂದ ಶಿವಸ್ವರೂಪವೆಂದು ಹೇಳಿ ತಿಳಿಸಿಯಾಯಿತು. ಈಗ ಅದರ ಅನುಸಂಧಾನ ಪ್ರಕಾರವನ್ನು ಉಪದೇಶಿಸುತ್ತಾನೆ. "ಪಟೋ ಭಾತಿ, ಘಟೋ ಭಾತಿ" ಇವೇ ಮುಂತಾದ ಭಾನಗಳಲ್ಲಿ ಯಾವ ಯಾವ ರೀತಿಯಾಗಿ ಚಿತ್ತೆಂಬ ಪ್ರಭೆಯು ಅನುಸ್ಯೂತವಾಗಿದೆಯೋ ಅಂತಹ ಚಿತ್ಪ್ರಭೆಯೇ ಆಯಾಯ ವಿಷಯಾಂತರಗಳನ್ನು ಬಿಟ್ಟು ಸಾಕ್ಷಾತ್ಪರಮೇಶ್ವರ ಸ್ವರೂಪಭೂತವಾದುದೆಂಬ, ಸಂಶಯ ವಿಪರ್ಯಯ(ಭ್ರಾಂತಿ) ಇಲ್ಲದ, ಅನುಸಂಧಾನವೇ (ನಿರಂತರ ಚಿಂತನವೇ) ಉತ್ಕೃಷ್ಟವಾದ ಅದ್ವೈತವಿಜ್ಞಾನವು. ||೧೧೪||

ಈ ರೀತಿಯಾಗಿ ಅನುಸಂಧಾನ ಮಾಡುವವನಿಗೆ ಬಾಹ್ಯವಾದ ಸಮಸ್ತ ವ್ಯಾಪಾರವೂ ಪರಮೇಶ್ವರನ ಭಜನೆಯಾಗುತ್ತದೆ ಎಂಬ ಅಂಶವನ್ನು ತಿಳಿಸುತ್ತಾನೆ. ಯಾವ ಯಾವ ವಸ್ತುವು ಯೋಗಿಗೆ ಪ್ರಮಾಣಗಳಿಂದ ಭಾಸವಾಗುತ್ತದೆಯೋ ಆ ಸಮಸ್ತವನ್ನೂ ವ್ಯವಹರಿಸುತ್ತಾನೆ. ಆದರೂ ಆ ಸಮಸ್ತವೂ ಭಾನಸ್ವರೂಪನಾದ ಶಿವನೆಂಬುದಾಗಿ ಎಷ್ಟೆಷ್ಟರಮಟ್ಟಿಗೆ ಭಾನವಾಗುತ್ತಿರುತ್ತದೋ, ಅಷ್ಟರಮಟ್ಟಿಗೆ ಅವನು ಮಹಾದೇವನ ಭಜನೆಯನ್ನು ಸ್ವಪ್ರಯತ್ನವಿಲ್ಲದೆ ಮಾಡುತ್ತಿರುವನೇ ಹೊರತು ಲೋಕವ್ಯವಹಾರವನ್ನು ಮಾಡುತ್ತಿರುವುದಿಲ್ಲ. ||೧೧೫||

ಯಥಾ ಯಥಾ ಪ್ರಥಾ ಪುಂಸ ಸ್ತದ್ವಸ್ತುಷ್ವನವಸ್ಥಿತಾ ।
ತಥಾ ತಥಾಽನು ಸಂಧಾನಂ ಸ್ವಭಾವೇನೈವ ಪೂಜನಂ ॥೧೧೬॥

ಶಿವರೂಪತಯಾ ಸರ್ವಂ ಯೋ ವೇದ ಸ ಹಿ ತತ್ತ್ವವಿತ್ ।
ಅಶಿವಂ ವೇದ ಯತ್ಕಿಂಚಿ ತ್ಸಏವ ಪರಿಮೋಹಿತಃ ॥೧೧೭॥

ಶಿವಾದನ್ಯತಯಾ ಕಿಂಚಿದಪಿ ಯೋ ವೇದ ಸೋಽಧಮಃ ।
ಶಿವಸ್ಯೈವಾ ಪಚಾರಂ ಹಿ ಕುರುತೇ ಸ ಪಶುರ್ನರಃ ॥೧೧೮॥

ಶಿವರೂಪತಯಾ ಸರ್ವಂ ಯಸ್ಯ ಭಾತಿ ಸ್ವಭಾವತಃ ।
ಸ್ವೇಚ್ಛಾಚಾರಃ ಸಮಾಚಾರ ಸ್ತಸ್ಯ ಚಾರ್ಚಾ ಚ ಶೂಲಿನಃ ॥೧೧೯॥

ಯಥಾ ಯಥಾ ಪ್ರಥಾ ಶಂಭೋಃ ಪ್ರಥಾ ಸಾ ಸಾ ತದರ್ಚನಂ ।
ಇತ್ಯಯತ್ನೇನ ವಿಜ್ಞಾನಾತ್ಪೂಜ್ಯತೇ ಪರಮೇಶ್ವರಃ ॥೧೨೦॥

ಪುರುಷನ ಅಚಂಚಲವಾದ ಮತಿಯು ಯಾವ ಯಾವ ಪ್ರಕಾರದಿಂದ ಆಯಾಯಾ ವಸ್ತುಗಳಲ್ಲಿ ಇರುತ್ತದೆಯೋ ಆಯಾಯಾ ಪ್ರಕಾರದಿಂದ ಆ ಸಮಸ್ತ ವಸ್ತುವಿನಲ್ಲಿಯೂ ಭಾನರೂಪನಾದ ಶಿವನನ್ನೇ ಅನುಸಂಧಾನಮಾಡುತ್ತಾ, ಮಾನಸ ಪೂಜೆಯನ್ನು ಮಾಡುತ್ತಾನೆ. ಸಮಸ್ತ ಪ್ರಪಂಚವೂ ಶಿವನಲ್ಲಿ ಅಧ್ಯಸ್ತವಾದ ಪ್ರಯುಕ್ತ ಸಮಸ್ತವೂ ಶಿವನ ರೂಪವಾಗಿದೆಯೆಂದು ಯಾವನು ತಿಳಿಯುತ್ತಾನೆಯೋ ಅಂತಹವನೇ ಪರಮಾರ್ಥಸ್ವರೂಪವನ್ನು ತಿಳಿದವನು. ಆದರೆ ಯಾವನು ಅಜ್ಞಾನ ದಿಂದ ಯಾವುದಾದರೊಂದು ವಸ್ತುವು ಶಿವನಿಗಿಂತ ಬೇರೆಯಾಗಿದೆಯೆಂದು ತಿಳಿಯು ತ್ತಾನೆಯೋ ಅವನು ಅಧಮನಾಗುತ್ತಾನೆ. ಅಂತಹ ಪಶುವಿನಂತೆ ವಿವೇಕವಿಲ್ಲದ ಮನುಷ್ಯನು ಶಿವನಿಗೆ ಅಪಚಾರವನ್ನೇ ಮಾಡುತ್ತಾನೆ. ||೧೧೬-೧೧೭-೧೧೮||

ಯಾವ ಪರಿಪಕ್ವಮತಿಯಾದ ಯೋಗಿಗೆ ಸ್ವಭಾವವಾಗಿ ಸಮಸ್ತವೂ ಶಿವರೂ ಪವಾಗಿ ತೋರುತ್ತದೆಯೋ ಅಂತಹವನ ನಡತೆಯು ಶಿವಪೂಜೆಯಾಗಿರುತ್ತದೆ. ಎಂದರೆ ಅಂತಹವನು ಸಾಕ್ಷಾತ್ಪರಶಿವನೇ ಆದುದರಿಂದ ತನ್ನ ಎಂದರೆ ಈಶ್ವರನ ಇಚ್ಛಾನುಸಾರವಾಗಿಯೇ ವಿಹರಿಸುತ್ತಾನೆ. ಅಂತಹವನ ನಡೆವಳಿಯು ಎಲ್ಲವೂ ಸಾಕ್ಷಾತ್ ಪರಶಿವನ ಪೂಜೆಯನ್ನು ಮಾಡಿದಂತೆಯೇ ಆಗುತ್ತದೆ. ಎಷ್ಟರಮಟ್ಟಿಗೆ ಅವನ ಮನಸ್ಸಿನಲ್ಲಿ ಶಿವನು ಸ್ಫುರಿಸುತ್ತಿರುತ್ತಾನೋ ಅಷ್ಟರಮಟ್ಟಿಗೆ ಅದು ಸ್ವಾಭಾವಿಕ ವಾದ ಪರಮೇಶ್ವರನ ಪೂಜೆಯು ಎಂದು ತಿಳಿಯುಬಹುದು. ||೧೧೯-೧೨೦||

ಕ್ರೀಡಯಾ ಜಗದಾಕಾರಾ ನಾನ್ಯ ತಶ್ಚಾತ್ಮದೇವತಾ ।
ಕ್ರೀಡಯೈವಾತ್ಮನಾಽಽತ್ಮಾನಂ ಭುಙ್ಕ್ತೇ ಸಾ ತದ್ಧಿ ವೇದನಂ ॥೧೨೧॥

ಇಂದ್ರಿಯಾಕಾರ ಭಾಸಾ ಸಾ ವಿಷಯಾಕಾರ ಭಾಸನಂ ।
ಕ್ರೀಡಯಾ ದೇವತಾ ಭುಙ್ಕ್ತೇ ಸ್ವತ ಇತ್ಯರ್ಚನಂ ಮತಂ ॥೧೨೨॥

ಪರಮಾದ್ವೈತ ವಿಜ್ಞಾನಮಿದಂ ಭವ ಭಯಾಪಹಂ ।
ಭವ ಪ್ರಸಾದತೋ ಲಭ್ಯಂ ಭಾವನಾ ರಹಿತಂ ಪರಂ ॥೧೨೩॥

ಯಥಾ ನಕ್ತಂದೃಶಃ ಸೂರ್ಯಪ್ರಕಾಶೋ ನಾವಭಾಸತೇ ।
ತಥೇದಂ ಪರಮಾದ್ವೈತಂ ಮನುಷ್ಯಾಣಾಂ ನ ಭಾಸತೇ ॥೧೨೪॥

ಪರಮಾತ್ಮ ದೇವತೆಯು ತನ್ನಲ್ಲಿ ಆಶ್ರಿತವಾದ ಮಾಯಾವಶದಿಂದ ಲೀಲೆಯಿಂದಲೇ ಭೋಕ್ತೃಭೋಗ್ಯಭೋಗರೂಪವಾದ ಜಗತ್ತಿನ ಆಕಾರವಾಗಿದೆ. ಮತ್ತೂ ಲೀಲೆಯಿಂದ ಭೋಗ್ಯರೂಪದಿಂದಿರತಕ್ಕ ತನ್ನನ್ನು ಭೋಕ್ತೃರೂಪವಾದ ತನ್ನಿಂದಲೇ ಅನುಭವಿಸುತ್ತಾನೆ. ॥೧೨೧॥

ಮತ್ತು ಪರದೇವತೆಯಾದ ಪರಮಾತ್ಮನೇ ಚಕ್ಷುರಾದಿ ಇಂದ್ರಿಯಗಳಿಂದ ಅರ್ಥಗಳ ವ್ಯವಹಾರದ ಸಮಯದಲ್ಲಿ ಚಕ್ಷುರಾದಿ ಇಂದ್ರಿಯಗಳಿಂದ ಉಂಟಾದ ವೃತ್ತಿಗಳಲ್ಲಿ ಅಭಿವ್ಯಕ್ತವಾದ ಭಾನದಿಂದ ಶಬ್ದಸ್ಪರ್ಶಾದಿ ವಿಷಯಾಕಾರನಾಗಿ ಅದಕ್ಕೆ ಅಧಿಷ್ಠಾನವಾದ ತನ್ನನ್ನೇ ಕ್ರೀಡೆಯಿಂದ ಅನುಭವಿಸುತ್ತಾನೆ. ಈ ರೀತಿಯಾದ ಅನುಸಂಧಾನವು ಪರಮಾದ್ವೈತ ವಿಜ್ಞಾನವಾಗಿರುತ್ತದೆ. ॥೧೨೨॥

ಇಂತಹ ಅತ್ಯಂತ ಉತ್ಕೃಷ್ಟವಾದ ಅದ್ವೈತಭಾನವು ಜನನಮರಣರೂಪವಾದ ಸಂಸಾರದಿಂದುಂಟಾಗತಕ್ಕ ಸುಖದುಃಖಾದಿ ಭಯಗಳನ್ನು ಸಮೂಲವಾಗಿ ಹೋಗಲಾಡಿಸತಕ್ಕದ್ದಾಗಿದೆ. ಮತ್ತು ಪರಶಿವನ ಅನುಗ್ರಹದಿಂದ ಸಿಕ್ಕತಕ್ಕದ್ದಾಗಿಯೂ ನಿರಂತರಭಾವನೆಯಿಂದುಂಟಾದಕಾರಣ, ಮೃತಪುತ್ರ ಸಾಕ್ಷಾತ್ಕಾರದಂತೆ, ಪ್ರಮಾಣಗಳ ಸಹಾಯರಹಿತವಾಗಿಯೇ ಉಂಟಾಗಿ ಪುರುಷಾರ್ಥಸಾಧನವಾಗಿಯೂ ಇರುತ್ತದೆ.॥೧೨೩॥

ಜ್ಞಾನಿಗೆ ವ್ಯವಹಾರ ಸಮಯದಲ್ಲಿಯೂ ಬ್ರಹ್ಮಾತ್ಮಸ್ವರೂಪವು ಸ್ಫುರಿಸುವುದಾದರೆ ಅಜ್ಞರಾದ ಬೇರೆಯವರಿಗೂ ಏಕೆ ಆ ಆತ್ಮಸ್ವರೂಪವು ಪ್ರಕಾಶಿಸಲಾರದು ? ಎಂದರೆ ಅದಕ್ಕೆ ಉತ್ತರವನ್ನು ಹೇಳುತ್ತಾನೆ.—ಮನುಷ್ಯರಿಗೆ ಸೂರ್ಯಪ್ರಕಾಶವು

ಪ್ರಸಾದಾದೇವ ರುದ್ರಸ್ಯ ಶ್ರದ್ಧಯಾ ಸ್ವಸ್ಯ ಧೈರ್ಯತಃ ।
ದೇಶಿಕಾ ಲೋಕನಾಚ್ಚೈವ ಕರ್ಮಸಾಮ್ಯೇ ಪ್ರಕಾಶತೇ ॥೧೨೫॥

ಬಹುಪ್ರಕಾರಂ ಬಹುಶಃ ಶ್ರುತಿಃ ಸಾಧ್ವೀ ಸನಾತನೀ ।
ಏವ ಮೇತಂ ಮಹಾಯಾಸಾದರ್ಥಂ ವದತಿ ದುಃಖಿನಾಂ ॥೧೨೬॥

ಶಿವ ಏವಾಸ್ತಿ ನೈವಾನ್ಯದಿತಿ ಯೋ ನಿಶ್ಚಯಃ ಸ್ಥಿರಃ ।
ಸದಾ ಸ ಏವ ಸಿದ್ಧಾಂತಃ ಪೂರ್ವಪಕ್ಷಾ ಸ್ತಥಾಽಪರೇ ॥೧೨೭॥

ಅಯಮೇವ ಹಿ ವೇದಾರ್ಥೋ ನಾಪರಃ ಪರಮಾಸ್ತಿಕಾಃ ।
ಗೃಹ್ಣಾಮಿ ಪರಶುಂ ತಪ್ತಂ ಸತ್ಯಮೇವ ನ ಸಂಶಯಃ ॥೧೨೮॥

ತೋರುತ್ತಿದ್ದಾಗ್ಯೂ ರಾತ್ರಿಯಲ್ಲಿ ಸಂಚರಿಸತಕ್ಕ ಗೂಬೆ ಮುಂತಾದ ಪ್ರಾಣಿಗಳಿಗೆ ಅದು ಪ್ರಕಾಶಿಸುವುದಿಲ್ಲ. ಹಾಗೆಯೇ ವ್ಯವಹಾರ ಕಾಲದಲ್ಲಿ ಜ್ಞಾನಿಗೆ ಅದ್ವೈತಜ್ಞಾನವು ಸುಲಭವಾಗಿ ಪ್ರಕಾಶಿಸಿದರೂ, ಅಜ್ಞಾನಿಗಳಿಗೆ ಹಾಗೆ ಅದು ತೋರಲಾರದು. ||೧೨೪||

ಆದರೂ ಇಂತಹ ಉತ್ಕೃಷ್ಟವಾದ ಜ್ಞಾನವು, ರುದ್ರನ ಅನುಗ್ರಹದಿಂದಲೂ ಗುರುವೇದಾಂತವಾಕ್ಯಗಳಲ್ಲಿ ವಿಶ್ವಾಸಬುದ್ಧಿಯಿಂದಲೂ, ಜ್ಞಾನಿಯ ಮನಸ್ಸಿನ ನಿಶ್ಚಂಚಲತೆಯಿಂದಲೂ, ಗುರುಗಳ ಈಕ್ಷಣಶಾಂತಿಪೂರ್ವಕವಾದ ಉಪದೇಶದಿಂದಲೂ, ಕರ್ಮವು ನಷ್ಟವಾಗಲು ಅದ್ವೈತಭಾನವು ಪ್ರಕಾಶಿಸುತ್ತದೆ. ||೧೨೫||

ಈ ರೀತಿಯಾಗಿ ನಿತ್ಯ ನಿರ್ದೋಷವಾದ ಶ್ರುತಿಯು ತಾಯಿತಂದೆಗಳಂತೆ ಹಿತಕಾರಿಯಾಗಿ ದುಃಖಿಗಳಾದ ಜನಗಳನ್ನುದ್ಧರಿಸಲು ನಾನಾಮುಖವಾಗಿ ಬಹಳ ಕಷ್ಟಪಟ್ಟು ಬ್ರಹ್ಮಾತ್ಮೈಕ್ಯಾನುಭವಕ್ಕೆ ಸಾಧನವಾದ ಜ್ಞಾನವನ್ನು ಉಪದೇಶಿಸುತ್ತದೆ. ||೧೨೬||

ಅಭ್ಯಾಸವು ತಾತ್ಪರ್ಯಗ್ರಾಹಕ ಲಿಂಗವಾದುದರಿಂದ ಅನೇಕಾವರ್ತಿ ಅಭ್ಯಸ್ಯಮಾನವಾದ ಬ್ರಹ್ಮಾತ್ಮೈಕ್ಯರೂಪವಾದ ಅರ್ಥವೇ ಶ್ರುತಿಗೆ ಮುಖ್ಯ ತಾತ್ಪರ್ಯವಿಷಯವು. ಬೇರೆ ಯಾವ ವಿಷಯದಲ್ಲಿಯೂ ಶ್ರುತಿಗೆ ತಾತ್ಪರ್ಯವಿಲ್ಲವೆಂಬ ಅಂಶವನ್ನು ಉಪಸಂಹಾರಮಾಡುತ್ತಾರೆ. ಶಿವನೊಬ್ಬನೇ ಸತ್ಯವಾಗಿರುತ್ತಾನೆ. ಇನ್ನು ಯಾವುದೂ ಇರುವುದಿಲ್ಲವೆಂಬ ನಿಶ್ಚಯವೇ ಯಾವಾಗಲೂ ಸಿದ್ಧಾಂತವಾಗಿರುತ್ತದೆ. ಉಳಿದವು ಎಲ್ಲವೂ ಪೂರ್ವಪಕ್ಷಗಳು. ||೧೨೭||

ಓ ಆಸ್ತಿಕಶಿರೋಮಣಿಗಳೇ, ಈ ಬ್ರಹ್ಮಸ್ವರೂಪದಲ್ಲಿಯೇ ವೇದಕ್ಕೆ ಪರಮ ತಾತ್ಪರ್ಯವಿರುವುದು. ಇನ್ನು ಯಾವುದರಲ್ಲಿಯೂ ಮುಖ್ಯ ತಾತ್ಪರ್ಯವಿಲ್ಲ. ಕಾಯಿಸಿದ

ಅಯಮೇವ ಹಿ ಸತ್ಯಾರ್ಥೋಽ ನಾಪರಃ ಪರಮಾಸ್ತಿಕಾಃ ।
ವಿಶ್ವಾಸಾರ್ಥಂ ಶಿವಂ ಸ್ಪೃಷ್ಟ್ವಾ ತ್ರಿರ್ವಃ ಶಪಥಯಾಮ್ಯಹಂ ॥೧೨೯॥

ಅಯಮೇವ ಹಿ ವೇದಾರ್ಥೋಽ ನಾಪರಃ ಪರಮಾಸ್ತಿಕಾಃ ।
ಅನ್ಯಥಾ ಚೇತ್ಸುರಾಃ ಸತ್ಯಂ ಮೂರ್ಧಾ ಮೇಽತ್ರ ಪತಿಷ್ಯತಿ ॥೧೩೦॥

ಅಯಮೇವ ಹಿ ಸತ್ಯಾರ್ಥೋಽ ನಾಪರಃ ಪರಮಾಸ್ತಿಕಾಃ ।
ಅತ್ರೈವ ಸನ್ನಿಧಿಂ ದೇವೋ ವಿಶ್ವಾಸಾರ್ಥಂ ಕರಿಷ್ಯತಿ ॥೧೩೧॥

॥ ಸೂತ ಉವಾಚ ॥

ಏವಮುಕ್ತ್ವಾತು ಭಗವಾನ್ಬ್ರಹ್ಮಾ ಸರ್ವಹಿತೇ ರತಃ ।
ಪ್ರಣಮ್ಯ ದಂಡವದ್ಭೂಮೌ ಭಕ್ತ್ಯಾಪರವಶೋಽಭವತ್ ॥೧೩೨॥

ಅಸ್ಮಿನ್ನವಸರೇ ಶ್ರೀಮಾನ್ ಶಂಕರಃ ಶಶಿಶೇಖರಃ ।
ನೀಲಕಂಠೋ ವಿರೂಪಾಕ್ಷಃ ಸಾಂಬಃ ಸಾಕ್ಷಾತ್ ಘೃಣಾನಿಧಿಃ॥೧೩೩॥

ಬ್ರಹ್ಮವಿಷ್ಣುಮಹೇಶಾದ್ಯೈರುಪಾಸ್ಯೋಽ ಗುಣಮೂರ್ತಿಭಿಃ ।
ಆವಿರ್ಬಭೂವ ಸರ್ವಜ್ಞಸ್ತತ್ರೈವ ಸುರಸನ್ನಿಧೌ ॥೧೩೪॥

ಕೊಡಲಿಯನ್ನು ಮುಟ್ಟಿ ಹೇಳುತ್ತೇನೆ. ಈ ವಿಷಯದಲ್ಲಿ ಸಂದೇಹವಿಲ್ಲ. ಸತ್ಯವಾಗಿ ಹೇಳುತ್ತೇನೆ. ಮತ್ತು ಬ್ರಹ್ಮತತ್ತ್ವವೇ ಸತ್ಯವಾದ ಅರ್ಥವು. ಇನ್ನು ಯಾವುದೂ ಸತ್ಯವಲ್ಲ. ಈ ವಿಷಯದಲ್ಲಿ ನಿಮಗೆ ನಂಬಿಕೆ ಬರಬೇಕಾದರೆ ಶಿವನನ್ನು ಮುಟ್ಟಿ ಮೂರು ಸಾರಿ ಶಪಥಮಾಡಿ ಹೇಳುತ್ತೇನೆ. ಈ ಪರಮಾತ್ಮಸ್ವರೂಪವೇ ವೇದಾರ್ಥವು. ಹಾಗಿಲ್ಲದಿದ್ದರೆ ಈಗಲೇ ನನ್ನ ಶಿರಸ್ಸು ಕೆಳಗೆ ಬೀಳುತ್ತದೆ. ॥೧೨೮-೧೨೯-೧೩೦॥

ಎಲೈ ಆಸ್ತಿಕಶಿಖಾಮಣಿಗಳೇ, ಈ ಪರಮಾತ್ಮನಸ್ವರೂಪವೇ ವೇದದ ಪರಮಾರ್ಥವು. ಇನ್ನು ಯಾವುದೂ ಅಲ್ಲ. ಈ ವಿಷಯದಲ್ಲಿ ನಂಬಿಕೆಯನ್ನುಂಟು ಮಾಡಲು ಸಾಕ್ಷಾತ್ಪರಶಿವನೇ ಸನ್ನಿಹಿತನಾಗುತ್ತಾನೆ. ॥೧೩೧॥

ಸೂತನು ಹೇಳಿದನು—ಈ ರೀತಿಯಾಗಿ ಸಮಸ್ತರಿಗೂ ಹಿತವನ್ನುಂಟು ಮಾಡುವ, ಷಡ್ಗುಣೈಶ್ವರ್ಯಸಂಪನ್ನನಾದ ಬ್ರಹ್ಮನು ನೆಲದಲ್ಲಿ ಸಾಷ್ಟಾಂಗವಾಗಿ ನಮಸ್ಕರಿಸಿ ಭಕ್ತಿಯಿಂದ ಎಚ್ಚರ ತಪ್ಪಿದನು, ಭಾವಸಮಾಧಿಯಲ್ಲಿ ಮಗ್ನನಾದನು. ಈ ಮಧ್ಯದಲ್ಲಿ ಸಕಲ ಸಂಪತ್ತುಳ್ಳವನೂ, ಮೂರುಕಣ್ಣುಳ್ಳವನೂ, ದೇವೀಸಹಿತನೂ,

ಆಸನಂ ವಿಮಲಂ ದಿವ್ಯಂ ಶಿವಾರ್ಹಂ ಹೈಮಮುದ್ಭುತಂ ।
ಆಗತಂ ತತ್ರ ಭಗವಾನಾಸ್ತೇ ತಸ್ಮಿನ್ಯಥಾಸುಖಂ ॥೧೩೫॥

ವಿಷ್ಣುರ್ವಿಶ್ವ ಜಗತ್ಕರ್ತಾ ಶಿವಸ್ಯಾಮಿತ ತೇಜಸಃ ।
ಬುದ್ಧ್ವೋದ್ಯೋಗಂ ಮಹಾಪ್ರೀತಸ್ತತ್ರ ಸನ್ನಿಹಿತೋಽಭವತ್ ॥೧೩೬॥

ಪುಷ್ಪವೃಷ್ಟಿರಭವತ್ಪುನಃ ಪುನಃ ।
ಶಬ್ದಿತಂ ಚ ಮುನಿಭಿಃ ಸನಾತನೈಃ ॥
ಶುದ್ಧವೇದವಚನೈಃ ಸುಶೋಭನೈಃ ।
ಭಕ್ತಿಮದ್ಭಿರಪಿ ಪೂಜನಂ ಕೃತಂ ॥೧೩೭॥

ಉಚ್ಚಮಂದ ಮೃದು ತೀವ್ರಕಾಹಲೈಃ ।
ಶಬ್ಧಿತಂ ಚ ಪಟಹಾದಿ ಭಿಸ್ತಥಾ ॥
ತಾಲಮಾನ ಕುಶಲೈ ಸ್ತಥಾಽಪರೈಃ ।
ಭೇರಿಕಾದಿಕುಶಲೈಃ ಸುಘೋಷಿತಂ ॥೧೩೮॥

ದಯೆಗೆ ಗಣಿಯಂತಿರತಕ್ಕವನೂ, ಸತ್ವರಜಸ್ತಮೋಗುಣಗಳೇ ಉಪಾಧಿಯಾಗುಳ್ಳ, ಬ್ರಹ್ಮವಿಷ್ಣು ಮಹೇಶ್ವರರಿಂದ ಉಪಾಸನೆಮಾಡಿಸಿಕೊಳ್ಳುವವನೂ, ಸರ್ವಜ್ಞನೂ ಆದ ಸಾಕ್ಷಾತ್ ಶಂಕರನು ದೇವತೆಗಳ ಸಮೀಪದಲ್ಲಿ ಪ್ರತ್ಯಕ್ಷನಾದನು. ॥೧೩೩-೧೩೪॥

ಹೀಗೆ ಶಿವನು ಪ್ರತ್ಯಕ್ಷನಾಗಲು ಅಲ್ಲಿ ಪರಿಶುದ್ಧವಾಗಿಯೂ, ದೇವತಾಸಂಬಂಧವಾಗಿಯೂ, ಶಿವನಿಗೆ ಕುಳಿತುಕೊಳ್ಳಲು ಯೋಗ್ಯವಾಗಿಯೂ, ಸುವರ್ಣಮಯವಾಗಿಯೂ, ಆಶ್ಚರ್ಯಕರವಾಗಿಯೂ, ಇರುವ ಒಂದು ಆಸನವು ಬಂದಿತು. ಅದರಲ್ಲಿ ಶಿವನು ಸುಖವಾಗಿ ಕುಳಿತುಕೊಂಡನು. ಸಮಸ್ತ ಜಗತ್ತಿಗೆ ಕರ್ತನಾದ ವಿಷ್ಣುವು ಹೆಚ್ಚಾದ ತೇಜಸ್ಸುಳ್ಳ ಶಿವನ ಉದ್ಯೋಗವನ್ನು ತಿಳಿದವನಾಗಿ ಬಹಳ ಪ್ರೀತಿಯಿಂದ ಅಲ್ಲಿ ಸನ್ನಿಹಿತನಾದನು. ॥೧೩೫-೧೩೬॥

ಹೀಗೆ ಪರಮಾತ್ಮನು ಪ್ರತ್ಯಕ್ಷನಾಗಲು ಮತ್ತೆ ಮತ್ತೆ ಪುಷ್ಪಗಳ ಮಳೆಯಾಯಿತು. ಪ್ರಾಚೀನರಾದ ಮಹಾಮುನಿಗಳು ನಾನಾವಿಧವಾದ ಸ್ತೋತ್ರಗಳಿಂದ ಶಬ್ದವನ್ನು ಮಾಡಿದರು. ಭಕ್ತಿಯುಳ್ಳ ಕೆಲವರು ಮಂಗಳಕರಗಳಾದ ರುದ್ರಸೂಕ್ತವೇ ಮುಂತಾದ ವೇದದ ವಾಕ್ಯಗಳಿಂದ ಶಿವನನ್ನು ಪೂಜಿಸಿದರು. ತಾರವಾಗಿಯೂ, ಮಧ್ಯಮರೀತಿಯಲ್ಲಿಯೂ, ಮೃದುವಾಗಿಯೂ, ಕರ್ಣಕಠೋರವಾಗಿಯೂ ಶಬ್ದವುಳ್ಳ

ಅಪ್ಸರೋಭಿ ರಪಿ ನರ್ತನಂ ಕೃತಂ ।
ಗಾಯನ್ನೈಶ್ಚ ಸಹಿತೈರ್ಮಹತ್ತರೈಃ ॥
ಗೀತಮಾಶು ಕವಿಭಿಶ್ಚ ಕೀರ್ತಿತಂ ।
ಸ್ಥಾನಮಾಶ ದೃಶಿಗೋಚರಂ ದ್ವಿಜಾಃ ॥೧೩೯॥

ವಿಸ್ಮಿತಾಶ್ಚ ಮುನಯಶ್ಚ ಕೇಚನ ।
ಶ್ರದ್ಧಯೈವ ಶಿರಸಾ ಚ ನರ್ತಿತಾಃ ॥
ಮುಷ್ಟಿಯುದ್ಧಮಪಿ ಕುರ್ಯುರಾಸ್ತಿಕಾಃ ।
ಶ್ರದ್ಧಯಾ ಚ ಪರಯಾ ಚ (ಯೈವ)ಕೇಚನ ॥೧೪೦॥

ಮಸ್ತಕೇನ ಮನುಜಾನತಿಪ್ರಿಯಾನ್ ।
ಪೃಷ್ಠತಶ್ಚ ಚರಣೇನ ಪಾಣಿನಾ ॥
ದಂಡರಜ್ಜುಶಿಬಿಕಾದಿಭಿ ಸ್ತಥಾ ।
ಕೇಚಿದಶ್ವ ನಿಕರೈರ್ವಹಂತಿ ಚ ॥೧೪೧॥

ಪಟಹವೆಂಬ ವಾದ್ಯವನ್ನು ಶಬ್ದಮಾಡಿದರು. ಇನ್ನು ಕೆಲವು ತಾಳಜ್ಞರು ಭೇರಿಯೇ ಮುಂತಾದ ವಾದ್ಯಗಳನ್ನು ಬಾರಿಸಿದರು. ||೧೩೭-೧೩೮||

ಒಳ್ಳೆಯ ಗಾನವನ್ನು ಮಾಡುತ್ತಾ ಅಪ್ಸರಸ್ತ್ರೀಯರು ನರ್ತನವನ್ನು ಮಾಡಿದರು. ಕವಿಗಳು ನಾನಾವಿಧವಾದ ಗೀತಗಳನ್ನು ಹಾಡಿದರು. ಬ್ರಾಹ್ಮಣರು ಶಿವನ ಎದುರಿಗೆ ದರ್ಶನಕ್ಕಾಗಿ ಬಂದರು. ||೧೩೯||

ಓ ಆಸ್ತಿಕರೇ, ಆಶ್ಚರ್ಯಗೊಂಡ ಕೆಲವು ಋಷಿಗಳು ಬಹಳ ಶ್ರದ್ಧೆಯೊಡನೆ ತಲೆಯಿಂದ ನರ್ತನವನ್ನು ಮಾಡಿದರು. ಇನ್ನು ಕೆಲವು ಮುನಿಗಳು ಶ್ರದ್ಧೆಯಿಂದ ಮುಷ್ಟಿಗಳಿಂದ ಹೊಡೆದಾಡುತ್ತಾ ಯುದ್ಧವನ್ನು ಮಾಡಿಪರು. ||೧೪೦||

ಕೆಲವರು ತಮಗೆ ಪ್ರೀತಿಪಾತ್ರರಾದವರನ್ನು ತಲೆಯಿಂದಲೂ, ಕಾಲಿನಿಂದಲೂ, ಕೈಯ್ಯಿಂದಲೂ, ಕೋಲು, ಹಗ್ಗ, ಪಲ್ಲಕ್ಕಿ, ಕುದುರೆಗಳು ಮುಂತಾದುವುಗಳಿಂದಲೂ ಇನ್ನೂ ಕೆಲವರು ಅಶ್ವನಿಕರವೆಂಬ ಆಸನವಿಶೇಷಗಳಿಂದಲೂ ಸಹ ಧರಿಸುತ್ತಾರೆ. ಇನ್ನು

ಬಂಧನಂ ಚ ನಿಗಡೈಶ್ಚ ಗರ್ವಿತಾ ।
ಮೋಚನಂ ಚ ಮನುಜಾ ನತಿಪ್ರಿಯಾನ್ ॥
ಕುರ್ಯುರಸ್ತ್ರ ನಿಕರೈಶ್ಚ ಕೇಚನ ।
ಚ್ಛೇದನಂ ಚ ವಿವಶಾಶ್ಚ ಕೇಚನ ॥೧೪೨॥

ಅನ್ಯೋನ್ಯಮಾಲಿಂಗನ ಮಾಚರಂತಿ ।
ಪ್ರಿಯೇಣ ಕೇಚಿನ್ಮನಯಶ್ಚ ಕೇಚಿತ್ ॥
ಧಾವಂತಿ ವೇಗೇನ ಪಟಂ ವಿಸೃಜ್ಯ ।
ಪ್ರಿಯೇಣ ಚಾನ್ಯಾನಪಿ ತಾಡಯಂತಿ ॥೧೪೩॥

ವಿಲೋಕ್ಯ ಸರ್ವಂ ಶಿವಯಾ ಶಿವೋಽಪಿ ।
ಪ್ರಹೃಷ್ಟ ಚಿತ್ತಸ್ತು ನಿವಾರ್ಯ ಸರ್ವಾನ್ ॥
ಹರಿಂ ವಿರಿಂಚಿಂ ಚ ಸುರಾನಶೇಷಾ ।
ನತಿ ಪ್ರಿಯೇಣೈವ ನಿರೀಕ್ಷ್ಯ ವಿಪ್ರಾಃ ॥೧೪೪॥

ಉವಾಚ ಸತ್ಯಂ ಕರುಣಾನಿಧಾನಃ ।
ಶ್ರುತಿ ಪ್ರಮಾಣೈಕ ಸುನಿಶ್ಚಿತಾರ್ಥಃ ॥
ಹಿತಾಯ ಲೋಕಸ್ಯ ಸುರಾಸುರಾದ್ಯೈಃ ।
ಪ್ರಪೂಜನೀಯಶ್ಚ ಸದಾ ಮಹೇಶಃ ॥೧೪೫॥

ಕೆಲವರು ಶಿವನು ಪ್ರತ್ಯಕ್ಷನಾದುದನ್ನು ನೋಡಿ ಸುಖಪರಾಧೀನರಾಗಿ ತಮಗೆ ಪ್ರೀತಿ ಪಾತ್ರರಾದವರುಗಳನ್ನು ಹಗ್ಗಗಳಿಂದ ಕಟ್ಟುಹಾಕಿ ಬಿಚ್ಚುತ್ತಾರೆ. ಇನ್ನು ಕೆಲವರು ಕೆಲವರು ಖಡ್ಗಾದಿಗಳಿಂದ ಕತ್ತರಿಸುತ್ತಾರೆ. ||೧೪೧-೧೪೨||

ಇನ್ನು ಕೆಲವು ಮುನಿಗಳು ಪ್ರೀತಿಯಿಂದ ಪರಸ್ಪರವಾಗಿ ಆಲಿಂಗಿಸಿಕೊಂಡರು. ಆನಂದಾತಿಶಯಕ್ಕೆ ಪರವಶರಾಗಿ, ಇನ್ನು ಕೆಲವರು ಬಟ್ಟೆಯನ್ನೂ ಸಹ ಬಿಟ್ಟು ಓಡಿದರು. ಇನ್ನು ಕೆಲವು ಮುನಿಗಳು ಪರಸ್ಪರವಾಗಿ ಹೊಡೆದುಕೊಂಡರು. ||೧೪೩||

ಓ ವಿಪ್ರರೇ, ದೇವಿಯೊಡನಿರತಕ್ಕ ಶಿವನು ಈ ಸಮಸ್ತ ವ್ಯಾಪಾರಗಳನ್ನೂ ನೋಡಿ ಅವರೆಲ್ಲರನ್ನೂ ತಡೆದು ಬಹಳ ಸಂತೋಷಗೊಂಡವನಾಗಿ ಹರಿಯನ್ನೂ ಬ್ರಹ್ಮನನ್ನೂ ಸಮಸ್ತ ದೇವತೆಗಳನ್ನೂ ಅನುಗ್ರಹದೃಷ್ಟಿಯಿಂದ ನೋಡಿದನು. ಅನಂತರ ಕರುಣಾನಿಧಿಯೂ, ಶ್ರುತಿಪ್ರಮಾಣದಿಂದ ನಿಶ್ಚಿತನಾದವನೂ, ಲೋಕ

॥ ಈಶ್ವರ ಉವಾಚ ॥

ಅಹಂ ಚ ಸರ್ವಂ ನ ಚ ಕಿಂಚಿದನ್ಯತ್ ।
ನಿರೂಪಣಾಯಾ ಮನಿರೂಪಣಾಯಾಂ ।
ಇಯಂ ಹಿ ವೇದಸ್ಯ ಪರಾ ಹಿ ನಿಷ್ಠಾ ।
ಮಮಾನುಭೂತಿಶ್ಚ ನ ಸಂಶಯಶ್ಚ ॥೧೪೬॥

ಅಹಂ ಸದಾಽಧಶ್ಚ ತಥಾಽಹಮೂರ್ಧ್ವಂ ।
ತ್ವಹಂ ಪುರಸ್ತಾದಹ ಮೇವ ಪಶ್ಚಾತ್ ॥
ಅಹಂ ಚ ಸವ್ಯೇತರ ಮಾಸ್ತಿಕಾ ಸ್ತಥಾ ।
ತ್ವಹಂ ಸದೈವೋತ್ತರತೋಽಂತರಾಲಂ ॥೧೪೭॥

ಕಲ್ಯಾಣಕ್ಕಾಗಿ ಸುರಾಸುರ ನರರಿಂದ ಪೂಜಿಸಲ್ಪಟ್ಟವನೂ, ಆದ ಮಹೇಶ್ವರನು. ಮುಂದೆ ಹೇಳುವಂತೆ ಮಾತನಾಡಿದನು. ॥೧೪೪-೧೪೫॥

ಈಶ್ವರನು ಹೇಳಿದನು—"ಐತದಾತ್ಮ್ಯಮಿದಂಸರ್ವಂ" ಎಂದು ಶ್ರುತಿಯು ಹೇಳುವಂತೆ ಭೋಕ್ತೃ, ಭೋಗ್ಯ, ಭೋಗರೂಪವಾದ ಸಮಸ್ತ ಜಗತ್ತೂ ಬ್ರಹ್ಮರೂಪ ವಾಗಿದೆ. ಎಂದು ಬ್ರಹ್ಮನು ದೇವತೆಗಳನ್ನು ಕುರಿತು ಹೇಳಿದನು. ಅದು ಸತ್ಯವಾದು ದೆಂದು ಪರಮೇಶ್ವರನು ತನ್ನ ಸಾರ್ವಾತ್ಮ್ಯವನ್ನು ಪ್ರಕಟಿಸುತ್ತಾನೆ. ವಿಚಾರದ ದೆಸೆ ಯಲ್ಲಿ ರಜ್ಜುವಿನಲ್ಲಿ ಸರ್ಪವು ಅಧ್ಯಸ್ತವಾದಂತೆ ಗೊತ್ತಾಗಲು, ಅಜ್ಞಾನದಿಂದ ಕಲ್ಪಿತ ವಾದ ಈ ಸಮಸ್ತವೂ ನನ್ನಲ್ಲಿಯೇ ಲೀನವಾಗುವುದರಿಂದ ನನಗಿಂತಲೂ ಅತಿರಿಕ್ತ ವಾದುದು ಯಾವುದೂ ಇರುವುದಿಲ್ಲವು. ವಿಚಾರವಿಲ್ಲದಕಾಲದಲ್ಲಿ ಅಧ್ಯಸ್ತವಾದುದು ವಾಸ್ತವವಾಗಿ ಇಲ್ಲದೇ ಕೇವಲ ಅಧಿಷ್ಠಾನವು ಪ್ರಪಂಚಾಕಾರವಾಗಿ ಭಾಸವಾಗುವುದ ರಿಂದ ಆಗಲೂ ನಾನೊಬ್ಬನೇ ಸರಿ. ಇದೇ ಶ್ರುತಿಗೆ ಪರಮ ತಾತ್ಪರ್ಯವು. ನನ್ನ ಸಾಕ್ಷಾತ್ಕಾರವೇ ಪರಾಕಾಷ್ಠೆಯು. ಎಂದರೆ ನನ್ನನ್ನು ತಿಳಿದಮೇಲೆ ಇನ್ನು ಯಾವು ದನ್ನೂ ತಿಳಿಯಬೇಕಾದ ಅಂಶವೇ ಇರುವುದಿಲ್ಲ. ಇದೇ ಕೊನೆಯಾದುದು. ॥೧೪೬॥

"ಸ ಏವಾಧಸ್ತಾತ್ ಸ ಉಪರಿಷ್ಟಾತ್" ಎಂದು ಸನತ್ಕುಮಾರ ನಾರದರ ಸಂವಾದದಲ್ಲಿ ಭೂಮವಿದ್ಯೆಯಲ್ಲಿ ಹೇಳಿದೆ. ಹಾಗೆಯೇ ಪ್ರಸಂಗವಶದಿಂದ ಅದರ ಅರ್ಥವನ್ನು ವಿವರಿಸುತ್ತಾನೆ. ನಾನು ಅಧೋಭಾಗದಲ್ಲಿಯೂ, ಮೇಲೆಯೂ ಮುಂಭಾಗದಲ್ಲಿಯೂ, ಹಿಂಭಾಗದಲ್ಲಿಯೂ, ಎಡಬಲಭಾಗಗಳಲ್ಲಿಯೂ, ಉತ್ತರ

ಪರೋಕ್ಷರೂಪೇಣ ಸುಸಂಸ್ಥಿತೋऽಹಂ ।
 ತಥಾऽ ಪರೋಕ್ಷೇಣ ಸುಸಂಸ್ಥಿತೋऽಹಂ ॥
ಅನಾತ್ಮರೂಪೇಣ ಸುಸಂಸ್ಥಿತೋऽಹಂ ।
 ಸದಾತ್ಮರೂಪೇಣ ಸುಸಂಸ್ಥಿತೋऽಹಂ ॥೧೪೮॥

ಜೈವೇನ ರೂಪೇಣ ಸುಸಂಸ್ಥಿತೋऽಹಂ ।
 ತಥೇಶರೂಪೇಣ ಸುಸಂಸ್ಥಿತೋऽಹಂ ॥
ಅಜ್ಞಾನರೂಪೇಣ ಸುಸಂಸ್ಥಿತೋऽಹಂ ।
 ವಿಜ್ಞಾನರೂಪೇಣ ಸುಸಂಸ್ಥಿತೋऽಹಂ ॥೧೪೯॥

ಸಂಸಾರರೂಪೇಣ ಸುಸಂಸ್ಥಿತೋऽಹಂ ।
 ಕೈವಲ್ಯರೂಪೇಣ ಸುಸಂಸ್ಥಿತೋऽಹಂ ॥
ಶಿಷ್ಯಾದಿರೂಪೇಣ ಸುಸಂಸ್ಥಿತೋऽಹಂ ।
 ಗುರ್ವಾದಿರೂಪೇಣ ಸುಸಂಸ್ಥಿತೋऽಹಂ ॥೧೫೦॥

ವೇದಾದಿರೂಪೇಣ ಸುಸಂಸ್ಥಿತೋऽಹಂ ।
 ಸ್ಮೃತ್ಯಾದಿರೂಪೇಣ ಸುಸಂಸ್ಥಿತೋऽಹಂ ॥
ಪುರಾಣರೂಪೇಣ ಸುಸಂಸ್ಥಿತೋऽಹಂ ।
 ಕಲ್ಪಾದಿರೂಪೇಣ ಸುಸಂಸ್ಥಿತೋऽಹಂ ॥೧೫೧॥

ಭಾಗದಲ್ಲಿಯೂ ಸಹ ಯಾವಾಗಲೂ ನಾನೇ ಇರುತ್ತೇನೆ. ಎಂದರೆ ಸರ್ವವನ್ನೂ ವ್ಯಾಪಿಸಿಕೊಂಡಿರುತ್ತೇನೆ. ॥೧೪೭॥

ನಾನು ಪರೋಕ್ಷ (ಇಂದ್ರಿಯಗಳ ಮೂಲಕ ಗೋಚರವಾದುದರ) ರೂಪದಿಂದಲೂ, ಸಾಕ್ಷಾತ್ತಾಗಿ ಅಪರೋಕ್ಷ (ಇಂದ್ರಿಯಗಳಿಗೆ ಗೋಚರವಲ್ಲದುದರ) ರೂಪದಿಂದಲೂ, ಅನಾತ್ಮವಾದಘಟಾದಿ ರೂಪದಿಂದಲೂ, ಯಾವಾಗಲೂ ಎಲ್ಲರ ಆತ್ಮರೂಪವಾಗಿಯೂ, ಜೀವರೂಪವಿಂದಲೂ, ಪರಮೇಶ್ವರನ ರೂಪದಿಂದಲೂ, ಅಜ್ಞಾನರೂಪದಿಂದಲೂ, ವಿಜ್ಞಾನರೂಪದಿಂದಲೂ, ಸಂಸಾರರೂಪದಿಂದಲೂ, ಮೋಕ್ಷರೂಪದಿಂದಲೂ, ಗುರು ಮತ್ತು ಶಿಷ್ಯರ, ಸ್ವರೂಪದಿಂದಲೂ ಇರುತ್ತೇನೆ. ॥೧೪೮-೧೪೯-೧೫೦॥

ನಾನು ವೇದಗಳ ಮತ್ತು ಸ್ಮೃತಿ, ಪುರಾಣ, ಕಲ್ಪ, ಕಾಲ ಇವುಗಳ ಸ್ವರೂಪನಾಗಿಯೂ, ಪ್ರಮಾತೃ (ಇಂದ್ರಿಯಗಳ ಮೂಲಕ ಜ್ಞಾನವನ್ನು ಪಡೆಯುವವನು.)

ಪ್ರಮಾತೃರೂಪೇಣ ಸುಸಂಸ್ಥಿತೋಽಹಂ ।
ಪ್ರಮಾಣರೂಪೇಣ ಸುಸಂಸ್ಥಿತೋಽಹಂ ॥
ಪ್ರಮೇಯರೂಪೇಣ ಸುಸಂಸ್ಥಿತೋಽಹಂ ।
ಮಿತಿಸ್ವರೂಪೇಣ ಸುಸಂಸ್ಥಿತೋಽಹಂ ॥೧೫೨॥

ಕರ್ತೃಸ್ವರೂಪೇಣ ಸುಸಂಸ್ಥಿತೋಽಹಂ ।
ಕ್ರಿಯಾಸ್ವರೂಪೇಣ ಸುಸಂಸ್ಥಿತೋಽಹಂ ॥
ತದ್ಧೇತುರೂಪೇಣ ಸುಸಂಸ್ಥಿತೋಽಹಂ ।
ಫಲಸ್ವರೂಪೇಣ ಸುಸಂಸ್ಥಿತೋಽಹಂ ॥೧೫೩॥

ಭೋಕ್ತೃಸ್ವರೂಪೇಣ ಸುಸಂಸ್ಥಿತೋಽಹಂ ।
ಭೋಗಸ್ವರೂಪೇಣ ಸುಸಂಸ್ಥಿತೋಽಹಂ ॥
ತದ್ಧೇತುರೂಪೇಣ ಸುಸಂಸ್ಥಿತೋಽಹಂ ।
ಭೋಗ್ಯಸ್ವರೂಪೇಣ ಸುಸಂಸ್ಥಿತೋಽಹಂ ॥೧೫೪॥

ಪುಣ್ಯಸ್ವರೂಪೇಣ ಸುಸಂಸ್ಥಿತೋಽಹಂ ।
ಪಾಪಸ್ವರೂಪೇಣ ಸುಸಂಸ್ಥಿತೋಽಹಂ ॥
ಸುಖಸ್ವರೂಪೇಣ ಸುಸಂಸ್ಥಿತೋಽಹಂ ।
ದುಃಖಸ್ವರೂಪೇಣ ಸುಸಂಸ್ಥಿತೋಽಹಂ ॥೧೫೫॥

ರೂಪನಾಗಿಯೂ, ಜ್ಞಾನಸಾಧನವಾದ ಪ್ರಮಾಣರೂಪನಾಗಿಯೂ, ಜ್ಞಾನಕ್ಕೆ ವಿಷಯವಾದ ಅರ್ಥಗಳ ಸ್ವರೂಪನಾಗಿಯೂ, ಆ ಜ್ಞಾನಸ್ವರೂಪನಾಗಿಯೂ ಸಹ ಇರುತ್ತೇನೆ. ॥೧೫೧-೧೫೨॥

ನಾನು ಕರ್ತೃ ಮತ್ತು ಕ್ರಿಯಾಸ್ವರೂಪನಾಗಿಯೂ, ಕ್ರಿಯಾಹೇತುಸ್ವರೂಪನಾಗಿಯೂ, ಫಲಸ್ವರೂಪನಾಗಿಯೂ, ಭೋಕ್ತೃಸ್ವರೂಪನಾಗಿಯೂ, ಭೋಗ್ಯ ಮತ್ತು ಭೋಗ, ಇವುಗಳಿಗೆ ಹೇತು, ಇವುಗಳ ಸ್ವರೂಪನಾಗಿಯೂ, ಪುಣ್ಯ ಪಾಪಗಳ ಸ್ವರೂಪನಾಗಿಯೂ, ಸುಖ, ದುಃಖಗಳ ಸ್ವರೂಪನಾಗಿಯೂ ಇರುತ್ತೇನೆ. ॥೧೫೩-೧೫೪-೧೫೫॥

ರುದ್ರಪ್ರಭೇದೇನ ಸುಸಂಸ್ಥಿತೋಽಹಂ ।
ವಿಷ್ಣುಪ್ರಭೇದೇನ ಸುಸಂಸ್ಥಿತೋಽಹಂ ॥
ಬ್ರಹ್ಮಪ್ರಭೇದೇನ ಸುಸಂಸ್ಥಿತೋಽಹಂ ।
ದೇವಪ್ರಭೇದೇನ ಸುಸಂಸ್ಥಿತೋಽಹಂ ॥೧೫೬॥

ಮರ್ತ್ಯಪ್ರಭೇದೇನ ಸುಸಂಸ್ಥಿತೋಽಹಂ ।
ತಿರ್ಯಕ್ಪ್ರಭೇದೇನ ಸುಸಂಸ್ಥಿತೋಽಹಂ ॥
ಕ್ರಿಮಿಪ್ರಭೇದೇನ ಸುಸಂಸ್ಥಿತೋಽಹಂ ।
ಕೀಟಪ್ರಭೇದೇನ ಸುಸಂಸ್ಥಿತೋಽಹಂ ॥೧೫೭॥

ವೃಕ್ಷಪ್ರಭೇದೇನ ಸುಸಂಸ್ಥಿತೋಽಹಂ ।
ಗುಲ್ಮಪ್ರಭೇದೇನ ಸುಸಂಸ್ಥಿತೋಽಹಂ ॥
ಲತಾಪ್ರಭೇದೇನ ಸುಸಂಸ್ಥಿತೋಹಂ ।
ತೃಣಪ್ರಭೇದೇನ ಸುಸಂಸ್ಥಿತೋಽಹಂ ॥೧೫೮॥

ಕಾಲಪ್ರಭೇದೇನ ಸುಸಂಸ್ಥಿತೋಹಂ ।
ಘಟಪ್ರಭೇದೇನ ಸುಸಂಸ್ಥಿತೋಽಹಂ ॥
ಪಟಪ್ರಭೇದೇನ ಸುಸಂಸ್ಥಿತೋಽಹಂ ।
ಕುಡ್ಯಾದಿಭೇದೇನ ಸುಸಂಸ್ಥಿತೋಽಹಂ ॥೧೫೯॥

ಅನ್ನಪ್ರಭೇದೇನ ಸುಸಂಸ್ಥಿತೋಽಹಂ ।
ಪಾನಪ್ರಭೇದೇನ ಸುಸಂಸ್ಥಿತೋಽಹಂ ॥
ವನಪ್ರಭೇದೇನ ಸುಸಂಸ್ಥಿತೋಽಹಂ ।
ಗಿರಿಪ್ರಭೇದೇನ ಸುಸಂಸ್ಥಿತೋಽಹಂ ॥೧೬೦॥

ನಾನು, ರುದ್ರ, ಬ್ರಹ್ಮ, ವಿಷ್ಣು, ದೇವತೆಗಳು ಇವರುಗಳ ಸ್ವರೂಪನಾಗಿಯೂ, ಮನುಷ್ಯರು, ಪಶುಪಕ್ಷ್ಯಾದಿಗಳು ಇವರುಗಳ ಸ್ವರೂಪನಾಗಿಯೂ, ಕ್ರಿಮಿಕೀಟಸ್ವರೂಪನಾಗಿಯೂ, ಮರಗಳು, ಕುರುಚಲುಗಿಡ, ಬಳ್ಳಿಗಳು ಇವುಗಳ ಸ್ವರೂಪನಾಗಿಯೂ, ಹುಲ್ಲುಗಳ ಸ್ವರೂಪನಾಗಿಯೂ, ಕಾಲಸ್ವರೂಪನಾಗಿಯೂ, ಘಟ, ಪಟ, ಗೋಡೆ ಮುಂತಾದವುಗಳ ಸ್ವರೂಪನಾಗಿಯೂ, ಅನ್ನಪಾನಗಳ

ನದೀಪ್ರಭೇದೇನ ಸುಸಂಸ್ಥಿತೋಽಹಂ ।
ನದಪ್ರಭೇದೇನ ಸುಸಂಸ್ಥಿತೋಽಹಂ ॥
ಸಮುದ್ರಭೇದೇನ ಸುಸಂಸ್ಥಿತೋಽಹಂ ।
ತಟಪ್ರಭೇದೇನ ಸುಸಂಸ್ಥಿತೋಽಹಂ ॥೧೬೧॥

ತಟಾಕಭೇದೇನ ಸುಸಂಸ್ಥಿತೋಽಹಂ ।
ಅಭ್ರಪ್ರಭೇದೇನ ಸುಸಂಸ್ಥಿತೋಽಹಂ ॥
ನಕ್ಷತ್ರಭೇದೇನ ಸುಸಂಸ್ಥಿತೋಽಹಂ ।
ಗ್ರಹಪ್ರಭೇದೇನ ಸುಸಂಸ್ಥಿತೋಽಹೇ ॥೧೬೨॥

ಮೇಘಪ್ರಭೇದೇನ ಸುಸಂಸ್ಥಿತೋಽಹಂ ।
ವಿದ್ಯುತ್ಪ್ರಭೇದೇನ ಸುಸಂಸ್ಥಿತೋಽಹಂ ॥
ಯಕ್ಷಪ್ರಭೇದೇನ ಸುಸಂಸ್ಥಿತೋಽಹಂ ।
ರಕ್ಷಃಪ್ರಭೇದೇನ ಸುಸಂಸ್ಥಿತೋಽಹಂ ॥೧೬೩॥

ಗಂಧರ್ವಭೇದೇನ ಸುಸಂಸ್ಥಿತೋಽಹಂ ।
ಸಿದ್ಧಪ್ರಭೇದೇನ ಸುಸಂಸ್ಥಿತೋಽಹಂ ॥
ಅಂಡಪ್ರಭೇದೇನ ಸುಸಂಸ್ಥಿತೋಽಹಂ ।
ಲೋಕಪ್ರಭೇದೇನ ಸುಸಂಸ್ಥಿತೋಽಹಂ ॥೧೬೪॥

ಸ್ವರೂಪನಾಗಿಯೂ, ಅರಣ್ಯ, ಪರ್ವತ ಇವುಗಳ ಸ್ವರೂಪನಾಗಿಯೂ ಇರುತ್ತೇನೆ. ||೧೫೬-೧೫೭-೧೫೮-೧೫೯-೧೬೦||

ನಾನು ನದಿಗಳ ರೂಪನಾಗಿಯೂ, ಗಂಡುನದಿಗಳ ರೂಪನಾಗಿಯೂ, ಸಮುದ್ರ, ದಡ, ಕೆರೆ, ಸರ್ವತ್ರ ವ್ಯಾಪಿಸಿರುವ ಆಕಾಶ ಇವುಗಳ ರೂಪನಾಗಿಯೂ ನಕ್ಷತ್ರ, ಆದಿತ್ಯಾದಿಗ್ರಹಗಳು, ಮಳೆಯನ್ನು ಸುರಿಸುವ ಮೋಡ, ಮಿಂಚುಗಳು, ಇವುಗಳ ಸ್ವರೂಪನಾಗಿಯೂ, ಯಕ್ಷ, ರಾಕ್ಷಸ, ಸಿದ್ಧ, ಗಂಧರ್ವರ ಸ್ವರೂಪನಾಗಿಯೂ, ಮೊಟ್ಟೆಗಳ ಬ್ರಹ್ಮಾಂಡಗಳ, ಸ್ವರೂಪನಾಗಿಯೂ, ಲೋಕಗಳ ಸ್ವರೂಪನಾಗಿಯೂ ಇರುತ್ತೇನೆ. ||೧೬೧-೧೬೨-೧೬೩-೧೬೪||

ದೇಶಪ್ರಭೇದೇನ ಸುಸಂಸ್ಥಿತೋಽಹಂ ।
ಗ್ರಾಮಪ್ರಭೇದೇನ ಸುಸಂಸ್ಥಿತೋಽಹಂ ॥
ಗೃಹಪ್ರಭೇದೇನ ಸುಸಂಸ್ಥಿತೋಽಹಂ ।
ಮಠಪ್ರಭೇದೇನ ಸುಸಂಸ್ಥಿತೋಽಹಂ ॥೧೬೫॥

ಕಟಪ್ರಭೇದೇನ ಸುಸಂಸ್ಥಿತೋಽಹಂ ।
ಪ್ರಾಕಾರಭೇದೇನ ಸುಸಂಸ್ಥಿತೋಽಹಂ ॥
ಪುರಪ್ರಭೇದೇನ ಸುಸಂಸ್ಥಿತೋಽಹಂ ।
ಪುರೀಪ್ರಭೇದೇನ ಸುಸಂಸ್ಥಿತೋಽಹಂ ॥೧೬೬॥

ವ್ಯೋಮಾದಿಭೇದೇನ ಸುಸಂಸ್ಥಿತೋಽಹಂ ।
ಶಬ್ದಾದಿಭೇದೇನ ಸುಸಂಸ್ಥಿತೋಽಹಂ ॥
ಶರೀರಭೇದೇನ ಸುಸಂಸ್ಥಿತೋಽಹಂ ।
ಪ್ರಾಣಪ್ರಭೇದೇನ ಸುಸಂಸ್ಥಿತೋಽಹಂ ॥೧೬೭॥

ಶ್ರೋತ್ರಾದಿಭೇದೇನ ಸುಸಂಸ್ಥಿತೋಽಹಂ ।
ಪಾದಾದಿಭೇದೇನ ಸುಸಂಸ್ಥಿತೋಽಹಂ ॥
ಮನಃಪ್ರಭೇದೇನ ಸುಸಂಸ್ಥಿತೋಽಹಂ ।
ಬುದ್ಧಿಪ್ರಭೇದೇನ ಸುಸಂಸ್ಥಿತೋಽಹಂ ॥೧೬೮॥

ಅಹಂಪ್ರಭೇದೇನ ಸುಸಂಸ್ಥಿತೋಽಹಂ ।
ಚಿತ್ತಪ್ರಭೇದೇನ ಸುಸಂಸ್ಥಿತೋಽಹಂ ॥

ನಾನು ದೇಶಗಳ ಸ್ವರೂಪನಾಗಿಯೂ, ಗ್ರಾಮ, ಮನೆ ಮತ್ತು ಮಠಗಳ ಸ್ವರೂಪನಾಗಿಯೂ, ಚಾಪೇ, ಕಪಾಲ, ಪ್ರಾಕಾರ (ಕೋಟೆ) ಗಳ ಸ್ವರೂಪನಾಗಿಯೂ, ಪುರ ಮತ್ತು ಪಟ್ಟಣಗಳ ಸ್ವರೂಪನಾಗಿಯೂ, ಆಕಾಶ, ಶಬ್ದ, ಶರೀರ, ಪ್ರಾಣಗಳ ರೂಪನಾಗಿಯೂ, ಶ್ರೋತ್ರಾದಿ ಇಂದ್ರಿಯಗಳು, ಪಾದಾದಿ ಇಂದ್ರಿಯಗಳು, ಮನಸ್ಸು, ಬುದ್ಧಿ, ಇವುಗಳ ಸ್ವರೂಪನಾಗಿಯೂ ಇರುತ್ತೇನೆ. ॥೧೬೫-೧೬೬-೧೬೭-೧೬೮॥

ಜನರಲ್ಲಿ ಪ್ರತಿಯೊಬ್ಬರೂ ವ್ಯವಹರಿಸತಕ್ಕ ನಾನು, ಅಹಂಕಾರ, ಎಂಬುವದರ ಸ್ವರೂಪನಾಗಿಯೂ, ಚಿತ್ತಸ್ವರೂಪನಾಗಿಯೂ, ಸಮುದಾಯ, ಶರೀರ, ಜನ್ಮ,

ಸಂಘಾತಭೇದೇನ ಸುಸಂಸ್ಥಿತೋಽಹಂ ।
ಜನ್ಮಾದಿಭೇದೇನ ಸುಸಂಸ್ಥಿತೋಽಹಂ ॥೧೬೯॥

ಜಾಗ್ರತ್ಪ್ರಭೇದೇನ ಸುಸಂಸ್ಥಿತೋಽಹಂ ।
ಸ್ವಪ್ನಪ್ರಭೇದೇನ ಸುಸಂಸ್ಥಿತೋಽಹಂ ॥
ಸುಷುಪ್ತಿಭೇದೇನ ಸುಸಂಸ್ಥಿತೋಽಹಂ ।
ತುರೀಯಭೇದೇನ ಸುಸಂಸ್ಥಿತೋಽಹಂ ॥೧೭೦॥

ದೃಶ್ಯಪ್ರಭೇದೇನ ಸುಸಂಸ್ಥಿತೋಽಹಂ ।
ದ್ರಷ್ಟೃಪ್ರಭೇದೇನ ಸುಸಂಸ್ಥಿತೋಽಹಂ ॥
ಸಾಕ್ಷಿಸ್ವರೂಪೇಣ ಸುಸಂಸ್ಥಿತೋಽಹಂ ।
ಸರ್ವಸ್ವರೂಪೇಣ ಸುಸಂಸ್ಥಿತೋಽಹಂ ॥೧೭೧॥

ಅಸ್ತಿ ನಾಸ್ತಿ ವಚನೇನ ಭಾಷಿತಂ ।
ಭಾತಿ ಶಬ್ದ ಪರಿಭಾಷಿತಂ ತಥಾ ॥

ಸ್ಥಿತಿ, ಪ್ರಳಯ ಇವುಗಳ ಸ್ವರೂಪನಾಗಿಯೂ, ಜಾಗ್ರತ್, ಸ್ವಪ್ನ, ಸುಷುಪ್ತಿಗಳೆಂಬ ಅವಸ್ಥಾತ್ರಯಸ್ವರೂಪನಾಗಿಯೂ, ಈ ಮೂರು ಅವಸ್ಥೆಗಳುಳ್ಳವನಾಗಿಯೂ, ತದತೀತನಾಗಿಯೂ, ನಮ್ಮ ಕಣ್ಣಿಗೆ ತೋರುವ ಘಟ, ಪಟಾದಿ ಸ್ವರೂಪನಾಗಿಯೂ, ಅವುಗಳನ್ನು ತಿಳಿಯತಕ್ಕ ದ್ರಷ್ಟೃಸ್ವರೂಪನಾಗಿಯೂ, ಉದಾಸೀನನಾಗಿ ತಿಳಿಯತಕ್ಕ ಸಾಕ್ಷಿಸ್ವರೂಪನಾಗಿಯೂ, ಸರ್ವಸ್ವರೂಪನಾಗಿಯೂ, ಇರುತ್ತೇನೆ. ಒಟ್ಟಿನಲ್ಲಿ ಸದ್ರೂಪನಾದ ಪರಮಾತ್ಮಸ್ವರೂಪವಾದ ಅಧಿಷ್ಠಾನದಲ್ಲಿ ಅನಾದಿಯಾದ ಅಜ್ಞಾನದಿಂದ ದೃಶ್ಯಪ್ರಪಂಚವು, ಹಗ್ಗದಲ್ಲಿ ಹಾವು ಅಧ್ಯಸ್ತವಾದಂತೆ, ಅಧ್ಯಸ್ತವಾಗಿದೆ. ಹಾಗೆ ಅಧ್ಯಸ್ತವಾದುದರಿಂದ ಬ್ರಹ್ಮಸ್ವರೂಪವೇ ನಾನಾರೂಪವಾಗಿ ತೋರುತ್ತದೆ. ಸಮಸ್ತವೂ ಅಜ್ಞಾನದಿಂದ ಅಧ್ಯಸ್ತವಾದುದರಿಂದ ಅಧಿಷ್ಠಾನಸಾಕ್ಷಾತ್ಕಾರವಾಗಲು ಅಜ್ಞಾನವೂ, ಅದರಿಂದ ಕಲ್ಪಿತವಾದ ದೃಶ್ಯಪ್ರಪಂಚವೂ ಸಹ, ರಜ್ಜು ತತ್ವವನ್ನು ತಿಳಿಸಿದರೆ ಅದರಲ್ಲಿ ಕಲ್ಪಿತವಾದ ಸರ್ಪವೂ, ತತ್ಪ್ರಯುಕ್ತವಾದ ಭಯಕಂಪಾದಿಗಳೂ ಸಹ ನಿವೃತ್ತವಾಗುವಂತೆ, ನಿವೃತ್ತವಾಗಿ, ಅಧಿಷ್ಠಾನ ಮಾತ್ರ ಯಾವಾಗಲೂ ಸತ್ಯವಾಗಿರುತ್ತದೆ. ಎಂದು ಈ ಶ್ಲೋಕಗಳಿಗೆ ಮುಖ್ಯ ತಾತ್ಪರ್ಯವು. ||೧೬೯-೧೭೦-೧೭೧||

ಅಸ್ತಿ ನಾಸ್ತಿ, ಭಾವಾಭಾವ, ಭಾನಾಭಾನ, ಎಂದು ವ್ಯವಹರಿಸಲ್ಪಡುವುದೂ,

ಭಾನ ಹೀನ ಪರಿಭಾಷಿತಂ ಚ ಮೇ ।
ರೂಪ ಮೇವ ಹಿ ನ ಸಂಶಯಃ ಕ್ವಚಿತ್ ॥೧೭೨॥

ಶಬ್ದಗೋಚರತಯಾ ಸ್ಥಿತಂ ಸದಾ ।
ಶಬ್ದಗೋಚರ ವಿಹೀನ ರೂಪತಃ ॥
ಯತ್ಸ್ಥಿತಂ ತದಹಮೇವ ಸಂತತಂ ।
ಪ್ರತ್ಯಯೇಽಪಿ ಗತಿರೇವ ಮೇ ನಹಿ ॥೧೭೩॥

ನಿತ್ಯಶುದ್ಧ ಪರಿಬದ್ಧ ಮುಕ್ತತಾಂ ।
ಯಸ್ಯ ನಿತ್ಯಮಿತಿ ವಕ್ತಿ ವಾಕ್ ಶ್ರುತೇಃ ॥
ತಸ್ಯ ಸತ್ಯ ಸುಖಬೋಧ ಪೂರ್ಣತಾ ।
ತಥ್ಯ ಮೇವ ಮಮ ನಾಸ್ತಿ ಸಂಶಯಃ ॥೧೭೪॥

ಭಾತ, ಭಾತವಾಗುವುದಲ್ಲವೆಂದು ವ್ಯವಹರಿಸಲ್ಪಡುವುದು. ಇವೆಲ್ಲವೂ ನನ್ನ ಸ್ವರೂಪವೇ ಆಗಿರುತ್ತವೆ. ಈ ವಿಷಯದಲ್ಲಿ ಸಂಶಯವಿಲ್ಲವು. ॥೧೭೨॥

ಶಬ್ದಗಳಿಂದ ಅಭಿಧಾವೃತ್ತಿಯಿಂದಲೂ, ಲಕ್ಷಣಾವೃತ್ತಿಯಿಂದಲೂ, ತಿಳಿಯಲು ಯೋಗ್ಯವಾದುದೂ, ಆದರೂ ಶಬ್ದಗಳಿಂದ ತಿಳಿದುಬರುವ ಪದಾರ್ಥಗಳಂತೆ ನಾಮ ರೂಪವಿಲ್ಲದ್ದರಿಂದ ಶಬ್ದಗಳಿಂದ ತಿಳಿಯಲಸಾಧ್ಯವಾದುದೂ, ಅಪರೋಕ್ಷವಾದ ಸ್ವರೂಪ ಜ್ಞಾನದಿಂದ ತಿಳಿಯಲು ಯೋಗ್ಯವಾದುದೂ, ವಿಷಯೇಂದ್ರಿಯಸಂಸರ್ಗಜನ್ಯವಾದ ಖಂಡವೃತ್ತಿಜ್ಞಾನದಿಂದ ತಿಳಿಯಲಸಾಧ್ಯವಾದುದೂ ಸಹ ನಾನೇ ಆಗಿರುವೆನು.॥೧೭೩॥

ಶ್ರುತಿವಾಕ್ಯವು ಯಾವ ನನಗೆ ಮೂರು ಕಾಲಗಳಲ್ಲೂ ನಾಶವಿಲ್ಲದೇ ಇರುವಿಕೆ, ಅವಿದ್ಯಾಮಲರಾಹಿತ್ಯವೆಂಬ ಶುದ್ಧತೆ, ಜ್ಞಾನಸ್ವರೂಪ, ಯಾವಾಗಲೂ ಬಂಧವಿಲ್ಲದೆ ಮುಕ್ತಸ್ವಭಾವ ಇವುಗಳು ನಿತ್ಯವಾಗಿವೆಯೆಂದು ಹೇಳುತ್ತವೆಯೋ, ಅಂತಹ ನನಗೆ ಸತ್ಯವಾಗಿಯೂ, ಮೂರು ಕಾಲಗಳಲ್ಲಿಯೂ ಬಾಧೆ ಇಲ್ಲದೇ ಇರುವಿಕೆ, ಸುಖ ಸ್ವರೂಪ, ಜ್ಞಾನಸ್ವರೂಪ, ಸರ್ವವನ್ನೂ ವ್ಯಾಪಿಸಿ ಪೂರ್ಣನಾಗಿರುವಿಕೆ, ಪಾರಮಾರ್ಥಿಕವಾದ ಇವೇ ನನ್ನ ಸ್ವಾಭಾವಿಕವಾದ ಸ್ವರೂಪವಾಗಿರುತ್ತವೆ. ವ್ಯಾವಹಾರಿಕವಾಗಿ ಇವುಗಳು ಚೆನ್ನಾಗಿ ತೋರುವುದಿಲ್ಲ. ಈ ವಿಷಯದಲ್ಲಿ ಸಂಶಯವಿಲ್ಲವು.॥೧೭೪॥

ಯತ್ಸ್ವರೂಪ ಮಹಮಾತ್ಮನಾ ತಥಾ ।
ಯತ್ಸ್ವರೂಪ ಮಿದ ಮಾತ್ಮನೈವ ತು ॥
ಭಾತಿ ತತ್ತು ಮಮ ಚಿದ್ವಪುಃ ಸದಾ ।
ಭಾತಿ ನಾನ್ಯದಿತಿ ನಿಶ್ಚಯೋ ಮಮ ॥೧೭೫॥

ಅಹಂ ಸಮಸ್ತಂ ಮಮ ರೂಪತಃ ಪೃಥಕ್ ।
ನ ಕಿಂಚಿದಸ್ತೀತಿ ಸುನಿಶ್ಚಯಃ ಕೃತಃ ॥
ಮಯಾ ತು ವೇದಾಂತ ವಚೋಭಿರಂಜಸಾ ।
ಪಿತಾಮಹೇನಾಪಿ ಚ ಸತ್ಯಮೀರಿತಂ ॥೧೭೬॥

ಅತ್ರಸಂಶಯ ಮತಿರ್ವಿನಶ್ಯತಿ ।
ಭ್ರಷ್ಟ ಏವ ಪರಮಾರ್ಥದರ್ಶನಾತ್ ॥
ಅತ್ರನಿಶ್ಚಯ ಮತಿಸ್ತು ಮುಚ್ಯತೇ ।
ಕಷ್ಟರೂಪ ಭವಪಾಶಬಂಧನಾತ್ ॥೧೭೭॥

ಚಿನ್ಮಾತ್ರಸ್ವರೂಪನಾದ, ಪರಶಿವನಾದ ಯಾವನನ್ನ ಸ್ವರೂಪವು ಅಹಂಕಾರಕ್ಕೆ ಆಶ್ರಯವಾದ ಭೋಕ್ತೃರೂಪವಾಗಿದೆಯೋ ಮತ್ತು ಇದಂ ಎಂದು ವ್ಯವಹರಿಸಲು ಯೋಗ್ಯವಾದ ಭೋಗ್ಯಪ್ರಪಂಚರೂಪವಾಗಿಯೂ ಸಹ ತೋರುತ್ತದೆಯೋ, ಅದೆಲ್ಲವೂ ಸರ್ವಾಧಿಷ್ಠಾನವಾಗಿ ಸರ್ವವ್ಯಾಪಿಯಾಗಿರುವ ಚಿತ್ಸ್ವರೂಪನಾದ ನನ್ನ ಸ್ವರೂಪವೇ ಹೊರತು ಬೇರೆಯಲ್ಲವು. ಎಂದು ನನ್ನ ಸಿದ್ಧಾಂತವಾಗಿ ಗೊತ್ತಾಗಿದೆ. ॥೧೭೫॥

ಈ ಸಮಸ್ತವೂ ನನ್ನ ಸ್ವರೂಪವಾಗಿದೆ. ನನಗಿಂತಲೂ ಬೇರೆ ಯಾವುದೂ ಇಲ್ಲವೆಂದು ಶ್ರುತಿಸ್ಮೃತ್ಯಾದಿಗಳಲ್ಲಿಯೂ ನಿಶ್ಚಿತವಾಗಿದೆ. ನಾನೂ ಸಹ ಈ ಶ್ರುತಿಯೂ, ಬ್ರಹ್ಮನೂ, ಬೋಧಿಸುತ್ತಿರುವ ನಿಶ್ಚಯಾರ್ಥವನ್ನೇ ಹೇಳಿರುವೆನು. ಯಾರಾದರೂ ಈ ವಿಷಯದಲ್ಲಿ ಸಂಶಯವುಳ್ಳವರಾಗಿದ್ದರೆ, ಅಂಥವರು ಪರಮಾತ್ಮನ ದರ್ಶನವಿಲ್ಲದೇ ಪರಮಾರ್ಥವಾದ ಪರಮಾತ್ಮನನ್ನು ಪ್ರತಿಪಾದಿಸತಕ್ಕ ಶಾಸ್ತ್ರದ ತಿಳಿವಳಿಕೆಯಿಂದಲೂ, ಮೋಕ್ಷವೆಂಬ ಪರಮಪುರುಷಾರ್ಥದಿಂದಲೂ, ಭ್ರಷ್ಟರಾಗಿ ಅನೇಕವಿಧವಾದ ದುಃಖ ವನ್ನು ಅನುಭವಿಸುತ್ತಿರುತ್ತಾರೆ. ಹಾಗಲ್ಲದೆ ಈ ವಿಷಯದಲ್ಲಿ ಯಾವನು ನಿಶ್ಚಯವುಳ್ಳ ವನೋ ಅಂಥವನು ವೇದಾಂತಾಭ್ಯಾಸದಿಂದ ಜ್ಞಾನವನ್ನು ಸಂಪಾದಿಸಿ ಅದರಮೂಲಕ,

|| ಸೂತ ಉವಾಚ ||

ಏವಮುಕ್ತ್ವಾ ಮಹಾದೇವಃ ಸಾಂಬಃ ಸಂಸಾರಮೋಚಕಃ ।
ಸಮಾಲಿಂಗ್ಯ ಮಹಾವಿಷ್ಣುಂ ಬ್ರಹ್ಮಾಣಮಪಿ ಸಾದರಂ ॥೧೭೮॥

ವಿಲೋಕ್ಯ ದೇವಾನಖಿಲಾನ್ ವಿಶುದ್ಧೇನೈವ ಚೇತಸಾ ।
ಭದ್ರಮಸ್ತು ಸುರಶ್ರೇಷ್ಠಾ ಯುಷ್ಮಾಕಮಿತಿ ಚಾಬ್ರವೀತ್ ॥೧೭೯॥

ದೇವಾಶ್ಚ ದೇವ ದೇವೇಶಂ ಪ್ರಸನ್ನಂ ಕರುಣಾನಿಧಿಂ ।
ಪೂಜಯಾಮಾಸುರಾಹ್ಲಾದಾತ್ಪತ್ರಪುಷ್ಪಫಲಾದಿಭಿಃ ॥೧೮೦॥

ವಿಷ್ಣುರ್ವಿಶ್ವಜಗತ್ಕರ್ತಾ ವಿಶ್ವೇಶಾಂಘ್ರಿಸರೋರುಹಂ ।
ಸ್ವಮೂರ್ಧ್ನಿ ಭಕ್ತ್ಯಾ ನಿಕ್ಷಿಪ್ಯ ಪುನಃ ಪರವಶೋಽಭವತ್ ॥೧೮೧॥

ಪಿತಾಮಹೋಽಪಿ ಸರ್ವಾತ್ಮಾ ಶಿವಪಾದಾಂಬುಜದ್ವಯಂ ।
ಸ್ವಮೂರ್ಧ್ನಿ ಭಕ್ತ್ಯಾ ನಿಕ್ಷಿಪ್ಯ ತಥಾ ಪರವಶೋಽಭವತ್ ॥೧೮೨॥

ಕಷ್ಟಪರಂಪರೆಯುಳ್ಳ ಜನನಮರಣಪ್ರವಾಹರೂಪವಾದ ಸಂಸಾರವೆಂಬ ಕಟ್ಟಿನ ದುಃಖದಿಂದ ಮುಕ್ತನಾಗುತ್ತಾನೆ. ||೧೭೬-೧೭೭||

ಈ ರೀತಿಯಾಗಿ ಸಮಸ್ತ ಪ್ರಾಣಿಗಳ ಸಂಸಾರ ದುಃಖವನ್ನು ಹೋಗಲಾಡಿಸತಕ್ಕ ಅಂಬಾಸಹಿತನಾದ ಮಹಾದೇವನು ವಿಶ್ವಾಸಪೂರ್ವಕವಾಗಿ ಮಹಾವಿಷ್ಣುವನ್ನೂ, ಬ್ರಹ್ಮನನ್ನೂ ಕುರಿತು ಉಪದೇಶವನ್ನು ಮಾಡಿ, ಆತ್ಮಾನಂದಾತಿಶಯದಿಂದ ಅವರನ್ನು ಆಲಂಗಿಸಿಕೊಂಡನು! ಮತ್ತು ಶುದ್ಧವಾದ ಮನಸ್ಸಿನಿಂದ ಸಮಸ್ತ ದೇವತೆಗಳನ್ನೂ ನೋಡಿ, ಓ ಸುರಶ್ರೇಷ್ಠರೇ, ನಿಮ್ಮೆಲ್ಲರಿಗೂ ಕಲ್ಯಾಣವುಂಟಾಗಲಿ. ಎಂದು ಹರಸಿ ಹೇಳಿದನು. ||೧೭೮-೧೭೯||

ದೇವತೆಗಳೂ ಸಹ ಎಲ್ಲ ದೇವತೆಗಳಿಗೂ ದೇವನಾದ, ಪ್ರಸನ್ನನಾದ, ದಯಾಶಾಲಿಯಾದ, ಪರಮೇಶ್ವರನನ್ನು ಹೂವು, ಪತ್ರ, ಹಣ್ಣು ಮುಂತಾದುವುಗಳಿಂದ ಪೂಜಿಸಿ ಸತ್ಕರಿಸಿದರು. ಜಗತ್ತನ್ನು ನಿರ್ಮಿಸುವ ವಿಷ್ಣುವೂ ಸರ್ವಸ್ವರೂಪಿಯಾದ ಬ್ರಹ್ಮನೂ ಸಹ ವಿಶ್ವೇಶ್ವರನ ಪಾದಕಮಲಗಳನ್ನು ತಮ್ಮ ತಲೆಯಲ್ಲಿ ಭಕ್ತಿಯಿಂದ ಇಟ್ಟುಕೊಂಡು ಪರಮಾನಂದ ಪರವಶರಾಗಿ ಭಾವಸಮಾಧಿಯಲ್ಲಿ ಮಗ್ನರಾದರು! ||೧೮೦-೧೮೧-೧೮೨||

ದೇವದೇವೋ ಮಹಾದೇವಃ ಸಾಂಬಃ ಸಂಸಾರಮೋಚಕಃ ।
ನನರ್ತ ಪರಮಂ ಭಾವಮೈಶ್ವರಂ ಸಂಪ್ರದರ್ಶಯನ್ ॥೧೪೩॥

ಕರತಾಳಂ ಮಹಾದೇವೀ ಕರುಣಾಸಾಗರಾ ಪರಾ ।
ಚಕಾರ ಪರಮಪ್ರೀತ್ಯಾ ಸಮಾಲೋಕ್ಯ ಮಹೇಶ್ವರಂ ॥೧೪೪॥

ವಿಷ್ಣುಃ ಬ್ರಹ್ಮಾ ಸುರಾಃ ಸರ್ವೇ ತತ್ರ ಸನ್ನಿಹಿತಾಃ ಜನಾಃ ।
ಸರ್ವೇ ಸಂತೋಷತಸ್ತತ್ರ ನೃತ್ಯಂತಿಸ್ಮ ಯಥಾಬಲಂ ॥೧೪೫॥

ದೇವದೇವೋ ಮಹಾದೇವೋ ಮಹಾನಂದೋದದಿ ರ್ದ್ವಿಜಾಃ ।
ವಿಲೋಕ್ಯ ಸರ್ವಾಸ್ಸುಪ್ರೀತ ಸ್ತತ್ರೈವಾಂತರ್ಹಿತೋಽ ಭವತ್ ॥೧೪೬॥

ವಿಷ್ಣುಃ ಬ್ರಹ್ಮಾಣ ಮಾಲಿಂಗ್ಯ ವಿಲೋಕ್ಯ ಸಕಲಾನ್ಸುರಾನ್ ।
ಪ್ರಸನ್ನಃ ಪದ್ಮಯಾ ಸಾರ್ಧಂ ವೈಕುಂಠ ಮಗಮತ್ಪ್ರಭುಃ ॥೧೪೭॥

ಅಷ್ಟೇ ಅಲ್ಲದೆ ಎಲ್ಲ ದೇವತೆಗಳಿಗೂ ದೇವನಾದ, ಎಂದರೆ ಎಲ್ಲರಿಗಿಂತಲೂ ಹಿರಿಯ ದೇವನಾದ, ದೇವಿಯೊಡನೆ ಕೂಡಿ ಇರುವ, ಪ್ರಾಣಿಗಳ ಸಂಸಾರವನ್ನು ಜ್ಞಾನವನ್ನು ನೀಡುವುದರ ಮೂಲಕವಾಗಿ ಹೋಗಲಾಡಿಸತಕ್ಕ, ಮಹಾದೇವನೂ ಪರಶಿವನ ವಿಶ್ವರೂಪ, ಪರಮಾನಂದರೂಪವೆಂಬ ಈಶ್ವರ ಭಾವವನ್ನು ಪ್ರಕಟನೆ ಮಾಡುತ್ತಾ ಆ ಸಂತೋಷವನ್ನು ಸೂಚಿಸುತ್ತಾ ನರ್ತನಮಾಡಿದನು. ಈ ರೀತಿಯಲ್ಲಿರತಕ್ಕ ಮಹಾದೇವನನ್ನು ನೋಡಿ, ದಯೆಗೆ ಸಮುದ್ರದಂತಿರತಕ್ಕವಳೂ, ಸರ್ವೋತ್ಕೃಷ್ಟಳೂ ಆದ ಮಹಾದೇವಿಯೂ ಬಹಳ ಪ್ರೀತಿಯಿಂದ ಕೈಯಿಂದ ತಾಳವನ್ನು ಹಾಕುತ್ತಿದ್ದಳು. ||೧೪೩-೧೪೪||

ಅಲ್ಲಿ ಸೇರಿದ್ದ ವಿಷ್ಣು, ಬ್ರಹ್ಮ, ಸಮಸ್ತ ದೇವತೆಗಳು ಇವರೆಲ್ಲರೂ, ಸಂತೋಷದಿಂದ ತಮ್ಮ ತಮ್ಮ ಶಕ್ತ್ಯನುಸಾರವಾಗಿ ಕುಣಿದರು. ದೇವತೆಗಳಿಗೆ ದೇವನೂ, ಪರಮಾನಂದಕ್ಕೆ ಸಮುದ್ರದಂತಿರತಕ್ಕವನೂ ಆದ ಮಹಾದೇವನು ಸುಪ್ರೀತನಾಗಿ ಅನುಗ್ರಹದೃಷ್ಟಿಯಿಂದ ದೇವತೆಗಳನ್ನು ನೋಡಿ ಅಲ್ಲಿಯೇ ಅಂತರ್ಧಾನನಾದನು. ವಿಷ್ಣುವೂ ಸಹ ಬ್ರಹ್ಮನನ್ನು ಆಲಿಂಗಿಸಿಕೊಂಡು ವಿಶ್ವಾಸಪೂರ್ವಕವಾಗಿ ದೇವತೆಗಳನ್ನು ನೋಡಿ, ಲಕ್ಷ್ಮಿಯೊಂದಿಗೆ ವೈಕುಂಠಕ್ಕೆ ಹೋದನು. ||೧೪೫-೧೪೬-೧೪೭||

ಬ್ರಹ್ಮಾಽಪಿ ವಿಸ್ಮಯಾ ಪನ್ನೋ ವಿಲೋಕ್ಯ ಸಕಲಾನ್ಸುರಾನ್ ।
ಅವಶಃ ಸನ್ಪುನಶ್ಚಾಹ ಶ್ರದ್ಧಯೈವ ತು ಕೇವಲಂ ॥೧೮೮॥

ವಿದ್ಯಾಃ ಸರ್ವಾ ನೃಣಾಂ ಸಾಕ್ಷಾತ್ಸಂಸಾರಸ್ಯ ಪ್ರವರ್ತಿಕಾಃ ।
ಆತ್ಮವಿದ್ಯಾ ತು ಸಂಸಾರ ತಮಸಃ ಪ್ರತಿಘಾತಿನೀ ॥೧೮೯॥

ಆತ್ಮವಿದ್ಯಾ ವಿಹೀನಸ್ಯ ಶೋಕಸಾಗರ ಏವ ಹಿ ।
ಮುಕ್ತಿರೇವಾತ್ಮ ನಿಷ್ಠಸ್ಯ ನಾಸ್ತಿ ಸಂಶಯ ಕಾರಣಂ ॥೧೯೦॥

ಬ್ರಹ್ಮನೂ ಸಹ ಬಹಳ ಆಶ್ಚರ್ಯಗೊಂಡವನಾಗಿ ಸಮಸ್ತ ದೇವತೆಗಳನ್ನೂ ನೋಡಿ, ಶಿವಭಕ್ತಿಯಿಂದ ಪರವಶನಾಗಿ ಬಹಳ ಶ್ರದ್ಧೆಯಿಂದ ಕೂಡಿ, ಹಿಂದೆ ಹೇಳಿದ ಶ್ರುತ್ಯರ್ಥದ ಅವಶಿಷ್ಟಾಂಶವನ್ನು ವಿವರಿಸಲು ಹೀಗೆ ಹೇಳಿದನು. ||೧೮೮||

ಛಾಂದೋಗ್ಯದ ಸಪ್ತಮಾಧ್ಯಾಯದಲ್ಲಿ ಸನತ್ಕುಮಾರನು ನಾರದನಿಗೆ ಭೂಮ ವಿದ್ಯೆಯನ್ನು ಉಪದೇಶಿಸಿರುತ್ತಾನೆ. ಆತ್ಮವಿದ್ಯೆಗಿಂತ ಬೇರೆಯಾದ ವಿದ್ಯೆಗಳು ಬ್ರಹ್ಮ ಸ್ವರೂಪಜ್ಞಾನವನ್ನು ಉಂಟುಮಾಡಲಾರವು. ಗ್ರಂಥ ಮತ್ತು ಅದರ ಅರ್ಥಗಳನ್ನು ಕಲಿಯುವ ಆಯಾಸ ನಿಮಿತ್ತವಾದ ಶೋಕಹೇತುಗಳಾಗುತ್ತವೆಯೇ ವಿನಾ ಆತ್ಮ ಜ್ಞಾನಕ್ಕೆ ಕಾರಣವಾಗಲಾರವು. ಆದುದರಿಂದ ಆತ್ಮವಿದ್ಯೆಗಿಂತ ಬೇರೆಯದಾದ ನಾಮಾದ್ಯುಪಾಧಿಗಳು ಸಂಸಾರಕ್ಕೆ ಕಾರಣವೇ ಹೊರತು ಮೋಕ್ಷಕ್ಕೆ ಕಾರಣವಲ್ಲ. " ತರತಿಶೋಕಂ ಆತ್ಮವಿತ್ " ಎಂಬ ಶ್ರುತ್ಯನುಸಾರವಾಗಿ ಆತ್ಮಜ್ಞಾನವು ಸಂಸಾರಕ್ಕೆ ಕಾರಣವಾದ ಮೂಲಾವಿದ್ಯೆಗೆ ನಿವರ್ತಕವಾಗಿರುವುದು. " ತ್ರೈಗುಣ್ಯವಿಷಯಾ ವೇದಾಃ . . . " ಗೀತಾ. ೧.೪೫. ನೋಡಿ. ||೧೮೯||

ಆತ್ಮಸ್ವರೂಪವನ್ನು ತಿಳಿಯದೇ ಇರುವುದರಿಂದ ಸಂಸಾರರೂಪ ದುಃಖ ಪರಂಪರೆಯುಂಟಾಗುತ್ತಿದೆ. ಈ ಸಂಸಾರನಿರ್ಬಂಧ ದುಃಖವು ಬೇರೇ ವಿದ್ಯೆಗಳಿಂದ ನಿವೃತ್ತವಾಗುವುದಿಲ್ಲ. ಆದುದರಿಂದ ಆತ್ಮಜ್ಞಾನವಿಲ್ಲದವನಿಗೆ ಸಾಗರದಂತೆ ಅಪಾರ ವಾದ ದುಃಖವುಂಟಾಗುತ್ತದೆ. ಈ ಅಭಿಪ್ರಾಯದಿಂದ (ಆತ್ಮವಿದ್ಯೆಬಿಟ್ಟು) ಸಕಲ ವಿದ್ಯೆಗಳಲ್ಲಿ ಪಂಡಿತನಾದ ನಾರದನು ದುಃಖಿಯಾಗಿದ್ದಾನೆಂದು " ಸೋಽಹಂ ಭಗವತಃ ಶೋಚಾಮಿತಂ ಮಾ ಭಗವಾನ್ ಶೋಕಸ್ಯ ಪಾರಂ ತಾರಯತು " ಎಂದು ಛಾಂ.ಉ. ೭.೧.೩. ಶ್ರುತಿಯು ಹೇಳುತ್ತಿದೆ. ಆತ್ಮಜ್ಞಾನಿಯು ಆತ್ಮಯಾಥಾತ್ಮ್ಯಜ್ಞಾನದಿಂದ ಆತ್ಮನಿಗೆ ಆವರಣವಾದ ಅಜ್ಞಾನವು ನಿವೃತ್ತಿಯಾಗುತ್ತದೆ. ಈ ಆತ್ಮಜ್ಞಾನವು

ಯತ್ರಾನ್ಯತ್ಪಶ್ಯತಿ ಪ್ರಾಣೀ ಶೃಣೋತ್ಯನ್ಯತ್ತಥೈವ ಚ ।
ಅನ್ಯಜ್ಜಾನಾತಿ ಚಾಲ್ಪಂ ತದ್ಯದಲ್ಪಂ ಮರ್ತ್ಯಮೇವ ತತ್ ॥೧೯೧॥

ಯತ್ರ ಪಶ್ಯತಿ ನಾನ್ಯಚ್ಚ ನ ಶೃಣೋತ್ಯನ್ಯದಾಸ್ತಿಕಾಃ ।
ಅನ್ಯಚ್ಚ ನ ವಿಜಾನಾತಿ ಸ ಭೂಮಾ ಸುರಪುಂಗವಾಃ ॥೧೯೨॥

ಯೋ ವೈ ಭೂಮಾ ಸುಖಂ ತದ್ಧಿ ತದ್ಧಿ ಕೈವಲ್ಯ ಮುತ್ತಮಂ ।
ನಾಲ್ಪೇ ಚಾಸ್ತಿ ಸುಖಂ ತಸ್ಮಾನ್ಮಹಾದ್ವೈತಪರೋ ಭವೇತ್ ॥೧೯೩॥

ಸಂಸಾರಕ್ಕೆ ಉಪಾದಾನಕಾರಣವಾದುದರಿಂದ ಅದು ನಿವೃತ್ತವಾದ ಮೇಲೆ ಸಂಸಾರರೂಪವಾದ ದುಃಖವು ಉಂಟಾಗುವುದಿಲ್ಲ. ಸಂಸಾರ ನಿರ್ಬಂಧರೂಪ ಶೋಕವು ಹೋಗಲಾಗಿ ಮುಕ್ತನಾಗುತ್ತಾನೆ. ಈ ವಿಷಯದಲ್ಲಿ ಸಂಶಯವಿಲ್ಲ. ॥೧೯೦॥

ಛಾಂದೋಗ್ಯದಲ್ಲಿ ೭.೨೩.೧. ನಾಮಾದಿಪ್ರಾಣಾಂತವಾದ ಉತ್ತರೋತ್ತರ ವ್ಯಾಪಕಗಳಾದ ತತ್ವಗಳು ಬುದ್ಧಿಯು ಪರತತ್ವವನ್ನು ಗ್ರಹಿಸಲು ಉಪಾಯಗಳಾಗಿ ಉಪದಿಷ್ಟಗಳಾಗಿವೆ. ಅನಂತರ "ಭೂಮಾತ್ವೇವ ವಿಜಿಜ್ಞಾಸಿತವ್ಯಃ" ಎಂದು ನಿರತಿಶಯ ಸುಖರೂಪನಾದ, ಸರ್ವವನ್ನೂ ವ್ಯಾಪಿಸಿಕೊಂಡಿರತಕ್ಕ, ಆತ್ಮನನ್ನೇ ತಿಳಿಯಬೇಕೆಂದು ಅಪ್ಪಣೆಮಾಡಿ, "ಯತ್ರ ನಾನ್ಯತ್ಪಶ್ಯತಿ" ೭.೨೪.೧. ಇತ್ಯಾದಿ ಶ್ರುತಿಯಲ್ಲಿ ಭೂಮವಸ್ತುವಿಗೆ ಲಕ್ಷಣವನ್ನು ಹೇಳಿದೆ. ಅದನ್ನು ಸಂಗ್ರಹಿಸುತ್ತಾನೆ. ಓ ಆಸ್ತಿಕರಾದ ಸುರಶ್ರೇಷ್ಠರೇ, ಸಮಸ್ತ ಜನರೂ ನೋಡುವುದರಲ್ಲಿ ಕೇಳುವುದರಲ್ಲಿ ತಿಳಿಯುವುದರಲ್ಲಿ ಪ್ರಮಾತೃ, ಪ್ರಮೇಯ, ಪ್ರಮಾಣಗಳೆಂಬ ತ್ರಿಪುಟಿಯಿಂದ ಯಾವುದನ್ನು ತಿಳಿಯುತ್ತಾರೆಯೋ, ನೋಡುತ್ತಾರೆಯೋ ಮತ್ತು ಕೇಳುತ್ತಾರೆಯೋ ಅದು ದೇಶ, ಕಾಲ, ವಸ್ತು, ಸಂಕೋಚವುಳ್ಳ ಕಾರಣದಿಂದ ಅನಿತ್ಯವಾದುದು. ಆದರೆ ಯಾವ ವಸ್ತುವಿನಲ್ಲಿ ಈ ತ್ರಿಪುಟಿಯ ಬೇರೆ ವ್ಯವಹಾರವಿಲ್ಲವೋ ಅದೇ ಅನಂತ ಸುಖರೂಪವಾದ, ವ್ಯಾಪಕವಾದ ಆತ್ಮಸ್ವರೂಪವು. ಅದೇ ಭೂಮವೆಂದು ಹೇಳಲ್ಪಡುತ್ತದೆ. ಭೂಮಶಬ್ದವು ಬಹು ಎಂಬ ಶಬ್ದದಿಂದ ನಿಷ್ಪನ್ನವಾದುದರಿಂದ ದೇಶ, ಕಾಲ, ವಸ್ತುಗಳಿಂದ ಪರಿಚ್ಛೇದವಿಲ್ಲದ, ಎಲ್ಲಕ್ಕೂ ದೊಡ್ಡದೂ ಮಿಗಿಲೂ ಆಗಿರುವ, ಆತ್ಮನೆಂದರ್ಥವು. ॥೧೯೧-೧೯೨॥

"ಯೋ ವೈ ಭೂಮಾ ತತ್ಸುಖಂ" ಎಂಬ ಛಾಂ. ೭.೨೩.೧. ಶ್ರುತ್ಯನುಸಾರವಾಗಿ ಅಪರಿಚ್ಛಿನ್ನವಾದ ಆತ್ಮವಸ್ತುವೇ ನಿತ್ಯಸುಖಸ್ವರೂಪವಾಗಿದೆ. ಅದರ ಸಾಕ್ಷಾತ್ಕಾರವೇ ಮುಕ್ತಿಸ್ವರೂಪವಾಗಿದೆ. ಅಲ್ಪವಾದ ವಸ್ತುವಿಗೆ ಇನ್ನೊಂದು ಅಲ್ಪವಾದ

ಮಹಾದ್ವೈತ ಪರಸ್ಯಾಸ್ಯ ನ ನಾಶೋ ಜನ್ಮ ನೈವ ಚ ।
ನೈವ ಗತ್ಯಾಗತೀ ನಾನ್ಯ ದ್ಬಂಧನಂ ನ ವಿಮೋಚನಂ ॥೧೯೪॥

ಅತ್ರೈವ ಲೀಯತೇ ಸಮ್ಯಕ್ ಸರ್ವಮಾತ್ಮತಯಾ ಸ್ವತಃ ।
ಘೃತಕಾಠಿನ್ಯವತ್ಸ್ವಪ್ನ ಪ್ರಪಂಚ ಪ್ರತಿಭಾಸವತ್ ॥೧೯೫॥

ಸರ್ವ ಮೇತದತಿ ಶೋಭನಂ ಪರಂ ।
ಕೇವಲಂ ಕರುಣಯೈವ ಭಾಷಿತಂ ॥
ದೇವದೇವ ಚರಣ ಪ್ರಸಾದತೋ ।
ನೇತರದ್ಧಿ ಕಥನೀಯ ಮಸ್ತಿ ವಃ ॥೧೯೬॥

ಇತಿ ಶ್ರೀಸ್ಕಂದಪುರಾಣೇ ಸೂತಸಂಹಿತಾಯಾಂ ಚತುರ್ಥಸ್ಯ ಯಜ್ಞವೈಭವಖಂಡಸ್ಯೋಪರಿಭಾಗೇ ಬ್ರಹ್ಮಗೀತಾಸೂಪನಿಷತ್ಸು ಆದೇಶ ಕಥನಂ ನಾಮ ಪಂಚಮೋಽಧ್ಯಾಯಃ

ವಸ್ತುವಿನಿಂದ ಪರಿಚ್ಛೇದ ವಿರೋಧದಿಂದ ಭಯಾದಿಗಳು ಉಂಟಾಗುತ್ತವೆ. ಆದುದರಿಂದ ಅದರಲ್ಲಿ ಸುಖವಿಲ್ಲ. ಈ ಕಾರಣದಿಂದ ಅದ್ವೈತವಾದ ನಿರತಿಶಯ, ಸುಖರೂಪವಾದ, ಆತ್ಮಸ್ವರೂಪ ವನ್ನು ತಿಳಿಯಲು ಸಮಸ್ತರೂ ಪ್ರಯತ್ನಪಡಬೇಕು. ॥೧೯೩॥

ಈ ರೀತಿಯಾಗಿ ಅಪರಿಚ್ಛಿನ್ನ ಸುಖಾತ್ಮಕವಾದ ಸರ್ವೋತ್ಕೃಷ್ಟವಾದ ಅದ್ವಿತೀಯ ಬ್ರಹ್ಮಾತ್ಮನಿಷ್ಠನಿಗೆ ನಾಶ, ಜನ್ಮ, ಗಮನಾಗಮನಗಳೂ, ಬಂಧಮೋಚನೆಗಳೂ ಸಹ ಇರುವುದಿಲ್ಲ. ಏಕೆಂದರೆ ಇವುಗಳಿಗೆಲ್ಲಕ್ಕೂ ಕಾರಣವಾದ ಮೂಲಾಜ್ಞಾನವು ಆತ್ಮಸ್ವರೂಪಜ್ಞಾನದಿಂದ ಸಮೂಲವಾಗಿ ನಷ್ಟವಾದುದರಿಂದ ಯಾವವಿಧ ವಿಕ್ರಿಯೆಗಳೂ ಅವನಿಗಿಲ್ಲವು. ಆ ಸಮಸ್ತವೂ ಸಹ ಭೂಮರೂಪವಾದ ಬ್ರಹ್ಮಸ್ವರೂಪದಲ್ಲಿ, ಅಗ್ನಿಸಂಯೋಗದಿಂದ ಘೃತಕಾಠಿಣ್ಯವು ಕರಗಿಹೋಗುವಂತೆ, ಲೀನವಾಗುತ್ತದೆ. ತಿರುಗಿ ಅಂತಹವನು ಸಂಸಾರಕ್ಕೆ ಸಿಕ್ಕಲಾರನು. ಸಮಸ್ತ ಪ್ರಪಂಚವೂ ಸಹ ಅವನ ದೃಷ್ಟಿಯಿಂದ ಸ್ವಪ್ನಪದಾರ್ಥದಂತೆ ಮಿಥ್ಯಾಭೂತವಾಗಿ ಕಾಣುತ್ತದೆ. ನಿರ್ವಿಕಾರವಾಗಿಯೂ ನಿತ್ಯಸುಖವಾಗಿಯೂ, ಇರತಕ್ಕ ಆತ್ಮಸ್ವರೂಪವನ್ನು ಹೊಂದಿದ್ದರಿಂದ ಪ್ರಪಂಚವು ತೋರುತ್ತದೆಯೇ ಹೊರತು ಅದರಿಂದ ಯಾವ ವಿಧವಾದ ವಿಕ್ರಿಯೆಯೂ ಸಹ ಅಂತಹ ಜೀವನ್ಮುಕ್ತನಿಗೆ ಉಂಟಾಗುವುದಿಲ್ಲ. ಓ ದೇವತೆಗಳೇ, ಈ ಸಮಸ್ತವೂ ಸಹ ಅತ್ಯಂತ ಕಲ್ಯಾಣಕರವಾಗಿಯೂ, ಉತ್ಕೃಷ್ಟ

ವಾಗಿಯೂ, ಇರುವುದು. ಈ ಸಮಸ್ತ ವಿಷಯಗಳನ್ನೂ ಸಹ ನಿಮ್ಮಲ್ಲಿರತಕ್ಕ ದಯೆಯಿಂದ ನಾನು ಹೇಳಿರುತ್ತೇನೆ. ಮತ್ತು ಈ ವಿಷಯವನ್ನು ದೇವತೆಗಳಿಗೂ, ದೇವನಾದ ಶಿವನ ಪಾದಾನುಗ್ರಹದಿಂದಲೇ ತಿಳಿಯಬೇಕು. ಇನ್ನು ಯಾವುದರಿಂದಲೂ ತಿಳಿಯತಕ್ಕದ್ದಲ್ಲವು. ಇದಕ್ಕಿಂತಲೂ ಹೆಚ್ಚಾಗಿ ನಿಮಗೆ ಹೇಳತಕ್ಕ ವಿಷಯವೇ ಇರುವುದಿಲ್ಲ. ಸರ್ವೋತ್ಕೃಷ್ಟವಾದ ಸ್ವಸ್ವರೂಪಜ್ಞಾನಕ್ಕಿಂತಲೂ ಇನ್ನು ಯಾವುದೂ ಹೆಚ್ಚಿನದಿಲ್ಲವು. ||೧೯೪-೧೯೫-೧೯೬||

ಇಲ್ಲಿಗೆ ಸ್ಕಾಂದಪುರಾಣದಲ್ಲಿ ಸೂತಸಂಹಿತೆಯಲ್ಲಿ ನಾಲ್ಕನೆಯ ಭಾಗವಾದ
ಯಜ್ಞವೈಭವಖಂಡದಲ್ಲಿ ಎರಡನೆಯ ಭಾಗದಲ್ಲಿರುವ, ಉಪನಿಷತ್ತುಗಳಂತಿರುವ
ಬ್ರಹ್ಮಗೀತೆಯಲ್ಲಿ ಮುಕ್ತಿಸ್ವರೂಪವನ್ನು ತಿಳಿಸಿರುವ
ಐದನೆಯ ಅಧ್ಯಾಯವು ಮುಗಿದುದು.

|| ಶ್ರೀಃ ||

ಅಥಾಸ್ಯಾಃ ಶ್ರೀಮತ್ಸ್ಕಾಂದಪುರಾಣಾಂತರ್ಗತ ಸೂತಸಂಹಿತಾಯಾಶ್ಚತುರ್ಥಸ್ಯ ಯಜ್ಞವೈಭವಖಂಡಸ್ಯೋಪರಿಭಾಗೇ ಬ್ರಹ್ಮಗೀತಾ

|| ಷಷ್ಠೋಽಧ್ಯಾಯಃ ||

ಆರನೆಯ ಅಧ್ಯಾಯವು

|| ಬ್ರಹ್ಮೋವಾಚ ||

ಅಸ್ಮಿನ್ಬ್ರಹ್ಮಪುರೇ ವೇಶ್ಮ ದಹರಂ ಯದಿದಂ ಸುರಾಃ ।
ಪುಂಡರೀಕಂ ತು ತನ್ಮಧ್ಯ ಆಕಾಶೋ ದಹರೋಽಸ್ತಿ ತು ॥೧॥

ಸ ಶಿವಃ ಸಚ್ಚಿದಾನಂದಃ ಸೋಽನ್ವೇಷ್ಟವ್ಯೋ ಮುಮುಕ್ಷುಭಿಃ ।
ಸ ವಿಜಿಜ್ಞಾಸಿತವ್ಯಶ್ಚ ವಿನಾ ಸಂಕೋಚಮಾಸ್ತಿಕಾಃ ॥೨॥

ಬ್ರಹ್ಮನು ಹೇಳಿದನು—ದಿಗ್ದೇಶಕಾಲಗಳಿಂದ ಸಂಕೋಚವಿಲ್ಲದ, ಅದ್ವಿತೀಯವಾದ, ಸಚ್ಚಿದಾನಂದಾತ್ಮಕವಾದ ಬ್ರಹ್ಮಾತ್ಮೈಕ್ಯವನ್ನು ಉಪದೇಶಿಸಿ ಆಯಿತು. ಇಂತಹ ಬ್ರಹ್ಮಾತ್ಮಸ್ವರೂಪವನ್ನು ಮಂದಾಧಿಕಾರಿಗಳು ಉಪದೇಶಮಾತ್ರದಿಂದ ತಿಳಿಯಲಾರರು. ಆದುದರಿಂದ ಹೃದಯಪುಂಡರೀಕಮಧ್ಯದಲ್ಲಿ ಸತ್ಯಕಾಮತ್ವಾದಿ ಗುಣವಿಶಿಷ್ಟವಾದ ಬ್ರಹ್ಮಸ್ವರೂಪದ ಉಪಾಸನೆಯನ್ನೂ ಬ್ರಹ್ಮಚರ್ಯಾದಿ ಸಾಧನ ಸಂಪನ್ನನಾದ ಮುಮುಕ್ಷುವಿಗೆ "ಅಥಯದಿದಮಸ್ಮಿನ್ ಬ್ರಹ್ಮಪುರೇ" ಛಾಂ. ಉ. ೮. ೧೧. ಇತ್ಯಾದಿ ಶ್ರುತಿಯು ಉಪದೇಶಿಸುತ್ತದೆ. ಅದನ್ನು ಇಲ್ಲಿ ಸಂಗ್ರಹಿಸುತ್ತಾನೆ. ಓ ಆಸ್ತಿಕರೇ, ಈ ವಿದ್ಯಾಧಿಕಾರಿಯ ಶರೀರವೆಂಬ ಬ್ರಹ್ಮಪುರದಲ್ಲಿ ಅಲ್ಪ ಪರಿಮಾಣವಾದ ಹೃದಯ ಪುಂಡರೀಕವಿರುತ್ತದೆ. ಅಂತಹ ಹೃದಯದಲ್ಲಿ ಅನವಚ್ಛಿನ್ನವಾದ ಬ್ರಹ್ಮಸ್ವರೂಪವು ವ್ಯಾಪಕವಿದ್ದಾಗ್ಯೂ ಅವಚ್ಛಿನ್ನವಾದಂತೆ ಗೋಚರವಾಗುತ್ತದೆ. ಅಂತಹ ಬ್ರಹ್ಮಸ್ವರೂಪಕ್ಕೆ "ಆಕಾಶೋ ಹವೈ ನಾಮ ರೂಪಯೋಃ" ಎಂಬ ಛಾಂ.

ಸ್ವಾಭಿವ್ಯಂಜಕ ಸಂಕೋಚಾತ್ ಸಂಕೋಚ ಪ್ರತಿಭಾಽಽತ್ಮನಃ ।
ನ ಸ್ವರೂಪೇಣ ಚಿದ್ರೂಪಂ ಸರ್ವವ್ಯಾಪಿ ಸದಾ ಖಲು ॥೩॥

ಜ್ಞಾತ ರೂಪೇಣ ಚಾ ಜ್ಞಾತ ಸ್ವರೂಪೇಣ ಚ ಸಾಕ್ಷಿಣಃ ।
ಸರ್ವಂ ಭಾತಿ ತದಾ ಭಾತಿ ತತಸ್ತದ್ವ್ಯಾಪಿ ಸರ್ವದಾ ॥೪॥

ಉ. ೮. ೧೪. ೧. ಶ್ರುತ್ಯನುಸಾರವಾಗಿ ಆಕಾಶವೆಂಬ ಹೆಸರಿರುತ್ತದೆ. ಅಂತಹ ಆಕಾಶವೆಂಬುದೇ ಸಚ್ಚಿದಾನಂದಾತ್ಮಕನಾದಸಾಕ್ಷಾತ್ ಪರಶಿವನಾಗಿರುತ್ತಾನೆ. ಅವನು ಉಪಾಸಕರ ಹೃದಯಕಮಲದಲ್ಲಿ ಭಕ್ತರ ಅನುಗ್ರಹಾರ್ಥವಾಗಿ ಉಪಲಬ್ಧನಾಗುತ್ತಾನೆ. ಇದನ್ನು ದಹರವಿದ್ಯೆ ಎಂದು ಹೇಳಿದೆ.

ಇಂತಹ ಆಕಾಶವೆಂಬ ಸ್ವರೂಪವನ್ನು ಶಮದಮಾದಿ ಸಾಧನವುಳ್ಳ ಮುಮುಕ್ಷುಗಳು ಅನ್ವೇಷಣಮಾಡಬೇಕು. ಮತ್ತು ಶ್ರವಣ, ಮನನಾದಿ ಸಾಧನಗಳಿಂದ ಉಂಟಾಗುವ ಜ್ಞಾನದಿಂದ ಪಡೆಯಬೇಕು. ಆದರೆ ಅಂತಹ ಪರಮಾತ್ಮನನ್ನು ಉಪಾಸಿಸುವಾಗ ಹೃದಯಪುಂಡರೀಕರೂಪವಾದ ಉಪಾಧಿಸಂಕೋಚವಿಲ್ಲದೇ ಸ್ವಾಭಾವಿಕವಾದ ಅಪರಿಚ್ಛಿನ್ನವಾದ ಸ್ವರೂಪದಿಂದ ಉಪಾಸನೆ ಮಾಡುತ್ತಿರಬೇಕು. ||೧-೨||

ಚಿದ್ರೂಪನಾದ ಆತ್ಮನಿಗೆ ಔಪಾಧಿಕವಾದ ಪರಿಚ್ಛೇದವಿಲ್ಲದಿದ್ದಾಗ್ಯೂ ಶರೀರಗಳಲ್ಲಿ ಆ ಸ್ವಾಭಾವಿಕವಾದ ಅಪರಿಚ್ಛೇದವು ಏಕೆ ಅನುಭವಕ್ಕೆಬರುವುದಿಲ್ಲವು? ಎಂದರೆ ಅದಕ್ಕೆ ಉತ್ತರವನ್ನು ಹೇಳುತ್ತಾನೆ.—ಆತ್ಮನು ಸ್ವಪ್ರಕಾಶನಿದ್ದಾಗ್ಯೂ ಸಹ ಆವರಣವಾದ ಅಜ್ಞಾನವನ್ನು ಹೋಗಲಾಡಿಸುವುದರಲ್ಲಿ ಸಾಧನವಾದ ಅಂತಃಕರಣದ ಪರಿಚ್ಛಿನ್ನತ್ವವು ವ್ಯಾಪಕನಾದ ಆತ್ಮನಲ್ಲಿ, ಕೆಂಪುದಾಸವಾಳದ ಹುವ್ವಿನ ರಕ್ತವರ್ಣವು ಹತ್ತಿರದಲ್ಲಿರುವ ಸ್ಫಟಿಕದಲ್ಲಿ ತೋರುವಂತೆ, ತೋರುತ್ತದೆ. ಅಷ್ಟೇ ಹೊರತು ಆತ್ಮನು ಸ್ವತಃ ಸಂಕೋಚವುಳ್ಳವನಲ್ಲ. ಯಾವಾಗಲೂ ಸರ್ವವ್ಯಾಪಕನಾಗಿಯೇ ಇರುತ್ತಾನೆ. ||೩||

ದೇಶಕೃತವಾದ ಪರಿಚ್ಛೇದವೂ ಸಹ ಆತ್ಮನಿಗಿಲ್ಲವೆಂದು ಹೇಳುತ್ತಾನೆ. ಸಮಸ್ತ ಜಗತ್ತೂ ತೋರುತ್ತಿದ್ದಾಗ್ಯೂ ಜ್ಞಾನವಿಷಯಾಕಾರದಿಂದಲೂ, ಅಜ್ಞಾನವಿಷಯಾಕಾರದಿಂದಲೂ ಸಹ ಚಿನ್ಮಾತ್ರನಾದ ಸಾಕ್ಷಿಗೆ ತೋರುತ್ತದೆ. ಆದುದರಿಂದ ಚಿತ್ಪ್ರಕಾಶಕ್ಕಿಂತ ಬೇರೆಯಾದುದು ಎಲ್ಲಿಯೂ ಇಲ್ಲದ ಪ್ರಯುಕ್ತ ಅದಕ್ಕೆ ದೇಶಕೃತ ಪರಿಚ್ಛೇದವೂ ಇಲ್ಲವು. ಚಿದಾತ್ಮಕವಾದ ಬ್ರಹ್ಮಸ್ವರೂಪವಾದರೋ ಎಲ್ಲಾ ಕಡೆಗಳಲ್ಲಿಯೂ, ಯಾವಾಗಲೂ ತಾನೇ ಪ್ರಕಾಶಿಸುತ್ತದೆ. ಜಡವಾದಪ್ರಪಂಚದಂತೆ ಬೇರೆ ಪ್ರಕಾಶವನ್ನು ಅದು ಅಪೇಕ್ಷಿಸುವುದಿಲ್ಲ. ||೪||

ಸ್ವಯಂ ಸೇದ್ಧು ಮಶಕ್ಯಂ ಹಿ ಜಡಾತ್ಮಕ ಮಿದಂ ಜಗತ್ ।
ಚಿತ್ಸಂಬಂಧ ಬಲೇನೈವ ಖಲು ಭಾತಿ ನ ಚಾನ್ಯಥಾ ॥೫॥

ಅತೋಽವಭಾಸ್ಯಂ ಸಕಲಂ ವ್ಯಾಪ್ಯ ತದ್ಭಾಸಕಃ ಶಿವಃ ।
ಸ್ವತೋ ವ್ಯಾಪೀ ನ ಚಾ ವ್ಯಾಪೀ ಸಂಕೋಚಶ್ಚಾನ್ಯ ಸಂಗಮಾತ್॥೬॥

ಯಾವಾನ್ವಾ ಅಯಮಾಕಾಶ ಸ್ತಾವಾನಾಕಾಶ ಅಂತರಃ ।
ದ್ಯಾವಾ ಪೃಥ್ವೀ ಉಭೇ ಅಸ್ಮಿನ್ನಂತರೇವ ಸಮಾಹಿತೇ ॥೭॥

ಉಭಾವಗ್ನಿಶ್ಚ ವಾಯುಶ್ಚ ಸೂರ್ಯಾ ಚಂದ್ರಮುಸಾ ವುಭೌ ।
ನಕ್ಷತ್ರಾಣಿ ಚ ವಿದ್ಯುಚ್ಚ ಯಚ್ಚಾಸ್ತಿತ್ವೇನ ಭಾಸತೇ ॥೮॥

ಜಗತ್ತು ತಾನೇ ಪ್ರಕಾಶಿಸಲು ಜಡವಾದುದರಿಂದ ಸಮರ್ಥವಾದುದಲ್ಲ. ಆದುದರಿಂದ ಸಾಕ್ಷಿಯಾದ ಚಿತ್ತಿನಲ್ಲಿ ಅಧ್ಯಾಸರೂಪವಾದ ಸಂಬಂಧದಿಂದುಂಟಾದ ಸಾಮರ್ಥ್ಯದಿಂದಲೇ ಪ್ರಕಾಶಿಸುತ್ತದೆ. ಅನ್ಯಥಾ ಅದಕ್ಕೆ ಪ್ರಕಾಶವಿರುವುದಿಲ್ಲ. ॥೫॥

ಆದುದರಿಂದ ಪರಶಿವನು ತನ್ನಿಂದ ಭಾಸ್ಯವಾದ ಅಜ್ಞಾನ ಮತ್ತು ಅದರ ಕಾರ್ಯರೂಪವಾದ ಪ್ರಪಂಚಕ್ಕೆ ಭಾಸಕನಾಗಿ ಅದನ್ನೂ ವ್ಯಾಪಿಸಿಕೊಂಡಿರುತ್ತಾನೆ. ಪರಮಾತ್ಮನು ಸ್ವಭಾವತಃ ವ್ಯಾಪಕನಾಗಿದ್ದರೂ, ಅಂತಃಕರಣಾದ್ಯುಪಾಧಿಗಳಿಂದ ಪರಿಚ್ಛಿನ್ನನಾಗಿರುವಂತೆ ತೋರುತ್ತಿದ್ದರೂ, ವಾಸ್ತವವಾಗಿ ಅಪರಿಚ್ಛಿನ್ನನಾಗಿಯೇ, ಇರುತ್ತಾನೆ. ಆದುದರಿಂದ ಇಂತಹ ಪರಮಾತ್ಮನಿಗೆ ಬೇರೆ ಕಲ್ಪಿತವಾಗಿ ತೋರುತ್ತಿರುವ ವಸ್ತುವಿನ ಸಂಬಂಧದಿಂದ ಸಂಕೋಚವಿಕಾಸಗಳಿಲ್ಲವು. ॥೬॥

ಪರಮಾತ್ಮನು ಸರ್ವವ್ಯಾಪಿಯಾಗಿರುತ್ತಾನೆಂದು ಹಿಂದೆ ಹೇಳಿದ ವಿಷಯದಲ್ಲಿ "ಯಾವಾನ್ವಾ ಅಯಮಾಕಾಶಸ್ತಾವಾನೇಷೋಽಂತರ್ಹೃದಯ ಆಕಾಶಃ" ಛಾಂ.ಉ. ೮.೧.೩. ಎಂಬ ಶ್ರುತ್ಯರ್ಥವನ್ನು ಪ್ರಮಾಣವಾಗಿ ಹೊಂದಿಸಿ ಹೇಳುತ್ತಾನೆ. ಹೊರಗಿರತಕ್ಕ ಭೂತಾಕಾಶದಂತೆ ಹೃದಯಪುಂಡರೀಕದೊಳಗೆ ಒಂದು ಆಕಾಶವು ಇರುವುದು. ಅದೇ ಬ್ರಹ್ಮಸ್ವರೂಪದ ಉಪಲಬ್ಧಿಸ್ಥಾನವು. ಇಲ್ಲಿ ಭೂತಾಕಾಶದೃಷ್ಟಾಂತವನ್ನು ಪರಮಾತ್ಮನು ಸರ್ವವ್ಯಾಪಿಯಾಗಿರುತ್ತಾನೆಂಬ ಅಭಿಪ್ರಾಯದಿಂದ ತಿಳಿಯಬೇಕು. ಅಷ್ಟೇ ಹೊರತು ಭೂತಾಕಾಶದಂತೆ ಪರಿಚ್ಛಿನ್ನವಾಗಿರುತ್ತಾನೆಂದು ತಿಳಿಯಬಾರದು. ಏಕೆಂದರೆ "ಯೇನಾಽಽವೃತಂ ಖಂಚ ದಿವಂ ಮಹೀಂ ಚ" ಎಂಬ ಶ್ರುತಿಯಲ್ಲಿ ಪರಮಾತ್ಮನು ಆಕಾಶವನ್ನೂ ಸಹ ವ್ಯಾಪಿಸಿಕೊಂಡಿರುತ್ತಾನೆಂದು ಪ್ರತಿಪಾದಿಸಲ್ಪಟ್ಟಿರು

ಯಚ್ಚ ನಾಸ್ತಿತಯಾ ಭಾತಿ ಸರ್ವಂ ತಸ್ಮಿನ್ಸಮಾಹಿತಂ ।
ಅತಃ ಸರ್ವಾಶ್ರಯಃ ಶಂಭುಃ ಸರ್ವವ್ಯಾಪೀ ಸ್ವಭಾವತಃ ॥೯॥

ಏಷ ಆತ್ಮಾ ಪರೋ ವ್ಯಾಪೀ ಪಾಪ್ಮಭಿಃ ಸಕಲೈಃ ಸದಾ ।
ಅಸೌ ಚಾಪಹತಃ ಸಾಕ್ಷೀ ವಿಮೃತ್ಯುರ್ವಿಜರಃ ಸುರಾಃ ॥೧೦॥

ವಿಶೋಕೋ ವಿಜಿಘತ್ಸೋಽಪಿಪಾಸಃ ಸತ್ಯಾದಿ ಲಕ್ಷಣಃ ।
ಸತ್ಯಕಾಮಸ್ತಥಾ ಸತ್ಯಸಂಕಲ್ಪಶ್ಚ ಸುರರ್ಷಭಾಃ ॥೧೧॥

ತ್ತದೆ. ಆದುದರಿಂದ ಸರ್ವವ್ಯಾಪಕನಾಗಿದ್ದಾಗ್ಯೂ ಅಂತಃಕರಣರೂಪ ಉಪಾಧ್ಯಧೀನ ವಾಗಿ ಪರಿಚ್ಛಿನ್ನತ್ವವು ಪ್ರಾಪ್ತವಾಗಿರುವಂತೆ ತೋರುತ್ತಿರುತ್ತದೆ. ಇಂತಹ ಹೃದಯಾ ಕಾಶವೆಂಬ ಬ್ರಹ್ಮಸ್ವರೂಪದಲ್ಲಿ ದ್ಯುಲೋಕ, ಪೃಥ್ವೀ ಲೋಕಗಳೂ, ಅಗ್ನಿ, ವಾಯು, ಸೂರ್ಯ, ಚಂದ್ರ, ನಕ್ಷತ್ರಗಳೂ ಇರುತ್ತವೆ. ಅಸ್ತಿ ಇದೆ, ಎಂದು ಯಾವುದು ಭಾಸಮಾನ ವಾಗಿದೆಯೋ ಮತ್ತು "ನಾಸ್ತಿ" ಇಲ್ಲ ಎಂದು ಯಾವುದು ಹೇಳಲ್ಪಡುತ್ತದೆಯೋ ಅವು ಸಮಸ್ತವೂ ಅಲ್ಲಿ ಆಶ್ರಿತವಾಗಿದೆ. ಎಂದರೆ ಯಾವುದಾದರೊಂದು ಕಲ್ಪಿತ, ವಿಕಲ್ಪನಿಷೇಧಗಳಿಗೆ ಎಲ್ಲಕ್ಕೂ ಬ್ರಹ್ಮವೇ ಅಧಿಷ್ಠಾನರೂಪವಾದ ಅವಧಿಯಾಗಿದೆ. ಎಂದು ಹೇಳುವರು. ಆದುದರಿಂದ ಪರಶಿವನು ಸಮಸ್ತ ವಸ್ತುಗಳಿಗೆ ಆಧಾರನಾ ಗಿಯೂ, ತಾನು ವ್ಯಾಪಕನಾಗಿಯೂ ಇರುತ್ತಾನೆ. ||೭-೮-೯||

ಈಶ್ವರನು ಸರ್ವವ್ಯಾಪಕನಾಗಿದ್ದಾಗ್ಯೂ ಜೀವನಿಗೆ ಹೇಗೆ ವ್ಯಾಪಕತ್ವವು ಬರುತ್ತದೆ? ಎಂದರೆ ಅದಕ್ಕೆ ಉತ್ತರವನ್ನು ಹೇಳುತ್ತಾನೆ.

ಓ ಸುರಶ್ರೇಷ್ಠರೇ, ಈಶ್ವರನೇ ಸರ್ವ ಪ್ರತ್ಯಗ್ಭೂತನಾದ ಜೀವನಾಗಿರುತ್ತಾ ನೆಯೇ ಹೊರತು ಪರಮಾತ್ಮನಿಗಿಂತ ಜೀವನು ಬೇರೆಯಾಗಿ ಇರುವುದಿಲ್ಲವು. ಇಂತಹ ವ್ಯಾಪಕನಾದ ಪರಮಾತ್ಮನು ಸಕಲವಾದ ಬ್ರಹ್ಮಹತ್ಯಾದಿ ಪಾಪಗಳಿಂದಲೂ, ಅಶ್ವ ಮೇಧಾದಿ ಯಜ್ಞಗಳಿಂದುಂಟಾದ ಪುಣ್ಯಗಳಿಂದಲೂ ಸಹ ಯಾವಾಗಲೂ ಸಂಪರ್ಕ ವಿಲ್ಲದವನಾಗಿರುತ್ತಾನೆ. ಮತ್ತು ಈಶ್ವರನು ಚಿದ್ರೂಪನಾಗಿಯೂ, ಸರ್ವಸಾಕ್ಷಿ ಯಾಗಿಯೂ, ಜರಾಮರಣಗಳಿಲ್ಲದವನಾಗಿಯೂ, ಶೋಕ, ತಿನ್ನಬೇಕೆಂಬ ಇಚ್ಛೆ, ಪಾನಮಾಡಬೇಕೆಂಬ ಇಚ್ಛೆ ಇವುಗಳಿಲ್ಲದವನಾಗಿಯೂ, ಸಚ್ಚಿದಾನಂದಾತ್ಮಕ ನಾಗಿಯೂ, ವ್ಯಾವಹಾರಿಕಸ್ಥಿತಿಯಲ್ಲಿ ವ್ಯರ್ಥವಾಗದ ಇಚ್ಛೆಯುಳ್ಳವನಾಗಿಯೂ, ಸಂಕಲ್ಪವುಳ್ಳವನಾಗಿಯೂ ಇರುತ್ತಾನೆ. ಈ ಶ್ಲೋಕಗಳಿಂದ "ಏಷ ಆತ್ಮಾಽಪಹತ

ಯಥಾ ಕರ್ಮಜಿತಾ ಲೋಕಾಃ ಕ್ಷೀಯಂತೇ ಭುವಿ ಸತ್ತಮಾಃ ।
ತಥಾ ಪುಣ್ಯಜಿತಾ ಲೋಕಾಃ ಕ್ಷೀಯಂತೇ ಹಿ ಪರತ್ರ ಚ ॥೧೨॥

ಯೇಽವಿದಿತ್ವಾ ಪರಾತ್ಮಾನಂ ವ್ರಜಂತಿ ಸಕಲಾಃ ಕ್ರಿಯಾಃ ।
ತೇಷಾಂ ಸರ್ವೇಷು ಲೋಕೇಷು ಕಾಮಚಾರೋ ನ ವಿದ್ಯತೇ ॥೧೩॥

ಯೇ ವಿದಿತ್ವಾ ಪರಾತ್ಮಾನಂ ವ್ರಜಂತೀವ ಕ್ರಿಯಾಃ ಸ್ಥಿತಾಃ ।
ತೇಷಾಂ ಸರ್ವೇಷು ಲೋಕೇಷು ಕಾಮಚಾರಸ್ತು ವಿದ್ಯತೇ ॥೧೪॥

ಪಾಪ್ಮಾವಿಜರೋ ವಿಮೃತ್ಯುರ್ವಿಶೋಕೋಽಜಿಘತ್ಸಃ ಅಪಿಪಾಸಃ ಸತ್ಯಕಾಮಃ" ಸತ್ಯ ಸಂಕಲ್ಪಃ ಎಂದು ಛಾಂದೋಗ್ಯೋಪನಿಷತ್ತಿನ ೮.೧.೫. ಶ್ರುತಿಯಲ್ಲಿ ಹೇಳಿದ ಪರಮಾತ್ಮನನ್ನು ಉಪಾಸಿಸಲು ಯೋಗ್ಯವಾದ ಗುಣಾಷ್ಟಕಗಳು (ಎಂಟು ಗುಣಗಳು) ವ್ಯಾಖ್ಯಾನಮಾಡಲ್ಪಟ್ಟವು. ಈ ಗುಣಗಳು ಮಧ್ಯಮಾಧಿಕಾರಿಗಳಿಗೆ ಉಪಾಸನೆ ಮಾಡಲು ಯೋಗ್ಯವಾಗಿವೆ. ॥೧೦-೧೧॥

ನಿರ್ಗುಣ ಅಥವಾ ಸಗುಣಬ್ರಹ್ಮೋಪಾಸನೆಯೇ ಮೋಕ್ಷಕ್ಕೆ ಸಾಧನವಾದುದು. ಅಗ್ನಿಹೋತ್ರಾದಿಕರ್ಮಗಳು ಮೋಕ್ಷಕ್ಕೆ ಕಾರಣಗಳಲ್ಲವೆಂದು "ತದ್ಯಥೇಹ ಕರ್ಮ ಚಿತೋಲೋಕಃ ಕ್ಷೀಯತೇ ಏವಮೇವಾ ಮುತ್ರ ಪುಣ್ಯಚಿತೋಲೋಕಃ ಕ್ಷೀಯತೇ" ಛಾಂದೋಗ್ಯೋಪನಿಷತ್ತು ೮.೧.೬. ಇತ್ಯಾದಿ ಶ್ರುತಿಯು ಹೇಳುತ್ತದೆ. ಈ ಶ್ರುತಿಯ ಅರ್ಥವನ್ನು ಸಂಗ್ರಹಿಸುತ್ತಾನೆ—ಓ ಸುರಶ್ರೇಷ್ಠರಾದ ದೇವತೆಗಳೇ, ಪ್ರಾಣಿಗಳು ತಮ್ಮ ಕರ್ಮಗಳಿಂದ ಸಂಪಾದಿಸಿದ ಘಟಪಟಾದಿ ಪ್ರಪಂಚವು ಯಾವರೀತಿಯಲ್ಲಿ ಆಯಾಯ ಪ್ರಾಣಿಗಳಿಗೆ ಭೋಗವನ್ನು ಕೊಟ್ಟು ತಪ್ಪಿಹೋಗುತ್ತದೆಯೋ, ಹಾಗೆಯೇ ಪುಣ್ಯದಿಂದ ಸಂಪಾದಿಸಲ್ಪಟ್ಟ ಸ್ವರ್ಗಾದಿಗಳೂ ಸಹ ಪುಣ್ಯವನ್ನು ಮಾಡಿದ ಮನುಷ್ಯ ನಿಗೆ ಸುಖವನ್ನು ಕೊಟ್ಟು ಆ ಪುಣ್ಯವು ಮುಗಿದುಹೋದಮೇಲೆ ಅವೂ ನಷ್ಟವಾಗು ತ್ತವೆ. ಆದುದರಿಂದ ಕರ್ಮದಿಂದುಂಟಾದ ಫಲಗಳು ಯಾವಾಗಲೂ ಶಾಶ್ವತವಾಗಿರ ಲಾರವು. ॥೧೨॥

ಯಾರು ಪರಮಾತ್ಮನನ್ನು ತಿಳಿಯದೇ ಸಕಲ ಕ್ರಿಯೆಗಳನ್ನು ಹೊಂದುತ್ತಾ ರೆಯೋ ಅವರಿಗೆ ಸಮಸ್ತ ಪಿತ್ರಾದಿ ಲೋಕಗಳಲ್ಲಿ ಸ್ವೇಚ್ಛೆಯಿಂದ ತಿರುಗಾಡಲೂ, ಬೇಕಾದ ಭೋಗಗಳನ್ನು ಪಡೆಯುಲು ಸ್ವಾತಂತ್ರ್ಯವೂ, ಸಾಧ್ಯವಿಲ್ಲ. ॥೧೩॥

ಯಾರು ಪರಮಾತ್ಮನನ್ನು ತಿಳಿದುಕೊಂಡಿರುತ್ತಾರೆಯೋ ಅವರು ಅಗ್ನಿ ಹೋತ್ರಾದಿ ಕರ್ಮಗಳನ್ನು ಮಾಡುತ್ತಾರೆಯೋ ಎಂಬಂತಿರುತ್ತಾರೆಯೇ ಹೊರತು,

ಯಥಾ ಹಿರಣ್ಯಂ ನಿಹಿತಂ ಕ್ಷೇತ್ರಜ್ಞಾನ ವಿವರ್ಜಿತಾಃ ।
ಉಪರ್ಯುಪರಿ ಗಚ್ಛಂತೋ್ಯೇ ನ ವಿಂದೇಯುಃ ಪ್ರಜಾ ಇಮಾಃ ॥೧೫॥

ತಥಾ ಸುಷುಪ್ತೌ ಗಚ್ಛಂತೋ ಬ್ರಹ್ಮಲೋಕಂ ಸ್ವಯಂ ಪ್ರಭಂ ।
ನ ವಿಂದಂತಿ ಮಹಾ ಮೋಹಾದಹೋ ಮೋಹಸ್ಯ ವೈಭವಂ ॥೧೬॥

ವಸ್ತುತಃ ಅವರು ಕರ್ತೃತ್ವಾದ್ಯಭಿಮಾನಗಳಿಂದ ಬಿಡಲ್ಪಟ್ಟಿರುತ್ತಾರೆ. ಅಂತಹವರು "ಸ ಯದಿ ಪಿತೃಲೋಕ ಕಾಮೋಭವತಿ ಸಂಕಲ್ಪಾ ದೇವಾಸ್ಯ ಪಿತರಃ ಸಮುತ್ತಿಷ್ಠಂತೀ" ಎಂಬ ಛಾಂ. ಶ್ರುತ್ಯನುಸಾರವಾಗಿ ಪಿತೃದರ್ಶನಾದಿ ಅನೇಕ ಭೋಗಗಳಿಗೆ ಭಾಗಿಯಾಗುತ್ತಾರೆ. ಎಂದರೆ ಹೃದಯಮಧ್ಯದಲ್ಲಿರತಕ್ಕ ಸತ್ಯಕಾಮಾದಿಗುಣಾಷ್ಟಕಗಳಿಂದ ಉಪಾಸ್ಯವಾದ ದಹರಬ್ರಹ್ಮಸ್ವರೂಪವು ನಿರತಿಶಯಾನಂದ ಸ್ವರೂಪವಾದುದರಿಂದ ಸಮಸ್ತ ಇಚ್ಛಾವಿಶೇಷಗಳೂ ಆ ಬ್ರಹ್ಮಾನಂದದ ಏಕದೇಶಗಳಾದುದರಿಂದ ಸಕಲ ಇಚ್ಛೆಗಳನ್ನೂ ಅವರು ಹೊಂದುವ ಸ್ವಾತಂತ್ರ್ಯವುಳ್ಳವರಾಗಿರುತ್ತಾರೆಂದು ಭಾವವು. ॥೧೪॥

"ಸತಾಸೌಮ್ಯ ತದಾ ಸಂಪನ್ನೋ ಭವತಿ" ಎಂಬ ಛಾಂ. ಶ್ರುತ್ಯನುಸಾರವಾಗಿ ಸುಷುಪ್ತಿಕಾಲದಲ್ಲಿ ಎಲ್ಲರೂ ಸಹ ಬ್ರಹ್ಮಜ್ಞಾನಿಯಂತೆ ಬ್ರಹ್ಮವನ್ನು ಹೊಂದುತ್ತಾರೆ. ಆದುದರಿಂದ ಬ್ರಹ್ಮಜ್ಞಾನಿಯಂತೆ ನಿದ್ರಿತರಾದ ಎಲ್ಲರಿಗೂ ಸರ್ವಕಾಮ ಪ್ರಾಪ್ತಿಯಾಗಬಹುದಲ್ಲವೇ? ಎಂದರೆ ಅದಕ್ಕೆ ಉತ್ತರವನ್ನು ಹೇಳುತ್ತಾನೆ.

ಲೋಕದಲ್ಲಿ ಜನಗಳು ತಿರುಗಾಡುವ ಸ್ಥಳದಲ್ಲಿ ಭೂಮಿಯೊಳಗೆ ದ್ರವ್ಯವು ಇದ್ದಾಗ್ಯೂ ಅದನ್ನು ತಿಳಿಯದೆ ದ್ರವ್ಯಲಾಭವಿಲ್ಲದೆ ಯಾವ ರೀತಿಯಾಗಿ ತೊಂದರೆಪಡುತ್ತಾರೆಯೋ ಹಾಗೆಯೇ ಸಮಸ್ತರಾದವರೂ ಸಹ ಸ್ವಯಂ ಪ್ರಕಾಶವಾದ ಬ್ರಹ್ಮಸ್ವರೂಪವನ್ನೂ ಹೊಂದಿದ್ದಾಗ್ಯೂ ಸಹ ಮೂಲಾಜ್ಞಾನದಿಂದ ಆವೃತರಾದ ಕಾರಣ, ನಾವು ಬ್ರಹ್ಮಭಾವವನ್ನು ಹೊಂದಿರುತ್ತೇವೆ ಎಂದು ತಿಳಿಯುವುದಿಲ್ಲ. ಈ ರೀತಿಯಾಗಿ ವಿದ್ವಾಂಸನೂ ಸರ್ವಸಾಮಾನ್ಯವಾದ ಪ್ರಾಣಿಗಳೂ ಸಹ ಬ್ರಹ್ಮಭಾವವನ್ನು ಹೊಂದಿದ್ದಾಗ್ಯೂ, ಜ್ಞಾನಿಯು ಬ್ರಹ್ಮಭಾವವನ್ನು ಹೊಂದಿ "ಅಹಂ ಬ್ರಹ್ಮಾಸ್ಮಿ" ಎಂದು ಅವನಿಗೆ ಮಾತ್ರ ತಿಳಿವಳಿಕೆಯು ಬರುತ್ತದೆ. ಇತರರು ಅಜ್ಞಾನದಿಂದ ಆವೃತರಾಗಿ ಬ್ರಹ್ಮವನ್ನು ತಿಳಿಯದೆ ಹೊಂದಿರುತ್ತಾರೆ. ಆದುದರಿಂದ ಸುಪ್ತರಾದ ಮಾತ್ರದಿಂದ ಬ್ರಹ್ಮಭಾವವನ್ನು ಹೊಂದಿ ಸರ್ವ ಕಾಮಗಳನ್ನು ಹೊಂದಲಾರರು. ॥೧೫-೧೬॥

ಅಯಂ ಹೃದಿ ಸ್ಥಿತಃ ಸಾಕ್ಷೀ ಸರ್ವೇಷಾ ಮವಿಶೇಷತಃ ।
ತೇನಾಯಂ ಹೃದಯಂ ಪ್ರೋಕ್ತಂ ಶಿವಃ ಸಂಸಾರ ಮೋಚಕಃ ।
ಯ ಏವಂ ವೇದ ಸ ಸ್ವರ್ಗಂ ಲೋಕಮೇತಿ ನ ಸಂಶಯಃ ॥೧೭॥

ಅಸ್ಮಾಚ್ಛರೀರಾ ದುತ್ಥಾಯ ಸುಷುಪ್ತೌ ಯಃ ಸುರರ್ಷಭಾಃ ॥೧೮॥

ಪರಂ ಜ್ಯೋತಿಃ ಸ್ವರೂಪಂ ತಂ ಶಿವಂ ಸಂಪದ್ಯತೇ ಸುರಾಃ ।
ಅಭಿ ನಿಷ್ಪದ್ಯತೇ ಸ್ವೇನ ರೂಪೇಣೈವ ಸ್ವಭಾವತಃ ॥೧೯॥

"ಸ ಏಷ ಆತ್ಮಾ ಹೃದಿ" ಎಂಬ ಶ್ರುತ್ಯನುಸಾರವಾಗಿ ಸರ್ವಗತನಾಗಿಯೂ ಸರ್ವಸಾಕ್ಷಿಯಾಗಿಯೂ ಇರತಕ್ಕ ಪರಮಾತ್ಮನು ಸಮಸ್ತರ ಹೃದಯದಲ್ಲಿ ವಿಶೇಷ ವಿಲ್ಲದೆ (ಸಮಾನವಾಗಿ) ಇರುತ್ತಾನೆ. ಆದುದರಿಂದ ಜ್ಞಾನವನ್ನು ನೀಡುವುದರ ಮೂಲಕ ಸಂಸಾರವನ್ನು ನಿವೃತ್ತಿಮಾಡುವ ಶಿವನಿಗೆ ಹೃದಯವೆಂದು ಹೆಸರು. ಇಂತಹ ಹಾರ್ದಬ್ರಹ್ಮಸ್ವರೂಪವನ್ನು ಯಾರು ತಿಳಿಯುತ್ತಾರೆಯೋ ಅವರು ದುಃಖ ಸಂಪರ್ಕವಿಲ್ಲದ ಪರಮಾನಂದರೂಪವಾದ ಸ್ವರ್ಗಲೋಕವನ್ನು ಎಂದರೆ ಬ್ರಹ್ಮವನ್ನು ಹೊಂದುತ್ತಾರೆ. ಈ ವಿಷಯದಲ್ಲಿ ಸಂಶಯವಿಲ್ಲ. ||೧೭||

ಎಲೈ ಸುರಶ್ರೇಷ್ಠರೇ, ಹಾರ್ದಬ್ರಹ್ಮೋಪಾಸಕನು ಸ್ಥೂಲ ಮತ್ತು ಸೂಕ್ಷ್ಮ ಶರೀರಾಭಿಮಾನವನ್ನು ಬಿಟ್ಟು, ಸುಷುಪ್ತ್ಯವಸ್ಥೆಯಲ್ಲಿ ಜಾಗ್ರತ್ಕಾಲವಲ್ಲಿಯೂ, ಸ್ವಪ್ನ ಕಾಲದಲ್ಲಿಯೂ ಇರುವ ವಿಷಯ ಭೋಗಗಳಿಂದುಂಟಾಗುತ್ತಿದ್ದ ಕಶ್ಮಲವಿಲ್ಲದೇ ಪ್ರಸ ನ್ನನಾಗಿಯೂ ಚಿನ್ಮಾತ್ರನಾಗಿಯೂ, ಹಾರ್ದಬ್ರಹ್ಮವಿದ್ಯೆಯಿಂದ ಅಜ್ಞಾನರೂಪವಾದ ಕಾರಣಶರೀರವನ್ನೂ ಸಹ ಬಿಟ್ಟು, ವಿಕಾರಗಳಿಗಿಂತಲೂ ಅತಿರಿಕ್ತವಾಗಿಯೂ, ವಿಕಾರ ಗಳ ಸಂಪರ್ಕವೂ ಸಹ ಇಲ್ಲದ ಕೇವಲ ಚೈತನ್ಯಪ್ರಕಾಶವಾದ ಪರಶಿವನಸ್ವರೂಪ ವನ್ನು ಹೊಂದುತ್ತಾನೆ. ಅಂತಹ ಪರಮಾತ್ಮಸ್ವರೂಪವನ್ನು ಹೊಂದಿ, ಆ ಪರಮಾ ತ್ಮನೇ ನಾನು, ಎಂದು ಸ್ವಾತ್ಮತ್ವೇನ ತಿಳಿದು, ಅವಿದ್ಯೆಯಿಂದುಂಟಾಗಿದ್ದ ಆ ಪರಿಚ್ಛೇದ ವನ್ನು ಬಿಟ್ಟು, ಸ್ವಕೀಯವಾದ ಬ್ರಹ್ಮಸ್ವರೂಪನಾಗುತ್ತಾನೆ. ಇಲ್ಲಿ ಬ್ರಹ್ಮಪ್ರಾಪ್ತಿ ಎಂಬುದು ಗ್ರಾಮಪ್ರಾಪ್ತಿಯಂತೆ ಗಮನರೂಪವಾದುದಲ್ಲ. ಮತ್ತೇನೆಂದರೆ ತನ್ನ ಕಂಠದಲ್ಲಿರತಕ್ಕ ಆಭರಣವು ಕಳೆದುಹೋಯಿತೆಂಬ ಭ್ರಾಂತಿಯಿಂದ ಅದನ್ನು ಹುಡುಕುತ್ತಿರಲು, ನಿನ್ನ ಕಂಠದಲ್ಲಿಯೇ ಇದೆ. ಎಂದು ಯಾರಾದರೂ ಜ್ಞಾಪಿಸಿದರೆ

ಏಷ ಆತ್ಮಾ ನ ಚೈವಾನ್ಯಃ ಸತ್ಯಮೇವ ಮಯೋದಿತಂ ।
ಏತದೇವಾ ಮೃತಂ ಸಾಕ್ಷಾದಭಯಂ ಬ್ರಹ್ಮ ಹೇ ಸುರಾಃ ॥೨೦॥

ಯ ಆತ್ಮಾ ದಹರಾಕಾಶಃ ಸ ಸೇತುಃ ವಿಧೃತಿಃ ಸುರಾಃ ।
ಅಸಂ ಭೇದಾಯ ಲೋಕಾನಾ ಮೇಷಾ ಮೇತಂ ಮಹೇಶ್ವರಂ ॥೨೧॥

ಅಹೋರಾತ್ರೇ ನ ತರತೋ ನ ಮೃತ್ಯುರ್ನ ಜರಾಽಪಿ ಚ ।
ನ ಶೋಕೋ ನೈವ ಸುಕೃತಂ ನ ದುಷ್ಕೃತ ಮಹೇಶ್ವರಾಃ ॥೨೨॥

ಅದನ್ನು, ಆಭರಣವು ಕಂಠದಲ್ಲಿದ್ದಾಗ್ಯೂ ಸಹ ಭ್ರಾಂತಿಯಿಂದ ಇಲ್ಲವೆಂದು ತಿಳಿದಿದ್ದು ಜ್ಞಾನದಿಂದ ಪಡೆದಂತೆ, ಪೂರ್ವದಲ್ಲೂ ಬ್ರಹ್ಮಸ್ವರೂಪನಿದ್ದಾಗ್ಯೂ ಅಜ್ಞಾನದಿಂದ ನಾನು ಬ್ರಹ್ಮಸ್ವರೂಪನಾಗಿಲ್ಲವು. ಎಂದು ತಿಳಿದುಕೊಂಡಿರುತ್ತಾನೆ. ಅನಂತರ ಬ್ರಹ್ಮ ಜ್ಞಾನವು ಬರಲು ಪ್ರಾಪ್ತವಾಗಿದ್ದ ಬ್ರಹ್ಮಸ್ವರೂಪವನ್ನೇ ಹೊಂದುತ್ತಾನೆ.॥೧೮-೧೯॥

ಓ ಸುರರೇ, ದೇಹತ್ರಯದಿಂದ ನಿರ್ಮುಕ್ತವಾಗಿರುವುದೇ ಆತ್ಮಸ್ವರೂಪವು. ಇದಕ್ಕಿಂತಲೂ ಬೇರೆಯದಾದ ದೇಹಾದಿ ವಿಶಿಷ್ಟವಾದದ್ದು ಆತ್ಮನಲ್ಲವು. ಈ ನನ್ನ ಮಾತು ಸತ್ಯವಾದುದು. "ಯೋ ವೈ ಭೂಮಾ ತದಮೃತಂ" ಎಂಬ ಶ್ರುತ್ಯನುಸಾರವಾಗಿ ಅಪರಿಚ್ಛಿನ್ನವಾದ ಆತ್ಮವಸ್ತುವೇ ಅಮೃತವು, ಅವಿನಾಶಿಯು. "ಅಭಯಂ ಬ್ರಹ್ಮ" ಎಂಬ ಶ್ರುತ್ಯನುಸಾರವಾಗಿ ಬ್ರಹ್ಮಸ್ವರೂಪವು ಅಭಯಹೇತುವಾದುದರಿಂದ ಬ್ರಹ್ಮ ಸ್ವರೂಪವೇ ಅಭಯುವು. "ದ್ವಿತೀಯಾದ್ವೈಭಯಂ ಭವತಿ" ಎಂಬ ಶ್ರುತ್ಯನುಸಾರ ವಾಗಿ ಅನಾತ್ಮಪದಾರ್ಥಗಳಿಂದ ಭಯವೇ ಉಂಟಾಗುತ್ತದೆ. ॥೨೦॥

ಓ ಸುರರೇ, ದಹರಾಕಾಶರೂಪನಾದ ಆತ್ಮನು, ಸೇತುವು ನೀರನ್ನು ತಡೆದು ನಿಲ್ಲಿಸುವಂತೆ, ಸಮಸ್ತವನ್ನೂ ಮರ್ಯಾದೆಯಲ್ಲಿರುವಂತೆ ತಡೆಯತಕ್ಕವನಾಗಿಯೂ, ಕರ್ತೃ, ಕರ್ಮ, ಫಲಾಶ್ರಯಗಳಾದ ಭೂರಾದಿ ಲೋಕಗಳು ನಾಶವಾಗದಂತೆ ಧರಿಸತಕ್ಕ ವನಾಗಿಯೂ, ಇರುತ್ತಾನೆ. ಸಮಸ್ತ ಪ್ರಾಣಿಗಳಿಗೂ ಪರಿಚ್ಛೇದಕಗಳಾದ ಹಗಲು ಮತ್ತು ರಾತ್ರಿಗಳು ಈ ಆತ್ಮನನ್ನೂ ಅಳೆಯಲಾರವು. ಎಂದರೆ ಆತ್ಮರೂಪವಾದ ಸೇತುವಿಗೆ ಕಾಲಪರಿಚ್ಛೇದವು ಇಲ್ಲ. ಮತ್ತು ಜರಾಮರಣಗಳೂ, ದುಃಖಗಳೂ, ಪುಣ್ಯ ಪಾಪಗಳೂ ಸಹ ದೇಹಧರ್ಮಗಳಾದುದರಿಂದ ಇವುಗಳೂ ಆತ್ಮನಿಗಿಲ್ಲವು. ॥೨೧-೨೨॥

ಅತಃ ಸರ್ವೇ ನಿವರ್ತಂತೇ ಪಾಪ್ಮಾನಃ ಸುರ ಪುಂಗವಾಃ ।
ಏಷೋಽಪಹತ ಪಾಪ್ಮಾ ಹಿ ಬ್ರಹ್ಮಲೋಕಃ ಸ್ವಯಂಪ್ರಭಃ ॥೨೩॥

ತಸ್ಮಾದ್ವೈ ಸೇತು ಮೇಕಂ ತು ತೀರ್ತ್ವಾಽಂಧಃ ಸನ್ಸುರರ್ಷಭಾಃ ।
ಭವತ್ಯನಂಧೋ ವಿದ್ಧಃ ಸನ್ನವಿದ್ಧಸ್ತದ್ವದೇವ ತು ॥
ಉಪತಾಪೀ ತು ಸನ್ ದೇವಾ ನೋಪತಾಪೀ ಭವತ್ಯಪಿ ॥೨೪॥

ಯ ಏಷೋ ದಹರಾಕಾಶ ಇತ್ಯುಕ್ತಃ ಪರಮೇಶ್ವರಃ ।
ಸ ದೇಹಾದಿ ವಿಶೇಷೇಭ್ಯಃ ಪೃಥಗ್ಭೂತಃ ಸನಾತನಃ ॥೨೫॥

ಎಲೈ ಸುರಶ್ರೇಷ್ಠರೇ, ಪಾಪಗಳ ಸಂಬಂಧವಿಲ್ಲದ ಸ್ವಯಂಪ್ರಕಾಶನಾದ ಆತ್ಮನಿಂದ ಪಾಪಗಳೂ ಹಿಂದಕ್ಕೆ ತಿರುಗುತ್ತವೆ. ಎಂದರೆ ಸ್ವಪ್ರಕಾಶನಾದ ಆತ್ಮನಿಗೆ ಯಾವ ವಿಧವಾದ ಪಾಪಗಳ ಸಂಪರ್ಕವೂ ಆಗುವುದಿಲ್ಲ. ॥೨೩॥

ಓ ಸುರಶ್ರೇಷ್ಠರೇ, ದೇಹಾದಿಗಳಿಂದ ವಿವಿಕ್ತ (ಬೇರೆಯಾದ) ನಾದ ಆತ್ಮರೂಪವಾದ ಸೇತುವನ್ನು ವಿದ್ವಾಂಸನು ಪಡೆದು, ಅಂಧನಾದಾಗ್ಯೂ ಅನಂಧನಾಗಿಯೂ, ದುಃಖಾದಿಗಳುಳ್ಳವನಾಗಿದ್ದಾಗ್ಯೂ ಅವುಗಳಿಲ್ಲದವನಾಗಿಯೂ, ಜರಾದಿಗಳಿಂದ ಪೀಡಿತನಾಗಿದ್ದಾಗ್ಯೂ ಅವುಗಳ ಸಂಬಂಧವಿಲ್ಲದವನೂ ಆಗಿರುತ್ತಾನೆ. ಎಂದರೆ ಅಂಧಾದಿ ಧರ್ಮಗಳು ಸ್ಥೂಲಶರೀರ ಧರ್ಮಗಳು. ಇವುಗಳು ಆತ್ಮನನ್ನು ತಿಳಿದ ಕೂಡಲೇ ಸ್ಥೂಲಶರೀರ ಸಂಬಂಧವೇ ನಿವೃತ್ತವಾಗುವುದರಿಂದ ಆ ಧರ್ಮಗಳ ಸಂಪರ್ಕವಿಲ್ಲದವನಾಗುತ್ತಾನೆ. ॥೨೪॥

ಈ ರೀತಿಯಾಗಿ ದಹರವೆಂಬ ವಿದ್ಯೆಗೆ ವಿಷಯವಾದ ಬ್ರಹ್ಮವನ್ನು ಉಪದೇಶಿಸಿ, ಜಾಗ್ರತ್ಸ್ವಪ್ನಸುಷುಪ್ತಿಗಳೆಂಬ ಅವಸ್ಥೆಗಳಿಂದ ಬ್ರಹ್ಮಸ್ವರೂಪವನ್ನು ಪ್ರತಿಪಾದಿಸತಕ್ಕ, ಪ್ರಜಾಪತಿಯಿಂದ ಇಂದ್ರನಿಗೆ ಉಪದಿಷ್ಟವಾದ ವಿದ್ಯೆಯು "ಯ ಏಷೋಽಕ್ಷಿಣಿ ಪುರುಷೋದೃಶ್ಯತೇ" ಎಂದು ಛಾ. ಶ್ರುತಿಯಲ್ಲಿ ನಿರ್ದಿಷ್ಟವಾಗಿದೆ. ಅದರ ಅರ್ಥವನ್ನು ಸಂಗ್ರಹಿಸಿ ಹೇಳುತ್ತಾನೆ.

ದಹರಾಕಾಶವೆಂದು ಪ್ರಸಿದ್ಧನಾದ ಶಾಶ್ವತನಾದ ಪರಮೇಶ್ವರನು ಸ್ಥೂಲ, ಸೂಕ್ಷ್ಮ, ಕಾರಣಗಳೆಂಬ ಮೂರು ಶರೀರಗಳಿಗಿಂತಲೂ ಬೇರೆಯವನಾಗಿರುತ್ತಾನೆ. ಮತ್ತು ಸ್ವಪ್ರಕಾಶನಾದುದರಿಂದ ದೇಹಾದಿಗಳಿಗೂ, ಜಾಗ್ರದಾದ್ಯವಸ್ಥೆಗಳಿಗೂ, ಸಾಕ್ಷಿ

ಜಾಗ್ರತ್ಸ್ವಪ್ನ ಸುಷುಪ್ತ್ಯಾಖ್ಯಾಽವಸ್ಥಾಯಾ ಭಾತಿ ದೇಹಿನಾಂ ।
ತಸ್ಯಾ ಅಪಿ ಮಹಾದೇವಃ ಸಾಕ್ಷೀ ಭಿನ್ನಃ ಸ್ವಯಂ ಪ್ರಭಃ ॥೨೬॥

ಅಸ್ಮಿನ್ನಧ್ಯಸ್ತ ರೂಪೇಣ ಸಾ ವಿಭಾತಿ ನ ಭಾತಿ ಚ ॥೨೭॥

ಸ್ವದೃಶ್ಯೇನ ಶರೀರೇಣ ಸಶರೀರಸ್ಯ ಸರ್ವದಾ ।
ಪ್ರಿಯಾ ಪ್ರಿಯಾಭ್ಯಾಂ ಸಂಬಂಧೋ ಭವತ್ಯೇವ ನ ಸಂಶಯಃ ॥೨೮॥

ಅಶರೀರಂ ವಾವ ಸಂತಂ ವಿದ್ಯಯಾ ನ ಪ್ರಿಯಾ ಪ್ರಿಯೇ ।
ಸ್ಪೃಶತಃ ಸತ್ಯಮೇವೋಕ್ತಂ ನಾತ್ರ ಸಂದೇಹ ಕಾರಣಂ ॥೨೯॥

ಯ ಏಷ ದಹರಾಕಾಶಃ ಸ ಏವ ಸುರ ಪುಂಗವಾಃ ।
ನಾಮ ರೂಪಸ್ಯ ನಿರ್ಮಾತಾ ತದೇವ ಬ್ರಹ್ಮ ಶಾಶ್ವತಂ ॥೩೦॥

ಯಾದ ಈಶ್ವರನು ಸಮಸ್ತ ಪ್ರಾಣಿಗಳೂ ಅನುಭವಿಸುತ್ತಿರುವ ಜಾಗ್ರತ್ಸ್ವಪ್ನಸುಷುಪ್ತಿಗಳೆಂಬ ಮೂರು ಅವಸ್ಥೆಗಳಿಗಿಂತಲೂ, ಭಿನ್ನ (ಬೇರೆಯವ) ನಾಗಿರುತ್ತಾನೆ. ಎಂದರೆ ದೇಹಾದಿಗಳೂ, ಜಾಗ್ರದಾದ್ಯವಸ್ಥೆಗಳೂ ಜಡವಾದುದರಿಂದ ಸಾಕ್ಷಿಭಾಸ್ಯಗಳು. ಸ್ವಪ್ರಕಾಶಕನಾದ ಮಹಾದೇವನೆಂಬ ಆತ್ಮನು ಅವುಗಳಿಗೆ ಸಾಕ್ಷಿಯಾಗಿಯೂ, ಅವುಗಳಿಗಿಂತ ಬೇರೆಯಾಗಿಯೂ ಇರುತ್ತಾನೆ. ಅನಾತ್ಮವಾದ ದೇಹಾದಿಜಡಪ್ರಪಂಚವು ಆತ್ಮನಲ್ಲಿ ಅಜ್ಞಾನದಿಂದ ಅಧ್ಯಸ್ತವಾದುದರಿಂದ ಒಂದುಕಾಲದಲ್ಲಿ ಪ್ರಕಾಶಮಾನವಾಗಿಯೂ ಒಂದುಕಾಲದಲ್ಲಿ ಪ್ರಕಾಶವಿಲ್ಲದ್ದಾಗಿಯೂ ಇರುತ್ತದೆ. ಆ ಪ್ರಪಂಚವು ಅಧಿಷ್ಠಾನದಲ್ಲಿ ಅಧ್ಯಸ್ತವಾಗದೇ ಸ್ವಪ್ರಕಾಶವಾಗಿದ್ದರೆ ಯಾವಾಗಲೂ ಪ್ರಕಾಶವಾಗಲೆಂದು ಆಪತ್ತಿಯು ಬರುತ್ತಿತ್ತು. ಆದರೆ ಜಡಪ್ರಪಂಚಕ್ಕೆ ಪ್ರಕಾಶಕವಾದ ಆತ್ಮಸ್ವರೂಪದಿಂದಲೇ ಪ್ರಕಾಶಬರಬೇಕೇ ಹೊರತು ಸ್ವಯಂಪ್ರಕಾಶವಾಗುವುದಲ್ಲ.॥೨೫-೨೬-೨೭॥

ದೇಹಾದಿ ವಿಶಿಷ್ಟವಾದ ಪ್ರಾಣಿಗೆ ಅವುಗಳಲ್ಲಿ ಅಭಿಮಾನವಿರುವುದರಿಂದ ಯಾವಾಗಲೂ ಸುಖದುಃಖಾನುಭವರೂಪವಾದ ಸಂಸಾರವುಂಟಾಗುತ್ತದೆ. ಈ ವಿಷಯದಲ್ಲಿ ಸಂದೇಹವಿಲ್ಲ. ದೇಹಾದಿಸಂಪರ್ಕವಿಲ್ಲದೆ ಕೇವಲ ಆತ್ಮಜ್ಞಾನವನ್ನು ಪಡೆದ ಜ್ಞಾನಿಗೆ ಪ್ರಿಯಾಪ್ರಿಯಗಳೆಂಬ ಪುಣ್ಯಪಾಪಗಳ ಫಲದ ಸಂಬಂಧವಿರುವುದಿಲ್ಲ. ನಾನು ಸತ್ಯವಾಗಿ ಹೇಳುತ್ತೇನೆ. ಈ ವಿಷಯದಲ್ಲಿ ಸಂದೇಹಬೇಡ. ॥೨೮-೨೯॥

ದಹರಾಕಾಶಶಬ್ದವು ಬ್ರಹ್ಮ ತತ್ವ ಪರವಾದುದೆಂಬುದನ್ನು ದೃಢೀಕರಿಸಲು "ಆಕಾಶೋ ಹವೈ ನಾಮ ರೂಪಯೋರ್ನಿರ್ವಹಿತಾ" ಎಂಬ ಛಾಂ. ಉ. ೮.೧೪.೧.

ಅಮೃತಂ ಚ ತದೇ ವೈತತ್ಸ ಆತ್ಮಾ ಸರ್ವದೇಹಿನಾಂ ।
ತತೋ ನಾನ್ಯತ್ಪರಂ ಕಿಂಚಿನ್ನಾಪರಂ ಚಾಸ್ತಿ ಕಿಂಚನ ॥೩೧॥

ಸ ಏವ ಸರ್ವ ರೂಪೇಣ ವಿಭಾತಿ ನ ವಿಭಾತಿ ಚ ।
ಅಹೋ ರುದ್ರಸ್ಯ ದೇವಸ್ಯ ಪೂರ್ಣತಾ ಕೋ ನು ವೇದ ತಾಂ ॥೩೨॥

ಯಥಾ ಮೃತ್ ಸ್ವವಿಕಾರೇಷು ತತ್ತದ್ರೂಪೇಣ ಸಂಸ್ಥಿತಾ ।
ತಥಾ ಸರ್ವತ್ರ ತತ್ಸಾಕ್ಷೀ ತತ್ತದ್ರೂಪೇಣ ಸಂಸ್ಥಿತಃ ॥೩೩॥

ಯಥಾ ವಾರಿ ವಿಕಾರೇಷು ಜಲಂ ತತ್ತತ್ಸ್ವರೂಪತಃ ।
ತಥಾ ಸರ್ವತ್ರ ತತ್ಸಾಕ್ಷೀ ತತ್ತದ್ರೂಪೇಣ ಸಂಸ್ಥಿತಃ ॥೩೪॥

ಯಥಾಽಗ್ನಿಃ ಸ್ವವಿಕಾರೇಷು ತತ್ತದ್ರೂಪೇಣ ಸಂಸ್ಥಿತಃ ।
ತಥಾ ಸರ್ವತ್ರ ತತ್ಸಾಕ್ಷೀ ತತ್ತದ್ರೂಪೇಣ ಸಂಸ್ಥಿತಃ ॥೩೫॥

ಯಥಾ ವಾ ಸ್ವ ವಿಕಾರೇಷು ವಾಯುಸ್ತತ್ತತ್ಸ್ವರೂಪತಃ ।
ತಥಾ ಸರ್ವತ್ರ ತತ್ಸಾಕ್ಷೀ ತತ್ತದ್ರೂಪೇಣ ಸಂಸ್ಥಿತಃ ॥೩೬॥

ಶ್ರುತ್ಯರ್ಥವನ್ನು ಸಂಗ್ರಹಿಸುತ್ತಾನೆ. ಓ ಸುರಶ್ರೇಷ್ಠರೇ, ಆಕಾಶವೆಂದು ಹೆಸರುಳ್ಳ ಹೃದಯದ ಮಧ್ಯದಲ್ಲಿರುವ ಆತ್ಮನು ಘಟಪಟಾದಿ ನಾಮರೂಪಗಳಿಗೂ ನೀಲ ಪೀತಾದಿರೂಪಗಳಿಗೂ ಕರ್ತೃವಾಗಿರುತ್ತಾನೆ. ಅವನೇ ಶಾಶ್ವತನಾದ ಬ್ರಹ್ಮಸ್ವರೂಪ ನಾಗಿರುತ್ತಾನೆ. ॥೩೦॥

ಆ ಆತ್ಮನೇ ಅಮೃತಸ್ವರೂಪನೂ, ಸಮಸ್ತರಿಗೂ, ಆತ್ಮಭೂತನಾಗಿಯೂ ಇರುತ್ತಾನೆ. ಅಂತಹ ಆತ್ಮನನ್ನು ಬಿಟ್ಟು ಯಾವುದೂ ಇರುವುದಿಲ್ಲ. ಆತ್ಮನೇ ಘಟಪಟಾದಿರೂಪದಿಂದ ಇದ್ದು ಒಂದು ಕಾಲದಲ್ಲಿ ಪ್ರಕಾಶಮಾನವಾಗಿಯೂ ಒಂದು ಕಾಲದಲ್ಲಿ ಪ್ರಕಾಶಮಾನವಾಗದೆಯೂ ಇರುತ್ತಾನೆ. ಈ ರೀತಿಯಾಗಿ ರುದ್ರನಾದ ಪರಮೇಶ್ವರನ ಪೂರ್ಣತೆಯು ಬಹಳ ಆಶ್ಚರ್ಯಕರವಾಗಿದೆ. ಆ ಪೂರ್ಣತೆಯನ್ನು ಯಾರುತಾನೇ ತಿಳಿಯಲು ಸಾಧ್ಯ? ॥೩೧-೩೨॥

ಮಣ್ಣು ತನ್ನ ವಿಕಾರವಾದ ಘಟಾದಿರೂಪದಿಂದ ಇರುವಂತೆಯೂ, ನೀರು ತಟಾಕಾದಿ ನಾಮರೂಪವಾಗಿರುವಂತೆಯೂ, ವಾಯುವು ತನ್ನ ವಿಕಾರವಾಗಿರುವಂ ತೆಯೂ ಸಹ, ಸಮಸ್ತ ಪ್ರಪಂಚಕ್ಕೂ ಸಾಕ್ಷಿಯಾದ ಆತ್ಮನು ಆಯಾಯ ಘಟ

ಯಥಾ ವಾ ಸರ್ವಗಂ ವ್ಯೋಮ ಸ್ವಾಕಾರೇಣೈವ ಸಂಸ್ಥಿತಂ ।
ತಥಾ ಸರ್ವಾತ್ಮಕಃ ಸಾಕ್ಷೀ ಸಾಕ್ಷಿರೂಪೇಣ ಸಂಸ್ಥಿತಃ ॥೩೭॥

ಘಟಾಕಾಶಾದಿ ಭೇದೇನ ವಿಭಿನ್ನೋಽಪ್ಯವಿಭಾಗವಾನ್ ।
ಆಕಾಶಸ್ತದ್ವದೀಶಾನೋ ವಿಭಿನ್ನೋಽಪ್ಯವಿಭಾಗವಾನ್ ॥೩೮॥

ಮಹಾದೇವೋ ವಿಭಾಗೇನ ವಿಭಾಗೇನ ಚ ಭಾಸತೇ ।
ಅನ್ಯಥಾ ಚೇ ನ್ಮಹಾದೇವೋ ಮಹಾದೇವಃ ಕಥಂ ಭವೇತ್ ॥೩೯॥

ಮಹಾದೇವೋ ಮಹಾದೇವ ಏವ ನೈವಾ ಮಹಾನಯಂ ।
ತಥಾ ಸತಿ ಮಹಾದೇವ ಏವ ಸರ್ವಂ ನ ಚಾ ಪರಂ ॥೪೦॥

ಪಟಾದಿ ರೂಪದಿಂದಿರುತ್ತಾನೆ. ಒಟ್ಟು ಸಮಸ್ತ ಘಟಾದಿಗಳೂ ಸಾಕ್ಷಿಯಲ್ಲಿ ಅಧ್ಯಸ್ತ ವಾದುದರಿಂದ ಅಧ್ಯಸ್ತವಾದುದು ಅಧಿಷ್ಠಾನಕ್ಕಿಂತಲೂ ಬೇರೆಯಿಲ್ಲದ್ದರಿಂದ ಸಮಸ್ತವೂ ವಸ್ತುತಃ ಆತ್ಮರೂಪವಾಗಿಯೇ ಇರುವುದು. ||೩೨-೩೪,೩೫-೩೬||

ಆಕಾಶವು ಸರ್ವತ್ರ ವ್ಯಾಪಿಸಿಕೊಂಡಿದ್ದಾಗ್ಯೂ ತನ್ನ ಪ್ರಕಾಶಕ್ಕೆ ತೊಂದರೆಯಿಲ್ಲದೆ ವ್ಯಾಪಕವಾಗಿರುವಂತೆ, ಸರ್ವಾತ್ಮಕನಾದ ಸಾಕ್ಷಿಯೂ ಕೂಡ ಸಾಕ್ಷಿಸ್ವರೂಪನಾಗಿ ವ್ಯಾಪಿಯಾಗಿಯೇ ಇರುತ್ತಾನೆ. ಎಂದರೆ ಆಕಾಶವು ಎಲ್ಲ ಕಡೆಯಲ್ಲಿ ಅನುಗತವಾಗಿದ್ದಾಗ್ಯೂ ನಿರ್ಲೇಪವಾಗಿರುವಂತೆ ಸಾಕ್ಷಿಯಾದ ಆತ್ಮನೂ ಸಹ ಸರ್ವತ್ರ ಅನುಗತನಾಗಿದ್ದಾಗ್ಯೂ ನಿರ್ಲೇಪವಾಗಿರುತ್ತಾನೆ. ||೩೭||

ಸರ್ವವ್ಯಾಪಕವಾದ ಆಕಾಶವು ಘಟಮಠಾದ್ಯುಪಾಧ್ಯಧೀನವಾಗಿ ಭಿನ್ನಭಿನ್ನವಾಗಿರುವಂತೆ ತೋರುತ್ತಿದ್ದಾಗ್ಯೂ ವಸ್ತುತಃ ಏಕರೂಪವಾಗಿರುವಹಾಗೆ ಪರಮಾತ್ಮನೂ ಸಹ ದೇಹಾದ್ಯುಪಾಧಿಗಳಿಂದ ಭಿನ್ನವಾಗಿ ತೋರಿದರೂ ತಾತ್ವಿಕವಾಗಿ ಏಕರೂಪವಾಗಿರುತ್ತಾನೆ. ||೩೮||

ಮಹಾದೇವನು ಉಪಾಧಿಗಳಿಂದ ಬೇರೆಬೇರೆಯಾಗಿಯೂ ವಸ್ತುತಃ ಏಕರೂಪನಾಗಿಯೂ ತೋರುತ್ತಾನೆ. ಹಾಗಿಲ್ಲದಿದ್ದರೆ ಮಹಾದೇವನೇ ಆಗಲಾರನು. ಮಹಾ ಎಂದರೆ ದೊಡ್ಡದು, ವ್ಯಾಪಕನೆಂದರ್ಥವು. ಆದುದರಿಂದಲೇ ಸರ್ವರೂಪದಿಂದಲೂ ತೋರುತ್ತಾನೆ. ||೩೯||

ಮಹಾಂಶ್ಚಾಸೌ ದೇವಶ್ಚ ಮಹಾದೇವಃ ಎಂಬ ವ್ಯುತ್ಪತ್ತಿಯಿಂದ ಪರಮಾತ್ಮನು ಎಲ್ಲಾ ಪದಾರ್ಥಗಳಿಗಿಂತಲೂ ವ್ಯಾಪಕನಾದ ದೇವನಾಗಿರುತ್ತಾನೆ. ಹಾಗಿಲ್ಲ

ಯೇನ ಕೇನಾಪಿ ರೂಪೇಣ ಯದ್ಯದ್ಭಾತಿ ನ ಭಾತಿ ಚ ।
ತೇನ ತೇನೈವ ರೂಪೇಣ ಶಿವ ಏವಾವ ಭಾಸತೇ ॥೪೧॥

ಯಥಾ ಭಾತೇನ ರೂಪೇಣ ಶಿವ ಏವೇತಿ ಯಾ ಮತಿಃ ।
ಸಾ ಶಿವಾ ಪರಮಾ ಸಂವಿನ್ಮಾ ಪರಾ ನಹಿ ಸಂಶಯಃ ॥೪೨॥

ಅಹಮಿತಿ ಶಿವಸತ್ಯ ಚಿದ್ಘನಃ ।
ಸ್ಫುರತಿ ಸದಾ ಪೃಥಗಸ್ತಿ ನೈವ ವಸ್ತು ॥
ಇದಮಿತಿ ವಪುಷಾ ಚ ತೇನ ಬಂಧನಂ ।
ನ ಹಿ ಮನುಜಸ್ಯ ವಿಮೋಚನಂ ಚ ಕಿಂಚಿತ್ ॥೪೩॥

ದಿದ್ದರೆ ಹಿಂದೆ ಹೇಳಿದ ವ್ಯುತ್ಪತ್ತಿಯಂತೆ ಅವನಿಗೆ ಮಹಾದೇವನೆಂಬ ನಾಮವು ಅನ್ವರ್ಥವಾಗಿ ಬರಲಾರದು. ಆರೀತಿಯಾದ ವ್ಯುತ್ಪತ್ತಿಯಿಂದಲೇ ಸಮಸ್ತವೂ ಮಹಾದೇವನೇ ಆಗಿರುತ್ತದೆ. ಅವನಿಗಿಂತಲೂ ಬೇರೆ ಯಾವುದೂ ಇರುವುದಿಲ್ಲ. ಯಾವ ಯಾವ ವಸ್ತುವು ಯಾವುದಾದರೊಂದು ರೂಪದಲ್ಲಿ ಸ್ಫುರಿಸುತ್ತದೆಯೋ ಅಥವಾ ಇಲ್ಲವೋ, ಆಯಾಯಾ ವಸ್ತುವಿನ ಆಯಾಯಾ ರೂಪದಿಂದ ಶಿವನೇ ಭಾಸವಾಗುತ್ತಾನೆ. ||೪೦-೪೧||

ಯಾವ ಯಾವ ರೂಪದಿಂದ ಯಾವುದು ಭಾನವಿಷಯವಾಗುತ್ತದೆಯೋ ಆಯಾಯಾ ರೂಪದಿಂದ ಆ ವಸ್ತುಗಳಿಗೆ ಅಧಿಷ್ಠಾನವಾದ ಸಚ್ಚಿದಾನಂದಾತ್ಮಕನಾದ ಶಿವನೇ ಭಾತನಾಗುತ್ತಾನೆ. ಈರೀತಿಯಲ್ಲಿರತಕ್ಕ ಬುದ್ಧಿಯು ಸಂವಿದ್ರೂಪವಾದ ಪರಾಶಕ್ತಿರೂಪವಾದುದು. ಅದು ಬೇರೆಯಾದುದಲ್ಲ. ಈ ವಿಷಯದಲ್ಲಿ ಸಂಶಯವಿಲ್ಲ. ||೪೨||

ಅಹಂ ಎಂಬುದಾಗಿ ಸಚ್ಚಿದಾನಂದಾತ್ಮಕನಾದ ಶಿವನು ಯಾವಾಗಲೂ ಎಲ್ಲದರಲ್ಲೂ ಸ್ಫುರಿಸುತ್ತಾನೆ. ಶಿವನಿಗಿಂತಲೂ ಬೇರೆ ಯಾವ ವಸ್ತುವೂ ಇರುವುದಿಲ್ಲ. ಆದುದರಿಂದ ಮನುಜನಿಗೆ "ಇದಂ" ಎಂಬ ವಿಷಯವಿಷಯಕವಾದ ಜ್ಞಾನವು ಯಾವಾಗಲೂ ಸಂಸಾರಬಂಧನಕ್ಕೆ ಕಾರಣವು. ಅವನು ವಿಷಯಗಳಲ್ಲಿಯೇ ಲೋಲುಪನಾಗಿರುವ ಪಕ್ಷದಲ್ಲಿ ಅವನಿಗೆ ಈ ಸಂಸಾರದಿಂದ ವಿಮುಕ್ತಿಯು ಬರಲಾರದು. ||೪೩||

ಶಿವ ಇತಿ ಸಕಲಂ ಯದಾ ವಿಭಾಸತೇ ।
ನ ಚ ಮರಣಂ ಜನನಂ ತದಾಽಸ್ತಿ ಕಿಂಚಿತ್ ॥
ಇತಿ ಹೃದಯೇ ವಚನಂ ಮದೀಯಮೇತತ್ ।
ನಿಶಿತ ಮತಿಃ ಸತತಂ ನಿಧಾಯ ತಿಷ್ಠೇತ್ ॥೪೪॥

ಪರಮ ಶಿವಃ ಪರಮೇಶ್ವರಃ ಪ್ರಸನ್ನೋ ।
ಯದಿ ವಿಮಲಾ ಪರಮಾನುಭೂತಿರೇಷಾ ॥
ನ ಹಿ ಸಕಲೈ ರ್ವಿಮಲೈ ರುಪಾಯವೃಂದೈ ।
ರ್ನ ಚ ಹರಿಣಾ ನ ಮಯಾ ನ ಚಾಪರೇಣ ॥೪೫॥

ಪರಮ ಶಿವಃ ಪರಮೇಶ್ವರಃ ಸ್ವತಂತ್ರೋ ।
ಯದಿ ಕುರುತೇ ಮನುಜಸ್ಯ ವೇದನಂ ಹಿ ತತ್ ॥
ಪರಮಪದಂ ವಿಮಲಂ ಪ್ರಯಾತಿ ಮರ್ತ್ಯೋ ।
ಯದಿ ಕುರುತೇ ನ ಶಿವಃ ಪ್ರಯಾತಿ ಬಂಧಂ ॥೪೬॥

ಯಾವ ಉತ್ತಮಾಧಿಕಾರಿಗೆ ಶ್ರವಣ, ಮನನ, ನಿಧಿಧ್ಯಾಸನಗಳಿಂದ ಸಕಲವೂ ಶಿವಸ್ವರೂಪವಾಗಿದೆಯೆಂದು ತೋರುತ್ತದೆಯೋ ಅಂತಹವನಿಗೆ ಜನನ, ಮರಣಗಳೆಂಬ ಶರೀರಧರ್ಮಗಳು ಬರಲಾರವು. ಎಂದರೆ ಅಂತಹವನು ಶರೀರತ್ರಯದಿಂದ ನಿರ್ಮುಕ್ತನಾಗಿ ಸಾಕ್ಷಾತ್ಪರಶಿವನೇ ಆಗಿರುವುದರಿಂದ ಜನ್ಮಮರಣಗಳಿಗೆ ಪ್ರಸಕ್ತಿಯೇ ಇರುವುದಿಲ್ಲ. ಈರೀತಿಯಾಗಿ ನಾನು ಹೇಳಿದ ವಿಷಯಗಳನ್ನು ಕುಶಾಗ್ರಬುದ್ಧಿಯುಳ್ಳವನು ಯಾವಾಗಲೂ ಮನಸ್ಸಿನಲ್ಲಿಟ್ಟುಕೊಳ್ಳಬೇಕು. ಇದೇ ಉಪದೇಶವಾದುದರಿಂದ ಮರೆಯಬಾರದು. ॥೪೪॥

ನಿರಂಕುಶವಾದ (ತಡೆಯಿಲ್ಲದ) ಐಶ್ವರ್ಯವುಳ್ಳ ಪರಮಾತ್ಮನು ಪ್ರಸನ್ನನಾದರೆ ಆಗಲೇ ನಿರ್ಮಲವಾದ ಉತ್ಕೃಷ್ಟವಾದ ಪರಮಾತ್ಮನ ಅನುಭವವು ಬರುತ್ತದೆ. ಆದರೆ ಅವನು ಸುಪ್ರಸನ್ನನಾಗದಿದ್ದರೆ ಉತ್ಕೃಷ್ಟವಾದ ಸಮಸ್ತ ಸಾಮಗ್ರಿಗಳಿಂದಲೂ, ಹರಿಯಿಂದಲೂ, ನನ್ನಿಂದಲೂ, ಇನ್ನಾರಿಂದಲೂ ಸಹ ಆ ಪರಮಾತ್ಮನ ಅನುಭವವು ಬರಲಾರದು. ॥೪೫॥

ಸರ್ವ ವಿಷಯಗಳಲ್ಲಿಯೂ ಸ್ವತಂತ್ರನಾದ ಪರಮೇಶ್ವರನು ಮನುಷ್ಯನಿಗೆ ಜ್ಞಾನವನ್ನು ಅನುಗ್ರಹಿಸಿಕೊಟ್ಟರೆ ಸ್ವಲ್ಪವೂ ಅವನು ಅಜ್ಞಾನಸಂಬಂಧವಿಲ್ಲದ

ದಿನಕರ ಕಿರಣೈರ್ಹಿ ಶಾರ್ವರಂ ತಮೋ ।
ನಿಬಿಡತರಂ ಝಟಿತಿ ಪ್ರಣಾಶಮೇತಿ ॥
ಘನತರ ಭವ ಕಾರಣಾಂತರಂ ತಮಃ ।
ಶಿವ ದಿನ ಕೃತ್ಪ್ರಭಯಾ ನ ಚಾಪರೇಣ ॥೪೭॥

ಹರಿರಹ ಮಪ್ಯಪರೇ ಸುರಾಸುರಾದ್ಯಾಃ ।
ಪರಮ ಶಿವ ಪ್ರಭಯಾ ತಿರಸ್ಕೃತಾಶ್ಚ ॥
ರವಿಕಿರಣೈ ರಖಿಲಾನ್ಯಹಾನಿ ಯದ್ವತ್ ।
ಪರಮಶಿವಃ ಸ್ವತ ಏವ ಬೋಧಕಾರೀ ॥೪೮॥

ಶಿವ ಚರಣ ಸ್ಮರಣೇನ ಪೂಜಯಾ ಚ ।
ಸ್ವಕತಮಸಃ ಪರಿಮುಚ್ಯತೇ ಹಿ ಜಂತುಃ ॥

ಮೋಕ್ಷಪದವಿಯನ್ನು ಹೊಂದುತ್ತಾನೆ. ಈಶ್ವರನು ಅನುಗ್ರಹಮಾಡದಿದ್ದರೆ ಮನುಷ್ಯನು ಸಂಸಾರವೆಂಬ ಬಂಧವನ್ನು ಹೊಂದುತ್ತಾನೆ. ॥೪೬॥

ಸೂರ್ಯನ ಕಿರಣಗಳಿಂದ ರಾತ್ರಿಯ ಕಾಲದ ಅಂಧಕಾರವು ಕೂಡಲೇ ನಷ್ಟವಾಗುತ್ತದೆ. ಪರಮಾತ್ಮನೆಂಬ ಸೂರ್ಯನ ಕಿರಣಗಳಿಂದ ಜ್ಞಾನಕ್ಕಿಂತ ಬೇರೆ ಉಪಾಯಗಳಿಂದ ಹೋಗಲಾಡಿಸಲಶಕ್ಯವಾದ, ಸಂಸಾರಕ್ಕೆ ಕಾರಣವಾದ ತಮಸ್ಸೆಂಬ ಅಜ್ಞಾನವೂ ಸಹ ನಷ್ಟವಾಗುತ್ತದೆ. ಬೇರೆ ಉಪಾಯದಿಂದ ಆ ತಮಸ್ಸು ನಷ್ಟವಾಗಲಾರದು. ಎಂದರೆ ಸೂರ್ಯಕಿರಣಗಳಿಗೂ ಅಂಧಕಾರಕ್ಕೂ ಸಹ ಪರಸ್ಪರ ವಿರೋಧ ವಿರೋಣದರಿಂದ ಸೂರ್ಯೋದಯವಾದ ಸಮಯದಲ್ಲಿಯೇ ಅಂಧಕಾರವು ನಷ್ಟವಾಗುವಂತೆ, ಪರಬ್ರಹ್ಮಸ್ವರೂಪವಾದ ಅಧಿಷ್ಠಾನಪ್ರಮೆ ಎಂಬ ಪ್ರಭೆಯು ಉತ್ಪನ್ನವಾಗುತ್ತಿರಲು ಸಂಸಾರಕ್ಕೆ ಹೇತುವಾದ ಅಜ್ಞಾನವು, ಜ್ಞಾನಾಜ್ಞಾನಗಳಿಗೆ ಪರಸ್ಪರ ವಿರೋಧ ವಿರೋಣದರಿಂದ, ನಷ್ಟವಾಗುತ್ತದೆ. ಈ ಅಜ್ಞಾನನಾಶವು ಉಪಾಯಾಂತರಗಳಿಂದ ಆಗಲಾರದು. ॥೪೭॥

ವಿಷ್ಣುವೂ, ನಾನೂ, ಸುರಾಸುರಾದಿಗಳೂ ಸಹ ಪರಮಾತ್ಮನ ತೇಜಸ್ಸಿನಿಂದ ತಿರಸ್ಕೃತರಾಗಿರುತ್ತಾರೆ. ಸೂರ್ಯಕಿರಣಗಳಿಂದ ಹಗಲು ಪ್ರಕಾಶಿಸುವಂತೆ ಪರಮಾತ್ಮನು ಸ್ವತಃ ಜ್ಞಾನವನ್ನುಂಟುಮಾಡುವವನಾಗಿರುತ್ತಾನೆ. ॥೪೮॥

ಸಮಸ್ತ ಜಂತುವೂ ಶಿವನ ಚರಣಾರವಿಂದಗಳ ಸ್ಮರಣೆಯಿಂದಲೂ, ಅವನ

ನಹಿ ಮರಣ ಪ್ರಭವ ಪ್ರಣಾಶಹೇತುಃ ।
ಶಿವಚರಣ ಸ್ಮರಣಾದೃತೇಽಸ್ತಿ ಕಿಂಚಿತ್ ॥೪೯॥

ಪರಮ ಶಿವಃ ಖಲು ನಃ ಸಮಸ್ತ ಹೇತುಃ ।
ಪರಮ ಶಿವಃ ಖಲುನಃ ಸಮಸ್ತ ಮೇತತ್ ॥
ಪರಮ ಶಿವಃ ಖಲು ನಃ ಸ್ವರೂಪ ಭೂತಃ ।
ಪರಮ ಶಿವಃ ಖಲುನಃ ಪ್ರಮಾಣ ಭೂತಃ ॥೫೦॥

ಪರಮ ಶಿವಃ ಸಕಲಾಗಮಾದಿ ನಿಷ್ಠಃ ।
ಪರಮ ಶಿವಃ ಪರಮಾನುಭೂತಿ ಗಮ್ಯಃ ॥
ಪರಮ ಶಿವಃ ಪರಮಾನುಭೂತಿರೂಪಃ
ಪರಮ ಶಿವಃ ಪರಮಾನುಭೂತಿದಶ್ಚ ॥೫೧॥

ಪರಮ ಶಿವ ಸಮುದ್ರೇಽಹಂ ಹರಿಃ ಸರ್ವದೇವಾ ।
ಮನುಜಪಶು ಮೃಗಾದ್ಯಾಃ ಶೀಕರಾ ಏವ ಸತ್ಯಂ ॥
ವಿಮಲ ಮತಿಭಿ ರೇವಂ ವೇದವೇದಾಂತನಿಷ್ಠೈಃ ।
ಹೃದಯ ಕುಹರನಿಷ್ಠಂ ವೇದಿತುಂ ಶಕ್ಯತೇ ಹಿ ॥೫೨॥

ಪೂಜೆಯಿಂದಲೂ, ತನ್ನ ಅಜ್ಞಾನದಿಂದ ಬಿಡಲ್ಪಡುತ್ತಾನೆ. ಜನನಮರಣಗಳನ್ನು ಹೋಗಲಾಡಿಸುವುದರಲ್ಲಿ ಶಿವಸ್ಮರಣೆಯೇ ಉಪಾಯವೇ ಹೊರತು ಇನ್ನು ಯಾವುದೂ ಇಲ್ಲ. ॥೪೯॥

ನಮಗೆ ಪರಮಾತ್ಮನು ಭೋಗಮೋಕ್ಷಗಳಿಗೆ ಕಾರಣನಾಗಿಯೂ, ಸಮಸ್ತ ವಸ್ತುವಾಗಿಯೂ, ನಮ್ಮ ಸ್ವರೂಪವಾಗಿಯೂ ಮತ್ತು ನಮಗೆ ಪ್ರಮಾಣನಾಗಿಯೂ ಇರುತ್ತಾನೆ. ॥೫೦॥

ಪರಮಾತ್ಮನು ಸಮಸ್ತ ಶ್ರುತಿಗಮ್ಯನಾಗಿಯೂ, ಉತ್ಕೃಷ್ಟವಾದ ಅನುಭವ ದಿಂದ ಲಭ್ಯನಾಗಿಯೂ, ಅಂತಹ ಉತ್ಕೃಷ್ಟವಾದ ಅನುಭವಸ್ವರೂಪನಾಗಿಯೂ, ಶ್ರೇಷ್ಠವಾದ ಜ್ಞಾನವನ್ನು ಉಂಟುಮಾಡುವವನಾಗಿಯೂ ಇರುತ್ತಾನೆ. ॥೫೧॥

ಪರಮೇಶ್ವರನೆಂಬ ಸಮುದ್ರದಲ್ಲಿ ನಾನೂ, ವಿಷ್ಣುವೂ, ಸಮಸ್ತ ದೇವತೆಗಳೂ, ಮನುಷ್ಯರೂ, ಗ್ರಾಮದಲ್ಲಿ ವಾಸಮಾಡುವ ಗವಾದಿಪಶುಗಳೂ, ಅರಣ್ಯದಲ್ಲಿ ವಾಸ

ಮಾಯಾ ಬಲೇನೈವ ಹರಿಂ ಶಿವೇನ ।
ಸಮಾನಮಾಹುಃ ಪುರುಷಾಧಮಾಶ್ಚ ।
ಮೋಹೇನ ಕೇಚಿನ್ಮಮ ಸಾಮ್ಯಮಾಹುಃ ॥
ಮಾಯಾ ತು ಶೈವೀ ಖಲು ದುಸ್ತರೇಯಂ ॥೫೩॥

ಖದ್ಯೋತೋ ಯದಿ ಚಂಡಭಾನು ಸದೃಶಸ್ತುಲ್ಯೋ ಹರಿಃ ಶಂಭುನಾ ।
ಕಿಂಪಾಕೋ ಯದಿ ಚಂದನೇನಸದೃಶಸ್ತುಲ್ಯೋಽಹಮೀಶೇನ ಚ ॥
ಅಜ್ಞಾನಂ ಯದಿ ವೇದನೇನ ಸದೃಶಂ ದೇವೇನ ತುಲ್ಯಾ ಜನಾಃ ।
ಕಿಂ ವಕ್ಷ್ಯೇ ಸುರಪುಂಗವಾ ಅಹಮಹೋ ಮೋಹಸ್ಯ ದುಶ್ಚೇಷ್ಟಿತಂ॥೫೪॥

ಮಾಡುವ ವ್ಯಾಘ್ರಾದಿಮೃಗಗಳೂ ಸಹ ಸತ್ವವಾಗಿಯೂ ನೀರಿನ ತುಂತುರುವಿನಂತೆಯೇ ಸರಿ. ಈ ರೀತಿಯಾದ ಪರಿಶುದ್ಧವಾದ ಅಂತಃಕರಣವುಳ್ಳ ವೇದವೇದಾಂತ ನಿಷ್ಣಾತರಾದ ಅಧಿಕಾರಿಗಳ ಹೃದಯ ಮಧ್ಯದಲ್ಲಿ ಪರಮಾತ್ಮನನ್ನು ತಿಳಿಯಲು ಸಾಧ್ಯವಾಗುತ್ತದೆ. ||೫೨||

ಕೆಲವು ಅಧಮರಾದ ಮನುಷ್ಯರು ಮಾಯೆಯಿಂದ ಮೋಹಿತರಾಗಿ ಹರಿಯು ಶಿವನಂತೆ ಇರುತ್ತಾನೆಂದೂ, ಕೆಲವರು ನನ್ನ ಸಾಮ್ಯವನ್ನು ಶಿವನಿಗೂ ಹೇಳುತ್ತಾರೆ. ಆದರೆ ಇದು ಭ್ರಾಂತಿಯು. ಆದುದರಿಂದ ಶಿವನ ಮಾಯೆಯನ್ನು ಮೀರುವುದು ಬಹಳ ಕಷ್ಟಸಾಧ್ಯವು. ||೫೩||

ಒಂದುವೇಳೆ ಕ್ರೂರವಾಗಿ ಪ್ರಕಾಶಿಸುತ್ತಿರುವ ಸೂರ್ಯನಿಗೆ ಮಿಣುಕು ಹುಳುವು ಸದೃಶವಾಗುವುದಾದರೆ, ಆಗ ಹರಿಯು ಶಂಭುವಿಗೆ ಸಮಾನನಾಗಬಹುದು! ಕಿಂಪಾಕವೆಂಬ ಬಳ್ಳಿಯು ಚಂದನವೃಕ್ಷಕ್ಕೆ ಸಮಾನವಾಗುವುದಾದರೆ, ನಾನು ಶಿವನಿಗೆ ಸದೃಶನಾದೇನು! ಅಜ್ಞಾನವು ಜ್ಞಾನದೊಂದಿಗೆ ಸದೃಶವಾಗುವುದಾದರೆ, ಸಮಸ್ತ ಜನರೂ ದೇವನಾದ ಶಿವನಿಗೆ ತುಲ್ಯರಾದಾರು! ಎಂದರೆ ಸೂರ್ಯನಿಗೂ, ನಕ್ಷತ್ರಾದಿಗಳಿಗೂ ಹೇಗೆ ಅಜಗಜಾಂತರವಿರುವುದೋ ಹಾಗೆ ನಮ್ಮೆಲ್ಲರಿಗೂ ಶಿವನಿಗೂ ತಾರತಮ್ಯವಿರುವುದು. ಓ ಸುರಶ್ರೇಷ್ಠರೇ, ಅಜ್ಞಾನದ ಮಹಿಮೆಯನ್ನು ಏನೆಂದು ಹೇಳಲಿ! ||೫೪||

ಅತಃ ಶಿವೇನೈವ ಸಮಸ್ತ ಮೇತತ್ ।
ಭವತ್ಯನಂತೇನ ನ ಚಾಪರೇಣ ॥
ಶಿವ ಸ್ವಭಾವೇನ ಶಿವಃ ಸಮಸ್ತಂ ।
ಶಿವಪ್ರಭಾವೇನ ಜಗದ್ವಿಚಿತ್ರಂ ॥೫೫॥

ತತ್ವದೃಕ್ ಸಕಲ ಮದ್ವಯಂ ಸದಾ ।
ಪಶ್ಯತಿಸ್ಮ ಪರಿಮೋಹಿತಃ ಪುಮಾನ್ ॥
ಕಷ್ಟ ಶಿಷ್ಟ ಘಟ ಕುಡ್ಯ ರೂಪತಃ ।
ಕಷ್ಟಮೇವ ಖಲು ತಸ್ಯ ವೇದನಂ ॥೫೬॥

ಇದಂ ಜಗದಿತಿ ಸ್ವತಃ ಸಕಲ ಜಂತೋಃ ಪ್ರತೀತಿರ್ದೃಢಾ ।
ಪರಂ ಜಗದಿತಿ ಸ್ಫುರತ್ಯಮಲಬೋಧ ಸ್ವಭಾವೇನ ಚ ॥
ಇದಂ ಹಿ ಪರವೇದನಂ ವಿಮಲಚಿತ್ತಸ್ಯ ಪುಂಸಃ ಸದಾ ।
ಭವಂ ತರತಿ ಮಾನವಃ ಪರಮಬೋಧೇನ ಚೈತೇನ ಹಿ ॥೫೭॥

ಆದುದರಿಂದ ಅನಂತ (ವ್ಯಾಪಕ) ನಾದ, ಶಿವನಿಂದಲೇ ಈ ಸಮಸ್ತವೂ ಉಂಟಾಗುತ್ತದೆ. ಇನ್ನು ಯಾವುದರಿಂದಲೂ ಅಲ್ಲವು. ಮತ್ತು ಮಂಗಳಕರವಾದ ಶಿವಸ್ವಭಾವದಿಂದ ಸಮಸ್ತವೂ ಮಂಗಳವೇ ಆಗಿರುತ್ತದೆ. ಶಿವನ ಮಾಹಾತ್ಮ್ಯೆಯಿಂದ ಜಗತ್ತು ಹೀಗೆ ವಿಚಿತ್ರವಾಗಿದೆ! ||೫೫||

ಬ್ರಹ್ಮಸ್ವರೂಪವನ್ನು ತಿಳಿದ ಜ್ಞಾನಿಯು ಯಾವಾಗಲೂ ಸಕಲ ಜಗತ್ತನ್ನೂ ಅದ್ವಿತೀಯಬ್ರಹ್ಮಸ್ವರೂಪವನ್ನಾಗಿಯೇ ತಿಳಿಯುತ್ತಾನೆ. ಅಜ್ಞಾನಾದರೋ ದುಃಖ ಭೂಯಿಷ್ಠವಾದ ಘಟಕುಡ್ಯಾದಿ ಪ್ರಪಂಚವನ್ನು ನೋಡುತ್ತಾ ದುಃಖವನ್ನು ಅನುಭವಿಸುತ್ತಾನೆ. ಅವನ ಘಟಾದಿವಿಷಯಕವಾದ ಜ್ಞಾನವು ದುಃಖದಾಯಕ ವಾಗುತ್ತದೆ. ||೫೬||

ಸಕಲ ಪ್ರಾಣಿಗಳಲ್ಲೂ ಸ್ವತಃಸಿದ್ಧವಾದ ಅಜ್ಞಾನದಿಂದ ಇದು ಜಗತ್ತು ಎಂಬ ಬುದ್ಧಿಯು ಬಲವಾಗಿರುತ್ತದೆ. ಪರಿಶುದ್ಧವಾದ ಜ್ಞಾನದಿಂದ ಪರಮಾತ್ಮನೇ ಜಗತ್ತೆಂದು ಸ್ಫುರಿಸುತ್ತದೆ. ಇಂತಹ ಪರಮಾತ್ಮವೇದನವೆಂಬ ಬ್ರಹ್ಮಜ್ಞಾನವು ರಾಗಾದಿದೋಷ ಶೂನ್ಯವಾದ ಅಂತಃಕರಣವುಳ್ಳ ಪುರುಷನಿಗೆ ಯಾವಾಗಲೂ ಇರುತ್ತದೆ. ಈ ಪರಮಾತ್ಮಜ್ಞಾನದಿಂದ ಸಂಸಾರವೆಂಬ ಕಡಲನ್ನು ದಾಟಲು ಸಾಧ್ಯವಾಗುತ್ತದೆ. ಎಂದರೆ

ಛಂದೋಗಶ್ರುತಿಮಸ್ತಕೇ ವಿನಿಹಿತಂ ವಿಜ್ಞಾನಮೇತನ್ಮಯಾ ।
ಜಂತೂನಾ ಮವಿವೇಕಿನಾ ಮತಿತರಾ ಮಜ್ಞಾನ ವಿಧ್ವಸ್ತಯೇ ॥
ಕಾರುಣ್ಯಾ ದಮರಾಧಿಪಾ ಅತಿ ಶುಭ ಬ್ರಹ್ಮಾಮೃತಾವಾಪ್ತಯೇ ।
ದೇವಾನಾ ಮಧಿಪಾಧಿಪಸ್ಯ ವಚನಾದುಕ್ತಂ ಮಹೇಶಸ್ಯ ಚ ॥೫೮॥

ಇತಿ ಶ್ರೀಸೂತಸಂಹಿತಾಯಾಂ ಚತುರ್ಥಸ್ಯ ಯಜ್ಞವೈಭವಖಂಡಸ್ಯೋ ಪರಿಭಾಗೇ ಬ್ರಹ್ಮಗೀತಾಸೂಪನಿಷತ್ಸು ದಹರೋಪಾಸನವಿವರಣಂ ನಾಮ ಷಷ್ಠೋಽಧ್ಯಾಯಃ

ಬ್ರಹ್ಮಜ್ಞಾನದಿಂದ ಮನುಷ್ಯನ ಅಜ್ಞಾನವು ನಿವೃತ್ತವಾಗಿ ಅದರಿಂದುಂಟಾಗಿದ್ದ ಸಂಸಾರವೂ ನಿವೃತ್ತವಾಗುತ್ತದೆ. ಎಂದರ್ಥವು. ||೫೭||

ಓ ಅಮರಾಧಿಪರೇ, ಛಾಂದೋಗ್ಯೋಪನಿಷತ್ತಿನಲ್ಲಿರತಕ್ಕ ಈ ಬ್ರಹ್ಮಜ್ಞಾನವು ವಿವೇಕವಿಲ್ಲದ ಸಮಸ್ತ ಜಂತುಗಳ ಅಜ್ಞಾನವನ್ನು ಸಮೂಲವಾಗಿ ನಾಶಮಾಡುವುದಾಗಿದೆ. ಮತ್ತು ಅತ್ಯಂತ ಮಂಗಳಕರವಾದ ಬ್ರಹ್ಮರೂಪದ ಅಮೃತವನ್ನು ಕೊಡತಕ್ಕುದಾಗಿದೆ. ಇಂತಹ ಉತ್ಕೃಷ್ಟವಾದ ಜ್ಞಾನವನ್ನು ನಿಮ್ಮಲ್ಲಿರತಕ್ಕ ದಯೆಯಿಂದ ನಾನು ದೇವಾಧಿಪರಾದ ಇಂದ್ರಾದಿಗಳಿಗೂ ಸ್ವಾಮಿಯಾದ ಶಿವನ ಮಾತಿನಿಂದ ಹೇಳಿರುತ್ತೇನೆ. ಒಟ್ಟಿನಲ್ಲಿ ಬ್ರಹ್ಮವಿದ್ಯೆ ಸಂಸಾರಕ್ಕೆ ಕಾರಣವಾದ ಮೂಲಾವಿದ್ಯೆಯನ್ನು ನಿವೃತ್ತಿಮಾಡುವುದು ಮೊದಲನೆಯ ಪ್ರಯೋಜನವು. ಬ್ರಹ್ಮಾವರಣವಾದ ಅಜ್ಞಾನವು ಹೋಗಲು ಸ್ವಸ್ವರೂಪವಾದ ನಿರತಿಶಯಾನಂದಾವಿರ್ಭಾವವು ಎರಡನೆಯ ಪ್ರಯೋಜನವು. ಈ ಎರಡು ಪ್ರಯೋಜನಕ್ಕೋಸ್ಕರ ಈ ಬ್ರಹ್ಮವಿದ್ಯೋಪದೇಶವು ಆವಶ್ಯಕವಾದುದು.. ||೫೭-೫೮||

ಇಲ್ಲಿಗೆ ಸ್ಕಾಂದಪುರಾಣದ ಸೂತಸಂಹಿತೆಯಲ್ಲಿ ನಾಲ್ಕನೆಯ ಭಾಗವಾದ
ಯಜ್ಞವೈಭವಖಂಡದಲ್ಲಿ ಎರಡನೆಯ ಭಾಗದಲ್ಲಿರುವ,
ಉಪನಿಷತ್ತುಗಳಂತಿರುವ ಬ್ರಹ್ಮಗೀತೆಯಲ್ಲಿ ದಹರೋಪಾಸನೆಯಕ್ರಮ,
ಫಲಗಳನ್ನು ವಿವರಿಸಿರುವ ಆರನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಅಥಾಸ್ಯಾಃ ಶ್ರೀಮತ್ಸ್ಕಾಂದಪುರಾಣಾಂತರ್ಗತ ಸೂತಸಂಹಿತಾಯಾಶ್ಚತುರ್ಥಸ್ಯ ಯಜ್ಞವೈಭವಖಂಡಸ್ಯೋಪರಿಭಾಗೇ ಬ್ರಹ್ಮಗೀತಾ

॥ ಸಪ್ತಮೋಽಧ್ಯಾಯಃ ॥

ಏಳನೆಯ ಅಧ್ಯಾಯವು

॥ ಬ್ರಹ್ಮೋವಾಚ ॥

ಅಸ್ತಿ ತತ್ತ್ವಂ ಪರಂ ಸಾಕ್ಷಾದಕ್ಷರಂ ಕ್ಷರವಸ್ತುನಾಂ ।
ಅಧಿಷ್ಠಾನ ಮನೌಪಮ್ಯ ಮವಾಙ್ಮನಸ ಗೋಚರಂ ॥೧॥

ಬ್ರಹ್ಮನು ಹೇಳಿದನು—ಋಗ್ವೇದ, ಯಜುರ್ವೇದ, ಸಾಮವೇದಗಳೆಂಬ ಮೂರು ವೇದಗಳ ಉಪನಿಷತ್ತುಗಳು ಮುಖ್ಯವಾಗಿ ಪರಬ್ರಹ್ಮನನ್ನು ಪ್ರತಿಪಾದಿಸುತ್ತವೆಯೆಂದು ಹೇಳಿಯಾಯಿತು. ಇನ್ನು ಅಥರ್ವಣಶಾಖೆಯ ಮುಂಡಕ ಮತ್ತು ಪ್ರಶ್ನೋಪನಿಷತ್ತುಗಳೂ ಸಹ ಪರಮಾತ್ಮವಿಷಯವನ್ನು ಪ್ರತಿಪಾದಿಸುತ್ತವೆಯೆಂದು ಆ ಉಪನಿಷದರ್ಥವನ್ನು ಸಂಗ್ರಹಿಸುತ್ತಾನೆ.—ಪರಮಾರ್ಥಭೂತವಾಗಿ ಅತ್ಯಂತ ಶ್ರೇಷ್ಠವಾಗಿಯೂ, ವಿಕಾರಗಳಿಗಿಂತಲೂ ಬೇರೆಯಾದಕಾರಣ ನಾಶವಾಗದೆಯೂ, ಇರತಕ್ಕ ಬ್ರಹ್ಮಸ್ವರೂಪವು ಸತ್ಯವಾಗಿದೆ. ಈ ಪರಮಾರ್ಥವಸ್ತುವು ನಶ್ವರವಾದ ಜಡ ವಸ್ತುಗಳಿಗೆ ಅಧಿಷ್ಠಾನವಾಗಿದೆ. ಆದುದರಿಂದಲೇ ಇದು ಸತ್ಯವಾದುದು. ಲೋಕದಲ್ಲಿ ಮಿಥ್ಯಾಭೂತವಾದ ಪದಾರ್ಥಗಳ ಅಧಿಷ್ಠಾನವು ಆರೋಪಿತವಾದ ಪದಾರ್ಥಕ್ಕಿಂತಲೂ ಸತ್ಯವಾಗಿರುತ್ತದೆ. ಹೇಗೆಂದರೆ ಮಿಥ್ಯಾಭೂತವಾದ ಶುಕ್ತಿರಜತಕ್ಕೆ ಅಧಿಷ್ಠಾನವಾದ ಶುಕ್ತಿಯು ರಜತಾಪೇಕ್ಷಯಾ ಸತ್ಯವಾಗಿದೆ. ಹಾಗೆಯೇ ಪ್ರಳಯ ಪರ್ಯಂತ ನಿತ್ಯವಾದ ಆಕಾಶಾದಿಗಳಿಗೂ ಸಹ ಬ್ರಹ್ಮವು ಅಧಿಷ್ಠಾನವಾದಮೇಲೆ ಅದು ನಿತ್ಯವಾದುದೆಂದು ಹೊಸದಾಗಿ ಹೇಳಬೇಕಾಗಿಲ್ಲ. ಇಂತಹ ಪರಮಾರ್ಥವಸ್ತುವು ಪರಮಾತ್ಮನಿ

ಕಸ್ಮಿನ್ಸುವಿದಿತೇ ಸರ್ವಂ ವಿಜ್ಞಾತಂ ಸ್ಯಾದಿದಂ ಸುರಾಃ ।
ತದಾತ್ಮಕತ್ವಾ ತ್ಸರ್ವಸ್ಯ ನಾಸ್ತ್ಯೇವ ಹಿ ಭಿದಾ ಸ್ವತಃ ॥೨॥

ದ್ವೇ ವಿದ್ಯೇ ವೇದಿತವ್ಯೇ ಹಿ ಪರಾ ಚೈವಾ ಪರಾಽಪಿ ಚ ।
ತತ್ರಾ ಪರಾ ತು ವಿದ್ಯೈಷಾ ಋಗ್ವೇದೋ ಯಜುರೇವ ಚ ॥೩॥

ಸಾಮವೇದ ಸ್ತಥಾಽಥರ್ವವೇದಃ ಶಿಕ್ಷಾ ಸುರರ್ಷಭಾಃ ।
ಕಲ್ಪೋ ವ್ಯಾಕರಣಂ ಚೈವ ನಿರುಕ್ತಂ ಛಂದ ಏವ ಚ ।
ಜ್ಯೋತಿಷಂ ಚ ತಥಾಽನಾತ್ಮ ವಿಷಯಾ ಅಪಿ ಬುದ್ಧಯಃ ॥೪॥

ಗಿಂತ ಬೇರೆ ವಸ್ತುವಾವುದೂ ಇಲ್ಲದ್ದರಿಂದ ಸಾದೃಶ್ಯವಿಲ್ಲದ್ದಾಗಿಯೂ, ನಿರ್ವಿಶೇಷವಾದುದರಿಂದ ವಾಗಿಂದ್ರಿಯಕ್ಕೂ ಮನಸ್ಸಿಗೂ ವಿಷಯವಾಗದೆಯೂ ಇದೆ. ||೧||

"ಕಸ್ಮಿನ್ನು ಭಗವೋ ವಿಜ್ಞಾತೇ ಸರ್ವಮಿದಂ ವಿಜ್ಞಾತಂ ಭವತಿ" ಮುಂ.ಉ. ೧.೧.೩. ಎಂಬ ಪ್ರಶ್ನಪ್ರತಿವಚನರೂಪವಾದ ಶ್ರುತಿಯು ಅಧಿಷ್ಠಾನಭೂತವಾದ ಅಕ್ಷರ ಬ್ರಹ್ಮತತ್ವದ ಸ್ವರೂಪಜ್ಞಾನದಿಂದ ಆ ಸ್ವರೂಪದಲ್ಲಿ ಆರೋಪಿತವಾದ ಸರ್ವಜಗತ್ತೂ ಸಹ ತಿಳಿಯುತ್ತದೆಯೆಂದು ಉಪದೇಶಿಸುತ್ತದೆ. ಅದರ ಅರ್ಥವನ್ನು ಸಂಗ್ರಹಿಸುತ್ತಾನೆ. ಓ ಸುರರೇ, ಅಂತಹ ಅಕ್ಷರ ಬ್ರಹ್ಮಸ್ವರೂಪವನ್ನು ತಿಳಿಯುವುದರಿಂದ ಪರಿದೃಶ್ಯಮಾನವಾದ ಸಕಲ ಜಗತ್ತನ್ನೂ ತಿಳಿದಂತೆಯೇ ಆಗುತ್ತದೆ. ಏಕೆಂದರೆ ಸಮಸ್ತವೂ ಬ್ರಹ್ಮಸ್ವರೂಪವೂ, ಅದರಲ್ಲಿ ಅಧ್ಯಸ್ತವಾಗಿಯೂ, ಇರುವುದರಿಂದ ಅಧಿಷ್ಠಾನವನ್ನು ತಿಳಿದ ಮೇಲೆ ಅಧ್ಯಸ್ತವಾದುದು ಅವಶ್ಯವಾಗಿ ತಿಳಿಯುತ್ತದೆ. ಅಧ್ಯಸ್ತವಾದುದು ಅಧಿಷ್ಠಾನಕ್ಕಿಂತಲೂ ಬೇರೆಯಾದುದಲ್ಲ. ಶುಕ್ತಿರಜತಕ್ಕೆ ಅಧಿಷ್ಠಾನವಾದುದು ಶುಕ್ತಿಯು. ರಜತಕ್ಕೆ ಶುಕ್ತಿಯನ್ನು ಬಿಟ್ಟರೆ ಸ್ವರೂಪಲಾಭವೇ ಇರುವುದಿಲ್ಲ. ಹಾಗೆಯೇ ಆಕಾಶಾದಿ ಪದಾರ್ಥಗಳಿಗೂ ಸಹ ಅಧಿಷ್ಠಾನವಾದ ಬ್ರಹ್ಮಸ್ವರೂಪವನ್ನು ಬಿಟ್ಟರೆ ಸ್ವರೂಪಲಾಭವೇ ಇಲ್ಲದ ಕಾರಣದಿಂದ ಅಧಿಷ್ಠಾನವಾದ ಬ್ರಹ್ಮಸ್ವರೂಪವನ್ನು ತಿಳಿದರೆ ಸಮಸ್ತವೂ ವಿದಿತವಾಗುತ್ತದೆ. ||೨||

"ದ್ವೆ ವಿದ್ಯೇ ವೇದಿತವ್ಯೇ" ಮುಂ. ಉ. ೧.೧.೪. ಎಂಬ ಶ್ರುತ್ಯರ್ಥವನ್ನು ಸಂಗ್ರಹಿಸುತ್ತಾನೆ. ಓ ಸುರಶ್ರೇಷ್ಠರೇ, ಪರಾ, ಎಂಬುದಾಗಿಯೂ ಅಪರಾ, ಎಂಬುದಾಗಿಯೂ ಎರಡು ವಿದ್ಯೆಗಳಿವೆ. ಅವುಗಳಲ್ಲಿ ಋಗ್ವೇದ, ಯಜುರ್ವೇದ, ಸಾಮಾ

ಅಥೈಷಾ ಪರವಿದ್ಯಾಸಾ ಯಯಾ ತತ್ಪರ ಮಕ್ಷರಂ ।
ಗಮ್ಯತೇ ಸುದೃಢಂ ಪ್ರಾಜ್ಞೈಃ ಸಾಕ್ಷಾತ್ ಶಂಭೋಃ ಪ್ರಸಾದಿಭಿಃ॥೫॥

ಯತ್ತದದ್ರೇಶ್ಯಮಗ್ರಾಹ್ಯಮಗೋತ್ರಂ ರೂಪವರ್ಜಿತಂ ।
ಅಚಕ್ಷುಃ ಶ್ರೋತ್ರ ಮತ್ಯರ್ಥಂ ತದ ಪಾಣಿ ಪದಂ ಸದಾ ॥೬॥

ನಿತ್ಯಂ ವಿಭುಂ ಸರ್ವಗತಂ ಸು ಸೂಕ್ಷ್ಮಂಚ ತದವ್ಯಯಂ ।
ಯದ್ಭೂತಯೋನಿಂ ಧೀಮಂತಃ ಪರಿಪಶ್ಯಂತಿ ಚಾತ್ಮನಾ ॥೭॥

ಥರ್ವವೇದಗಳೂ, ಶಿಕ್ಷಾ, ಕಲ್ಪ, ವ್ಯಾಕರಣ, ನಿರುಕ್ತ, ಛಂದಶ್ಶಾಸ್ತ್ರ, ಜ್ಯೋತಿಷ್ಯ ಗಳೆಂಬ ಆರು ವೇದಾಂಗಗಳೂ, ಸಹ ಅದ್ವಿತೀಯವಾದ ಬ್ರಹ್ಮತತ್ವವನ್ನು ಪ್ರತಿಪಾದಿ ಸದೇ ಅನಾತ್ಮವಾದ ಕರ್ಮಗಳನ್ನು ಪ್ರತಿಪಾದಿಸುವುದರಿಂದ ಅಪರವಿದ್ಯೆಗಳೆಂದು ಅವು ಗಳಿಗೆ ಹೆಸರು. ಅವುಗಳಿಂದ ಉಂಟಾಗತಕ್ಕ ಜ್ಞಾನವೂ ಸಹ ಅಗ್ನಿಹೋತ್ರಾದಿ ಕರ್ಮ, ಐಹಿಕಾಮುಷ್ಮಿಕ ಫಲವಿಷಯಕವಾದುದರಿಂದಲೂ ಸಹ ಅಪರವಿದ್ಯೆಯೆಂದು ಹೆಸರು. ॥೩-೪॥

ಯಾವ ವಿದ್ಯೆಯಿಂದ ಮುಂದೆ ಹೇಳುವ ಅವಿನಾಶಿಯಾದ ಬ್ರಹ್ಮತತ್ವವನ್ನು ಶಿವನ ಅನುಗ್ರಹವುಳ್ಳ ಜ್ಞಾನಿಗಳು ನಿಶ್ಚಯವಾಗಿ ತಿಳಿಯುತ್ತಾರೆಯೋ ಆ ವಿದ್ಯೆಯೇ ಪರವಿದ್ಯೆಯು. ಎಂದರೆ ಉಪನಿಷತ್ತಿನಿಂದ ಉಂಟಾಗುವ ಜ್ಞಾನವು ಬ್ರಹ್ಮಾವರಕವಾದ ಅಜ್ಞಾನ ನಿವೃತ್ತಿದ್ವಾರಾ ಮೋಕ್ಷಕ್ಕೆ ಸಾಧನವಾದುದರಿಂದ ಅಂತಹ ಉಪನಿಷ ದ್ವಿದ್ಯೆಯು ಪರಾ ಎಂದು ಹೇಳಲ್ಪಡುತ್ತದೆ. ॥೫॥

ಆ ಅಕ್ಷರವಾದ ಬ್ರಹ್ಮಸ್ವರೂಪವು ರೂಪಾದಿಗಳಿಂದ ಹೀನವಾಗಿರುವುದರಿಂದ ಚಕ್ಷುಃ ಶ್ರೋತ್ರಾದಿ ಜ್ಞಾನೇಂದ್ರಿಯಗಳಿಗೆ ವಿಷಯವಾಗದೆಯೂ, ವಾಕ್ಪಾಣ್ಯಾದಿ ಕರ್ಮೇಂದ್ರಿಯಗಳಿಗೆ ಗೋಚರವಾಗದೆಯೂ, ಯಾವ ಕಾರಣವಿಲ್ಲದ್ದರಿಂದ ವಂಶ ವಿಲ್ಲವ್ವಾಗಿಯೂ, ಸ್ಥೂಲತ್ವ, ಕೃಶತ್ವಾದಿ ದ್ರವ್ಯಧರ್ಮ ವರ್ಜಿತವಾಗಿಯೂ ಇದೆ. “ಯಃ ಸರ್ವಜ್ಞಃ ಸರ್ವವಿತ್” ಮುಂ.ಉ. ೧.೧.೧೦. ಎಂಬ ಶ್ರುತ್ಯನುಸಾರವಾಗಿ ಪರಮಾತ್ಮನೂ ಶುದ್ಧಚೇತನನಾದುದರಿಂದ ಸಂಸಾರಿಗಳಂತೆ ಕರಣಸದ್ಭಾವಗಳನ್ನು ನಿಷೇಧಿಸುತ್ತಾನೆ—ಪರಮಾತ್ಮನು, ಚಕ್ಷುಸ್ಸು, ಶ್ರೋತ್ರ ಮುಂತಾದ ಪಂಚ ಜ್ಞಾನೇಂದ್ರಿಯವಿಲ್ಲದವನಾಗಿಯೂ ವಾಕ್ಪಾಣ್ಯಾದಿ ಪಂಚಕರ್ಮೇಂದ್ರಿಯ ರಹಿತ ನಾಗಿಯೂ, ನಿತ್ಯನಾಗಿಯೂ, ಬ್ರಹ್ಮಾದಿ ಸ್ಥಾವರಾಂತವಾದ ಚರಾಚರ ಪ್ರಪಂಚಭೇದ

ಯಥೋರ್ಣನಾಭಿಃ ಸೃಜತೇ ಗೃಹ್ಣತೇ ಚ ಸುರರ್ಷಭಾಃ ।
ಯಥಾ ಪೃಥಿವ್ಯಾ ಮೋಷಧಯಃ ಸಂಭವಂತಿ ಯಥಾ ಸತಃ ॥೮॥

ಪುರುಷಾತ್ಕೇಶ ಲೋಮಾನಿ ತಥಾ ಚೈವಾಕ್ಷರಾತ್ಸುರಾಃ ।
ವಿಶ್ವಂ ಸಂಭವತೀ ಹ್ಯೇವ ತತ್ಸರ್ವಂ ಸ್ವಪನೋಪಮಂ ॥೯॥

ತಪಸಾ ಚೀಯತೇ ಬ್ರಹ್ಮ ತದ(ತೋऽ)ನ್ನ ಮಭಿಜಾಯತೇ ।
ಅನ್ನಾತ್ಪ್ರಾಣೋ ಮನಃ ಸತ್ಯಂ ಲೋಕಾಃ ಕರ್ಮಸು ಚಾಮೃತಂ ॥೧೦॥

ದಿಂದ ತೋರುತ್ತಿರುವವನಾಗಿಯೂ, ವಿಭುವಾಗಿಯೂ, ಆದುದರಿಂದ ಆಕಾಶದಂತೆ ಸರ್ವವನ್ನೂ ವ್ಯಾಪಿಸಿದವನಾಗಿಯೂ, ಸೂಕ್ಷ್ಮವಾದ ಅಪಂಚೀಕೃತ ಭೂತಗಳಿಗೂ, ಕಾರಣನಾದುದರಿಂದ ಅತ್ಯಂತ ಸೂಕ್ಷ್ಮನಾಗಿಯೂ, ನಿರ್ಗುಣನಾದುದರಿಂದ ಗುಣ ಹಾನಿಯಿಂದ ಸಂಭವಿಸುವ ವಿಕಾರವಿಲ್ಲದವನಾಗಿಯೂ, ಅವಯವವಿಲ್ಲದವನಾದುದ ರಿಂದ ಅವಯವನಾಶದಿಂದ ಉಂಟಾಗುವ ನಾಶವಿಲ್ಲದವನಾಗಿಯೂ, ಇರುತ್ತಾನೆ. ಇಂತಹ ಸಮಸ್ತ ಭೂತಗಳಿಗೂ ಮೂಲಕಾರಣವಾದ ಬ್ರಹ್ಮಸ್ವರೂಪವನ್ನು ಜ್ಞಾನಿ ಗಳು ಸ್ವಾತ್ಮರೂಪವನ್ನಾಗಿ ಎಲ್ಲಾ ಕಡೆಯಲ್ಲಿಯೂ ತಿಳಿಯುತ್ತಾರೆ. ಈ ಅಕ್ಷರ ಭೂತಯೋನಿಯು ಯಾವ ವಿದ್ಯೆಯಿಂದ ಪ್ರತಿಪಾದಿಸಲ್ಪಡುತ್ತದೆಯೋ ಅದೇ ಪರಾ ವಿದ್ಯೆಯು. ||೬-೭||

ಓ ಸುರಶ್ರೇಷ್ಠರೇ, ಜೇಡರಹುಳುವು ಬೇರೆ ಕಾರಣವನ್ನು ಅಪೇಕ್ಷಿಸದೇ ಕೇವಲ ತನ್ನ ಶರೀರದಿಂದ ತಂತುಗಳನ್ನು ಹೊರಗೆ ಹಾಕಿ ಪುನಃ ಆ ತಂತುಗಳನ್ನು ನುಂಗುವಂತೆಯೂ, ಬತ್ತವೇ ಮುಂತಾದ ವನಸ್ಪತಿಗಳು ತಮ್ಮ ಕಾರಣಕ್ಕೆ ಸಮವಾಗಿ ಪೃಥ್ವಿಯಲ್ಲಿ ಉಂಟಾಗುವಂತೆಯೂ, ಜೀವವುಳ್ಳ ಪುರುಷನಿಂದ ಅಚೇತನಗಳಾದ ಕೇಶ ನಖಾದಿಗಳು ಹುಟ್ಟುವಂತೆಯೂ, ಸಹ ಬ್ರಹ್ಮನಿಂದ ಬೇರೆ ಕಾರಣದ ಅನು ಸರಣವಿಲ್ಲದೇ ಚೇತನ ಮತ್ತು ಅಚೇತನವಾದ ಈ ಜಗತ್ತು ಹುಟ್ಟುತ್ತದೆ. ಅವಿಕ್ರಿ ಯನಾದ ಬ್ರಹ್ಮನಿಗೆ ವಸ್ತುತಃ ಜಗದ್ರೂಪವು ಇಲ್ಲದುದರಿಂದ ಉತ್ಪನ್ನವಾದ ಜಗತ್ತು ಕೇವಲ ಮಾಯಾಮಯವಾದುದರಿಂದ, ಸ್ವಪ್ನದಲ್ಲಿ ತೋರುವ ಪದಾರ್ಥಗಳಂತೆ ಮಿಥ್ಯಾಭೂತವಾದುದಾಗಿರುತ್ತದೆ. ||೮-೯||

ಬ್ರಹ್ಮನಿಂದ ಉಂಟಾದ ಈ ಜಗತ್ತು ಈ ಮುಂದೆ ಹೇಳುವ ಕ್ರಮದಂತೆ ಹೊರಹೊಮ್ಮುತ್ತದೆ.— ಪ್ರಳಯಕಾಲದಲ್ಲಿ ಮೊದಲು ಒಳಗೆ ನಿರ್ವಿಕಲ್ಪವಾಗಿದ್ದ ಬ್ರಹ್ಮರೂಪದಲ್ಲಿ ಮೂಲಪ್ರಕೃತಿ, ಪರಾಶಕ್ತಿ, ದೇವೀ ಅಥವಾ ಮಾಯಾಶಕ್ತಿಯು

ಅಂತರ್ಮುಖವಾಗಿರುತ್ತದೆ. ಆ ಕಾಲದಲ್ಲಿ ಮುಕ್ತರಾಗದೆ ಇರುವ ಸಮಸ್ತ ಜೀವರೂ ಅರಗಿನ ಉಂಡೆಯಲ್ಲಿ ಅಡಗಿರತಕ್ಕ ಚಿನ್ನದ ಸಣ್ಣ ರವೆ ಅಥವಾ ಅಣುಗಳಂತೆ, ವರ್ತಕರಲ್ಲಿರುವ ಮೇಣದಲ್ಲಿ ಅಡಗಿಸಿರುವ ಒರೆಗಲ್ಲಿನಲ್ಲಿದ್ದ ಚಿನ್ನ ಬೆಳ್ಳಿಯ ದೂಳಿನಂತೆ, ಅಡಗಿರುತ್ತಾರೆ. ಆದರೆ ಮಾಯಾವಿಶಿಷ್ಟವಾದರೂ ಈ ಮಾಯೆಯು ಯಾವ ವ್ಯಾಪಾರವನ್ನೂ ಮಾಡದೇ ಇರುವುದರಿಂದಲೂ, ಮೇಲಾಗಿ ಈ ಮಾಯೆಯು ಅವಾಸ್ತವವಾದ, ತೋರಿಕೆಯ ಸ್ವಭಾವವುಳ್ಳದ್ದಾದುದರಿಂದಲೂ, ಬ್ರಹ್ಮನಿಗೆ ಸದ್ವಿತೀಯತ್ವವು ಪ್ರಾಪ್ತವಾಗಲಾರದು. ಅನಂತರದಲ್ಲಿ ಮಾಯಾಶಬಲವಾದ ಜಗತ್ಕಾರಣವಾದ ಬ್ರಹ್ಮವು ಸಂಕಲ್ಪ ಈಕ್ಷಣಗಳಿಂದ ಹಿಗ್ಗಿದಂತಾಗುತ್ತದೆ. ಆಗ ಮೊದಲು ಫಲವನ್ನು ಕೊಡಲು ಸಮರ್ಥವಾದ ಪ್ರಾಣಿಗಳ ಕರ್ಮವಶದಿಂದ ಈ ಸಮಸ್ತವನ್ನೂ ಸೃಷ್ಟಿಮಾಡುತ್ತೇನೆಂಬ ಸ್ರಷ್ಟವ್ಯಾಲೋಚನಾರೂಪವಾದ ಸ್ಪಂದ ಅಥವಾ ವೃತ್ತಿಜ್ಞಾನವು ಪರಮಾತ್ಮನಿಗೆ ಉಂಟಾಗುತ್ತದೆ. ಈ ತಪೋರೂಪವಾದ ಜ್ಞಾನದಿಂದ ಬ್ರಹ್ಮಸ್ವರೂಪವು ಸ್ವಲ್ಪ ವಿಕಾಸದಿಂದ, ವೃದ್ಧಿಯಾದಂತೆ ಉಪಚಯವನ್ನು ಪಡೆಯುತ್ತದೆ. ಈ ರೀತಿಯಾಗಿ ಉಪಚಿತಜ್ಞಾನದಿಂದ ಕೂಡಿದ ಬ್ರಹ್ಮಸ್ವರೂಪದಿಂದ ಮುಂದೆ ಸಂಸಾರಿಗಳಿಂದ ಅವರ ಕರ್ಮಾನುಸಾರವಾಗಿ ಭುಜ್ಯಮಾನವಾಗುವ ಭೋಗ್ಯಪ್ರಪಂಚಕ್ಕೆ ಮೂಲಕಾರಣವಾದ ಅವ್ಯಾಕೃತವು ವ್ಯಾಚಿಕೀರ್ಷಿತ ಸ್ವರೂಪವನ್ನು ಹೊಂದುತ್ತದೆ. ಎಂದರೆ ಬ್ರಹ್ಮತತ್ವದಲ್ಲಿ ಉಂಟಾದ ಪ್ರಪಂಚವಿಷಯಕವಾದ ಸ್ರಷ್ಟವ್ಯಾಲೋಚನಾವಸ್ಥೆಯಲ್ಲಿ ಬ್ರಹ್ಮರೂಪವು ಮಾಯಾಶಬಲಿತವಾಗುತ್ತದೆ. ಆಮೇಲೆ ವ್ಯಾಕೃತಾವಸ್ಥೆಯನ್ನು ಹೊಂದುತ್ತದೆ. ಅನ್ನ ಶಬ್ದದಿಂದ ಹೇಳಲ್ಪಡುವ ಅವ್ಯಾಕೃತದಿಂದ, ಪೃಥಿವೀ, ವಾಯು, ಜಲ, ಇವುಗಳ ಸಂಬಂಧದಿಂದ, ಸ್ಥೂಲವಾದ ಬೀಜದಿಂದ ಅಂಕುರವು ಹುಟ್ಟುವಂತೆ, ಅಪಂಚೀಕೃತವಾಗಿರುವ ಪಂಚಭೂತಗಳು, ಅವುಗಳ ಕಾರ್ಯಗಳಾದ ಲಿಂಗ ಶರೀರಗಳ ಸಮಷ್ಟಿಗೆ ಅಭಿಮಾನಿಯಾಗಿ, ಅದೇ ಉಪಾಧಿಯಾಗಿ ಉಳ್ಳವನಾದ ಸರ್ವಜ್ಞನಾದ ಸರ್ವಶಕ್ತನಾದ ಪ್ರಾಣನೆಂಬ ಹಿರಣ್ಯಗರ್ಭನು ಆವಿರ್ಭವಿಸುತ್ತಾನೆ. ಇಲ್ಲಿ ಹಿರಣ್ಯಗರ್ಭನ ಉತ್ಪತ್ತಿಯನ್ನು ಹೇಳಿದ್ದರಿಂದ ಅಪಂಚೀಕೃತವಾದ ಭೂತಗಳಿಗೂ, ಸತ್ವರಜಸ್ತಮೋಽಂಶಪರಿಣಾಮರೂಪವಾದ ಲಿಂಗಶರೀರಕ್ಕೂ, ಉತ್ಪತ್ತಿಯನ್ನು ಹೇಳಿದಂತಾಯಿತು. ಆ ಪ್ರಾಣದಿಂದ ಪಂಚೀಕಾರಣದ ಪ್ರಕ್ರಿಯೆಯಲ್ಲಿ ಮೊದಲು ವಿಷಯವಾದ ಮನಸ್ಸು ಉಂಟಾಗುತ್ತದೆ. ಅನಂತರದಲ್ಲಿ ಮೋಕ್ಷಪರ್ಯಂತವಾಗಿ ಸತ್ಯವಾಗಿರುವ ಆಕಾಶಾದಿ ಪಂಚಮಹಾಭೂತಗಳು ಹುಟ್ಟುತ್ತವೆ. ಸತ್ ಎಂಬ ಶಬ್ದದಿಂದ ಪ್ರತ್ಯಕ್ಷ ವಿಷಯಗಳಾದ ಪೃಥಿವೀ,

ಯಃ ಸರ್ವಜ್ಞಃ ಸರ್ವವಿದ್ಯೋ ಯಸ್ಯ ಜ್ಞಾನಮಯಂ ತಪಃ ।
ತಸ್ಮಾದೇತತ್ಸುರಾಃ ಬ್ರಹ್ಮ ನಾಮ ರೂಪಾನ್ನ ಪೂರ್ವಕಂ ।
ಜಾಯತೇ ಸತ್ಯವತ್ ಸ್ವಪ್ನ ಪ್ರಪಂಚೋಪಮ ಮೇವ ಚ ॥೧೨॥

ತದೇತ ದಕ್ಷರಂ ಸತ್ಯಂ ತದ್ವಿಜ್ಞಾಯ ವಿಮುಚ್ಯತೇ ।
ಕರ್ಮಣಾ ನಾಸ್ತಿ ತತ್ಪ್ರಾಪ್ತಿಃ ಸಂಸಾರಸ್ಯ ವಿನಾಶನಂ ।
ಪ್ಲವಾ ಹ್ಯೇತೇ ಸುರಾ ಯಜ್ಞಾ ಅದೃಢಾಶ್ಚ ನ ಸಂಶಯಃ ॥೧೩॥

ಜಲ, ತೇಜಸ್ಸುಗಳೆಂಬ ಮೂರು ಭೂತಗಳನ್ನು ಪರಿಗ್ರಹಿಸಬೇಕು. ವಾಯು ಮತ್ತು ಆಕಾಶಗಳು ಪರೋಕ್ಷಗಳಾದುದರಿಂದ ಪರೋಕ್ಷವಾಚಿಯಾದ ತ್ಯತ್" ಎಂಬ ಶಬ್ದ ದಿಂದ ಅವುಗಳನ್ನು ಸ್ವೀಕರಿಸಬೇಕು. ಆದುದರಿಂದಲೇ "ಸಚ್ಚತ್ಯಚ್ಚಾಭವತ್" ಎಂದು ಮುಂಡಕೋಪನಿಷತ್ತಿನಲ್ಲಿ ೧.೮.೮. ಹೇಳಿದೆ. ಈ ರೀತಿಯಾಗಿ ಮಹಾ ಭೂತಗಳು ಹುಟ್ಟಲು ಪುನಃ ಚತುರ್ಮುಖಬ್ರಹ್ಮನ ಅಂಡಕ್ರಮದಿಂದ ಭೂರಾದಿ ಲೋಕಗಳೂ ಅವುಗಳಲ್ಲಿ ಮನುಷ್ಯಾದಿಗಳಿಗೆ ವರ್ಣಾಶ್ರಮೋಚಿತವಾದ ಕರ್ಮಗಳೂ, ಆ ಕರ್ಮಗಳಿಗೆ ಅನೇಕ ಕೋಟಿ ವರ್ಷಗಳ ವರೆಗೆ ಅನುಭವಿಸಿದರೂ ತೀರದ ಫಲ ಗಳೂ ಸಹ ಉಂಟಾಗುತ್ತವೆ. ಈ ಕ್ರಮದಿಂದ ಬ್ರಹ್ಮಸ್ವರೂಪದಿಂದ ಸಮಸ್ತ ಪ್ರಪಂಚಗಳೂ ಉಂಟಾಗುತ್ತವೆ. ॥೧೦-೧೧॥

ಪರಮಾತ್ಮನು ಸಾಮಾನ್ಯವಾಗಿ ಎಲ್ಲವನ್ನೂ ತಿಳಿದವನಾಗಿಯೂ, ವಿಶೇಷ ವಾಗಿಯೂ ಆಯಾಯ ವಸ್ತುಗಳನ್ನು ತಿಳಿದವನಾಗಿಯೂ ಇರುತ್ತಾನೆ. ಸರ್ವಜ್ಞ ಪ್ರಭಾವವುಳ್ಳ ಪರಮಾತ್ಮನ ತಪಸ್ಸು ಜ್ಞಾನಾತ್ಮಕವಾದುದು. ಅಷ್ಟೇ ಹೊರತು ಕೃಚ್ಛ್ರ ಚಾಂದ್ರಾಯಣಾದಿ ರೂಪವಾದುದಲ್ಲ. ಇಂತಹ ಪರಮಾತ್ಮನಿಂದ ಹಿರಣ್ಯಗರ್ಭನೆಂಬ ಬ್ರಹ್ಮನೂ, ದೇವದತ್ತ, ಯಜ್ಞದತ್ತನೆಂಬ ಇತ್ಯಾದಿ ನಾಮಗಳೂ, ನೀಲ ಪೀತಾದಿ ರೂಪಗಳೂ, ವ್ರೀಹಿ, ಯವ ಮುಂತಾದ ಅನ್ನಗಳೂ ಸಹ ಹಿಂದೆ ಹೇಳಿದ ಕ್ರಮದಿಂದ ಹುಟ್ಟಿದವು. ಈ ಹುಟ್ಟಿದ ಜಗತ್ತು ವ್ಯವಹಾರದೃಷ್ಟಿಯಿಂದ ಸತ್ಯವಾಗಿ ಕಂಡರೂ, ಪಾರಮಾರ್ಥಿಕದೃಷ್ಟಿಯಿಂದ ಸ್ವಪ್ನಪದಾರ್ಥಗಳಂತೆ ಮಿಥ್ಯಾಭೂತಗಳಾಗಿವೆ. ॥೧೨॥

ಈ ರೀತಿಯಾಗಿ ಪರವಿದ್ಯೆಗೆ ವಿಷಯವಾದ ಅಕ್ಷರಬ್ರಹ್ಮರೂಪದ ಲಕ್ಷಣವನ್ನು ಹೇಳಿ ಅಂತಹ ಬ್ರಹ್ಮಜ್ಞಾನವೇ ಮೋಕ್ಷಸಾಧನವೆಂದು ಹೇಳುತ್ತಾನೆ.—ಓ ಸುರರೇ, ಪಾರಮಾರ್ಥಿಕವಾಗಿಯೂ, ನಾಶವಿಲ್ಲದ್ದಾಗಿಯೂ, ಇರತಕ್ಕ ಬ್ರಹ್ಮಸ್ವರೂಪ ವಿಜ್ಞಾನ ದಿಂದ ಮನುಷ್ಯನು ಮುಕ್ತನಾಗುತ್ತಾನೆ. ಏಕೆಂದರೆ ಜ್ಞಾನವು ಅಜ್ಞಾನನಿವೃತ್ತಿ

ಏಭಿ ರೇವ ಪರಂ ಶ್ರೇಯ ಇತಿ ಜಾನಂತಿ ಯೇ ಜನಾಃ ।
ತೇ ಮೂಢಾ ಅನಿಶಂ ಮೃತ್ಯುಂ ಜರಾಂ ಚೈವಾ ಪಿಯಂತಿ ಚ ॥೧೪॥

ಕರ್ಮನಿಷ್ಠಾಃ ಸ್ವಯಂ ಧೀರಾ ಮತ್ವಾಃ ಪಂಡಿತಮಾನಿನಃ ।
ಮೂಢಾ ಏವ ನ ವಿದ್ವಾಂಸ ಸ್ತೇಷಾಂ ನಾಸ್ತಿ ಪರಾ ಗತಿಃ ।
ಅಂಧೇನೈವ ಯಥಾ ಚಾಂಧಾ ನೀಯಮಾನಾಸ್ಸುದಾರುಣೇ ॥೧೫॥

ಅಂಧಕೂಪೇ ಪತಂತ್ಯೇವ ತಥಾ ಕರ್ಮರತಾ ಜನಾಃ ।
ಕರ್ಮನಿಷ್ಠಾ ವಯಂ ಸರ್ವೇ ಕೃತಾರ್ಥಾ ಇತಿ ಮೋಹಿತಾಃ ॥೧೬॥

ದ್ವಾರಾ ಮೋಕ್ಷಕ್ಕೆ ಹೇತುವಾಗಿದೆ. ಅಜ್ಞಾನವು ಹೋಗಬೇಕಾದರೆ ಅದಕ್ಕೆ ವಿರೋಧಿಯಾದ ಜ್ಞಾನವೇ ಬರಬೇಕು. ಅಂಧಕಾರವು ಹೋಗಬೇಕಾದರೆ ಪ್ರಕಾಶವೇ ಬರಬೇಕು. ಈ ಅಜ್ಞಾನನಿವೃತ್ತಿಯು ಕರ್ಮದಿಂದ ಆಗಲಾರದು. ಆದುದರಿಂದ ಕರ್ಮಗಳಿಂದ ಸಂಸಾರನಿವೃತ್ತಿಯಾಗಿ ಬ್ರಹ್ಮಪ್ರಾಪ್ತಿಯಾಗಲಾರದು. ಯಜ್ಞರೂಪವಾದ ಕರ್ಮಗಳು ಅನಿತ್ಯಫಲವುಳ್ಳವುಗಳಾಗಿರುತ್ತವೆ. ಈ ಅನಿತ್ಯಫಲಗಳುಳ್ಳ ಕರ್ಮಗಳಿಂದ ನಿತ್ಯವಾದ ಮೋಕ್ಷವು ಹೇಗೆ ಲಭಿಸೀತು? ಈ ವಿಷಯದಲ್ಲಿ ಸಂದೇಹವಿಲ್ಲ. ||೧೩||

ಈ ಕರ್ಮಗಳಿಂದಲೇ ನಮಗೆ ಶ್ರೇಯಸ್ಸುಂಟಾಗುತ್ತದೆ. ನಾವು ಅವುಗಳನ್ನೇ ಆಚರಿಸಬೇಕು. ಎಂದು ಯಾವನು ತಿಳಿದುಕೊಂಡಿರುತ್ತಾನೆಯೋ ಅಂತಹ ಜನರು ಕೇವಲ ಮೂಢರೇ ಸರಿ. ಏಕೆಂದರೆ ಸ್ವರ್ಗವೇ ಮುಂತಾದ ಜನ್ಯಫಲಕ್ಕೆ ಕಾರಣವಾದ ಸಾಧನವು ಕಾರ್ಯವಲ್ಲದ ನಿತ್ಯವಾದ ಬ್ರಹ್ಮಪ್ರಾಪ್ತಿಗೆ ಸಾಧನವೆಂದು ತಿಳಿದುಕೊಂಡಿರುವುದರಿಂದ ಅವರು ಮೂರ್ಖರು. ಇಂತಹ ಜನರು ಪದೇ ಪದೇ ಜನನ ಮರಣಗಳನ್ನು ಹೊಂದುತ್ತಲೇ ಇರುತ್ತಾರೆ. ||೧೪||

ಕರ್ಮಗಳಲ್ಲಿಯೇ ಆಸಕ್ತರಾದ ಜನರು ನಾವೇ ಶಾಸ್ತ್ರಗಳಲ್ಲಿ ಧೀರರು. ನಾವೇ ಪಂಡಿತರು ಎಂದು ಭ್ರಾಂತಿಪಡುತ್ತಾರೆ. ವಸ್ತುತಃ ವಿಚಾರಿಸಿದರೆ ಅವರು ಮೂಢರೇ ಹೊರತು ತತ್ವದರ್ಶಿಗಳಲ್ಲ. ಅಂತಹವರಿಗೆ ಮೋಕ್ಷವಿಲ್ಲ. ಇಂತಹ ಕರ್ಮನಿಷ್ಠರಾಗಿಯೂ, ಕರ್ಮಗಳಿಂದ ನಾವೇ ಕೃತಕೃತ್ಯರು ಎಂದು ಯಾರು ತಿಳಿದುಕೊಂಡಿರುತ್ತಾರೆಯೋ ಅವರು ಕುರುಡನನ್ನು ಅನುಸರಿಸಿದ ಅನೇಕ ಕುರುಡರು ಆಳವಾದ

ಅಭಿಮನ್ಯಂತಿ ತೇ ಕರ್ಮ ಕ್ಷಯೇಽವಶ್ಯಂ ಪತಂತಿ ಹಿ ।
ವಿನಾ ನಾಸ್ತಿ ಪರ ಜ್ಞಾನಂ ತೇಷಾಂ ಕೈವಲ್ಯ ಮುತ್ತಮಂ ॥೧೮॥

ಇಷ್ಟಾಪೂರ್ತಂ ಮನ್ಯಮಾನಾ ವರಿಷ್ಠ ಮಿತಿ ಯೇ ಜನಾಃ ।
ತೇ ಮೂಢಾಃ ಪರಮಂ ಶ್ರೇಯೋ ನೈವ ಯಾಂತಿ ನ ಸಂಶಯಃ॥೧೯॥

ಅನೇಕ ಜನ್ಮ ಸಂಸಿದ್ಧಃ ಶ್ರೌತಸ್ಮಾರ್ತ ಪರಾಯಣಃ ।
ಅನಿತ್ಯ ಮಿತಿ ವಿಜ್ಞಾಯ ಜಗದ್ವೈರಾಗ್ಯ ಮಾಪ್ನುಯಾತ್ ॥೨೦॥

ಭಾವಿಯಲ್ಲಿ ಬಿದ್ದು ಅಧೋಗತಿಯನ್ನು ಹೊಂದುವಂತೆ ಶ್ರೇಯೋಮಾರ್ಗದಿಂದ ಭ್ರಷ್ಟರಾಗಿ ಅಧೋಗತಿಯನ್ನು ಹೊಂದುವರು. ॥೧೬-೧೭॥

ಕರ್ಮಠರಾದವರು ಕರ್ಮಗಳನ್ನು ಮಾಡಿ ಅವುಗಳ ಫಲವು ಮುಗಿಯಲು "ಕ್ಷೀಣೇಪುಣ್ಯೇ ಮರ್ತ್ಯಲೋಕಂ ವಿಶಂತಿ" ಎಂಬ ಭಗವದ್ಗೀತಾನುಸಾರವಾಗಿ ಪುನಃ ಈ ಲೋಕಕ್ಕೆ ಬಂದು ಸೇರುತ್ತಾರೆ. ಅಂತಹವರಿಗೆ ಪರಮಾತ್ಮನ ಜ್ಞಾನ ವಿಲ್ಲದೇ ಉತ್ತಮವಾದ ಮುಕ್ತಿಯು ಸಿಕ್ಕಲಾರದು. ಇನ್ನು ಕೆಲವರು ಶ್ರೌತ ಸ್ಮಾರ್ತ ಕರ್ಮಗಳೆಂಬ ಇಷ್ಟಾಪೂರ್ತಗಳೇ ಬಹಳ ಶ್ರೇಷ್ಠವಾದುವು. ಎಂದು ತಿಳಿದುಕೊಂಡಿರುತ್ತಾರೆ. ಅವರೂ ಸಹ ಮೂಢರೇ ಸರಿ. ಅವರೂ ಸಹ ಉತ್ಕೃಷ್ಟವಾದ ಮುಕ್ತಿಯನ್ನು ಹೊಂದುವುದಿಲ್ಲ. ಈ ವಿಷಯದಲ್ಲಿ ಸ್ವಲ್ಪವೂ ಸಂಶಯವಿರುವುದಿಲ್ಲ. ಇಲ್ಲಿ ಕರ್ಮನಿಂದೆ ಮಾಡಿದ್ದರಿಂದ ಕರ್ಮಗಳನ್ನು ಬಿಟ್ಟು ಭ್ರಷ್ಟರಾಗಬೇಕೆಂದು ಭ್ರಮಿಸಬಾರದು. ಕರ್ಮಾನುಷ್ಠಾನವನ್ನು ಅವಶ್ಯಕವಾಗಿ ಮಾಡಲೇಬೇಕು. ಅದಿಲ್ಲದಿದ್ದರೆ ಚಿತ್ತಶುದ್ಧಿಯಾಗಲಾರದು. ಚಿತ್ತಶುದ್ಧಿಯಾಗದೇ ಜ್ಞಾನೋದಯವಾಗಲಾರದು. ಆದರೆ ಫಲಾಭಿಸಂಧಿಯಿಂದ ಕರ್ಮಗಳನ್ನು ಮಾಡಬಾರದು. ಹಾಗೆ ಮಾಡಿದರೆ ಫಲಕ್ಕೆ ತಕ್ಕ ಜನ್ಮಾದಿಗಳುಂಟಾಗುತ್ತವೆಯೇ ಹೊರತು ಮೋಕ್ಷವುಂಟಾಗಲಾರದು. ಈಶ್ವರಾರ್ಪಣಬುದ್ಧಿಯಿಂದ ಕರ್ಮಾನುಷ್ಠಾನಮಾಡಿದರೆ ಈಶ್ವರಾನುಗ್ರಹದಿಂದ ಜ್ಞಾನವುಂಟಾಗಿ ಶ್ರೇಯಸ್ಸುಂಟಾಗುತ್ತದೆ. ಆದುದರಿಂದ ಇದು ಜ್ಞಾನಪ್ರಶಂಸೆಗೋಸ್ಕರ ಫಲಾಭಿಸಂಧಿಯಿಂದ ಮಾಡಿದ ಕರ್ಮನಿಂದೆಯೆಂದು ತಿಳಿಯಬೇಕೇ ಹೊರತು ಕರ್ಮವು ನಿಂದಿತವಾಗಿರುವುದರಿಂದ ಅದನ್ನು ಮಾಡದೆ ಬಿಡಬೇಕೆಂದು ತಿಳಿಯಬಾರದು. ॥೧೮-೧೯॥

ಈ ರೀತಿಯಾಗಿ ಅಪರಾವಿದ್ಯಾವಿಷಯವಾದ ಕರ್ಮನಿಂದೆಯನ್ನು ಮಾಡಿ "ಪರೀಕ್ಷ್ಯಲೋಕಾನ್ ಕರ್ಮಜಿತಾನ್" ಮುಂ.ಉ. ೧.೨.೧೨. ಎಂಬ ಶ್ರುತಿಯಿಂದ

ಜ್ಞಾನಾದೇವ ಹಿ ಸಂಸಾರ ವಿನಾಶೋ ನೈವ ಕರ್ಮಣಾ ।
ಇತಿ ಜ್ಞಾತ್ವಾ ಶಿವಜ್ಞಾನ ಸಿದ್ಧ್ಯರ್ಥಂ ಪುನರಾಸ್ತಿಕಾಃ ॥೨೧॥

ಶ್ರೋತ್ರಿಯಂ ಬ್ರಹ್ಮನಿಷ್ಠಂ ಚ ಗುರುಂ ಗಚ್ಛೇತ್ ಪ್ರಿಯೇಣ ಚ ।
ಗುರು ಸ್ತಸ್ಮೈ ಪರಾಂ ವಿದ್ಯಾಂ ದದ್ಯಾಚ್ಚ ಸುರಪುಂಗವಾಃ ॥೨೨॥

ವಿಸ್ಫುಲಿಂಗಾ ಯಥಾ ಚಾಗ್ನೇಃ ಸುದೀಪ್ತಾತ್ಪ್ರಭವಂತಿ ಹಿ ।
ಅಪಿಯಂತಿ ತಥಾ ಭಾವಾ ಅಕ್ಷರೇ ಶಿವ ಸಂಜ್ಞಕೇ ॥೨೩॥

ಪ್ರತಿಪಾದಿತವಾದ ವೈರಾಗ್ಯವಿಧಿಯನ್ನು ಸಂಗ್ರಹಿಸುತ್ತಾನೆ. ಅನೇಕ ಜನ್ಮಗಳಲ್ಲಿ ಫಲಾಭಿಸಂಧಿಯಿಲ್ಲದೇ ಮಾಡಿದ ಕರ್ಮಗಳಿಂದ ಚಿತ್ತನೈರ್ಮಲ್ಯವುಳ್ಳವನೂ, ಶ್ರುತಿ ಸ್ಮೃತಿವಿಹಿತವಾದ ಕರ್ಮಗಳಲ್ಲಿ ಆಸಕ್ತನೂ, ಆದ ಮುಮುಕ್ಷುವು, ಜಗತ್ತಿನ ಪ್ರತಿಯೊಂದು ವಸ್ತುವನ್ನೂ ಚೆನ್ನಾಗಿ ಪರೀಕ್ಷೆಮಾಡಿ ಈ ಜಗತ್ತು ಅನಿತ್ಯವಾದು ದೆಂದು ಮನಗಂಡು ತೀವ್ರವಾದ ವೈರಾಗ್ಯವನ್ನು ತಾಳಬೇಕು. ॥೨೦॥

ಓ ಆಸ್ತಿಕರಾದ ಸುರಶ್ರೇಷ್ಠರೇ, ಜ್ಞಾನದಿಂದ ಜನನಮರಣರೂಪವಾದ ಸಂಸಾರವು ನಿವೃತ್ತಿಯಾಗುತ್ತದೆ. ಕರ್ಮದಿಂದ ಸಂಸಾರನಿವೃತ್ತಿಯಾಗುವುದಿಲ್ಲವೆಂದು ತಿಳಿದು, ಪರಮಾತ್ಮಜ್ಞಾನಕ್ಕೋಸ್ಕರ ಶ್ರೋತ್ರಿಯನಾಗಿಯೂ, ಜೀವನ್ಮುಕ್ತನಾಗಿಯೂ ಇರುವ ಗುರುವಿನ ಸಮೀಪಕ್ಕೆ ಹೋಗಿ ಜ್ಞಾನವನ್ನು ಯಾಚಿಸಬೇಕು. ಆ ಗುರುವೂ ಸಹ ಅಂತಹ ಸಾಧನಸಂಪತ್ತಿಯುಳ್ಳ ಮುಮುಕ್ಷುವಿಗೆ ವಿಶ್ವಾಸಪೂರ್ವಕವಾಗಿ ಬ್ರಹ್ಮ ವಿದ್ಯೆಯನ್ನು ಉಪದೇಶಿಸಬೇಕು. " ಗುರುಂ ಗಚ್ಛೇತ್ " ಎಂದು ಹೇಳಿದ್ದರಿಂದ ಪಂಡಿತನಾದಾಗ್ಯೂ ತಾನೇ ಗ್ರಂಥಾವಲೋಕನವನ್ನು ಮಾಡಿದರೂ ಸಾಕೆಂದು ತಿಳಿಯಬಾರದು. ಹಾಗೆ ಮಾಡಿದರೆ ಬ್ರಹ್ಮಜ್ಞಾನವು ಪರೋಕ್ಷವಾಗುತ್ತದೆಯೇ ವಿನಾ ಅಪರೋಕ್ಷಪರ್ಯವಸಾಯಿಯಾಗಲಾರದು. ಬ್ರಹ್ಮಜ್ಞಾನವು ಅಪರೋಕ್ಷವಾಗದಿದ್ದರೆ ಅಜ್ಞಾನನಿವೃತ್ತಿ ಯಾಗಲಾರದು. ಆದುದರಿಂದ ಅಪರೋಕ್ಷಜ್ಞಾನಾರ್ಥಿಯು ಗುರುವಿ ನಿಂದಲೇ ಸಂಪ್ರದಾಯಪಾಲನಪೂರ್ವಕವಾಗಿ ಬ್ರಹ್ಮವಿದ್ಯೆಯನ್ನು ಅಭ್ಯಾಸಮಾಡ ಬೇಕೆಂದು ತಿಳಿಯಬೇಕು. ॥೨೧-೨೨॥

ಈ ರೀತಿಯಾಗಿ ಸಾಧನಚತುಷ್ಟಯ ಸಂಪನ್ನನಾದ ಜಿಜ್ಞಾಸುವಿಗೆ ಬ್ರಹ್ಮ ವಿದ್ಯೆಯನ್ನು ಉಪದೇಶಿಸಬೇಕೆಂದು ಹೇಳಿಯಾಯಿತು. ಶ್ರುತಿಯಲ್ಲಿ " ತದೇ ತತ್ ಸತ್ಯಂ " ಮುಂ. ಎಂಬುದಾಗಿ ಬ್ರಹ್ಮ ಒಂದೇ ಸತ್ಯವೆಂದು ಅವಧಾರಣೆಯು ಸರಿ

ದಿವ್ಯೋ ಹ್ಯಮೂರ್ತಃ ಪುರುಷಃ ಸ ಬಾಹ್ಯಾಭ್ಯಂತರೋ ಹ್ಯಜಃ ।
ಅಪ್ರಾಣೋ ಹ್ಯಮನಾಃ ಶುಭ್ರೋ ಮಾಯಯಾ ಜೀವಿತಃ ಪರಃ ॥೨೪॥

ಯಲ್ಲ. ಏಕೆಂದರೆ ಜೀವರೂ ಸಹ ಬ್ರಹ್ಮಸ್ವರೂಪಕ್ಕಿಂತಲೂ ಬೇರೆಯಿದ್ದಾರೆಯೆಂದು ಶಂಕಿಸಿ ಜೀವರು ಬ್ರಹ್ಮಕ್ಕಿಂತಲೂ ಬೇರೆಯಲ್ಲವೆಂಬ ವಿಷಯವನ್ನು ದೃಷ್ಟಾಂತದಿಂದ ಉಪಪಾದಿಸುತ್ತಾನೆ. ಚೆನ್ನಾಗಿ ಉರಿಯುತ್ತಿರುವ ಅಗ್ನಿಯಿಂದ ಅದರಂತೆಯೇ ಇರುವ ಕಿಡಿಗಳು ಹೊರಡುತ್ತವೆ. ಆ ಕಿಡಿಗಳು ಅಗ್ನಿಗಿಂತ ಬೇರೆಯೆಂದು ಹೇಳಲು ಸಾಧ್ಯವಿಲ್ಲ. ಅದರಂತೆ ಚಿದ್ರೂಪರಾದ ಜೀವರೂ ಸಹ ದೇಹೇಂದ್ರಿಯಾದ್ಯುಪಾಧಿ ವಶದಿಂದ ಚಿದ್ರೂಪವಾದ ಬ್ರಹ್ಮಸ್ವರೂಪದಿಂದ ಉಪಾಧ್ಯಧೀನವಾಗಿ ಹುಟ್ಟಿ, ಶಿವನೆಂಬ ಅಕ್ಷರಸ್ವರೂಪದಲ್ಲಿ, ಮಹಾಕಾಶದಲ್ಲಿ ಘಟಾಕಾಶವು ಲೀನವಾಗುವಂತೆ, ಲಯವನ್ನು ಹೊಂದುತ್ತಾರೆ. ಈ ಚಿದ್ರೂಪರಾದ ಜೀವರು ಚಿದ್ರೂಪವಾದ ಬ್ರಹ್ಮಸ್ವರೂಪಕ್ಕಿಂತ ಬೇರೆಯಿಲ್ಲ. ಆದುದರಿಂದ "ತದೇತತ್ಸತ್ಯಂ" ಎಂಬ ಅವಧಾರಣೆಯು ಸರಿಯಾಗಿದೆ. ||೨೩||

ಪ್ರಾಣಾದಿಗಳು ಜೀವರಿಗೆ ಇರುವಂತೆ ಪರಮಾತ್ಮನಿಗೆ ಇಲ್ಲವೆಂದು ಸರ್ವೋಪಾಧಿವಿನಿರ್ಮುಕ್ತವಾದ ಬ್ರಹ್ಮಸ್ವರೂಪವನ್ನು ಹೇಳುತ್ತಾನೆ. ಪರಮಾತ್ಮನು ಸ್ವಪ್ರಕಾಶಚೈತನ್ಯಸ್ವರೂಪವಾದ ಸ್ವಾತ್ಮಸ್ವರೂಪದಲ್ಲಿರುವುದರಿಂದ ದಿವ್ಯನಾಗಿರುತ್ತಾನೆ. ಎಂದರೆ ಸ್ವಮಹಿಮೆಯಲ್ಲಿ ಪ್ರತಿಷ್ಠಿತನು ಎಂದರ್ಥವು. ಅಂತಹ ಪರಮಾತ್ಮನು ಮೂರ್ತಿರಹಿತನಾಗಿ ವಿಭುವಾದ ಕಾರಣವೇ ಎಲ್ಲರ ಪುರೀತತ್ತೆಂಬ ನಾಡಿಯಲ್ಲಿರುವುದರಿಂದ ಪುರುಷನಾಗಿಯೂ, ಹೊರಗೂ, ಒಳಗೂ, ಎಲ್ಲಾ ಕಡೆಯಲ್ಲಿಯೂ, ವ್ಯಾಪಿಸಿದವನಾಗಿಯೂ, ಉತ್ಪತ್ತಿಯಿಲ್ಲದವನಾಗಿಯೂ ಇರುತ್ತಾನೆ. ಇಂತಹ ಪರಮೇಶ್ವರನು ಅಜ್ಞರ ದೃಷ್ಟಿಯಿಂದ ಪ್ರಾಣಾದಿಗಳನ್ನು ಹೊಂದಿ ಇದ್ದಹಾಗೆ ತೋರುತ್ತಾನೆ. ವಸ್ತುತಃ ಅವನಿಗೆ ಪ್ರಾಣಾದಿಗಳೂ, ಮನಸ್ಸೂ ಸಹ ಇರುವುದಿಲ್ಲ. ಇಲ್ಲಿ ಪ್ರಾಣಶಬ್ದದಿಂದ ಪ್ರಾಣಾದಿ ವ್ಯಾಪಾರಕ್ಕೆ ನಿಮಿತ್ತವಾದ ಕ್ರಿಯಾಶಕ್ತಿಯನ್ನು ಗ್ರಹಿಸಬೇಕು. ಇದು ಸಕಲವಾದ ಕರ್ಮೇಂದ್ರಿಯಗಳಿಗೂ ಉಪಲಕ್ಷಕವಾಗಿದೆ. ಸಂಕಲ್ಪಾದ್ಯಾತ್ಮಕವಾದ ಮನಸ್ಸನ್ನು ಹೇಳಿದ್ದರಿಂದ ಬುದ್ಧಿಯನ್ನೂ ಜ್ಞಾನೇಂದ್ರಿಯಗಳನ್ನೂ ಪರಿಗ್ರಹಿಸಬೇಕು. ಒಟ್ಟಿನಲ್ಲಿ ಪರಮಾತ್ಮನಿಗೆ ಕರ್ಮೇಂದ್ರಿಯ ಬುದ್ಧಿಜ್ಞಾನೇಂದ್ರಿಯ ಇವುಗಳು ಇರುವುದಿಲ್ಲ. ಏಕೆಂದರೆ ಈ ಪ್ರಾಣಾದಿಗಳ ಸಂಬಂಧವಿಲ್ಲದ್ದರಿಂದಲೂ, ಧರ್ಮಾಧರ್ಮಗಳ ಸಂಪರ್ಕವಿಲ್ಲದ್ದರಿಂದಲೂ ಆತ್ಮನು ನಿರ್ಮಲನು. ಏಕೆಂದರೆ

ಏತಸ್ಮಾಜ್ಜಾಯತೇ ಪ್ರಾಣೋ ಮನಃ ಸರ್ವೇಂದ್ರಿಯಾಣಿ ಚ ।
ಖಂ ವಾಯುರ್ಜ್ಯೋತಿರಾಪಶ್ಚ ಭೂಮಿರ್ವಿಶ್ವಸ್ಯ ಧಾರಿಣೀ ॥೨೫॥

ಅಗ್ನಿರ್ಮೂರ್ಧಾ ಚಕ್ಷುಷೀ ಚಂದ್ರಸೂರ್ಯೌ ।
ದಿಶಃ ಶ್ರೋತ್ರೇ ವಾಗ್ವಿವೃತಾಶ್ಚ ವೇದಾಃ ॥
ವಾಯುಃ ಪ್ರಾಣೋ ಹೃದಯಂ ವಿಶ್ವಮಸ್ಯ ।
ಪದ್ಭ್ಯಾಂ ಭೂಮಿಃ ಶಂಕರೋಽಯಂ ಹಿ ಸತ್ಯಃ ॥೨೬॥

ತಸ್ಮಾದಗ್ನಿಃ ಸಮಿಧೋ ಯಸ್ಯ ಸೂರ್ಯಃ ।
ಸೋಮಾದ್ವೃಷ್ಟಿಶ್ಚೌಷಧಯಃ ಪೃಥಿವ್ಯಾಂ ॥

ಸಕಲ ಸಂಸಾರಮಾಲಿನ್ಯವೂ ಕೂಡ ಆ ಧರ್ಮಾಧರ್ಮಗಳ ಮೂಲಕವಾದುದು. ಆದುದರಿಂದ ಭೋಗ್ಯಪ್ರಪಂಚಕ್ಕೆ ಉಪಾದಾನಕಾರಣವಾದ ಮಾಯೆಗಿಂತಲೂ, ಭೋಕ್ತೃಗಳಾದ ಸೋಪಾಧಿಕರಾದ ಜೀವರುಗಳಿಗಿಂತಲೂ, ಸಹ ಇಂತಹ ಲಕ್ಷಣವುಳ್ಳ ನಿರುಪಾಧಿಕನಾದ ಆತ್ಮನು ಪರನಾಗಿರುತ್ತಾನೆ. ||೨೪||

ಇಂತಹ ಪರಮಾತ್ಮನಿಂದ ಪ್ರಾಣಗಳೂ, ಮನಸ್ಸೂ ಜ್ಞಾನೇಂದ್ರಿಯ ಕರ್ಮೇಂದ್ರಿಯಗಳೂ, ಆಕಾಶ, ತೇಜಸ್ಸು, ಜಲ, ಸಮಸ್ತಕ್ಕೂ ಆಧಾರವಾದ ಪೃಥ್ವೀ ಇದೇ ಮೊದಲಾದವುಗಳು ಹುಟ್ಟಿದವು. ಇಲ್ಲಿ ಪ್ರಾಣಾದಿಗಳು ಹುಟ್ಟಿದುವು ಎಂದು ಹೇಳಿರುವುದರಿಂದ ಅವುಗಳು ಹುಟ್ಟುವುದಕ್ಕಿಂತ ಪರಮಾತ್ಮನಿಗೆ ಅವುಗಳ ಸಂಬಂಧ ವಿರಲಿಲ್ಲವೆಂದು ಹೇಳಿದಂತಾಯಿತು. ||೨೫||

ಹಿರಣ್ಯಗರ್ಭನಂತೆ ಬ್ರಹ್ಮಾಂಡಾಂತರ್ವರ್ತಿಯಾದ ಅಂಡಾಭಿಮಾನಿಯಾದ ವಿರಾಟ್ಪುರುಷನೂ ಸಹ ಪರಶಿವನಿಂದ ಹುಟ್ಟಿದವನು. ಮತ್ತು ಪರಮಾತ್ಮನಿಗಿಂತ ಬೇರೆಯಲ್ಲವು. ಈ ಅಂಶವನ್ನು ಪ್ರತಿಪಾದಿಸುತ್ತಾನೆ. ವಿರಾಟ್ಪುರುಷನಿಗೆ ದ್ಯುಲೋಕವೇ ಶಿರಸ್ಸು. ಸೂರ್ಯಚಂದ್ರರೇ ಕಣ್ಣುಗಳು. ದಿಕ್ಕುಗಳೇ ಕಿವಿಗಳು, ವೇದಗಳೇ ವಾಕ್ಕುಗಳು, ವಾಯುವೇ ಪ್ರಾಣವು, ಸಮಸ್ತ ಪ್ರಪಂಚವೇ ಹೃದಯವೂ ಆಗಿರುತ್ತವೆ. ಅವನ ಪಾದಗಳಿಂದ ಪೃಥಿವಿಯು ಉಂಟಾಗಿದೆ. ಇಂತಹ ವಿರಾಟ್ಪುರುಷನಿಗೂ ಈ ಪ್ರಪಂಚರೂಪವಾದ ಉಪಾಧಿಯು ಹೋಗಲಾಗಿ ಶಂಕರನೊಬ್ಬನೇ ಸತ್ಯವಾಗಿರುತ್ತಾನೆ. ||೨೬||

ಪೂರ್ವೋಕ್ತನಾದ ಪರಮೇಶ್ವರನಿಂದ ಸೂರ್ಯನೆಂಬ ಸಮಿತ್ತಿನಿಂದ ಪ್ರಕಾಶಮಾನವಾದ ಅಗ್ನಿಎಂಬ ದ್ಯುಲೋಕವೂ ಅದರಿಂದ ಸೋಮನೂ, ಅದರಿಂದ ವೃಷ್ಟಿಯೂ

ಪುಮಾನ್ ರೇತಃ ಸಿಂಚತಿ ಯೋಷಿತಾಯಾಂ ।
ಬಹ್ವೀಃ ಪ್ರಜಾ ಬಹುಧಾ ಸಂಪ್ರಸೂತಾಃ ॥೨೭॥

ತಸ್ಮಾದೃಚಃ ಸಾಮ ಯಜೂಂಷಿ ದೀಕ್ಷಾ ।
ಯಜ್ಞಾಶ್ಚ ಸರ್ವೇ ಕ್ರತವೋ ದಕ್ಷಿಣಾಶ್ಚ ॥
ಸಂವತ್ಸರೋ ಯಜಮಾನಶ್ಚ ಲೋಕಃ ।
ಸೋಮೋ ಯತ್ರ ಪವತೇ ಯತ್ರ ಸೂರ್ಯಃ ॥೨೮॥

ತಸ್ಮಾದ್ದೇವಾ ಬಹುಧಾ ಸಂಪ್ರಸೂತಾಃ ।
ಸಾಧ್ಯಾ ಮರ್ತ್ಯಾಃ ಪಶವಃ ದಕ್ಷಿಣಶ್ಚ ॥
ಪ್ರಾಣಾಪಾನೌ ವ್ರೀಹಿಯವೌ ತಪಶ್ಚ ।
ಶ್ರದ್ಧಾ ಸತ್ಯಂ ಬ್ರಹ್ಮಚರ್ಯಂ ವಿಧಿಶ್ಚ ॥೨೯॥

ವೃಷ್ಟಿಯಿಂದ ಪೃಥಿವೀ, ವ್ರೀಹಿಯವಾದಿಗಳೂ, ವನಸ್ಪತಿಗಳೂ ಉಂಟಾಗುತ್ತವೆ. ಆ ವ್ರೀಹ್ಯಾದಿಗಳನ್ನು ಪುರುಷನೆಂಬ ಅಗ್ನಿಯಲ್ಲಿ ಹೋಮ ಮಾಡಲಾಗಿ ರೇತೋರೂಪವಾಗಿ ಪರಿಣಾಮವನ್ನು ಹೊಂದುತ್ತವೆ. ಆ ರೇತಸ್ಸನ್ನು ಪುರುಷನು ಯೋಷಿತ್ತೆಂಬ (ಸ್ತ್ರೀ) ಅಗ್ನಿಯಲ್ಲಿ ಆಹುತಿಮಾಡುತ್ತಾನೆ. ಆದರಿಂದ ನಾನಾವಿಧವಾದ ಅನಂತ ಪ್ರಜೆಗಳು ಹುಟ್ಟುತ್ತಾರೆ. ಇದನ್ನು ಛಾಂ. ಉ. ನಲ್ಲಿ ೫.೪.೧. ಪಂಚಾಗ್ನಿವಿದ್ಯೆಯಲ್ಲಿ ಹೇಳಿದೆ. ॥೨೭॥

ಆ ಪರಮೇಶ್ವರನಿಂದಲೇ ಕರ್ಮಸಾಧನಜ್ಞಾನಗಳಾದ ಋಗ್ಯಜುಸ್ಸಾಮಾದಿ ವೇದಗಳೂ, ಆ ಕರ್ಮಗಳ ಫಲಗಳೂ ದೀಕ್ಷೆ (ನಿಯಮದಿಂದಿರುವಿಕೆ)ಯೂ ಯೂಪವಿಲ್ಲದ ಅಗ್ನಿಹೋತ್ರಾದಿ ಯಜ್ಞಗಳೂ, ಯೂಪವುಳ್ಳ ಜ್ಯೋತಿಷ್ಟೋಮಾದಿ ಕ್ರತುಗಳೂ, ಕರ್ಮಾಂಗವಾದ ಕಾಲವೂ, ಕರ್ಮಕರ್ತನಾದ ಯಜಮಾನನೂ, ಆ ಕರ್ಮಗಳಿಗೆ ಫಲವಾದ ಲೋಕವೂ ಇವೆಲ್ಲವೂ ಉಂಟಾಗುತ್ತವೆ. ಆ ಲೋಕಗಳಲ್ಲಿ ವಿದ್ವಾಂಸನು ಸೂರ್ಯಲೋಕವನ್ನೂ ಅವಿದ್ವಾಂಸನು ಚಂದ್ರಲೋಕವನ್ನೂ ಹೊಂದುತ್ತಾರೆ. ॥೨೮॥

ವಸು ರುದ್ರಾದಿ ಬಹುವಿಧವಾದ ಕರ್ಮಾಂಗಭೂತರಾದ ದೇವತೆಗಳೂ, ದೇವಯೋನಿ ವಿಶೇಷರಾದ ಸಾಧ್ಯರೂ, ಮನುಷ್ಯರೂ, ಗ್ರಾಮದಲ್ಲಿಯೂ ಅರಣ್ಯಗಳಲ್ಲಿಯೂ ವಾಸಮಾಡುವ ಕರ್ಮಾಂಗವಾದ ಪಶುಗಳೂ, ಮನುಷ್ಯರ ಪ್ರಾಣಾಪಾನಗಳೂ, ಪಕ್ಷಿಗಳೂ, ಹವಿಸ್ಸಿಗೋಸ್ಕರ ವ್ರೀಹಿಯವಾದಿಗಳೂ, ಪುರುಷಸಂಸ್ಕಾರ

ತಸ್ಮಾತ್ಪ್ರಾಣಾ ಅರ್ಚಿಷಃ ಸಪ್ತಹೋಮಾಃ ।
ಸುರಶ್ರೇಷ್ಠಾಃ ಸಮಿಧಃ ಸಪ್ತಚೈವ ॥
ಲೋಕಾಃ ಸರ್ವೇ ಚೋದ್ಭವಂತ್ಯಾಶು ಪೂರ್ವಂ ।
ತಥಾ ತದ್ವತ್ಸ್ವಪ್ನ ತುಲ್ಯಂ ತಥಾಽಪಿ ॥೩೦॥

ಅತಃ ಸಮುದ್ರಾ ಗಿರಯಶ್ಚ ನದ್ಯಃ ।
ತಥಾ ಸರ್ವಾ ಓಷಧಯೋ ರಸಾಶ್ಚ ॥
ಸರ್ವಸ್ಯಾತ್ಮಾ ಸರ್ವಸಾಕ್ಷೀ ಪರಾತ್ಮಾ ।
ನಿತ್ಯಾನಂದೋಽಯಂ ಪುರಾಣಃ ಸುಪೂರ್ಣಃ ॥೩೧॥

ಇದಂ ಸಕಲಮಾಸ್ತಿಕಾಃ ಪುರುಷ ಏವ ನೈವಾಪರಂ ।
ನ ಕಿಂಚಿದಪರಂ ತತಃ ಸಕಲಮಸ್ತಿ ಸತ್ಯಂ ಹಿ ತತ್ ॥

ರೂಪವಾದ ಕರ್ಮಾಂಗವಾದ ತಪಸ್ಸೂ, ಸತ್ಯವೂ, ಬ್ರಹ್ಮಚರ್ಯವೂ, ಈರೀತಿಯಾಗಿ ಮಾಡಬೇಕೆಂಬ ವಿಧಿಯೂ ಆ ಪರಮೇಶ್ವರನಿಂದಲೇ ಹುಟ್ಟಿದವು. ॥೨೯॥

ತಲೆಯಲ್ಲಿರತಕ್ಕ ಏಳು ಇಂದ್ರಿಯಗಳೂ, (ಎರಡು ಕಣ್ಣು, ಎರಡು ಮೂಗು, ಎರಡು ಕಿವಿ, ಬಾಯಿ ಒಟ್ಟು ಏಳು) ಅವುಗಳ ವಿಷಯ ಪ್ರಕಾಶನ ಶಕ್ತಿಗಳೂ, ಅವುಗಳಿಂದುಂಟಾದ ಏಳು ವಿಷಯ ವಿಜ್ಞಾನಗಳೂ, ಏಳು ವಿಷಯಗಳೂ, ಅವುಗಳಲ್ಲಿರತಕ್ಕ ಸಪ್ತ ಗೋಳಕಗಳೂ ಸಹ ಪರಶಿವನಿಂದ ಹುಟ್ಟಿದವು. ಈರೀತಿಯಾಗಿ ಉಂಟಾದ ಪದಾರ್ಥಗಳು ಸ್ವಪ್ನಾರ್ಥಗಳಂತೆ ಅನೃತವಾಗಿವೆ. ॥೩೦॥

ಮತ್ತು ಸಮುದ್ರಗಳೂ, ಪರ್ವತಗಳೂ, ಗಂಗಾದಿ ನದಿಗಳೂ ವ್ರೀಹಿಯವಾದಿ ಔಷಧಿಗಳೂ, ಮಧುರಾದಿ ರಸಗಳೂ, ಸಹ ಪರಮಾತ್ಮನಿಂದ ಉಂಟಾದವು. ಆ ಪರಮಾತ್ಮನು ಸರ್ವರಿಗೂ ಆತ್ಮಭೂತನಾಗಿಯೂ, ಸರ್ವಸಾಕ್ಷಿಯಾಗಿಯೂ, ಎಲ್ಲಕ್ಕಿಂತ ಮಿಗಿಲಾದ ನಿತ್ಯವಾದ ಆನಂದರೂಪನಾಗಿಯೂ, ಪುರಾಣನಾಗಿಯೂ, ಪ್ರಪಂಚರೂಪವೂ ಅವನೇ ಆದುದರಿಂದ ಪ್ರಪಂಚದಿಂದ ಸಂಕೋಚವಿಲ್ಲದೇ ಪರಿಪೂರ್ಣನಾಗಿಯೂ ಇರುತ್ತಾನೆ. ॥೩೧॥

ಓ ಆಸ್ತಿಕರೇ, ನಮಗೆ ಗೋಚರವಾಗುವ ಸಮಸ್ತವೂ ಪರಮಾತ್ಮನಲ್ಲಿ ಅಧ್ಯಸ್ತವಾದುದರಿಂದ ಸಮಸ್ತವೂ ಅವನ ಸ್ವರೂಪವಾಗಿರುವುದು. ಪರಮಾತ್ಮನಿಗಿಂತಲೂ ಬೇರೆಯಾದುದು ಯಾವುದೂ ಇರುವುದಿಲ್ಲ. ಪರಬ್ರಹ್ಮಸ್ವರೂಪ ಒಂದೇ

ಇದಂ ಹಿ ಮಮ ವೇದನಂ ಮುನಿಗಣಸ್ಯ ಶಂಭೋರ್ಹರೇಃ ।
ನ ಕಶ್ಚಿದಪಿ ಸಂಶಯಃ ಶ್ರುತಿಮತಸ್ಯ ಯುಕ್ತಃ ಖಲು ॥೩೨॥

ಅಹೋ ವಿಷಯ ಮಾಯಯಾ ಮರಣಪೂರ್ವ ದುಃಖೋದಧೌ ।
ಪತಂತಿ ಮನುಜಾ ಅಮೀ ಪರಶಿವಸ್ಯ ವಿದ್ಯಾಂ ವಿನಾ ॥
ತರಂತಿ ಜನನಾರ್ಣವಂ ಪರಶಿವಸ್ಯ ವಿದ್ಯಾಬಲಾತ್ ।
ಇದಂ ತು ಶಿವವೇದನಂ ಶಿವಪದಸ್ಯ ಸೇವಾಬಲಾತ್ ॥೩೩॥

ಗುಹಾಯಾಂ ನಿಹಿತಂ ಸಾಕ್ಷಾದಕ್ಷರಂ ವೇದ ಚೇನ್ನರಃ ।
ಛಿತ್ವಾಽವಿದ್ಯಾ ಮಹಾಗ್ರಂಥಿಂ ಶಿವಂ ಗಚ್ಛೇತ್ಸನಾತನಂ ॥೩೪॥

ತದೇತ ದಕ್ಷರಂ ಬ್ರಹ್ಮ ಸ ಪ್ರಾಣಸ್ತದು ವಾಙ್ಮನಃ ।
ತದೇತದಮೃತಂ ಸತ್ಯಂ ತದ್ವೇದ್ಧವ್ಯಂ ಮನೀಷಿಭಿಃ ॥೩೫॥

ಸತ್ಯವಾಗಿರುವುದು. ಈರೀತಿಯಾದ ಅನುಭವವು ನನಗೂ, ಸಮಸ್ತ ಮುನಿಗಳಿಗೂ, ರುದ್ರನಿಗೂ, ಹಿರಿಯರಿಗೂ ಇರುತ್ತದೆ. ಈರೀತಿಯಾಗಿ ಶ್ರುತಿ, ಅನುಭವ, ಸಿದ್ಧವಾದ ಅರ್ಥದಲ್ಲಿ ಸಂಶಯವನ್ನು ಆರೋಪಣೆಮಾಡುವುದು ಯುಕ್ತವಾದುದಲ್ಲ. ॥೩೨॥

ಮನುಷ್ಯರು ಪರಶಿವನ ವಿಜ್ಞಾನವಿಲ್ಲದೇ ವಿಷಯಲೋಲುಪತೆಯಿಂದ ಜನನಮರಣರೂಪವಾದ ಸಂಸಾರವೆಂಬ ದುಃಖ ಸಮುದ್ರದಲ್ಲಿ ಬೀಳುತ್ತಾರೆಂಬ ವಿಷಯವು ಬಹಳ ಖೇದಕರವಾಗಿದೆ. ಪರಶಿವನ ವಿಜ್ಞಾನದಿಂದ ಮನುಜರು ಸಂಸಾರವೆಂಬ ಸಮುದ್ರವನ್ನು ದಾಟುತ್ತಾರೆ. ಈ ಪರಮಾತ್ಮ ವಿಜ್ಞಾನವಾದರೋ ಪರಶಿವನ ಪಾದಸೇವೆಯಿಂದ ಉಂಟಾಗುತ್ತದೆ. ॥೩೩॥

ಮನುಷ್ಯನು ತನ್ನ ಗುಹೆಯೆಂಬ ಹೃದಯಮಧ್ಯದಲ್ಲಿರತಕ್ಕ ಸ್ವಾತ್ಮಭೂತನಾದ ಸಾಕ್ಷಾತ್ ಅಕ್ಷರನಾದ ಪರಶಿವನನ್ನು ಸಾಕ್ಷಾತ್ಕರಿಸಿಕೊಂಡರೆ ಆ ಸಾಕ್ಷಾತ್ಕಾರಕ್ಕೆ ವಿರೋಧಿಯಾದ ಗ್ರಂಥಿ (ಗಂಟು) ಯಂತೆ ತೊಡಕಾದ ಅವಿದ್ಯೆಯು ಆವರಣ ವಿಕ್ಷೇಪ ಸಹಿತವಾಗಿ ನಷ್ಟವಾಗುತ್ತದೆ. ಹೀಗೆ ಬ್ರಹ್ಮಾವರಕವಾದ ಅವಿದ್ಯೆಯು ನಿವೃತ್ತವಾಗುತ್ತಿರಲು ಶಿವನೆಂಬ ಸ್ವಸ್ವರೂಪಾವಿರ್ಭಾವವಾಗುತ್ತದೆ. ॥೩೪॥

ಹೀಗೆ ಹೇಳಿದ ಅಕ್ಷರಬ್ರಹ್ಮವೇ ಪ್ರಾಣ, ವಾಕ್ಕು, ಮನಸ್ಸಾಗಿರುತ್ತದೆ. ಎಂದರೆ ಪ್ರಾಣೇಂದ್ರಿಯಾದಿ ಸಂಘಾತವು ಬ್ರಹ್ಮಾತ್ಮಕವಾದುದರಿಂದ ಬ್ರಹ್ಮವೇ ಪ್ರಾಣಾದಿಗಳಾಗಿದೆ. "ಪ್ರಾಣಸ್ಯ ಪ್ರಾಣಃ" ಎಂಬ ಶ್ರುತಿಯೂ, ಈ ಅಂಶವನ್ನು ಪುಷ್ಟೀಕರಿಕ

ಧನುಸ್ತಾರಂ ಶರೋ ಹ್ಯಾತ್ಮಾ ಬ್ರಹ್ಮತಲ್ಲಕ್ಷ್ಯ ಮುಚ್ಯತೇ ।
ಅಪ್ರಮತ್ತೇನ ವೇದ್ಧವ್ಯಂ ಶರವತ್ತನ್ಮಯೋ ಭವೇತ್ ॥೩೬॥

ಲಕ್ಷ್ಯಂ ಸರ್ವಗತಂ ಚೈವ ಶರೋಽಯಂ ಸರ್ವತೋಮುಖಃ ।
ವೇದ್ಧಾ ಸರ್ವಗತಶ್ಚೈವ ವಿದ್ಧಂ ಲಕ್ಷ್ಯಂ ನ ಸಂಶಯಃ ॥೩೭॥

ಆತ್ಮಾನ ಮರಣಿಂ ಕೃತ್ವಾ ಪ್ರಣವಂ ಚೋತ್ತರಾರಣಿಂ ।
ಧ್ಯಾನ ನಿರ್ಮಥನಾಭ್ಯಾಸಾದ್ದೇವಂ ಪಶ್ಯೇನ್ನಿಗೂಢವತ್ ॥೩೮॥

ಸುತ್ತದೆ. ಈ ಬ್ರಹ್ಮವೇ ನಾಶರಹಿತವಾಗಿಯೂ, ಸತ್ಯವಾಗಿಯೂ ಇದೆ. ಇಂತಹ ಬ್ರಹ್ಮಸ್ವರೂಪವನ್ನು ಜ್ಞಾನಿಗಳು ಮನಸ್ಸಿನಿಂದ ಧ್ಯಾನಿಸಬೇಕು. ॥೩೫॥

ಆತ್ಮವೆಂಬ ಲಕ್ಷ್ಯವನ್ನು ಹೊಡೆ (ಪಡೆ) ಯಲು ಅದರ ಪ್ರಕಾರವನ್ನು ಹೇಳುತ್ತಾನೆ.—ಲೋಕದಲ್ಲಿ ಲಕ್ಷ್ಯದಲ್ಲಿ (ಗುರಿ) ಬಾಣದ ಪ್ರವೇಶಕ್ಕೆ ಧನುಸ್ಸು ಹೇಗೆ ಕಾರಣವಾಗಿರುತ್ತದೆಯೋ ಹಾಗೆ ಆತ್ಮವೆಂಬ ಬಾಣದ ಲಕ್ಷ್ಯವಾದ ಬ್ರಹ್ಮನಲ್ಲಿ ಓಂಕಾರವು ಪ್ರವೇಶಕಾರಣವಾದ ಧನುಸ್ಸಾಗಿರುತ್ತದೆ. ಸರ್ವಪ್ರತ್ಯಯಗಳಿಗೆ ಸಾಕ್ಷಿಯಾದ ಸೋಪಾಧಿಕನಾದ ಆತ್ಮನೇ ಶರವು. ಆ ಸೋಪಾಧಿಕನಾದ ಆತ್ಮನು ಉಪಾಧಿಯನ್ನು ಬಿಟ್ಟು ಬಾಣದಂತೆ ಲಕ್ಷ್ಯವಾದ ಬ್ರಹ್ಮದಲ್ಲಿ ಸ್ವಾತ್ಮರೂಪನಾಗುತ್ತಾನೆ. ಈಬ್ರಹ್ಮವೇ ಲಕ್ಷ್ಯವು. ಈ ಧನುರಾದಿ ಸಾಧನಗಳಿಂದ ವಿಷಯಾಭಿಲಾಷೆಯೇ ಮುಂತಾದ ಪ್ರಮಾದರಹಿತವಾದ ಚಿತ್ತೈಕಾಗ್ರತೆಯಿಂದ ಮನುಷ್ಯನು ಹೊಡೆ(ಪಡೆ)ಯಬೇಕು. ಅನಂತರ ಶರವು ಲಕ್ಷ್ಯದೊಂದಿಗೆ ಏಕೀಭಾವವನ್ನು ಹೊಂದುವಂತೆ ದೇಹಾದಿ ಸಾಕ್ಷಿಯು ಸಾಕ್ಷ್ಯಭಿಮಾನವನ್ನು ಬಿಟ್ಟು ಬ್ರಹ್ಮಸ್ವರೂಪನಾಗುತ್ತಾನೆ. ॥೩೬॥

ಲೋಕದಲ್ಲಿ ಲಕ್ಷ್ಯವು ಪರಿಚ್ಛಿನ್ನವಾಗಿರುತ್ತದೆ. ಇಲ್ಲಿ ಸರ್ವವ್ಯಾಪಿಯಾಗಿರುತ್ತದೆ. ಬಾಣವೂ, ಹೊಡೆಯುವವನೂ, ಹೊಡೆಯಲು ಯೋಗ್ಯವಾದ ಬ್ರಹ್ಮಸ್ವರೂಪ ಇವೆಲ್ಲವೂ ವ್ಯಾಪ್ಯವಾಗಿವೆ. ಲೋಕದಲ್ಲಿ ಇವೆಲ್ಲವೂ ಪರಿಚ್ಛಿನ್ನವಾದುವುಗಳಾದುದರಿಂದ ಲಕ್ಷ್ಯಭೇದವು ಆದರೂ ಆಗಬಹುದು. ಒಂದುವೇಳೆ ಆಗದೆಯೂ ಇರಬಹುದು. ಇಲ್ಲಿ ಮಾತ್ರ ಎಲ್ಲವೂ ವ್ಯಾಪ್ಯಗಳಾದುದರಿಂದ ಹೊಡೆವರೆ ಲಕ್ಷ್ಯಭೇದನವಾಗಿಯೇ ಆಗುತ್ತದೆ. ಆದುದರಿಂದ ಲೋಕದ ಧನುರ್ವ್ಯಾಪಾರಕ್ಕಿಂತಲೂ ಇದು ವಿಲಕ್ಷಣವಾದುದು. ॥೩೭॥

ಆತ್ಮನನ್ನು ಅರಣಿ ಎಂಬ ಅಗ್ನಿಯನ್ನು ಕಡೆಯುವ ಕಾಷ್ಠ ವಿಶೇಷವನ್ನಾಗಿ ಮಾಡಿ, ಓಂಕಾರವನ್ನು ಅದರಮೇಲಿರಿಸತಕ್ಕ ಅರಣಿಯನ್ನಾಗಿಮಾಡಿಕೊಂಡು ಧ್ಯಾನಾ

ದ್ಯೌರಂತರಿಕ್ಷಂ ಭೂಮಿಶ್ಚ ಮನಃ ಪ್ರಾಣಃ ಸುರೋತ್ತಮಾಃ ।
ಯಸ್ಮಿನ್ನೋತಂ ತಮೇವೈಕಂ ವಿದ್ಯಾತ್ಪ್ರಾಜ್ಞಃ ಸಮಾಹಿತಃ ॥೩೯॥

ಬ್ರಹ್ಮೈಕ ವಿಷಯಾಂ ವಾಚಂ ವದೇತ್ಸತತಮಾಸ್ತಿಕಾಃ ।
ಅನ್ಯಾ ವಾಚ ಸ್ತ್ಯಜೇದೇಷ ಸೇತುರೇವಾ ಮೃತಸ್ಯ ಚ ॥೪೦॥

ಯಃ ಸರ್ವಜ್ಞಃ ಸರ್ವವಿದ್ಯೋ ಯಸ್ಯೈಷ ಮಹಿಮಾ ಭುವಿ ।
ದಿವ್ಯೇ ಬ್ರಹ್ಮಪುರೇ ವ್ಯೋಮ್ನಿ ಶಿವಃ ಸಾಕ್ಷಾತ್ಪ್ರತಿಷ್ಠಿತಃ ॥೪೧॥

ಭ್ಯಾಸವೆಂಬ ಕಡೆಯುವಿಕೆಯಿಂದ ಪರಮಾತ್ಮನನ್ನು ಗೂಢವಾಗಿ ಸಾಕ್ಷಾತ್ಕರಿಸಿಕೊಳ್ಳ ಬೇಕು. ಎಂದರೆ ಕೆಳಗೆ ಇರತಕ್ಕ ಅರಣಿಯನ್ನು ಮೇಲಿನ ಅರಣಿಯಿಂದ ಕಡೆದು ಅಲ್ಲಿ ಇರತಕ್ಕ ಅಗ್ನಿಯನ್ನು ಹೇಗೆ ನೋಡಬಹುದೋ ಹಾಗೆ ಓಂಕಾರದಿಂದ ಜಾಗ್ರದಾದ್ಯವಸ್ಥೆಗಳಿಂದ ಉಪಲಕ್ಷಿತನಾದ ಚಿನ್ಮಾತ್ರನಾದ ಆತ್ಮನನ್ನು ಬ್ರಹ್ಮರೂಪ ದಿಂದ ಧ್ಯಾನಮಾಡುತ್ತಾ ಆ ಧ್ಯಾನಾಭ್ಯಾಸದ ಪರಿಪಾಕಾವಸ್ಥೆಯಿಂದ ಬ್ರಹ್ಮಸ್ವರೂಪ ವನ್ನು ಸಾಕ್ಷಾತ್ಕರಿಸಿಕೊಳ್ಳುತ್ತಾನೆ. ॥೩೮॥

ಓ ದೇವೋತ್ತಮರೇ, ಪರಮಾತ್ಮಸ್ವರೂಪದಲ್ಲಿ ಈ ದ್ಯುಲೋಕ, ಅಂತರಿಕ್ಷ ಲೋಕ, ಭೂಮಿ, ಮನಸ್ಸು, ಪ್ರಾಣ, ಇವೆಲ್ಲವೂ, ಒಟ್ಟಿಯಲ್ಲಿ ನೂಲು ಹಾಸು ಹೊಕ್ಕಿ ನಂತೆ, ಇವೆ. ಆ ಪ್ರಪಂಚವನ್ನು ಬಿಟ್ಟು ಕೇವಲ ಆತ್ಮನನ್ನು ಚಿತ್ತಸಮಾಧಾನವುಳ್ಳವ ನಾಗಿ ಜ್ಞಾನಿಯು ತಿಳಿಯಬೇಕು. ॥೩೯॥

ಓ ಆಸ್ತಿಕರೇ, ಯಾವಾಗಲೂ ಪರಮಾತ್ಮನಿಗೆ ಮಾತ್ರ ಸಂಬಂಧಪಟ್ಟ ಮಾತುಗಳನ್ನೇ ಆಡುತ್ತಿರಬೇಕು. ಅನಾತ್ಮವಿಷಯವಾದ ಮಾತುಗಳನ್ನಾಡಬಾರದು. ಏಕೆಂದರೆ ಸೇತುವೆಯು ನೀರನ್ನು ದಾಟಿ ಆಚೆಯ ದಡವನ್ನು ಸೇರಲು ಸಾಧನವಾಗಿರು ವಂತೆ, ಆತ್ಮರೂಪವಾದ ಸೇತುವು ಸಂಸಾರವೆಂಬ ಸಮುದ್ರವನ್ನು ದಾಟಿಸಿ, ಅಮೃತತ್ವ ವನ್ನು ಪಡೆಯಲು ಸಾಧನವಾಗಿರುವುದು. ಆದುದರಿಂದ ಅನಾತ್ಮವಿಷಯಗಳಾದ ಮಾತುಗಳನ್ನು ಬಿಟ್ಟು ಯಾವಾಗಲೂ ಆತ್ಮನಿಗೆ ಸಂಬಂಧಪಟ್ಟ ಮಾತುಗಳನ್ನೇ ಆಡುತ್ತಿರಬೇಕು. ॥೪೦॥

ಪರಮಾತ್ಮನು ಸಾಮಾನ್ಯವಾಗಿ ಎಲ್ಲವನ್ನೂ ತಿಳಿದವನೂ, ವಿಶೇಷವಾಗಿಯೂ ಆಯಾಯಾ ಪದಾರ್ಥಗಳನ್ನು ತಿಳಿದವನಾಗಿಯೂ, ಇರುತ್ತಾನೆ. ಈ ಪರಮಾತ್ಮನ ವಿಭೂತಿಯು ಭೂಲೋಕದಲ್ಲಿ ತೋರುತ್ತದೆ. ಇಂತಹ ಪರಮಾತ್ಮನು ಸಮಸ್ತ ಜ್ಞಾನ

ಮನೋಮಯಃ ಪ್ರಾಣಶರೀರನೇತಾ ।
ಪ್ರತಿಷ್ಠಿತಃ ಸರ್ವಹೃದಂಬುಜಾಂತಃ ॥
ತದ್ವಿಜ್ಞಾನೇನ ಪರಿಮುಚ್ಯಂತಿ ಧೀರಾ ।
ಯದ್ಭಾತಿ ಚಾನಂದವಪುಃ ಸ್ವಭಾವಾತ್ ॥೪೨॥

ಭಿದ್ಯತೇ ಹೃದಯಗ್ರಂಥಿಶ್ಛಿದ್ಯಂತೇ ಸರ್ವಸಂಶಯಾಃ ।
ಕ್ಷೀಯಂತೇ ಚಾಸ್ಯ ಕರ್ಮಾಣಿ ತಸ್ಮಿನ್ ದೃಷ್ಟೇ ಪರಾವರೇ ॥೪೩॥

ಗಳಿಗೆ ಉತ್ಪತ್ತಿಸ್ಥಾನವಾದುದರಿಂದ ಪ್ರಕಾಶಮಾನವಾದ ಬ್ರಹ್ಮನ ಪುರವಾದ ಹೃದಯದ ಮಧ್ಯದಲ್ಲಿರತಕ್ಕ ಆಕಾಶದಲ್ಲಿ ಸಾಕ್ಷಾತ್ಕಾರಕ್ಕೆ ವಿಷಯನಾಗಿರುತ್ತಾನೆ. ಎಂದರೆ ಸರ್ವವ್ಯಾಪಕನಾದ ಪರಮಾತ್ಮನಿಗೆ ಎಲ್ಲೆಡೆಯಲ್ಲಿಯೂ ಸ್ಥಿತಿಯು ಇದೆ. ಆದರೂ ಹೃದಯಾಕಾಶದಲ್ಲಿ ಪ್ರತಿಯೊಬ್ಬರಿಗೂ ಸಾಕ್ಷಾತ್ಕಾರವಾಗುವುದರಿಂದ ಅಲ್ಲಿ ಇದ್ದಾನೆ ಎಂದು ಹೇಳಿರುವುದು ಎಂದು ತಾತ್ಪರ್ಯವು. ||೪೧||

ಪರಶಿವನು ಸಮಸ್ತ ಪ್ರಾಣಿಗಳ ಹೃದಯಕಮಲಮಧ್ಯದಲ್ಲಿರತಕ್ಕವನಾಗಿ ಮನೋವೃತ್ತಿಗಳಿಂದ ಆ ಹೃದಯದಲ್ಲಿ ಉಪಲಭ್ಯಮಾನನಾಗಿರುವುದರಿಂದ ಮನೋಮಯನಾಗಿರುತ್ತಾನೆ. ಪ್ರಾಣರೂಪವಾದ ಸೂಕ್ಷ್ಮಶರೀರವನ್ನು ಒಂದು ಸ್ಥೂಲಶರೀರದಿಂದ ಮತ್ತೊಂದು ಸ್ಥೂಲಶರೀರಕ್ಕೆ ಒಯ್ಯುವವನಾದಕಾರಣ ಶಿವನು ಪ್ರಾಣಶರೀರನೇತನು. ಇಂತಹ ಅಕ್ಷರವಾದ ಬ್ರಹ್ಮಸ್ವರೂಪವು ಅವಸ್ಥಾತ್ರಯಪರೀಕ್ಷೆಯಿಂದ ಎಲ್ಲರೂ ಮನಗಾಣಬಹುದಾಗಿರುವ ನಿರತಿಶಯಾನಂದಸ್ವರೂಪವುಳ್ಳದ್ದಾಗಿಯೂ, ತನ್ನ ಪ್ರಕಾಶದಿಂದಲೇ ಪ್ರಕಾಶಿಸುತ್ತದೆ. ಈ ಪರಮಾತ್ಮಜ್ಞಾನದಿಂದ ಇಂದ್ರಿಯನಿಗ್ರಹವುಳ್ಳ ಧೀರರು ಸಂಸಾರದಿಂದ ಬಿಡಲ್ಪಟ್ಟು ಮುಕ್ತರಾಗುತ್ತಾರೆ. ||೪೨||

ಬ್ರಹ್ಮಜ್ಞಾನಕ್ಕೆ ಫಲವನ್ನು ಹೇಳುತ್ತಾನೆ:—ಕಾರಣವಾದುದರಿಂದ ಪರವಾಗಿಯೂ, ಕಾರ್ಯರೂಪವಾಗಿರುವುದರಿಂದ ಅಪರವಾಗಿಯೂ ಇರುವ, ಅದ್ವಿತೀಯವಾದ ಬ್ರಹ್ಮಾತ್ಮಸಾಕ್ಷಾತ್ಕಾರವಾಗಲು, ಮನಸ್ಸಿನಲ್ಲಿ ಗ್ರಂಥಿಯಂತೆ ಬಲವಾಗಿದ್ದ ಅವಿದ್ಯಾವಾಸನಾಸಮೂಹವು ನಷ್ಟವಾಗುತ್ತದೆ. ಜ್ಞಾನಾಜ್ಞಾನಗಳಿಗೆ ಪರಸ್ಪರ ವಿರೋಧವಿರೋಣದರಿಂದ ಜ್ಞಾನೋದಯವಾಗಲು ಅವಿದ್ಯೆಯು ಶಕ್ತಿಸಹಿತವಾಗಿ ನಷ್ಟವಾಗುತ್ತದೆ. ಈರೀತಿಯಾಗಿ ಸರ್ವಾನರ್ಥಗಳಿಗೆ ಕಾರಣವಾದ ಅಜ್ಞಾನವು ಹೋಗಲು

ಹಿರಣ್ಮಯೇ ಪರೇ ಕೋಶೇ ವಿರಜಂ ಬ್ರಹ್ಮ ನಿಷ್ಕಲಂ ।
ತಚ್ಛುಭ್ರಂ ಜ್ಯೋತಿಷಾಂ ಜ್ಯೋತಿಸ್ತದ್ಯದಾತ್ಮವಿದೋ ವಿದುಃ ॥೪೪॥

ನ ತತ್ರ ಸೂರ್ಯಶ್ಚಂದ್ರಶ್ಚ ತಾರಕಾ ವಿದ್ಯುತೋಽನಲಃ ।
ವಿಭಾಂತಿ ಶಂಕರೇ ಸಾಕ್ಷಾತ್ ಸ್ವಯಂಭಾನೇ ಚಿದಾತ್ಮಕೇ ॥೪೫॥

ತಮೇವ ಸಕಲಂ ಭಾಂತ ಮನುಭಾತಿ ಸ್ವಭಾವತಃ ।
ತಸ್ಯ ಭಾಸಾ ಸರ್ವಮಿದಂ ವಿಭಾತಿ ತತ ಏವ ಹಿ ॥೪೬॥

ಸಮಸ್ತ ಸಂಶಯುಗಳೂ ನಷ್ಟವಾಗುತ್ತವೆ. ಈರೀತಿಯಾಗಿ ಅವಿದ್ಯಾನಿವೃತ್ತಿಯುಳ್ಳ ಮತ್ತು ಸಂಶಯವಿಲ್ಲದ ವಿದ್ವಾಂಸನು ಈ ಜನ್ಮದಲ್ಲಿ ಮಾಡಿದ ಅಥವಾ ಜನ್ಮಾಂತರ ದಲ್ಲಿ ಸಂಚಿತವಾದ ಮತ್ತು ಮುಂದಿನ ಜನ್ಮದಲ್ಲಿ ಫಲವನ್ನು ಕೊಡಲು ಯೋಗ್ಯವಾಗಿ ರುವ ಸಮಸ್ತ ಪುಣ್ಯಪಾಪಗಳು (ಪ್ರಾರಬ್ಧವನ್ನು ಬಿಟ್ಟು) ನಷ್ಟವಾಗುತ್ತವೆ. ॥೪೩॥

ವಿಜ್ಞಾನ ಪ್ರಕಾಶಸಹಿತವಾಗಿಯೂ, ಜ್ಯೋತಿರ್ಮಯವಾಗಿಯೂ, ಸರ್ವಾಂ ತರವಾದುದರಿಂದ ಪರವಾಗಿಯೂ, ಖಡ್ಗವನ್ನು ಇಡುವ ಕೋಶದಂತೆ ಬ್ರಹ್ಮನ ಉಪಲಬ್ಧಿಸ್ಥಾನವಾಗಿಯೂ, ಇರತಕ್ಕ ಹೃದಯಾಕಾಶದಲ್ಲಿ ಪರಮಾತ್ಮನಿರುತ್ತಾನೆ. ದೇಶ ಕಾಲದ ಪರಿಚ್ಛೇದವಿಲ್ಲದುದರಿಂದ ಶುಭ್ರನಾಗಿಯೂ, ಸರ್ವವನ್ನೂ ಪ್ರಕಾಶಿಸ ತಕ್ಕ ಸೂರ್ಯಾದಿಗಳಿಗೂ ಪ್ರಕಾಶದಾತನಾಗಿಯೂ ಇರುತ್ತಾನೆ. ಇಂತಹ ಆತ್ಮತತ್ತ್ವ ವನ್ನು ಜ್ಞಾನಿಗಳು ತಿಳಿಯುತ್ತಾರೆ. ॥೪೪॥

ಚಿತ್ಸ್ವರೂಪವಾದ ಶಿವನು ಸಾಕ್ಷಾತ್ ಸ್ವಯಂ ಪ್ರಕಾಶನಾಗಿರುತ್ತಿರಲಾಗಿ ಸೂರ್ಯ ಚಂದ್ರರೂ, ನಕ್ಷತ್ರ, ಮಿಂಚುಗಳೂ ಸಹ ಸಚ್ಚಿದಾನಂದ ರೂಪವಾದ ಪರಶಿವ ನನ್ನು ಬೆಳಗಲಾರವು. ಎಂದರೆ ಶಿವನೇ ಅವುಗಳಿಗೆ ಪ್ರಕಾಶದಾತನು. ಆ ಸೂರ್ಯಾ ದಿಗಳು ಪರಮಾತ್ಮನನ್ನು ಪ್ರಕಾಶಗೊಳಿಸಲು ಸಮರ್ಥವಾಗಲಾರವು. ॥೪೫॥

ಚೈತನ್ಯವು ಸ್ವತಃ ಸ್ಫುರಣಶೀಲವಾದುದರಿಂದ ಆ ಚೈತನ್ಯದಲ್ಲಿ ಅಧ್ಯಸ್ತ ವಾದ ಸಮಸ್ತವೂ, ಚೈತನ್ಯ ಸ್ಫುರಣಾಧೀನವಾಗಿ, ಆ ಚೈತನ್ಯವನ್ನು ಅನುಸರಿಸಿ (ಸ್ಫುರಣವಾಗುತ್ತವೆ) ಸ್ಫುರಿಸುತ್ತವೆ. ಚೈತನ್ಯವು ನಿತ್ಯಸ್ಫುರಣಸ್ವಭಾವವುಳ್ಳದ್ದಾ ಗಿರುವುದರಿಂದ ಆಮೇಲೆ ಹುಟ್ಟಿದ ಪದಾರ್ಥಗಳು ಚೈತನ್ಯಾಧೀನ ಪ್ರಕಾಶಗಳೇ ಹೊರತು ಸ್ವತಃ ಪ್ರಕಾಶವುಳ್ಳವಲ್ಲವು. ಚಿತ್ಸ್ವರೂಪನಾದ ಪರಶಿವನ ಪ್ರಕಾಶದಿಂದ ಸಮಸ್ತವೂ ಬೆಳಗುತ್ತದೆ. ॥೪೬॥

ನ ತತ್ರ ಚಂದ್ರಾರ್ಕವಪುಃ ಪ್ರಕಾಶತೇ ।
ನ ವಾಂತಿ ವಾತಾಃ ಸಕಲಾಶ್ಚ ದೇವತಾಃ ॥
ಸ ಏಷ ದೇವಃ ಕೃತಭೂತ ಭಾವನಃ ।
ಸ್ವಯಂ ವಿಶುದ್ಧೋ ವಿರಜಃ ಪ್ರಕಾಶತೇ ॥೪೭॥

ಬ್ರಹ್ಮೈವೇದ ಮಮೃತಂ ಪುರಸ್ತಾತ್ ।
ಬ್ರಹ್ಮಾನಂತಂ ಪರಮಂ ಚೈವ ಪಶ್ಚಾತ್ ॥
ಬ್ರಹ್ಮಾನಂತಂ ಪರಮಂ ದಕ್ಷಿಣೇ ಚ ।
ಬ್ರಹ್ಮಾನಂತಂ ಪರಮಂ ಚೋತ್ತರೇ ಚ ॥೪೮॥

ದ್ವಾ ಸುಪರ್ಣೌ ಶರೀರೇಽಸ್ಮಿನ್ ಜೀವೇಶಾಖ್ಯೌ ಸಹ ಸ್ಥಿತೌ ।
ತಯೋರ್ಜೀವಃ ಫಲಂ ಭುಙ್ಕ್ತೇ ಕರ್ಮಣೋ ನ ಮಹೇಶ್ವರಃ॥೪೯॥

ಪರಮೇಶ್ವರನನ್ನು ಸೂರ್ಯಚಂದ್ರರು ಪ್ರಕಾಶಿಸಲಾರರು. ವಾಯುವೂ ಬೀಸಲಾರದು. ದೇವತೆಗಳೂ ಸಹ ಶಿವನನ್ನು ಏನೂ ಮಾಡಲಾರರು. ದೇವನಾದ ಪರಮಾತ್ಮನು ಭೂತಗಳಿಗೆ ಕಾರಣವಾಗಿಯೂ ಅವಿದ್ಯಾಮಲವಿಲ್ಲದವನಾಗಿಯೂ, ರಜೋಗುಣಸಂಪರ್ಕವಿಲ್ಲದೇ ಶುದ್ಧನಾಗಿಯೂ, ಸ್ವತಃ ಪ್ರಕಾಶವುಳ್ಳವನಾಗಿಯೂ, ಇರುತ್ತಾನೆ. ॥೪೭॥

ಸ್ವಯಂಪ್ರಕಾಶಚಿದ್ರೂಪವಾದ ಬ್ರಹ್ಮಸ್ವರೂಪವು ಸರ್ವಜಗತ್ತಿಗೂ ಕಾರಣವಾದುದರಿಂದ ಆ ಬ್ರಹ್ಮನ ಸಾರ್ವಾತ್ಮ್ಯವನ್ನು ಹೇಳಿ ಅಮೃತವಾದ ಬ್ರಹ್ಮಸ್ವರೂಪವು ಪೂರ್ವದಲ್ಲಿರುವುದು. ಉತ್ಕೃಷ್ಟವಾಗಿಯೂ, ಅನಂತ (ವ್ಯಾಪಕ) ವಾಗಿಯೂ, ಇರತಕ್ಕ ಬ್ರಹ್ಮಸ್ವರೂಪವು ಪಶ್ಚಿಮದಲ್ಲಿಯೂ, ದಕ್ಷಿಣದಿಕ್ಕಿನಲ್ಲಿಯೂ, ಉತ್ತರದಿಕ್ಕಿನಲ್ಲಿಯೂ, ಇರುವುದು. ಎಂದರೆ ಬ್ರಹ್ಮಸ್ವರೂಪವು ಸಮಸ್ತಕ್ಕೂ ಕಾರಣವಾದುದರಿಂದ ಸಮಸ್ತ ಕಾರ್ಯವನ್ನೂ ವ್ಯಾಪಿಸಿಕೊಂಡಿದೆ ಎಂದು ತಾತ್ಪರ್ಯ. ॥೪೮॥

ಬಿಸಿಲು ಮತ್ತು ಛಾಯೆಗಳಂತೆ ಸಂಸಾರಿತ್ವಾಸಂಸಾರಿತ್ವವಿಶಿಷ್ಟರಾದ ಜೀವೇಶ್ವರರಿಗೆ ಪರಸ್ಪರ ವಿರೋಧವಿರೋಣದರಿಂದ ಅವರಿಗೆ ಐಕ್ಯವು ಹೇಗುಂಟಾಗುತ್ತದೆ? ಎಂದರೆ, ಅದಕ್ಕೆ ಸಮಾಧಾನ ಹೇಳುತ್ತಾನೆ.—ಕರ್ಮದಿಂದ ಸಂಪಾದಿಸಲ್ಪಟ್ಟ ಈ ಶರೀರದಲ್ಲಿ ಸುವರ್ಣದಂತಿರತಕ್ಕ ಜೀವೇಶ್ವರರು ಒಟ್ಟಿಗಿರುತ್ತಾರೆ. ಅವರಲ್ಲಿ ಜೀವನು ಅವಿದ್ಯಾಂತಃಕರಣಾದ್ಯುಪಾಧಿತಾದಾತ್ಮ್ಯಪನ್ನನಾದುದರಿಂದ ಆ ಉಪಾಧಿಯಿಂದ

ಕೇವಲಂ ಸಾಕ್ಷಿರೂಪೇಣ ವಿನಾ ಭೋಗಂ ಮಹೇಶ್ವರಃ ।
ಪ್ರಕಾಶತೇ ಸ್ವಯಂಭೇದಃ ಕಲ್ಪಿತೋ ಮಾಯಯಾ ತಯೋಃ ॥೫೦॥

ಯಥಾಽಕಾಶೋ ಘಟಾಕಾಶ ಮಹಾಕಾಶ ಪ್ರಭೇದತಃ ।
ಕಲ್ಪಿತಃ ಪರಚಿಜ್ಜೀವಃ ಶಿವರೂಪೇಣ ಕಲ್ಪಿತಃ ॥೫೧॥

ತತ್ವ ತಶ್ಚಿಚ್ಛಿವಃ ಸಾಕ್ಷಾಚ್ಚಿಜ್ಜೀವಶ್ಚ ತತಃ ಸದಾ ।
ಚಿಚ್ಚಿದಾಕಾರತೋಽಭಿನ್ನಾ ನ ಭಿನ್ನಾ ಚಿತ್ತ್ವಹಾನಿತಃ ॥೫೨॥

ಚಿತಶ್ಚಿನ್ನ ಚಿದಾಕಾರಾದ್ಭಿದ್ಯತೇ ಜಡರೂಪತಃ ।
ಭಿದ್ಯತೇ ಚೇಜ್ಜಡೇ ಭೇದಶ್ಚಿದೇಕಾ ಸರ್ವದಾ ಖಲು ॥೫೩॥

ಉಂಟಾದ ಪುಣ್ಯಪಾಪಗಳ ಫಲವಾದ ಸುಖದುಃಖಗಳನ್ನು ಅನುಭವಿಸುತ್ತಾನೆ. ಈಶ್ವರನು ಉಪಾಧಿಸಂಪರ್ಕವಿಲ್ಲದವನಾದುದರಿಂದ ಕರ್ತೃತ್ವವಿಲ್ಲದುದರಿಂದ ಆ ಪುಣ್ಯಪಾಪ ಫಲಗಳಾದ ಸುಖದುಃಖಗಳನ್ನು ಅನುಭವಿಸುವುದಿಲ್ಲ. ಮಹೇಶ್ವರನು ಭೋಗ ಪಡದೇ ಸಾಕ್ಷಿಚಿದ್ರೂಪದಿಂದ ಸ್ವಯಂಪ್ರಕಾಶಮಾನನಾಗಿರುತ್ತಾನೆ. ಏವಂಚ ಜೀವೇಶ್ವರರಿಗೆ ಭೋಕ್ತೃತ್ವ ಭೋಕ್ತೃತ್ವಾಭಾವರೂಪಗಳೆಂಬ ಧರ್ಮಭೇದದಿಂದ ಭೇದವು ಅಜ್ಞಾನದಿಂದ ತೋರುವುದು. ಆ ಭೇದವು ಅಜ್ಞಾನದಿಂದ ಕಲ್ಪಿತವಾದುದರಿಂದ ಅಜ್ಞಾನವು ನಿವೃತ್ತವಾಗಲು ಅವರಿಗಿರತಕ್ಕ ಸ್ವಾಭಾವಿಕವಾದ ಅಭೇದವು ಸ್ಫುರಿಸುತ್ತದೆ. ||೪೯-೫೦||

ಆಕಾಶಸ್ವರೂಪವು ಒಂದೇ ಆದಾಗ್ಯೂ ಘಟ, ಮಠ ಮುಂತಾದ ಉಪಾಧಿ ಭೇದದಿಂದ ಘಟಾಕಾಶ ಮಠಾಕಾಶವೆಂದು ಅವಕ್ಕೆ ವ್ಯವಹಾರವಿದೆ. ಅದರಂತೆ ಚಿದ್ರೂಪವಾದ ಒಂದೇ ಬ್ರಹ್ಮಸ್ವರೂಪವು ಉಪಾಧಿಗಳಲ್ಲಿರತಕ್ಕ ಮಾಲಿನ್ಯ ವಿಶುದ್ಧಿಗಳಿಂದ ಜೀವೇಶ್ವರರೂಪದಿಂದ ಕಲ್ಪಿತವಾಗಿದೆ. ಪರಮಾರ್ಥದಲ್ಲಿ ಉಪಾಧಿಯಿಂದುಂಟಾಗಿದ್ದ ಭೇದವು ಹೋಗಲಾಗಿ, ಜೀವೇಶ್ವರರ ಅನಾದಿಯಾದ ಚಿದ್ರೂಪವು ಸ್ಫುರಿಸುತ್ತದೆ. ಏವಂಚ ಜೀವೇಶ್ವರರ ಭೇದವು ಅಜ್ಞಾನದಿಂದ ಕಲ್ಪಿತವಾದುದೇ ವಿನಾ ವಾಸ್ತವವಲ್ಲವು. ||೫೧||

ವಸ್ತುತಃ ವಿಚಾರಿಸಿದರೆ ಜೀವೇಶ್ವರರಿಬ್ಬರೂ ಸಾಕ್ಷಾತ್ ಚಿತ್ಸ್ವರೂಪರೇ ಆಗಿರುತ್ತಾರೆ. ಈಶ್ವರನ ಚಿತ್ತು ಸರ್ವವಿಷಯಕವಾದುದು. ಜೀವನ ಚಿತ್ತು ಪರಿಮಿತ

ತರ್ಕತಶ್ಚ ಪ್ರಮಾಣಾಚ್ಚ ಚಿದೇಕತ್ವೇ ವ್ಯವಸ್ಥಿತೇ ।
ಅಪಿ ಪಾಪವತಾಂ ಪುಂಸಾಂ ವಿಪರೀತಾ ಮತಿರ್ಭವೇತ್ ॥೫೪॥

ಶ್ರೌತ ಸ್ಮಾರ್ತ ಸಮಾಚಾರೈರ್ವಿಶುದ್ಧಸ್ಯ ಮಹಾತ್ಮನಃ ।
ಪ್ರಸಾದಾದೇವ ರುದ್ರಸ್ಯ ಚಿದೇಕತ್ವೇ ಮತಿರ್ಭವೇತ್ ॥೫೫॥

ಚಿದೇಕತ್ವ ಪರಿಜ್ಞಾನಾನ್ನಶೋಚತಿ ನ ಮುಹ್ಯತಿ ।
ಅದ್ವೈತಂ ಪರಮಾನಂದಂ ಶಿವಂ ಯಾತಿ ತು ಕೇವಲಂ ॥೫೬॥

ವಾದುದು. ಇಂತಹ ಚಿತ್ತುಗಳಿಗೆ ಅಭೇದ ಹೇಗೆಂದರೆ ಅದಕ್ಕೆ ಉತ್ತರವನ್ನು ಹೇಳುತ್ತಾನೆ. ಪರಿಮಿತತ್ವ, ಸರ್ವವಿಷಯತ್ವಗಳೆಂಬ ಚಿತ್ತಿನಲ್ಲಿರತಕ್ಕ ಧರ್ಮಗಳು ಉಪಾಧಿಯಲ್ಲಿರತಕ್ಕ ಮಾಲಿನ್ಯ ನೈರ್ಮಲ್ಯಗಳಿಂದ ಕಲ್ಪಿತವಾದವುಗಳೇ ಹೊರತು ವಾಸ್ತವಗಳಲ್ಲ. ಆದುದರಿಂದ ಚಿದಾಕಾರದಿಂದ ಜೀವೇಶ್ವರರಲ್ಲಿರತಕ್ಕ ಚಿತ್ತು ಒಂದೇ ಆಗಿದೆ. ಹೊರತು ಬೇರೆಯಲ್ಲ. ಚಿತ್ತು ಬೇರೆ ಎಂದು ಹೇಳುವ ವಾದಿಯನ್ನು ಕುರಿತು ಹೀಗೆ ಪ್ರಶ್ನೆ ಮಾಡಬೇಕು.—ಆ ಚಿತ್ತು ಚಿದಾಕಾರದಿಂದ ಭೇದವುಳ್ಳದ್ದೋ? ಅಥವಾ ಜಡಾಕಾರದಿಂದ ಭೇದವುಳ್ಳದ್ದೋ? ಇವುಗಳಲ್ಲಿ ಮೊದಲನೆಯ ವಿಕಲ್ಪವು ಸರಿಯಲ್ಲ. ಏಕೆಂದರೆ, ಆ ಚಿತ್ತು ಚಿದಾಕಾರದಿಂದ ಭಿನ್ನವಾದರೆ ಅಲ್ಲಿರತಕ್ಕ ಚಿತ್ತ್ವವು ಹೋಗಿ ಘಟಾದಿಗಳಂತೆ ಜಡವಾಗಬೇಕಾಗುತ್ತದೆ. ಆದುದರಿಂದ ಚಿತ್ತಿಗೆ ಚಿದಾಕಾರದಿಂದ ಭೇದವಿಲ್ಲವು. ದ್ವಿತೀಯ ವಿಕಲ್ಪವು ಸರಿಯಲ್ಲ. ಏಕೆಂದರೆ ಆ ಭೇದವು ಜಡಕ್ಕೆ ಬರಬಹುದೇ ಹೊರತು ಚಿತ್ತಿಗೆ ಬರಲಾರದು. ಅದು ಯಾವಾಗಲೂ ಏಕರೂಪವಾಗಿರುವುದು. ||೫೨-೫೩||

ಹಿಂದೆ ಹೇಳಿದ ಯುಕ್ತಿಗಳಿಂದಲೂ, “ ಚಿದ್ಧೀದಂ ಸರ್ವಂ ಕಾಶತೇ ಪ್ರಕಾಶತೇಚ ” ಎಂಬ ನೃಸಿಂಹೋಪನಿಷತ್ತಿನ ಶ್ರುತಿರೂಪಪ್ರಮಾಣದಿಂದಲೂ ಸಹ ಚಿತ್ಸ್ವರೂಪವು ಏಕರೂಪವಾಗಿರುತ್ತದೆ. ಈ ರೀತಿಯಾದ ಚಿತ್ತಿನಲ್ಲಿ ಪಾಪಿಷ್ಠರಾದ ಜನರಿಗೆ ವಿರುದ್ಧವಾದ ಬುದ್ಧಿಯು ಹುಟ್ಟುತ್ತದೆ. ಶ್ರುತಿಸ್ಮೃತ್ಯಾಚಾರ ವಿಷಯಗಳಿಂದ ವಿಶುದ್ಧವಾದ ಅಂತಃಕರಣವುಳ್ಳ ಮನುಷ್ಯನಿಗೆ ಮಹಾದೇವನ ಅನುಗ್ರಹದಿಂದ ಚಿತ್ತು ಏಕರೂಪವಾದುದೆಂದು ಬುದ್ಧಿಯು ಹುಟ್ಟುತ್ತದೆ. ||೫೪-೫೫||

ಒಂದೇ ಶರೀರದಲ್ಲಿ ಭೋಕ್ತೃತ್ವರೂಪದಿಂದಿರತಕ್ಕ ಜೀವೇಶ್ವರರ ಉಪಾಧಿಕೃತವಾದ ಭೇದವನ್ನು ಬಿಟ್ಟು ಚಿನ್ಮಾತ್ರಸ್ವರೂಪಸಾಕ್ಷಾತ್ಕಾರವನ್ನು ಮಾಡಿಕೊಂ

ಶಿವಸ್ಥಾನೇ ಶರೀರೇಽಸ್ಮಿನ್ ಸ್ಥಿತೋಽಪಿ ಸ್ವಾತ್ಮಮಾಯಯಾ ।
ದುಃಖಾದಿಸಾಗರೇ ಮಗ್ನೋ ಮುಹ್ಯಮಾನಶ್ಚ ಶೋಚತಿ ॥೫೭॥

ಸ್ವಸ್ಮಾದನ್ಯತಯಾ ಭಾತಮೀಶಂ ಸ್ವೇನೈವ ಸೇವಿತಂ ।
ಅಧಿಷ್ಠಾನಂ ಸಮಸ್ತಸ್ಯ ಜಗತಃ ಸತ್ಯಚಿದ್ಘನಂ ॥೫೮॥

ಅಹಮಸ್ಮೀತಿ ನಿಶ್ಚಿತ್ಯ ವೀತಶೋಕೋ ಭವತ್ಯಯಂ ।
ಅಸ್ಯ ಚಿನ್ಮಾತ್ರರೂಪಸ್ಯ ಸ್ವಸ್ಯ ಸರ್ವಸ್ಯ ಸಾಕ್ಷಿಣಃ ॥೫೯॥

ಮಹಿಮಾನಂ ಯದಾ ವೇದ ಪರಮಾದ್ವೈತಲಕ್ಷಣಂ ।
ತದೈವ ವಿದ್ಯಯಾ ಸಾಕ್ಷಾದ್ವೀತಶೋಕೋ ಭವತ್ಯಯಂ ॥೬೦॥

ಡರೆ ಶೋಕಮೋಹಾದಿಗಳಿಗೆ ಕಾರಣವಾದ ಅಜ್ಞಾನವು ಹೋಗುತ್ತದೆ. ಹೀಗೆ ಸಂಸಾರಭಯಹೇತುವಾದ ಶೋಕಮೋಹಾದಿಗಳಿಗೆ ಕಾರಣವಾದ ಅಜ್ಞಾನ ನಿವೃತ್ತಿಯಾಗಲು ನಿರತಿಶಯಾನಂದರೂಪವಾದ ಶಿವನ ಸ್ವರೂಪವನ್ನು ಎಲ್ಲ ಜೀವರೂ ಹೊಂದಬಹುದು. ||೫೬||

ಈ ರೀತಿಯಾಗಿ "ದ್ವಾಸುಪರ್ಣಾ" ಮುಂ,ಉ. ೩.೧.೧. ಎಂಬ ಮಂತ್ರಾರ್ಥವನ್ನು ಸಂಗ್ರಹಿಸಿತಾತ್ಪರ್ಯವನ್ನು ಹೇಳಿದ್ದರಿಂದ ಈ ಮಂತ್ರವು ಜೀವೇಶ್ವರರಿಗೆ ಭೇದವನ್ನು ಹೇಳುತ್ತದೆಯೆಂಬ ವಿಷಯವು ನಿರಾಕೃತವಾಯಿತು. ಈಗ ಜೀವೇಶ್ವರರಿಗೆ ಅಭೇದಬೋಧಕವಾದ "ಸಮಾನೇ ವೃಕ್ಷೇ" ಮುಂ·ಉ. ೩.೧.೨. ಎಂಬ ಮಂತ್ರಾರ್ಥವನ್ನು ಸಂಗ್ರಹಿಸುತ್ತಾನೆ.—ಶಿವನ ಸ್ಥಾನವಾದ ಈ ಶರೀರದಲ್ಲಿ ಅವನು ಇದ್ದಾಗ್ಯೂ ಸಹ ಜೀವನಿಗೆ ಉಪಾಧಿಯಾದ ಮಲಿನಸತ್ವಪ್ರಧಾನವಾದ ಮಾಯೆಯಿಂದ ಅವನು ಆವೃತನಾಗಿರುವಕಾರಣ ಯಾರೂ ಅವನನ್ನು ತಿಳಿಯುವುದಿಲ್ಲ. ಈ ರೀತಿಯಾಗಿ ಆವೃತನಾದುದರಿಂದ ದುಃಖವೆಂಬ ಅಗಾಧವಾದ ಮಹಾಸಾಗರದಲ್ಲಿ ಮುಳುಗಿ ಅನೇಕ ವಿಧವಾಗಿ ಜನರು ಭ್ರಾಂತಿಪಡುತ್ತಲೂ, ದುಃಖಗೊಳ್ಳುತ್ತಲೂ ಇರುತ್ತಾರೆ. ||೫೭||

ಪರಮಾತ್ಮನು ಸಂಸಾರಿಯಾದ ತನಗಿಂತಲೂ (ಜೀವನಿಗಿಂತಲೂ) ವಿಲಕ್ಷಣನಾಗಿ, ಸಮಸ್ತ ಸಂಸಾರಧರ್ಮಗಳಾದ ದುಃಖಾದಿಗಳ ಸಂಪರ್ಕವಿಲ್ಲದವನಾಗಿಯೂ, ಜೀವನಿಂದ ಸೇವಿಸಲ್ಪಟ್ಟವನಾಗಿಯೂ, ಕಲ್ಪಿತವಾದ ಸಮಸ್ತ ಜಗತ್ತಿಗೆ ಆಶ್ರಯನಾಗಿಯೂ, ಸತ್ಯನಾಗಿಯೂ ಇರುತ್ತಾನೆ. ಇಂತಹ ಪರಮಾತ್ಮನನ್ನು ಶ್ರವಣಮನ

ಬ್ರಹ್ಮಯೋನಿಂ ಸದಾ ಪೂರ್ಣಂ ರುಕ್ಮವರ್ಣಂ ಮಹೇಶ್ವರಂ ।
ಅಪಶ್ಯನ್ನೇವ ಪಶ್ಯಂತಂ ಕರ್ತೃತ್ವೇನ ಪ್ರಕಾಶಿತಂ ॥೬೧॥

ಅನೇಕಕೋಟಿಭಿಃ ಕಲ್ಪೈರಾರ್ಜಿತೈಃ ಪುಣ್ಯಕರ್ಮಭಿಃ ।
ತರ್ಕತಶ್ಚ ಪ್ರಮಾಣಾಚ್ಚ ಪ್ರಸಾದಾತ್ಪರಮೇಶ್ವರಾತ್ ॥೬೨॥

ಪಶ್ಯತಿ ಶ್ರದ್ಧಯಾ ಚಾಪಿ ಯದಾ ವಿದ್ವಾನ್ಸುರರ್ಷಭಾಃ ।
ಪುಣ್ಯಪಾಪೇ ವಿಧೂಯಾಯ ಮುಸಕ್ತಃ ಸರ್ವಹೇತುಭಿಃ ॥೬೩॥

ಸರ್ವಾಕಾರತಯಾ ಸಾಮ್ಯಂ ಪರಮಾದ್ವೈತಲಕ್ಷಣಂ ।
ಉಪೈತಿ ನಾತ್ರ ಸಂದೇಹಃ ಕರ್ತವ್ಯಶ್ಚ ಮುಮುಕ್ಷುಭಿಃ ॥೬೪॥

ನಾದಿಸಾಧನಗಳಿಂದ ನಾನು ಪರಮಾತ್ಮನಾಗಿರುತ್ತೇನೆಂದು ಯಾವನು ತಿಳಿಯುತ್ತಾನೆಯೋ ಅವನು ಸಂಸಾರಧರ್ಮಗಳಾದ ಶೋಕಮೋಹಾದಿಗಳಿಂದ ಬಿಡಲ್ಪಡುತ್ತಾನೆ. ಮತ್ತು ಚಿತ್ಸ್ವರೂಪನಾಗಿಯೂ, ಸ್ವಾತ್ಮಕವಾದ ಎಂದರೆ ಬ್ರಹ್ಮವಿವರ್ತವಾದ ಸಕಲಕ್ಕೂ ಸಾಕ್ಷಿಯಾಗಿಯೂ, ಅದ್ವಿತೀಯನಾಗಿಯೂ ಇರತಕ್ಕ ಪರಮಾತ್ಮನನ್ನು ವಿದ್ಯೆಯಿಂದ ಯಾರು ತಿಳಿಯುತ್ತಾರೆಯೋ ಅವರು ಆ ಕ್ಷಣವೇ ಸಂಸಾರಕ್ಕೆ ಹೇತುವಾದ ಅಜ್ಞಾನವಿಲ್ಲದವರಾಗಿ ಶೋಕಮೋಹವಿಲ್ಲದವರಾಗುತ್ತಾರೆ. ಎಂದರೆ ಬ್ರಹ್ಮಾಭಿನ್ನನು ಜೀವನು ಎಂಬ ವಿದ್ಯೆಯಿಂದ ಸಂಸಾರಬಂಧದಿಂದ ನಿರ್ಮುಕ್ತರಾಗುತ್ತಾರೆಂದರ್ಥವು. ॥೫೮-೫೯-೬೦॥

ಮುಂದಿನ ಜನ್ಮವನ್ನು ಕೊಡುವ ಕರ್ಮಗಳು ಇರಲಾಗಿ ಜೀವನಿಗೆ ಪರವಿದ್ಯೆಯಿಂದ ಹೇಗೆ ಮುಕ್ತಿ ಬರಬಹುದೆಂದರೆ ಅದಕ್ಕೆ ಉತ್ತರ ಹೇಳುತ್ತಾನೆ.— ಪರಮಾತ್ಮನು ಅಪರಬ್ರಹ್ಮನೆಂಬ ಹಿರಣ್ಯಗರ್ಭನಿಗೆ ಕಾರಣನಾಗಿಯೂ ಪರಿಪೂರ್ಣನಾಗಿಯೂ ಹಿರಣ್ಯವರ್ಣನಾಗಿಯೂ ಕರ್ಮಕರ್ತೃಭಾವವನ್ನು ನೋಡದೇ ಸ್ವರೂಪಪ್ರಕಾಶದಿಂದಲೇ ಪ್ರಕಾಶಿಸುವುದರಿಂದ ದರ್ಶನಕ್ರಿಯಾಕರ್ತೃತ್ವದಿಂದ ಪ್ರಕಾಶನಾಗಿಯೂ ಇರುತ್ತಾನೆ. ಇಂತಹ ಪರಮಾತ್ಮನನ್ನು ಅನೇಕ ಕೋಟಿ ವರ್ಷಗಳಿಂದ ಸಂಪಾದಿಸಲ್ಪಟ್ಟ ಪುಣ್ಯಗಳ ರಾಶಿಗಳಿಂದಲೂ, ಯುಕ್ತಿ, ಶ್ರುತ್ಯಾದಿ ಪ್ರಮಾಣಗಳಿಂದಲೂ, ಈಶ್ವರಾನುಗ್ರಹದಿಂದಲೂ, ಶ್ರದ್ಧೆಯಿಂದಲೂ ಸಹ ಯಾವನು ತಿಳಿಯುತ್ತಾನೆಯೋ ಅಂತಹ ವಿದ್ವಾಂಸನು ಮುಂದಿನ ಜನ್ಮಗಳಿಗೆ ಕಾರಣವಾದ ಪುಣ್ಯಪಾಪ

ಚಿನ್ಮಾತ್ರಂ ಹಿ ಸದಾರೂಪ ಮುಭಯೋಃ ಶಿವಜೀವಯೋಃ ।
ತಥಾ ಸತಿ ಕಥಂ ಸಾಮ್ಯಂ ಚಿನ್ಮಾತ್ರೇ ಭೇದವರ್ಜಿತೇ ॥೬೫॥

ಉಪಾಧಿಯುಕ್ತರೂಪೇ ತು ತಯೋಃ ಸಾಮ್ಯಂ ಭವೇದ್ಯದಿ ।
ತದಾಽಪಿ ನೈವ ಸಾಮ್ಯಂ ಸ್ಯಾಜ್ಜೀವಸ್ಯ ಪರಮಾತ್ಮನಃ ॥೬೬॥

ಮಹಾಕಾಶ ಸಮತ್ವಂ ತು ಘಟಾಕಾಶಸ್ಯ ಸರ್ವದಾ ।
ಯಥಾ ನಾಸ್ತಿ ತಥಾ ಸಾಮ್ಯಂ ನ ಜೀವಸ್ಯ ಶಿವೇನ ತು ॥೬೭॥

ಗಳಿಂದ ಮುಕ್ತನಾಗಿ ಪುಣ್ಯಪಾಪಗಳಿಗೆ ಕಾರಣವಾದ ದೇಹೇಂದ್ರಿಯಾದಿಗಳಿಂದ ಬಿಡಲ್ಪಟ್ಟ ಸರ್ವಸಾಮ್ಯವಾದ ಅದ್ವೈತಸ್ವರೂಪವಾದ ಬ್ರಹ್ಮಸ್ವರೂಪವನ್ನು ಪಡೆದವನಾಗುತ್ತಾನೆ. ವಿದ್ವಾಂಸರು ಈ ವಿಷಯದಲ್ಲಿ ಸಂದೇಹಪಡಬಾರದು. ||೬೧-೬೨-೬೩-೬೪||

ಚಿನ್ಮಾತ್ರರೂಪರಾದ ಜೀವೇಶ್ವರರಿಗೆ ಸಾಮ್ಯವೋ? ಅಥವಾ ಸೋಪಾಧಿಕರಾದ ಜೀವೇಶ್ವರರಿಗೆ ಸಾಮ್ಯವೊ? ಎಂದು ವಿಕಲ್ಪಿಸಿ ಮೊದಲನೆಯ ವಿಕಲ್ಪವು ಸರಿಯಲ್ಲವೆಂದು ಹೇಳುತ್ತಾನೆ. ಜೀವೇಶ್ವರರು ಸರ್ವಕಾಲದಲ್ಲಿಯೂ ಚಿತ್ಸ್ವರೂಪರಾಗಿಯೇ ಇರುತ್ತಾರೆ. ಹೀಗಿದ್ದಬಳಿಕ ಭೇದವಿಲ್ಲದ ಚಿತ್ಸ್ವರೂಪದಲ್ಲಿ ಸಾಮ್ಯವು ಹೇಗೆ ಉಂಟಾದೀತು? ಏಕೆಂದರೆ ಭೇದವಿದ್ದರೆ ಸಾಮ್ಯವು ಬರಬಹುದು. ಭೇದವಿಲ್ಲದುದರಿಂದ ಸಾಮ್ಯವೂ ಇಲ್ಲ. ||೬೫||

ಎರಡನೆಯ ವಿಕಲ್ಪವೂ ಸರಿಯಲ್ಲ. ಏಕೆಂದರೆ ಜೀವೇಶ್ವರರಿಗೆ ಉಪಾಧಿವಿಶಿಷ್ಟವಾಗಿಯೂ ಸಹ ಆಸಾಮ್ಯವುಂಟಾಗಲಾರದು. ಏಕೆಂದರೆ ಉಪಾಧಿಯುಕ್ತರಾದ ಜೀವೇಶ್ವರರು ಕಿಂಚಿತ್‌ಜ್ಞ ಸರ್ವಜ್ಞರಾದುದರಿಂದ ಪರಸ್ಪರ ವಿರುದ್ಧವಾದ ಸ್ವಭಾವವುಳ್ಳವರಾಗಿರುತ್ತಾರೆ. ಆದುದರಿಂದ ಸೋಪಾಧಿಕರಾದ ಜೀವೇಶ್ವರರಿಗೆ ಸಾಮ್ಯವು ಬರಲಾರದು. ||೬೬||

ಘಟಾಕಾಶಕ್ಕೆ ಮಹಾಕಾಶದ ಸಾಮ್ಯವು ಯಾವ ಕಾಲದಲ್ಲಿಯೂ ಹೇಗೆ ಸಂಭವಿಸಲಾರದೋ ಹಾಗೆ ಅಲ್ಪಜ್ಞನಾದ ಜೀವನಿಗೆ ಸರ್ವಜ್ಞನಾದ ಶಿವನ ಸಾಮ್ಯವು ಬರಲಾರದು. ||೬೭||

ಅಸ್ತು ವಾ ಸಾಮ್ಯ ಮಿಾಶೇನ ಜೀವಸ್ಯಾಸ್ಯ ತದಾಽಪಿ ತು ।
ಕರ್ಮಣಾ ವಿದ್ಯಯಾ ವಾ ತತ್ಸಾಮ್ಯಂ ಸಿದ್ಧ್ಯತಿ ನಾನ್ಯಥಾ ॥೬೮॥

ಕರ್ಮಣಾ ಚೇದ್ವಿನಾಶಃ ಸ್ಯಾತ್ಕರ್ಮಸಾಧ್ಯಂ ಹಿ ನಶ್ವರಂ ।
ವಿದ್ಯಯೈವ ತು ತತ್ಸಾಮ್ಯಂ ಪುರಸ್ತಾದೇವ ಚಾಸ್ತಿ ಹಿ ॥೬೯॥

ಪುರಸ್ತಾದೇವ ಸಿದ್ಧಸ್ಯ ಬೋಧಕಂ ಖಲು ವೇದನಂ ।
ಅಭೂತಾರ್ಥಸ್ಯ ಚೋತ್ಪತ್ತಿಂ ನ ಕರೋತಿ ಕದಾಚನ ॥೭೦॥

ತತ್ರೈವಂ ಸತಿ ಸಾಮ್ಯಂ ತು ತಯೋಃ ಸರ್ವಾತ್ಮನೈವ ತು ।
ಪುರಸ್ತಾದೇವ ಚಾಸ್ತ್ಯೇವ ತದಾಽಪಿ ಶಿವಜೀವಯೋಃ ॥೭೧॥

ಈರೀತಿಯಾಗಿ ಜೀವೇಶ್ವರರ ಸ್ವರೂಪವನ್ನು ಯೋಚಿಸಿದರೆ ಸಾಮ್ಯವು ಬರಲಾರದೆಂದು ಹೇಳಿಯಾಯಿತು. ಕಾರಣಸ್ವರೂಪವನ್ನು ಪರ್ಯಾಲೋಚಿಸಿದರೂ ಸಹ ಸಾಮ್ಯವು ಬರಲಾರದೆಂದು ಹೇಳುತ್ತಾನೆ.—ಒಂದುವೇಳೆ ಜೀವನಿಗೆ ಈಶ್ವರನ ಸಾಮ್ಯ ಉಂಟಾಗುವುದಾದರೂ ಕರ್ಮದಿಂದಾಗಲೀ ವಿದ್ಯೆಯಿಂದಲಾಗಲೀ ಉಂಟಾಗ ಬೇಕೇ ಹೊರತು ಬೇರೆ ಕಾರಣಗಳಿಂದುಂಟಾಗಲಾರದು. ॥೬೮॥

ಆ ಸಾಮ್ಯವು ಕರ್ಮದಿಂದ ಬಂದರೆ ಅದು ಅನಿತ್ಯವಾಗುತ್ತದೆ. ಲೋಕದಲ್ಲಿ ಕರ್ಮದಿಂದ ಸಾಧ್ಯವಾದುದು ಅನಿತ್ಯವೆಂದು ತಿಳಿದುಬರುವುದರಿಂದ ಜೀವೇಶ್ವರರ ಸಾಮ್ಯವು ಕರ್ಮದಿಂದ ಬಂದರೆ ನಶ್ವರವೇ ಆಗುತ್ತದೆ. ವಿದ್ಯೆಯಿಂದ ಸಾಮ್ಯವು ಬರಬಹುದೆಂದರೆ ಈ ಸಾಮ್ಯವು ಜ್ಞಾನೋತ್ಪತ್ತಿಗಿಂತಲೂ ಪೂರ್ವದಲ್ಲಿಯೇ ಇದ್ದಿತು. ಜ್ಞಾನವು ಇರತಕ್ಕ ವಸ್ತುವನ್ನು ತಿಳಿಸುವುದೇ ಹೊರತು ಅದಕ್ಕೆ ಒಂದು ಪದಾರ್ಥ ವನ್ನು ಉಂಟುಮಾಡುವುದರಲ್ಲಿ ಸಾಮರ್ಥ್ಯವು ಇಲ್ಲವು. ಆದುದರಿಂದ ಜ್ಞಾನದಿಂದ ಸಾಮ್ಯವು ಬರುತ್ತದೆಂಬ ವಿಕಲ್ಪದಲ್ಲಿ ಜ್ಞಾನವು ವ್ಯರ್ಥವಾಗುತ್ತದೆ. ॥೬೯॥

ಜ್ಞಾನವು ಹುಟ್ಟುವುದಕ್ಕೆ ಪೂರ್ವದಲ್ಲಿ ಸಿದ್ಧವಾದ ವಸ್ತುವನ್ನು ಅದು ಜ್ಞಾಪಿಸಬಲ್ಲದೇ ಹೊರತು ಉಂಟಾಗದ ವಸ್ತುವನ್ನು ಉತ್ಪತ್ತಿಮಾಡಲು ಅದಕ್ಕೆ ಯಾವಾಗಲೂ ಸಾಮರ್ಥ್ಯವಿಲ್ಲವು. ಆದ್ದರಿಂದ ಜ್ಞಾನವು ವಸ್ತುಜ್ಞಾಪಕವೇ ಹೊರತು ಕಾರಕವಲ್ಲವು. ॥೭೦॥

ಈರೀತಿಯಾಗಿ ಪೂರ್ವಪಕ್ಷಿಯು ಆಕ್ಷೇಪಿಸಲು ಸಿದ್ಧಾಂತಿಯು ತನಗೆ ಅಭಿಪ್ರೇತವಾದ ಸಾಮ್ಯವನ್ನು ಹೇಳುತ್ತಾನೆ.—ಯಾವ ವಸ್ತುವು ಸರ್ವಪ್ರಕಾರ

ಪುರಸ್ತಾದೇವ ಕೈವಲ್ಯಂ ಲಕ್ಷಣೈಕತ್ವತೋಽಸ್ತಿ ಚ ।
ತಥಾ ಸತಿ ಶಿವೋಽಭಿನ್ನೋಽವಿದ್ಯಯಾ ಭಿನ್ನವತ್ ಸ್ಥಿತಃ ॥೨೨॥

ವಿದ್ಯಯಾ ತದ್ವಿನಾಶೇನ ಸ್ವಸಾಮ್ಯಂ ಯಾತಿ ನಾನ್ಯಥಾ ।
ಅತಃ ಸಾಮ್ಯಂ ತಯೋಃ ಸಾಕ್ಷಾದೈಕ್ಯಮೇವ ನ ಚೇತರತ್ ॥೨೩॥

ಏವಂ ಜೀವಃ ಸ್ವಕಂ ರೂಪಂ ಶಿವಂ ಪಶ್ಯತಿ ಚೇದ್ದೃಢಂ ।
ಸ್ವಾತ್ಮನ್ಯೇವ ರತಿಂ ಕ್ರೀಡಾಮನ್ಯಶ್ಚ ಕುರುತೇ ಸದಾ ॥೨೪॥

ದಿಂದಲೂ ಯಾವ ವಸ್ತುವಿನೊಂದಿಗೆ ಸಮವಾಗಿರುತ್ತದೆಯೋ ಅದೇ ನಿಜವಾದ ಭೇದವಿಲ್ಲದ ಸಾಮ್ಯವು. ಇಲ್ಲಿ ಜೀವೇಶ್ವರರಿಗೆ ಅದೇ ವಿವಕ್ಷಿತವಾದುದೇ ಹೊರತು ಸಾದೃಶ್ಯವಲ್ಲವು. ಈ ಸರ್ವಾತ್ಮನಾಗಿ ಇರತಕ್ಕ ಸಾಮ್ಯವು ಜೀವೇಶ್ವರರಿಗೆ ಜ್ಞಾನ ವುಂಟಾಗುವುದಕ್ಕೆ ಪೂರ್ವದಲ್ಲಿಯೂ ಇದೆ. ಜ್ಞಾನೋತ್ಪತ್ತಿಯ ಪೂರ್ವದಲ್ಲಿಯೇ ಜೀವ ಬ್ರಹ್ಮಾಭೇದವೆಂಬ ಮೋಕ್ಷವೂ ಸಹ ಇದ್ದೇ ಇದೆ. ಹೀಗಿರುವುದರಿಂದ ಸಮಾನ ಸ್ವರೂಪವು ಜೀವೇಶ್ವರರಿಗಿರುವುದರಿಂದ ಅವರಿಗೆ ಏಕತ್ವವು ಸರ್ವದಾ ಸಿದ್ಧವೇ ಆಗಿರುತ್ತದೆ. ಈರೀತಿ ಇದ್ದಾಗ್ಯೂ ಎಂದರೆ ಶಿವನು ಜೀವನಿಗಿಂತ ಬೇರೆಯುವನಲ್ಲ ವಾಗಿದ್ದಾಗ್ಯೂ ಬೇರೆಯಾದವನಂತೆ ಅವಿದ್ಯೆಯಿಂದ ಹಾಗೆ ತೋರುತ್ತಾನೆ. ಎಂದರೆ ಅವಿದ್ಯೆಯು ಸ್ವಯಂ ಮಿಥ್ಯಾಭೂತವಾದುದು. ಇಂತಹ ಮಿಥ್ಯಾಭೂತವಾದ ಅವಿದ್ಯೆಯು ಪರಶಿವನ ಸ್ವರೂಪದಲ್ಲಿ ಪಾರಮಾರ್ಥಿಕವಾದ ಭೇದವನ್ನು ಹೇಗೆ ಉಂಟುಮಾಡೀತು ? ||೨೧-೨೨||

ವಿದ್ಯೆಯಿಂದ ಅಜ್ಞಾನವು ಹೋಗಲು, ಸ್ವತಃಸಿದ್ಧವಾದ ಜೀವೇಶ್ವರರ ಐಕ್ಯ ವೆಂಬ ಸಾಮ್ಯವು ಅಭಿವ್ಯಕ್ತವಾಗುತ್ತದೆ. ಈ ಐಕ್ಯಕ್ಕಿಂತಲೂ ಬೇರೆಯಾದ ಸಾಮ್ಯವು ಇಲ್ಲ. ಆದುದರಿಂದ ಐಕ್ಯವೇ ಸಾಮ್ಯ ಹೊರತು ಬೇರೆಯುಲ್ಲ. ||೨೩||

ಈರೀತಿಯಾಗಿ ಯಾವ ಜೀವನು, ನಿಷ್ಪ್ರಪಂಚನಾದ ಶಿವನೇ ನಾನು, ಎಂದು ಸಂದೇಹವಿಲ್ಲದೇ ಸ್ವಸ್ವರೂಪವನ್ನು ಸಾಕ್ಷಾತ್ಕರಿಸಿಕೊಳ್ಳುವನೋ ಮತ್ತು ಸ್ವಾಭಿನ್ನ ವಾದ ಶಿವಸ್ವರೂಪವನ್ನು ಧ್ಯಾನ ಪೂಜೆಗಳಿಂದ ಸಾಕ್ಷಾತ್ಕರಿಸುವನೋ, ಅಂತಹ ಜೀವನು ಪರಮಾತ್ಮನಿಗಿಂತಲೂ ಬೇರೆ ವಸ್ತುಗಳಿಲ್ಲದುದರಿಂದ ತನ್ನಲ್ಲಿಯೇ ತಾನು ಕ್ರೀಡಿಸುತ್ತಿರುತ್ತಾನೆ. ||೨೪||

ಬಹಿಶ್ಚೇಷ್ಟಾ ಚ ಮಯ್ಯೇವ ಶಿವೇ ಸತ್ಯ ಸುಖಾತ್ಮಕೇ ।
ಇತಿ ಜಾನಾತಿ ಸರ್ವಂ ತು ಸ್ವಾತ್ಮನ್ಯೈವ ಹಿ ಭಾಸತೇ ॥೨೫॥

ಸ್ವಾತ್ಮನ್ಯೈವ ಸ್ವಯಂ ಸರ್ವಂ ಯದಾ ಪಶ್ಯತಿ ನಿರ್ಭಯಃ ।
ತದಾ ಮುಕ್ತೋ ನ ಮುಕ್ತಶ್ಚ ಬದ್ಧಸ್ಯ ಹಿ ವಿಮುಕ್ತತಾ ॥೨೬॥

ಏವಂ ರೂಪಾ ಪರಾ ವಿದ್ಯಾ ಸತ್ಯೇನ ತಪಸಾಽಪಿ ಚ ।
ಬ್ರಹ್ಮಚರ್ಯಾದಿಭಿರ್ಧರ್ಮೈಃ ಲಭ್ಯಾ ವೇದೋಕ್ತವರ್ತ್ಮನಾ ॥೨೭॥

ಶರೀರೇಽಂತಃ ಸ್ವಯಂಜ್ಯೋತಿಃ ಸ್ವರೂಪಂ ಸ್ವಕಮೈಶ್ವರಂ ।
ಕ್ಷೀಣದೋಷಾಃ ಪ್ರಪಶ್ಯಂತಿ ನೇತರೇ ಮಾಯಯಾಽಽವೃತಾಃ ॥೨೮॥

ಅಂತಹ ಜ್ಞಾನಿಯು ಹೊರಗಿನ ಹಸ್ತಪಾದಾದಿ ಚಲನೆಗಳನ್ನೂ ಸಹ ಸತ್ಯ ಸುಖಸ್ವರೂಪನಾದ ಶಿವನೆಂಬ ತನ್ನಲ್ಲಿಯೇ ಇವೆಯೆಂದು ತಿಳಿಯುತ್ತಾನೆ. ಬ್ರಹ್ಮಜ್ಞಾನಿಗೆ ಸಕಲವೂ ತನ್ನ ಸ್ವರೂಪವಾಗಿಯೇ ತೋರುವುದು. ||೨೫||

ಆತ್ಮಭಿನ್ನವಾದ ದ್ವೈತವಿಲ್ಲದುದರಿಂದ ಭಯರಹಿತನಾಗಿ ಯಾವನು ಸಮಸ್ತವನ್ನೂ ಸ್ವರೂಪವನ್ನಾಗಿ ತಿಳಿಯುತ್ತಾನೆಯೋ ಆಗ ಅವನು ಮುಕ್ತನೂ ಮುಕ್ತನಲ್ಲದವನೂ ಆಗುತ್ತಾನೆ. ಬಂಧವಿದ್ದರೆ ಮುಕ್ತಿಯು. ಎಂದರೆ ಬಂಧವೆಂಬುದು ಅವಿದ್ಯಾಮಯವಾಗಿರುವುದು. ಮುಕ್ತಿಯೂ ಕೂಡ ಪರಮಾರ್ಥದೃಷ್ಟಿಯಿಂದ ಮಾಯಾಮಯವಾಗಿರುವುದು. ಆದುದರಿಂದ ಜ್ಞಾನಿಗೆ ಬಂಧಮೋಕ್ಷಗಳೆರಡೂ ಮಾಯಾಮಯವಾಗಿರುತ್ತವೆ. ಎಂದು ತಾತ್ಪರ್ಯ. ||೨೬||

ಪರವಿದ್ಯೆಗೆ ಸಾಧನಗಳನ್ನು ಬೋಧಿಸತಕ್ಕ "ಸತ್ಯೇನ ಲಭ್ಯಸ್ತಪಸಾ" ಮು.ಉ. ೩.೧.೫. ಎಂಬ ಮಂತ್ರಾರ್ಥವನ್ನು ಸಂಗ್ರಹಿಸುತ್ತಾನೆ.—ಇಂತಹ ಪರಮಾತ್ಮನನ್ನು ಬೋಧಿಸತಕ್ಕ ಪರಾ ಎಂಬ ವಿದ್ಯೆಯು ಸುಳ್ಳನ್ನು ಹೇಳದೇ ಇರುವುದರಿಂದಲೂ, ಚಿತ್ತೈಕಾಗ್ರತೆಯಿಂದ ಆತ್ಮದರ್ಶನಕ್ಕೆ ಅನುಕೂಲವಾದ ತಪಸ್ಸಿನಿಂದಲೂ, ಬ್ರಹ್ಮಚರ್ಯ, ಅಹಿಂಸೆ, ಅಸ್ತೇಯ (ಕದಿಯದೇ ಇರುವಿಕೆ) ಇವೇ ಮೊದಲಾದ ಸಾಧನಕಲಾಪಗಳಿಂದ ಉಂಟಾಗುತ್ತದೆ. ಈ ವಿದ್ಯೆಯು ಉಂಟಾಗಬೇಕಾದರೂ ಸಹ ಶ್ರವಣ, ಮನನ, ನಿಧಿಧ್ಯಾಸನ, ಅನಂತರ ಜ್ಞಾನ ಈ ಕ್ರಮವಾಗಿ ಉಂಟಾಗುತ್ತದೆ. ||೨೭||

ತನ್ನ ಶರೀರದೊಳಗಿರತಕ್ಕ ಹೃದಯದಲ್ಲಿ ಸ್ವಯಂಪ್ರಕಾಶಮಾನನಾದ ಪರಮೇಶ್ವರನನ್ನು ಚಿತ್ತಮಾಲಿನ್ಯವನ್ನುಂಟುಮಾಡತಕ್ಕ ಕಾಮಕ್ರೋಧಾದಿಗಳಿಲ್ಲದ ಜ್ಞಾನಿ

ಏವಂ ರೂಪ ಪರಿಜ್ಞಾನಂ ಯಸ್ಯಾಸ್ತಿ ಪರಯೋಗಿನಃ ।
ಕುತ್ರ ಚಿದ್ಗಮನಂ ನಾಸ್ತಿ ತಸ್ಯ ಸಂಪೂರ್ಣರೂಪಿಣಃ ॥೭೯॥

ಆಕಾಶ ಮೇಕಂ ಸಂಪೂರ್ಣಂ ಕುತ್ರಚಿನ್ನೈವ ಗಚ್ಛತಿ ।
ತದ್ವತ್ ಸ್ವಾತ್ಮವಿಭುತ್ವಜ್ಞಃ ಕುತ್ರಚಿನ್ನೈವ ಗಚ್ಛತಿ . ॥೮೦॥

ನ ಚಕ್ಷುಷಾ ಗೃಹ್ಯತೇ ನಾಪಿ ವಾಚಾ ।
ನಾನ್ಯೈರ್ದೇವೈಸ್ತಪಸಾ ಕರ್ಮಣಾ ವಾ ॥
ಜ್ಞಾನ ಪ್ರಸಾದೇನ ವಿಶುದ್ಧಸತ್ತ್ವಃ ।
ಸ ನಿಷ್ಕಲಂ ಪಶ್ಯತಿ ರೂಪಮೈಶಂ ॥೮೧॥

ಗಳು ಸಾಕ್ಷಾತ್ಕರಿಸಿಕೊಳ್ಳುತ್ತಾರೆ. ಮಾಯೆಯಿಂದ ವಶೀಕೃತರಾದ ಇತರ ಮನುಷ್ಯರು ಆ ಪರಮಾತ್ಮನನ್ನು ಸಾಕ್ಷಾತ್ಕರಿಸಿಕೊಳ್ಳಲಾರರು. ॥೭೮॥

ಇಂತಹ ಪರಮಾತ್ಮಸಾಕ್ಷಾತ್ಕಾರವು ಸರ್ವಸಂಪೂರ್ಣವಾದ ಬ್ರಹ್ಮಸ್ವರೂಪ ವನ್ನು ತಿಳಿದಿರತಕ್ಕ ಉತ್ಕೃಷ್ಟವಾದ ಯಾವ ಯೋಗಿಗೆ ಇರುತ್ತದೆಯೋ ಅವನಿಗೆ ಎಲ್ಲಿಯೂ ಗಮನವು ಇರುವುದಿಲ್ಲ. ॥೭೯॥

ಸರ್ವತ್ರ ವ್ಯಾಪಿಸಿದ ಒಂದೇ ಆಕಾಶವು ಹೇಗೆ ಇನ್ನೊಂದು ಕಡೆಗೆ ಹೋಗುವು ದಿಲ್ಲವೋ ಹಾಗೆ ಸರ್ವವ್ಯಾಪಿಯಾದ ಸ್ವಸ್ವರೂಪವನ್ನು ತಿಳಿದ ಮಹಾತ್ಮನೂ ಸಹ ಬೇರೆ ಕಡೆಗೆ ಹೋಗುವುದಿಲ್ಲ. ॥೮೦॥

ಪರಿಪೂರ್ಣಸ್ವಭಾವವಾದ ಶಿವಸ್ವರೂಪ ಪ್ರಾಪ್ತಿಗೆ ಸಾಧನಗಳಾದ ಸತ್ಯಾದಿ ಗಳು ಉಪದಿಷ್ಟವಾದವು. ಇನ್ನು ಮುಂದೆ ಅಸಾಧಾರಣ ಕಾರಣವನ್ನು ಉಪದೇಶಿಸು ತ್ತಾನೆ.—ಪರಮಾತ್ಮನು ರೂಪಾದಿಹೀನನಾದುದರಿಂದ ಚಕ್ಷುರಿಂದ್ರಿಯಕ್ಕೆ ಗೋಚರ ನಲ್ಲವು. ಇದರಂತೆ ಉಳಿದ ಜ್ಞಾನೇಂದ್ರಿಯಗಳಿಗೂ, ಕರ್ಮೇಂದ್ರಿಯಗಳಿಗೂ ಸಹ ಅವನು ವಿಷಯವಾಗಲಾರನು. ಮತ್ತು ಪರಶಿವನಪ್ರಾಪ್ತಿಯು ಕೃಚ್ಛ್ರಚಾಂದ್ರಾಯ ಣಾದಿ ತಪಸ್ಸಿನಿಂದಲಾಗಲೀ ಅಗ್ನಿಹೋತ್ರಾದಿ ಕರ್ಮಗಳಿಂದಲಾಗಲೀ ಆಗಲಾರದು. ಇನ್ನು ಯಾವುದರಿಂದ ಪರಶಿವಸ್ವರೂಪ ಪ್ರಾಪ್ತಿಯೆಂದರೆ--ವಿಶುದ್ಧವಾದ ಅಂತಃ ಕರಣವುಳ್ಳ ಪುರುಷನು ವಿಷಯೇಂದ್ರಿಯ ಸಂಸರ್ಗಜನಿತವಾದ ರಾಗಾದಿಗಳೆಂಬ ಮಲದಿಂದುಂಟಾದ ಕಾಲುಷ್ಯವು ಹೋಗಲಾಗಿ, ಕನ್ನಡಿಯಂತೆ ಸ್ವಚ್ಛವಾದ ಜ್ಞಾನ ದಿಂದ ಸರ್ವೋಪಾಧಿವಿನಿರ್ಮುಕ್ತವಾದ ಪರಮೇಶ್ವರಸ್ವರೂಪವನ್ನು ಸಾಕ್ಷಾತ್ಕಾರ

ಧ್ಯಾನೇನ ಪರಮೇಶಸ್ಯ ಸಾಂಬಮೂರ್ತಿಧರಸ್ಯ ಚ ।
ಸ್ವ ನಿಷ್ಕಲ ಪರಿಜ್ಞಾನಂ ಜಾಯತೇ ನಾನ್ಯಹೇತುನಾ ॥೮೨॥

ಏಷ ಆತ್ಮಾ ಸುಸೂಕ್ಷ್ಮೋಽಪಿ ವೇದಿತವ್ಯೋಽಗ್ರ್ಯಯಾ ಧಿಯಾ ।
ಪಂಚಧಾ ಸನ್ನಿವಿಷ್ಟೋಽಸುರ್ಯಸ್ಮಿನ್ಸರ್ವಾಶ್ರಯೇ ಸುರಾಃ ॥೮೩॥

ಸಂವಿಭಾತಿ ಸ್ವಚಿತ್ತೇನ ಯಂ ಯಂ ಲೋಕಂ ವಿಶುದ್ಧಧೀಃ ।
ಸದಾ ಕಾಮಯತೇ ಯಾಂಶ್ಚ ತಜ್ಜಯತ್ಯಖಿಲಂ ತತಃ ॥೮೪॥

ತಸ್ಮಾದಾತ್ಮವಿದಂ ಸಾಕ್ಷಾದೀಶ್ವರಂ ಭವತಾರಕಂ ।
ಅರ್ಚಯೇದ್ಭೂತಿ ಕಾಮಸ್ತು ಸ್ವಶರೀರೇಣ ಚಾರ್ಥತಃ ॥೮೫॥

ಮಾಡಿಕೊಳ್ಳುವನು. ಒಟ್ಟಿನಲ್ಲಿ ಅಜ್ಞಾನವಿರೋಧಿಯಾದ ಜ್ಞಾನೋದಯವಾದರೆ ಶಿವಸ್ವರೂಪದ ಆವಿರ್ಭಾವವಾಗುವುದು. ಆದುದರಿಂದ ಶುದ್ಧಜ್ಞಾನವೊಂದೇ ಮುಕ್ತಿಗೆ ಅಸಾಧಾರಣ ಕಾರಣವು. ||೮೧||

ಉಮಾದೇವಿಯನ್ನು ಧರಿಸಿದ ಶರೀರವುಳ್ಳ ಮಹಾದೇವನ ಧ್ಯಾನವೂ ಸಹ ನಿಷ್ಕಲಸ್ವರೂಪದ (ಧ್ಯಾನದಲ್ಲಿ) ಜ್ಞಾನೋತ್ಪತ್ತಿಯಲ್ಲಿ ಕಾರಣವಾಗಿದೆ. ಬೇರೆ ಕಾರಣದಿಂದ ಉಂಟಾಗಲಾರದು. ಎಂದರೆ ವಿಶುದ್ಧಾಂತಃಕರಣವುಳ್ಳ ಪುರುಷನಿಗೆ ನಿಷ್ಕಲ ಜ್ಞಾನೋತ್ಪತ್ತಿಯಲ್ಲಿ ಸಗುಣಧ್ಯಾನವೂ ಕಾರಣವಾಗಿದೆ. ಎಂದು ಅರ್ಥವು. ||೮೨||

ಓ ಸುರರೇ, ಸಮಸ್ತ ಕಲ್ಪಗಳಿಗೂ ಪರಮಾತ್ಮನು ಆಶ್ರಯನಾಗಿರುತ್ತಾನೆ. ಇಂತಹ ದಹರಾಕಾಶದಲ್ಲಿರತಕ್ಕ ಪರಮಾತ್ಮನಲ್ಲಿ ಪ್ರಾಣವು ಪ್ರಾಣಾಪಾನಾದಿ ವೃತ್ತಿ ಭೇದದಿಂದ ಐದು ವಿಧವಾಗಿದೆ. ಈ ಆತ್ಮನು ಅವಚ್ಛೇದಕವಾದ ಉಪಾಧಿವಶದಿಂದ ಸೂಕ್ಷ್ಮನಾಗಿದ್ದಾಗ್ಯೂ ತೀಕ್ಷ್ಣವಾದ ಮನಸ್ಸಿನಿಂದ ತಿಳಿಯಲ್ಪಡತಕ್ಕವನಾಗಿರುತ್ತಾನೆ. ||೮೩||

ಪರಿಶುದ್ಧವಾದ ಅಂತಃಕರಣವುಳ್ಳ ವಿದ್ವಾಂಸನು ಯಾವ ಯಾವ ಲೋಕಗಳನ್ನು ಪಡೆಯಬೇಕೆಂದು ಮನಸ್ಸಿನಿಂದ ಆಲೋಚಿಸುತ್ತಾನೆಯೋ ಮತ್ತು ಯಾವ ಯಾವ ವಸ್ತುಗಳನ್ನು ಇಚ್ಛಿಸುವನೋ, ಆ ಸಮಸ್ತವೂ ಸ್ವಸ್ವರೂಪವಾದುದರಿಂದ ಅವುಗಳನ್ನೆಲ್ಲವನ್ನೂ ಪಡೆಯುತ್ತಾನೆ. ||೮೪||

ಆದುದರಿಂದ ಶ್ರೇಯಸ್ಕಾಮನಾದವನು, ಬ್ರಹ್ಮಜ್ಞಾನಿಯು ಸಂಸಾರದಿಂದ ಉದ್ಧರಿಸತಕ್ಕ ಸಾಕ್ಷಾತ್ಪರಶಿವನೇ ಎಂದು ತಿಳಿದು, ಅವನನ್ನು ಶರೀರದಿಂದಲೂ,

ನಾಯಮಾತ್ಮಾ ಪ್ರವಚನೇನ ಲಭ್ಯೋ ।
ನ ಮೇಧಯಾ ನ ಬಹುನಾ ಶ್ರುತೇನ ॥
ಯಮೇವೈಷ ವೃಣುತೇ ತೇನ ಲಭ್ಯ ।
ಸ್ತಸ್ಯೈಷ ಆತ್ಮಾ ವಿವೃಣುತೇ ತನುಂ ಸ್ವಾಂ ॥೮೬॥

ನಾಯಮಾತ್ಮಾ ಬಲಹೀನೇನ ಲಭ್ಯಃ ।
ಪ್ರಮಾದತಸ್ತಪಸೋ ನಾನ್ಯ ಲಿಂಗಾತ್ ॥
ಏತೈರ್ಯತ್ನಂ ಯಃ ಕರೋತ್ಯೇವ ಧೀಮಾನ್ ।
ತಸ್ಯಾತ್ಮಾಽಯಂ ವಿಶತೇ ಬ್ರಹ್ಮಧಾಮ ॥೮೭॥

ದ್ರವ್ಯಗಳಿಂದಲೂ, ಸೇವಿಸಿ ಸತ್ಕರಿಸಬೇಕು. ಹಾಗೆ ಪೂಜಿಸಿದಲ್ಲಿ ಅವನು ಅಪೇಕ್ಷಿಸಿದ ಫಲಗಳು ಸಿಕ್ಕುತ್ತವೆ. ||೮೫||

ವೇದಶಾಸ್ತ್ರಗಳ ಪಠನದಿಂದಲಾಗಲೀ ಗ್ರಂಥಧಾರಣಬೋಧನಸಾಮರ್ಥ್ಯದಿಂದಲಾಗಲೀ, ಅನೇಕಾವೃತ್ತಿ ಶ್ರವಣದಿಂದಲಾಗಲೀ ಪರಮಾತ್ಮಸಾಕ್ಷಾತ್ಕಾರವಾಗಲಾರದು. ಹಾಗಾದರೆ ಪರಮಾತ್ಮನ ಸಾಕ್ಷಾತ್ಕಾರವು ಹೇಗೆ ಆಗುವುದು? ಎಂದರೆ ಅದಕ್ಕೆ ಉತ್ತರವನ್ನು ಹೇಳುತ್ತಾನೆ. ಯಾವ ವಿದ್ವಾಂಸನನ್ನು ಪರಮಾತ್ಮನೇ ಪಡೆಯಲು ಅಪೇಕ್ಷಿಸುವನೋ ಅಂಥವನಿಗೆ ಪರಮಾತ್ಮನು ಲಭ್ಯನಾಗುವನು. ಬೇರೆ ಸಾಧನಗಳಿಂದ ಅವನು ಸಿಕ್ಕಲಾರನು. ಶ್ರವಣಮನನಾದಿಗಳಿಂದ ಪರಮಾತ್ಮಪ್ರಾಪ್ತಿಯನ್ನು ಬಯಸತಕ್ಕ ವಿದ್ವಾಂಸನಿಗೆ ಆತ್ಮನು ಅವಿದ್ಯೆಯಿಂದ ಮುಚ್ಚಿರುವ ತನ್ನ ಸ್ವರೂಪವನ್ನು ಪ್ರಕಾಶಿಸುತ್ತಾನೆ. ಎಂದರೆ ಉಂಟಾಗಿದ್ದ ಅವಿದ್ಯೆಯು ಶ್ರವಣಾದಿ ಸಾಧನಕಲಾಪಗಳಿಂದ ನಿವೃತ್ತವಾಗಲು ಪರಮಾತ್ಮಸ್ವರೂಪವು ಸ್ಫುರಿಸುತ್ತದೆಯೆಂದು ತಾತ್ಪರ್ಯವು. ||೮೬||

ಆತ್ಮನಿಷ್ಠೆಯಿಂದುಂಟಾಗುವ ವೀರ್ಯವೇ ಬಲವು. ಈ ಬಲವಿಲ್ಲದವನಿಂದ ಪರಮಾತ್ಮನನ್ನು ಹೊಂದಲು ಸಾಧ್ಯವಿಲ್ಲ. ಪುತ್ರ, ಕಲತ್ರಾದಿ ವಿಷಯಗಳಲ್ಲಿ 'ಆಸಕ್ತಿ' ಎಂಬ ಪ್ರಮಾದದಿಂದ ಪರಮಾತ್ಮನು ಸಿಕ್ಕಲಾರನು. ಸಂನ್ಯಾಸಾಶ್ರಮವನ್ನು ಸ್ವೀಕರಿಸದೇ ಬೇರೆ ಆಶ್ರಮಗಳಲ್ಲಿ ಉಂಟಾದ ಜ್ಞಾನದಿಂದಲೂ ಸಹ ಪರಮಾತ್ಮಪ್ರಾಪ್ತಿಯಾಗಲಾರದು. ಆದರೂ ಬುದ್ಧಿವಂತನಾದ ಯಾವನು ಹಿಂದೆ ಹೇಳಿದ ಬಲಾದಿಗಳಿಂದ ಆತ್ಮನನ್ನು ಹೊಂದಲು ಪ್ರಯತ್ನಿಸುತ್ತಾನೆಯೋ ಅವನು

ಸಂಪ್ರಾಪ್ಯೈ ನ ಮೃಷಯೋ ಜ್ಞಾನತೃಪ್ತಾಃ ।
ಕೃತಾತ್ಮಾನೋ ವೀತಶೋಕಾಃ ಪ್ರಶಾಂತಾಃ ॥
ತೇ ಸರ್ವಗಂ ಸರ್ವಶಃ ಪ್ರಾಪ್ಯ ಧೀರಾ ।
ಯುಕ್ತಾತ್ಮಾನಃ ಸರ್ವಮೇವಾಽಽವಿಶಂತಿ ॥೮೮॥

ವೇದಾಂತ ವಿಜ್ಞಾನ ಸು ನಿಶ್ಚಿತಾರ್ಥಾಃ ।
ಸನ್ಯಾಸ ಯೋಗಾದ್ಯತಯಃ ಶುದ್ಧ ಸತ್ವಾಃ ॥
ತೇ ಬ್ರಹ್ಮ ಲೋಕೇ ತು ಪರಾಂತ ಕಾಲೇ ।
ಪರಾಮೃತಾತ್ಪರಿಮುಚ್ಯಂತಿ ಸರ್ವೇ ॥೮೯॥

ಸಾಕ್ಷಿಚಿನ್ಮಾತ್ರನಾಗಿ ತೇಜೋರೂಪವಾದ ಅಪರಿಚ್ಛಿನ್ನವಾದ ಬ್ರಹ್ಮಸ್ವರೂಪವನ್ನು ಹೊಂದುತ್ತಾನೆ. ॥೮೭॥

ವಿದ್ವಾಂಸನ ಪರಮಾತ್ಮಪ್ರಾಪ್ತಿ ಪ್ರಕಾರವನ್ನು ಹೇಳುತ್ತಾನೆ.—ಜ್ಞಾನಿಗಳಾದವರು ನಿಶ್ಚಯಾತ್ಮಕವಾದ ಜ್ಞಾನದಿಂದ ಪರಮಾತ್ಮನನ್ನು ತಿಳಿದು ಆ ಜ್ಞಾನದಿಂದಲೇ ತೃಪ್ತರಾಗಿಯೂ, ನಿಶ್ಚಯವುಳ್ಳವರಾಗಿಯೂ, ಶೋಕ, ಮೋಹ ಮುಂತಾದ ಸಂಸಾರ ಸಂಬಂಧವಾದ ದುಃಖರಹಿತರಾಗಿಯೂ, ಇಂದ್ರಿಯನಿಗ್ರಹವುಳ್ಳವರಾಗಿಯೂ, ಇರುತ್ತಾರೆ. ಇಂತಹ ಧೀರರಾದ ಮಹಾತ್ಮರು ಆಕಾಶದಂತೆ ಎಲ್ಲಾ ಕಡೆಯಲ್ಲಿಯೂ ವ್ಯಾಪಕವಾದಆತ್ಮಸ್ವರೂಪವನ್ನು ಸರ್ವಪ್ರಕಾರದಿಂದಲೂ ಹೊಂದಿ ಉಪಾಧಿಕೃತವಾದ ಪರಿಚ್ಛೇದವನ್ನು ಬಿಟ್ಟು ನಿತ್ಯಸಮಾಹಿತಮನಸ್ಕರಾಗಿ ಸರ್ವತ್ರವ್ಯಾಪಕವಾದ ಬ್ರಹ್ಮಸ್ವರೂಪದೊಡನೆ ಐಕ್ಯವನ್ನು ಹೊಂದುತ್ತಾರೆ. ॥೮೮॥

ಯಾರು ತತ್ವಮಸ್ಯಾದಿ ಮಹಾವಾಕ್ಯಗಳಿಂದುಂಟಾದ ನಿಶ್ಚಯಾತ್ಮಕವಾದ ಜ್ಞಾನದಿಂದ ಆತ್ಮನನ್ನು ತಿಳಿದುಕೊಂಡಿರುವರೋ, ಸರ್ವ ಕರ್ಮಸನ್ಯಾಸವೆಂಬ ಕೇವಲ ಬ್ರಹ್ಮನಿಷ್ಠೆಯಿಂದ ಯತನಶೀಲರಾಗಿಯೂ, ಶುದ್ಧವಾದ ಅಂತಃಕರಣವುಳ್ಳವರಾಗಿಯೂ ಇರುವರೋ, ಅವರು ಭೂತಭೌತಿಕಕಾರ್ಯಗಳಿಂದಲೂ ಪರವಾದ, ಅಜ್ಞಾನದ ನಾಶಕಾಲದಲ್ಲಿ ಉಂಟಾದ ನಿರತಿಶಯಾಮೃತತ್ವಕ್ಕೆ ಸಾಧನವಾದ ಜ್ಞಾನದಿಂದ ಬ್ರಹ್ಮಸ್ವರೂಪದಲ್ಲಿ ಲೀನರಾಗಿ ಸಂಸಾರಬಂಧನದಿಂದ ಬಿಡಲ್ಪಡುತ್ತಾರೆ. ಎಂದರೆ ಬ್ರಹ್ಮಸ್ವರೂಪರಾಗಿಯೇ ಇರುತ್ತಾ ಅಜ್ಞಾನೋಪಾಧಿಯು ನಷ್ಟವಾಗಲು ಘಟಾಕಾಶದಂತೆ ಅಪರಿಚ್ಛಿನ್ನವಾದ ಬ್ರಹ್ಮಸ್ವರೂಪವನ್ನು ಅವರು ಹೊಂದುತ್ತಾರೆಂದು ತಾತ್ಪರ್ಯವು. ॥೮೯॥

ಗತಾಃ ಕಲಾಃ ಪಂಚದಶ ಪ್ರತಿಷ್ಠಾ ।
ದೇವಾಶ್ಚ ಸರ್ವೇ ಪ್ರತಿ ದೇವತಾಶ್ಚ ॥
ಕರ್ಮಾಣಿ ವಿಜ್ಞಾನ ಮಯಶ್ಚ ಆತ್ಮಾ ।
ಪರೇಽವ್ಯಯೇ ಸರ್ವ ಏಕೀ ಭವಂತಿ ॥೯೦॥

ಯಥಾ ನದ್ಯಃ ಸಂದ್ಯಮಾನಾಃ ಸಮುದ್ರೇ ।
ಅಸ್ತಂ ಯಾಂತಿ ನಾಮರೂಪೇ ವಿಹಾಯ ॥
ತಥಾ ವಿದ್ವಾನ್ನಾಮರೂಪಾ ದ್ವಿಮುಕ್ತಃ ।
ಪರಾತ್ಪರಂ ಪುರುಷಂ ಬ್ರಹ್ಮ ಯಾತಿ ॥೯೧॥

ಕಲೆಗಳು ಹದಿನಾರು ಪ್ರಶ್ನೋಪನಿಷತ್ತಿನಲ್ಲಿ ೬.೪. ಹೇಳಿದೆ. "ಸಪ್ರಾಣಮಸೃಜತ ಪ್ರಾಣಾಚ್ಛ್ರದ್ಧಾಂ ಖಂ ವಾಯುರ್ಜ್ಯೋತಿರಾಪಃ ಪೃಥಿವೀಂದ್ರಿಯಂ ಮನಃ । ಅನ್ನಮನ್ನಾದ್ವೀರ್ಯಂ ತಪೋ ಮಂತ್ರಾಃ ಕರ್ಮಲೋಕಾಲೋಕೇಷು ಚ ನಾಮ ಚ" ಎಂಬುದಾಗಿ ಈ ಕಲೆಗಳು ಸಂಸಾರಿಗೆ ಬೇರೆ ದೇಹಕ್ಕೆ ಕಾರಣಗಳಾಗಿವೆ. ನಾಮ ಬಿಟ್ಟು ಉಳಿದ ಹದಿನೈದು ವಿದ್ವಾಂಸನ ಕಲೆಗಳು ತಮ್ಮ ತಮ್ಮ ಕಾರಣಗಳಲ್ಲಿ ಲೀನವಾಗುತ್ತವೆ. ಚಕ್ಷುರಾದಿ ಇಂದ್ರಿಯಗಳಿಗೆ ಅನುಗ್ರಾಹಕರಾದ ಆದಿತ್ಯಾದಿಗಳು ತಮ್ಮ ತಮ್ಮ ದೇವಶರೀರಗಳನ್ನು ಹೊಂದುತ್ತಾರೆ. ಫಲವನ್ನು ಕೊಡಲು ಆರಂಭಿಸದ ಕರ್ಮಗಳೂ, ಬುದ್ಧ್ಯಾದಿ ವಿಶಿಷ್ಟವಾದ ಕರ್ತೃವಾದ ಆತ್ಮನೂ ಸಹ ನಾಶವಿಲ್ಲದ ವಿಕಾರಸಮೂಹಕ್ಕಿಂತಲೂ ಪರವಾದ ಅದ್ವಿತೀಯ ಬ್ರಹ್ಮಸ್ವರೂಪದಲ್ಲಿ, ಜಲಪ್ರತಿಬಿಂಬಕ್ಕೆ ಆಧಾರವಾದ ಘಟಾದಿಗಳನ್ನು ತೆಗೆದರೆ ಆ ಪ್ರತಿಬಿಂಬವು ಬಿಂಬಸೂರ್ಯನನ್ನು ಸೇರುವಂತೆ, ಏಕತ್ವವನ್ನು ಹೊಂದುತ್ತವೆ. ॥೯೦॥

ಗಂಗಾ ಗೋದಾವರೀ ಮುಂತಾದ ನದಿಗಳು ಹರಿದುಹೋಗಿ ಸಮುದ್ರವನ್ನು ಸೇರುತ್ತವೆ. ಅಲ್ಲಿ ಸೇರಿದ ಮೇಲೆ ಗಂಗಾ ಎಂಬ ನಾಮವೂ, ರೂಪವೂ ಸಹ ಹೋಗಿ ಕೇವಲ ಸಮುದ್ರವೆಂದೇ ಹೇಳಲ್ಪಡುತ್ತದೆ. ಅದೇ ರೀತಿಯಾಗಿ ಆತ್ಮಜ್ಞಾನಿಯೂ ಸಹ ದೇವದತ್ತ ಇವೇ ಮುಂತಾದ ನಾಮವನ್ನೂ ಸ್ಥೂಲಶರೀರರೂಪವಾದ ರೂಪವನ್ನೂ ಸಹ ಬಿಟ್ಟು ಸ್ವಕಾರ್ಯಕ್ಕಿಂತಲೂ ಪರವಾದ, ಮಾಯೆಗಿಂತಲೂ ಪರವಾದ ಪುರೀತತ್ತಿನಲ್ಲಿರತಕ್ಕ ಜೀವತ್ವವನ್ನು ಬಿಟ್ಟು ಪರಿಪೂರ್ಣವಾದ ಬ್ರಹ್ಮಸ್ವರೂಪವನ್ನು ಹೊಂದುತ್ತಾನೆ. ॥೯೧॥

ಸ ಯೋ ಹ ವೈತತ್ಪರಮಂ ಬ್ರಹ್ಮ ವೇದ ಸುರರ್ಷಭಾಃ ।
ಬ್ರಹ್ಮೈವ ಭವತಿ ಜ್ಞಾನಾತ್ ನಾಸ್ತಿ ಸಂಶಯ ಕಾರಣಂ ॥೯೨॥

ಸುನಿಶ್ಚಿತಂ ಪರಂ ಬ್ರಹ್ಮ ವೇದ ಚೇ ತ್ಸ್ವಾನುಭೂತಿತಃ ।
ಕುಲೇ ಭವತಿ ನಾ ಬ್ರಹ್ಮವಿತ್ತಸ್ಯ ಸುರಪುಂಗವಾಃ ॥೯೩॥

ಶೋಕಂ ತರತಿ ಪಾಪ್ಮಾನಂ ಗುಹಾ ಗ್ರಂಥಿರ್ವಿನಶ್ಯತಿ ।
ಅಮೃತೋ ಭವತಿ ಪ್ರಾಜ್ಞಃ ಸತ್ಯಮೇವ ಮಯೋದಿತಂ ॥೯೪॥

ಸರ್ವ ಮುಕ್ತ ಮತಿ ಶೋಭನಂ ಮಯಾ ।
ಶೋಕ ಮೋಹ ಪಟಲಸ್ಯ ಭೇದಕಂ ॥
ಆಶು ಸತ್ಯ ಸುಖಬೋಧ ವಸ್ತುದಂ ।
ವೇದಮಾನ ನಿರತಸ್ಯ ಭಾಸತೇ ॥೯೫॥

ಇತಿ ಶ್ರೀಸ್ಕಾಂದಪುರಾಣೇ ಸೂತಸಂಹಿತಾಯಾಂ ಚತುರ್ಥಸ್ಯ ಯಜ್ಞವೈಭವಖಂಡಸ್ಯೋಪರಿಭಾಗೇ ಬ್ರಹ್ಮಗೀತಾಸೂಪನಿಷತ್ಸು ವಸ್ತುಸ್ವರೂಪ ವಿಚಾರೋನಾಮ ಸಪ್ತಮೋಽಧ್ಯಾಯಃ

ಓ ಸುರಶ್ರೇಷ್ಠರೇ, ಯಾವನು ಶ್ರವಣಮನನಾದಿಗಳಿಂದುಂಟಾದ ಪ್ರಮಾತ್ಮಕವಾದ ಜ್ಞಾನದಿಂದ ಆತ್ಮಸಾಕ್ಷಾತ್ಕಾರಮಾಡಿಕೊಳ್ಳುವನೋ ಅವನು ಸಾಕ್ಷಾತ್ಬ್ರಹ್ಮನೇ ಆಗುತ್ತಾನೆ. ಈ ವಿಷಯದಲ್ಲಿ ಸಂದೇಹವಿರುವುದಿಲ್ಲವು. ॥೯೨॥

ಓ ಸುರಶ್ರೇಷ್ಠರೇ, ಮತ್ತು ಪರಮಪವಿತ್ರವಾದ ಪರಮಾತ್ಮನ ಸ್ವರೂಪವನ್ನು ಯಾವನು ತಿಳಿದುಕೊಂಡಿರುವನೋ ಅವನ ವಂಶದಲ್ಲಿ ಹುಟ್ಟಿದ ಸಮಸ್ತರೂ ಬ್ರಹ್ಮಜ್ಞಾನಿಗಳಾಗುತ್ತಾರೆ. ॥೯೩॥

ಬ್ರಹ್ಮಜ್ಞಾನವುಳ್ಳವನು ಮಾನಸವಾದ ಶೋಕವಿಲ್ಲದವನೂ, ಸಂಸಾರಹೇತುವಾದ ಧರ್ಮಾಧರ್ಮರೂಪವಾದ ಪಾಪವಿಲ್ಲದವನೂ ಆಗುವನು. ಮತ್ತು ಜ್ಞಾನಿಯ ಹೃದಯದಲ್ಲಿದ್ದ, ಗ್ರಂಥಿಯಂತೆ ಬಲವಾದ, ಅವಿದ್ಯಾವಾಸನೆಯು ನಷ್ಟವಾಗುತ್ತದೆ. ಈ ರೀತಿಯಾಗಿ ಪ್ರಾಜ್ಞನು ವಿಶುದ್ಧವಾದ ಚಿತ್ಪ್ರಕಾಶವುಳ್ಳವನಾಗಿ ವಿದ್ಯೆಯಿಂದ ಅಮೃತತ್ವವನ್ನು ಹೊಂದುತ್ತಾನೆ. ನಾನು ಹೇಳಿದ ವಿಷಯವು ಸತ್ಯವಾದುದು. ॥೯೪॥

ಶೋಕಮೋಹಾದಿ ಸಮುದಾಯವನ್ನು ದೂರೀಕರಿಸತಕ್ಕ ಅತ್ಯಂತ ಶೋಭನ

ವಾದ ಸಮಸ್ತವನ್ನೂ ನಾನು ನಿಮಗೆ ಹೇಳಿರುವೆನು. ಇಂತಹ ಸತ್ಯವಾಗಿಯೂ, ನಿರತಿಶಯ ಸುಖರೂಪವಾಗಿಯೂ, ಜ್ಞಾನಪ್ರದವಾಗಿಯೂ, ಇರತಕ್ಕ ಬ್ರಹ್ಮಸ್ವರೂಪವು ಶ್ರುತಿಪ್ರಮಾಣದಲ್ಲಿ ಆಸಕ್ತನಾದವನಿಗೆ ಶೀಘ್ರವಾಗಿ ಸ್ಫುರಿಸುತ್ತದೆ. ||೯೫||

ಇಲ್ಲಿಗೆ ಸ್ಕಾಂದಪುರಾಣದ ಸೂತಸಂಹಿತೆಯಲ್ಲಿ ನಾಲ್ಕನೆಯ ಭಾಗವಾದ
ಯಜ್ಞವೈಭವಖಂಡದಲ್ಲಿ ಎರಡನೆಯ ಭಾಗದಲ್ಲಿರುವ,
ಉಪನಿಷತ್ತುಗಳಂತಿರುವ ಬ್ರಹ್ಮಗೀತೆಯಲ್ಲಿ ಬ್ರಹ್ಮ, ಆತ್ಮ, ತತ್ವಗಳ ಸ್ವರೂಪವನ್ನು
ವಿವರಿಸಿರುವ ಏಳನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಅಥಾಸ್ಯಾಃ ಶ್ರೀಮತ್ಸ್ಕಾಂದಪುರಾಣಾಂತರ್ಗತ ಸೂತಸಂಹಿತಾಯಾಶ್ಚತುರ್ಥಸ್ಯ ಯಜ್ಞವೈಭವಖಂಡಸ್ಯೋಪರಿಭಾಗೇ ಬ್ರಹ್ಮಗೀತಾ

॥ ಅಷ್ಟಮೋಽಧ್ಯಾಯಃ ॥

ಎಂಟನೆಯ ಅಧ್ಯಾಯವು

॥ ಬ್ರಹ್ಮೋವಾಚ ॥

ಅಸ್ತಿ ತತ್ವಂ ಪರಂ ಸಾಕ್ಷಾಚ್ಛಿವರುದ್ರಾದಿ ಸಂಜ್ಞಿತಂ ।
ತದವಶ್ಯಂ ಮಹಾಯಾಸಾ ದ್ವೇದಿತವ್ಯಂ ಮನೀಷಿಭಿಃ ॥೧॥

ಬ್ರಹ್ಮನು ಹೇಳಿದನು—ಕೈವಲ್ಯೋಪನಿಷತ್ತೂ ಸಹ "ಅಥಾಶ್ವಲಾಯನೋ ಭಗವಂತಂ ಪರಮೇಷ್ಠಿನಂ ಪರಿಸಮೇತ್ಯೋವಾ ಚ" ಎಂದು ಮುಂತಾಗಿ ಬ್ರಹ್ಮಾತ್ಮೈಕ್ಯವನ್ನು ಪ್ರತಿಪಾದಿಸುತ್ತದೆಯೆಂದು ಆ ಉಪನಿಷತ್ತನ್ನು ಸಂಗ್ರಹಿಸಿ ಹೇಳುತ್ತಾನೆ.—ನಿರತಿಶಯಾನಂದರೂಪವಾದುದರಿಂದ ಶಿವನೆಂದು ಹೆಸರುಳ್ಳ, ಸಂಸಾರ ದುಃಖವನ್ನು ಹೋಗಲಾಡಿಸುವುದರಿಂದ ರುದ್ರನೆಂದು ಹೆಸರುಳ್ಳ, ಪರಮಾತ್ಮತತ್ವವಿರುವುದು. ಅಂತಹ ಪರಮಾತ್ಮತತ್ವವನ್ನು ಬಹಳ ಪ್ರಯತ್ನಪಟ್ಟು ವಿದ್ವಾಂಸರು ತಿಳಿದು ಸಂಪಾದಿಸಬೇಕು. ಆ ಪರಮಾತ್ಮನ ವಿದ್ಯೆಯು ಯತಿಗಳಾದ ಇಂದ್ರಿಯ ನಿಗ್ರಹವುಳ್ಳವರಿಂದ ಸೇವಿಸಲ್ಪಡತಕ್ಕದ್ದಾಗಿಯೂ, ಅತ್ಯಂತ ಗೂಢವಾಗಿಯೂ ಸಂಸಾರ ದುಃಖವನ್ನು ಹೋಗಲಾಡಿಸುವುದರಿಂದ ಮಂಗಳಕರವಾಗಿಯೂ, ಶೀಘ್ರವಾಗಿ ಮುಕ್ತಿಗೆ ಪ್ರತಿಬಂಧಕವಾದ ಪಾಪವನ್ನು ನಿವೃತ್ತಿಮಾಡುವುದಾಗಿಯೂ, ಜನರಿಗೆ ಪರಬ್ರಹ್ಮಸ್ವರೂಪವನ್ನು ಹೊಂದಿಸತಕ್ಕದ್ದಾಗಿಯೂ ಇರುವುದು. ॥೧-೨॥

ಪರವಿದ್ಯೋತ್ಪತ್ತಿಗೆ ಸಾಧನವನ್ನು ಹೇಳುತ್ತಾನೆ.—ಎಲೈ ಸುರಶ್ರೇಷ್ಠರೇ, ಗುರೂಪದಿಷ್ಟವಾದ ಅರ್ಥದಲ್ಲಿ ವಿಶ್ವಾಸವೂ, ಆ ಗುರೂಪದಿಷ್ಟವಾದ ಅರ್ಥದಲ್ಲಿ ವೇದಾಂತಗಳಿಗೆ ತಾತ್ಪರ್ಯವೆಂಬ ಭಕ್ತಿಯೂ, ಆ ಗುರೂಪದಿಷ್ಟವಾದ ಅರ್ಥದ

ತದ್ವಿದ್ಯಾ ಯತಿಭಿಃ ಸೇವ್ಯಾನಿಗೂಢಾತೀವ ಶೋಭನಾ ।
ಅಚಿರಾತ್ಸರ್ವಪಾಪಘ್ನೀ ಪರಬ್ರಹ್ಮಪ್ರದಾ ನೃಣಾಂ ॥೨॥

ಶ್ರದ್ಧಯಾ ಚ ಮಹಾಭಕ್ತ್ಯಾ ಧ್ಯಾನೇನ ಚ ಸುರೋತ್ತಮಾಃ ।
ಯೋಗೇನ ಚ ಪರಾ ವಿದ್ಯಾ ಲಭ್ಯಾ ಸಾ ನೈವ ಕರ್ಮಣಾ
ನ ಪ್ರಜಾಭಿರ್ನ ಚಾರ್ಥೇನ ತ್ಯಾಗೇನೈಷಾಂ ಸುರರ್ಷಭಾಃ ॥೩॥

ಯೇ ವೇದಾಂತ ಮಹಾವಾಕ್ಯ ಶ್ರವಣೋತ್ಪನ್ನ ವಿದ್ಯಯಾ ।
ಸುನಿಶ್ಚಿತಾರ್ಥಾ ಯತಯೋ ವಿಶುದ್ಧ ಹೃದಯಾ ಭೃಶಂ ॥೪॥

ಬ್ರಹ್ಮದೃಶ್ಯೇ ಶರೀರೇಽಸ್ಮಿನ್ನಂತಕಾಲೇ ಪರಸ್ಯ ತು ।
ಅಜ್ಞಾನಾಖ್ಯಸ್ಯ ತೇ ಸರ್ವೇ ಮುಚ್ಯಂತೇ ಹಿ ಪರಾಮೃತಾಃ ॥೫॥

ಅತೋ ವಿದ್ಯಾಽಽಪ್ತಿ ಸಿದ್ಧ್ಯರ್ಥಂ ಮುಮುಕ್ಷುಃ ಮತಿಮತ್ತಮಃ ॥೬॥
ವಿವಿಕ್ತಂ ದೇಶಮಾಶ್ರಿತ್ಯ ಸುಖಾಸೀನೋ ಮಹಾಶುಚಿಃ ।
ಸಮಗ್ರೀವ ಶಿರಃ ಕಾಯಃ ಸಿತಭಸ್ಮಾವ ಗುಂಠಿತಃ ॥೭॥

ಮನನದಿಂದ ಸಜಾತೀಯ ಪ್ರತ್ಯಯ ಪ್ರವಾಹವೆಂಬ ಧ್ಯಾನವೂ, ಜನರಿಲ್ಲದ ದೇಶದಲ್ಲಿ ಸುಖವಾಗಿರುವಿಕೆಯೆಂಬ ಯೋಗವೂ ಸಹ ಪರವಿದ್ಯೋತ್ಪತ್ತಿಯಲ್ಲಿ ಸಾಧನಗಳು. ಯಜ್ಞಾದಿ ಕರ್ಮಗಳಿಂದಲಾಗಲೀ, ಪುತ್ರ ಪೌತ್ರಾದಿ ಪ್ರಜೆಗಳಿಂದಲಾಗಲೀ, ಧನ ದಿಂದಲಾಗಲೀ, ಪರವಿದ್ಯೆಯು ಉಂಟಾಗಲಾರದು. ಇವುಗಳಲ್ಲಿ ವಿವೇಕವೈರಾಗ್ಯದಿಂ ದುಂಟಾದ ತ್ಯಾಗದಿಂದ ಪರವಿದ್ಯೆಯು ಉಂಟಾಗುತ್ತದೆ. ||೩||

ಯಾರು ತತ್ವಮಸ್ಯಾದಿ ವೇದಾಂತ ಮಹಾವಾಕ್ಯಶ್ರವಣದಿಂದ ಉಂಟಾದ ವಿದ್ಯೆ ಯಿಂದ ನಿಶ್ಚಯವಾದ ಬ್ರಹ್ಮತತ್ವದ ಅರಿವುಳ್ಳವರಾಗಿಯೂ, ಶುದ್ಧವಾದ ಅಂತಃಕರಣ ವುಳ್ಳವರಾಗಿಯೂ ಇರುತ್ತಾರೆಯೋ ಅವರು ಈ ಶರೀರದಲ್ಲಿಯೇ ಬ್ರಹ್ಮಸಾಕ್ಷಾತ್ಕಾರ ವುಳ್ಳವರಾಗಿ ಭೂತ ಭೌತಿಕ ಕಾರ್ಯಾಪೇಕ್ಷೆಯಾ ಪರವಾದ ಅಜ್ಞಾನದ ನಿವೃತ್ತಿ ಯುಳ್ಳವರಾಗಿಯೂ ಇರುತ್ತಾರೆ. ||೪-೫||

ಈರೀತಿಯಾಗಿ ವಿಷಯ ಪ್ರಯೋಜನ ಸಾಧನ ಅಧಿಕಾರಿ ಸಮೇತವಾದ, ವಿದ್ಯಾಸ್ವರೂಪವು ಉಪದಿಷ್ಟವಾಯಿತು. ಇನ್ನು ಆ ವಿದ್ಯೆಗೆ ಸಾಧನವಾದ ಯೋಗ ವನ್ನು ಉಪದೇಶಿಸುತ್ತಾನೆ.—ಓ ಸುರಶ್ರೇಷ್ಠರೇ, ತನಗೆ ಬ್ರಹ್ಮವಿದ್ಯೆಯುಂಟಾಗ

ಇಂದ್ರಿಯಾಣಿ ಸಮಗ್ರಾಣಿ ನಿರುಧ್ಯ ಸುರಪುಂಗವಾಃ ।
ಪ್ರಣಮ್ಯ ಸ್ವಗುರುಂ ಭಕ್ತ್ಯಾ ವಿಚಿಂತ್ಯ ಹೃದಯಾಂಬುಜಂ ॥೮॥

ವಿಶುದ್ಧಂ ವಿರಜಂ ತಸ್ಯ ಮಧ್ಯೇ ವಿಶದ ಮೀಶ್ವರಂ ।
ಅನಂತಂ ಶುದ್ಧಮವ್ಯಕ್ತ ಮಚಿಂತ್ಯಂ ಸರ್ವಜಂತುಭಿಃ ॥೯॥

ಶಿವಂ ಪ್ರಶಾಂತ ಮಮೃತಂ ವೇದಯೋನಿಂ ಸುರರ್ಷಭಾಃ ।
ಆದಿ ಮಧ್ಯಾಂತ ನಿರ್ಮುಕ್ತ ಮೇಕಂ ಸಾಕ್ಷಾದ್ವಿಭುಂ ತಥಾ ॥೧೦॥

ಬೇಕೆಂಬ ಕುತೂಹಲವುಳ್ಳ ಮುಮುಕ್ಷುವಾದ ಬುದ್ಧಿವಂತನು ಜನಗಳಿಲ್ಲದ ಪ್ರದೇಶವನ್ನಾಶ್ರಯಿಸಿ, ತನಗೆ ಸುಖವಾಗುವ ಹಾಗೆ ಕುಳಿತು, ಬಹಳ ಶುಚಿರ್ಭೂತನಾಗಿ ತಲೆಯನ್ನೂ ಶರೀರವನ್ನೂ ಸಮವಾಗಿಟ್ಟುಕೊಂಡು ಶುಭ್ರವಾದ ಭಸ್ಮಲೇಪವನ್ನು ಮಾಡಿಕೊಂಡು, ಸಮಸ್ತ ಇಂದ್ರಿಯಗಳನ್ನೂ ನಿಗ್ರಹಿಸಿ, ತನ್ನ ಗುರುವನ್ನು ಭಕ್ತಿಯಿಂದ ನಮಸ್ಕರಿಸಿ, ಹೃದಯ ಕಮಲವನ್ನು ನಿರಂತರವಾಗಿ ಚಿಂತಿಸಬೇಕು. ||೬-೭-೮||

ಮತ್ತು ವಿಷಯ ವೈರಾಗ್ಯದಿಂದ ಅದನ್ನು ಅನುಭವಿಸಬೇಕೆಂಬ ಇಚ್ಛಾರೂಪವಾದ ಕಾಲುಷ್ಯರಹಿತನಾದ ಕಾರಣವೇ ವಿಶುದ್ಧವಾದ ಅಂತಃಕರಣ ಮಧ್ಯದಲ್ಲಿ ಪರಮಾತ್ಮನನ್ನು ಧ್ಯಾನಿಸಬೇಕು. ಆ ಪರಮಾತ್ಮನಾದರೋ ಹೀಗಿರುತ್ತಾನೆ. ನಿರ್ಮಲನಾಗಿಯೂ, ವಿಶುದ್ಧಸತ್ವಪ್ರಧಾನವಾದ ಮಾಯೆಯೇ ಉಪಾಧಿಯಾದುದರಿಂದ ಈಶ್ವರನಾಗಿಯೂ, ನಾಶರಹಿತನಾದಕಾರಣ ಶುದ್ಧನಾಗಿಯೂ, ಅಭಿವ್ಯಕ್ತಿಗೆ ಹೇತುಗಳಾದ ಶಬ್ದಸ್ಪರ್ಶ ಮುಂತಾದುವುಗಳಿಲ್ಲದುದರಿಂದ ಅವ್ಯಕ್ತನಾಗಿಯೂ, ಸಮಸ್ತ ಪ್ರಾಣಿಗಳಿಂದ ಮನಸ್ಸಿನಿಂದಲೂ ಸಹ ಚಿಂತಿಸಲಸಾಧ್ಯನಾಗಿಯೂ ಸಚ್ಚಿದಾನಂದರೂಪನಾಗಿ ಆ ಪರಮಾತ್ಮನಿರುತ್ತಾನೆ. ||೯||

ಓ ದೇವೋತ್ತಮರೇ, ಆ ಪರಮಾತ್ಮನು ಪರಮಾನಂದರೂಪನಾದುದರಿಂದ ಮಂಗಳಕರನಾಗಿಯೂ, ಸಂಸಾರ ಸಂಬಂಧವಿಲ್ಲದುದರಿಂದ ಅಲೆಗಳಿಲ್ಲದ ಸಮುದ್ರದಂತೆ ಪ್ರಶಾಂತನಾಗಿಯೂ, ಅಮೃತತ್ವಕ್ಕೆ ಸಾಧನನಾಗಿಯೂ, ಶ್ರುತಿಯ ಪ್ರಕಟನೆಗೆ ಲೀಲೆಯಿಂದ ಕಾರಣನಾಗಿಯೂ, ಆದಿಯಲ್ಲಿಯೂ, ಮಧ್ಯದಲ್ಲಿಯೂ, ಕೊನೆಯಲ್ಲಿಯೂ ಇರತಕ್ಕ ವಸ್ತುಗಳಿಂದ ಸಂಕೋಚವಿಲ್ಲದವನಾಗಿಯೂ, ಅದ್ವಿತೀಯನಾಗಿಯೂ, ಎಲ್ಲಾಕಡೆಗಳಲ್ಲಿಯೂ ವ್ಯಾಪಕನಾಗಿಯೂ, ಇರುತ್ತಾನೆ. ||೧೦||

ಅರೂಪಂ ಸಚ್ಚಿದಾನಂದ ಮದ್ಭುತಂ ಪರಮೇಶ್ವರಂ ।
ಉಮಾ ಸಹಾಯ ಮೋಮರ್ಥಂ ಪ್ರಭುಂ ಸಾಕ್ಷಾತ್ತ್ರಿಲೋಚನಂ ॥
ನೀಲಕಂಠಂ ಪ್ರಶಾಂತಸ್ತಂ ಧ್ಯಾಯೇನ್ನಿತ್ಯ ಮತಂದ್ರಿತಃ ॥೧೧॥

ಏವಂ ಧ್ಯಾನಪರಃ ಸಾಕ್ಷಾನ್ಮುನಿರ್ಬ್ರಹ್ಮಾತ್ಮ ವಿದ್ಯಯಾ ।
ಭೂತಯೋನಿಂ ಸಮಸ್ತಸ್ಯ ಸಾಕ್ಷಿಣಂ ತಮಸಃ ಪರಂ ॥೧೨॥

ಗಚ್ಛ ತ್ಯೇವ ನ ಸಂದೇಹಃ ಸತ್ಯಮುಕ್ತಂ ಮಯಾ ಸುರಾಃ ॥೧೩॥

ಯೋಽಯಂ ಧ್ಯೇಯಶ್ಚ ವಿಜ್ಞೇಯಃ ಶಿವಃ ಸಂಸಾರಮೋಚಕಃ ।
ಸ ಬ್ರಹ್ಮಾ ಸ ಶಿವಃ ಸೇಂದ್ರಃ ಸೋಽಕ್ಷರಃ ಪರಮಃ ಸ್ವರಾಟ್ ॥೧೪॥

ಲೌಕಿಕವಾದ ಆಕಾರರಹಿತನಾಗಿಯೂ, ತ್ರಿಕಾಲಾಬಾಧ್ಯನಾಗಿಯೂ, ಆನಂದ ರೂಪನಾಗಿಯೂ, ಆಶ್ಚರ್ಯಕರನಾಗಿಯೂ, ಉಮಾರೂಪಳಾದ ಶಕ್ತಿಸಹಿತನಾಗಿಯೂ, ಓಂಕಾರದ ಅರ್ಥರೂಪನಾಗಿಯೂ, ಸಮಸ್ತ ಜಗತ್ತಿಗೆ ಒಡೆಯನಾಗಿಯೂ, ಮೂರು ಕಣ್ಣುಗಳುಳ್ಳವನಾಗಿಯೂ, ನೀಲವಾದ ಕಂಠವುಳ್ಳವನಾಗಿಯೂ ಸಹ ಆ ಪರಮೇಶ್ವರನು ಇರುತ್ತಾನೆ. ಇಂತಹ ಪರಮಾತ್ಮನನ್ನು ಮುಮುಕ್ಷುವು ಇಂದ್ರಿಯನಿಗ್ರಹವುಳ್ಳವನಾಗಿ ಪ್ರಶಾಂತನಾಗಿ ಯಾವಾಗಲೂ ಧ್ಯಾನಿಸುತ್ತಿರಬೇಕು. ||೧೧||

ಈರೀತಿಯಾಗಿ ಧ್ಯಾನಪರನಾದ ಮುನಿಯು ಆತ್ಮವಿದ್ಯೆಯಿಂದ ಸಮಸ್ತ ಭೂತಗಳಿಗೂ ಕಾರಣನಾದ, ಸಮಸ್ತಕ್ಕೂ ಸಾಕ್ಷಿಯಾದ, ಮಾಯೆಗಿಂತಲೂ ಪರನಾದ, ಪರಮಾತ್ಮನನ್ನು ಹೊಂದುತ್ತಾನೆ. ಓ ಸುರರೇ, ನಾನು ಹೇಳಿದ ವಿಷಯವು ಸತ್ಯವಾದುದು. ||೧೨-೧೩||

ಜ್ಞಾನವನ್ನು ನೀಡುವುದರ ಮೂಲಕ ಜೀವಿಗಳ ಸಂಸಾರದುಃಖವನ್ನು ಹೋಗಲಾಡಿಸತಕ್ಕ, ಧ್ಯೇಯನಾಗಿ ತಿಳಿಯಲು ಯೋಗ್ಯನಾದ ಶಿವನೇ ಚತುರ್ಮುಖಬ್ರಹ್ಮನಾಗಿಯೂ, ಶಿವನಾಗಿಯೂ, ರುದ್ರನಾಗಿಯೂ, ನಾಶವಿಲ್ಲದವನಾಗಿಯೂ, ಬ್ರಹ್ಮೇಂದ್ರಾದಿಗಳಿಗೂ ಕಾರಣನಾದುದರಿಂದ ಪರಮನಾಗಿಯೂ, ಸ್ವಯಂ ವಿರಾಜಮಾನನಾಗಿಯೂ, ಇರುತ್ತಾನೆ. ಎಂದರೆ ಆಯಾಯ ಉಪಾಧಿ ಮಹಿಮೆಯಿಂದ ಶಿವನೇ ಇಂದ್ರಾದಿರೂಪದಿಂದಿರುತ್ತಾನೆ. ಆದುದರಿಂದ ಇಂದ್ರಾದಿಗಳು ಪರಶಿವನಿಗಿಂತಲೂ ಬೇರೆಯಾದವರಲ್ಲ. ಎಂದು ತಾತ್ಪರ್ಯವು. ||೧೪||

ಸ ಏವ ವಿಷ್ಣುಃ ಸ ಪ್ರಾಣಃ ಸ ಕಾಲೋಽಗ್ನಿಃ ಸ ಚಂದ್ರಮಾಃ ।
ಸ ಏವ ಸರ್ವಂ ಯದ್ಭೂತಂ ಯಚ್ಚ ಭವ್ಯಂ ಸಮಾಸತಃ ॥೧೫॥

ಸ ಏವ ವಿದ್ಯಾಽವಿದ್ಯಾ ಚ ನ ತತೋಽನ್ಯತ್ತು ಕಿಂಚನ ।
ಜ್ಞಾತ್ವಾ ತಂ ಮೃತ್ಯುಮತ್ಯೇತಿ ನಾನ್ಯಃ ಪಂಥಾ ವಿಮುಕ್ತಯೇ ॥೧೬॥

ಸರ್ವಭೂತಸ್ಥಮಾತ್ಮಾನಂ ಸರ್ವಭೂತಾನಿ ಚಾತ್ಮನಿ ।
ಸಂಪಶ್ಯನ್ ಬ್ರಹ್ಮ ಪರಮಂ ಯಾತಿ ನಾನ್ಯೇನ ಹೇತುನಾ ॥೧೭॥

ಆತ್ಮಾನಮರಣಿಂ ಕೃತ್ವಾ ಪ್ರಣವಂ ಚೋತ್ತರಾರಣಿಂ ।
ಧ್ಯಾನನಿರ್ಮಥನಾದೇವ ಪಾಪಾನ್ದಹತಿ ಪಂಡಿತಃ ॥೧೮॥

ಮತ್ತು ಪರಶಿವನು ವಿಷ್ಣು, ಪ್ರಾಣ, ಕಾಲ, ಅಗ್ನಿ, ಚಂದ್ರ, ಇವರ ಸ್ವರೂಪನಾಗಿಯೂ, ಹಿಂದೆ ಕಳೆದ ಮತ್ತು ಮುಂದೆ ಉಂಟಾಗುವ, ಒಟ್ಟಿನಲ್ಲಿ ಜಗದ್ರೂಪನಾಗಿಯೂ ಸಹ ಇರುತ್ತಾನೆ. ॥೧೫॥

ವಿದ್ಯೆ ಮತ್ತು ಅವಿದ್ಯೆಗಳೂ, ಉಳಿದ ಸಮಸ್ತವೂ ಸಹ ಆ ಪರಮಾತ್ಮಸ್ವರೂಪವಾಗಿವೆ. ಇಂತಹ ಪರಮಾತ್ಮಜ್ಞಾನದಿಂದಲೇ ಜನನಮರಣರೂಪವಾದ ಸಂಸಾರವೆಂಬ ಮೃತ್ಯುವಿನ ನಿವೃತ್ತಿಯಾಗುತ್ತದೆ. ಈ ಜ್ಞಾನವು ಹೊರತಾಗಿ ಮುಕ್ತಿಗೆ ಇನ್ನು ಯಾವ ಸಾಧನವೂ ಕೂಡ ಇರುವುದಿಲ್ಲ. ॥೧೬॥

ಯಾವನು ಸಮಸ್ತ ಭೂತಗಳಲ್ಲಿ ಕಾರಣತ್ವೇನ ಇರತಕ್ಕ ಬ್ರಹ್ಮವನ್ನೂ ಮತ್ತು ಕಾರ್ಯತ್ವೇನ ಅಧ್ಯಸ್ತವಾದ ಸಮಸ್ತ ಭೂತಗಳನ್ನೂ ತನ್ನಲ್ಲಿ ನೋಡುವನೋ ಅಂತಹ ಸಾರ್ವಾತ್ಮ್ಯಜ್ಞಾನಿಯು ಅದ್ವಿತೀಯವಾದ ಪರಬ್ರಹ್ಮವನ್ನು ಹೊಂದುತ್ತಾನೆ. ಇನ್ನು ಯಾವ ಕಾರಣದಿಂದಲೂ ಸಹ ಬ್ರಹ್ಮಭಾವವು ಬರಲಾರದು. ॥೧೭॥

ಆತ್ಮನನ್ನು ಅಗ್ನಿಯನ್ನು ಕಡೆಯುವ ಅರಣಿಯನ್ನಾಗಿ ಮಾಡಿಕೊಂಡು, ಓಂಕಾರವನ್ನು ಮೇಲಿನ ಅರಣಿಯನ್ನಾಗಿ ಮಾಡಿಕೊಂಡು, ಧ್ಯಾನವೆಂಬ ಕಡೆಯುವಿಕೆಯಿಂದ ಜ್ಞಾನಿಯು ಪಾಪಗಳನ್ನು ಸುಡುತ್ತಾನೆ. ಎಂದರೆ ಅರಣಿಯನ್ನು ಕಡೆಯುವಿಕೆಯಿಂದುಂಟಾದ ಅಗ್ನಿಯು ಎಲ್ಲಾ ಪದಾರ್ಥಗಳನ್ನೂ ಸುಡುವಂತೆ, ಆತ್ಮಜ್ಞಾನವು ಸಮಸ್ತ ಪಾಪಗಳನ್ನೂ ನಾಶಮಾಡುತ್ತದೆ. ಎಂದು ತಾತ್ಪರ್ಯವು. ॥೧೮॥

ಸ ಏವ ಭಗವಾನೀಶೋ ಮಾಯ ಯೈವಾತ್ಮಭೂತಯಾ ।
ಮುಹ್ಯಮಾನ ಇವ ಸ್ಥಿತ್ವಾ ಸ್ವ ಸ್ವಾತಂತ್ರ್ಯ ಬಲೇನ ತು ॥೧೯॥

ಶರೀರ ಮಿದಮಾಸ್ಥಾಯ ಕರೋತಿ ಸಕಲಂ ಪುನಃ ।
ಜಾಗ್ರ ತ್ಸಂಜ್ಞಮಿದಂ ಧಾಮ ಪ್ರಕಲ್ಪ್ಯ ಸ್ವೀಯಮಾಯಯಾ ॥೨೦॥

ರಾಜಪುತ್ರಾದಿ ವತ್ತಸ್ಮಿನ್ ಕ್ರೀಡಯಾ ಕೇವಲಂ ಹರಃ ।
ಅನ್ನಪಾನಾದಿಭಿಃ ಸ್ತ್ರೀಭಿ ಸ್ತೃಪ್ತಿಮೇತಿ ಸುರರ್ಷಭಾಃ ॥೨೧॥

ಸ್ವಪ್ನಕಾಲೇ ತಥಾ ಶಂಭು ರ್ಜೀವತ್ವೇನ ಪ್ರಕಾಶಿತಃ ।
ಸುಖದುಃಖಾದಿ ಕಾ ನ್ಭೋಗಾನ್ ಭುಂಜ್ತೇಸ್ವೇನೈವ ನಿರ್ಮಿತಾನ್ ॥೨೨॥

ಸುಷುಪ್ತಿಕಾಲೇ ಸಕಲೇ ವಿಲೀನೇ ತಮಸಾಽಽವೃತಃ ।
ಸ್ವಸ್ವರೂಪ ಮಹಾನಂದಂ ಭುಂಜ್ತೇ ದೃಶ್ಯ ವಿವರ್ಜಿತಃ ॥೨೩॥

ಜೀವನು ಜಾಗ್ರದಾದ್ಯವಸ್ಥೆಗಳಲ್ಲಿ ಸುಖದುಃಖಾದಿಗಳನ್ನು ಭೋಗಿಸುತ್ತಾ ಸಂಸಾರಿಯಾಗಿರುತ್ತಾನೆ. ಈಶ್ವರನು ಹಾಗಿಲ್ಲ, ಹೀಗಿರತಕ್ಕ ಜೀವೇಶ್ವರರಿಗೆ ಅಭೇದವು ಹೇಗೆ ಬರಬಹುದೆಂದರೆ ಅದಕ್ಕೆ ಉತ್ತರವನ್ನು ಹೇಳುತ್ತಾನೆ.—ಷಡ್ಗುಣೈಶ್ವರ್ಯಸಂಪನ್ನನಾದ ಪರಶಿವನು ತನ್ನ ಸಂಬಂಧಿಯಾದ ಮಾಯೆಯಿಂದ ಮೋಹಗೊಂಡವನೋ ಎಂಬಂತೆ ಇರುತ್ತಾನೆ. ಇಂತಹ ಶಿವನು ತನ್ನ ಸರ್ವಸ್ವಾತಂತ್ರ್ಯಬಲದಿಂದ ಈ ಶರೀರವನ್ನು ಸೃಷ್ಟಿಮಾಡಿ ಅದರಲ್ಲಿ ಅಭಿಮಾನವುಳ್ಳವನಾಗಿ ಸಕಲವನ್ನೂ ಸೃಷ್ಟಿಮಾಡುತ್ತಾನೆ. ತನ್ನ ಮಾಯೆಯಿಂದ ಜಾಗ್ರತ್ಸಂಜ್ಞಕವಾದ ಈ ಸಮಸ್ತವನ್ನೂ ರಾಜಪುತ್ರಾದಿಗಳಂತೆ ಸೃಷ್ಟಿಸಿ, ಕ್ರೀಡಿಸುವವನಾಗಿ ಅನ್ನಪಾನಗಳಿಂದಲೂ ಸ್ತ್ರೀಯರಿಂದಲೂ, ತೃಪ್ತಿಯನ್ನು ಹೊಂದುತ್ತಾನೆ. ಸ್ವಪ್ನಕಾಲದಲ್ಲಿ ಪರಮೇಶ್ವರನು ಜೀವರೂಪದಿಂದಿದ್ದು, ತಾನೇ ನಿರ್ಮಿಸಿದ ಸುಖದುಃಖಾದಿಗಳನ್ನು ಅನುಭವಿಸುತ್ತಾನೆ. ||೧೯-೨೦-೨೧-೨೨||

ಸ್ವಪ್ನಾವಸ್ಥೆಯಲ್ಲಿ ಬಾಹ್ಯೇಂದ್ರಿಯಗಳು ಉಪರತವಾದಾಗ್ಯೂ ಆಯಾಯಾ ಸ್ವಪ್ನಾಪನ್ನವಾದ ಪದಾರ್ಥಾಕಾರವಾಗಿ ಪರಿಣಾಮವನ್ನು ಹೊಂದುವ ಮನಸ್ಸು ಇರುತ್ತದೆ. ಸುಷುಪ್ತಿಕಾಲದಲ್ಲಿ ಆ ಅಂತಃಕರಣವೂ ಸಹ ಉಪರತವಾಗುತ್ತದೆ. ಆದುದರಿಂದ ಸುಷುಪ್ತಿಕಾಲದಲ್ಲಿ ಸಕಲ ಇಂದ್ರಿಯಗಳೂ, ತಮ್ಮ ತಮ್ಮ ವ್ಯಾಪಾರಾ

ಪುನಃ ಪೂರ್ವಕ್ರಿಯಾ ಯೋಗಾಜ್ಜೀವತ್ವೇನ ಪ್ರಕಾಶಿತಃ ।
ಜಾಗ್ರತ್ಸಂಜ್ಞಮಿದಂ ಧಾಮ ಯಾತಿ ಸ್ವಪ್ನ ಮಥಾಪಿ ವಾ ॥೨೪॥

ಪುರತ್ರಯ ಮಿದಂ ಪುಂಸೋ ಭೋಗಾಯೈವ ವಿನಿರ್ಮಿತಂ ।
ಭೋಗಶ್ಚಾಸ್ಯ ಸದಾ ಕ್ರೀಡಾ ನ ದುಃಖಾಯ ಕದಾಚನ ॥೨೫॥

ವಿಶ್ವಾಧಿಕೋ ಮಹಾನಂದಃ ಸ್ವತಂತ್ರೋ ನಿರುಪದ್ರವಃ ।
ಅಸಕ್ತಃ ಸರ್ವದೋಷೈಶ್ಚ ಕಥಂ ದುಃಖೀ ಭವೇದ್ಧರಃ ॥೨೬॥

ಸ ನ ಜೀವಃ ಶಿವಾದನ್ಯೋ ಯೋ ಭುಂಕ್ತೇ ಕರ್ಮಣಾಂ ಫಲಂ ।
ಭೇದಾ ಭಾವಾಚ್ಚಿತಶ್ಚೇತ್ಯಂ ನ ಕರ್ಮಫಲ ಮರ್ಹತಿ ॥೨೭॥

ದಿಗಳನ್ನು ಬಿಟ್ಟು ಉಪರತವಾಗಲು (ವಿಶ್ರಾಂತವಾಗಲು) ತನುಸ್ಸೆಂಬ ಭಾವರೂಪಾ ಜ್ಞಾನದಿಂದ ಆವೃತನಾಗಿದ್ದರೂ ಸ್ವಸ್ವರೂಪಭೂತವಾದ ಆನಂದವನ್ನು ಮುಗ್ಧಸಾಕ್ಷಾತ್ಕಾರಮಾಡಿಕೊಳ್ಳುತ್ತಾನೆ. ಅವನೇ ಮೊದಲಿನ ಕ್ರಿಯಾಸಂಬಂಧದಿಂದ ಜೀವರೂಪದಿಂದ ಪ್ರಕಾಶಿಸಿ ಜಾಗ್ರದವಸ್ಥೆಯನ್ನಾಗಲೀ ಸ್ವಪ್ನಾವಸ್ಥೆಯನ್ನಾಗಲೀ ಪಡೆಯುತ್ತಾನೆ. ॥೨೩-೨೪॥

ಜಾಗ್ರತ್, ಸ್ವಪ್ನ, ಸುಷುಪ್ತಿಗಳೆಂಬ ಮೂರು ಅವಸ್ಥಾನಗಳು ಜೀವಪುರುಷನ ಭೋಗಕ್ಕಾಗಿ ಪರಮೇಶ್ವರನಿಂದ ರಚಿಸಲ್ಪಟ್ಟಿವೆ. ಶಿವನಿಗೆ ಸ್ವರ್ಗನರಕಾದಿ ಸಕಲ ಸುಖದುಃಖೋಪಭೋಗವೂ ಸಹ ಕ್ರೀಡಾರೂಪವಾಗಿರುತ್ತದೆಯೇ ಹೊರತು ದುಃಖಗಳಿಗೆ ಹೇತುವಲ್ಲ. ॥೨೫॥

ಪರಮಾತ್ಮನು ಆರೋಪಿತವಾದ ಜಗತ್ತಿಗಿಂತಲೂ ಅಧಿಷ್ಠಾನನಾಗಿ ಅಧಿಕನಾಗಿರುತ್ತಾನೆ. ಇಂತಹ ಪರಮಾತ್ಮನಿಗೆ ವಾಸ್ತವವಾದ (ಸತ್ಯವಲ್ಲದ) ಭೋಗವು ಹೇಗೆ ದುಃಖಹೇತುವಾಗುತ್ತದೆ? ಮತ್ತು ಮಹಾನಂದನಾಗಿಯೂ, ಸರ್ವ ವಿಷಯಗಳಲ್ಲಿಯೂ ಸ್ವತಂತ್ರನಾಗಿಯೂ, ಯಾವ ಉಪದ್ರವಗಳಿಲ್ಲದೆಯೂ, ಸಮಸ್ತ ದೋಷಗಳಿಲ್ಲದವನೂ ಸಹ ಆಗಿರುತ್ತಾನೆ. ಇಂತಹ ಹರನಿಗೆ ವೈಷಯಿಕಸುಖೋಪಭೋಗವು ಲೀಲಾಮಾತ್ರವಾದುದೇ ವಿನಾ ದುಃಖಹೇತುವಾದುದಲ್ಲ. ॥೨೬॥

ಕರ್ಮಫಲಗಳನ್ನು ಅನುಭವಿಸತಕ್ಕ ಜೀವನೂ ಸಹ ಈಶ್ವರನಿಗಿಂತಲೂ ಬೇರೆಯಾದವನಲ್ಲವು. ಚಿನ್ಮಾತ್ರರಾದ ಅವರಲ್ಲಿ ಭೇದವೇ ಇಲ್ಲ. ಈ ಚಿತ್ಸ್ವರೂಪವು

ಅತಃ ಸರ್ವ ಜಗತ್ಸಾಕ್ಷೀ ಚಿದ್ರೂಪಃ ಪರಮೇಶ್ವರಃ ।
ಅದ್ವಿತೀಯೋ ಮಹಾನಂದಃ ಕ್ರೀಡಯಾ ಭೋಗಮರ್ಹತಿ ॥೨೮॥

ಧಾಮತ್ರಯ ಮಿದಂ ಶಂಭೋಃ ನ ದುಃಖಾಯ ಕದಾಚನ ।
ಕ್ರೀಡಾರಾಮ ತಯಾ ಭಾತಿ ನ ಚೋದ್ಯಾಹೋರ್ಽ ಮಹೇಶ್ವರಃ ॥೨೯॥

ಇದಂ ಧಾಮತ್ರಯಂ ಶಂಭೋಃ ವಿಭೇದೇನ ನ ವಿದ್ಯತೇ ।
ಶಂಭುರೇವ ತಥಾ ಭಾತಿ ನ ಹ್ಯನ್ಯತ್ಪರಮೇಶ್ವರಾತ್ ॥೩೦॥

ಜಾಗ್ರತ್ಸ್ವಪ್ನಸುಷುಪ್ತ್ಯಾಖ್ಯಾವಸ್ಥಾ ರೂಪೇಣ ಭಾತಿ ಯಃ ।
ಸ ವಿಶ್ವ ತೈಜಸ ಪ್ರಾಜ್ಞ ಸಮಾಖ್ಯಃ ಕ್ರಮಶೋ ಭವೇತ್ ॥೩೧॥

ಜೀವೇಶ್ವರರಲ್ಲಿ ಇರುವುದರಿಂದ ಅವರು ಅಭಿನ್ನರೇ ಸರಿ. ಕರ್ಮಫಲವಾದರೋ ಚಿತ್ತಿಗೆ ವಿಷಯವಾದುದರಿಂದ ಚಿತ್ತಿನಲ್ಲಿ ಅಧ್ಯಸ್ತವಾಗಿ ಮಿಥ್ಯಾಭೂತವಾಗಿದೆ. ಇಂತಹ ಮಿಥ್ಯಾಭೂತವಾದ ವಿಷಯಭೋಗವು ಚಿತ್ಸ್ವರೂಪನಾದ ಆತ್ಮನಿಗೆ ವಾಸ್ತವವಾದುದು ಹೇಗೆ ಆದೀತು ? ॥೨೭॥

ಆದುದರಿಂದ ಸಕಲ ಜಗತ್ತಿಗೆ ಸಾಕ್ಷಿಯಾಗಿಯೂ, ಚಿತ್ಸ್ವರೂಪನಾಗಿಯೂ ಅದ್ವಿತೀಯನಾಗಿಯೂ, ನಿರತಿಶಯಾನಂದನಾಗಿಯೂ, ಇರತಕ್ಕ ಪರಮೇಶ್ವರನು ಲೀಲಾಮಾತ್ರದಿಂದ ವಿಷಯಗಳನ್ನು ಅನುಭವಿಸುತ್ತಾನೆ. ॥೨೮॥

ಜಾಗ್ರತ್ಸ್ವಪ್ನ, ಸುಷುಪ್ತಿಗಳೆಂಬ ಮೂರು ಅವಸ್ಥಾನಗಳು ಈಶ್ವರನಿಗೆ ಕ್ರೀಡಾರ್ಥವಾದ ಉದ್ಯಾನಗಳಂತಿರುತ್ತವೆ. ಆಪ್ತಕಾಮನಾದ ಅವನಿಗೆ ಅದರಲ್ಲಿ ಏನೂ ಆದರಪ್ರಯೋಜನವಿಲ್ಲ. ಆದುದರಿಂದ ಪರಮೇಶ್ವರನಿಗೆ ಭೋಗಪ್ರಸಕ್ತಿಯೇ ಇರುವುದಿಲ್ಲ. ॥೨೯॥

ಈ ಮೂರು ಅವಸ್ಥೆಗಳೂ ಸಹ ಶಂಭುವಿಗಿಂತಲೂ ಬೇರೆಯಾಗಿಲ್ಲ. ಈಶ್ವರನೇ ಆ ಅವಸ್ಥಾರೂಪವಾಗಿ ಕಾಣುತ್ತಾನೆ. ಸಮಸ್ತವೂ ಶಂಭುವಿಗಿಂತಲೂ ಬೇರೆಯಾಗಿಲ್ಲವು. ಆದುದರಿಂದ ದ್ವೈತಾಪಾದನೆಗೆ ಅವಕಾಶವಿಲ್ಲ. ॥೩೦॥

ಯಾವ ಪರಮಾತ್ಮನು ಜಾಗ್ರತ್ಸ್ವಪ್ನಸುಷುಪ್ತಿಗಳೆಂಬ ಅವಸ್ಥಾತ್ರಯಗಳಲ್ಲಿಯೂ ಪ್ರಕಾಶಿಸುತ್ತಾನೆಯೋ ಅವನು ಕ್ರಮವಾಗಿ ವಿಶ್ವತೈಜಸಪ್ರಾಜ್ಞರೆಂಬ ಹೆಸರುಳ್ಳವನಾಗಿರುತ್ತಾನೆ. ॥೩೧॥

ವಿಶ್ವೋ ಹಿ ಸ್ಥೂಲಭುಙ್ನಿತ್ಯಂ ತೈಜಸಃ ಪ್ರವಿವಿಕ್ತಭುಕ್ ।
ಪ್ರಾಜ್ಞ ಸ್ತ್ವಾನಂದ ಭುಕ್ಸಾಕ್ಷೀ ಕೇವಲಃ ಸುಖ ಲಕ್ಷಣಃ ॥೩೨॥

ತ್ರಿಷು ಧಾಮಸು ಯದ್ಭೋಗ್ಯಂ ಭೋಕ್ತಾ ಯಶ್ಚ ಪ್ರಕೀರ್ತಿತಃ ।
ಉಭಯಂ ಬ್ರಹ್ಮ ಯೋ ವೇದ ಸ ಭುಂಜಾನೋ ನ ಲಿಪ್ಯತೇ ॥೩೩॥

ಅಶ್ವಮೇಧ ಸಹಸ್ರಾಣಿ ಬ್ರಹ್ಮಹತ್ಯಾ ಶತಾನಿ ಚ ।
ಕುರ್ವನ್ನಪಿ ನ ಲಿಪ್ಯೇತ ಯದ್ಯೈಕತ್ವಂ ಪ್ರಪಶ್ಯತಿ ॥೩೪॥

ಜೀವರೂಪ ಇವ ಸ್ಥಿತ್ವಾ ಯಃ ಕ್ರೀಡತಿ ಪುರತ್ರಯೇ ।
ನ ಸ ಜೀವಃ ಸದಾ ಶಂಭುಃ ಸತ್ಯಮೇವ ನ ಸಂಶಯಃ ॥೩೫॥

ಅವರಲ್ಲಿ ವಿಶ್ವನೆಂಬುವನು ಜಾಗ್ರದವಸ್ಥೆಗೆ ಸಾಕ್ಷಿಯಾದ ಆತ್ಮನು. ಅವನು ಈಶ್ವರ ಮಾಯೆಯಿಂದ ಸರ್ವಭೋಕ್ತೃಸಾಧಾರಣವಾಗಿ ಸೃಷ್ಟವಾದ ಸ್ಥೂಲ ಪ್ರಪಂಚವನ್ನು ಭೋಗಿಸುವವನಾಗಿರುತ್ತಾನೆ. ಸ್ವಪ್ನಾವಸ್ಥೆಗೆ ಸಾಕ್ಷಿಯಾದ ತೈಜಸ ನೆಂಬ ಆತ್ಮನು ತನ್ನ ಮಾಯೆಯಿಂದ ನಿರ್ಮಿತವಾದ ಅಸಾಧಾರಣವಾದ ವಿಷಯ ಸಮುದಾಯವನ್ನು ಭೋಗಿಸುತ್ತಾನೆ. ಸುಷುಪ್ತ್ಯವಸ್ಥೆಗೆ ಸಾಕ್ಷಿಯಾದ ಪ್ರಾಜ್ಞನೆಂಬ ಆತ್ಮನು ವಿಷಯಗಳು ಮತ್ತು ಅಂತಃಕರಣ ಇವುಗಳೊಂದಿಗೆ ಇಂದ್ರಿಯಗಳು ತಮಗೆ ಕಾರಣವಾದ ಅಜ್ಞಾನದಲ್ಲಿ ವಿಲೀನವಾಗಿರಲು ವಿಕ್ಷೇಪವಿಲ್ಲದುದರಿಂದ ಕೇವಲ ಸುಖರೂಪನಾಗಿ ಸ್ವಕೀಯವಾದ ಆನಂದವನ್ನು ಅನುಭವಿಸುತ್ತಾನೆ. ಈ ರೀತಿಯಾಗಿ ಅವಸ್ಥಾಸಂಬಂಧದಿಂದಲೇ ಪರಮಾತ್ಮನಿಗೆ ಭೋಗವು. ಸ್ವರೂಪತಃ ಪರಶಿವನು ಸಾಕ್ಷಿಯಾಗಿಯೂ, ಕೇವಲ ಜ್ಞಾನರೂಪನಾಗಿಯೂ ಇರುತ್ತಾನೆ. ॥೩೨॥

ಜಾಗ್ರದಾದಿ ಮೂರು ಅವಸ್ಥೆಗಳಲ್ಲಿರತಕ್ಕ ಭೋಗ್ಯವನ್ನೂ ಭೋಕ್ತೃವನ್ನೂ ಈ ಎರಡನ್ನೂ ಸಹ ಯಾವನು ಬ್ರಹ್ಮವೆಂದು ತಿಳಿಯುತ್ತಾನೆಯೋ ಅವನು ಭೋಗ ಗಳಿಂದುಂಟಾಗುವ ಪುಣ್ಯಪಾಪಗಳ ಲೇಪವಿಲ್ಲದವನಾಗುತ್ತಾನೆ. ॥೩೩॥

ಹಿಂದೆ ಹೇಳಿದ ಭೋಕ್ತೃಭೋಗ್ಯವರ್ಗವು ಬ್ರಹ್ಮಸ್ವರೂಪವಾಗಿದೆ. ಎಂದು ಯಾವನು ತಿಳಿಯುವನೋ ಅವನು ಸಹಸ್ರ ಅಶ್ವಮೇಧಯಾಗಗಳನ್ನು ಮಾಡಿದ ಪುಣ್ಯಗಳ, ನೂರು ಬ್ರಹ್ಮಹತ್ಯೆಮಾಡಿದ ಪಾಪಗಳ ಲೇಪಗಳೂ ಸಹ ಅವನಿಗೆ ಉಂಟಾಗಲಾರವು. ॥೩೪॥

ಸಾಕ್ಷಾದೀಶ್ವರನೇ ಜಾಗ್ರದಾದಿ ಮೂರು ಅವಸ್ಥೆಗಳಲ್ಲಿ ಜೀವರೂಪದಿಂದ

ತತಸ್ತು ಜಾತಂ ಸಕಲಂ ವಿಚಿತ್ರಂ ಸತ್ಯವತ್ಸುರಾಃ ।
ಸ ಸತ್ಯೋಽಸತ್ಯ ಸಾಕ್ಷಿತ್ವಾ ತ್ಸಾಕ್ಷಿತ್ವಾಚ್ಚಿತ್ಸುಖಂ ತಥಾ ॥೩೬॥

ಪ್ರೇಮಾಸ್ಪದತ್ವಾ ದದ್ವೈತೋ ಭೇದಾಭಾವಾತ್ಸುರರ್ಷಭಾಃ ।
ತಸ್ಮಿನ್ನೇವ ಲಯಂ ಯಾತಿ ಪುರತ್ರಯ ಮಿದಂ ತತಃ ॥೩೭॥

ನ ಜೀವೋ ಜೀವವದ್ಭಾತಿ ಸಾಕ್ಷಾದ್ಬ್ರಹ್ಮೈವ ಕೇವಲಂ ।
ಅಜ್ಞಾನಾ ಜ್ಜೀವರೂಪೇಣ ಭಾಸತೇ ನ ಸ್ವಭಾವತಃ ॥೩೮॥

ಬ್ರಹ್ಮಣೋ ಜಾಯತೇ ಪ್ರಾಣೋ ಮನಃ ಸರ್ವೇಂದ್ರಿಯಾಣಿಚ ।
ಖಂ ವಾಯುಃ ಜ್ಯೋತಿರಾಪಶ್ಚ ಭೂಮಿ ರ್ವಿಶ್ವಸ್ಯ ಧಾರಿಣೀ ॥೩೯॥

ಇರುವವನಂತೆ ಕ್ರೀಡಿಸುತ್ತಾನೆ. ಜೀವನು ಪರಮಾತ್ಮನಿಗಿಂತ ಬೇರೆಯಲ್ಲವು. ನಾನು ಹೇಳಿದ ವಿಷಯ ಸತ್ಯವಾದುದು. ಈ ವಿಷಯದಲ್ಲಿ ಸಂದೇಹವಿಲ್ಲ. ॥೩೫॥

ಓ ಸುರರೇ, ಅದ್ವಿತೀಯವಾದ ಬ್ರಹ್ಮಸ್ವರೂಪದಿಂದ ಭೋಕ್ತೃಭೋಗ್ಯಾತ್ಮಕವಾದ ವಿಚಿತ್ರವಾದ ಈ ಜಗತ್ತು ಮಾಯಾವಶಾತ್ ಉಂಟಾಗಿ ಸತ್ಯವಾಗಿರುವ ಹಾಗೆ ತೋರುತ್ತದೆ. ವಸ್ತುತಃ ಸತ್ಯವಾಗಿರುವುದಿಲ್ಲ. ಅಸತ್ಯವಾದ ಜಡ ಜಗತ್ತಿಗೆ ಸಾಕ್ಷಿ ಚಿದ್ರೂಪನಾದ ಪರಮಾತ್ಮನು ಸತ್ಯವಾಗಿರುತ್ತಾನೆ. ಪ್ರೇಮಕ್ಕೆ ಆಶ್ರಯನಾದುದರಿಂದ ಸುಖರೂಪವಾಗಿಯೂ, ಹಿಂದೆ ಹೇಳಿದ ರೀತಿಯಾಗಿ ಪರಮಾತ್ಮನಲ್ಲಿ ಯಾವ ಪ್ರಕಾರದಿಂದಲೂ ಭೇದವನ್ನು ನಿರೂಪಿಸಲು ಸಾಧ್ಯವಿಲ್ಲದುದರಿಂದ ಅದ್ವೈತ ಸ್ವರೂಪನಾಗಿಯೂ, ಇರುತ್ತಾನೆ. ಇಂತಹ ಸಚ್ಚಿದಾನಂದ ರೂಪನಾದ ಸಾಕ್ಷಿಯಲ್ಲಿ ಜಾಗ್ರದಾದಿ ಮೂರು ಅವಸ್ಥೆಗಳು ಲೀನವಾಗುತ್ತವೆ. ಅವಸ್ಥಾತ್ರಯವು ಹೀಗೆ ಲೀನವಾದ ಬಳಿಕ ಜೀವನು ಜೀವನಂತೆ ತೋರದೆ ನಿರಸ್ತವಾದ ಉಪಾಧಿಯುಳ್ಳ ಬ್ರಹ್ಮವೇ ಆಗುತ್ತಾನೆ. ಅಜ್ಞಾನರೂಪವಾದ ಉಪಾಧಿಯಿಂದ ಜೀವರೂಪದಿಂದ ತೋರುತ್ತಾನೆಯೇ ಹೊರತು ವಾಸ್ತವಿಕವಾಗಿ ಅಲ್ಲವು. ॥೩೬-೩೭-೩೮॥

ಬ್ರಹ್ಮನಿಂದ ಪ್ರಾಣ, ಮನಸ್ಸು, ಚಕ್ಷುರಾದಿ ಜ್ಞಾನೇಂದ್ರಿಯಗಳೂ, ವಾಗಾದಿ ಕರ್ಮೇಂದ್ರಿಯಗಳೂ, ಜಲ, ತೇಜಸ್ಸು, ವಾಯು, ಆಕಾಶ ಸಮಸ್ತಕ್ಕೂ ಆಶ್ರಯವಾದ ಪೃಥಿವೀ ಇವೆಲ್ಲವೂ ಉಂಟಾಗುತ್ತವೆ. ॥೩೯॥

ಯತ್ಪರಂ ಬ್ರಹ್ಮ ಸರ್ವಾತ್ಮಾ ವಿಶ್ವಸ್ಯಾಯತನಂ ಮಹತ್ ।
ಸೂಕ್ಷ್ಮಾತ್ಸೂಕ್ಷ್ಮತಮಂ ನಿತ್ಯಂ ತತ್ತ್ವಂ ಶಬ್ದಾರ್ಥ ಏವ ಹಿ ॥೪೦॥

ಯಸ್ತ್ವಂ ಶಬ್ದಸ್ಯ ಲಕ್ಷ್ಯಾರ್ಥಃ ಸ ತಚ್ಛಬ್ದಾರ್ಥ ಏವ ಹಿ ।
ತತ್ತ್ವಂ ಶಬ್ದೌ ಸ್ವತಃ ಸಿದ್ಧೇ ಚಿನ್ಮಾತ್ರೇ ಪರ್ಯವಸ್ಯತಃ ॥೪೧॥

ಯಃ ಪದದ್ವಯ ಲಕ್ಷ್ಯಾರ್ಥ ಸ್ತಸ್ಮಿನ್ ಭೇದಃ ಪ್ರಕಲ್ಪಿತಃ ।
ಮಾಯಯಾಽವಿದ್ಯಾತ್ಮಕೋಪಾಧಿ ಭೇದೇನೈವ ನ ವಸ್ತುತಃ ॥೪೨॥

ಸ್ವತಃ ಸಿದ್ಧೈಕತಾಽಜ್ಞಾನಂ ವ್ಯುದಸ್ಯ ಶ್ರುತಿರಾದರಾತ್ ।
ಸ್ವಭಾವ ಸಿದ್ಧಮೇಕತ್ವಂ ಬೋಧಯತ್ಯಧಿಕಾರಿಣಃ ॥೪೩॥

ಸರ್ವಕ್ಕೂ ಆತ್ಮನಾದ ಪರಶಿವನಾದರೋ ಸಮಸ್ತಕ್ಕೂ ಆಶ್ರಯನಾಗಿಯೂ, ಸೂಕ್ಷ್ಮವಾದ ಅವ್ಯಾಕೃತಕ್ಕಿಂತಲೂ, ಸೂಕ್ಷ್ಮನಾಗಿಯೂ, ಅದಕ್ಕೆ ಕಾರಣನಾಗಿಯೂ, ಜೀವವಾಚಿಯಾದ ತ್ವಂ ಪದದ ಅರ್ಥವಾಗಿಯೂ, ಇರುತ್ತಾನೆ. ॥೪೦॥

ದೇಹಾದ್ಯುಪಾಧಿ ವಿಶಿಷ್ಟವಾದ ತ್ವಂ ಶಬ್ದಾರ್ಥವೇ ಜಗತ್ಕಾರಣವಾಚಿಯಾದ ತಚ್ಛಬ್ದಾರ್ಥವಾಗಿದೆ. ಇಲ್ಲಿ ವಿರುದ್ಧಾಂಶವನ್ನು ಬಿಟ್ಟರೆ ಸ್ವತಃಸಿದ್ಧವಾದ ಚಿನ್ಮಾತ್ರದಲ್ಲಿ ಪರ್ಯವಸನ್ನವಾಗುತ್ತದೆ. ॥೪೧॥

ತತ್ ತ್ವಂ ಎಂಬ ಪದದ್ವಯದಿಂದ ವಾಚ್ಯಗತವಾದ ಸಂಸಾರಿತ್ವಾದಿ ವಿರುದ್ಧಾಂಶವನ್ನು ಬಿಟ್ಟು ಲಕ್ಷಣೆಯಿಂದ ಯಾವ ಚಿನ್ಮಾತ್ರಸ್ವರೂಪವಾದ ಅರ್ಥವು ಪ್ರತಿಪಾದಿಸಲ್ಪಡುತ್ತದೆಯೋ ಅದು ಪರಮಾರ್ಥವಾದುದು. ಆ ಚಿತ್ಸ್ವರೂಪದಲ್ಲಿ ಮಾಯಾ ಅವಿದ್ಯಾರೂಪವಾದ ಉಪಾಧಿವಶದಿಂದ ಜೀವೇಶಭೇದವು ಕಲ್ಪಿತವಾಗಿದೆ. ಈ ಭೇದವು ಉಪಾಧಿಪ್ರಯುಕ್ತವಾದುದರಿಂದ ವಾಸ್ತವವಲ್ಲ. ॥೪೨॥

ಶ್ರುತಿಯು ಜೀವೇಶ್ವರರಿಗೆ ಸ್ವತಃಸಿದ್ಧವಾದ ಏಕತ್ವಕ್ಕೆ ಆವರಣವಾದ ಅಜ್ಞಾನವನ್ನು ಹೋಗಲಾಡಿಸಿ ಆದರಪೂರ್ವಕವಾಗಿ ಆ ಏಕತ್ವವನ್ನು ಅಧಿಕಾರಿಗಳಿಗೆ ಬೋಧಿಸುತ್ತದೆ. ॥೪೩॥

ಜಾಗ್ರತ್ಸ್ವಪ್ನ ಸುಷುಪ್ತ್ಯಾದಿ ಪ್ರಪಂಚತ್ವೇನ ಭಾತಿ ಯತ್ ।
ತದ್ಬ್ರಹ್ಮಾಽಹಮಿತಿ ಜ್ಞಾತ್ವಾ ಸರ್ವಬಂಧೈಃ ಪ್ರಮುಚ್ಯತೇ ॥೪೪॥

ಯಸ್ತು ಬ್ರಹ್ಮ ವಿಜಾನಾತಿ ಸ್ವಾತ್ಮನಾ ಸುದೃಢಂ ನರಃ ।
ತಸ್ಯ ಸ್ವಾನು ಭವಸ್ತ್ವೇವಂ ಸ್ವಭಾವಾದನುವರ್ತತೇ ॥೪೫॥

ತ್ರಿಷು ಧಾಮಸು ಯದ್ಭೋಗ್ಯಂ ಭೋಕ್ತಾ ಭೋಗಶ್ಚ ಯಸ್ತಥಾ ।
ತೇಭ್ಯೋ ವಿಲಕ್ಷಣಃ ಸಾಕ್ಷೀ ಚಿನ್ಮಾತ್ರೋಽಹಂ ಸದಾಶಿವಃ ॥೪೬॥

ಮಯ್ಯೇವ ಸಕಲಂ ಜಾತಂ ಮಯಿ ಸರ್ವಂ ಪ್ರತಿಷ್ಠಿತಂ ।
ಮಯಿ ಸರ್ವಂ ಲಯಂ ಯಾತಿ ತದ್ಬ್ರಹ್ಮಾದ್ವಯ ಮಸ್ಮ್ಯಹಂ ॥೪೭॥

ಅಣೋರಣೀಯಾ ನಹಮೇವ
ತದ್ವನ್ಮಹಾನಹಂ ವಿಶ್ವಮಹಂ ವಿಶುದ್ಧಃ ।
ಪುರಾತನೋಽಹಂ ಪುರುಷೋಽಹ ಮೀಶೋ
ಹಿರಣ್ಮಯೋಽಹಂ ಶಿವರೂಪಮಸ್ಮಿ ॥೪೮॥

ಜಾಗ್ರದಾದಿ ಅವಸ್ಥೆಗಳಲ್ಲಿ ಯಾವುದು ತೋರುವುದೋ ಆ ಪದಾರ್ಥಗಳ ಸ್ವರೂಪವಾದ ಬ್ರಹ್ಮವೇ ನಾನು. ಎಂದು ಯಾವನು ತಿಳಿಯುವನೋ ಅವನು ಸಮಸ್ತ ಶೋಕಮೋಹಾದಿ ಸಂಬಂಧಗಳಿಂದ ಬಿಡಲ್ಪಡುತ್ತಾನೆ. ಯಾವನಿಗೆ ನಾನೇ ಬ್ರಹ್ಮಸ್ವರೂಪನೆಂಬ ನಿಶ್ಚಯವಿರುತ್ತದೆಯೋ ಅವನಿಗೆ ನಾನೇ ಬ್ರಹ್ಮನೆಂಬ ಅನುಭವವು ಸ್ವಾಭಾವಿಕವಾಗಿ ಅನುವರ್ತಿಸುತ್ತದೆ. ||೪೪-೪೫||

ಜಾಗ್ರದಾದಿ ಅವಸ್ಥೆಗಳಲ್ಲಿರತಕ್ಕ ಭೋಗ್ಯವಸ್ತುಗಳಿಗಿಂತಲೂ, ಭೋಕ್ತನಿಗಿಂತಲೂ, ಭೋಗಕ್ಕಿಂತಲೂ ಸಹ ಚಿನ್ಮಾತ್ರನಾದ ಸಾಕ್ಷಿಯಾದ ಸದಾಶಿವನು ವಿಲಕ್ಷಣನಾಗಿರುತ್ತಾನೆ. ಅಂತಹ ಸದಾಶಿವನೇ ನಾನಾಗಿರುವೆನು. ಬ್ರಹ್ಮಸ್ವರೂಪದಲ್ಲಿ ಸಕಲವೂ ಹುಟ್ಟಿ ಅಲ್ಲಿಯೇ ಸ್ಥಿತಿಯನ್ನು ಹೊಂದಿ ಲಯವಾಗುತ್ತದೆ. ಅಂತಹಅದ್ವಿತೀಯ ಬ್ರಹ್ಮನೇ ನಾನಾಗಿರುತ್ತೇನೆ. ಎಂದು ಜ್ಞಾನಿಯು ತಿಳಿಯುತ್ತಾನೆ. ||೪೬-೪೭||

ಬ್ರಹ್ಮಾತ್ಮೈಕ್ಯ ಸಾಕ್ಷಾತ್ಕಾರವುಳ್ಳ ವಿದ್ವಾಂಸನಾದ ಜೀವನ್ಮುಕ್ತನ ಅನುಸಂಧಾನ ಪ್ರಕಾರವನ್ನು ಹೇಳುತ್ತಾನೆ. ನಾನು ಅಣುವಾದ ಪದಾರ್ಥಕ್ಕಿಂತ ಅಣುವಾಗಿಯೂ, ಮಹತ್ತಾದ ಆಕಾಶಾದಿಗಳಿಗಿಂತಲೂ ಮಹತ್ತಾದವನಾಗಿಯೂ,

ಅಪಾಣಿ ಪಾದೋಽಹ ಮಚಿಂತ್ಯಶಕ್ತಿಃ
ಪಶ್ಯಾಮ್ಯ ಚಕ್ಷುಶ್ಚ ಶೃಣೋತ್ಯಕರ್ಣಃ ।
ಅಹಂ ವಿಜಾನಾಮಿ ವಿವಿಕ್ತರೂಪೋ ।
ನ ಚಾಸ್ತಿವೇತ್ತಾ ಮಮ ಚಿತ್ಸದಾಽಹಂ ॥೪೯॥

ವೇದೈರನೇಕೈ ರಹಮೇವ ವೇದ್ಯೋ
ವೇದಾಂತಕೃದ್ವೇದ ವಿದೇವ ಚಾಹಂ ।
ನ ಪುಣ್ಯಪಾಪೇ ಮಮ ನಾಸ್ತಿ ನಾಶೋ
ನ ಜನ್ಮದೇಹೇಂದ್ರಿಯ ಬುದ್ಧಯಶ್ಚ ॥೫೦॥

ನ ಭೂಮಿರಾಪೋ ಮಮ ನೈವ ವಹ್ನಿ
ರ್ನಚಾನಿಲೋ ಮೇಽಸ್ತಿ ನ ಚಾಂಬರಂ ಚ ।

ಸಮಸ್ತ ಪ್ರಪಂಚಸ್ವರೂಪನಾಗಿಯೂ, ಅವಿದ್ಯಾಸಂಬಂಧವಿಲ್ಲದುದರಿಂದ ಶುದ್ಧನಾಗಿಯೂ, ಉತ್ಪತ್ತಿಯಿಲ್ಲದೇ ಪುರಾಣನಾಗಿಯೂ, ಪುರೀತತ್ತಿನಲ್ಲಿರತಕ್ಕ ಪುರುಷನಾಗಿಯೂ, ಸಮಸ್ತಕ್ಕೂ ಈಶನಾಗಿಯೂ, ಸುವರ್ಣದವರ್ಣದಂತೆ ಏಕರೂಪನಾಗಿಯೂ ಇರತಕ್ಕ ಶಿವರೂಪನೇ ಆಗಿರುತ್ತೇನೆ. ॥೪೮॥

ನಾನು ಪಾಣಿಪಾದಗಳಿಲ್ಲದವನಾಗಿಯೂ, ಚಿಂತಿಸಲೂ ಸಹ ಸಾಧ್ಯವಿಲ್ಲದ ಶಕ್ತಿಯುಳ್ಳವನೂ ಆಗಿದ್ದೇನೆ. ಮತ್ತು ಚಕ್ಷುರಿಂದ್ರಿಯವಿಲ್ಲದಿದ್ದಾಗ್ಯೂ ನೋಡುವವನಾಗಿಯೂ, ಶ್ರೋತ್ರೇಂದ್ರಿಯವಿಲ್ಲದಿದ್ದಾಗ್ಯೂ ಕೇಳುವವನಾಗಿಯೂ ಇರುತ್ತೇನೆ. ನಾನು ಸಮಸ್ತವನ್ನೂ ತಿಳಿಯುವವನಾಗಿಯೂ, ವಿಷಯಸಂಪರ್ಕವಿಲ್ಲದ ಸ್ವರೂಪವುಳ್ಳವನಾಗಿಯೂ ಇರುತ್ತೇನೆ. ನನ್ನನ್ನು ತಿಳಿಯುವವನು ಯಾವನೂ ಇಲ್ಲ. ನಾನು ಯಾವಾಗಲೂ ಚಿತ್ಸ್ವರೂಪನಾಗಿರುವೆನು. ॥೪೯॥

ಸಮಸ್ತ ವೇದಗಳಿಂದ ತಿಳಿಯಲ್ಪಡುವವನು ನಾನೇ ಆಗಿರುತ್ತೇನೆ. ವೇದಾಂತಾರ್ಥದ ಉಪದೇಶದ ಸಂಪ್ರದಾಯ ಪ್ರವರ್ತಕನೂ, ಸಮಸ್ತ ವೇದಗಳ ಸಾರವನ್ನು ತಿಳಿದವನಾಗಿಯೂ, ಇರುತ್ತೇನೆ. ನನಗೆ ಪುಣ್ಯಪಾಪಗಳೂ, ಶರೀರಾದಿಗಳೂ ಇಂದ್ರಿಯ, ಅಂತಃಕರಣ, ಬುದ್ಧಿ, ಇವೆಲ್ಲವೂ ಇರುವುದಿಲ್ಲ. ॥೫೦॥

ನನ್ನಲ್ಲಿ ಪೃಥಿವೀ, ಜಲ, ತೇಜಸ್ಸು, ವಾಯು, ಆಕಾಶಗಳೆಂಬ ಪಂಚಭೂತಗಳೂ, ಇರುವುದಿಲ್ಲ. ನಾನು ಯಾವಾಗಲೂ ಎಲ್ಲರಲ್ಲಿಯೂ, ಅಹಂ (ನಾನು) ಎಂಬು

ಸದಾಹ ಮೇವಾಹಮಿತಿ ಸ್ಫುರಾಮಿ ।
ಸ್ವಭಾವ ತಶ್ಚೇದಮಿತಿ ಸ್ಫುರಾಮಿ ॥೫೧॥

ಅಭಾತರೂಪೇಣ ತಥೈವ ಸರ್ವದಾ
ವಿಭಾತರೂಪೇಣ ಚ ಭಾನ ರೂಪತಃ ।
ಅಭಾನ ರೂಪೇಣ ಚ ಸರ್ವರೂಪತಃ
ಸ್ಫುರಾಮಿ ದೇವೋಽಹಮತಃ ಪುರಾತನಃ ॥೫೨॥

ಏವಂ ವಿದಿತ್ವಾ ಪರಮಾತ್ಮರೂಪಂ
ಗುಹಾಶಯಂ ನಿಷ್ಕಲಮದ್ವಿತೀಯಂ ।
ಸಮಸ್ತಭಾನಂ ಸದಸದ್ವಿಹೀನಂ
ಪ್ರಯಾತಿ ಶುದ್ಧಂ ಪರಮಾತ್ಮರೂಪಂ ॥೫೩॥

ಅತಶ್ಚ ವೇದಾಂತ ವಚೋಭಿ ರಂಜಸಾ
ಮುಮುಕ್ಷುಭಿರ್ನಿತ್ಯಮಶೇಷ ನಾಯಕಃ ।
ಗುರೂಪದೇಶೇನ ಚ ತರ್ಕತಸ್ತಥಾ ।
ವಿಚಿಂತನೀಯಶ್ಚ ವಿಶೇಷತಃ ಶಿವಃ ॥೫೪॥

ದಾಗಿ ಪ್ರಕಾಶಮಾನವಾಗಿಯೂ, ವಿಷಯುಗಳಲ್ಲಿ ಸ್ವಭಾವವಾಗಿ ಇದಂ(ಇದು) ಎಂಬು ದಾಗಿ ಪ್ರಕಾಶಮಾನವಾಗಿಯೂ, ಇರುವೆನು. ॥೫೧॥

ನಾನು ಯಾವಾಗಲೂ ಇನ್ನೊಬ್ಬರಿಗೆ ತಿಳಿಯದೆಯೂ, ನಾನು ಮಾತ್ರ ಭಾನ ಮಾತ್ರದಿಂದ ಸಮಸ್ತ ವಸ್ತುಗಳಲ್ಲಿ ತೋರುವವನಾಗಿಯೂ ಇರುತ್ತೇನೆ. ಆ ಭಾನ ರೂಪದಿಂದ ಸರ್ವರೂಪನಾಗಿಯೂ, ಇರುವೆನು. ಉತ್ಪತ್ತಿಯಿಲ್ಲದ ದೇವನಾದ ನಾನು ಯಾವಾಗಲೂ ಸ್ಫುರಿಸುತ್ತೇನೆ. ॥೫೨॥

ಈ ರೀತಿಯಾಗಿ ಗುಹೆಯೆಂಬ ಹೃದಯಾಕಾಶದಲ್ಲಿ ಅಭಿವ್ಯಕ್ತವಾದ ನಿರವಯುವವಾದ ಅದ್ವಿತೀಯನಾದ ಪರಮಾತ್ಮಸ್ವರೂಪವನ್ನು ಯಾವನು ತಿಳಿಯುವನೋ ಅವನು ಸಮಸ್ತಕ್ಕೂ ಭಾನನಾಗಿಯೂ ಸದಸದಾದಿ ಸಂಕಲ್ಪಶೂನ್ಯನಾಗಿಯೂ, ಶುದ್ಧನಾಗಿಯೂ ಇರತಕ್ಕ ಪರಮಾತ್ಮನೇ ಆಗುತ್ತಾನೆ. ॥೫೩॥

ಆದುದರಿಂದ ಮುಮುಕ್ಷುವು ವೇದಾಂತವಾಕ್ಯಗಳಿಂದಲೂ, ಗುರೂಪದೇಶ

ಕೈವಲ್ಯೋಪನಿಷತ್ಪರಾ ಪರಕೃಪಾಯುಕ್ತಾ ಯದುಚ್ಚೈರ್ಮುದಾ ।
ಪ್ರೋವಾಚ ಪ್ರಥಿತೌಜಸೈರಪಿ ಹರಿ ಬ್ರಹ್ಮಾದಿಭಿಶ್ಚಾಽಽದೃತಂ ॥
ಹೇ ದೇವಾ ಅಹಮುಕ್ತವಾನತಿ ಶುಭ ಬ್ರಹ್ಮಾಪರೋಕ್ಷಾಯ ತ ।
ತ್ಸರ್ವೇಷಾಮಧಿಕಾರಿಣಾಂ ಮತಮಿದಂ ವಿತ್ತಾತಿಭಕ್ತ್ಯಾ ಸಹ ॥೫೫॥

ಇತಿ ಶ್ರೀಸ್ಕಾಂದಪುರಾಣೇ ಸೂತಸಂಹಿತಾಯಾಂ ಚತುರ್ಥಸ್ಯ
ಯಜ್ಞವೈಭವಖಂಡಸ್ಯೋಪರಿಭಾಗೇ ಸೂತಗೀತಾ ಸೂಪನಿಷತ್ಸು
ಕೈವಲ್ಯೋಪನಿಷದ್ವಿವರಣೇ ತತ್ವವೇದನ ವಿಧಿರ್ನಾಮ
ಅಷ್ಟಮೋಽಧ್ಯಾಯಃ

ದಿಂದಲೂ, ಯುಕ್ತಿಗಳಿಂದಲೂ, ಸಹ ಸಮಸ್ತಕ್ಕೂ ಒಡೆಯನಾದ ಶಿವನನ್ನು ನಿತ್ಯವೂ ವಿಶೇಷವಾಗಿ ಚಿಂತಿಸಬೇಕು. ||೫೪||

ಈ ಕೈವಲ್ಯೋಪನಿಷತ್ತೆಂಬುದು ಪ್ರಾಣಿಗಳಲ್ಲಿ ದಯೆಯಿಂದ ಬ್ರಹ್ಮಾತ್ಮೈಕ್ಯವನ್ನು ಪ್ರತಿಪಾದಿಸುತ್ತದೆ. ಇದರಲ್ಲಿ ಹೇಳಿದ ವಿಷಯವನ್ನು ತೇಜಸ್ವಿಗಳೆಂದು ಪ್ರಸಿದ್ಧರಾದ ಹರಿಬ್ರಹ್ಮಾದಿಗಳೂ ಸಹ ಆದರಿಸಿರುತ್ತಾರೆ. ಓ ದೇವತೆಗಳೇ, ನಾನು ನಿಮಗೆ ಅತ್ಯಂತ ಮಂಗಲಕರವಾದ ಬ್ರಹ್ಮಾಪರೋಕ್ಷ ಜ್ಞಾನಕ್ಕೋಸ್ಕರವಾಗಿ ಇದನ್ನು ಹೇಳಿರುವೆನು. ಸಮಸ್ತ ಅಧಿಕಾರಿಗಳೂ ಸಹ ಈ ವಿಷಯವನ್ನು ತಿಳಿಯಬೇಕು. ನೀವು ಬಹಳ ಭಕ್ತಿಯಿಂದ ನಾನು ಹೇಳಿದ ವಿಷಯವನ್ನು ತಿಳಿಯಿರಿ. ||೫೫||

ಇಲ್ಲಿಗೆ ಸ್ಕಾಂದಪುರಾಣದಲ್ಲಿ ಸೂತಸಂಹಿತೆಯಲ್ಲಿ ನಾಲ್ಕನೆಯ ಭಾಗವಾದ
ಯಜ್ಞವೈಭವಖಂಡದಲ್ಲಿ ಎರಡನೆಯ ಭಾಗದಲ್ಲಿರುವ, ಉಪನಿಷತ್ತುಗಳಂತಿರುವ
ಬ್ರಹ್ಮಗೀತೆಯಲ್ಲಿ ಕೈವಲ್ಯೋಪನಿಷತ್ತಿನ ಅರ್ಥವಾದ ತತ್ವವನ್ನು ವಿವರಿಸಿರುವ
ಎಂಟನೆಯ ಅಧ್ಯಾಯವು ಮುಗಿದುದು.

|| ಶ್ರೀಃ ||

ಅಥಾಸ್ಯಾಃ ಶ್ರೀಮತ್ಸ್ಕಾಂದಪುರಾಣಾಂತರ್ಗತ ಸೂತಸಂಹಿತಾಯಾಶ್ಚತುರ್ಥಸ್ಯ ಯಜ್ಞವೈಭವಖಂಡಸ್ಯೋಪರಿಭಾಗೇ ಬ್ರಹ್ಮಗೀತಾ

|| ನವಮೋಽಧ್ಯಾಯಃ ||

ಒಂಬತ್ತನೆಯ ಅಧ್ಯಾಯವು

|| ಬ್ರಹ್ಮೋವಾಚ ||

ಪ್ರತ್ಯಗ್ರೂಪಃ ಶಿವಃ ಸಾಕ್ಷಾತ್ಪರಾನಂದಃ ಸ್ವಲಕ್ಷಣಃ ।
ಪರಪ್ರೇಮಾಸ್ಪದತ್ವೇನ ಪ್ರತೀತತ್ವಾತ್ಸುರರ್ಷಭಾಃ ।
ಪರಪ್ರೇಮಾಸ್ಪದಾನಂದಃ ಸುರಾ ಆನಂದ ಏವ ಹಿ ||೧||

ಬ್ರಹ್ಮನು ಹೇಳಿದನು—ಬೃಹದಾರಣ್ಯಕೋಪನಿಷತ್ತೂ ಸಹ ಬ್ರಹ್ಮಾತ್ಮೈಕ್ಯ ವನ್ನು ಬೋಧಿಸುತ್ತದೆಯೆಂಬ ವಿಚಾರವನ್ನು ಎರಡು ಅಧ್ಯಾಯಗಳಲ್ಲಿ ಹೇಳುತ್ತಾನೆ. ಅದರಲ್ಲಿ ಮೈತ್ರೇಯೀ ಬ್ರಾಹ್ಮಣದಲ್ಲಿ ಅಮೃತತ್ವಕ್ಕೆ ಸಾಧನವಾದ ಅದ್ವಿತೀಯಾತ್ಮ ದರ್ಶನವೂ, ಅದಕ್ಕೆ ಸಾಧನಗಳಾದ ಶ್ರವಣಾದಿಗಳೂ ಸಹ ಪ್ರತಿಪಾದಿಸಲ್ಪಟ್ಟಿವೆ. ಆದುದರಿಂದ ಅದು ಸಂಪೂರ್ಣ ಉಪದೇಶವಾದುದರಿಂದ ಅದರ ಅರ್ಥವನ್ನು ಮೊದಲು ಸಂಗ್ರಹಿಸುತ್ತಾನೆ. ಎಲೈ ಸುರಶ್ರೇಷ್ಠರೇ, "ಅಹಂ" ಎಂದು ಪ್ರತ್ಯಗ್ರೂಪ ನಾಗಿ ಭಾಸಮಾನನಾದ ನಿರತಿಶಯಾನಂದರೂಪನಾದ ಪರಶಿವನು ಹೆಚ್ಚಾದ ಪ್ರೇಮಕ್ಕೆ ಆಶ್ರಯನಾಗಿರುತ್ತಾನೆ. ಪುತ್ರ ವಿತ್ತಾದಿಗಳಿಂದ ಉಂಟಾಗುವ ಆನಂದವು ಆತ್ಮಾನಂದ ಕ್ಕೋಸ್ಕರವಾಗಿರುವುದರಿಂದ ಅದು ಸಾಕ್ಷಾತ್ ಆನಂದವಾಗಲಾರದು. ನಿರತಿಶಯ ವಾದ ಪ್ರೇಮಕ್ಕೆ ಆಶ್ರಯವಾದ ಆನಂದವೇ ಆತ್ಮಾನಂದವು. ಅದೇ ಪ್ರಧಾನ ವಾದುದು. ||೧||

ಪ್ರಿಯೋ ಭವತಿ ಭಾರ್ಯಾಯಾಃ ಪತಿಃ ಸೋಽಯಂ ಸುರರ್ಷಭಾಃ ॥೨॥

ಪತಿರ್ನ ಪತ್ಯುಃ ಕಾಮಾಯ ಪ್ರಿಯೋ ಭವತಿ ಸರ್ವಥಾ ।
ಕಿಂ ತ್ವಾತ್ಮನಸ್ತು ಕಾಮಾಯ ತತಃ ಪ್ರಿಯತಮಃ ಸ್ವಯಂ ॥೩॥

ಜಾಯಾಯಾಸ್ತು ನ ಕಾಮಾಯ ನ ಹಿ ಜಾಯಾ ಪ್ರಿಯಾ ಮತಾ ।
ಕಿಂ ತ್ವಾತ್ಮನಸ್ತು ಕಾಮಾಯ ತತಃ ಪ್ರಿಯತಮಃ ಸ್ವಯಂ ॥೪॥

ಪುತ್ರಾಣಾಂ ತು ನ ಕಾಮಾಯ ಪ್ರಿಯಾಃ ಪುತ್ರಾ ಭವಂತಿ ಚ ।
ಕಿಂ ತ್ವಾತ್ಮನಸ್ತು ಕಾಮಾಯ ತತಃ ಪ್ರಿಯತಮಃ ಸ್ವಯಂ ॥೫॥

ಬ್ರಹ್ಮಣಸ್ತ್ವೇವ ಕಾಮಾಯ ನ ಬ್ರಹ್ಮ ಭವತಿ ಪ್ರಿಯಂ ।
ಕಿಂ ತ್ವಾತ್ಮನಸ್ತು ಕಾಮಾಯ ತತಃ ಪ್ರಿಯತಮಃ ಸ್ವಯಂ ॥೬॥

ಆತ್ಮನು ಪರಮಪ್ರೇಮಾಶ್ರಯನೆಂಬ ವಿಷಯವು "ನವಾ ಅರೇ ಪತ್ಯುಃ ಕಾಮಾಯ ಪತಿಃ ಪ್ರಿಯೋಭವತಿ" ಎಂಬ ಬೃಹದಾರಣ್ಯಕ ಶ್ರುತಿಯಲ್ಲಿ ೨. ೪. ೫. ಅನೇಕ ಪರ್ಯಾಯಗಳಿಂದ ಪತಿಜಾಯಾ ಪುತ್ರವಿತ್ತಾದಿಗಳೂ ಆತ್ಮನಿಗೆ ಶೇಷಗಳಾದುದರಿಂದ ಪ್ರಿಯವಾದುವುಗಳೆಂದು ಹೇಳಿ ಆತ್ಮನಿಗೆ ಎಲ್ಲವುಗಳಿಂದಲೂ ಪ್ರಿಯತಮತ್ವವನ್ನು ಹೇಳಿದೆ. ಅದನ್ನು ಪ್ರತಿಪಾದಿಸುತ್ತಾನೆ.—ಎಲೈ ದೇವಶ್ರೇಷ್ಠರೇ, ಭಾರ್ಯೆಗೆ ಪತಿಯು ಪ್ರಿಯನಾಗುತ್ತಾನೆಂಬುದು ಪತಿಯ ಕಾಮಕ್ಕೋಸ್ಕರವಲ್ಲವು. ಮತ್ತೇನೆಂದರೆ ಭಾರ್ಯೆಯ ಆತ್ಮಸುಖಕ್ಕೋಸ್ಕರವಾಗಿ ಪತಿಯು ಪ್ರೀತಿಪಾತ್ರನಾಗುತ್ತಾನೆ. ಆದುದರಿಂದ ಪತಿಯು ತನ್ನ ಆತ್ಮನಿಗೆ ಶೇಷನಾದುದರಿಂದ ಪತಿಯು ಪ್ರಿಯನಾಗಿರುತ್ತಾನೆ. ||೨-೩||

ಪತಿಗೆ ಜಾಯೆಯು ಪ್ರಿಯಳೆಂಬುದು ಅವಳ ಸುಖಕ್ಕಲ್ಲವು. ಮತ್ತೇನೆಂದರೆ ಪತಿಯ ಆತ್ಮನ ಸುಖಕ್ಕೋಸ್ಕರ ಜಾಯೆಯು ಪ್ರಿಯಳಾಗಿರುತ್ತಾಳೆ. ಹಾಗೆಯೇ ಪುತ್ರರಲ್ಲಿರತಕ್ಕ ಪ್ರೀತಿಯು ಪುತ್ರರ ಸುಖಕ್ಕಲ್ಲದೇ ತನ್ನ ಸುಖಕ್ಕೋಸ್ಕರ ಅವರಲ್ಲಿ ವಿಶ್ವಾಸವು. ||೪-೫||

ಬ್ರಾಹ್ಮಣ ಜಾತಿಯನ್ನು ಅಪೇಕ್ಷಿಸುವುದೆಂಬುದು ಅದರ ಹಿತಕ್ಕಾಗಿ ಅಲ್ಲವು. ಮತ್ತೇನೆಂದರೆ ತನ್ನ ಹಿತಕ್ಕಾಗಿ. ಅದಕ್ಕಿಂತಲೂ ಆತ್ಮನು ಪ್ರಿಯತಮನು. ಅದರಿಂ

ಕ್ಷತ್ರಸ್ಯೈವ ತು ಕಾಮಾಯ ನ ಕ್ಷತ್ರಂ ಭವತಿ ಪ್ರಿಯಂ ।
ಕಿಂ ತ್ವಾತ್ಮನಸ್ತು ಕಾಮಾಯ ತತಃ ಪ್ರಿಯತಮಃ ಸ್ವಯಂ ॥೭॥

ವಿತ್ತಸ್ಯೈವ ತು ಕಾಮಾಯ ನ ವಿತ್ತಂ ಭವತಿ ಪ್ರಿಯಂ ।
ಕಿಂ ತ್ವಾತ್ಮನಸ್ತು ಕಾಮಾಯ ತತಃ ಪ್ರಿಯತಮಃ ಸ್ವಯಂ ॥೮॥

ಲೋಕಾನಾಮೇವ ಕಾಮಾಯ ನ ಭವಂತಿ ಪ್ರಿಯಾಶ್ಚ ತೇ ।
ಕಿಂ ತ್ವಾತ್ಮನಸ್ತು ಕಾಮಾಯ ತತಃ ಪ್ರಿಯತಮಃ ಸ್ವಯಂ ॥೯॥

ದೇವಾನಾಮಪಿ ಕಾಮಾಯ ಪ್ರಿಯಾ ವೇದಾ ಭವಂತಿ ನ ।
ಕಿಂ ತ್ವಾತ್ಮನಸ್ತು ಕಾಮಾಯ ತತಃ ಪ್ರಿಯತಮಃ ಸ್ವಯಂ ॥೧೦॥

ವೇದಾನಾಮೇವ ಕಾಮಾಯ ಪ್ರಿಯಾ ದೇವಾ ಭವಂತಿ ನ ।
ಕಿಂ ತ್ವಾತ್ಮನಸ್ತು ಕಾಮಾಯ ತತಃ ಪ್ರಿಯತಮಃ ಸ್ವಯಂ ॥೧೧॥

ಭೂತಾನ್ಯಪಿ ಚ ಭೂತಾನಾಂ ಕಾಮಾಯ ನ ಭವಂತಿ ಚ ।
ಕಿಂ ತ್ವಾತ್ಮನಸ್ತು ಕಾಮಾಯ ತತಃ ಪ್ರಿಯತಮಃ ಸ್ವಯಂ ॥೧೨॥

ತೆಯೇ ಕ್ಷತ್ರಿಯ ಜಾತಿಯಲ್ಲಿರತಕ್ಕ ಪ್ರೀತಿಯೂ, ಸಹ ತನ್ನ ಪ್ರೀತಿಗಾಗಿಯೇ ಸರಿ. ದ್ರವ್ಯವನ್ನೂ ಸಹ ಅಪೇಕ್ಷಿಸುವುದು ತನ್ನ ಹಿತಕ್ಕಾಗಿಯೇ ಆದುದರಿಂದ ಇವುಗಳೆಲ್ಲಕ್ಕಿಂತಲೂ ಆತ್ಮನು ಪ್ರಿಯತಮನಾಗಿರುತ್ತಾನೆ. ॥೬-೭-೮॥

ಲೋಕಗಳನ್ನು ಇಚ್ಛಿಸುವುದೂ, ದೇವತೆಗಳನ್ನು ಇಚ್ಛಿಸುವುದೂ ಸಹ ಅವುಗಳ ಹಿತಕ್ಕಾಗಿಯಲ್ಲವು. ತನ್ನ ಹಿತಕ್ಕಾಗಿಯೇ ಅವುಗಳಲ್ಲಿ ವಿಶ್ವಾಸವು. ಆದುದರಿಂದ ಅವುಗಳಿಗಿಂತ ಆತ್ಮನು ಪ್ರಿಯತಮನಾಗಿರುವನು. ॥೯-೧೦॥

ವೇದಗಳನ್ನೂ ಭೂತಗಳನ್ನೂ ಕಾಮಿಸುವುದು ಅವುಗಳ ಹಿತಕ್ಕಲ್ಲದೇ ತನ್ನ ಹಿತಕ್ಕಾಗಿಯೇ ಅವುಗಳನ್ನು ಜನರು ಬಯಸುತ್ತಾರೆ. ಆದುದರಿಂದ ಅವುಗಳಿಗಿಂತ ಆತ್ಮನು ಪ್ರೀತಿಪಾತ್ರನು. ॥೧೧-೧೨॥

ಸರ್ವಸ್ಯೈವ ತು ಕಾಮಾಯ ನ ಸರ್ವಂ ಭವತಿ ಪ್ರಿಯಂ ।
ಕಿಂ ತ್ವಾತ್ಮನಸ್ತು ಕಾಮಾಯ ತತಃ ಪ್ರಿಯತಮಃ ಸ್ವಯಂ ॥೧೩॥

ಅತಃ ಪ್ರಿಯತಮೋಽಹ್ಯಾತ್ಮಾ ಸುಖವತ್ಸುಖಲಕ್ಷಣಃ ॥೧೪॥

ಸುಖಾಭಿಲಾಷಿಭಿಃ ಸೋಽಯಂ ಕೃತ್ವಾ ಕರ್ಮಾಣಿ ಸಾದರಂ ।
ದ್ರಷ್ಟವ್ಯಸ್ತು ಸುರಾ ನಿತ್ಯಂ ಶ್ರೋತವ್ಯಶ್ಚ ತಥೈವ ಚ ।
ಮಂತವ್ಯಶ್ಚ ನಿಚಿಂತ್ಯಶ್ಚ ಸರ್ವಂ ತದ್ದರ್ಶನಾದಿಭಿಃ ।
ವಿದಿತಂ ತದ ಭೇದೇನ ಭವತ್ಯತ್ರ ನ ಸಂಶಯಃ ॥೧೫॥

ದುಃಖರಾಶೇರ್ವಿನಾಶಾಯ ಪರಮಾದ್ವೈತವಿದ್ಭವೇತ್ ॥೧೬॥

ಪರಮಾದ್ವೈತವಿಜ್ಞಾನಾತ್ಸಂಸಾರಃ ಪ್ರವಿನಶ್ಯತಿ ।
ಸ್ವತಃ ಸಿದ್ಧಾದ್ವಯಾನಂದಃ ಸ್ವಯಮೇವ ವಿಭಾತಿ ಚ ॥೧೭॥

ಸರ್ವವನ್ನೂ ಅಪೇಕ್ಷಿಸುವವನಿಗೆ ಆ ಸರ್ವವೂ ಪ್ರಿಯವಾಗುವುದಿಲ್ಲ. ಆತ್ಮನನ್ನು ಬಯಸತಕ್ಕವನಿಗೆ ಆ ಸರ್ವವೂ ಪ್ರಿಯವಾಗುತ್ತದೆ. ಆದುದರಿಂದ ಅದಕ್ಕಿಂತಲೂ ಆತ್ಮನು ಹೆಚ್ಚಾದ ಪ್ರೀತಿಗೆ ಆಶ್ರಯನು. ||೧೩||

ಈರೀತಿಯಾಗಿ ಸಮಸ್ತವೂ ಆತ್ಮಾರ್ಥವಾಗಿಯೇ ಇರುವುದರಿಂದ ಪರಮ ಪ್ರೇಮಾಸ್ಪದನಾಗಿಯೂ, ನಿರತಿಶಯಾನಂದರೂಪನಾಗಿಯೂ ಇರತಕ್ಕ ಆತ್ಮನನ್ನು, ಪರಿಚ್ಛಿನ್ನವಾದ ಸುಖಕ್ಕೆ ಸಾಧನಗಳಾದ ಕರ್ಮಗಳನ್ನು ಬಿಟ್ಟು, ಮುಮುಕ್ಷುಗಳು ಆದರದಿಂದ ಸಾಕ್ಷಾತ್ಕರಿಸಿಕೊಳ್ಳಬೇಕು. ಆ ಸಾಕ್ಷಾತ್ಕಾರಕ್ಕೆ ಸಾಧನಗಳಾದ ವೇದಾಂತವಾಕ್ಯಶ್ರವಣಾದಿಗಳನ್ನೂ, ನ್ಯಾಯದಿಂದ ವಿಚಾರಮಾಡತಕ್ಕ ಮನನ ವನ್ನೂ, ಪರಮಾತ್ಮನ ಚಿಂತನವೆಂಬ ನಿಧಿಧ್ಯಾಸನವನ್ನೂ ಸಹ ಯಾವಾಗಲೂ ಅನುಷ್ಠಾನ ಮಾಡುತ್ತಿರಬೇಕು. ಈರೀತಿಯಾಗಿ ಸರ್ವಸಾಧನಾನುಷ್ಠಾನವನ್ನು ಮಾಡಲಾಗಿ ಜೀವಾಭಿನ್ನವಾದ ಪರಮಾತ್ಮಸಾಕ್ಷಾರವಾಗುತ್ತದೆ. ಈ ವಿಷಯದಲ್ಲಿ ಸಂದೇಹವಿಲ್ಲ. ||೧೪-೧೫||

ಪರಮಪೂಜ್ಯವಾದ ಅದ್ವೈತಸ್ವರೂಪವನ್ನು ತಿಳಿದಿರತಕ್ಕವನ ಸಮಸ್ತ ದುಃಖಗಳ ರಾಶಿಗಳೂ ನಷ್ಟವಾಗುತ್ತವೆ. ಆ ದುಃಖಗಳ ನಾಶಕ್ಕೋಸ್ಕರ ಬ್ರಹ್ಮ ಜ್ಞಾನವನ್ನು ಸಂಪಾದಿಸಬೇಕು. ಅದ್ವಿತೀಯ ಬ್ರಹ್ಮಾತ್ಮೈಕ್ಯಸಾಕ್ಷಾತ್ಕಾರವಾದ

ಪರಾದಾತ್ತಂ ಸುರಾ ಬ್ರಹ್ಮ ಸ್ವತೋಽನ್ಯದ್ಬ್ರಹ್ಮ ವೇದ ಯಃ ।
ತಥಾ ಪರಾದಾತ್ಕ್ಷತ್ರಂ ತಂ ಲೋಕಾ ಅಪಿ ತಥೈವ ಚ ॥೧೮॥

ದೇವಾ ವೇದಾಶ್ಚ ಭೂತಾನಿ ಪರಾದುಃ ಖಲು ತಂ ಪಶುಂ ।
ಸ್ವಸ್ವರೂಪಾತ್ಪರಂ ಕಿಂಚಿದಪಿ ಪಶ್ಯನ್ ಪ್ರಣಶ್ಯತಿ ॥೧೯॥

ಬ್ರಹ್ಮಕ್ಷತ್ರಾದಿಭೇದೇನ ಪ್ರತೀತಾ ಹ್ಯಖಿಲಾ ಅಮೀ ।
ವರ್ಣಾಸ್ತಥಾಽಽಶ್ರಮಾಃ ಸರ್ವೇ ಸಂಕರಾಃ ಸಕಲಾ ಅಪಿ ॥೨೦॥

ಕೂಡಲೇ ಕರ್ತೃತ್ವಭೋಕ್ತೃತ್ವವುಳ್ಳ, ಸಮಸ್ತ ಪುಣ್ಯಪಾಪಗಳಿಗೆ ಆಶ್ರಯವಾದ ಅಂತಃಕರಣವು ನಷ್ಟವಾಗಲು ಸುಖದುಃಖಭೋಗರೂಪವಾದ ಸಂಸಾರವೂ ಸಹ ನಷ್ಟವಾಗುತ್ತದೆ. ಈರೀತಿಯಾಗಿ ಸಂಸಾರವು ನಷ್ಟವಾಗಲಾಗಿ ಜ್ಞಾನೋತ್ಪತ್ತಿಗೆ ಪೂರ್ವದಲ್ಲಿಯೂ ಇರತಕ್ಕ ಬ್ರಹ್ಮಾತ್ಮೈಕ್ಯವು ತಾನಾಗಿಯೇ ಸ್ಫುರಿಸುತ್ತದೆ. ॥೧೬-೧೭॥

ಈರೀತಿಯಾಗಿ ಮೋಕ್ಷಕ್ಕೆ ಸಾಧನವಾದ ಅದ್ವಿತೀಯ ಪರಮಾನಂದಾತ್ಮ ದರ್ಶನವನ್ನು ಉಪನ್ಯಾಸಮಾಡಿ "ಬ್ರಹ್ಮತಂ ಪರಾದಾತ್" ಬೃ. ಉ. ೪.೫.೭. ಇತ್ಯಾದಿ ಪರ್ಯಾಯಗಳಿಂದ ಹೇಳಿದ ಭೇದದರ್ಶನನಿಂದೆಯನ್ನು ಸಂಗ್ರಹಿಸುತ್ತಾನೆ.- ಯಾವ ಪುರುಷನು ತನ್ನ ಆತ್ಮನಿಗಿಂತಲೂ ಬೇರೆಯಾಗಿ ಬ್ರಾಹ್ಮಣ ಜಾತಿಯನ್ನು ನೋಡುತ್ತಾನೆಯೋ ಅಂತಹ ಭೇದದರ್ಶಿಯನ್ನು ಆ ಬ್ರಾಹ್ಮಣ ಜಾತಿಯು ಅವನಿಗೆ ಅಧೀನವಾಗದೇ ಸುಖದುಃಖಗಳಿಗೆ ಹೇತುವಾಗುತ್ತದೆ. ಇದರಂತೆ ಕ್ಷತ್ರಿಯ ಜಾತಿಯನ್ನೂ ಲೋಕವನ್ನೂ ವೇದಗಳನ್ನೂ ದೇವತೆಗಳನ್ನೂ ಭೂತಗಳನ್ನೂ ಸಹ ಆತ್ಮನಿಗಿಂತ ಬೇರೆಯಾಗಿ ಯಾವನು ತಿಳಿಯುವನೋ ಅವನಿಗೆ ಆ ಸಮಸ್ತವೂ ದುಃಖಕ್ಕೆ ಕಾರಣವಾಗುತ್ತದೆ. ಅಂತಹ ಭೇದದರ್ಶಿಯು "ಅಥಯೋಽನ್ಯಾಂ ದೇವತಾಮುಪಾಸ್ತೇ" ಎಂಬ ಬೃ. ಉ. ೧.೪.೧೦. ಶ್ರುತ್ಯನುಸಾರವಾಗಿ ಪಶುವಿನಂತೆ ಅಜ್ಞನಾಗಿರುತ್ತಾನೆ. ಅವನಿಗೆ ಸಮಸ್ತ ಪದಾರ್ಥಗಳೂ ದುಃಖಗಳಿಗೆ ಕಾರಣವಾಗುತ್ತವೆ. ಸ್ವಸ್ವರೂಪಕ್ಕಿಂತಲೂ ಭಿನ್ನವಾದ ಯಾವುದೊಂದು ಪದಾರ್ಥವನ್ನು ತಿಳಿದರೂ ಸಹ ಅವನು ನಾಶವನ್ನು ಹೊಂದುತ್ತಾನೆ. ॥೧೮-೧೯॥

ಪ್ರತೀಯಮಾನವಾದ ಜಗತ್ತನ್ನು ಬ್ರಹ್ಮಕ್ಕಿಂತ ಬೇರೆಯೆಂದು ತಿಳಿಯದೇ "ಇದಂ ಬ್ರಹ್ಮೇದಂ ಕ್ಷತ್ರಂ" ಎಂಬ ಬೃ. ಉ. ೨.೪.೬. ಶ್ರುತ್ಯನುಸಾರವಾಗಿ ಬ್ರಹ್ಮ

ದೇವ ಗಂಧರ್ವ ಪೂರ್ವಾಶ್ಚ ಭೂತಾನಿ ಭುವನಾನಿ ಚ ।
ಅಸ್ತಿ ನಾಸ್ತೀತಿ ಶಬ್ದಾರ್ಥೌ ತಥೈವಾನ್ಯಚ್ಚ ಕಿಂಚನ ॥೨೧॥

ಮಾಯಾಽವಿದ್ಯಾ ತಮೋಮೋಹ ಪ್ರಭೇದಾ ಅಖಿಲಾ ಅಪಿ ।
ಸರ್ವ ಮಾತ್ಮೈವ ನೈವಾನ್ಯ ದಸ್ಯಬುದ್ಧಿರ್ಹಿ ಸಂಸೃತಿಃ ॥೨೨॥

ನಿರ್ವಿಕಲ್ಪೇ ಪರೇ ತತ್ವೇ ವಿದ್ಯಯಾ ಬುದ್ಧಿವಿಶ್ರಮಃ ।
ಸಾ ಹಿ ಸಂಸಾರ ವಿಚ್ಛಿತ್ತಿರ್ನಾಪರಾ ಪುರುಷಾರ್ಥಿಕಾ ॥೨೩॥

ಸ್ವರೂಪವನ್ನಾಗಿ ತಿಳಿಯಬೇಕೆಂದು ಹೇಳುತ್ತಾನೆ.—ಬ್ರಾಹ್ಮಣ ಕ್ಷತ್ರಿಯ ಮುಂತಾದ ಪ್ರಭೇದಗಳೂ, ಬ್ರಹ್ಮಚರ್ಯ, ಗೃಹಸ್ಥ, ವಾನಪ್ರಸ್ಥ, ಸನ್ಯಾಸ ಮುಂತಾದ ಆಶ್ರಮಗಳೂ, ಸಮಸ್ತವಾದ ಸಂಕರಜಾತಿಗಳೂ, ದೇವಗಂಧರ್ವ ಮುಂತಾದವರೂ, ಪೃಥಿವ್ಯಾದಿ ಪಂಚಭೂತಗಳೂ, ಚತುರ್ದಶಭುವನಗಳೂ ಅಸ್ತಿನಾಸ್ತಿಗಳೆಂಬ ಶಬ್ದಾರ್ಥಗಳೂ ಇವಲ್ಲದೇ ಬೇರೆಯಾದ ಸಮಸ್ತವೂ ಸಹ ಆತ್ಮಸ್ವರೂಪವಾಗಿಯೇ ಇರುವುದು. ಮತ್ತು ವಿಶುದ್ಧಸತ್ವಪ್ರಧಾನವಾಗಿಯೂ, ಈಶ್ವರನಿಗೆ ಉಪಾಧಿಯಾಗಿಯೂ, ಇರುವ ಪ್ರಕೃತಿಯೆಂಬ ಮಾಯೆಯೂ, ಮಲಿನಸತ್ವಪ್ರಧಾನವಾದ ಜೀವೋಪಾಧಿಯಾದ ಅವಿದ್ಯೆಯೂ, ಆಕಾಶಾದಿ ಭೂತಗಳಿಗೆ ಉಪಾದಾನಕಾರಣವಾದ ತಮಃ ಪ್ರಧಾನವಾದ ಪ್ರಕೃತಿಯೂ, ಕಾರ್ಯವಾದ ಶುಕ್ತಿರೂಪ್ಯ ಮುಂತಾದ ಭ್ರಮವೂ, ಸಹ ಪರಮಾತ್ಮನಲ್ಲಿ ಅಧ್ಯಸ್ತವಾದುದರಿಂದ ಪರಮಾತ್ಮನಿಗಿಂತಲೂ ಬೇರೆಯಲ್ಲ. ಪರಮಾತ್ಮಸ್ವರೂಪವಾಗಿಯೇ ಇರುವುದು. ಬ್ರಹ್ಮ ಕ್ಷತ್ರಾದಿ ಜಗತ್ತು ಬ್ರಹ್ಮಸ್ವರೂಪಕ್ಕಿಂತಲೂ ಬೇರೆಯಾದುದೆಂಬ ತಿಳಿವಳಿಕೆಯೇ ಸಂಸಾರಕ್ಕೆ ಹೇತುವಾದುದು. ಆದುದರಿಂದ ಭೇದಬುದ್ಧಿಯನ್ನಿಡದೇ ಸಮಸ್ತವೂ ಬ್ರಹ್ಮಸ್ವರೂಪವೆಂದು ತಿಳಿಯಬೇಕು. ॥೨೦-೨೧-೨೨॥

ಯಾವ ಉಪಾಧಿಯೂ ಇಲ್ಲದ ಸಚ್ಚಿದಾನಂದಾತ್ಮಕವಾದ ವಿಕಾರಸಮೂಹಕ್ಕಿಂತಲೂ, ಪರವಾದ ಬ್ರಹ್ಮಸ್ವರೂಪದಲ್ಲಿ ಶ್ರವಣಾದಿಸಾಧನದಿಂದ ಉಂಟಾದ ವಿದ್ಯೆಯ ಸಂಬಂಧವು ಬರಲು ಆವರಣವಾದ ಅಜ್ಞಾನವು ನಷ್ಟವಾಗುತ್ತದೆ. ಹೀಗೆ ಅವಿದ್ಯೆಯು ಹೋಗಲು ಸಂಸಾರವು ನಷ್ಟವಾಗಿ ಬ್ರಹ್ಮಸಾಕ್ಷಾತ್ಕಾರವಾಗುತ್ತದೆ. ಇದಕ್ಕಿಂತಲೂ ಬೇರೆಯಾದ ಪುರುಷಾರ್ಥವಿರುವುದಿಲ್ಲ. ॥೨೩॥

ಪ್ರತೀತಮವಿಶೇಷೇಣ ಸಕಲಂ ಬ್ರಹ್ಮ ಯಃ ಪುಮಾನ್ ।
ವೇದ ತಂ ಶಿರಸಾ ನಿತ್ಯಂ ಪ್ರಣಮಾಮಿ ಜಗದ್ಗುರುಂ ॥೨೪॥

ವೇದಾ ಬಹುಮುಖಾ ಭಾಂತಿ ಸ್ಮೃತಯಶ್ಚ ತಥೈವ ಚ ।
ಪುರಾಣಾನಿ ಸಮಸ್ತಾನಿ ಬುದ್ಧಾರ್ಹದ್ಯಾಗಮಾಂತರಾಃ ॥೨೫॥

ಶೈವಾಶ್ಚ ವೈಷ್ಣವಾಶ್ಚೈವ ಮದುಕ್ತಾ ಆಗಮಾ ಅಪಿ ।
ಅಪಭ್ರಂಶಾಃ ಸಮಸ್ತಾಶ್ಚ ಕೇವಲಂ ಲೌಕಿಕೀ ಮತಿಃ ॥೨೬॥

ತರ್ಕಾಶ್ಚ ವಿವಿಧಾಃ ಸೂಕ್ಷ್ಮಾಃ ಸ್ಥೂಲಾಶ್ಚ ಸಕಲಾ ಅಪಿ ।
ಪರಸ್ಪರ ವಿರೋಧೇನ ಪ್ರಭಾಂತಿ ಸಕಲಾತ್ಮನಾಂ ॥೨೭॥

ಯಾವನು ಪ್ರತೀಯಮಾನವಾದ ಸಮಸ್ತವೂ ಬ್ರಹ್ಮಸ್ವರೂಪವೆಂದು ತಿಳಿದುಕೊಂಡಿರುತ್ತಾನೆಯೋ ಅಂತಹ ಜಗದ್ಗುರುವನ್ನು ನಿತ್ಯವೂ ಶಿರಸಾ ಸಾಷ್ಟಾಂಗ ನಮಸ್ಕಾರಮಾಡುವೆನು. ॥೨೪॥

ಈ ರೀತಿಯಾದ ಅದ್ವಿತೀಯಾತ್ಮವಿಜ್ಞಾನವು ಯಾಕೆ ಸುಲಭವಾಗಿ ಎಲ್ಲರಿಗೂ ತಿಳಿಯುವುದಿಲ್ಲವೆಂದರೆ ಅದಕ್ಕೆ ಕಾರಣವನ್ನು ಹೇಳುತ್ತಾನೆ.—ಸಮಸ್ತರಿಗೂ ಪರಸ್ಪರ ವಿರುದ್ಧಗಳಾಗಿ ಶ್ರುತ್ಯಾದಿಗಳು ತೋರುತ್ತವೆ. ಅವುಗಳನ್ನು ಏಕವಾಕ್ಯತೆಮಾಡಿಕೊಳ್ಳಲು ಅವರಿಗೆ ಸಾಮರ್ಥ್ಯವಿಲ್ಲದುದರಿಂದ ಅವುಗಳಿಂದ ಉಂಟಾಗತಕ್ಕ ಜ್ಞಾನವೂ ವಿಪರೀತವಾಗುತ್ತದೆ. ಆದುದರಿಂದ ಎಲ್ಲರಿಗೂ ಸುಲಭವಾಗಿ ಅದ್ವಿತೀಯಾತ್ಮವಿಜ್ಞಾನವು ಉಂಟಾಗಲಾರದು. ಆ ಶ್ರುತ್ಯಾದಿಗಳು ಯಾವುವೆಂದರೆ ಬಹು ಮುಖ್ಯವಾದ ಶ್ರುತಿಗಳೂ, ನಾನಾಮುಖವಾದ ಮತ್ತು ನಾನಾವಿಧವಾದ ಸ್ಮೃತಿಗಳೂ, ಸಮಸ್ತ ಭಾರತಾದಿ ಪುರಾಣಗಳೂ ಬೌದ್ಧ ಮತ್ತು ಆರ್ಹತ ದರ್ಶನಗಳೂ ಶಿವನಿಗೆ ಪ್ರಾಧಾನ್ಯವನ್ನು ಹೇಳತಕ್ಕ ಪುರಾಣಗಳೂ, ವಿಷ್ಣುವಿಗೆ ಪ್ರಾಧಾನ್ಯವನ್ನು ಪ್ರತಿಪಾದಿಸತಕ್ಕ ಪುರಾಣಗಳೂ, ನಾನೂ, ಬ್ರಹ್ಮನೂ ಹೇಳಿದ ಆಗಮಗಳೂ, ಸಮಸ್ತವಾದ ಅಪಭ್ರಂಶಗಳೂ, ಲೌಕಿಕವಾದ ಬುದ್ಧಿಯೂ, ಅನೇಕ ವಿಧವಾದ ಸ್ಥೂಲಸೂಕ್ಷ್ಮಗಳಾದ ತರ್ಕಗಳೂ ಸಹ ಪರಸ್ಪರ ವಿರುದ್ಧವಾಗಿ ತೋರೋಣದರಿಂದ ಅವುಗಳಿಂದ ನಿಶ್ಚಯಜ್ಞಾನವು ಉಂಟಾಗುವುದಿಲ್ಲ. ॥೨೫-೨೬-೨೭॥

ತೇಷಾಮೇವಾ ವಿರೋಧೇ ತು ಕಾಲೋ ಯಾತಿ ಚ ಧೀಮತಾಂ ।
ಕಥಂ ಚಿತ್ಕಾಲ ಸದ್ಭಾವೇಽಪ್ಯವಿರೋಧೋ ನ ಸಿಧ್ಯತಿ ॥೨೮॥

ಅತಃ ಸರ್ವಂ ಪರಿತ್ಯಜ್ಯ ಮನಸೋ ಮಲಕಾರಣಂ ।
ಯಥಾ ಭಾತೇನ ರೂಪೇಣ ಶಿವಂ ಪಶ್ಯೇತ್ಸು ನಿಶ್ಚಲಃ ॥೨೯॥

ಕ್ರಿಮಿಕೀಟ ಪತಂಗೇಭ್ಯಃ ಪಶವಃ ಪ್ರಜ್ಞಯಾಽಧಿಕಾಃ ।
ಪಶ್ವಾದಿಭ್ಯೋ ನರಾಃ ಪ್ರಾಜ್ಞಾಸ್ತೇಷು ಕೇಚನ ಕೋವಿದಾಃ ॥೩೦॥

ತಥಾ ತೇಭ್ಯಶ್ಚ ಗಂಧರ್ವಾಃ ಪಿತರೋ ಮತಿ ಮತ್ತಮಾಃ ।
ಅನ್ಯೇ ಚ ತಾರತಮ್ಯೇನ ಪಂಡಿತಾ ಉತ್ತರೋತ್ತರಂ ॥೩೧॥

ಆ ಶ್ರುತಿ ಸ್ಮೃತಿ ಪುರಾಣಾದಿಗಳ ವಿರೋಧವನ್ನು ಪರಿಹಾರ ಮಾಡುವುದರೊಳಗೆ ವಿದ್ವಾಂಸರಿಗೆ ಆಯುಸ್ಸು ಮುಗಿಯುತ್ತದೆ. ಹೀಗಾದಮೇಲೆ ಮುಂದೆ ಅರ್ಥಜ್ಞಾನಕ್ಕೆ ಕಾಲವಿಲ್ಲದೇ ಅಥವಾ ಒಂದುವೇಳೆ ಕಾಲವಿದ್ದರೂ ಸಹ ಒಂದೊಂದು ಶಾಸ್ತ್ರವನ್ನು ಪರಿಶೀಲಿಸುವುದರಿಂದ ಸರ್ವ ಅವಿರೋಧವೇ ಸಿದ್ಧಿಸುವುದಿಲ್ಲ. ॥೨೮॥

ಆದುದರಿಂದ ಅನೇಕ ವಿಧವಾದ ಶ್ರುತಿಸ್ಮೃತೀತಿಹಾಸಪುರಾಣಗಳ ಪರಿಶೀಲನವು ಮನಸ್ಸಿಗೆ ವಿಕ್ಷೇಪಕ್ಕೆ ಕಾರಣವಾಗುವುದರಿಂದ ಅವುಗಳನ್ನು ಬಿಟ್ಟು ವೇದಾಂತ ಮಹಾವಾಕ್ಯದಿಂದುಂಟಾದ ಆತ್ಮಜ್ಞಾನವುಳ್ಳವನಾಗಿ ಯಾವ ಯಾವ ವಸ್ತುವು ಯಾವ ಯಾವ ರೂಪದಿಂದ ಇರುವಂತೆ ತೋರುತ್ತದೆಯೋ ಆ ಸರ್ವರೂಪದಿಂದ ಆ ವಸ್ತುವಿಗೆ ಅಧಿಷ್ಠಾನವಾದ ಅದ್ವಿತೀಯವಾದ ಪರಶಿವನನ್ನೇ ಎಲ್ಲಾ ಕಡೆಯಲ್ಲಿಯೂ ತಿಳಿಯಬೇಕು. ॥೨೯॥

ಕ್ರಿಮಿಕೀಟಪಕ್ಷಿಗಳು ಇವುಗಳಿಗಿಂತಲೂ ಪಶುಗಳು ಜ್ಞಾನಾಧಿಕ್ಯವುಳ್ಳವುಗಳಾಗಿವೆ. ಪಶುಗಳಿಗಿಂತ ಮನುಷ್ಯರು. ಅವರಿಗಿಂತ ಪಂಡಿತರು. ಅವರಿಗಿಂತ ಗಂಧರ್ವರೂ, ಅವರಿಗಿಂತ ಪಿತೃದೇವತೆಗಳೂ, ಜ್ಞಾನಾಧಿಕ್ಯವುಳ್ಳವರಾಗಿರುತ್ತಾರೆ. ಇನ್ನೂ ಹೀಗೆ ಅನೇಕ ಪಂಡಿತರು ಜ್ಞಾನದಿಂದ ಉತ್ತರೋತ್ತರವಾಗಿ ಉತ್ತಮರಾಗಿರುತ್ತಾರೆ. ॥೩೦-೩೧॥

ಯೂಯಂ ಸತ್ತ್ವೋತ್ಕಟಾಃ ಪ್ರಾಜ್ಞಾಃ ಸರ್ವೇಷಾಮಪಿ ಹೇ ಸುರಾಃ ।
ಯುಷ್ಮಭ್ಯೋಽಹಂ ಮಹಾಪ್ರಾಜ್ಞೋ ಮತ್ತಃ ಪ್ರಾಜ್ಞೋ ಜನಾರ್ದನಃ ॥೩೨॥

ಜನಾರ್ದನಾದಪಿ ಪ್ರಾಜ್ಞಃ ಶಂಕರೋ ಗುಣಮೂರ್ತಿಷು ।
ತತಃ ಪ್ರಾಜ್ಞತಮಃ ಸಾಕ್ಷಾಚ್ಛಿವಃ ಸಾಂಬಃ ಸನಾತನಃ ॥೩೩॥

ಸ ಏವ ಸಾಕ್ಷಾತ್ಸರ್ವಜ್ಞಃ ತತೋಽನ್ಯೋ ನಾಸ್ತಿ ಕಶ್ಚನ । ಃ
ತಸ್ಮಾದ್ವಿದ್ಯಾಮಿಮಾಂ ತ್ಯಕ್ತ್ವಾ ಬ್ರಹ್ಮ ಸರ್ವಂ ವಿಲೋಕಯೇತ್ ॥೩೪॥

ಆಯಾಸ ಸ್ತಾವದತ್ಯಲ್ಪಃ ಫಲಂ ಮುಕ್ತಿರಿಹೈವ ತು ।
ತಥಾಽಪಿ ಪರಮಾದ್ವೈತಂ ನೈವ ವಾಂಛಂತಿ ಮಾನವಾಃ ॥೩೫॥

ಓ ಸುರರೇ, ನೀವು ಜ್ಞಾನಕ್ಕೆ ಕಾರಣವಾದ ಸತ್ವಗುಣಾಧಿಕ್ಯವುಳ್ಳವರಾದ ಕಾರಣ ಎಲ್ಲರಿಗಿಂತ ಪ್ರಾಜ್ಞರಾಗಿರುವಿರಿ. ಸಗುಣಮೂರ್ತಿಗಳಾದ ನಾನೂ, ವಿಷ್ಣುವೂ, ಶಂಕರನೂ, ಇವರಲ್ಲಿ ನಾನು ನಿಮಗಿಂತಲೂ ಪ್ರಾಜ್ಞನು. ನನಗಿಂತಲೂ ವಿಷ್ಣುವೂ, ವಿಷ್ಣುವಿಗಿಂತಲೂ ಶಂಕರನೂ ಪ್ರಾಜ್ಞರು. ವಿಷ್ಣುವಿಗಿಂತಲೂ ಅನಾದಿಯಾದ ಉಮಾಸಹಿತನಾದ ಸಾಕ್ಷಾತ್ ಶಿವನು ಅತ್ಯಂತ ಪ್ರಾಜ್ಞನಾಗಿರುತ್ತಾನೆ. ॥೩೨-೩೩॥

ಕ್ರಿಮಿಕೀಟಪತಂಗಾದಿಗಳಲ್ಲಿ ಉತ್ತರೋತ್ತರವಾಗಿ ತೋರತಕ್ಕ ಪ್ರಜ್ಞೆಯು ಸಾತಿಶಯವಾದುದರಿಂದ ಸರ್ವಜ್ಞತ್ವವು ಅವುಗಳಲ್ಲಿ ಸಂಭವಿಸಲಾರದು. ಅನವಚ್ಛಿನ್ನ ಜ್ಞಾನಸ್ವರೂಪಿಯಾದ ಪರಶಿವನೇ ಸಾಕ್ಷಾತ್ಸರ್ವಜ್ಞನು. ಅವನಿಗಿಂತಲೂ ಇನ್ನೊಬ್ಬನು ಹೆಚ್ಚು ಜ್ಞಾನಿಯಾಗಿರುವವನು ಇರುವುದಿಲ್ಲವು. ಆದುದರಿಂದ ಹಿಂದೆ ಹೇಳಿದ ಶ್ರುತಿ ಸ್ಮೃತ್ಯಾದಿರೂಪವಾದ ಅನಾತ್ಮವಿದ್ಯೆಯನ್ನು ಬಿಟ್ಟು ಸಮಸ್ತವನ್ನೂ ಬ್ರಹ್ಮಾತ್ಮಕವಾಗಿಯೇ ಅನುಸಂಧಾನಮಾಡಬೇಕು. ॥೩೪॥

ಬ್ರಹ್ಮಾತ್ಮಜ್ಞಾನವು ಮನೋವ್ಯಾಪಾರಮಾತ್ರ ಸಾಧ್ಯವಾಗಿ ಸುಲಭವಾಗಿದೆ. ಫಲವಾದರೋ ಪರಮಪುರುಷಾರ್ಥವಾದ ನಿತ್ಯವಾದ ಮುಕ್ತಿಯು ಈಗಲೇ ಇಲ್ಲಿಯೇ ದೊರೆಯುತ್ತದೆ! ಈ ರೀತಿ ಸುಲಭಸಾಧ್ಯವಿದ್ದಾಗ್ಯೂ. ಅವಿದ್ಯಾವಾಸನೆಯಿಂದ ತಿರೋಹಿತವಾದ ಸಂಸಾರಿಗಳು ಅದ್ವೈತವನ್ನು ಅಪೇಕ್ಷಿಸುವುದಿಲ್ಲ. ॥೩೫॥

ಕದಾಚಿದಪಿ ಚಿತ್ತಸ್ಯ ಭಯಂ ಕಿಂಚಿನ್ನ ವಿದ್ಯತೇ ।
ತಥಾಽಪಿ ಪರಮಾದ್ವೈತಂ ನೈವ ವಾಂಛಂತಿ ಮಾನವಾಃ ॥೩೬॥

ಸ್ವಸ್ವರೂಪಾತಿರೇಕೇಣ ನಾಸ್ತಿ ಮಾನಂ ವಿರೋಧಿ ಚ ।
ತಥಾಽಪಿ ಪರಮಾದ್ವೈತಂ ನೈವ ವಾಂಛಂತಿ ಮಾನವಾಃ ॥೩೭॥

ಸ್ವಸ್ವರೂಪಾತಿರೇಕೇಣ ತರ್ಕಶ್ಚ ನಹಿ ವಿದ್ಯತೇ ।
ತಥಾಽಪಿ ಪರಮಾದ್ವೈತಂ ನೈವ ವಾಂಛಂತಿ ಮಾನವಾಃ ॥೩೮॥

ಶ್ರುತಿ ಸ್ಮೃತಿ ಪುರಾಣಾನಿ ಪ್ರಾಹು ರೇಕತ್ವ ಮಾತ್ಮನಃ ।
ತಥಾಽಪಿ ಪರಮಾದ್ವೈತಂ ನೈವ ವಾಂಛಂತಿ ಮಾನವಾಃ ॥೩೯॥

ಅನುಗ್ರಾಹಕ ತರ್ಕಶ್ಚ ಕುರುತೇ ತರ್ಕವೇದನಂ ।
ತಥಾಽಪಿ ಪರಮಾದ್ವೈತಂ ನೈವ ವಾಂಛಂತಿ ಮಾನವಾಃ ॥೪೦॥

ಶಿವಾಗಮೇಷು ಚಾದ್ವೈತಂ ಬಭಾಷೇ ಪರಮೇಶ್ವರಃ ।
ತಥಾಽಪಿ ಪರಮಾದ್ವೈತಂ ನೈವ ವಾಂಛಂತಿ ಮಾನವಾಃ ॥೪೧॥

ಜ್ಞಾನಿಗಳಿಗೆ ಒಂದು ಕಾಲದಲ್ಲಿಯೂ ಸಹ ಮನಸ್ಸಿಗೆ ಭೀತಿಯಿರುವುದಿಲ್ಲ. ಹಾಗಿದ್ದರೂ ಅಜ್ಞಾನದಿಂದ ಜನರು ಈ ಬ್ರಹ್ಮಾತ್ಮೈಕ್ಯಜ್ಞಾನವನ್ನು ಪಡೆಯಬಯಸುವುದಿಲ್ಲ! ॥೩೬॥

ನನ್ನ ಸ್ವರೂಪಕ್ಕಿಂತಲೂ ಬೇರೆಯಾದ ಪ್ರಮಾಣವು ಆತ್ಮಾನುಭವಕ್ಕೆ ಇರುವುದಿಲ್ಲ. ಮತ್ತು ಬ್ರಹ್ಮಸಾಕ್ಷಾತ್ಕಾರಕ್ಕೆ ವಿರೋಧಿಯಾದ ಜ್ಞಾನವೂ ಇರುವುದಿಲ್ಲ. ಹಾಗಿದ್ದಾಗ್ಯೂ ಯಾವ ಮನುಷ್ಯರೂ ಅಜ್ಞಾನದಿಂದ ಅದ್ವೈತವನ್ನಪೇಕ್ಷಿಸುವುದಿಲ್ಲ. ॥೩೭॥

ಬ್ರಹ್ಮಜ್ಞಾನವುಂಟಾಗಬೇಕಾದರೆ ಸ್ವಸ್ವರೂಪಕ್ಕಿಂತಲೂ ಬೇರೆ ತರ್ಕವೂ ಸಹ ಇರುವುದಿಲ್ಲವು. ಶ್ರುತಿಸ್ಮೃತಿಪುರಾಣಾದಿಗಳೂ ಸಹ ಪರಮಾತ್ಮನ ಅದ್ವಿತೀಯ ಸ್ವರೂಪವನ್ನು ಬೋಧಿಸುತ್ತವೆ. ಜ್ಞಾನಕ್ಕೆ ಅನುಕೂಲವಾದ ಯುಕ್ತಿಯನ್ನು ಎಲ್ಲರೂ ಅನುಸಂಧಾನ ಮಾಡುತ್ತಾರೆ. ಶೈವಾಗಮದಲ್ಲಿ ಪರಮೇಶ್ವರನನ್ನೇ ಬ್ರಹ್ಮಸ್ವರೂಪವನ್ನಾಗಿ ಹೇಳಿರುತ್ತದೆ. ಈ ರೀತಿ ಇದ್ದಾಗ್ಯೂ ಜನರು ಅಜ್ಞಾನದಿಂದ ಅದ್ವೈತವನ್ನು ಬಯಸುವುದಿಲ್ಲವು. ॥೩೮-೩೯-೪೦-೪೧॥

ನಾರಾಯಣೋऽಪಿ ಚಾದ್ವೈತಂ ಬಭಾಷೇ ಸ್ವಾಗಮೇಷುಚ ।
ತಥಾऽಪಿ ಪರಮಾದ್ವೈತಂ ನೈವ ವಾಂಛಂತಿ ಮಾನವಾಃ ॥೪೨॥

ಅಹಂ ಚಾವೋಚ ಮದ್ವೈತಂ ಮದುಕ್ತೇಷ್ವಾಗಮೇಷ್ವಪಿ ।
ತಥಾऽಪಿ ಪರಮಾದ್ವೈತಂ ನೈವ ವಾಂಛಂತಿ ಮಾನವಾಃ ॥೪೩॥

ಅನ್ಯೇ ಚ ಯೋಗಿನಃ ಸರ್ವೇ ಪ್ರಾಹುರದ್ವೈತವಾದಿನಃ ।
ತಥಾऽಪಿ ಪರಮಾದ್ವೈತಂ ನೈವ ವಾಂಛಂತಿ ಮಾನವಾಃ ॥೪೪॥

ವಿಶುದ್ಧ ಜ್ಞಾನಿನಾಂ ದೇವಾ ನಿಷ್ಠಾऽಪ್ಯದ್ವೈತ ಗೋಚರಾ ।
ತಥಾऽಪಿ ಪರಮಾದ್ವೈತಂ ನೈವ ವಾಂಛಂತಿ ಮಾನವಾಃ ॥೪೫॥

ಕೇಚಿತ್ಸಾಮಾನ್ಯ ಮದ್ವೈತಂ ವದಂತಿ ಭ್ರಾಂತ ಚೇತಸಃ ।
ವಿಶೇಷಂ ದ್ವೈತ ಮಾಶ್ರಿತ್ಯ ನ ತೇಷಾಮಸ್ತಿ ವೇದನಂ ॥೪೬॥

ವಿಷ್ಣುವೂ, ನಾನೂ ಸಹ ನಮ್ಮ ನಮ್ಮ ಆಗಮಗಳಲ್ಲಿ ಅದ್ವೈತಬ್ರಹ್ಮ ಸ್ವರೂಪವನ್ನು ಪ್ರತಿಪಾದಿಸಿದ್ದರೂ ಸಹ ಜನರು ಅದನ್ನು ತಿಳಿಯಲು ಇಚ್ಛಿಸುವುದಿಲ್ಲ. ॥೪೨-೪೩॥

ಇನ್ನೂ ಅನೇಕ ಯೋಗಿಗಳು ಆತ್ಮನು ಅದ್ವಿತೀಯನೆಂದು ಹೇಳಿರುತ್ತಾರೆ. ಮತ್ತು ವಿಶುದ್ಧ ಜ್ಞಾನಿಗಳೂ ಸಹ ಅದ್ವೈತದಲ್ಲಿಯೇ ಆಸಕ್ತರಾಗಿರುತ್ತಾರೆ. ಹೀಗಿದ್ದರೂ ಜನರು ಅದನ್ನು ಅಪೇಕ್ಷಿಸುವುದಿಲ್ಲ. ॥೪೪-೪೫॥

ಭ್ರಾಂತರಾದ ಭೇದಾಭೇದವಾದಿಗಳು ಕಾರಣಬ್ರಹ್ಮಸ್ವರೂಪದಿಂದ ಸಾಮಾನ್ಯವಾಗಿ ಸಮಸ್ತವೂ ಅದ್ವಿತೀಯ ಬ್ರಹ್ಮಸ್ವರೂಪವಾಗಿದೆ. ಎಂದು ಹೇಳುತ್ತಾರೆ. ಆದರೆ ವಿಯದಾದಿ ಪ್ರಪಂಚವುವಿಶೇಷಾಕಾರವಾಗಿ ಕಾರ್ಯವಾಗಿ ತೋರಿದರೂ ಜಗತ್ತು ಸತ್ಯವೆಂದೂ ಹೇಳುತ್ತಾರೆ. ಅವರಿಗೆ ಸಮ್ಯಗ್ಜ್ಞಾನವೇ ಇರುವುದಿಲ್ಲ. ದ್ವೈತಾದ್ವೈತಗಳು ಪರಸ್ಪರ ವಿರುದ್ಧವಾದವುಗಳಾದುದರಿಂದ ಏಕತ್ರ ಅವುಗಳನ್ನು ಸ್ವೀಕರಿಸುವುದು ಯುಕ್ತವಲ್ಲ. ॥೪೬॥

ದ್ವೈತ ಮೇವ ಹಿ ಸರ್ವತ್ರ ಪ್ರವದಂತಿ ಹಿ ಕೇಚನ ।
ನ ತೇ ಮನುಷ್ಯಾಃ ಕೀಟಾಶ್ಚ ಪತಂಗಾಶ್ಚ ಘಟಾ ಹಿ ತೇ ॥೪೭॥

ಅವಿಶೇಷೇಣ ಸರ್ವಂ ತು ಯಃ ಪಶ್ಯತಿ ಮಹೇಶ್ವರಂ ।
ಸ ಏವ ಸಾಕ್ಷಾದ್ವಿಜ್ಞಾನೀ ಸ ಶಿವಃ ಸ ತು ದುರ್ಲಭಃ ॥೪೮॥

ಜಗದಿತಿ ಪ್ರತಿಭಾ ವ್ಯವಹಾರತಃ ।
ಪರತರಃ ಪರಮಃ ಪರಮಾರ್ಥತಃ ॥
ಇತಿ ಮತಿ ರ್ನ ಭವತ್ಯಪಿ ಕಸ್ಯಚಿತ್ ।
ಶಶಿಧರ ಸ್ಮರಣೇನ ಹಿ ಸಿದ್ಧ್ಯತಿ ॥೪೯॥

ಜಗದಿತಿ ಪ್ರತಿಭಾಽಪಿ ಚ ಶಾಂಕರೀ ।
ಮತಿಮತಾ ಮಿತಿ ಮೇ ಸುವಿನಿಶ್ಚಯಃ ॥

ವೈಶೇಷಿಕಾದಿಗಳು ಭೇದಾಭೇದಪಕ್ಷವು ಸರಿಯಲ್ಲವೆಂದೂ ಭೇದವೇ ಸರ್ವತ್ರ ಸತ್ಯವೆಂದೂ ಸ್ವೀಕರಿಸುತ್ತಾರೆ. ಅವರು ವಿವೇಚಿಸಬಲ್ಲ ಮನುಷ್ಯರೇ ಅಲ್ಲವು. ಅವರು ವಿವೇಕಜ್ಞಾನವಿಲ್ಲದ ಕೀಟಪಕ್ಷಿಸದೃಶರಾಗಿಯೂ ಅಚೇತನವಾದ ಘಟಕುಡ್ಯ ಸದೃಶರಾಗಿಯೂ, ಇರುತ್ತಾರೆ. ॥೪೭॥

ಸರ್ವಪ್ರಕಾರದಿಂದಲೂ ಅದ್ವೈತವೇ ಪರಮಾರ್ಥವೆಂದು ಉಪಸಂಹರಿಸುತ್ತಾನೆ. ಸಮಸ್ತವಿಶೇಷವೂ ಮಾಯಾಮಯವಾಗಿ ಮಿಥ್ಯಾಭೂತವಾದುದರಿಂದ ಆ ಸಮಸ್ತವೂ ಸತ್ಯನಾದ ಪರಶಿವನ ಸ್ವರೂಪವಾಗಿದೆ ಎಂದು ಯಾವನು ತಿಳಿಯುತ್ತಾನೆಯೋ ಅವನೇ ಸಮ್ಯಗ್ದರ್ಶಿಯು, ಅವನೇ ಸಾಕ್ಷಾತ್ ಶಿವನಾಗಿರುತ್ತಾನೆ. ಅಂತಹವನು ಸಿಕ್ಕುವುದು ಬಹಳ ಕಷ್ಟ. ಎಲ್ಲಿಯಾದರೂ ಅಂತಹ ಮಹಾತ್ಮನು ಕೋಟಿಗೊಬ್ಬರು ಸಿಕ್ಕಬಹುದೇ ಹೊರತು ಸರ್ವತ್ರ ಸಿಕ್ಕಲಾರನು. ॥೪೮॥

ಜಗತ್ತು ವ್ಯವಹಾರದಿಂದ ತೋರುತ್ತದೆಯೇ ಹೊರತು ಸತ್ಯವಾದುದಲ್ಲ. ಆ ಜಗತ್ತಿಗಿಂತಲೂ ಪರನಾದ ಪರಮಾತ್ಮನು ಪಾರಮಾರ್ಥಿಕಸತ್ಯರೂಪನು. ಎಂಬ ಜ್ಞಾನವು ಯಾವನು ಚಂದ್ರಶೇಖರನನ್ನು ಸ್ಮರಿಸುತ್ತಾನೆಯೋ, ಅವನಿಗೆ ಉಂಟಾಗುತ್ತದೆ. ಎಲ್ಲರಿಗೂ ಉಂಟಾಗುವುದಿಲ್ಲವು. ॥೪೯॥

ಜ್ಞಾನಿಗಳಿಗೆ ಜಗತ್ಪ್ರತಿಭಾಸವೂ ಶಂಕರನ ಸಂಬಂಧವುಳ್ಳದ್ದಾಗಿಯೇ ಇರುವು

ಇತಿ ಮತಿ ರ್ವಿಮಲಾ ಚ ಶುಭಾವಹಾ ।
ಶಶಿಧರ ಸ್ಮರಣೇನ ಹಿ ಸಿಧ್ಯತಿ ॥೫೦॥

ಜಗದಿತಿ ಪ್ರತಿಭಾಸ ಮಪೇಕ್ಷ್ಯ ಚ ।
ಶ್ರುತಿರಪಿ ಪ್ರಿಯಹೇತು ಮಿಹಾಽಽಹ ಹಿ ॥
ನ ಹಿ ಜಗತ್ಪ್ರತಿಭಾ ನ ಚ ಸಾ ಶ್ರುತಿಃ ।
ಪ್ರಿಯಕರಃ ಸಕಲಶ್ಚ ನ ವಸ್ತುನಃ ॥೫೧॥

ಇತಿ ಮತಿ ರ್ವಿಮಲಾ ನನು ಜಾಯತೇ ।
ಯದಿ ಜನಃ ಶಿವ ಏವ ತಾದೃಶಃ ॥
ನ ಹಿ ಕೃತಿಃ ಸಕಲಾ ಮಹಾತ್ಮನೋ ।
ಯದಿ ಕೃತಿಃ ಪಶುರೇವ ಸ ಮಾನವಃ ॥೫೨॥

ನ ಹಿ ಜನಿರ್ಮರಣಂ ಗಮನಾಗಮೌ ।
ನ ಹಿ ಮಲಂ ವಿಮಲಂ ನ ಚ ವೇದನಂ ॥
ಶಿವಮಿದಂ ಸಕಲಂ ವಿಭಾಸತೇ ।
ಸ್ಫುಟತರಂ ಪರಮಸ್ಯ ತು ಯೋಗಿನಃ ॥೫೩॥

ದೆಂದು ನನ್ನ ನಿಶ್ಚಯವು. ಇಂತಹ ಶುಭವಾದ ಜ್ಞಾನವು ಚಂದ್ರಮೌಳಿಯ ಅನುಗ್ರಹದಿಂದ ಉಂಟಾಗುತ್ತದೆ. ||೫೦||

ವ್ಯಾವಹಾರಿಕವಾದ ಜಗತ್ತಿನ ಪ್ರತಿಭಾಸವನ್ನು ಅಪೇಕ್ಷಿಸಿ, "ಅಗ್ನಿಹೋತ್ರಂ ಜುಹುಯಾತ್" ಇತ್ಯಾದಿ ಶ್ರುತಿಯು ಸ್ವರ್ಗಾದಿಫಲಸಾಧನವಾದ ಅಗ್ನಿಹೋತ್ರಾದಿಗಳನ್ನು ಉಪದೇಶಿಸುತ್ತದೆ. ಅಷ್ಟರಿಂದಲೇ ಜಗತ್ತು ಸತ್ಯವಾಗಲಾರದು. ||೫೧||

ಈ ರೀತಿಯಾದ ಪರಿಶುದ್ಧವಾದ ಜ್ಞಾನವು ಸಾಕ್ಷಾತ್ ಶಿವನೇ ಆದ ಮನುಷ್ಯನಿಗೆ ವುಂಟಾಗುತ್ತದೆ. ಮಹಾತ್ಮನ ಪ್ರಯತ್ನವೇನೂ ಇರುವುದಿಲ್ಲ. ಅದು ಕೃತಿಸಾಧ್ಯವಾಗಿ ಇದ್ದರೆ ಅವನು ಪಶುವೇ, ಅಜ್ಞಾನಿಯೇ, ಹೊರತು ವಿವೇಕಿಯಾದ ಮನುಷ್ಯನಲ್ಲ. ||೫೨||

ಬ್ರಹ್ಮಜ್ಞಾನಿಗೆ ಜನನ ಮರಣಗಳೂ, ಗಮನಾಗಮನಗಳೂ, ಶುದ್ಧಾಶುದ್ಧಗಳೂ ಇರುವುದಿಲ್ಲವು. ಸಮಸ್ತವೂ ಅವನಿಗೆ ಶಿವರೂಪವಾಗಿ ಸ್ಪಷ್ಟವಾಗಿ ತೋರುತ್ತಿರುತ್ತದೆ. ||೫೩||

ವಿಸೃಜ್ಯ ಸಂದೇಹ ಮಶೇಷ ಮಾಸ್ತಿಕಾಃ ।
ಪ್ರತೀತ ಮೇತ ನ್ನಿಖಿಲಂ ಜಡಾಜಡಂ ॥
ಗುರೂಪದೇಶೇನ ಶಿವಂ ವಿಲೋಕಯೇತ್ ।
ವಿಲೋಕನಂ ಚಾಪಿ ಶಿವಂ ವಿಲೋಕಯೇತ್ ॥೫೪॥

ವಿಲೋಕನಂ ಚಾಪಿ ಶಿವಂ ವಿಲೋಕಯ ।
ನ್ವಿಲೋಕನಂ ಚಾಪಿ ವಿಸೃಜ್ಯ ಕೇವಲಂ ॥
ಸ್ವಭಾವ ಭೂತಃ ಸ್ವಚಿತ್ಯಾವ ಶಿಷ್ಯತೇ ।
ಚಿತ್ಯಾವ ಶೇಷಶ್ಚ ನ ತಸ್ಯ ತತ್ವತಃ ॥೫೫॥

ನಿಷ್ಠಾ ತಸ್ಯ ಮಹಾತ್ಮನಃ ಸುರವರಾಃ ವಕ್ತುಂ ಮಯಾ ಶಕ್ಯತೇ ।
ನ ಪ್ರೌಢೇನ ಶಿವೇನ ವಾ ಮುನಿಗಣೈ ರ್ನಾರಾಯಣೇನಾಪಿ ವಾ ॥
ವೇದೇನಾಪಿ ಪುರಾತನೇನ ಪರಯಾ ಶಕ್ತ್ಯಾ ಪರೇಣಾಥವಾ ।
ಮೂಕೀಭಾವ ಮುಪೈತಿ ತತ್ರ ವಿದುಷಾಂ ನಿಷ್ಠಾ ಹಿ ತಾದೃಗ್ವಿಧಾ ॥೫೬॥

ಎಲೈ ಆಸ್ತಿಕರೇ, ಸಮಸ್ತ ಸಂದೇಹವನ್ನೂ ಬಿಟ್ಟು ಗುರೂಪದೇಶದಿಂದ ಜಡವಾಗಿಯೂ, ಚೇತನವಾಗಿಯೂ ತೋರತಕ್ಕ ಜಗತ್ತನ್ನು ಶಿವರೂಪವೆಂದು ತಿಳಿಯಬೇಕು. ಆ ಬ್ರಹ್ಮಾತ್ಮೈಕ್ಯಜ್ಞಾನವನ್ನೂ ಸಹ ಶಿವರೂಪವೆಂದು ತಿಳಿಯಬೇಕು. ||೫೪||

ಆ ಬ್ರಹ್ಮಾತ್ಮೈಕ್ಯವಿಷಯವಾದ ಜ್ಞಾನವನ್ನು ಶಿವರೂಪವಾದುದೆಂದು ತಿಳಿದು, ಆ ವಿಲೋಕನವನ್ನೂ ದಾಟಿದರೆ ಸ್ವಭಾವವಾದ ತನ್ನ ಚೈತನ್ಯವು ಉಳಿಯುತ್ತದೆ. ಚೈತನ್ಯವು ಮಾತ್ರ ಉಳಿಯುತ್ತದೆಂಬುದೂ ವಾಸ್ತವವಲ್ಲ. ||೫೫||

ಓ ಸುರವರರೇ, ಮಹಾತ್ಮನ ಬ್ರಹ್ಮನಿಷ್ಠೆಯನ್ನು ನನ್ನಿಂದಲೂ, ಮಹಾತ್ಮನಾದ ಶಿವನಿಂದಲೂ, ಋಷಿಗಳಿಂದಲೂ, ನಾರಾಯಣನಿಂದಲೂ; ಪ್ರಾಚೀನವಾದ ವೇದಗಳಿಂದಲೂ, ಪರಾಶಕ್ತಿಯಿಂದಲೂ, ಪರಮಾತ್ಮನಿಂದಲೂ, ಸಹ ಸಂಪೂರ್ಣವಾಗಿ ಹೇಳಿ ಮುಗಿಸಲು ಸಾಧ್ಯವಿಲ್ಲವು. ಆದುದರಿಂದ ನಾನು ಮೌನವಾಗಿರುತ್ತೇನೆ. ವಿದ್ವಾಂಸರ ಬ್ರಹ್ಮನಿಷ್ಠೆಯು ಅಂತಹದಾಗಿರುತ್ತದೆ. ||೫೬||

ಸರ್ವ ಮುಕ್ತಮಿತಿ ವಃ ಸುರರ್ಷಭಾಃ ।
ಕೇವಲೇನ ಕರುಣಾ ಬಲೇನ ಚ ॥
ವೇದ ಏವ ಸಕಲಾರ್ಥ ಬೋಧಕಃ ।
ಶೇಷ ಏವ ವಚನಂ ಚ ತಸ್ಯ ಮೇ ॥೫೭॥

ಇತಿ ಶ್ರೀಸ್ಕಾಂದಪುರಾಣೇ ಸೂತಸಂಹಿತಾಯಾಂ ಚತುರ್ಥಸ್ಯ
ಯಜ್ಞವೈಭವಖಂಡಸ್ಯೋಪರಿಭಾಗೇ ಬ್ರಹ್ಮಗೀತಾಸೂಪನಿಷತ್ಸು
ಬೃಹದಾರಣ್ಯಕೋಪನಿಷದ್ವ್ಯಾಖ್ಯಾನೇ ನವಮೋಽಧ್ಯಾಯಃ

ಓ ಸುರಶ್ರೇಷ್ಠರೇ, ನಾನು ನಿಮ್ಮಲ್ಲಿರತಕ್ಕ ದಯೆಯಿಂದ ಸಮಸ್ತವನ್ನೂ ಹೇಳಿರುತ್ತೇನೆ. ವೇದವೇ ಸಕಲಾರ್ಥಗಳನ್ನೂ ಬೋಧಿಸುತ್ತದೆ. ನನ್ನ ವಚನವು ಆ ವೇದದ ಏಕದೇಶಮಾತ್ರವಾಗಿರುವುದು. ॥೫೭॥

ಇಲ್ಲಿಗೆ ಸ್ಕಾಂದಪುರಾಣದಲ್ಲಿ ಸೂತಸಂಹಿತೆಯಲ್ಲಿ ನಾಲ್ಕನೆಯ ಭಾಗವಾದ
ಯಜ್ಞವೈಭವಖಂಡದಲ್ಲಿ ಎರಡನೆಯ ಭಾಗದಲ್ಲಿರುವ,
ಉಪನಿಷತ್ತುಗಳಂತಿರುವ ಬ್ರಹ್ಮಗೀತೆಯಲ್ಲಿ ಬೃಹದಾರಣ್ಯಕೋಪನಿಷತ್ತಿನ
ಉಪದೇಶವನ್ನು ಸಂಗ್ರಹಿಸಿ ಹೇಳಿರುವ ಒಂಬತ್ತನೆಯ ಅಧ್ಯಾಯವು ಮುಗಿದುದು.

|| ಶ್ರೀಃ ||

ಅಥಾಸ್ಯಾಃ ಶ್ರೀಮತ್ಸ್ಕಾಂಧಪುರಾಣಾಂತರ್ಗತ ಸೂತಸಂಹಿತಾಯಾಶ್ಚತುರ್ಥಸ್ಯ ಯಜ್ಞವೈಭವಖಂಡಸ್ಯೋಪರಿಭಾಗೇ ಬ್ರಹ್ಮಗೀತಾ

|| ದಶಮೋಽಧ್ಯಾಯಃ ||

ಹತ್ತನೆಯ ಅಧ್ಯಾಯವು

|| ಬ್ರಹ್ಮೋವಾಚ ||

ಅಸ್ತಿ ಸರ್ವಾಂತರಃ ಸಾಕ್ಷೀ ಪ್ರತ್ಯಗಾತ್ಮಾ ಸ್ವಯಂ ಪ್ರಭುಃ ।
ತದೇವ ಬ್ರಹ್ಮ ಸಂಪೂರ್ಣ ಮಪರೋಕ್ಷತಮಂ ಸುರಾಃ ॥೧॥

ಪ್ರಾಣಾಪಾನಾದಿ ಭೇದಸ್ಯ ಯಃ ಸತ್ತಾ ಸ್ಫುರಣ ಪ್ರದಃ ।
ಯಸ್ಯ ಸನ್ನಿಧಿ ಮಾತ್ರೇಣ ಚೇಷ್ಟತೇ ಸಕಲಂ ಸುರಾಃ ॥೨॥

ಅದ್ವಿತೀಯಾತ್ಮಜ್ಞಾನವು ಮೋಕ್ಷಸಾಧನವು ಎಂದು ಹೇಳಿ, ಆ ಆತ್ಮತತ್ವದ ವಿಶೇಷಸ್ವರೂಪವನ್ನು ಉಷಸ್ತಬ್ರಾಹ್ಮಣದಲ್ಲಿ ಹೇಳಿರುವುದನ್ನು ಸಂಗ್ರಹಿಸಿ ಹೇಳುತ್ತಾನೆ.

ಬ್ರಹ್ಮನು ಹೇಳಿದನು—ಎಲೈ ದೇವತೆಗಳಿರಾ, ಆ ಸಮಸ್ತ ಕಾರ್ಯಕಾರಣಗಳ ಸಂಘಾತದಲ್ಲಿ ಸೂಕ್ಷ್ಮರೂಪದಿಂದ ಇರುವ, ಇತರ ಯಾವ ವಸ್ತುವಿನ ವ್ಯವಧಾನವೂ ಇಲ್ಲದೇ ಸರ್ವವನ್ನೂ ನೋಡತಕ್ಕ, ಎಲ್ಲರ ವ್ಯವಹಾರಸಿದ್ಧವಾದ ಘಟಪಟಾದಿವಸ್ತುಗಳಿಗಿಂತಲೂ ವಿರುದ್ಧವಾದ ಚೇತನಸ್ವರೂಪವುಳ್ಳ, ಮತ್ತು ದೀಪದಂತೆ ಸ್ವಪ್ರಕಾಶಸ್ವರೂಪನೂ ಆಗಿರುವ ಪರಬ್ರಹ್ಮತತ್ವವು ಇದೆ. ಅದು ಸ್ವತಃ ಪ್ರತ್ಯಕ್ಷವಿಷಯವಾಗಿಯೂ, ಸಕಲ ವಸ್ತುಗಳನ್ನು ವ್ಯಾಪಿಸಿಯೂ ಇರುವುದು. ಆ ಪರಬ್ರಹ್ಮವಸ್ತುವಿಗೂ ಮತ್ತು ಜೀವನಿಗೂ ವಾಸ್ತವವಾದ ಯಾವ ಭೇದವೂ ಇರುವುದಿಲ್ಲ. ||೧||

ಇದಲ್ಲದೆ ಪ್ರಾಣ, ಅಪಾನ, ವ್ಯಾನ, ಉದಾನ ಮತ್ತು ಸಮಾನವೆಂಬೀ ಪಂಚಪ್ರಾಣಗಳಿಗೆ ತಮ್ಮ ಕಾರ್ಯಗಳನ್ನು ನಿರ್ವಹಿಸುವ ಶಕ್ತಿಯು ಯಾವ

ಯಸ್ಯ ಸರ್ವಸ್ಯ ಚೇಷ್ಟಾಯಾ ಮುಸಕ್ತ್ಯೋ ನಿಷ್ಕ್ರಿಯಃ ಸ್ವಯಂ ।
ಸ ಹಿ ಸರ್ವಾಂತರಃ ಸಾಕ್ಷಾದಾತ್ಮಾ ನಾನ್ಯಃ ಸುರರ್ಷಭಾಃ ॥೩॥

ಯೋಽಯಂ ಸರ್ವಾಂತರಃ ಸ್ವಾತ್ಮಾಸೋಽಹ ಮುಥೋರ್ನ ವಿಗ್ರಹಃ ।
ದೃಶ್ಯತ್ವಾದಸ್ಯ ದೇಹಸ್ಯ ದ್ರಷ್ಟಾ ಯೋಽಸ್ಯ ಸ ಏವ ಸಃ ॥೪॥

ಪ್ರತ್ಯಕ್ತ್ವೋದೀರಿತಸ್ಸಾಕ್ಷಾತ್ ಸೋಽಹಮುಥೋರ್ನ ವಿಗ್ರಹಃ ।
ಯೋಽಯಂ ಸರ್ವಾಂತರಃ ಸ್ವಾತ್ಮಾ ಸೋಽಯಂ ನ ಪ್ರಾಣಪೂರ್ವಕಃ ।
ದೃಶ್ಯತ್ವಾತ್ಪ್ರಾಣ ಪೂರ್ವಸ್ಯ ದ್ರಷ್ಟಾ ಯೋಽಸ್ಯ ಸ ಏವ ಸಃ ॥೫॥

ಪರಬ್ರಹ್ಮನ ಅಧೀನವಾಗಿರುತ್ತದೆಯೋ, ಯಾವ ವಿಕ್ರಿಯಗಳನ್ನೂ ಅನುಭವಿಸದೇ ಸಮಸ್ತ ಪ್ರಾಣಿಗಳಿಗೂ ತಮ್ಮ ತಮ್ಮ ಕಾರ್ಯಗಳಲ್ಲಿ ನಿರತವಾಗುವಂತೆ ಮಾಡಿ ತಾನು ಉದಾಸೀನವಾಗಿರುವನೋ, ಅಂತಹ ಪರಬ್ರಹ್ಮನೇ ಜೀವಸ್ವರೂಪನಾಗಿರುವನು. ಜೀವನಿಗಿಂತಲೂ ಪರಬ್ರಹ್ಮನು ವ್ಯತಿರಿಕ್ತನಾಗಿರುವುದಿಲ್ಲ. ಎಂದರೆ ಕರ್ತೃತ್ವ ಭೋಕ್ತೃತ್ವಾದಿಗಳು ಜೀವನಿಗೆ ಲೋಕದಲ್ಲಿ ಅನುಭವಸಿದ್ಧವಾದುವಾಗಿದ್ದರೂ, ಅವೆಲ್ಲವೂ ಅಂತಃಕರಣದ ಸಂಪರ್ಕದಿಂದ ತಾತ್ಕಾಲಿಕವಾಗಿ ಬಂದಿರತಕ್ಕವುಗಳಾಗಿರುವುವು. ಚಿತ್ತಶುದ್ಧಿಯ ಮೂಲಕ ಜ್ಞಾನಸಂಪಾದನೆಯಾದ ಬಳಿಕ ಜ್ಞಾನಾಗ್ನಿಯಿಂದ ಅಂತಃಕರಣವು ಲಯವನ್ನು ಹೊಂದಲು ವ್ಯಾವಹಾರಿಕ ಜೀವನಿಗೆ ಅಂತಃಕರಣದ ಸಂಸರ್ಗವನ್ನು ಹೋಗಲಾಡಿಸಿದಂತಾಗುವುದು. ತರುವಾಯ ಆ ಜೀವನೇ ಪರಬ್ರಹ್ಮವಸ್ತುವಿಗೆ ಅಭಿನ್ನನಾಗಿ ಪ್ರಕಾಶಿಸುವನೆಂದರ್ಥವು. ॥೨-೩॥

ಪ್ರತ್ಯಗಾತ್ಮರೂಪಿಯಾದ ಪರಬ್ರಹ್ಮನೇ ಅಸ್ಮಚ್ಛಬ್ದದಿಂದ ವ್ಯವಹಾರಯೋಗ್ಯನಾದ ಆತ್ಮನಾಗಿರುವನು. "ಅಹಂ" ಎಂಬ ಶಬ್ದದಿಂದ ವ್ಯವಹರಿಸಲ್ಪಡುವ ವಸ್ತುವೇ ಪ್ರತ್ಯಗಾತ್ಮಶಬ್ದದ ಮುಖ್ಯಾರ್ಥವಾಗಿರುವುದು. ಸ್ಥೂಲಶರೀರವು ಘಟಪಟಾದಿವಸ್ತುಗಳಂತೆ ದೃಶ್ಯವಾಗಿರುವುದು. ಎಂದರೆ ಕಣ್ಣಿಗೆ ಕಾಣುವಂತಹದಾಗಿತ್ತದೆ. ಬ್ರಹ್ಮವಸ್ತುವಾದರೋ ಚಕ್ಷುರಿಂದ್ರಿಯಾದಿಗಳಿಗೆ ಅಗೋಚರವಾಗಿರುವುದು. ಆದುದರಿಂದ ಸ್ಥೂಲಶರೀರವರ್ತಿಯಾಗಿ ಅದರ ವ್ಯಾಪಾರಗಳಿಗೆ ಪ್ರಯೋಜಕನಾದ ಆತ್ಮನೇ ಬ್ರಹ್ಮವಸ್ತುವು. ಸ್ಥೂಲಶರೀರವು ಬ್ರಹ್ಮವಸ್ತುವಾಗಿರುವುದಿಲ್ಲ. ಆತ್ಮನು ಸ್ಥೂಲಶರೀರಕ್ಕಿಂತಲೂ ಬೇರೆಯಾದವನು. ಎಂದು ಈ ಶ್ಲೋಕದ ಸಾರಾರ್ಥವಾಗಿರುವುದು. ॥೪॥

ಪ್ರಾಣಾಪಾನಾದಿ ಪಂಚವಾಯುಗಳೂ, ಪಂಚ ಜ್ಞಾನೇಂದ್ರಿಯಗಳೂ, ಪಂಚ ಕರ್ಮೇಂದ್ರಿಯಗಳೂ, ಬುದ್ಧಿಯೂ ಮತ್ತು ಮನಸ್ಸೂ, ಎಂಬ ಈ ಹದಿನೇಳು

ದೃಷ್ಟೇ ರ್ದ್ರಷ್ಟಾ ಶ್ರುತೇಃ ಶ್ರೋತಾ ಮತೇ ರ್ಮಂತಾ ಚ ಯಃ ಸುರಾಃ ।
ವಿಜ್ಞಾತೇರಪಿ ವಿಜ್ಞಾತಾ ಸ ಹಿ ಸರ್ವಾಂತರಃ ಪರಃ ॥೬॥

ಅತೋಽನ್ಯ ದಾರ್ತಂ ಸಕಲಂ ನ ಸತ್ಯಂ ತು ನಿರೂಪಣೇ ।
ಸ ಏವ ಸರ್ವಂ ನೈವಾನ್ಯ ದಿತಿ ಸಮ್ಯಙ್ನಿರೂಪಣೇ(ಣಂ) ॥೭॥

ಪದಾರ್ಥಗಳ ಸಮಷ್ಟಿ ಸ್ವರೂಪವಾದ ಸೂಕ್ಷ್ಮದೇಹಕ್ಕಿಂತಲೂ ಆತ್ಮನು ಬೇರೆಯಾಗಿರುವನು. ಏಕೆಂದರೆ ಲಿಂಗಶರೀರವೂ ಭೂತಪರಿಣಾಮ ಕಾರ್ಯವಾಗಿರುವುದರಿಂದ ದೃಶ್ಯವಾಗಿರುತ್ತದೆ. ಆತ್ಮನಾದರೋ ದೃಶ್ಯನಲ್ಲವು. ಆದುದರಿಂದ ಕಾರ್ಯಕಾರಣಗಳ ಸಂಘಾತಸ್ವರೂಪವಾದ ಸೂಕ್ಷ್ಮ ಮುಂತಾದ ಶರೀರಗಳ ವ್ಯಾಪಾರಗಳಿಗೆ ಪ್ರಯೋಜಕವಾದ ಆತ್ಮನೇ ಬ್ರಹ್ಮವಸ್ತುವು. ಸೂಕ್ಷ್ಮಶರೀರವಲ್ಲ. ಸೂಕ್ಷ್ಮಶರೀರಕ್ಕಿಂತಲೂ ಆತ್ಮನು ಬೇರೆಯಾದವನು ಎಂದು ಶ್ಲೋಕದ ಸಾರಾರ್ಥವು. ಇದರಿಂದ ಆತ್ಮನ ನಿರುಪಾಧಿಕಸ್ವರೂಪವನ್ನು ಹೇಳಿದಂತಾಯಿತು. ||೫||

ಸಕಲ ವಸ್ತುಗಳನ್ನೂ ವ್ಯಾಪಿಸಿ ಪ್ರತ್ಯಗಾತ್ಮಸ್ವರೂಪನಾಗಿರುವ ಆ ಪರಬ್ರಹ್ಮನು ಚಕ್ಷುರಿಂದ್ರಿಯದಿಂದ ಗೋಚರವಾದ ವೃತ್ತಿಗಳಿಗೆ ರೂಪವೆಂಬ ವಿಷಯವನ್ನು ಪ್ರಕಾಶಪಡಿಸುವ ಸಾಮರ್ಥ್ಯವನ್ನುಂಟುಮಾಡುವನು. ಇದೇ ರೀತಿಯಲ್ಲಿ ಶ್ರೋತ್ರಾದಿ ಇಂದ್ರಿಯಗಳಿಗೂ ಆಯಾ ವೃತ್ತಿಗಳ ಮೂಲಕ ಶಬ್ದಾದಿ ವಿಷಯಗಳನ್ನು ಪ್ರಕಾಶಪಡಿಸುವ ಸಾಮರ್ಥ್ಯವನ್ನುಂಟುಮಾಡುವವನಾಗಿದ್ದಾನೆ. ಏಕೆಂದರೆ ಚಕ್ಷುರಾದಿ ಇಂದ್ರಿಯಗಳು ವೃತ್ತಿಯಲ್ಲಿ ಪ್ರತಿಬಿಂಬಿಸಿರುವ ಚೈತನ್ಯಸ್ವರೂಪವಾದ ಆತ್ಮನಿಂದ ಜಡವಾದ ರೂಪಾದಿ ವಿಷಯಗಳನ್ನು ಪ್ರಕಾಶಪಡಿಸುವುವೇ ಹೊರತು ವಸ್ತುತಃ ಸ್ವಯಂಪ್ರಕಾಶವಾದ ಚೈತನ್ಯವನ್ನು ಪ್ರಕಾರಪಡಿಸಲಾರವು. ಆದುದರಿಂದ ಚೈತನ್ಯವೇ ಸ್ವಯಂ ಪ್ರಕಾಶಸ್ವರೂಪವುಳ್ಳದ್ದಾಗಿ ವೃತ್ತ್ಯಾದಿಗಳನ್ನು ಪ್ರಕಾಶಪಡಿಸುವುದು. ಅದೇ ಪ್ರತ್ಯಗಾತ್ಮಸ್ವರೂಪವಾಗಿರುತ್ತದೆ. ||೬||

ಸರ್ವಾಂತರ್ಯಾಮಿಯಾದ ಆತ್ಮನಿಗಿಂತಲೂ ಬೇರೆಯದಾದ ಪ್ರಪಂಚವು ಇರುತ್ತದೆ. ಆದರೆ ಈ ಪ್ರಪಂಚವು ಅಸತ್ಯವಾಗಿರುತ್ತದೆ. ಅದು ಹೇಗೆಂದರೆ, ಲೋಕದಲ್ಲಿ ಜನರು ಹಗ್ಗವನ್ನು ನೋಡಿ ಅದರಲ್ಲಿ ಸರ್ಪವೆಂಬ ಭ್ರಾಂತಿಯಿಂದ ಗಾಬರಿಗೊಂಡು ದೂರವಾಗಿ ಸರಿಯುತ್ತಾರೆ. ಆ ಬಳಿಕ ಅದು ಸರ್ಪವಲ್ಲ, ರುಜ್ಜುವೇ ಆಗಿರುವುದು ಎಂದು ತಿಳಿದರೆ ಕಂಪ ಭಯಾದಿಗಳನ್ನು ಬಿಡುತ್ತಾರೆ. ಹಿಂದಿನ ಕ್ಷಣದಲ್ಲಿ ಸರ್ಪ

ಯಥಾ ಪೃಥಿವ್ಯಾ ಮೋತಂ ಚ ಪ್ರೋತಂ ಚ ಸಕಲಂ ಸುರಾಃ ।
ತಥಾಽಪ್ಸು ಸಕಲಂ ದೇವಾ ಓತಂ ಪ್ರೋತಂ ನ ಸಂಶಯಃ ॥೮॥

ಆಪಶ್ಚ ವಾಯೌ ಹೇ ದೇವಾಃ ಓತಾಃ ಪ್ರೋತಾಸ್ತಥೈವ ಚ ।
ಅಂತರಿಕ್ಷೇಷು ವಾಯುಶ್ಚ ಲೋಕೇಷು ಸುರಪುಂಗವಾಃ ॥೯॥

ಅಂತರಿಕ್ಷಾಶ್ಚ ಲೋಕಾಶ್ಚ ತಥಾ ಗಂಧರ್ವಕೇಷು ಚ ।
ಲೋಕೇ ಷ್ವಾದಿತ್ಯ ಲೋಕೇಷು ಸ್ಥಿತಾಃ ಗಂಧರ್ವಸಂಜ್ಞಿತಾಃ ॥೧೦॥

ವೆಂದು ತೋರಿದ್ದ ಪದಾರ್ಥವು ಮರುಕ್ಷಣದಲ್ಲಿಯೇ ಹೇಗೆ ಮಿಥ್ಯಾಭೂತವಾಗಿ ಪರಿಣಮಿಸುತ್ತದೆಯೋ ಅದೇ ರೀತಿಯಲ್ಲಿ ಅನಾದಿಸಿದ್ಧವಾದ ಅವಿದ್ಯೆಯೆಂಬ ದೋಷ ದಿಂದ ಪ್ರತ್ಯಗಾತ್ಮಸ್ವರೂಪವಾದ ಚೈತನ್ಯದಲ್ಲಿ ಅಧ್ಯಸ್ತವಾಗಿರುವ ಈ ಪ್ರಪಂಚವು ವ್ಯವಹಾರಕಾಲದಲ್ಲಿ ಸತ್ಯವಾಗಿ ತೋರಿದರೂ, ಅವಿದ್ಯೆಯೆಂಬ ದೋಷವು ನಾಶವಾಗು ತ್ತಿರಲು ಅದರ ಕಾರ್ಯವಾದ ಪ್ರಪಂಚವೂ ಲಯವನ್ನೈದುವುದರಿಂದ ಮಿಥ್ಯಾಭೂತ ವಾಗಿರುವುದು. ಪ್ರಪಂಚವು ಯಾವ ಚೈತನ್ಯದಲ್ಲಿ ಅಧ್ಯಸ್ತವಾಗಿರುವುದೋ ಆ ಚೈತನ್ಯವಸ್ತುವೇ ಪರಬ್ರಹ್ಮನು. ಆವನೊಬ್ಬನೇ ಸತ್ಯಸ್ವರೂಪನು. ಪ್ರಪಂಚವಾ ದರೋ ವ್ಯವಹಾರದಶೆಯಲ್ಲಿಯೇ ಸತ್ಯವಾಗಿ ತೋರುವುದು. ಆದುದರಿಂದ ಸಮಸ್ತ ಜಗತ್ತೂ ಕೂಡ ಆ ಪರಬ್ರಹ್ಮನಿಗಿಂತಲೂ ವ್ಯತಿರಿಕ್ತವಾಗಿರುವುದಿಲ್ಲ. ॥೭॥

ಎಲೈ ದೇವತೆಗಳಿರಾ, ತಂತುಗಳು ಬಟ್ಟೆಯಲ್ಲಿ ಹೇಗೆ ಓತಪ್ರೋತಭಾವದಿಂದ ಹಾಸುಹೊಕ್ಕಾಗಿ ಇವೆಯೋ, ಎಂದರೆ ಕೆಲವು ತಂತುಗಳು ಉದ್ದವಾಗಿಯೂ, ಉಳಿದ ತಂತುಗಳು ಅಡ್ಡವಾಗಿಯೂ ಇರುತ್ತವೆಯೋ, ಅದೇರೀತಿ ಈ ಸಮಸ್ತ ಪಾರ್ಥಿವ ಕಾರ್ಯಗಳಲ್ಲಿ ಜಗತ್ತಿಗೆ ಕಾರಣಭೂತವಾಗಿಯೂ, ಸೂಕ್ಷ್ಮವಾಗಿಯೂ, ವ್ಯಾಪಕ ವಾಗಿಯೂ ಇರುವ ಪೃಥಿವೀತತ್ವವು ಓತಪ್ರೋತಭಾವದಿಂದ ಇರುತ್ತದೆ. ಇದೇರೀತಿ ಪೃಥಿವೀತತ್ವವು ತನಗೆ ಕಾರಣಭೂತವಾದ ಅಪ್ ತತ್ವದಲ್ಲಿ (ನೀರಿನ ತತ್ವದಲ್ಲಿ) ಓತಪ್ರೋತಭಾವದಿಂದ ಇರುತ್ತದೆ. ॥೮॥

ಅಪ್ ತತ್ವವು ವಾಯುವಿನಲ್ಲಿ ಓತಪ್ರೋತಭಾವದಿಂದ ಇರುತ್ತದೆ. ವಾಯುವು ಅಂತರಿಕ್ಷಲೋಕದಲ್ಲಿ ಓತಪ್ರೋತಭಾವದಿಂದ ಇರುತ್ತದೆ. ॥೯॥

ಇದೇ ರೀತಿಯಲ್ಲಿ ಆಕಾಶಲೋಕಗಳು ತಮಗೆ ಕಾರಣಭೂತವಾದ ಗಂಧರ್ವ ಲೋಕಗಳಲ್ಲಿಯೂ, ಗಂಧರ್ವಲೋಕಗಳು ಆದಿತ್ಯಲೋಕಗಳಲ್ಲಿಯೂ, ಆದಿತ್ಯ

ಚಂದ್ರಲೋಕೇಷು ಚಾದಿತ್ಯ ಲೋಕಾ ಓತಾ ಸ್ತಥೈವ ಚ ।
ಚಂದ್ರಲೋಕಾಶ್ಚ ನಕ್ಷತ್ರ ಲೋಕೇಷು ಸುರಪುಂಗವಾಃ ॥೧೧॥

ದೇವಲೋಕೇಷು ನಕ್ಷತ್ರ ಲೋಕಾ ಓತಾ ಸ್ತಥೈವ ಚ ।
ದೇವಲೋಕಾಶ್ಚ ಹೇ ದೇವಾಃ ಇಂದ್ರಲೋಕೇಷು ಸಂಸ್ಥಿತಾಃ ॥೧೨॥

ಪ್ರಾಜಾಪತ್ಯೇಷು ಲೋಕೇಷು ಸ್ಥಿತಾ ಐಂದ್ರಾಃ ಸುರರ್ಷಭಾಃ ।
ಪ್ರಾಜಾಪತ್ಯಾಸ್ತಥಾಲೋಕಾಃ ಬ್ರಹ್ಮಲೋಕೇಷು ಸಂಸ್ಥಿತಾಃ ॥೧೩॥

ವಿಷ್ಣುಲೋಕೇಷು ಹೇ ದೇವಾಃ ಬ್ರಹ್ಮಲೋಕಾಃ ಸುಸಂಸ್ಥಿತಾಃ ।
ವಿಷ್ಣುಲೋಕಾಸ್ತಥಾ ಓತಾ ರುದ್ರಲೋಕೇಷು ಹೇಸುರಾಃ ॥೧೪॥

ರುದ್ರಲೋಕಾಃ ಸ್ಥಿತಾ ಲೋಕೇ ಷ್ವೀಶ್ವರಸ್ಯ ಸುರರ್ಷಭಾಃ ।
ಸದಾಶಿವಸ್ಯ ಲೋಕೇಷು ಸ್ಥಿತಾ ಹ್ಯೈಶಾಃ ಸುರರ್ಷಭಾಃ ॥೧೫॥

ಓತಾಃ ಪ್ರೋತಾಶ್ಚ ಯೇ ಲೋಕಾಃ ಬ್ರಹ್ಮಸಂಜ್ಞೇ ಶಿವೇಪರೇ॥೧೬॥

ಏವಂ ಸರ್ವೇ ಸದಾ ಸಾಕ್ಷಿ ಸ್ವರೂಪೇ ಪ್ರತ್ಯಗಾತ್ಮನಿ ।
ಸರ್ವಾಂತರ ತಮೋ ಪ್ರೋತಾಃ ಓತಾಃ ಅಧ್ಯಾಸತಃ ಸ್ಥಿತಾಃ ॥೧೭॥

ಲೋಕಗಳು ಚಂದ್ರಲೋಕಗಳಲ್ಲಿಯೂ, ಚಂದ್ರಲೋಕಗಳು ನಕ್ಷತ್ರಲೋಕಗಳಲ್ಲಿಯೂ, ನಕ್ಷತ್ರಲೋಕಗಳು ದೇವಲೋಕಗಳಲ್ಲಿಯೂ, ದೇವಲೋಕಗಳು ಇಂದ್ರಲೋಕಗಳಲ್ಲಿಯೂ ಓತಪ್ರೋತಭಾವದಿಂದ ಇರುತ್ತವೆ. ||೧೦-೧೧-೧೨||

ಇಂದ್ರಲೋಕಗಳು ಸ್ಥೂಲಶರೀರಾಭಿಮಾನಿಯಾದ ವಿರಾಟ್ಪುರುಷನ ಲೋಕಗಳಲ್ಲಿಯೂ, ವಿರಾಟ್‌ಲೋಕಗಳು ಬ್ರಹ್ಮಾಂಡಕ್ಕೆ ಆರಂಭಕವಾದ ಹಿರಣ್ಯಗರ್ಭಬ್ರಹ್ಮನಿಂದ ಸೃಷ್ಟಿಸಲ್ಪಟ್ಟ ಪಂಚೀಕೃತ ಪಂಚಮಹಾಭೂತಗಳಲ್ಲಿಯೂ, ಹಿರಣ್ಯಗರ್ಭಲೋಕವು ವಿಷ್ಣುಲೋಕದಲ್ಲಿಯೂ, ವಿಷ್ಣುಲೋಕವು ರುದ್ರಲೋಕದಲ್ಲಿಯೂ, ರುದ್ರಲೋಕಗಳು ಅವಿದ್ಯೋಪಾಧಿಕನಾದ ಈಶ್ವರನಲ್ಲಿಯೂ, ಈಶ್ವರಲೋಕಗಳು ನಿರುಪಾಧಿಕಚಿತ್ಸ್ವರೂಪನಾದ ಪರಬ್ರಹ್ಮನಲ್ಲಿಯೂ, ಹಿಂದೆ ಹೇಳಿದಂತೆ ಓತಪ್ರೋತಭಾವದಿಂದ ಇರುವುವು. ||೧೩-೧೪-೧೫-೧೬||

ಈ ರೀತಿಯಲ್ಲಿ ಬ್ರಹ್ಮಭಿನ್ನವಾದ ಸಮಸ್ತ ವಸ್ತುಗಳೂ ಸರ್ವವ್ಯಾಪಿಯೂ ಸಾಕ್ಷಿಸ್ವರೂಪನೂ ಆದ ಪ್ರತ್ಯಗಾತ್ಮನಲ್ಲಿ ಓತಪ್ರೋತಭಾವದಿಂದ ಅಧ್ಯಸ್ತವಾಗಿರು

ಸರ್ವಾಧಿಷ್ಠಾನ ಭೂತಸ್ತು ಪ್ರತ್ಯಗಾತ್ಮಾ ಸ್ವಯಂ ಪ್ರಭಃ ।
ನ ಕಸ್ಮಿಂಶ್ಚಿತ್ ಸ್ಥಿತಃ ಸಾಕ್ಷೀ ಸತ್ಸ್ವರೂಪಃ ಸುರರ್ಷಭಾಃ ॥೧೮॥

ಯಸ್ಮಿನ್ನಧ್ಯಸ್ತ ರೂಪೇಣ ಸ್ಥಿತಂ ಸರ್ವಂ ನಿರೂಪಣೇ ।
ಸ ಏವ ಸಕಲಂ ನಾನ್ಯ ದಿತಿ ಸಮ್ಯಙ್ನಿರೂಪಣಂ ॥೧೯॥

ಯೋಽಯ ಮಾತ್ಮಾ ಸ್ವಯಂ ಭಾತಿ ಸತ್ತಯಾಽನ್ಯವಿವರ್ಜಿತಃ ।
ಸ ಏವ ಸಾಕ್ಷಾತ್ಸರ್ವೇಷಾ ಮಂತರ್ಯಾಮೀ ನ ಚಾಪರಃ ॥೨೦॥

ತ್ತವೆ. ಸಾಕ್ಷೀ ಎಂದರೆ ಜೀವನ ಪ್ರವೃತ್ತಿ ನಿವೃತ್ತಿಗಳನ್ನು ತಿಳಿದುಕೊಳ್ಳುವ ಉದಾಸೀನನಾದ ಚೈತನ್ಯಸ್ವರೂಪನೆಂದರ್ಥವು. ಪ್ರತ್ಯಗಾತ್ಮನೆಂದರೆ ವ್ಯವಹಾರಸಿದ್ಧವಾದ ಘಟಪಟಾದಿವಸ್ತುಗಳಿಗಿಂತಲೂ ವಿಲಕ್ಷಣವಾಗಿರುವವನು ಎಂದರೆ ವ್ಯವಹಾರಸಿದ್ಧವಾದ ಪದಾರ್ಥಗಳು ಅಸತ್ತಾಗಿ ತೋರಿದರೆ ಅದಕ್ಕೆ ವಿಪರೀತವಾದ ಸತ್ವದಿಂದ ಎಲ್ಲ ಪ್ರಾಣಿಗಳ ಒಳಗೆ ಹೃದಯದಲ್ಲಿಪ್ರಕಾಶಿಸುವವನು ಎಂದರ್ಥವು. ||೧೭||

ಎಲೈ ಸುರಶ್ರೇಷ್ಠರೇ, ಮೇಲೆ ಹೇಳಿದ ರೀತಿಯಲ್ಲಿ ಸಮಸ್ತ ಪ್ರಪಂಚಕ್ಕೂ ಅಧಿಷ್ಠಾನಭೂತನಾದ ಮತ್ತು ಸತ್ಸ್ವರೂಪನಾದ ಸಾಕ್ಷಿಯು ಸ್ವಪ್ರಕಾಶಸ್ವರೂಪನಾಗಿರುವನು. ವಿಯದಾದಿ ಕಾರ್ಯವಸ್ತುಗಳಂತೆ ಬೇರೆ ಕಡೆಯಲ್ಲಿ ಓತಪ್ರೋತಭಾವದಿಂದಿರುವುದಿಲ್ಲ. ಸಾಕ್ಷಿಯು ಕಾರ್ಯವಲ್ಲದ್ದರಿಂದ ಕಾರಣವಿಲ್ಲದೆ ಇರುತ್ತಾನೆ. ||೧೮||

ಮೇಲೆ ಹೇಳಿದ ರೀತಿಯಲ್ಲಿ ಸೂಕ್ಷ್ಮದೃಷ್ಟಿಯಿಂದ ವಿಚಾರಮಾಡಲು ಸಕಲ ಪ್ರಪಂಚವೂ ಆ ಪರಬ್ರಹ್ಮದಲ್ಲಿ ಅಧ್ಯಸ್ತವಾಗಿರುವುದೆಂಬ ವಿಷಯವು ತಿಳಿದುಬರುತ್ತಿರಲು ಸಕಲ ಜಗದಾಧಾರನಾದ ಆ ಪರಬ್ರಹ್ಮನೇ ಜಗತ್ಸ್ವರೂಪನಾಗಿರುವನು. ಆ ಬ್ರಹ್ಮವಸ್ತುವಿಗಿಂತಲೂ ಬೇರೆಯದಾದ ವಸ್ತುವು ವಾಸ್ತವವಾಗಿ ಇರುವುದಿಲ್ಲವು. ಎಂದು ನಿಶ್ಚಿತವಾಯಿತು. ||೧೯||

ಈ ಹಿಂದೆ ನಿರೂಪಿಸಲ್ಪಟ್ಟಿರುವ ಸರ್ವಾಂತರ್ಯಾಮಿಯಾದ ಆ ಪ್ರತ್ಯಗಾತ್ಮನೇ ಸಮಸ್ತ ಪ್ರಾಣಿಗಳ ಹೃದಯದಲ್ಲಿ ವಾಸಿಸುವವನಾಗಿ ಸರ್ವಪ್ರಾಣಿಗಳಿಗೂ ನಿಯಾಮಕನಾಗಿರುವನು. ಇವನಿಗಿಂತಲೂ ಬೇರೆಯವನಾದ ಮತ್ತೊಬ್ಬನು ಯಾರೂ ಇರುವುದಿಲ್ಲವು. ||೨೦||

ಪೃಥಿವ್ಯಾಮಪಿ ಯಸ್ತಿಷ್ಠನ್ ಪೃಥಿವ್ಯಾ ಅಂತರಃ ಸದಾ ।
ಯಂ ನ ವೇದ ಸುರಾಃ ಪೃಥ್ವೀ ಶರೀರಂ ಯಸ್ಯ ಭೂರಪಿ ॥೨೧॥

ಯೋಽಂತರೋಯಮಯತ್ಯೇತಾಂ ಭೂಮಿಂ ನಿಷ್ಕ್ರಿಯರೂಪತಃ ।
ಏಷ ಏವ ಹಿ ನಃ ಸಾಕ್ಷಾದಂತರ್ಯಾಮೀ ಪರಾಮೃತಃ ॥೨೨॥

ಅಪ್ಸು ತಿಷ್ಠನ್ನಪಾಂ ದೇವಾಃ ಅಂತರೋ ಯಂ ನ ತಾ ವಿದುಃ ।
ಆಪಃ ಶರೀರಂ ಯಸ್ಯೈತಾ ಯೋಽಂತರೋಯಮಯತ್ಯಪಃ ॥೨೩॥

ಏಷ ಏವ ಹಿ ನಃ ಸಾಕ್ಷಾದಂತರ್ಯಾಮೀ ಪರಾಮೃತಃ ।
ಏವ ಮಗ್ನೇಶ್ಚ ಯೋ ನೇತಾ ಚಾಂತರಿಕ್ಷಸ್ಯ ಹೇ ಸುರಾಃ ॥೨೪॥

ವಾಯುಪೂರ್ವಸ್ಯ ಸರ್ವಸ್ಯ ಚೇತನಾ ಚೇತನಸ್ಯ ಚ ।
ಏಷ ಏವ ಹಿ ನಃ ಸಾಕ್ಷಾದಂತರ್ಯಾಮೀ ಪರಾಮೃತಃ ॥೨೫॥

ಎಲೈ ದೇವತೆಗಳಿರಾ, ಯಾವ ಪರಬ್ರಹ್ಮನು ಪೃಥಿವಿಯ ಬಾಹ್ಯಪ್ರದೇಶದಲ್ಲಿ ಮತ್ತು ಆಂತರ ಪ್ರದೇಶದಲ್ಲಿಯೂ ವ್ಯಾಪಿಸಿರುವವನಾಗಿ ಪೃಥಿವಿಗೆ ನಿಯಾಮಕನಾಗಿರುವನೋ, ಯಾವ ಪರಬ್ರಹ್ಮನನ್ನು ತನಗಿಂತಲೂ ಬೇರೆ ನಿಯಾಮಕನನ್ನಾಗಿ ಪೃಥಿವಿಯೂ ಕೂಡ ತಿಳಿದುಕೊಳ್ಳುವುದಿಲ್ಲವೋ, ಮತ್ತು ಯಾವ ಪರಬ್ರಹ್ಮನಿಗೆ ಪೃಥಿವಿಯೇ ಆಚ್ಛಾದನರೂಪಶರೀರವಾಗಿರುತ್ತದೆಯೋ, ಆ ಪರಬ್ರಹ್ಮನೇ ಪಾರಮಾರ್ಥಿಕಸ್ವರೂಪದಿಂದ ಉದಾಸೀನನಾಗಿದ್ದುಕೊಂಡು ಸೋಪಾಧಿಕಸ್ವರೂಪದಿಂದಭೂಮಿಯನ್ನು ಪ್ರೇರೇಪಿಸುವನು. ಆದರೂ ಇವನೂ ಸಾಂಸಾರಿಕಸುಖದುಃಖಗಳ ಸಂಪರ್ಕವಿಲ್ಲದಿರುವವನು. ॥೨೧-೨೨॥

ಯಾವ ಪರಬ್ರಹ್ಮನು ಅಪ್ಪಿನ ಬಾಹ್ಯಪ್ರದೇಶಗಳಲ್ಲಿಯೂ, ಮತ್ತು ಆಂತರ ಪ್ರದೇಶಗಳಲ್ಲಿಯೂ, ವ್ಯಾಪಿಸಿರುವವನಾಗಿ ಅಪ್ಪು (ನೀರು) ಗಳಿಗೆ ಆಯಾ ವ್ಯಾಪಾರಗಳಲ್ಲಿ ನಿರತವಾಗುವಂತೆ ನಿಯಮಿಸುವನೋ ಮತ್ತು ಯಾವ ಬ್ರಹ್ಮನನ್ನು ಅಪ್ಪುಗಳೂ ಸಹ ತಮಗಿಂತ ಭಿನ್ನವನ್ನಾಗಿ ತಿಳಿದುಕೊಳ್ಳುವುದಿಲ್ಲವೋ ಆ ಬ್ರಹ್ಮನಿಗೆ ಅಪ್ ಎಂಬ ಮಹಾಭೂತವು ಅಚ್ಛಾದನರೂಪವಾದ ಶರೀರವಾಗಿರುವುದು. ಆ ಪರಬ್ರಹ್ಮನೇ ನಮ್ಮೆಲ್ಲರ ಹೃದಯದಲ್ಲಿಯೂ ವಾಸಿಸುವವನಾಗಿರುತ್ತಾನೆ. ॥೨೩॥

ಇದೇ ರೀತಿಯಲ್ಲಿ ಯಾವ ಪರಬ್ರಹ್ಮನು ಅಗ್ನಿ, ಅಂತರಿಕ್ಷ, ವಾಯು, ಇವೇ

ಅದೃಷ್ಟೋಽಯಂ ಸುರಾ ದ್ರಷ್ಟಾ ಶ್ರೋತೈವಾಯಂ ತಥಾಽಶ್ರುತಃ ।
ಅಮತಶ್ಚ ತಥಾ ಮಂತಾ ವಿಜ್ಞಾತಾ ಕೇವಲಂ ಸುರಾಃ ॥೨೬॥

ರವಿಸೋಮಾಗ್ನಿ ಪೂರ್ವೇಷು ವಿನಷ್ಟೇಷ್ವಯ ಮಾಸ್ತಿಕಾಃ ।
ಚಿತ್ತಸಾಕ್ಷಿತಯಾ ಭಾತಿ ಸ್ವಪ್ರಕಾಶೇನ ಕೇವಲಃ ॥೨೭॥

ಚಿತ್ತವ್ಯಾಪಾರ ನಾಶೇ ತು ತದಭಾವಂ ಸುರರ್ಷಭಾಃ ।
ಸ್ವಪ್ರಕಾಶೇನ ಜಾನಾತಿ ಸುಷುಪ್ತಾವೇವ ತಾ ಮಪಿ ॥೨೮॥

ಮೊದಲಾದ ಚೇತನಾಚೇತನಗಳಿಗೆ ನಿಯಾಮಕನಾಗಿರುವನೋ ಆ ಪರಬ್ರಹ್ಮನೇ ಅಂತರ್ಯಾಮಿಯಾಗಿ ಎಲ್ಲರ ಹೃದಯದೇಶದಲ್ಲಿ ಉಪಲಬ್ಧನಾಗುವನು. ॥೨೪-೨೫॥

ಎಲೈ ದೇವತೆಗಳಿರಾ, ಪರಬ್ರಹ್ಮನು ಆತ್ಮಸೂಕ್ಷ್ಮಸ್ವರೂಪವುಳ್ಳವನಾದುದರಿಂದ ಚಕ್ಷುರಿಂದ್ರಿಯಕ್ಕೆ ಅಗೋಚರನಾಗಿರುವನು. ಹೀಗೆ ನಮ್ಮ ಚಕ್ಷುರಿಂದ್ರಿಯಕ್ಕೆ ಅಗೋಚರನಾದರೂ ತಾನು ಮಾತ್ರ ಚಕ್ಷುರಿಂದ್ರಿಯದಲ್ಲಿ ಸನ್ನಿಹಿತನಾಗಿ ಸರ್ವವನ್ನೂ ನೋಡುವನು. ಇದೇ ರೀತಿಯಲ್ಲಿ ನಿರ್ಗುಣನಾಗಿರುವುದರಿಂದ ಶ್ರೋತ್ರೇಂದ್ರಿಯಕ್ಕೂ ಅಗೋಚರನಾಗಿರುವನು. ಆದರೆ ತಾನು ಮಾತ್ರ ಶ್ರೋತ್ರೇಂದ್ರಿಯದ ಸಾನ್ನಿಧ್ಯವುಳ್ಳವನಾಗಿ ಸರ್ವ ಶಬ್ದ ಸಮುದಾಯವನ್ನೂ ಸಾಕ್ಷಾತ್ಕರಿಸಿ ಕೊಳ್ಳುತ್ತಾನೆ. ಸಂಕಲ್ಪ ವಿಕಲ್ಪಕವಾದ ಮನಸ್ಸಿಗೆ ಸಾಕ್ಷಿಯಾಗಿಯೂ, ನಿಶ್ಚಯ ಸ್ವರೂಪವಾದ ಮನೋವೃತ್ತಿಯೆಂಬ ಬುದ್ಧಿಯ ವ್ಯಾಪಾರಗಳನ್ನು ತಿಳಿಯುವವನಾಗಿರುತ್ತಾನೆ. ಆದರೆ ವಿಜ್ಞಾನಕ್ಕೆ ವಿಷಯನಲ್ಲವು. ॥೨೬॥

ಈ ಸಾಕ್ಷಿಯೂ, ಸೂರ್ಯಚಂದ್ರಾಗ್ನಿಗಳೆಂಬ ತೇಜಸ್ಸುಗಳೂ ಲುಪ್ತವಾದರೂ ಸಹ ಅಂತಃಕರಣದ ಪ್ರವೃತ್ತಿನಿವೃತ್ತಿಗಳಿಗೆ ಸಾಕ್ಷಿಭೂತನಾಗಿ ಸ್ವಪ್ರಕಾಶಸ್ವರೂಪನಾಗಿರುತ್ತಾನೆ. ಇವನನ್ನು ಪ್ರಕಾಶಿಸಲು ಬಾಹ್ಯವಾದ ಸೂರ್ಯಾದಿತೇಜಸ್ಸುಗಳ ಅಪೇಕ್ಷೆಯು ಇರುವುದಿಲ್ಲ. (ಇದರಿಂದ ಜೀವನ ಜಾಗ್ರದವಸ್ಥೆಯನ್ನು ಹೇಳಿದಂತಾಯಿತು.) ॥೨೭॥

ಎಲೈ ಸುರಶ್ರೇಷ್ಠರೇ, ಯಾವಾಗ ಸ್ವಪ್ನಾವಸ್ಥೆಯಲ್ಲಿ ಚಕ್ಷುರಾದಿ ಇಂದ್ರಿಯಗಳಿಗೆ ಅವುಗಳ ಪ್ರಕೃತಿಯಲ್ಲಿ ಲಯವಾದ ಬಳಿಕ ಮನಸ್ಸಿಗೆ ಬಾಹ್ಯಪದಾರ್ಥಗಳ ಸಂಸರ್ಗವು ಇಲ್ಲದೇ ಹೋಗಲು ಸ್ವಪ್ನಸಿದ್ಧವಾದ ಪದಾರ್ಥದ ಪರಿಣಾಮಾಕಾರವು ಪ್ರಾಪ್ತವಾಗುವುದೋ ಆಗ ಸಾಕ್ಷಿಸ್ವರೂಪನಾದ ಆತ್ಮನೇ ಬಾಹ್ಯತೇಜಸ್ಸಿನ ಸಹಾಯ

ಆವಿರ್ಭಾವ ತಿರೋಭಾವ ರಹಿತಸ್ತು ಸ್ವಯಂ ಪ್ರಭಃ ।
ಭಾವಾ ಭಾವಾತ್ಮಕಂ ಸರ್ವಂ ಸದಾಽಯಂ ವೇದ ಕೇವಲಃ ॥೨೯॥

ಭಾವಾ ಭಾವಾತ್ಮನಾ ವೇದ್ಯಂ ಸಮಸ್ತಂ ಸುರಪುಂಗವಾಃ ।
ವೇತ್ತೈವಾಯಂ ನ ಚೈವಾನ್ಯದಿತಿ ಸಮ್ಯಕ್ ನಿರೂಪಣಂ ॥೩೦॥

ಏವಂ ಚೈತಂ ವಿಚಾರೇಣ ಸ್ವಾತ್ಮನಾ ವೇತ್ತಿ(ದ) ಯಃ ಪುಮಾನ್ ।
ಸ ಯೋಗೀ ಸರ್ವದಾ ದ್ವೈತಂ ಪಶ್ಯನ್ನಪಿ ನ ಪಶ್ಯತಿ ॥೩೧॥

ವಿಲ್ಲದೇ ಸ್ವಪ್ರಕಾಶಸ್ವರೂಪನಾಗಿಯೇ ಸ್ವಪ್ನಾವಸ್ಥೆಯನ್ನು ತಿಳಿಯುತ್ತಾನೆ. ಮತ್ತು ಯಾವಾಗ ಸುಷುಪ್ತ್ಯವಸ್ಥೆಯಲ್ಲಿ ಚಿತ್ತವೂ (ಅಜ್ಞಾನದಲ್ಲಿ) ಪ್ರಕೃತಿಯಲ್ಲಿ ಲಯವನ್ನು ಹೊಂದಲು ಆಗ ಅಜ್ಞಾನಮಯವಾದ ಸುಷುಪ್ತ್ಯವಸ್ಥೆಯನ್ನೂ ಸ್ವಪ್ರಕಾಶಸ್ವರೂಪದಿಂದಲೇ ತಿಳಿದುಕೊಳ್ಳುವವನಾಗುತ್ತಾನೆ. ॥೨೮॥

ಆದುದರಿಂದ ಜಾಗ್ರತ್ಸ್ವಪ್ನಸುಷುಪ್ತಿಗಳೆಂಬ ಮೂರು ಅವಸ್ಥೆಗಳಲ್ಲಿಯೂ, ಆತ್ಮನು ಆವಿರ್ಭಾವ ತಿರೋಭಾವಗಳೆಂಬ ಧರ್ಮಗಳಿಂದ ರಹಿತನಾಗಿರುವನು. ಆ ಕಾರಣದ ದೆಸೆಯಿಂದಲೇ ಸರ್ವಕಾಲದಲ್ಲಿಯೂ, ಭಾವಾಭಾವಗಳೆಂಬ ಈ ಎರಡು ಸ್ವರೂಪಗಳಿಂದ ಕೂಡಿದ ಜಗತ್ತನ್ನು ನಿರುಪಾಧಿಕನಾಗಿ ಮತ್ತು ಸ್ವಪ್ರಕಾಶಸ್ವರೂಪನಾಗಿ ಇರುವ ಆತ್ಮನು ತಿಳಿಯುತ್ತಾನೆ. ॥೨೯॥

ಎಲೈ ಸುರಶ್ರೇಷ್ಠರೇ, ಈ ಸಮಸ್ತ ಜಗತ್ತೂ ಜ್ಞಾತಾಜ್ಞಾತರೂಪಗಳಿಂದ ವೇದ್ಯವಾಗಿರುವುದು. ಎಂದರೆ ಜ್ಞಾನಕ್ಕೆ ವಿಷಯವಾಗುವುದು. ಆದರೆ ಜಗತ್ತನ್ನು ತಿಳಿದುಕೊಳ್ಳುವ ಆ ಬ್ರಹ್ಮನು ಮಾತ್ರ ಸತ್ಯಸ್ವರೂಪನಾಗಿರುವನು. ಬ್ರಹ್ಮನಿಗಿಂತಲೂ ಭಿನ್ನವಾಗಿಯೂ, ಮತ್ತು ವೇದ್ಯವಾಗಿಯೂ ಇರುವ ಪ್ರಪಂಚವಾದರೋ ರಜ್ಜುಸರ್ಪಾದಿಗಳಂತೆ ಮಿಥ್ಯಾಭೂತವಾಗಿರುವುದು. ಏಕೆಂದರೆ ಈ ಜಗತ್ತೆಲ್ಲ ಬ್ರಹ್ಮನಲ್ಲಿಯೇ ಕಲ್ಪಿತವೇ ಹೊರತು ಬ್ರಹ್ಮನಂತೆ ಸತ್ಯಸ್ವರೂಪವುಳ್ಳದ್ದಾಗಿರುವುದಿಲ್ಲವು. ॥೩೦॥

ಹಿಂದೆ ಹೇಳಿದ ರೀತಿಯಲ್ಲಿ ಉಪಾಧಿಪ್ರಯುಕ್ತವಾಗಿ ಜಾಗ್ರದಾದಿ ಮೂರು ಅವಸ್ಥೆಗಳನ್ನು ಹೊಂದಿರುವಂತೆ ತೋರುವ ಸಾಕ್ಷಿಯೇ ನಿರುಪಾಧಿಕಸ್ವರೂಪನಾಗಿ ಅವಸ್ಥಾತ್ರಯರಹಿತನಾಗಿರುವನೆಂದು ವಿಂಗಡಿಸಿ ಯಾವ ಜ್ಞಾನಿಯು ತಿಳಿದುಕೊಳ್ಳುವನೋ ಅವನು ದ್ವೈತವನ್ನು ಅನುಭವಿಸತಕ್ಕವನಾದಾಗ್ಯೂ ಪರಮಾರ್ಥರೂಪದಿಂದ

ದ್ರಷ್ಟು ದೃಷ್ಟೇರ್ನ ನಾಶೋಽಸ್ತಿ ದೃಶ್ಯಮೇವ(ಹಿ) ವಿನಶ್ಯತಿ ।
ತಚ್ಚ ದ್ವೈತಂ ದೃಶೇ ರ್ದೃಶ್ಯಂ ನಾಸ್ತಿ ದ್ರಷ್ಟಾಽಸ್ತಿ ಕೇವಲಃ ॥೩೨॥

ಏಷಾಽಸ್ಯ ಪರಮಾ ಸಂಪದ್ಗತಿಶ್ಚ ಪರಮಾಽಸ್ಯ ತು ।
ಏಷೋಽಸ್ಯ ಪರಮೋ ಲೋಕಃ ಏತದ್ಧಿ ಪರಮಂ ಸುಖಂ ॥೩೩॥

ಅದ್ವೈತವನ್ನೇ ಅನುಭವಿಸುವವನಾಗಿರುವನು. ಎಂದರೆ ಜ್ಞಾನೋದಯವಾದ ಬಳಿಕ ಯೋಗಿಗೆ ಸಮಸ್ತ ಪ್ರಪಂಚವೂ ಚಕ್ಷುರ್ಗೋಚರವಾದರೂ ಕೂಡ ಆ ಪ್ರಪಂಚದಲ್ಲಿ ಮಿಥ್ಯಾತ್ವಭಾವವೇ ತೋರುವುದರಿಂದ ಸ್ವಸ್ವರೂಪಾವಸ್ಥೆಯಲ್ಲಿಯೇ ಅಖಂಡಾನಂದದಲ್ಲಿ ಅವನು ಮಗ್ನನಾಗಿ ಸರ್ವತ್ರ ಅದ್ವೈತವನ್ನೇ ಅನುಭವಿಸುವನು. ॥೩೧॥

ಸರ್ವವನ್ನೂ ತಿಳಿದುಕೊಳ್ಳುವ ಆತ್ಮನ ಚಿತ್ಪ್ರಕಾಶಸ್ವರೂಪವಾದ ದೃಷ್ಟಿಗೆ ನಾಶವು ಇರುವುದಿಲ್ಲ. ಅದು ಹೇಗೆಂದರೆ, ಅಗ್ನಿಗೆ ತೈಕ್ಷ್ಣ್ಯವು ತಾನು ಪ್ರಕಾಶಮಾನವಾಗಿರುವ ವರೆಗೆ ಹೇಗೆ ಇರುತ್ತದೆಯೋ, ಅದೇ ರೀತಿಯಲ್ಲಿ ಅವಿನಾಶಿಯಾದ ಆತ್ಮನ ದೃಷ್ಟಿಯೂ ಕೂಡ ಸರ್ವದಾ ಇರುವುದಾಗಿರುತ್ತದೆ. ದೃಶ್ಯವಾದರೋ ಆತ್ಮನಲ್ಲಿ ಲಯವನ್ನು ಹೊಂದುವುದಾದ್ದರಿಂದ ವಿಷಯಾಭಾವಪ್ರಯುಕ್ತವಾಗಿ ಸರ್ವದಾ ದ್ವೈತಜಗತ್ತನ್ನು ನೋಡುವವನಾಗುವುದಿಲ್ಲ. ಆದುದರಿಂದ ಯಾವ ಕಾಲದಲ್ಲಿ ವಿಷಯಪ್ರಕಾಶವಿರುವುದಿಲ್ಲವೋ ಆ ಕಾಲದಲ್ಲಿ ವಿಷಯವೇ ಇಲ್ಲದೇ ಪ್ರಕಾಶವಿಲ್ಲವೇ ಹೊರತು ಚಿಚ್ಛಕ್ತಿಯಿಲ್ಲದೇ ಪ್ರಕಾಶವಿಲ್ಲವೆಂದು ಅಲ್ಲ. ಆದುದರಿಂದ ಪ್ರತ್ಯಗಾತ್ಮಸ್ವರೂಪನಿಂದ ಪ್ರಕಾಶಮಾನವಾದ ದ್ವೈತಪ್ರಪಂಚವು ಸಮಾಧಿ ಮತ್ತು ಸುಷುಪ್ತ್ಯವಸ್ಥೆಗಳಲ್ಲಿ ಪ್ರಕಾಶ್ಯವಾಗುವುದಿಲ್ಲ. ॥೩೨॥

ಯಾವ ಪರಬ್ರಹ್ಮನನ್ನು ಸಾಕ್ಷಾತ್ಕರಿಸುವ ಯೋಗಿಯು ಯಾವ ಅವಸ್ಥೆಯಲ್ಲಿ ತನಗಿಂತಲೂ ಬೇರೆಯ ವಸ್ತುವನ್ನು ನೋಡುವುದಿಲ್ಲವೋ, ಕೇಳುವುದಿಲ್ಲವೋ ಮತ್ತು ತಿಳಿಯುವುದಿಲ್ಲವೋ ಅದೇ, ಬ್ರಹ್ಮನಿಷ್ಠೆಯ ಆ ಅವಸ್ಥೆಯೇ, ಅಖಂಡಾನಂದವಾದ ಸಂಪತ್ತಾಗಿರುತ್ತದೆ. ಈ ಅವಸ್ಥೆಯೇ ಮುಕ್ತನಾದವನಿಗೆ ಪ್ರಾಪ್ಯಸ್ಥಾನವಾಗಿರುತ್ತದೆ. ಮತ್ತು ಈ ಅವಸ್ಥೆಯೇ ಪುನರ್ಜನ್ಮವನ್ನು ಉಂಟುಮಾಡದೇ ಇರುವ ಲೋಕವಾಗಿರುತ್ತದೆ. ಏಕೆಂದರೆ, ಜ್ಯೋತಿಷ್ಟೋಮಾದಿ ಕರ್ಮಗಳಿಂದ ಗಳಿಸಿರುವ ಸ್ವರ್ಗಾದಿ ಲೋಕಗಳು ಪುಣ್ಯಕ್ಷಯವಾದ ಬಳಿಕ ಪುನರ್ಜನ್ಮವನ್ನು ಹೊಂದಿಸತಕ್ಕವುಗಳಾಗಿವೆ. ಯೋಗಿಯು ಹೊಂದಿರತಕ್ಕ ಅಖಂಡಾನಂದಾವಸ್ಥೆಯರೂಪವಾದ

ಅಹಿ ನಿರ್ಲ್ವಯನೀಂ ಮುಕ್ತ್ವಾಂ ಯಥಾಽಹಿಃ ಸ್ವಾತ್ಮನಾ ಪುನಃ ।
ನ ಪಶ್ಯತಿ ತಥಾ ವಿದ್ವಾನ್ನದೇಹೇಽಹಂ ಮತಿರ್ಭವೇತ್ ॥೩೪॥

ಸರ್ವಾಧಾರೇ ಸ್ವತಃಸಿದ್ಧೇ ಶಿವಸಂಜ್ಞೇ ತು ನಿರ್ಮಲೇ ।
ಪ್ರತ್ಯಗ್ರೂಪೇ ಪರಾನಂದೇ ನೇಹ ನಾನಾಽಸ್ತಿ ಕಿಂಚನ ॥೩೫॥

ಮೃತ್ಯೋಃ ಸ ಮೃತ್ಯುಮಾಪ್ನೋತಿ ಇಹ ನಾನೇವ ಪಶ್ಯತಿ ।
ತಸ್ಮಾದಧ್ಯಸ್ತಮಜ್ಞಾನಂ ತತ್ಕಾರ್ಯಂ ಚಾತ್ಮರೂಪತಃ ॥೩೬॥
ಏಕಥೈವ ಮಹಾಯಾಸಾ ದ್ದ್ರಷ್ಟವ್ಯೋ ಹಿ ಮುಮುಕ್ಷುಭಿಃ ।

ಲೋಕವಾದರೋ ಕರ್ಮನಿರ್ಮಿತ ಲೋಕವಲ್ಲವಾದುದರಿಂದ ಪುನರ್ಜನ್ಮವನ್ನು ಕೊಡದೇ ಬ್ರಹ್ಮಸಾಯುಜ್ಯವನ್ನೇ ಕೊಡುವುದಾಗಿರುತ್ತದೆ. ॥೩೩॥

ಸರ್ಪವು ತನ್ನ ದೇಹದಿಂದ ವಿನಿರ್ಮುಕ್ತವಾದ ಪೊರೆಯಲ್ಲಿ ಆತ್ಮೀಯಭಾವ ವನ್ನಿಡದೇ, ಎಂದರೆ ಈ ಪೊರೆಯು ನನ್ನದು ಅದನ್ನಗಲಿ ನಾನು ಇರಬಾರದು, ಎಂಬ ಭಾವನೆಯನ್ನಿಡದೆ, ಆ ಪೊರೆಯನ್ನು ದೂರದಲ್ಲಿ ಬಿಡುತ್ತದೆಯೋ, ಅದೇ ರೀತಿಯಲ್ಲಿ ಮುಕ್ತಿಹೊಂದಿದ ಯೋಗಿಯು ಬ್ರಹ್ಮಭಿನ್ನವಾದ ಪ್ರಪಂಚದ ಸಂಸರ್ಗ ದಿಂದ ಬೇರೆಯವನಾಗಿ ಪ್ರಪಂಚವನ್ನು ನಿಸ್ಸಾರಬುದ್ಧಿಯಿಂದ ಅದರಲ್ಲಿ ತನ್ನದೆಂಬ ಭಾವನೆಯನ್ನು ತ್ಯಜಿಸಿಬಿಟ್ಟು ದೇಹಾದಿಗಳಲ್ಲಿ ಅಹಂಕಾರವನ್ನು ಇಡುವುದಿಲ್ಲ. ॥೩೪॥

ಸಕಲ ವಸ್ತುಗಳಿಗೂ ಆಧಾರಭೂತನಾಗಿಯೂ, ತನಗಿಂತಲೂ ಭಿನ್ನವಾದ ಬೇರೊಂದು ವಸ್ತುವಿನಲ್ಲಿ ಅಧ್ಯಸ್ತವಾಗದೇ ಇರುವವನೂ (ಎಂದರೆ ದೃಶ್ಯ ಘಟ ಪಟಾದಿ ವಸ್ತುಗಳು ತಮತಮಗೆ ಅಧಿಷ್ಠಾನಭೂತವಾದ ಚೈತನ್ಯದಲ್ಲಿ ಅಧ್ಯಸ್ತವಾಗಿ ರುತ್ತವೆ. ಆದರೆ ಬ್ರಹ್ಮನು ಮಾತ್ರ ತನಗಿಂತ ಭಿನ್ನವಾದ ವಸ್ತುವಿಗೆ ಅಧಿಷ್ಠಾನ ಭೂತನೇ ಹೊರತು ಇವನಿಗೆ ಅಧಿಷ್ಠಾನಭೂತವಾದ ಮತ್ತೊಂದು ಪದಾರ್ಥವಿಲ್ಲವು. ಆದುದರಿಂದಲೇ ಇವನು ಅಧಿಷ್ಠಾನದ ಅಪೇಕ್ಷೆಯಿಲ್ಲದೇ ಸ್ವತಃ ಸಿದ್ಧನಾಗಿರುವನು. ಎಂದರ್ಥವು.) ಪುಣ್ಯಪಾಪಗಳ ಸಂಪರ್ಕದಿಂದ ಬಾಹಿರನೂ, ಅಖಂಡಾನಂದಸ್ವರೂ ಪನೂ ಆದ ಆ ಬ್ರಹ್ಮನಲ್ಲಿ ಅವನಿಗಿಂತಲೂ ಭಿನ್ನವಾದ ಬೇರೊಂದು ಪದಾರ್ಥವು ಪರಮಾರ್ಥರೂಪದಿಂದ ಇರುವುದಿಲ್ಲ. ॥೩೫॥

ಯಾವನು ಪ್ರತ್ಯಗಾತ್ಮಸ್ವರೂಪನಾದ ಆತ್ಮನನ್ನು ಭೇದಭಾವನೆಯಿಂದ ತಿಳಿದುಕೊಳ್ಳುವನೋ ಅವನು ಎಡೆಬಿಡದೇ ಜನ್ಮಮರಣಗಳನ್ನು ಅನುಭವಿಸುವವ

ಅಯಮಾತ್ಮಾ ಪ್ರಮೇಯಶ್ಚ ವಿರಜಶ್ಚ ಮಹಾನ್ ಧ್ರುವಃ ॥೩೭॥

ತಮೇವ ಧೀರೋ ವಿಜ್ಞಾಯ ಪ್ರಜ್ಞಾಂ ಕುರ್ವೀತ ಬ್ರಾಹ್ಮಣಃ ।
ನಾನುಧ್ಯಾಯಾ ದ್ಬಹೂನ್ ಶಬ್ದಾನ್ ವಾಚೋ ವಿಗ್ಲಪನಂ ಹಿ ತತ್ ॥೩೮॥

ಸ ವಾ ಏಷ ಮಹಾನಾತ್ಮಾ ಜನ್ಮನಾಶ ವಿವರ್ಜಿತಃ ।
ವಶೀ ಸರ್ವಸ್ಯ ಲೋಕಸ್ಯ ಸರ್ವಸ್ಯೇಶಾನ ಏವಚ ॥೩೯॥

ನಾಗುವನು. ಆದುದರಿಂದ ಬ್ರಹ್ಮನಲ್ಲಿ ಅಧ್ಯಸ್ತವಾದ ಅಜ್ಞಾನವನ್ನೂ ಆ ಅಜ್ಞಾನದ ಕಾರ್ಯವಾದ ನಿಖಿಲ ಪ್ರಪಂಚವನ್ನೂ ಬ್ರಹ್ಮನಲ್ಲಿ ಅಧ್ಯಸ್ತವಾದುದನ್ನಾಗಿ ತಿಳಿದು ಕೊಂಡು, ಅದರ ಮೂಲಕ ಸರ್ವವನ್ನೂ ಅದ್ವೈತಭಾವನೆಯಿಂದಲೇ ತಿಳಿದು ಕೊಳ್ಳಲು ಪ್ರಯತ್ನಪಡಬೇಕು. ಈ ಕಾರ್ಯವು ಅತ್ಯಂತ ಪ್ರಯಾಸಸಾಧ್ಯವಾದರೂ ಸಾಧಕನು ಆ ಕಾರ್ಯವನ್ನು ಸಾಧಿಸಲೇಬೇಕು. ||೩೬||

ಈ ಆತ್ಮನು ಪ್ರತ್ಯಕ್ಷಾದಿಪ್ರಮಾಣಗಳಿಗೆ ಅಗೋಚರನಾಗಿಯೂ, ಧರ್ಮಾಧರ್ಮಾದಿ ಮಲರಹಿತನಾಗಿಯೂ ಸರ್ವ ವ್ಯಾಪಕನೂ, ಕೂಟಸ್ಥನೂ ಆಗಿರುವನು. ಧೀರನಾದ ಸಾಧಕನು ಆ ಆತ್ಮಸ್ವರೂಪವನ್ನು ತಿಳಿದುಕೊಂಡು ತತ್ಪರಾಯಣನಾಗಿರಬೇಕು. ||೩೭||

ವಾಗಿಂದ್ರಿಯದ ಸಹಾಯದಿಂದ ಧ್ಯಾನಮಾಡಿದರೆ ಆ ಪರಮಾತ್ಮನು ಲಭ್ಯನಲ್ಲವು. ಆ ಧ್ಯಾನವು ವಾಗಿಂದ್ರಿಯಕ್ಕೆ ಗ್ಲಾನಿಯನ್ನುಂಟುಮಾಡುವುದಾಗಿರುವುದು. (ಆದುದರಿಂದ ಬ್ರಹ್ಮನನ್ನು ತಿಳಿದುಕೊಳ್ಳುವ ಸಾಹಸವನ್ನು ಕೈಗೊಳ್ಳಬೇಕೆಂದರ್ಥವು.) ಪೂರ್ವೋಕ್ತನಾದ ಜಗತ್ಕಾರಣನಾಗಿಯೂ, ಜನ್ಮಮರಣಗಳಿಲ್ಲದವನೂ, ಆದ ಆ ಪರಬ್ರಹ್ಮನು ಬ್ರಹ್ಮ ಮತ್ತು ಇಂದ್ರನೇ ಮೊದಲಾದ ದೊಡ್ಡ ಜನಗಳನ್ನು ತನ್ನ ಅಧೀನದಲ್ಲಿಟ್ಟುಕೊಂಡಿರುವನು. ಇದಲ್ಲದೇ ಬ್ರಹ್ಮಾದಿ ಸ್ತಂಬಪರ್ಯಂತವಾದ ಸಕಲ ಜಗತ್ತಿಗೂ ನಿಯಾಮಕನಾಗಿರುವನು. "ಭೀಷಾಸ್ಮಾದ್ವಾತಃ ಪವತೇ" "ಭೀಷೋದೇತಿ ಸೂರ್ಯಃ ಭೀಷಾಸ್ಮಾದಗ್ನಿಶ್ಚೇಂದ್ರಶ್ಚ" ತೈ. ಉ. ೨.೮. ಎಂದು ಶ್ರುತಿಯಲ್ಲಿ ಹೇಳಿರುತ್ತದೆ. ||೩೮-೩೯||

ಸರ್ವಸ್ಯಾಧಿಪತಿಃ ಶುದ್ಧೋ ನ ಭೂಯಾನ್ ಸಾಧು ಕರ್ಮಣಾ ।
ಕರ್ಮಣಾಽಸಾಧುನಾ ನೈವ ಕನೀಯಾನ್ ಸುರಪುಂಗವಾಃ ॥೪೦॥

ಏಷ ಸರ್ವೇಶ್ವರಃ ಸಾಕ್ಷಾದ್ಭೂತಾಧಿಪತಿ ರೇವ ಚ ।
ಭೂತಪಾಲಶ್ಚ ಲೋಕಾನಾ ಮಸಂಭೇದಾಯ ಹೇ ಸುರಾಃ ॥೪೧॥

ಏಷ ಸೇತು ರ್ವಿಧರಣಸ್ತಮ್ಮೇವ ಬ್ರಾಹ್ಮಣೋತ್ತಮಾಃ ।
ವೇದಾನು ವಚನೇನಾಪಿ ಯಜ್ಞೇನ ಸಕಲೇನ ಚ ॥೪೨॥

ದಾನೇನ ತಪಸಾ ದೇವಾ ಸ್ತಥೈವಾ ನಶನೇನ ಚ ।
ವೇತ್ತು ಮಿಚ್ಛತಿ ಯೋ ವಿದ್ವಾನ್ ಸಮುನಿ ರ್ನೇತರೋ ಜನಃ ॥೪೩॥

ಎಲೈ ದೇವತೆಗಳಿರಾ, ಸಕಲ ಪ್ರಾಣಿಗಳಲ್ಲಿಯೂ ಸಾಕ್ಷಿರೂಪನಾಗಿದ್ದುಕೊಂಡು ಅವುಗಳನ್ನು ಕಾಪಾಡುವ ಈ ಆತ್ಮನು ಶಾಸ್ತ್ರವಿಹಿತವಾದ ಅಗ್ನಿಹೋತ್ರಾದಿಕರ್ಮಗಳಿಂದ ಅಧಿಕನಾಗುವುದಿಲ್ಲವು. (ಎಂದರೆ ಅಗ್ನಿಹೋತ್ರಾದಿ ಕರ್ಮಗಳಿಂದ ನಿರ್ವಿಕಾರಿಯಾದ ಆತ್ಮನಲ್ಲಿ ಆಧಿಕ್ಯವೂ ಉಂಟಾಗುವುದಿಲ್ಲ. ಮತ್ತು ಶಾಸ್ತ್ರನಿಷಿದ್ಧವಾದ ಪ್ರಾಣಿಹಿಂಸಾದಿ ಕರ್ಮಗಳನ್ನು ಮಾಡುವುದರಿಂದ ಈ ಅಕರ್ತೃವಾದ ಆತ್ಮನಲ್ಲಿ ನ್ಯೂನತೆಯೇನೂ ಉಂಟಾಗುವುದಿಲ್ಲ.) ಕಾಲತ್ರಯದಲ್ಲಿಯೂ ನಿರ್ವಿಕಾರಸ್ವರೂಪನಾಗಿರುವನೂ, ಏಕೆಂದರೆ, ವಿಹಿತನಿಷಿದ್ಧಕರ್ಮಗಳಿಂದೊಡಗೂಡಿದ ಜಗತ್ತಿಗೆ ಇವನು ಒಡೆಯನಾಗಿರುವುದರಿಂದ ಇವನ ಅಧೀನದಲ್ಲಿರುವ ಕರ್ಮಗಳು ಇವನಿಗೆ ಯಾವ ರೀತಿಯ ವೃದ್ಧಿಕ್ಷಯಾದಿಗಳನ್ನೂ ಉಂಟುಮಾಡಲು ಸಮರ್ಥವಾಗುವುದಿಲ್ಲ. ॥೪೦॥

ಇದೇ ರೀತಿಯಲ್ಲಿ ಈ ಪ್ರತ್ಯಗಾತ್ಮನೇ ಬ್ರಹ್ಮಾದಿಸ್ತಂಬಪರ್ಯಂತವಾದ ಸಕಲ ಭೂತಗಳಿಗೂ ಅಧಿಪತಿಯಾಗಿರುವನು. ಮತ್ತು ಅವನ್ನು ಕಾಪಾಡುವವನೂ ಆಗಿರುವನು. ಅದೇಕೆಂದರೆ, ಭೂರಾದಿಲೋಕಗಳಲ್ಲಿ ಸ್ವಭಾವಸಿದ್ಧವಾದ ವ್ಯವಹಾರಾದಿಗಳ ಅತಿಕ್ರಮವುಂಟಾಗಬಾರದೆಂದು ತಾನೇ ಅವುಗಳಿಗೆ ನಿಯಾಮಕನಾಗಿರುವನು. ॥೪೧॥

ಎಲೈ ಬ್ರಾಹ್ಮಣೋತ್ತಮರೇ, ವೇಗದಿಂದ ಹರಿಯುವ ನದಿಯನ್ನು ಸೇತುವೆಯು, ಯಾವರೀತಿಯಲ್ಲಿ ತಡೆದು ಜಲಾತಿಕ್ರಮವಾಗದಂತೆ ನಿಯಮಿಸಿ ಜನರು ದಾಟುವಂತೆ ಮಾಡುವುದೋ, ಅದೇರೀತಿಯಲ್ಲಿ ಪರಮಾತ್ಮನು ವರ್ಣಾಶ್ರಮಾದಿ ಧರ್ಮಗಳ ವ್ಯವಸ್ಥೆಯು ಮೀರದಂತೆ ಅದನ್ನು ಸರಿಯಾದ ಮಾರ್ಗದಲ್ಲಿ ನಿಯಮಿಸಿ

ನೇತಿ ನೇತೀತಿ ನಿಷ್ಕೃಷ್ಟೋ ಯ ಏಷಃ ಸರ್ವಸಾಧಕಃ ।
ಸೋಽಯಮಾತ್ಮಾ ಸದಾ ಗ್ರಾಹ್ಯ ಸ್ವರೂಪೋ ನ ಹಿ ಗೃಹ್ಯತೇ ॥೪೪॥

ತಥಾ ಶೀರ್ಯ ಸ್ವಭಾವಶ್ಚ ದೇಹೇ ನಾ ನೈವ ಶೀರ್ಯತೇ।
ಅಸಂಗರೂಪೋ ಭಗವಾನ್ ಸರ್ವದಾ ನ ಹಿ ಸಜ್ಜತೇ ॥೪೫॥

ಆಯಾ ವರ್ಣಾಶ್ರಮಧರ್ಮಗಳನ್ನು ಈಶ್ವರಾರ್ಪಣಬುದ್ಧಿಯಿಂದ ಅನುಷ್ಠಾನಮಾಡುವವರನ್ನು ಸಂಸಾರಸಾಗರದಿಂದ ವಿಮುಕ್ತರನ್ನಾಗಿ ಮಾಡುವವನಾಗಿರುವನು. ಹೀಗಿರುತ್ತಿರಲು ಯಾವನು ವೇದಾಧ್ಯಯನದಿಂದಲೂ, ವೇದಬೋಧಿತವಾದ ಕರ್ಮಾನುಷ್ಠಾನದಿಂದಲೂ, ತುಲಾಪುರುಷಾದಿದಾನಗಳಿಂದಲೂ, ದೋಷರಹಿತವಾಗಿಯೂ, ಮಿತವಾಗಿಯೂ, ನಿರ್ಮಲವಾಗಿಯೂ ಇರುವ ಆಹಾರಸೇವನಾರೂಪವಾದ ತಪಸ್ಸಿನಿಂದಲೂ, ಆ ಪರಮಾತ್ಮನ ಸ್ವರೂಪವನ್ನು ತಿಳಿದುಕೊಳ್ಳಲು ಇಚ್ಛಿಸುವನೋ ಅವನಿಗೆ ವಿವಿದಿಷೆಯು ಉತ್ಪನ್ನನಾಗಿ, ಶಮದಮಾದಿ ಸಾಧನಗಳ ಸಹಾಯದಿಂದ ಬ್ರಹ್ಮಸಾಕ್ಷಾತ್ಕಾರವನ್ನೈದುವನು. ಪೂರ್ವೋಕ್ತವಾದ ಕರ್ಮಾದ್ಯನುಷ್ಠಾನಗಳನ್ನು ಮಾಡದೇ ಇರುವವನಾದರೋ ಎಂದಿಗೂ ಬ್ರಹ್ಮಸಾಕ್ಷಾತ್ಕಾರವನ್ನು ಪಡೆಯಲಾರನು. ||೪೨-೪೩||

ದೃಶ್ಯವಾದ ಸಕಲ ಪ್ರಪಂಚವನ್ನೂ ಮಿಥ್ಯಾತ್ವಭಾವನೆಯಿಂದ ಯಾವ ಜಗದಾಧಾರನಾದ ಪರಬ್ರಹ್ಮನಲ್ಲಿ ನಿಷೇಧಿಸುವೆವೋ ಆ ಪರಬ್ರಹ್ಮನೇ, ಅವಿದ್ಯೆಯೂ, ಆ ಅವಿದ್ಯೆಯಿಂದ ಉತ್ಪನ್ನವಾದ ಸಕಲ ದ್ರವ್ಯಗುಣಕರ್ಮಗಳ ವ್ಯವಹಾರಗಳೂ, ಇವುಗಳಿಗೆ ಕಾರಣಭೂತನು. ಅಂತಹ ಈ ಆತ್ಮನು ಯಾವ ಕರ್ಮೇಂದ್ರಿಯಗಳಿಗೂ ಮತ್ತು ಜ್ಞಾನೇಂದ್ರಿಯಗಳಿಗೂ ಗೋಚರನಾಗಿರುವುದಿಲ್ಲ. ಏಕೆಂದರೆ ಚಕ್ಷುರಾದಿ ಇಂದ್ರಿಯಗಳು ಗುಣರೂಪವುಳ್ಳ ವಸ್ತುಗಳನ್ನು ಪ್ರಕಾಶಪಡಿಸುವುವೇ ಹೊರತು ನೀರೂಪವಾದ ಪದಾರ್ಥಗಳನ್ನು ಗೋಚರಪಡಿಸಲಾರವು. ನಿರ್ಗುಣ ಆತ್ಮನಾದರೋ ರೂಪಾದಿಗುಣಗಳಿಂದ ಯುಕ್ತನಾಗಿರುವುದಿಲ್ಲ."ಅಶಬ್ದಮಸ್ಪರ್ಶಮರೂಪ ಮವ್ಯಯಂತಥಾಽರಸಂ ನಿತ್ಯಮಗಂಧ ವಚ್ಚ ಯತ್" ಎಂದು ಕಠ.ಉ. ೩.೧೫. ಶ್ರುತಿಯು ಹೇಳುತ್ತಿದೆ. ||೫೪||

ಇದೇ ರೀತಿಯಲ್ಲಿ ಈ ಆತ್ಮನು ತನ್ನಲ್ಲಿ ಅಧ್ಯಸ್ತವಾದ ಪ್ರಪಂಚದಂತೆ ವಿನಾಶವನ್ನು ಹೊಂದುವವನಾಗಿರುವುದಿಲ್ಲ. ಏಕೆಂದರೆ ಯಾವ ವಸ್ತುವು ಅವಯವಗಳಿಂದ ಕೂಡಿರುವುದೋ ಅದು ನಾಶವನ್ನು ಪಡೆಯುವುದಾಗಿರುತ್ತದೆ. ಆತ್ಮನಿ

ಏಷ ನಿತ್ಯೋ ಮಹಿಮಾ ಬ್ರಾಹ್ಮಣಸ್ಯ ।
ನ ವರ್ಧತೇ ಕರ್ಮಣಾ ನೋ ಕನೀಯಾನ್ ॥
ತಸ್ಯೈವಸ್ಯಾ ತ್ಪದವಿತ್ತಂ ವಿದಿತ್ವಾ ।
ನ ಲಿಪ್ಯತೇ ಕರ್ಮಣಾ ಪಾಪಕೇನ ॥೪೬॥

ತಸ್ಮಾದ್ಬ್ರಹ್ಮ ಜ್ಞಾನ ಲಾಭಾಯ ವಿದ್ವಾನ್ ।
ಶಾಂತೋದಾಂತಃ ಸತ್ಯವಾದೀ ಭವೇಚ್ಚ ॥
ಕರ್ಮತ್ಯಾಗೀ ಸರ್ವ ವೇದಾಂತ ಸಿದ್ಧಂ ।
ವಿದ್ಯಾಹೇತುಂ ಸಂತತಂ ತ್ವಭ್ಯುಪೇಯಾತ್ ॥೪೭॥

ಗಾದರೋ ಅವಯವಗಳಿರುವುದಿಲ್ಲ, ಆದುದರಿಂದ ವಿನಾಶಿಯಲ್ಲವು. ಪ್ರಪಂಚದಲ್ಲಿ ತನ್ನದೆಂಬ ಅಭಿಮಾನವಿಲ್ಲದವನಾಗಿ ಪದ್ಮಪತ್ರದಂತೆ ನಿರ್ಲಿಪ್ತನಾಗಿರುವನು. ॥೪೫॥

ಹೀಗೆ ಮಿಥ್ಯಾಭೂತವಾದ ಪ್ರಪಂಚಕ್ಕೆ ಅಧಿಷ್ಠಾನಭೂತನಾದ ಪರಬ್ರಹ್ಮನು ಯೋಗಿಯ ನಿತ್ಯವಾದ ಸಂಪತ್ತಾಗಿರುವನು. ಏಕೆಂದರೆ ಕರ್ಮವನ್ನು ಅನುಷ್ಠಾನ ಮಾಡುವುದರಿಂದ ಈ ಆತ್ಮನು ವೃದ್ಧಿಯನ್ನು ಹೊಂದುವುದಿಲ್ಲ. ಕರ್ಮಾನುಷ್ಠಾನ ವನ್ನು ಮಾಡದೇ ಇರುವುದರಿಂದ ಕ್ಷಯವನ್ನೂ ಹೊಂದುವುದಿಲ್ಲ. ಆದುದರಿಂದ ನಿತ್ಯನಾಗಿರುವನು. ಲೋಕದಲ್ಲಿ ಯಾವುದು ವೃದ್ಧಿಕ್ಷಯಗಳನ್ನು ಹೊಂದುವುದೋ ಅದು ಅನಿತ್ಯವೆನ್ನಿಸಿಕೊಳ್ಳುವುದು. ಆತ್ಮನು ಮಾತ್ರ ಹಾಗಿರುವುದಿಲ್ಲ. ಆದುದರಿಂದ ಅವನ ಸ್ವರೂಪವನ್ನು ತಿಳಿದವನು ಮೋಕ್ಷವನ್ನು ಹೊಂದುವನು. ಆ ಜ್ಞಾನಿಗೆ ಪುಣ್ಯ ಪಾಪಕರ್ಮದ ಲೇಪವೂ ಇರುವುದಿಲ್ಲ. ॥೪೬॥

ಆ ಕಾರಣದ ದೆಸೆಯಿಂದ ಆತ್ಮಜ್ಞಾನವನ್ನು ಸಂಪಾದಿಸುವುದಕ್ಕೋಸ್ಕರ ವಿದ್ವಾಂಸನು ಶಾಂತಿ ಮೊದಲಾದ ಗುಣಗಳಿಂದ ಕೂಡಿದವನಾಗಿರಬೇಕು. (ಶಾಂತಃ ಬಾಹ್ಯೇಂದ್ರಿಯಗಳ ವ್ಯಾಪಾರದಿಂದ ನಿವೃತ್ತನಾದವನೆಂದರ್ಥವು. ದಾಂತಃ ಮನೋ ವಿಷಯಗಳಲ್ಲಿ ಆಸೆಯಿಲ್ಲದವನು.) ಎಂದರೆ ಲೋಕಾಂತರಕ್ಕೆ ಸಾಧಕವಾಗಿಯೂ, ವಿದ್ಯೆಗೆ ವಿರೋಧವಾಗಿಯೂ ಇರುವ ಕರ್ಮಗಳನ್ನು ಅನುಷ್ಠಾನಮಾಡಬಾರದು ಎಂದರ್ಥವು. ಶ್ರುತಿಪ್ರತಿಪಾದ್ಯವಾಗಿಯೂ ಜ್ಞಾನಕ್ಕೆ ಕಾರಣವಾಗಿಯೂ ಇರುವ ಶ್ರವಣ, ಮನನ, ನಿಧಿಧ್ಯಾಸನಗಳಲ್ಲಿ ಯಾವಾಗಲೂ ನಿರತನಾಗಿರಬೇಕು. ॥೪೭॥

ತ್ರಿಪುಂಡ್ರ ಮುದ್ಧೂಲನ ಮಾಸ್ತಿಕೋತ್ತಮಾಃ ।
ಸದಾ ಚರೇತ್ ಶಂಕರ ವೇದನೇ ರತಃ ॥
ಶಿವಾದಿ ಶಬ್ದಂ ಚ ಜಪೇದ್ವಿಶೇಷತಃ ।
ಪ್ರಪೂಜಯೇದ್ಭಕ್ತಿ ಪುರಃ ಸರಂ ಹರಂ ॥೪೮॥

ಸಾಧನೈಃ ಸಕಲೈಃ ಸಹಿತಃ ಸುರಾಃ ।
ವೇದನೇನ ಸಮಸ್ತ ಮಿದಂ ಜಗತ್ ॥
ದೇವರೂಪತ ಯೈವ ತು ನಿಶ್ಚಿತಂ ।
ವೇದ ಹಸ್ತತಲ ಸ್ಥಿತ ಬಿಲ್ವವತ್ ॥೪೯॥

ನೈನಂ ಪಾಪ್ಮಾ ತಪತಿ ಬ್ರಹ್ಮನಿಷ್ಠಂ ।
ಸರ್ವಂ ಪಾಪಂ ತರತಿ ಪ್ರಾಕೃತಂ ಚ ॥
ನೈನಂ ಪಾಪ್ಮ ತರತೆ ಬ್ರಹ್ಮನಿಷ್ಠಂ ।
ಸರ್ವಂ ಪಾಪಂ ತರತಿ ಪ್ರಾಕೃತಂ ಚ ॥೫೦॥

ಆಸ್ತಿಕಶ್ರೇಷ್ಠರಾದ ಬ್ರಾಹ್ಮಣರೇ, ಭಸ್ಮವನ್ನು ತ್ರಿಪುಂಡ್ರ ಲೇಪನಮಾಡಿಕೊಂಡು ಲೋಕ ಕಲ್ಯಾಣಕರನಾದ ಶಿವಸ್ವರೂಪವನ್ನು ತಿಳಿದುಕೊಳ್ಳುವುದರಲ್ಲಿಯೇ ಸರ್ವದಾ ಆಸಕ್ತರಾಗಿರಬೇಕು. ಮತ್ತು ಶಿವನಿಗೆ ಪ್ರೀತಿಕರವಾದ ಜಪಗಳನ್ನು ಆಚರಿಸಿ, ಶಿವನನ್ನು ಶ್ರದ್ಧಾಭಕ್ತಿಪುರಸ್ಸರವಾಗಿ ಪೂಜಿಸಬೇಕು. (ಇದು ಜ್ಞಾನೋತ್ಪತ್ತಿಯಾಗಲು ಅಂತರಂಗಸಾಧನವಾಗಿರುವುದು.) ॥೪೮॥

ವೇದಾಧ್ಯಯನಾದಿಗಳಿಂದಲೂ, ಶಾಂತ್ಯಾದಿ ಗುಣಗಳಿಂದಲೂ, ಶ್ರವಣ, ಮನನ, ನಿಧಿಧ್ಯಾಸನಗಳಿಂದಲೂ, ಸಕಲ ದೃಶ್ಯಜಾತವನ್ನು ಪರಶಿವನ ಸ್ವರೂಪವನ್ನಾಗಿ, ಅಂಗೈಯಲ್ಲಿರುವ ಬಿಲ್ವಫಲದಂತೆ, ಯಾವವಿದ್ವಾಂಸನು ತಿಳಿಯುತ್ತಾನೆಯೋ ಅವನಿಗೆ ಪುಣ್ಯಪಾಪಗಳು ಸಂಘಟಿಸಲಾರವು. ಮತ್ತು ಅವಿದ್ಯಾಜನ್ಯವಾದ ಕಾರ್ಯಜಾತದ ಸಂಸರ್ಗದಿಂದಲೂ ನಿರ್ಲಿಪ್ತನಾಗುವನು. ಇದಲ್ಲದೇ ಪುಣ್ಯಪಾಪಗಳನ್ನೆಲ್ಲವನ್ನೂ ಅವನು ಜ್ಞಾನಾಗ್ನಿಯಿಂದ ಭಸ್ಮಮಾಡುತ್ತಾನೆ. ॥೪೯-೫೦॥

ಇತ್ಥಂ ಬ್ರಹ್ಮ ಸ್ವಾತ್ಮಭೂತಂ ವಿದಿತ್ವಾ
ಶ್ರದ್ಧಾಪೂರ್ವಂ ದೇಹಮೇತಂ ಸ್ವಕೀಯಂ ।
ಅರ್ಥಂ ಸರ್ವಂ ಕ್ಷೇತ್ರಜಾತಂ ಸಮಸ್ತಂ
ದದ್ಯಾದಸ್ಮೈ ದೇಶಿಕೇಂದ್ರಾಯ ಮರ್ತ್ಯಃ ॥೫೧॥

ಯಶ್ಚಾ ತೃಣತ್ತ್ಯವಿತಥೇನ ಕರ್ಣಾ
ವದುಃಖಂ ಕುರ್ವನ್ನಮೃತಂ ಸಂಪ್ರಯಚ್ಛನ್ ।
ತಂ ವಿದ್ಯಾತ್ಪಿತರಂ ಮಾತರಂ ಚ
ತಸ್ಮೈ ನ ದ್ರುಹ್ಯೇತ್ಕೃತಮಸ್ಯ ಜಾನನ್ ॥೫೨॥

ಸ್ವದೇಶಿಕಸ್ಯೈವ ಶರೀರ ಚಿಂತನಂ
ಭವೇದನಂತಸ್ಯ ಶಿವಸ್ಯ ಚಿಂತನಂ ।
ಸ್ವದೇಶಿಕಸ್ಯೈವ ತು ಪೂಜನಂ ತಥಾ
ಭವೇದನಂತಸ್ಯ ಶಿವಸ್ಯ ಪೂಜನಂ ॥೫೩॥

ಪೂರ್ವೋಕ್ತರೀತಿಯಿಂದ "ಅಹಂ ಬ್ರಹ್ಮಾಸ್ಮಿ" ಎಂಬ ಬ್ರಹ್ಮಜ್ಞಾನವು ಉತ್ಪನ್ನವಾದ ತರುವಾಯ ತನ್ನ ದೇಹವನ್ನೂ, ಎಲ್ಲ ಹಣ, ಕ್ಷೇತ್ರಾದಿಗಳನ್ನೂ ಶ್ರದ್ಧಾ ಭಕ್ತಿ ಪುರಸ್ಸರವಾಗಿ ತನಗೆ ಬ್ರಹ್ಮವಿದ್ಯೋಪದೇಶವನ್ನು ಮಾಡಿದ ಗುರುವಿನಲ್ಲಿ ಅರ್ಪಿಸಬೇಕು. ॥೫೧॥

ಯಾವ ಗುರುವು ಬ್ರಹ್ಮವಿದ್ಯೋಪದೇಶವನ್ನು ಮಾಡುವುದರ ಮೂಲಕ ಕಿವಿಗಳನ್ನು ನೋಯಿಸದೆ ಕರ್ಣಾನಂದವನ್ನುಂಟುಮಾಡುವನೋ ಆ ಗುರುವಿನಲ್ಲಿ ದ್ರೋಹವನ್ನೆಣಿಸದೇ ಮಾತಾಪಿತೃಗಳಂತೆ ಭಾವಿಸಬೇಕು. ಮತ್ತು ಅವರಲ್ಲಿ ಸರ್ವದಾ ಕೃತಜ್ಞತೆಯನ್ನು ವ್ಯಕ್ತಪಡಿಸಬೇಕು. ॥೫೨॥

ತನಗೆ ವಿದ್ಯೋಪದೇಶವನ್ನು ಮಾಡಿದ ಗುರುವಿನ ಆಕೃತಿಯನ್ನು ಧ್ಯಾನ ಮಾಡಿದರೆ, ಅದೇ ಧ್ಯಾನವು ಶಿವನಧ್ಯಾನವನ್ನು ಮಾಡಿದಂತಾಗುವುದು. ಮತ್ತು ಆ ಗುರುವನ್ನು ಪೂಜೆಮಾಡುವಿಕೆಯೇ ಶಿವನನ್ನು ಪೂಜಿಸಿದಂತಾಗುವುದು. ॥೫೩॥

ಸ್ವದೇಶಿಕಸ್ಯೈವ ತು ನಾಮಕೀರ್ತನಂ
ಶಿವಾದಿಶಬ್ದಸ್ಯ ತು ಕೀರ್ತನಂ ಭವೇತ್ ।
ಸ್ವದೇಶಿಕ ಸ್ಯೈವ ತು ಬಾಧನಂ ತಥಾ ।
ಭವೇದನಂತಸ್ಯ ಶಿವಸ್ಯ ಬಾಧನಂ ॥೫೪॥

ತಸ್ಮಾದ್ವಿದ್ವಾನ್ ಸರ್ವಮೇತದ್ವಿಹಾಯ
ಶ್ರದ್ಧಾಯುಕ್ತಃ ಸದ್ಗುರುಂ ಸತ್ಯನಿಷ್ಠಂ ।
ವಿದ್ಯಾಕೋಶಂ ವೇದವೇದಾಂತನಿಷ್ಠಂ
ಗಚ್ಛೇನ್ನಿತ್ಯಂ ಸತ್ಯಧರ್ಮಾದಿಯುಕ್ತಃ ॥೫೫॥

ವ್ಯಕ್ತವ್ಯಂ ಸಕಲಂ ಮಯಾ ಪರಕೃಪಾ ಯುಕ್ತೇನ ಸಂಕೀರ್ತಿತಂ ।
ಕರ್ತವ್ಯಂ ಸಕಲಂ ಸುರಾ ನ ಹಿ ಮುನೇರ್ಬ್ರಹ್ಮಾತ್ಮನಿಷ್ಠಸ್ಯ ತು ॥
ಸ್ಮರ್ತವ್ಯಂ ಸಕಲಂ ತಥಾ ನ ಹಿ ಸದಾ ಬ್ರಹ್ಮೈವ ಸಚ್ಚಿತ್ಸುಖಂ ।
ಸಂಪೂರ್ಣಂ ಸತತೋದಿತಂ ಸಮರಸಂ ಶಶ್ವತ್ಸ್ವಯಂ ಭಾಸತೇ ॥೫೬॥

ವಿದ್ಯೋಪದೇಶವನ್ನು ಮಾಡಿದ ಗುರುವಿನ ನಾಮಸ್ಮರಣೆಯೇ ಶಿವನ ನಾಮಸ್ಮರಣೆಯನ್ನು ಮಾಡಿದಂತಾಗುವುದು. ಅದೇ ರೀತಿಯಲ್ಲಿ ಗುರುವನ್ನು ಬಾಧಿಸುವುದೇ ಶಿವನನ್ನು ತೊಂದರೆಪಡಿಸಿದಂತಾಗುವುದು. ॥೫೪॥

ಆದುದರಿಂದ ವಿದ್ವಾಂಸನು ಪೂರ್ವೋಕ್ತರೀತಿಯಲ್ಲಿ ಧನಕನಕಾದಿಗಳಲ್ಲಿ ಆಸೆಯನ್ನು ತ್ಯಾಗಮಾಡಿ, ವಿದ್ಯಾನಿಧಿಯೂ, ವೇದಾಂತನಿಷ್ಠನೂ ಆದ ಗುರುವನ್ನು ಶ್ರದ್ಧಾಭಕ್ತಿಪುರಸ್ಸರವಾಗಿ ಹೊಂದಬೇಕು. ॥೫೫॥

ಎಲೈ ದೇವತೆಗಳಿರಾ, ದಯಾನಿಧಿಯಾದ ನನ್ನಿಂದ ಸರ್ವವಿಷಯವೂ ಹೇಳಲ್ಪಟ್ಟಿರುವುದು. ಪರಬ್ರಹ್ಮನಿಷ್ಠನಾದ ಯೋಗಿಗೆ ಬ್ರಹ್ಮಚಿಂತನೆ ಹೊರತು ಬೇರೆಯಾದ ಯಾವ ಕರ್ಮವೂ ಇರುವುದಿಲ್ಲ. ಮತ್ತು ವಿದ್ವಾಂಸನಿಗೆ ಸಚ್ಚಿದಾನಂದೈಕರಸಸ್ವರೂಪನಾದ ಬ್ರಹ್ಮನ ಸ್ಮರಣೆಯನ್ನು ಬಿಟ್ಟು ಬೇರೆಯದಾದ ಯಾವ ವಸ್ತುವಿನ ವಿಷಯವಾದ ಸ್ಮರಣೆಯೂ ಇರುವುದಿಲ್ಲ. ॥೫೬॥

**ಇತಿ ಶ್ರೀಸ್ಕಾಂದಪುರಾಣೇ ಸೂತಸಂಹಿತಾಯಾಂ ಚತುರ್ಥಸ್ಯ
ಯಜ್ಞವೈಭವಖಂಡಸ್ಯೋಪರಿಭಾಗೇ ಸೂತಗೀತಾಸು
ಬೃಹದಾರಣ್ಯವ್ಯಾಖ್ಯಾಕಥನಂ ನಾಮ
ದಶಮೋಽಧ್ಯಾಯಃ**

ಇಲ್ಲಿಗೆ ಸ್ಕಾಂದಪುರಾಣದ ಸೂತಸಂಹಿತೆಯಲ್ಲಿ ನಾಲ್ಕನೆಯ ಭಾಗವಾದ
ಯಜ್ಞವೈಭವಖಂಡದಲ್ಲಿ ಎರಡನೆಯ ಭಾಗದಲ್ಲಿರುವ,
ಉಪನಿಷತ್ತುಗಳಂತಿರುವ ಬ್ರಹ್ಮಗೀತೆಯಲ್ಲಿ ಬೃಹದಾರಣ್ಯಕ ವ್ಯಾಖ್ಯಾಕಥನವೆಂಬ
ಹತ್ತನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಅಥಾಸ್ಯಾಃ ಶ್ರೀಮತ್ಸ್ಕಾಂದಪುರಾಣಾಂತರ್ಗತ ಸೂತಸಂಹಿತಾಯಾಶ್ಚತುರ್ಥಸ್ಯ ಯಜ್ಞವೈಭವಖಂಡಸ್ಯೋಪರಿಭಾಗೇ ಬ್ರಹ್ಮಗೀತಾ

॥ ಏಕಾದಶೋಽಧ್ಯಾಯಃ ॥

ಹನ್ನೊಂದನೆಯ ಅಧ್ಯಾಯವು

॥ ಬ್ರಹ್ಮೋವಾಚ ॥

ಅಸ್ತಿ ತತ್ವಂ ಪರಂ ಸಾಕ್ಷಾತ್ ದುರ್ದರ್ಶಂ ಗೂಢಮುತ್ತಮಂ ।
ಅನು ಪ್ರವಿಷ್ಟಂ ಸರ್ವತ್ರಂ ಗುಹಾಯಾಂ ನಿಹಿತಂ ಪರಂ ॥೧॥

ತದ್ವಿದಿತ್ವಾ ಮಹಾಧೀರೋ ಹರ್ಷಶೋಕೌ ಜಹಾತಿ ಚ ।
ಧರ್ಮಾದಿಭ್ಯಃ ಪರಂ ತತ್ತು ಭೂತಾದ್ಭವ್ಯಾಚ್ಚ ಸತ್ತಮಾಃ ॥೨॥

ಹಿಂದಿನ ಅಧ್ಯಾಯದಲ್ಲಿ ಜೀವನು ಬ್ರಹ್ಮಾಭಿನ್ನನು ಎಂಬ ಅಂಶವನ್ನು ನಿರೂಪಣೆಮಾಡಿದ್ದರಿಂದ ಬ್ರಹ್ಮಾತ್ಮೈಕ್ಯವನ್ನು ಹೇಳಿದುದಾಯಿತು. ಈ ಅಧ್ಯಾಯದಲ್ಲಿ ಪ್ರಾಪ್ಯಸ್ಥಾನವಾದ ಬ್ರಹ್ಮಪ್ರಾಪ್ತಿಗೆ ಮಾರ್ಗವನ್ನು ನಿರೂಪಿಸುತ್ತಾನೆ. ಪರಬ್ರಹ್ಮತತ್ವವು ಸೂಕ್ಷ್ಮಸ್ವರೂಪವಾಗಿರುವುದರಿಂದ ತಿಳಿದುಕೊಳ್ಳಲು ಅಶಕ್ಯವಾಗಿರುವುದರಿಂದ ಅಜ್ಞರಾದ ಜೀವರಿಂದ ಪ್ರವೇಶಿಸಲಸಾಧ್ಯವಾದ ಸ್ಥಳದಲ್ಲಿ ಇರುವವನೂ, (ಎಂದರೆ ಜೀವನಿಗಿರುವ ಜ್ಞಾನವು ಪ್ರಾಕೃತವಾದ ವಿಷಯಗಳಿಂದ ಆವರಿಸಲ್ಪಟ್ಟದ್ದಾದ್ದರಿಂದ ವಿಷಯಗಳಲ್ಲಿ ವ್ಯಾಪೃತವಾದ ಅಂತಃಕರಣವು ಪರಬ್ರಹ್ಮವಸ್ತುವನ್ನು ತಿಳಿಯಲು ಪ್ರವರ್ತಿಸುವುದಿಲ್ಲ. ಕ.ಉ. ೨.೧೨.) ಅಂತಃಕರಣದಲ್ಲಿ ಜೀವರೂಪದಿಂದಿರುವವನೂ, (ಎಂದರೆ ಸರ್ವ ವ್ಯಾಪಕನಾಗಿರುವವನಾದರೂ, ಅಂತಃಕರಣವೆಂಬ ಉಪಲಬ್ಧಿಸ್ಥಾನದಲ್ಲಿ ಅಭಿಮಾನದಿಂದ ಜೀವರೂಪದಿಂದಿರುವನೂ,) ಆಗಿರುತ್ತಾನೆ.॥೧॥

ಪೂರ್ವೋಕ್ತವಾದ ಆ ಬ್ರಹ್ಮತತ್ವವನ್ನು ತಿಳಿದುಕೊಂಡು ವಿದ್ವಾಂಸನು

ಯದಾ ಮನಂತಿ ವೇದಾಶ್ಚ ತಪಾಂಸಿ ಪರಮಂ ಪದಂ ।
ಬ್ರಹ್ಮಚರ್ಯಂ ಯದಿಚ್ಛಂತಶ್ಚರಂತಿ ಶಿವ ಏವ ಸಃ ॥೩॥

ಏತದ್ಧ್ಯೇವಾಕ್ಷರಂ ಬ್ರಹ್ಮ ಏತದ್ಧ್ಯೇವಾಕ್ಷರಂ ಪರಂ ।
ಏತದ್ಧ್ಯೇವಾಕ್ಷರಂ ಜ್ಞಾತ್ವಾ ಯೋ ಯದಿಚ್ಛತಿ ತಸ್ಯ ತತ್ ॥೪॥

ಉತ್ಕರ್ಷಾಪಕರ್ಷ ಪ್ರಯುಕ್ತವಾದ ಹರ್ಷಶೋಕಗಳನ್ನು ಬಿಡುತ್ತಾನೆ. (ಎಂದರೆ ತನಗೆ ಅಭಿವೃದ್ಧಿಸ್ಥಿತಿಯುಂಟಾಗಲು ಹಿಗ್ಗಿ ಮೆರೆಯುವುದಿಲ್ಲ. ಇದರಂತೆ ಹೀನ ಸ್ಥಿತಿಯುಂಟಾಗಲು ಕುಗ್ಗಿ ಸೊರಗುವುದಿಲ್ಲವೆಂದರ್ಥವು.) ಅದೇಕೆಂದರೆ ತಾನು ಜ್ಞೇಯವಾದ ಬ್ರಹ್ಮಸಿಗಿಂತಲೂ ಅಭಿನ್ನನಾದುದರಿಂದ ಅವನಲ್ಲಿ ಉತ್ಕರ್ಷಾಪಕರ್ಷ ಗಳು ಸಂಭವಿಸಲಾರವು. ವಿದ್ವಾಂಸನು ತಿಳಿದುಕೊಂಡಿರುವ ಆ ಬ್ರಹ್ಮತತ್ವವು ಪುಣ್ಯ ಪಾಪಗಳ ಸಂಪರ್ಕದಿಂದ ರಹಿತವಾಗಿಯೂ, ಭೂತಭವಿಷ್ಯಾತ್ಕಾಲದಿಂದ ಅಪರಿಚ್ಛಿನ್ನ ವಾಗಿಯೂ, ಎಂದರೆ ಸರ್ವದಾ ಇರುವುದಾಗಿದೆ. ಅದೇ ತಾನಾಗಿರುತ್ತಾನೆ. ॥೨॥

ಪೂರ್ವೋಕ್ತವಾದ ಈ ಬ್ರಹ್ಮತತ್ತ್ವವನ್ನೇ ಸಮಸ್ತ ವೇದಗಳೂ ಹೇಳು ತ್ತವೆ. ಸಮಸ್ತ ತಪಸ್ಸುಗಳೂ ಈ ಬ್ರಹ್ಮತತ್ತ್ವದ ಪ್ರಾಪ್ತಿಗೇ ಕಾರಣವಾಗಿರುತ್ತವೆ. ಮತ್ತು ಯಾವ ವಸ್ತುವನ್ನು ತಿಳಿದುಕೊಳ್ಳಲು ಸಾಧಕರು ಬ್ರಹ್ಮಚರ್ಯಾದಿ ನಿಯಮಗಳನ್ನು ಅನುಸರಿಸುವರೋ ಆ ವಸ್ತುವು ಬ್ರಹ್ಮತತ್ತ್ವವೇ ಆಗಿರುತ್ತದೆ.

(ಈ ಶ್ಲೋಕದಲ್ಲಿ ಉತ್ತಮ, ಮಧ್ಯಮಾಧಿಕಾರಿಗಳ ಭೇದದಿಂದ ಸಗುಣ ಬ್ರಹ್ಮೋಪಾಸಕರಿಗೂ ಮತ್ತು ನಿರ್ಗುಣ ಬ್ರಹ್ಮೋಪಾಸಕರಿಗೂ "ಓಂ" ಎಂಬ ಅಕ್ಷರವನ್ನು ಬ್ರಹ್ಮದೃಷ್ಟಿಯಿಂದ ಧ್ಯಾನಮಾಡಿ, ಮಂದಾಧಿಕಾರಿಗಳು ಕ್ರಮಮುಕ್ತಿ ಯನ್ನೂ ಉತ್ತಮಾಧಿಕಾರಿಗಳು ಸಾಕ್ಷಾನ್ಮುಕ್ತಿಯನ್ನೂ ಹೊಂದುತ್ತಾರೆ. ಇದೇ ಅವರಿಗೆ ಬ್ರಹ್ಮಪ್ರಾಪ್ತಿಯಲ್ಲಿ ಸಾಧನ ಎಂಬೀ ಅಂಶವನ್ನು ಹೇಳುತ್ತಾರೆ.)

ಈ ಪ್ರಣವಾತ್ಮಕವಾದ "ಓಂ" ಎಂಬೀ ಅಕ್ಷರವೇ ಹಿರಣ್ಯಗರ್ಭಸ್ವರೂಪ ವಾದ ಅಪರಬ್ರಹ್ಮವು. ಮತ್ತು ಈ ಅಕ್ಷರವೇ ಪರಬ್ರಹ್ಮಸ್ವರೂಪವೂ ಆಗಿರುತ್ತದೆ. ಈ ಅಕ್ಷರದ ಸ್ವರೂಪವನ್ನು ತಿಳಿದುಕೊಂಡು ಯಾವನು ಯಾವ ಬ್ರಹ್ಮವಸ್ತುವಿನ ಪ್ರಾಪ್ತಿ ಗೋಸ್ಕರ ಇಚ್ಛೆಪಡುತ್ತಾನೋ ಅವನಿಗೆ ಆ ಬ್ರಹ್ಮವಸ್ತುವಿನ ಸಾಕ್ಷಾತ್ಕಾರ ಉಂಟಾ ಗುತ್ತದೆ. (ಎಂದರೆ ಸಗುಣಬ್ರಹ್ಮೋಪಾಸಕರು "ಓಂ" ಎಂಬೀ ಅಕ್ಷರದಲ್ಲಿ ಹಿರಣ್ಯ ಗರ್ಭಬ್ರಹ್ಮದೃಷ್ಟಿಯಿಂದ ಉಪಾಸನೆಮಾಡಿ, ಅನಂತರ ಪ್ರಲಯಕಾಲದಲ್ಲಿ ಹಿರಣ್ಯ

ಏತದಾಲಂಬನಂ ಶ್ರೇಷ್ಠಮೇತದಾಲಂಬನಂ ಪರಂ ।
ಏತದಾಲಂಬನಂ ಜ್ಞಾತ್ವಾ ಬ್ರಹ್ಮಲೋಕೇ ಮಹೀಯತೇ ॥೫॥

ನ ಜಾಯತೇ ಮ್ರಿಯತೇ ವಾ ಕದಾಚಿ
ನ್ನಾಯಂ ಕುತಶ್ಚಿನ್ನ ಬಭೂವ ಕಶ್ಚಿತ್ ।
ಅಜೋ ನಿತ್ಯಃ ಶಾಶ್ವತೋಽಯಂ ಪುರಾಣೋ
ನ ಹನ್ಯತೇ ಹನ್ಯಮಾನೇ ಶರೀರೇ ॥೬॥

ಗರ್ಭನ ಲೋಕವನ್ನು ಪಡೆದು ಕಾಲಾಂತರದಲ್ಲಿ ಕ್ರಮವಾಗಿ ಮುಕ್ತಿಯನ್ನು ಪಡೆಯುತ್ತಾರೆ. ನಿರ್ಗುಣಬ್ರಹ್ಮೋಪಾಸಕರಾದರೋ "ಓಂ" ಎಂಬ ಪ್ರತೀಕದಲ್ಲಿ ನಿರ್ಗುಣ ಬ್ರಹ್ಮದೃಷ್ಟಿಯಿಂದ ಉಪಾಸನೆ ಮಾಡಿ, ಶೀಘ್ರವಾಗಿಯೇ ಈ ಲೋಕದಲ್ಲಿಯೇ ಈಗಲೇ ಮುಕ್ತಿಯನ್ನು ಪಡೆಯುವರು. ಎಂದರ್ಥವು. ಏಕೆಂದರೆ ಸಗುಣಬ್ರಹ್ಮೋಪಾಸನೆಗೂ ನಿರ್ಗುಣಬ್ರಹ್ಮೋಪಾಸನೆಗೂ ಪ್ರಣವವೇ ಪ್ರತೀಕವಾಗಿರುತ್ತದೆ. ॥೪॥

ಆದುದರಿಂದ ಮುಮುಕ್ಷುವಿಗೆ ಬ್ರಹ್ಮಪ್ರಾಪ್ತಿಯಲ್ಲಿ ಓಂಕಾರವೇ ಶ್ರೇಷ್ಠವಾದ ಸಾಧನವಾಗಿರುತ್ತದೆ. ಇದನ್ನು ತಿಳಿದುಕೊಂಡೇ ವಿದ್ವಾಂಸನು ಬ್ರಹ್ಮಲೋಕದಲ್ಲಿ ಆನಂದವನ್ನು ಅನುಭವಿಸುತ್ತಾನೆ. ಎಂದರೆ ಸಗುಣಬ್ರಹ್ಮೋಪಾಸಕನು ಅರ್ಚಿರಾದಿ ಮಾರ್ಗದಿಂದ ಬ್ರಹ್ಮಲೋಕವನ್ನು ಹೊಂದಿ ಅಲ್ಲಿಂದ ಕ್ರಮವಾಗಿ ಮುಕ್ತಿಯನ್ನೈದುವನು. ನಿರ್ಗುಣಬ್ರಹ್ಮೋಪಾಸಕನಾದರೋ ಹೃದಯಾಕಾಶದಲ್ಲಿ ಉಪಲಬ್ಧವಾಗುವ ಪರಬ್ರಹ್ಮಸ್ವರೂಪವನ್ನು ಹೊಂದಿ ಅಖಂಡಾನಂದವನ್ನು ಅನುಭವಿಸುತ್ತಾನೆ. ॥೫॥

ತಿಳಿಯಬೇಕಾದ ಆ ನಿರುಪಾಧಿಕವಾದ ಬ್ರಹ್ಮಸ್ವರೂಪವನ್ನು ಈ ಶ್ಲೋಕದಲ್ಲಿ ಹೇಳುತ್ತಾರೆ.—ಈ ಬ್ರಹ್ಮನಿಗೆ ಜನನಮರಣಾದಿ ಷಡ್ಭಾವವಿಕಾರಾದಿಗಳು ಇಲ್ಲವು. ಅದು ಹೇಗೆಂದರೆ ಇವನು ನಿತ್ಯನಾದುದರಿಂದ ಜನನಮರಣಗಳು ಇವನಿಗಿರುವುದಿಲ್ಲ. ಲೋಕದಲ್ಲಿ ಯಾವ ಪದಾರ್ಥವು ಅನಿತ್ಯವೋ ಅವಕ್ಕೆ ಜನನಮರಣ ರೂಪವಾದ ವಿಕ್ರಿಯೆಗಳು ಇರುತ್ತವೆ. ಆದರೆ ಆತ್ಮನು ನಿತ್ಯನಾಗಿರುವನು. ಮತ್ತು ಬ್ರಹ್ಮನು ಯಾವುದರಿಂದಲೂ ಜನಿಸಿರುವುದಿಲ್ಲ. ಎಂದರೆ ಇವನಿಗೆ ಕಾರಣಭೂತವಾದ ಯಾವುದೊಂದು ಬೇರೆ ವಸ್ತುವೂ ಇರುವುದಿಲ್ಲ. ಇದರಂತೆ ಇವನಿಂದ ಯಾವ ಪದಾರ್ಥಗಳೂ, ವಾಸ್ತವವಾಗಿ ಹುಟ್ಟಿರುವುದಿಲ್ಲ. ಆದುದರಿಂದಲೇ ಇವನು ಜನನರಹಿತನಾಗಿಯೂ, ನಿತ್ಯನೂ, ಅನಾದಿ ಸಿದ್ಧನೂ ಮತ್ತು ಈ ಶರೀರವು ನಷ್ಟವಾದರೂ ತಾನು ನಿತ್ಯನಾದುದರಿಂದ ನಾಶವನ್ನು ಹೊಂದದೇ ಇರುವವನೂ ಆಗಿರುತ್ತಾನೆ. ॥೬॥

ಯ ಏನಂ ವೇತ್ತಿ ಹಂತಾರಂ ಯಶ್ಚೈನಂ ಮನ್ಯತೇ ಹತಂ ।
ಉಭೌ ತೌ ನ ವಿಜಾನೀತೋ ನಾಯಂ ಹತಿ ನ ಹನ್ಯತೇ ॥೭॥

ಅಣೋರಣೀಯಾನ್ ಮಹತೋ ಮಹೀಯಾ
ನಾತ್ಮಾಸ್ಯ ಜಂತೋಃ ನಿಹಿತೋ ಗುಹಾಯಾಂ ।
ತಮ ಕ್ರತುಃ ಪಶ್ಯತಿ ವೀತಶೋಕೋ
ಧಾತು ಪ್ರಸಾದಾನ್ಮಹಿಮಾನಮಸ್ಯ ॥೮॥

ಲೋಕದಲ್ಲಿ ಒಬ್ಬನು ಇನ್ನೊಬ್ಬನನ್ನು ಕೊಂದರೆ ಒಬ್ಬನು ಮೃತನಾದನು. ಇನ್ನೊಬ್ಬನು ಅವನನ್ನು ಕೊಂದನು. ಎಂದು ಆತ್ಮನಿಗೆ ನಾಶವು ಅನುಭವಸಿದ್ಧವಾಗಿರುವುದರಿಂದ, ಆತ್ಮನು ನಿತ್ಯನಲ್ಲವು, ಎಂಬ ಶಂಕೆಯು ಸಂಭವಿಸಬಹುದು. ಅದನ್ನು ಹೋಗಲಾಡಿಸಲು ಈ ಶ್ಲೋಕವನ್ನು ಹೇಳುತ್ತಾನೆ. ಆತ್ಮನನ್ನು ಕೊಂದೆನೆಂದು ಯಾವನು ತಿಳಿದುಕೊಳ್ಳುತ್ತಾನೋ ಮತ್ತು ಯಾವನು ಇನ್ನೊಬ್ಬನಿಂದ ಹೊಡೆಯಲ್ಪಟ್ಟವನಾಗಿ ನಾನು ಹೊಡೆಯಲ್ಪಟ್ಟೆನು. ಎಂದು ತಿಳಿಯುತ್ತಾನೋ, ಇವರಿಬ್ಬರೂ ಅಜ್ಞರಾಗಿರುತ್ತಾರೆ. ಏಕೆಂದರೆ ಆತ್ಮನು ನಿತ್ಯನೂ, ಒಬ್ಬನೂ ಆಗಿರುವುದರಿಂದ ತನಗೆ ಕರ್ಮಭೂತವಾದ ಮತ್ತೊಬ್ಬನಿಲ್ಲದೆ ಆತ್ಮನನ್ನು ಹೊಡೆಯಲಾರನು. ಅಲ್ಲದೆ ನಾನು ಹೊಡೆಸಿಕೊಂಡೆನು. ಇನ್ನೊಬ್ಬನು ಹೊಡೆದನು. ಎಂದು ತಿಳಿದುಕೊಳ್ಳುವವನು ಯಾವನಿರುವನೋ, ಅವನು ಅಜ್ಞನೂ ಮತ್ತು ಶರೀರವನ್ನು ಆತ್ಮನನ್ನಾಗಿ ತಿಳಿದುಕೊಳ್ಳುವವನೂ ಆಗಿರುತ್ತಾನೆ. ವಿದ್ವಾಂಸನಾದರೋ ಆತ್ಮನು ನಿತ್ಯನೆಂದು ಆತ್ಮನ ಯಾಥಾತ್ಮ್ಯವನ್ನು ತಿಳಿದುಕೊಂಡವನಾದುದರಿಂದ ಆ ರೀತಿ ಶೋಚಿಸುವುದಿಲ್ಲ. ॥೭॥

ಪರಬ್ರಹ್ಮನ ನೈಜವಾದ ಸ್ವರೂಪವು ಚೆನ್ನಾಗಿ ತಿಳಿಯಲೆಂಬ ಉದ್ದೇಶದಿಂದ ಪುನಃ ಪುನಃ ಬ್ರಹ್ಮಸ್ವರೂಪವನ್ನೇ ಈ ಶ್ಲೋಕಗಳಿಂದ ಹೇಳುತ್ತಾರೆ. ಪರಬ್ರಹ್ಮನು ಸೂಕ್ಷ್ಮವಾದ ಪದಾರ್ಥಕ್ಕಿಂತಲೂ ಸೂಕ್ಷ್ಮವಾದವನು. ಮತ್ತು ಮಹತ್ತಾದ ಪದಾರ್ಥಕ್ಕಿಂತಲೂ ಮಹತ್ತಾದ ಪರಮಪರಿಮಾಣವುಳ್ಳವನು. ಎಂದರೆ ಆತ್ಮನು ಅತಿ ಸೂಕ್ಷ್ಮಪದಾರ್ಥಗಳಲ್ಲೂ ವ್ಯಾಪಿಸಿ ಆಧಾರಭೂತನಾಗಿರುವುದರಿಂದ ಸೂಕ್ಷ್ಮಕ್ಕಿಂತಲೂ ಸೂಕ್ಷ್ಮನೆಂದೂ, ಮಹತ್ಪರಿಮಾಣವುಳ್ಳ ಪದಾರ್ಥಗಳನ್ನೂ ವ್ಯಾಪಿಸಿ ಆಧಾರಭೂತನಾಗಿರುವುದರಿಂದ ಮಹತ್ಪದಾರ್ಥಗಳಿಗಿಂತಲೂ ಮಹತ್ತಾದವನೆಂದೂ ಹೇಳುತ್ತಾರೆ. ಸೂಕ್ಷ್ಮವೆಂದರೆ ಚಿಕ್ಕವನೆಂದರ್ಥವಲ್ಲವು. ದುರ್ವಿಜ್ಞೇಯನೆಂದು ತಾತ್ಪರ್ಯವು.

ದೂರಂ ವ್ರಜತಿ ಚಾಸೀನಃ ಶಯಾನೋ ಯಾತಿ ಸರ್ವತಃ ।
ಕಸ್ತಂ ಸಾಕ್ಷಾನ್ಮಹಾದೇವಂ ಮದನ್ಯೋ ಜ್ಞಾತುಮರ್ಹತಿ ॥೯॥

ಅಶರೀರಂ ಶರೀರೇಷು ಹ್ಯನವಸ್ಥೇಷ್ವವಸ್ಥಿತಂ ।
ಮಹಾಂತಂ ವಿಭುಮಾತ್ಮಾನಂ ಮತ್ವಾ ಧೀರೋ ನ ಶೋಚತಿ ॥೧೦॥

ಹೀಗಿರುವ ಬ್ರಹ್ಮನು ಪ್ರಾಣಿಗಳ ಹೃದಯಾಕಾಶದಲ್ಲಿ ಉಪಲಬ್ಧನಾಗುವನು. ಬ್ರಹ್ಮನು ಸರ್ವವ್ಯಾಪಿಯಾದರೂ ಹಾರ್ದಾಕಾಶದಲ್ಲಿಯೇ ಉಪಲಬ್ಧನಾಗುವನು. ಅವನ ಉಪಲಬ್ಧಿಸ್ಥಳವು ಹಾರ್ದಾಕಾಶವೆಂದು ಅರ್ಥವು. ಇಂತಹ ಆತ್ಮನನ್ನು ದೃಷ್ಟಾದೃಷ್ಟ ಐಹಿಕಾಮುಷ್ಮಿಕ ವಿಷಯಗಳಲ್ಲಿ ನಿಷ್ಕಾಮನಾಗಿ ಮತ್ತು ಮನಸ್ಸೇ ಮೊದಲಾದ ಇಂದ್ರಿಯಗಳನ್ನು ಬಾಹ್ಯವಿಷಯಗಳಿಂದ ಉಪಸಂಹರಿಸಿರುವ ಸಂಸಾರದುಃಖದಿಂದ ಬಾಹ್ಯನಾಗಿರುವ ವಿದ್ವಾಂಸನು ಸಾಕ್ಷಾತ್ಕರಿಸುವನು. ॥೮॥

ಒಂದು ಕಡೆ ಇರುವವನಾಗಿಯೇ ದೂರದೇಶಕ್ಕೂ ಹೋಗಿರುತ್ತಾನೆ. ಮಲಗಿ ನಿದ್ದೆಹೋದವನಂತಿದ್ದರೂ ಸಮಸ್ತ ಸ್ಥಳದಲ್ಲಿಯೂ ಸಂಚರಿಸುವವನು. (ಎಂದರೆ ಒಂದೇ ಕಡೆಯಲ್ಲಿದ್ದುಕೊಂಡು ದೂರದೇಶಕ್ಕೆ ಹೋಗುವುದು. ನಿದ್ದೆಹೋದವನಾಗಿ ಸರ್ವಕಡೆಯಲ್ಲಿಯೂ ಇರುವಿಕೆಯು, ಎಂಬೀ ಕ್ರಿಯೆಗಳು ಪರಸ್ಪರವಿರುದ್ಧಗಳಾಗಿರುವುವಾದರೂ ಈ ಕ್ರಿಯೆಗಳೆಲ್ಲವೂ ಆತ್ಮನಲ್ಲಿ ಅಧ್ಯಸ್ತಗಳಾಗಿರುವುದರಿಂದ ಸರ್ವವ್ಯಾಪಿಯಾದ ಆತ್ಮನಲ್ಲಿ ಸಂಭವಿಸಬಹುದು. ಪೂರ್ವೋಕ್ತವಾದ ವಿರುದ್ಧಧರ್ಮಗಳು ಪರಿಚ್ಛಿನ್ನವಾದ ಆತ್ಮನಲ್ಲಿ ಸಂಭವಿಸಲಾರದಾದಕಾರಣ ಆತ್ಮನು ಅಪರಿಚ್ಛಿನ್ನನೇ ಆಗಿರುತ್ತಾನೆ. ಈ ರೀತಿಯಾದ ಆತ್ಮನನ್ನು ಜ್ಞಾನಿಯಾದ ನನಗಿಂತಲೂ ಬೇರೆಯವನು ಯಾರು ತಾನೇ ತಿಳಿದುಕೊಳ್ಳಲು ಸಮರ್ಥನಾದಾನು? (ಈ ಮಾತು ಕಾಠಕೋಪನಿಷತ್ತಿನಲ್ಲಿ ನಚಿಕೇತನನ್ನು ಕುರಿತು ಯಮನ ಕ. ಉ. ೨.೧೮-೨೨. ಮಾತಾಗಿರುತ್ತದೆ.) ॥೯॥

ತನ್ನ ನೈಜವಾದ ಸ್ವರೂಪದಿಂದ ಶರೀರವಿಲ್ಲದಿರುವವನೂ, ಅನಿತ್ಯವಾದ ದೇವ, ಪಿತೃ, ಮನುಷ್ಯಾದಿಗಳ ಶರೀರಗಳಲ್ಲಿ ಆತ್ಮಭಾವದಿಂದ ಇರುವವನೂ, ಸ್ವಸ್ವರೂಪದಿಂದ ನಿತ್ಯನೂ, ಆಕಾಶಾದಿಗಳಂತೆ ಆಪೇಕ್ಷಿಕವಲ್ಲದ ಪರಮ ಮಹತ್ತ್ವವುಳ್ಳವನೂ, ಆದ ಆತ್ಮನನ್ನು ಜ್ಞಾನಿಯು ಮನನನಿಧಿಧ್ಯಾಸನಗಳಿಂದ ತಿಳಿದುಕೊಂಡು ಸಂಸಾರದುಃಖದಿಂದ ನಿವೃತ್ತನಾಗುವನು. ॥೧೦॥

ನಾಯಮಾತ್ಮಾ ಪ್ರವಚನೇನ ಲಭ್ಯೋ
ನ ಮೇಧಯಾ ನ ಬಹುನಾ ಶ್ರುತೇನ ।
ಯಮೇವೈಷ ವೃಣುತೇ ತೇನ ಲಭ್ಯಃ
ತಸ್ಯೈಷ ಆತ್ಮಾ ವಿವೃಣುತೇ ತನೂಂ ಸ್ವಾಂ ॥೧೧॥

ನಾವಿರತೋ ದುಶ್ಚರಿತಾನ್ನಾಶಾಂತೋ ನಾಸಮಾಹಿತಃ ।
ನಾಶಾಂತ ಮಾನಸೋ ವಾಽಪಿ ಪ್ರಜ್ಞಾನೇನೈನ ಮಾಪ್ನುಯಾತ್ ॥೧೨॥

ಆತ್ಮನ ಸ್ವರೂಪವನ್ನು ತಿಳಿಯುವುದು ಬಹಳ ಪ್ರಯಾಸಸಾಧ್ಯವೆಂಬ ಅಂಶವನ್ನು ಈ ಮಂತ್ರದಲ್ಲಿ ಹೇಳುತ್ತಾರೆ.

ಅರ್ಥ—ಅನೇಕ ವೇದಾಧ್ಯಯನಗಳಿಂದ ಮಾತ್ರವೇ ಈ ಆತ್ಮನನ್ನು ಪಡೆಯುವುದು ಅಸಾಧ್ಯವು. ಗ್ರಂಥಧಾರಣಶಕ್ತಿಯಿಂದಲೂ ಪಡೆಯಲು ಅಶಕ್ಯನು. ಮತ್ತು ಆತ್ಮವ್ಯತಿರಿಕ್ತವಾದ ವಿಷಯವನ್ನು ಪ್ರತಿಪಾದಿಸುವ ಶಾಸ್ತ್ರಗಳ ಶ್ರವಣದಿಂದಲೂ, ಆತ್ಮಪ್ರಾಪ್ತಿಯು ಅಸಾಧ್ಯವು. ಸಾಧಕನು ಯಾವ ಆತ್ಮಪ್ರಾಪ್ತಿಯನ್ನು ಇಚ್ಛಿಸುವನೋ ಆ ಆತ್ಮನಿಂದಲೇ ಆತ್ಮನನ್ನು ಪಡೆಯಬೇಕೇ ಹೊರತು ಬೇರೆಯ ಸಾಧನಾಂತರಗಳಿಂದ ಪಡೆಯುವುದು ಅಸಾಧ್ಯವು. (ಎಂದರೆ ಯಾವ ಆತ್ಮನಿಗೋಸ್ಕರ ಸಾಧಕನು ಸತತವಾಗಿ ಪ್ರಯತ್ನಿಸುವನೋ, ಇತರ ವಿಷಯಗಳಲ್ಲಿ ನಿಷ್ಕಾಮನಾಗಿ ಆತ್ಮನನ್ನೇ ನಿರಂತರವಾಗಿ ಧ್ಯಾನಮಾಡಿದರೆ ತತ್ಪ್ರಾಪ್ತಿಯಾಗುವುದು. ಇದು ಇಲ್ಲದೇ ಆತ್ಮಪ್ರಾಪ್ತಿಗೆ ಬೇರೆಯ ಯಾವ ಮಾರ್ಗವೂ ಇರುವುದಿಲ್ಲವೆಂದರ್ಥವು.) ಹೀಗೆ ಧ್ಯಾನಮಾಡಲು ತನಗೆ ಔಪಾಧಿಕವಾಗಿ ಬಂದಿರುವ ಜೀವಭಾವವು ದೂರವಾಗಿ ತನ್ನ ನೈಜವಾದ ಸಚ್ಚಿದಾನಂದಸ್ವರೂಪದಿಂದ ಪ್ರಕಾಶಮಾನನಾಗುವನು. ॥೧೧॥

ಪಾಪಕರ್ಮಗಳನ್ನಾಚರಿಸುವವನೂ, ಇಂದ್ರಿಯವ್ಯಾಪಾರಗಳಲ್ಲಿ ಲೋಲುಪನಾಗಿರುವವನೂ, ಚಿತ್ತೈಕಾಗ್ರ್ಯವಿಲ್ಲದಿರುವವನೂ, ವಿಷಯಗಳಿಂದ ವಿಮುಖನಾಗಲು ಮನಸ್ಸಿಲ್ಲದಿರುವವನೂ, ಸಹ ಆತ್ಮಸಾಕ್ಷಾತ್ಕಾರವನ್ನು ಹೊಂದಲಾರನು. ಮತ್ತೇನೆಂದರೆ ಗುರೂಪದೇಶದಿಂದ ಉಂಟಾದ ಆತ್ಮಜ್ಞಾನವುಳ್ಳವನೇ ಆತ್ಮನನ್ನು ಸಾಕ್ಷಾತ್ಕರಿಸಲು ಸಮರ್ಥನಾಗುವನು. ॥೧೨॥

ಯಸ್ಯ ಬ್ರಹ್ಮ ಚ ಕ್ಷತ್ರಂ ಚ ಉಭೇ ಭವತ ಓದನಃ ।
ಕ ಇತ್ಥಂ ವೇದ ದೇವೋ ವಾ ಮನುಷ್ಯೋಽನ್ಯಶ್ಚ ಯತ್ರ ಸಃ ॥೧೩॥

ಋತಂ ಪಿಬಂತೌ ಸುಕೃತಸ್ಯ ಲೋಕೇ
ಗುಹಾಂ ಪ್ರವಿಷ್ಟೌ ಪರಮೇ ಪರಾರ್ಧೇ ।
ಛಾಯಾಽಽತಪೌ ಬ್ರಹ್ಮವಿದೋ ವದಂತಿ
ಶರೀರಭೃಚ್ಛಂಕರ ಸಂಜ್ಞಿತೌ ತೌ ॥೧೪॥

ಯಾವ ಬ್ರಹ್ಮನಿಗೆ ಬ್ರಹ್ಮ, ಕ್ಷತ್ರಾದಿ ವರ್ಣಗಳಿಂದ ಕೂಡಿರುವ ಈ ಪ್ರಪಂಚವೇ ಆಹಾರವಾಗಿರುವುದೋ, ಮತ್ತು ಸರ್ವ ಸಂಹಾರಕನಾದ ಮೃತ್ಯುವೇ ಉಪದಂಶನವಾಗಿರುವನೋ (ಉಪದಂಶವೆಂದರೆ ಊಟದಲ್ಲಿ ನಂಚಿಕೊಳ್ಳುವುದಕ್ಕೆ ಉಪಯೋಗಿಸುವ ಪದಾರ್ಥವು, ಉಪ್ಪಿನಕಾಯಿ ಮುಂತಾದವುಗಳು.) (ಮತ್ತು ಬ್ರಹ್ಮನು ಸರ್ವ ಜಗತ್ತಿನ ಲಯಕ್ಕೆ ಆಧಾರಭೂತನೆಂದರ್ಥವು.) ಅಂತಹ ಪರಮಾತ್ಮನು ಎಲ್ಲಿರುವನು? ಮತ್ತು ಅವನ ಸ್ವರೂಪವೇನು? ಎಂಬುದನ್ನು ದೇವಮನುಷ್ಯಾದಿಗಳ ನಡುವೆ ಯಾವನು ತಾನೇ ತಿಳಿಯಲು ಸಮರ್ಥನಾಗುವನು? ॥೧೩॥

ಮೋಕ್ಷಪ್ರಾಪ್ತಿಯಾಗುವುದಕ್ಕೆ ಪ್ರಾಪ್ತವ್ಯವಾದ ಸ್ಥಳವು ಯಾವುದು? ಮತ್ತು ಆ ಸ್ಥಳವನ್ನು ಸೇರುವವನು ಯಾರು? ಎಂಬಂಶವನ್ನು ವಿಶದವಾಗಿ ತಿಳಿಸುವುದಕ್ಕೋಸ್ಕರ ಜೀವೇಶ್ವರರಿಗೆ ಲೋಕಪ್ರಸಿದ್ಧವಾದ ಔಪಾಧಿಕಭೇದವನ್ನು ಈ ಮಂತ್ರವು ಹೇಳುತ್ತದೆ.

ಅರ್ಥ—ಜೀವೇಶ್ವರರು ಪೂರ್ವಜನ್ಮದಲ್ಲಿ ಆಚರಿಸಿರುವ ಕರ್ಮಕ್ಕೆ ಫಲಭೂತವಾದ ಈ ದೇಹದಲ್ಲಿ ಹಾರ್ದಾಕಾಶವನ್ನು ಪ್ರವೇಶಿಸಿ ಇರುವರು. ಅಲ್ಲಿದ್ದುಕೊಂಡು ತಾವು ಆಚರಿಸಿದ ಕರ್ಮದಿಂದ ಅವಶ್ಯವಾಗಿ ಬಂದೊದಗುವ ಫಲವನ್ನು ಅನುಭವಿಸುತ್ತಿರುವರು. (ಜೀವೇಶ್ವರರಿಬ್ಬರೂ ಹಾರ್ದಾಕಾಶದಲ್ಲಿ ಇರುವವರಾದರೂ ಅವರಿಬ್ಬರಲ್ಲಿ ಜೀವನು ಮಾತ್ರ ಕರ್ಮಫಲವನ್ನು ಅನುಭವಿಸುತ್ತಾನೆ. ಈಶ್ವರನಿಗೆ ಕರ್ಮಫಲ ಭೋಗವಿಲ್ಲ. ಆದರೆ ಛತ್ರಿನ್ಯಾಯದಂತೆ ಇಬ್ಬರೂ ಕರ್ಮಫಲವನ್ನು ಭೋಗಿಸುವವರೆಂದು ಹೇಳಲಾಗಿದೆ.) ಹೀಗಿರುತ್ತಿರಲು ಈಶ್ವರನು ಅಸಂಸಾರಿಯಾದುದರಿಂದಲೂ ಇವರಿಬ್ಬರನ್ನೂ ನೆಳಲು ಮತ್ತು ಬಿಸಿಲುಗಳಂತೆ ಪರಸ್ಪರ ವಿರುದ್ಧಧರ್ಮಗಳುಳ್ಳವರು,

ಶರೀರಭೃತ್ಕರ್ಮಫಲಂ ಭುಜ್ತೇ ಯೋಜಯಿತಾ ಶಿವಃ ।
ಪ್ರತೀತಿತೋ ವಿರುದ್ಧಾ ತೌ ಭೇದಸ್ತ್ವೌಪಾಧಿಕಸ್ತಯೋಃ ॥೧೫॥

ಆತ್ಮಾನಂ ರಥಿನಂ ವಿದ್ಯಾಚ್ಛರೀರಂ ರಥಮೇವ ತು ।
ಬುದ್ಧಿಂ ತು ಸಾರಥಿಂ ವಿದ್ಯಾನ್ಮನಃ ಪ್ರಗ್ರಹಮೇವ ಚ ॥೧೬॥

ಎಂದು ಜ್ಞಾನಿಗಳೂ ಮತ್ತು ನಾಚಿಕೇತಾಗ್ನಿಯನ್ನು ಚಯನಮಾಡಿರುವ ಕರ್ಮಿಗಳೂ ಹೇಳುತ್ತಾರೆ. "ಗುಹಾಂಪ್ರವಿಷ್ಟಾವಾತ್ಮಾನೌಹಿತದ್ದರ್ಶನಾತ್" ಬ್ರ೦. ಸೂ. ೧.೨.೧೧. ನೋಡಿ. ॥೧೪॥

ಜೀವೇಶ್ವರರಿಗಿರುವ ಭೇದವು ವಾಸ್ತವಿಕವಾದದ್ದಲ್ಲ. ಅವಿದ್ಯೆ, ಮಾಯೆ ಎಂಬ ಉಪಾಧಿಗಳ ಭೇದದಿಂದ ತೋರುತ್ತದೆ. ಎಂಬ ಅಂಶವನ್ನು ಈ ಮಂತ್ರವು ಹೇಳುತ್ತದೆ.

ಜೀವೇಶ್ವರರ ನಡುವೆ ಜೀವನು ಕರ್ಮಫಲವನ್ನನುಭವಿಸುವವನು. ಈಶ್ವರನು ಜೀವನಿಗೆ ನಿಯಾಮಕನು. ಜಲಗಳಲ್ಲಿ ಪ್ರತಿಬಿಂಬಿಸಿರುವ ಚಂದ್ರನ ಪ್ರತಿಬಿಂಬಗಳು ಚಂದ್ರನಿಗಿಂತಲೂ ಅಭಿನ್ನವಾದರೂ ಭಿನ್ನವಾದುವೆಂದು ಕಾಣಿಸಿದಂತೆ, ಅಂತಃಕರಣದಲ್ಲಿ ಈಶ್ವರನ ಪ್ರತಿಬಿಂಬವಿದ್ದು ಅದು ಈಶ್ವರನಿಗಿಂತ ಅಭಿನ್ನವಾದರೂ ಭಿನ್ನವಾದದ್ದೆಂದು ತಿಳಿವಳಿಕೆಯು ಲೋಕದಲ್ಲಿ ಅಜ್ಞಾನದಿಂದ ಬಂದಿರುತ್ತದೆ. ಆದರೆ ಈ ಜೀವೇಶ್ವರರ ಭೇದವು ವ್ಯಾವಹಾರಿಕದಶೆಯಲ್ಲಿಯೇ ಹೊರತು ಪಾರಮಾರ್ಥಿಕವಾಗಿ ಜೀವೇಶ್ವರರು ಅಭಿನ್ನರು. ॥೧೫॥

ಕರ್ಮಫಲಗಳನ್ನು ಅನುಭವಿಸುವ ಮತ್ತು ಸಂಸಾರಿಯಾದ ಜೀವನನ್ನು ರಥಿಕನನ್ನಾಗಿಯೂ ಶರೀರವನ್ನೇ ರಥವನ್ನಾಗಿಯೂ ತಿಳಿಯತಕ್ಕದ್ದು. ಬುದ್ಧಿಯನ್ನು ಶರೀರವೆಂಬ ರಥದ ಸಾರಥಿಯನ್ನಾಗಿಯೂ, ಮನಸ್ಸನ್ನು ಅಶ್ವಾಕರ್ಷಣದ ಹಗ್ಗವನ್ನಾಗಿಯೂ ತಿಳಿಯತಕ್ಕದ್ದು. (ರಥಸ್ವಾಮಿ, ರಥ, ಸಾರಥಿ, ಮತ್ತು ಹಗ್ಗಗಳಿಂದ ಆ ಜೀವಾತ್ಮನೇ ಮೊದಲಾದುವುಗಳನ್ನು ರೂಪಕಮರ್ಯಾದೆಯಿಂದ ವರ್ಣಿಸುವುದರ ಮೂಲಕ ಪ್ರಾಪ್ತವ್ಯವಾದ ಬ್ರಹ್ಮಪದವಿಯ ಪ್ರಾಪ್ತಿಗೆ ಸಾಧನವಾದುವು? ಮತ್ತು ಸಾಧಿಸುವವನು ಯಾರು? ಎಂಬುದನ್ನು ಈ ಮಂತ್ರದಿಂದ ಮೊದಲುಗೊಂಡು ಮುಂದಿನ ಕೆಲವು ಮಂತ್ರಗಳಿಂದ ತಿಳಿಯಿಸಲಾಗುತ್ತದೆ.) ॥೧೬॥

ಅದರಂತೆ ಚಕ್ಷುರಾದಿ ಇಂದ್ರಿಯಗಳನ್ನು ಅಶ್ವಗಳನ್ನಾಗಿಯೂ ರೂಪಾದಿ ವಿಷಯಗಳನ್ನು ಅಶ್ವಗಳ ಸಂಚಾರಪ್ರದೇಶವನ್ನಾಗಿಯೂ (ಪೂರ್ವೋಕ್ತರೀತಿಯಂತೆ

ಇಂದ್ರಿಯಾಣಿ ಹಯಾನ್ವಿದ್ಯಾ ದ್ವಿಷಯಾನಪಿ ಗೋಚರಾನ್ ।
ಆತ್ಮೇಂದ್ರಿಯ ಮನೋಯುಕ್ತಂ ವಿದ್ಯಾದ್ಭೋಕ್ತಾರಮಾಸ್ತಿಕಾಃ ॥೧೭॥

ಯಸ್ತ್ವವಿಜ್ಞಾನವಾನ್ ಮರ್ತ್ಯೋಽಯುಕ್ತೇನ ಮನಸಾ ಸದಾ ।
ತಸ್ಯೇಂದ್ರಿಯಾಣ್ಯವಶ್ಯಾನಿ ದುಷ್ಟಾಶ್ವಾ ಇವ ಸಾರಥೇಃ ॥೧೮॥

ಶರೀರಾದಿಗಳಿಗೆ ರಥಾದಿಗಳ ಸಾಮ್ಯವನ್ನೂ, ಜೀವನಿಗೆ ಶರೀರಾದಿಗಳ ಸ್ವಾಮಿತ್ವವನ್ನೂ ಹೇಳಿದಂತಾಯಿತು. ಇನ್ನು ಮುಂದೆ "ಆತ್ಮೇಂದ್ರಿಯಮನೋಯುಕ್ತಂ" ಎಂಬ ಶ್ಲೋಕಭಾಗದಿಂದ ಶರೀರಾದಿ ವಿಶಿಷ್ಟ ಆತ್ಮನು ಫಲಭೋಕ್ತೃವೇ ಹೊರತು ಶುದ್ಧಬ್ರಹ್ಮನಲ್ಲ ಎಂಬ ಅಂಶವನ್ನು ತಿಳಿಸುತ್ತಾರೆ.)

ಅರ್ಥ—ಎಲೈ ಆಸ್ತಿಕರೇ, ಶರೀರೇಂದ್ರಿಯಗಳಿಂದ ಯುಕ್ತನಾದ ಜೀವಾತ್ಮನೇ ರೂಪಾದಿ ವಿಷಯಗಳಿಂದುಂಟಾದ ಫಲವನ್ನು ಅನುಭವಿಸುವವನು. ಎಂದು ತಿಳಿಯಬೇಕು. ||೧೭||

ರಥರೂಪಕ ಕಲ್ಪನೆಯಿಂದ ಯಾವನು ಇಂದ್ರಿಯಪರವಶನಾಗುವನೋ ಅವನು ಅವಿವೇಕಿಯೂ, ಯಾವನು ಇಂದ್ರಿಯನಿಗ್ರಹವುಳ್ಳವನೋ ಅವನು ವಿವೇಕಿಯೂ ಆಗಿರುವನು. ಎಂಬೀ ವಿಷಯವನ್ನು ಈ ಮಂತ್ರವು ತಿಳಿಸುತ್ತದೆ.

ಯಾವ ಮನುಷ್ಯನು ಆತ್ಮಸ್ವರೂಪವನ್ನು ತಿಳಿದುಕೊಳ್ಳದೇ ಕಾರ್ಯಾಕಾರ್ಯ ವಿವೇಕಜ್ಞಾನರಹಿತನಾಗಿರುವನೋ ಮತ್ತು ಮನೋನಿಗ್ರಹವಿಲ್ಲದಿರುವನೋ ಅವನ ಚಕ್ಷುರಾದಿ ಇಂದ್ರಿಯಗಳು, ರಥಿಕನ ದುಷ್ಟವಾದ ಅಶ್ವಗಳಂತೆ, ವಶೀಕರಣ ಮಾಡಲಶಕ್ಯವಾಗಿರುವುವು. ಎಂದರೆ ದುಷ್ಟವಾದ ಅಶ್ವಗಳು ಶಿಷ್ಟರ ಮಾರ್ಗವನ್ನು ತಪ್ಪಿಸಿ ರಥವನ್ನೆಳೆದುಕೊಂಡುಹೋಗಿ ರಥಸ್ವಾಮಿಯನ್ನು ಹೇಗೆ ಕೆಟ್ಟಮಾರ್ಗದಲ್ಲಿ ಒಯ್ಯುವವೋ, ಅದೇರೀತಿಯಲ್ಲಿ ಕುದುರೆಗಳಂತೆ ಚಪಲವಾದ ಇಂದ್ರಿಯಗಳೂ, ಆಯಾ ವಿಷಯಗಳಲ್ಲಿ ಪ್ರವರ್ತಿಸಿ ರಥಿಸ್ವಾಮಿಯಾದ ಜೀವಾತ್ಮನನ್ನು ಸಂಸಾರಿಯನ್ನಾಗಿ ಮಾಡುವುವೆಂದರ್ಥವು. ||೧೮||

ಯಾವನು ವಿವೇಕಜ್ಞಾನವುಳ್ಳವನೂ ಮತ್ತು ಮನೋನಿಗ್ರಹವುಳ್ಳವನೂ, ಆಗಿರುತ್ತಾನೋ ಅವನ ಇಂದ್ರಿಯಗಳು ಸಾರಥಿಯ ಒಳ್ಳೆಯ ಅಶ್ವಗಳಂತೆ ಅವನ ವಶವರ್ತಿಯಾಗುವುವು. ||೧೯||

ಯಸ್ತು ವಿಜ್ಞಾನವಾನ್ಮರ್ತ್ಯೋ ಯುಕ್ತೇನ ಮನಸಾ ಸದಾ ।
ತಸ್ಯೇಂದ್ರಿಯಾಣಿ ವಶ್ಯಾನಿ ಸದಶ್ವಾ ಇವ ಸಾರಥೇಃ ॥೧೯॥

ಯಸ್ತ್ವವಿಜ್ಞಾನವಾನ್ ಮರ್ತ್ಯೋ ಹ್ಯಮನಸ್ಕಃ ಸದಾಽಶುಚಿಃ ।
ನ ಸ ತತ್ಪದ ಮಾಪ್ನೋತಿ ಸಂಸಾರಂ ಚಾಧಿಗಚ್ಛತಿ ॥೨೦॥

ಯಸ್ತು ವಿಜ್ಞಾನವಾನ್ ಮರ್ತ್ಯಃ ಸಮನಸ್ಕಃ ಸದಾ ಶುಚಿಃ ।
ಸ ತು ತತ್ಪದ ಮಾಪ್ನೋತಿ ಯಸ್ಮಾದ್ಭೂಯೋ ನ ಜಾಯತೇ ॥೨೧॥

ವಿಜ್ಞಾನ ಸಾರಥಿರ್ಯಸ್ತು ಮನಃಪ್ರಗ್ರಹ ವಾನ್ನರಃ ।
ಸೋಽಧ್ವನಃ ಪಾರಮಾಪ್ನೋತಿ ತದ್ವಿಷ್ಣೋಃ ಪರಮಂ ಪದಂ ॥೨೨॥

ರಥರೂಪಕ ಕಲ್ಪನೆಯ ಫಲವನ್ನು ಈ ಮಂತ್ರವು ಹೇಳುತ್ತದೆ.—

ಯಾವ ಮನುಷ್ಯನು ಅವಿವೇಕಿಯಾಗಿಯೂ ಮನೋನಿಗ್ರಹವಿಲ್ಲದಿರುವವನಾಗಿಯೂ ಮತ್ತು ಸರ್ವದಾ ವಿಷಯಲೋಲುಪನಾಗಿಯೂ, ಅಶುದ್ಧನಾಗಿಯೂ ಇರುತ್ತಾನೆಯೋ ಅವನು ಹಿಂದೆ ಹೇಳಿದ ಓಂಕಾರಪ್ರತೀಕವುಳ್ಳ ಪರಬ್ರಹ್ಮನ ಪದವಿಯನ್ನು ಹೊಂದದೇ ಪುನಃ ಪುನಃ ಸಂಸಾರಿಯಾಗಿಯೇ ಇರುತ್ತಾನೆ. ||೨೦||

ಯಾವ ಮನುಷ್ಯನು ವಿವೇಕಶಾಲಿಯಾಗಿಯೂ ಅಂತಃಕರಣ ನಿಗ್ರಹವುಳ್ಳವನಾಗಿಯೂ, ವಿಷಯಾಸಕ್ತನಲ್ಲದೇ ಶುದ್ಧಾಚಾರವುಳ್ಳವನಾಗಿರುತ್ತಾನೋ ಅವನು ಯಾವ ಪದವಿಯನ್ನು ಹೊಂದಿದರೆ ಪುನಃ ಸಂಸಾರಭೀತಿಯಿರುವುದಿಲ್ಲವೋ ಅಂತಹ ಬ್ರಹ್ಮಪದವಿಯನ್ನು ಹೊಂದುತ್ತಾನೆ. (ಬ್ರಹ್ಮಸಾಕ್ಷಾತ್ಕಾರವನ್ನು ಹೊಂದುತ್ತಾನೆಂದರ್ಥವು.) ||೨೧||

ಸಾರಥಿಸ್ಥಾನೀಯವಾದ ಆತ್ಮಾನಾತ್ಮವಿವೇಕದಿಂದ ಯಾವನು ಯುಕ್ತನಾಗುತ್ತಾನೋ ಮತ್ತು ಯಾವನು ಪಗ್ಗದಂತಿರುವ ಮನಸ್ಸನ್ನು ನಿಗ್ರಹಿಸುತ್ತಾನೋ ಅವನು ಸಂಸಾರಾರ್ಣವವನ್ನು ದಾಟಿ ಮೋಕ್ಷವನ್ನೈದುವನು. ಅವನು ಹೊಂದತಕ್ಕ ಪದವಿಯೇ ವ್ಯಾಪನಶೀಲನಾದ ಬ್ರಹ್ಮನ ಸಚ್ಚಿದಾನಂದ ಸ್ವರೂಪವಾಗಿರುವುದು. ಎಂದರೆ ಸ್ವಸ್ವರೂಪವನ್ನು ತಿಳಿದವನಾಗಿ ಸರ್ವದಾ ಅಖಂಡಾನಂದೈಕರಸಸ್ವರೂಪವಾದ ಅದ್ವಿತೀಯ ಬ್ರಹ್ಮಸ್ವರೂಪನಾಗುತ್ತಾನೆ. ಎಂದರ್ಥವು. ||೨೨||

ಪದಂ ಯತ್ಪರಮಂ ವಿಷ್ಣೋಸ್ತದೇವಾಖಿಲ ದೇಹಿನಾಂ ।
ಪದಂ ಪರಮ ಮದ್ವೈತಂ ಸ ಶಿವಃ ಸಾಂಬ ವಿಗ್ರಹಃ ॥೨೩॥

ರುದ್ರ ವಿಷ್ಣು ಪ್ರಜೇಶಾನಾ ಮನ್ಯೇಷಾ ಮಪಿ ದೇಹಿನಾಂ ।
ಋತೇ ಸಾಂಬಂ ಮಹಾದೇವಂ ಕಿಂ ಭವೇತ್ಪರಮಂ ಪದಂ ॥೨೪॥

ಇಂದ್ರಿಯೇಭ್ಯಃ ಪರಾ ಹ್ಯರ್ಥಾಃ ಅರ್ಥೇಭ್ಯಶ್ಚ ಪರಂ ಮನಃ ।
ಮಹತಃ ಪರಮವ್ಯಕ್ತ ಮವ್ಯಕ್ತಾ ತ್ಪುರುಷಃ ಪರಃ ॥೨೫॥

ಹಿಂದೆ ಹೇಳಿದ ಆ ವಿಷ್ಣುಪದವಿಯೆಂದರೆ ಅದು ಯಾವುದೆಂಬುದನ್ನು ಈ ಮಂತ್ರವು ಹೇಳುತ್ತದೆ.

ಆ ಅದ್ವಿತೀಯ ಸ್ವರೂಪವೇ ದೇವಮನುಷ್ಯಾದಿ ಸಕಲ ಪ್ರಾಣಿಗಳಿಂದಲೂ ಪ್ರಾಪ್ಯವಾದ ವಿಷ್ಣುವಿನ ಸ್ಥಾನವು. ಮತ್ತು ಈ ಸ್ವರೂಪವೇ ಲೀಲೆಯಿಂದುಂಟಾಗುವ ಸೋಪಾಧಿಕವಾದ ಅರ್ಧನಾರೀಶ್ವರಸ್ವರೂಪವೂ ಆಗಿರುತ್ತದೆ. ॥೨೩॥

ಪೂರ್ವೋಕ್ತವಾದ ಆ ಸಚ್ಚಿದಾನಂದಸ್ವರೂಪವೇ ರುದ್ರ, ವಿಷ್ಣು, ಬ್ರಹ್ಮ, ಮೊದಲಾದ ತ್ರಿಗುಣಮೂರ್ತಿಗಳಿಗೂ ಮತ್ತು ಇತರ ಪ್ರಾಣಿಗಳಿಗೂ ಪ್ರಾಪ್ಯಸ್ಥಾನವಾಗಿರುತ್ತದೆ. (ಗುಣಮೂರ್ತಿಗಳೆಂದರೆ ಸತ್ವರಜಸ್ತಮೋಗುಣಗಳೆಂಬ ಮೂರು ಗುಣಗಳ ನ್ಯೂನತಾಧಿಕ್ಯಗಳಿಂದುಂಟಾದ ಬ್ರಹ್ಮನ ಸೋಪಾಧಿಕಸ್ವರೂಪಗಳೆಂದರ್ಥವು.) ಮಹಾದೇವತ್ವವಲ್ಲದೆ ಬೇರೆ ಉತ್ತಮಪದವಿಯು ಯಾವುದಿದೆ? ॥೨೪॥

ಈ ಶ್ಲೋಕದಲ್ಲಿ ಇಂದ್ರಿಯಾದಿಗಳಿಗೆ ಉತ್ತರೋತ್ತರ ಸೂಕ್ಷ್ಮತ್ವ ವ್ಯಾಪಕತ್ವ ಪ್ರತ್ಯಗಾತ್ಮತ್ವಾದಿಗಳ ತಾರತಮ್ಯಗಳನ್ನು ನಿರೂಪಿಸಿ ಪ್ರಾಪ್ಯಸ್ಥಾನವಾದ ಪರಶಿವನ ನಿರತಿಶಯವಾದ ಸೂಕ್ಷ್ಮತ್ವವನ್ನು ಪ್ರತಿಪಾದಿಸುತ್ತಾರೆ.

(ಎಂದರೆ ಇಂದ್ರಿಯಾದಿಗಳಲ್ಲಿ ಉತ್ತರೋತ್ತರವಾಗಿ ಸೂಕ್ಷ್ಮತ್ವಾದಿ ತಾರತಮ್ಯಬುದ್ಧಿಯನ್ನಿಟ್ಟು ವಿಚಾರಿಸಿದಲ್ಲಿ ಶಾಖಾಚಂದ್ರನ್ಯಾಯದಂತೆ ಆ ಪರಬ್ರಹ್ಮಸ್ವರೂಪವನ್ನು ಕ್ರಮವಾಗಿ ತಿಳಿದುಕೊಳ್ಳಬಹುದು. ಆದುದರಿಂದ ಮೇಲೆ ಹೇಳಿದ ವಿಷಯವನ್ನು ವಿವರಿಸುತ್ತಾರೆ.)

ಅರ್ಥ— ಇಂದ್ರಿಯಗಳು ಭೂತಪರಿಣಾಮಕಾರ್ಯಗಳಾಗಿವೆ. ಈ ಸ್ಥೂಲಗಳಾದ ಇಂದ್ರಿಯಗಳಿಗಿಂತಲೂ, ರೂಪಾದಿ ವಿಷಯಗಳು ಸೂಕ್ಷ್ಮತರಗಳೂ, ವ್ಯಾಪಕಗಳೂ ಮತ್ತು ಅಚಿಂತ್ಯಸ್ವಭಾವವುಳ್ಳವುಗಳೂ ಆಗಿರುತ್ತವೆ. (ಏಕೆಂದರೆ ಇಂದ್ರಿಯ

ಮಹತಃ ಪರಮವ್ಯಕ್ತ ಮವ್ಯಕ್ತಾ ತ್ಪುರುಷಃ ಪರಃ ।
ಪುರುಷಾನ್ನ ಪರಂ ಕಿಂಚಿತ್ ಸಾ ಕಾಷ್ಠಾ ಸಾ ಪರಾ ಗತಿಃ ॥೨೬॥

ಪುರುಷೋ ನಾಮ ಸಂಪೂರ್ಣಃ ಶಿವಃ ಸತ್ಯಾದಿ ಲಕ್ಷಣಃ ।
ಸಾಂಬಮೂರ್ತಿಧರೋ ನಾನ್ಯೋ ರುದ್ರೋ ವಿಷ್ಣುಃ ಅಜೋಽಪಿ ವಾ ॥೨೭॥

ಗಳು ವಿಷಯಪ್ರಕಾಶಮಾಡುವುದಕ್ಕೋಸ್ಕರ ವಿಷಯಗಳಿಂದ ಆರಬ್ಧವಾಗಿರುದರಿಂದ ತಮ್ಮ ಕಾರ್ಯಗಳಾದ ಇಂದ್ರಿಯಗಳಿಗಿಂತಲೂ ಸೂಕ್ಷ್ಮಗಳೂ ವ್ಯಾಪಕಗಳೂ ಆಗಿರುತ್ತವೆ. ಲೋಕದಲ್ಲಿ ಮೃದಾದಿ ಕಾರಣಗಳಿಂದ ಹುಟ್ಟಿರುವ ಘಟಾದಿಗಳನ್ನು ನಾವು ಕಾರಣಕ್ಕಿಂತಲೂ ಸ್ಥೂಲಗಳನ್ನಾಗಿ ತಿಳಿಯುತ್ತೇವೆ. ಅದರಂತೆ ಇಲ್ಲಿಯೂ ತಿಳಿಯತಕ್ಕದ್ದು.) ಇದೇ ರೀತಿಯಲ್ಲಿ ಇಂದ್ರಿಯಗಳ ಕಾರಣವಾದ ಭೂತಸೂಕ್ಷ್ಮ ಕ್ಕಿಂತಲೂ ಸೂಕ್ಷ್ಮತರವಾದ ಅಧ್ಯವಸಾಯಾತ್ಮಕವಾದ ಬುದ್ಧಿಗೆ ಕಾರಣಭೂತವಾದ ಭೂತಸೂಕ್ಷ್ಮವು ಇನ್ನೂ ಹೆಚ್ಚು ಸೂಕ್ಷ್ಮವು. ಆ ಬುದ್ಧಿಗಿಂತಲೂ ಮಹಾತ್ಮನಾದ ಹಿರಣ್ಯಗರ್ಭನಸ್ವರೂಪವು ಇನ್ನೂ ಸೂಕ್ಷ್ಮವಾಗಿರುವುದು. (ಸೂಕ್ಷ್ಮವೆಂದರೆ ತಿಳಿದು ಕೊಳ್ಳಲು ಕಷ್ಟಸಾಧ್ಯವೆಂದು ಅರ್ಥವು.) ||೨೫||

ಮಹತ್ತಾದ ಹಿರಣ್ಯಗರ್ಭತತ್ತ್ವಕಿಂತಲೂ ಸಮಸ್ತ ಜಗತ್ತಿಗೂ ಕಾರಣ ಭೂತವಾದ ಅನಾದಿ ಸಿದ್ಧವಾದ ಮಾಯೆಯು ಸೂಕ್ಷ್ಮತರವಾಗಿಯೂ ಮಹತ್ತತ್ವ ಕ್ಕಿಂಲೂ ವ್ಯಾಪಕವೂ ಮತ್ತು ಪ್ರತ್ಯಗ್ಭೂತವಾಗಿಯೂ ಇರುತ್ತದೆ. ಈ ಮಾಯೆ ಗಿಂತಲೂ ಸರ್ವಕಾರಣ ಭೂತನಾದ ಬ್ರಹ್ಮನು ಸೂಕ್ಷ್ಮನಾಗಿರುವನು. ಆದುದ ರಿಂದಲೇ ಅವನು ಸ್ವಸ್ವರೂಪದಿಂದ ಈ ಸಕಲ ಕಾರ್ಯರೂಪವಾದ ಸಮಸ್ತ ಪ್ರಪಂಚ ವನ್ನೂ ವ್ಯಾಪಿಸಿರುವನು. ಆ ಸಚ್ಚಿದಾನಂದಸ್ವರೂಪನಾದ ಪುರುಷನಿಗಿಂತಲೂ ಹೆಚ್ಚಾದ ಯಾವ ವಸ್ತುವೂ ಇರುವುದಿಲ್ಲ. ಏಕೆಂದರೆ ಸೂಕ್ಷ್ಮತ್ವವ್ಯಾಪಕತ್ವ ಪ್ರತ್ಯ ಗಾತ್ಮತ್ವಾದಿಗಳ ತಾರತಮ್ಯಕ್ಕೆ ಪುರುಷನೇ ಅವಧಿಯಾಗಿರುವನು. ಇವನಿಗಿಂತಲೂ ಸೂಕ್ಷ್ಮವಾದ ಮತ್ತು ಪ್ರತ್ಯಕ್ಸ್ವರೂಪವಾದ ಬೇರೊಂದು ವಸ್ತುವು ಇರುವುದಿಲ್ಲ. ಆ ವಸ್ತುವೇ ಮುಮುಕ್ಷುಗಳಿಗೆ ಪ್ರಾಪ್ಯಸ್ಥಾನವು. ||೨೬||

ದೇಶಪರಿಚ್ಛೇದ ಮತ್ತು ಕಾಲಪರಿಚ್ಛೇದಾದಿ ಪರಿಚ್ಛೇದತ್ರಯಗಳಿಂದ ರಹಿತ ನಾದ ಸತ್ಯಜ್ಞಾನಾದಿ ಸ್ವರೂಪನಾದ ಶಿವನೇ ಆ ಪುರುಷಸ್ವರೂಪನಾಗಿರುವನು. ಆ ಪುರುಷನೇ ಅರ್ಧನಾರೀಶ್ವರಸ್ವರೂಪನೂ ಮತ್ತು ಬ್ರಹ್ಮಾ, ವಿಷ್ಣು, ಮಹೇಶ್ವರ

ಏಷ ಸರ್ವೇಷು ಭೂತೇಷು ಗೂಢಾತ್ಮಾ ನ ಪ್ರಕಾಶತೇ ।
ದೃಶ್ಯತೇ ತ್ವಗ್ರ್ಯಯಾ ಬುದ್ಧ್ಯಾ ಸೂಕ್ಷ್ಮಯಾ ಸೂಕ್ಷ್ಮದರ್ಶಿಭಿಃ॥೨೮॥

ಯಚ್ಛೇದ್ವಾಙ್ಮನಸೀ ಪ್ರಾಜ್ಞಃ ತದ್ಯಚ್ಛೇಜ್ಞಾನ ಆತ್ಮನಿ ।
ಮಹತ್ಯಾತ್ಮನಿ ವಿಜ್ಞಾನಂ ತದ್ಯಚ್ಛೇಚ್ಛಾಂತ ಆತ್ಮನಿ ॥೨೯॥

ಸ್ವರೂಪನೂ ಆಗಿರುವನು. (ಎಂದರೆ ಸ್ವತಃ ಅಸಂಗನಾಗಿದ್ದರೂ ಲೀಲೆಯಿಂದ ಆಯಾ ರೂಪವನ್ನು ಧರಿಸುವವನಾಗಿರುವವನೆಂದರ್ಥವು.) ॥೨೭॥

ಪೂರ್ವೋಕ್ತವಾದ ಬ್ರಹ್ಮಾದಿಸ್ತಂಬಪರ್ಯಂತವಾದ ಸಕಲಭೂತಗಳಲ್ಲಿಯೂ ಆವರಣಶಕ್ತಿಯುಕ್ತವಾದ ಮತ್ತು ತನ್ನ ಅಧೀನವಾದ ಅವಿದ್ಯೆಯಿಂದ ಆವೃತನಾಗಿ ಶರೀರೇಂದ್ರಿಯಾದಿ ಉಪಲಬ್ಧಿಸ್ಥಾನವಿಲ್ಲದ ಪ್ರಯುಕ್ತ ಆತ್ಮನು ಗೋಚರನಾಗುವುದಿಲ್ಲ. ಆದರೆ ಪೂರ್ವೋಕ್ತರೀತಿಯಿಂದ ಇಂದ್ರಿಯ ವಿಷಯಾದಿಗಳಲ್ಲಿ ಉತ್ತರೋತ್ತರವಾಗಿ ಸೂಕ್ಷ್ಮತಾರತಮ್ಯವನ್ನು ತಿಳಿಯುವವರಿಗೆ ಮತ್ತು ಗುರೂಪದೇಶಾದಿಗಳಿಂದ ಪ್ರಸನ್ನವಾದ ಅಂತಃಕರಣವುಳ್ಳವರಿಗೇ ಅವನು ಗೋಚರನಾಗುತ್ತಾನೆ. ತದಿತರರಿಗೆ ಅತಿ ಸೂಕ್ಷ್ಮನಾದುದರಿಂದ ಗೋಚರನಾಗುವುದಿಲ್ಲ. ॥೨೮॥

ಗೂಢನಾದ ಆತ್ಮನ ದರ್ಶನದಲ್ಲಿ ಉಪಾಯವನ್ನು ಹೇಳುತ್ತಾರೆ.— ವಿವೇಕ ಶಾಲಿಯಾದವನು ಸಕಲ ಬಾಹ್ಯೇಂದ್ರಿಯಗಳನ್ನೂ ಬಾಹ್ಯವಿಷಯಗಳಿಂದ ಉಪಸಂ ಹರಿಸಿ ಮನಸ್ಸಿನಲ್ಲಿಡಬೇಕು. ಎಂದರೆ ವಿಷಯಗಳ ಕಡೆಗೆ ಹೋಗುವ ಸ್ವಭಾವವುಳ್ಳ ಇಂದ್ರಿಯಗಳನ್ನು ಅಂತರ್ಮುಖವಾಗಿ ಮಾಡಬೇಕು. ಮನಸ್ಸನ್ನು ಬುದ್ಧ್ಯಾತ್ಮಿ ವಾದ ಜ್ಞಾನದಲ್ಲಿಡಬೇಕು. ನಿಶ್ಚಯಾತ್ಮಕವಾದ ಬುದ್ಧಿಯನ್ನು ಇತರ ಕಡೆಗಳಿಂದ ಉಪಸಂಹರಿಸಿ ಬುದ್ಧಿಯ ಸಮಷ್ಟಿರೂಪವಾದ ಹಿರಣ್ಯಗರ್ಭತತ್ವದಲ್ಲಿಡಬೇಕು. ಆ ಹಿರಣ್ಯಗರ್ಭಸ್ವರೂಪವನ್ನು ನಿರ್ವಿಕಾರನಾದ ಚಿತ್ಸ್ವರೂಪದಲ್ಲಿಡಬೇಕು. ಎಂದರೆ ಪೂರ್ವಪೂರ್ವದ ವಸ್ತುಗಳನ್ನು ಉತ್ತರೋತ್ತರ ವಸ್ತುಗಳ ದೃಷ್ಟಿಯಿಂದ ತಿಳಿದು ಕೊಂಡು ಅಂತ್ಯದಲ್ಲಿರುವ ಆತ್ಮತತ್ವವನ್ನು ಸಾಕ್ಷಾತ್ಕರಿಸಬೇಕು. ಎಂದರ್ಥವು.॥೨೯॥

ಪೃಥಿವ್ಯಾದಿಭೂತಗಳಲ್ಲಿ ಪೂರ್ವಭೂತಕ್ಕಿಂತಲೂ ಉತ್ತರೋತ್ತರವಾದ ಭೂತ ದಲ್ಲಿ ಒಂದೊಂದು ಗುಣವು ಕಡಿಮೆಯಾದುದರಿಂದಲೇ ಒಂದಕ್ಕಿಂತ ಇನ್ನೊಂದು ಸೂಕ್ಷ್ಮತರವಾಗಿ ತೋರುತ್ತದೆ. ಎಂದರೆ ಪೃಥಿಯಲ್ಲಿ ರೂಪ, ರಸ, ಗಂಧ, ಸ್ಪರ್ಶ,

ಅಶಬ್ದಮಸ್ಪರ್ಶಮರೂಪ ಮವ್ಯಯಂ
ತಥಾರಸಂ ನಿತ್ಯಮಗಂದ ವಚ್ಚಯತ್ ।
ಅನಾದ್ಯನಂತಂ ಮಹತಃ ಪರಂ ಧ್ರುವಂ
ನಿಚಾಯ್ಯ ತಂ ಮೃತ್ಯುಮುಖಾತ್ಪ್ರಮುಚ್ಯತೇ ॥೩೦॥

ಪರಾಂಚಿ ಖಾನಿ ವ್ಯತೃಣನ್ಮಹೇಶ
ಸ್ತಸ್ಮಾತ್ಪರಾಜ್ಪಶ್ಯತಿ ನಾತ್ಮರೂಪಂ ।
ಕಶ್ಚಿದ್ಧೀರಃ ಪ್ರತ್ಯಗಾತ್ಮಾನ ಮೈಕ್ಷ
ದಾವೃತ್ತ ಚಕ್ಷುರಮೃತತ್ವ ಮಿಚ್ಛನ್ ॥೩೧॥

ಶಬ್ದಗಳೆಂಬ ಐದು, ಗುಣಗಳಿದ್ದರೆ, ಜಲದಲ್ಲಿ ರೂಪ, ರಸ, ಸ್ಪರ್ಶ, ಶಬ್ದಗಳೆಂಬ ನಾಲ್ಕು ಗುಣಗಳಿರುತ್ತವೆ. ಇದೇರೀತಿಯಲ್ಲಿ ತೇಜಸ್ಸು, ವಾಯು, ಆಕಾಶಾದಿಗಳಲ್ಲಿ ಉತ್ತರೋತ್ತರವಾಗಿ ಒಂದೊಂದು ಗುಣಗಳು ಕಡಿಮೆಯಾಗಿರುವುದರಿಂದ ಸೂಕ್ಷ್ಮತ್ವ ತಾರತಮ್ಯವು ಕಂಡುಬರುತ್ತದೆ. ಹೀಗೆ ಭೂತಗಳಲ್ಲಿಯೇ ಸೂಕ್ಷ್ಮತ್ವತಾರತಮ್ಯವು ತೋರಿಬರುವಾಗ ನಿರ್ವಿಕಾರಸ್ವರೂಪನಾದ ಪರಮೇಶ್ವರನ ಸೂಕ್ಷ್ಮತ್ವವನ್ನು ಹೇಳಲೇ ಸಾಧ್ಯವಿಲ್ಲವು. ಎಂಬ ಅಭಿಪ್ರಾಯವನ್ನಿಟ್ಟುಕೊಂಡು ಆ ಸೂಕ್ಷ್ಮರೂಪಿಯಾದ ಪರಬ್ರಹ್ಮನ ಸೂಕ್ಷ್ಮತ್ವವನ್ನು ಈ ಮಂತ್ರದಲ್ಲಿ ನಿರೂಪಿಸುತ್ತಾರೆ.

ಅರ್ಥ—ಪರಬ್ರಹ್ಮವಸ್ತುವಿನಲ್ಲಿ ಶಬ್ದಸ್ಪರ್ಶರೂಪರಸಗಂಧಗಳೆಂಬ ಗುಣಗಳಲ್ಲಿ ಯಾವ ಗುಣವೂ ಇರುವುದಿಲ್ಲ. ಆದುದರಿಂದ ಅದು ಎಷ್ಟು ಸೂಕ್ಷ್ಮಸ್ವರೂಪವುಳ್ಳದ್ದೆಂಬುದನ್ನು ಊಹಿಸಬಹುದು. ಮತ್ತು ಅದು ನಿತ್ಯಸ್ವರೂಪವಾಗಿದೆ. ಇಂತಹ ಆತ್ಮತತ್ವವನ್ನು ತಿಳಿದುಕೊಂಡು ಮುಮುಕ್ಷುವು ಸಂಸಾರ ದುಃಖದಿಂದ ಬಿಡುಗಡೆಯನ್ನು ಹೊಂದುತ್ತಾನೆ. ಅದಲ್ಲದೇ ಬ್ರಹ್ಮನು ಆದ್ಯಂತರಹಿತನಾಗಿಯೂ, ಅವಿದ್ಯೆಗಿಂತಲೂ ಭಿನ್ನನಾಗಿಯೂ ಇರುವನು. ॥೩೦॥

ಪೂರ್ವೋಕ್ತವಾದ ಆತ್ಮನನ್ನು ಸರ್ವರೂ ಏತಕ್ಕೋಸ್ಕರ ಸಾಕ್ಷಾತ್ಕರಿಸಲು ಸಮರ್ಥರಾಗುವುದಿಲ್ಲ? ಎಂಬ ಪ್ರಶ್ನೆಗೆ ಉತ್ತರವನ್ನು ಈ ಮಂತ್ರದಲ್ಲಿ ಹೇಳುತ್ತಾರೆ. ಸೃಷ್ಟಿಕರ್ತನಾದ ಪರಮೇಶ್ವರನು ಶ್ರೋತ್ರಾದಿ ಇಂದ್ರಿಯಗಳನ್ನು ಬಾಹ್ಯವಿಷಯಗಳಾದ ಶಬ್ದಾದಿಗಳಲ್ಲಿಯೇ ಪ್ರವರ್ತಿಸುತ್ತಿರುವಂತೆ ಸೃಷ್ಟಿಸಿ ಅವುಗಳನ್ನು ಹಿಂಸಿಸಿದ್ದಾನೆ. ಆದುದರಿಂದ ಜೀವನು ಸರ್ವಾಂತರನಾದ ಆತ್ಮನನ್ನು ಗ್ರಹಿಸಲಾರದೆ ಬಹಿರ್ಮುಖ

ಪರಾಚಃ ಕಾಮಾನನುಯಂತಿ ಬಾಲಾಃ
ಮೃತ್ಯೋಃ ಪಾಶಂ ತೇಽಪಿ ಯಾಂತಿ ಸ್ವಮೋಹಾತ್ ।
ಅಥ ಧೀರಾ ಅಮೃತತ್ವಂ ವಿದಿತ್ವಾ
ಧ್ರುವಂ ತತ್ವಂ ಯಾಂತಿ ಕಾಮ್ಯೈಕ ಸಕ್ತಾಃ ॥೩೨॥

ಯೇನ ರೂಪಾನ್ ರಸಾನ್ ಗಂಧಾನ್
ಶಬ್ದಾನ್ ಸ್ಪರ್ಶಾಂಶ್ಚ ಮೈಥುನಾನ್
ಏತೇನೈವ ವಿಜಾನಾತಿ
ಕಿಮತ್ರ ಪರಿಶಿಷ್ಯತೇ ॥೩೩॥

ಜಾಗ್ರತ್ಸ್ವಪ್ನ ಸುಷುಪ್ತ್ಯಾಖ್ಯಂ ಪರಂ ಯೇನಾನು ಪಶ್ಯತಿ ।
ಮಹಾಂತಂ ಪರಮಾತ್ಮಾನಂ ಮತ್ವಾ ಧೀರೋ ನ ಶೋಚತಿ ॥೩೪॥

ವಾದ ಆ ಇಂದ್ರಿಯಗಳ ಮೂಲಕ ಬಾಹ್ಯವಿಷಯಗಳಲ್ಲೇ ಆಸಕ್ತನಾಗುತ್ತಾನೆ. ಆದುದರಿಂದಲೇ ಸ್ವಸ್ವರೂಪವನ್ನು ತಿಳಿದುಕೊಳ್ಳುವುದಿಲ್ಲ. ಹೀಗಿರುತ್ತಿರಲು ಅನೇಕ ಪ್ರಾಣಿಗಳ ನಡುವೆ ಯಾವನೋ ಒಬ್ಬ ಧೀರನು ಮೋಕ್ಷವನ್ನಿಚ್ಛಿಸುವವನಾಗಿ ಇಂದ್ರಿಯಗಳನ್ನು ಬಾಹ್ಯವಿಷಯಗಳ ದೆಸೆಯಿಂದ ಉಪಸಂಹರಿಸಿ ಸ್ವಸ್ವರೂಪವನ್ನು ತಿಳಿದುಕೊಳ್ಳುತ್ತಾನೆ. ॥೩೧॥

ಅಜ್ಞರಾದ ಪುರುಷರು ಬಾಹ್ಯವಿಷಯಗಳಲ್ಲಿಯೇ ಆಸಕ್ತರಾಗಿ ಅಜ್ಞಾನವೆಂಬ ಬಲೆಯಲ್ಲಿ ಬಿದ್ದು ಒದ್ದಾಡುತ್ತಾರೆ. ವಿವೇಕಿಗಳಾದರೋ ಸಚ್ಚಿದಾನಂದಾವಸ್ಥಿತಿರೂಪವಾದ ಮೋಕ್ಷದ ಸ್ವರೂಪವನ್ನು ತಿಳಿದವರಾಗಿ ಬಾಹ್ಯವಿಷಯಗಳಲ್ಲಿ ಆಸಕ್ತರಾಗದೇ ನಿತ್ಯವಾದ ಆ ಪರಬ್ರಹ್ಮತತ್ವವನ್ನು ಸಾಕ್ಷಾತ್ಕರಿಸುತ್ತಾರೆ. (ಬಾಹ್ಯ ವಿಷಯಾಸಕ್ತಿಯೇ ಸಂಸಾರಕ್ಕೆ ಕಾರಣವೆಂದರ್ಥವು.) ॥೩೨॥

ಜ್ಞಾನಿಯು ಆತ್ಮಜ್ಞಾನದಿಂದಲೇ ರೂಪ, ರಸ, ಗಂಧ, ಸ್ಪರ್ಶ, ಶಬ್ದ ಮತ್ತು ಮೈಥುನಾದಿಗಳಿಂದುಂಟಾದ ಸುಖವನ್ನು ತಿಳಿದುಕೊಳ್ಳುತ್ತಾನೆ. ಎಂದರೆ ರೂಪಾದಿ ವಿಷಯಗಳಿಂದುಂಟಾಗುವ ಸುಖಗಳು ಅನಿತ್ಯಗಳೂ, ಕ್ಷಣಿಕಗಳೂ ಆಗಿರುತ್ತವೆ. ಬ್ರಹ್ಮಾನಂದವಾದರೋ ಅತ್ಯುತ್ಕೃಷ್ಟವಾದ ಮತ್ತು ನಿತ್ಯವಾದ ಸುಖವನ್ನು ಕೊಡುವುದು ಎಂದು ತಿಳಿಯುತ್ತಾನೆ. ಹೀಗೆ ಆತ್ಮಜ್ಞಾನದಿಂದಲೇ ಸಮಸ್ತ ಸುಖಗಳನ್ನೂ

ಜಾಗ್ರದಾದಿ ತ್ರಯಂ ಯಸ್ತು ವಿಜಾನಾತಿ ಚಿದಾತ್ಮನಾ ।
ತತೋ ಭೇದೇನ ನೈವಾಸ್ತಿ ಪುರತ್ರಯ ಮಿದಂ ಸದಾ ॥೩೫॥

ಚೈತನ್ಯಮಾತ್ರೋ ಭಗವಾನ್ ಶಿವ ಏವ ಸ್ವಯಂ ಪ್ರಭುಃ ।
ಪುರತ್ರಯಾತ್ಮನಾ ಭಾತಿ ನ ಭಾತಿ ಚ ಮಹಾಪ್ರಭುಃ ॥೩೬॥

ಇಹಾಮುತ್ರ ಸ್ಥಿತಂ ತತ್ತ್ವಂ ಸದೇಕಂ ನ ತತೋಽಪರಂ ।
ಮೃತ್ಯೋಃ ಸ ಮೃತ್ಯುಮಾಪ್ನೋತಿ ಯೋಽನ್ಯಂ ದೇವಂ ಪ್ರಪಶ್ಯತಿ ॥೩೭॥

ಅನುಭವಿಸುವ ಜ್ಞಾನಿಗೆ ಈ ಪ್ರಪಂಚದಲ್ಲೇನಿರುವುದು ? ಅವನ ದೃಷ್ಟಿಯಿಂದ ಪ್ರಪಂಚವು ಮಿಥ್ಯಾಭೂತವಾಗಿರುತ್ತದೆ. ॥೩೩॥

ಯಾವ ಆತ್ಮನು ಜಾಗ್ರತ್ಸ್ವಪ್ನಸುಷುಪ್ತಿಗಳೆಂಬ ಅವಸ್ಥಾತ್ರಯದಲ್ಲಿಯೂ, ಸಾಕ್ಷಿಸ್ವರೂಪನಾಗಿದ್ದುಕೊಂಡು ಸಕಲವನ್ನೂ ತಿಳಿಯುತ್ತಾನೆಯೋ ಅಂತಹ ಆತ್ಮನ ಸ್ವರೂಪವನ್ನು ತಿಳಿದುಕೊಂಡು ವಿದ್ವಾಂಸನು ಈ ಅವಸ್ಥಾತ್ರಯವೆಂಬ ಪುರತ್ರಯದ ಸಂಬಂಧವಿಲ್ಲದೆ ಸಂಸಾರದಿಂದ ನಿವೃತ್ತನಾಗುತ್ತಾನೆ. ॥೩೪॥

ಸಕಲ ವಸ್ತುಗಳೂ ಚಿದಾತ್ಮನಲ್ಲಿ ಅಧ್ಯಸ್ತವಾದುದರಿಂದ ಜಾಗ್ರದಾದಿ ಅವಸ್ಥಾತ್ರಯಗಳಲ್ಲಿಯೂ ಸಮಸ್ತವನ್ನೂ ಆ ಚಿದಾತ್ಮನಿಂದಲೂ ಭಿನ್ನವಾದುದನ್ನಾಗಿ ಯಾವನು ತಿಳಿಯುವುದಿಲ್ಲವೋ ಅವನು ಸಂಸಾರದಿಂದ ನಿವೃತ್ತನಾಗುತ್ತಾನೆ. ॥೩೫॥

ಪುರತ್ರಯಗಳಿಗೆ ಅಧಿಷ್ಠಾನನಾದ ಶಿವನು ಸ್ವಸ್ವರೂಪದಿಂದ ಸ್ವತಂತ್ರನಾಗಿರುವನು. ಮಾಯಾವಿಲಾಸದಿಂದಲಾದರೋ ಪುರತ್ರಯಾತ್ಮನಾಗಿ ತೋರುವನು. ಸ್ವಸ್ವರೂಪದಿಂದಲಾದರೋ ಅಪರಿಚ್ಛಿನ್ನನು ಮತ್ತು ಸ್ವತಂತ್ರನೂ ಆಗಿರುವವನಾಗಿ ಪ್ರಕಾಶಿಸುತ್ತಾನೆ. ॥೩೬॥

ಈ ಕಾರ್ಯಕಾರಣಸಂಘಾತವಾದ ಶರೀರದಲ್ಲಿ ಯಾವ ಸಚ್ಚಿದಾನಂದಸ್ವರೂಪವಾದ ಚೈತನ್ಯವು ಉಪಲಬ್ಧವಾಗುವುದೋ ಅದೇ ತತ್ವವೇ ಜಗತ್ಕಾರಣವಾದ ಸೂರ್ಯಸ್ವರೂಪನಾದ ಬ್ರಹ್ಮನಲ್ಲಿಯೂ ಅವಸ್ಥಿತವಾಗಿದೆ. ಅವೆರಡೂ ಸರ್ವದಾ ಒಂದೇ ಆಗಿರುವುದು. ಅವೆರಡರಲ್ಲಿಯೂ ಭೇದವು ಇರುವುದಿಲ್ಲ. ಸರ್ವಜ್ಞತ್ವ, ಕಿಂಚಿಜ್ಞತ್ವಾದಿ ಭೇದವಾದರೋ ಮಾಯಾ ಮತ್ತು ಅವಿದ್ಯೆಗಳೆಂಬ ಉಪಾಧಿಸಂಬಂ

ಅಗ್ನಿರ್ಯಥೈಕೋ ಭುವನಂ ಪ್ರವಿಷ್ಟೋ
ರೂಪಂ ರೂಪಂ ಪ್ರತಿರೂಪೋ ಬಭೂವ ।
ಏಕಸ್ತಥಾ ಸರ್ವಭೂತಾಂತರಾತ್ಮಾ
ರೂಪಂ ರೂಪಂ ಪ್ರತಿರೂಪೋ ಬಹಿಶ್ಚ ॥೩೮॥

ವಾಯುರ್ಯಥೈಕೋ ಭುವನಂ ಪ್ರವಿಷ್ಟೋ
ರೂಪಂ ರೂಪಂ ಪ್ರತಿರೂಪೋ ಬಭೂವ ।
ಏಕಸ್ತಥಾ ಸರ್ವ ಭೂತಾಂತರಾತ್ಮಾ
ರೂಪಂ ರೂಪಂ ಪ್ರತಿರೂಪೋ ಬಹಿಶ್ಚ ॥೩೯॥

ಧದಿಂದ ಅಧ್ಯಸ್ತವಾದುದರಿಂದ ಈ ರೀತಿ ತೋರುತ್ತದೆ. ಹೀಗಿರುವಲ್ಲಿ ಯಾವನು ಆ ಸೂರ್ಯಾತ್ಮಕಬ್ರಹ್ಮನನ್ನು ಬೇರೆಯವನನ್ನಾಗಿ ತಿಳಿಯುತ್ತಾನೆಯೋ ಅವನು ಪುನಃ ಪುನಃ ಜನ್ಮಮರಣಪ್ರವಾಹದಲ್ಲಿ ಪತಿತನಾಗುವನು. ॥೩೭॥

ಸಕಲ ಜಗತ್ತೂ ಆ ಪರಬ್ರಹ್ಮನಿಗಿಂತಲೂ ಭಿನ್ನವಾಗಿಯೇ ಕಾಣುವುದು ಅನುಭವಸಿದ್ಧವಾಗಿಯೇ ಇದೆಯಲ್ಲವೇ? ಎಂದು ಸರ್ವರಿಗೂ ಭೇದಭಾವನೆಯು ತೋರಿಬರುವುದು. ಆದುದರಿಂದ ಜಗತ್ತಿಗೆ ಬ್ರಹ್ಮತಾದಾತ್ಮ್ಯವು ವಾಸ್ತವವು. ಭೇದವು ತೋರುವುದೇ ಹೊರತು ವಸ್ತುತಃ ಭೇದವು ಇರುವುದಿಲ್ಲ. ಎಂಬ ಅಂಶವನ್ನು ದೃಷ್ಟಾಂತಗಳ ಮೂಲಕ ವಿಶದಪಡಿಸುತ್ತಾರೆ.

ಅಗ್ನಿಯು ಯಾವ ರೀತಿಯಲ್ಲಿ ಕಾಷ್ಠಾದಿಪದಾರ್ಥಗಳ ಸಂಯೋಗದಿಂದ ಆಯಾ ರೂಪವನ್ನು ಹೊಂದಿ ಪ್ರಕಾಶಿಸುವುದೋ, ಅದರಂತೆ ಪರಬ್ರಹ್ಮನೂ, ಆಯಾ ರೂಪಭೇದಗಳಿಂದ ತೋರುವನೇ ಹೊರತು ವಸ್ತುತಃ ಅವನು ನಿರ್ವಿಕಾರನು. ॥೩೮॥

ವಾಯುವು ಹೇಗೆ ಆಯಾ ಸ್ಥಳಗಳನ್ನು ಹೊಂದಿ ನಾಮರೂಪಭೇದವನ್ನು ಹೊಂದುತ್ತದೆಯೋ, ಅದರಂತೆಯೇ ಪರಬ್ರಹ್ಮನೂ ತೋರುವನು. (ಹಿಂದಿನ ಶ್ಲೋಕದಂತೆಯೇ ಈ ಶ್ಲೋಕದ ತಾತ್ಪರ್ಯವನ್ನೂ ತಿಳಿಯಬೇಕು.) ॥೩೯॥

ಹಾಗಾದರೆ ಪರಬ್ರಹ್ಮನು ಒಬ್ಬನಾದರೂ ಅವನೇ ಜೀವಭಾವದಿಂದಿರುವುದರಿಂದ ಅವನಿಗೆ ಪುಣ್ಯಪಾಪಾದಿಗಳ ಲೇಪವು ಬಂದೀತು! ಎಂಬ ಸಂಶಯವನ್ನು ಹೋಗಲಾಡಿಸುತ್ತಾರೆ.

ಸೂರ್ಯೋ ಯಥಾ ಸರ್ವಲೋಕಸ್ಯ ಚಕ್ಷುಃ
ನ ಲಿಪ್ಯತೇ ಚಾಕ್ಷುಷೈರ್ಬಾಹ್ಯ ದೋಷೈಃ ।
ಏಕಸ್ತಥಾ ಸರ್ವಭೂತಾಂತರಾತ್ಮಾ
ನ ಲಿಪ್ಯತೇ ಲೋಕದುಃಖೇನ ಬಾಹ್ಯಃ ॥೪೦॥

ಏಕೋ ವಶೀ ಸರ್ವಭೂತಾಂತರಾತ್ಮಾ
ಏಕಂ ರೂಪಂ ಬಹುಧಾ ಯಃ ಕರೋತಿ ।
ತಮಾತ್ಮಸ್ಥಂ ಯೇಽನುಪಶ್ಯಂತಿ ಧೀರಾ
ಸ್ತೇಷಾಂ ಸುಖಂ ಶಾಶ್ವತಂ ನೇತರೇಷಾಂ ॥೪೧॥

ಯೇನೈವ ನಿತ್ಯಾಶ್ಚ ಸಚೇತನಾಶ್ಚ
ಯಸ್ಮಿನ್ ವಿಭಕ್ತಾಃ ಪ್ರವಿಭಾಂತಿ ಮೋಹಾತ್ ।
ತಮಾತ್ಮಸ್ಥಂ ಯೇಽನುಪಶ್ಯಂತಿ ಧೀರಾಃ
ತೇಷಾಂ ಶಾಂತಿಃ ಶಾಶ್ವತೀ ನೇತರೇಷಾಂ ॥೪೨॥

ಸೂರ್ಯನು ಹೇಗೆ ಸಮಸ್ತರ ಚಕ್ಷುರಿಂದ್ರಿಯಸ್ವರೂಪನಾಗಿದ್ದುಕೊಂಡು ಅಶುಚಿಪದಾರ್ಥಗಳನ್ನು ನೋಡುವವನಾದರೂ ದೋಷಸಂಪರ್ಕರಹಿತನಾಗಿರುವನೋ ಅದರಂತೆ ಈ ಪರಬ್ರಹ್ಮನೂ ದೇಹದಲ್ಲಿರುವವನಾಗಿದ್ದರೂ ವಸ್ತುತಃ ಪುಣ್ಯಪಾಪಗಳ ಸಂಪರ್ಕದಿಂದ ರಹಿತನಾಗಿರುವನು. ಏಕೆಂದರೆ, ಅವಿದ್ಯೆಯಿಂದ ಆತ್ಮನಿಗೆ ಸಂಸಾರ ಸಂಬಂಧವು ಬರುತ್ತದೆ. ಪರಮಾರ್ಥತತ್ವಕ್ಕೆ ಅವಿದ್ಯಾಸಂಪರ್ಕವಿಲ್ಲದುದರಿಂದ ಸಂಸಾರದುಃಖಗಳೂ ಆಧ್ಯಾಸಿಕವಾಗಿ ತೋರುತ್ತಾ ವಾಸ್ತವವಾಗಿ ಇಲ್ಲವು. ॥೪೦॥

ಸಚ್ಚಿದಾನಂದೈಕರಸವಾದ ತನ್ನ ವಿಜ್ಞಾನಸ್ವರೂಪವನ್ನು ಉಪಾಧಿಭೇದ ದಿಂದ ನಾನಾಪ್ರಕಾರವಾಗಿ ನಿರ್ಮಿಸಿ ಯಾವನು ಅನೇಕ ಸ್ವರೂಪವುಳ್ಳವನಾಗಿ ತೋರುತ್ತಾನೋ ಆ ಪರಬ್ರಹ್ಮನನ್ನು ಯಾವ ಜ್ಞಾನಿಗಳು ಹೃದಯಾಕಾಶದಲ್ಲಿ ಸಾಕ್ಷಾತ್ಕರಿಸುತ್ತಾರೋ ಅವರಿಗೇ ನಿರತಿಶಯಾನಂದಲಕ್ಷಣವಾದ ಮೋಕ್ಷವು ಲಭಿಸುವುದೇ ಹೊರತು ತದಿತರರಿಗೆ ಲಭಿಸಲಾರದು. ॥೪೧॥

ವ್ಯಾವಹಾರಿಕವಾದ ಆಕಾಶಾದಿಗಳು ಯಾವ ಬ್ರಹ್ಮನ ಸತ್ತೆಯ ಸಂಬಂಧ ದಿಂದ ವ್ಯವಹಾರದಶೆಯಲ್ಲಿ ನಿತ್ಯವಾಗಿ ತೋರುತ್ತವೆಯೋ, ದೇವಮನುಷ್ಯಾದಿ ಶರೀರಗಳು ಯಾವ ಆತ್ಮನ ಸತ್ತಾಸಂಬಂಧದಿಂದ ಚೇತನಗಳಾಗಿ ತೋರುತ್ತವೆಯೋ,

ತದೇತದಿತಿ ಮನ್ಯಂತೇ ಅನಿರ್ದೇಶ್ಯಂ ಪರಮಂ ಸುಖಂ ।
ಕಥನ್ನು ತದ್ವಿಜಾನೀಯಾತ್ ಕಿಮು ಭಾತಿ ವಿಭಾತಿ ವಾ ॥೪೩॥

ಆದಿತ್ಯಚಂದ್ರಾ ನಲತಾರಕಾದ್ಯಾಃ
ನ ಭಾಂತಿ ಯಸ್ಮಿನ್ನ ನಿಶಂ ಮಹಾಂತಃ ।
ಪ್ರಕಾಶಮಾನಂ ತಮನು ಪ್ರಭಾಂತಿ
ಪ್ರಭಾನ ಮಸ್ಯೈವ ಹಿ ನೇತರೇಷಾಂ ॥೪೪॥

ಆ ಪೂರ್ವೋಕ್ತ ಆಕಾಶಾದಿಗಳು ಯಾವ ಬ್ರಹ್ಮನಲ್ಲಿ ಅಧ್ಯಸ್ತ (ಕಲ್ಪಿತ) ಗಳಾಗಿ ಬೇರೆ ಬೇರೆಯಾಗಿ ನಮ್ಮ ಮೋಹದಿಂದ ತೋರುತ್ತವೆಯೋ, ಆ ಬ್ರಹ್ಮನನ್ನು ಯಾವ ಜ್ಞಾನಿಯು ಸಾಕ್ಷಾತ್ಕರಿಸುತ್ತಾನೋ ಅವನಿಗೆ ನಿತ್ಯವಾದ ಶಾಂತಿ ಸುಖವು ಲಭಿಸುವುದು. ಬೇರೆಯವರಿಗೆ ಲಭಿಸಲಾರದು. ॥೪೨॥

ಇಂದ್ರಿಯಾಗೋಚರವಾದ ನಿರತಿಶಯಸುಖಸ್ವರೂಪವಾದ ಆ ಬ್ರಹ್ಮಸ್ವರೂಪವು ಇದೇ ಆಗಿರುವುದು. ಎಂದು ಅಪರೋಕ್ಷಜ್ಞಾನದಿಂದ ಯಾವ ಬ್ರಹ್ಮನಿಷ್ಠರಾದ ಯೋಗಿಗಳು ತಿಳಿಯುತ್ತಾರೋ, ಆ ಬ್ರಹ್ಮಸ್ವರೂಪವು ಚಿದ್ರೂಪದಿಂದ ಪ್ರಕಾಶಮಾನವಾಗುವುದೋ? ಇಲ್ಲವೋ? ಎಂದು ಹೇಗೆತಾನೆ ತಿಳಿಯುವುದು? (ಎಂದರೆ ಜ್ಞಾನಿಗಳು ಆ ಪ್ರಕಾರವಾಗಿ ವಿಮರ್ಶಿಸಿ ತಿಳಿದುಕೊಳ್ಳುತ್ತಾರೆಂದರ್ಥವು. ಬ್ರಹ್ಮನು ಆಲೋಚನಾತೀತನು ಎಂದು ಸಾರಾರ್ಥವು.) ॥೪೩॥

ಸೂರ್ಯ, ಚಂದ್ರ, ಅಗ್ನಿ ಮತ್ತು ನಕ್ಷತ್ರಗಳೂ ಕೂಡ ಆ ಚೈತನ್ಯಸ್ವರೂಪದಲ್ಲಿ ಅಧ್ಯಸ್ತವಾದುವುಗಳಾಗಿ ನಿತ್ಯಸ್ವರೂಪಪ್ರಕಾಶವಾದ ಚೈತನ್ಯದ ಪ್ರಕಾಶಸಂಸರ್ಗದಿಂದಲೇ ತಾವು ಪ್ರಕಾಶಮಾನವಾಗಿರುತ್ತವೆ. ವಸ್ತುತಃ ಚೈತನ್ಯಸ್ವರೂಪವೇ ಪ್ರಕಾಶಮಾನವಾದ ವಸ್ತುವೇ ಹೊರತು ಸೂರ್ಯಚಂದ್ರಾದಿಗಳಲ್ಲ. ॥೪೪॥

ಕಾರಣವಿಲ್ಲದೇ ಕಾರ್ಯವು ಹುಟ್ಟುವುದಿಲ್ಲವೆಂಬುದು ಸರ್ವರಿಗೂ ತಿಳಿದಿರುವುದೇ ಆಗಿರುತ್ತದೆ. ಅದರಂತೇ ಈ ಸಂಸಾರವೃಕ್ಷಕ್ಕೂ ಬೀಜಭೂತವಾದುದೊಂದು ಕಾರಣವು ಇದ್ದೇ ಇರಬೇಕು. ಆ ಬೀಜವು ಯಾವುದು? ಎಂಬ ಪ್ರಶ್ನೆಗೆ ಉತ್ತರವನ್ನು ತಿಳಿಯಪಡಿಸುತ್ತಾರೆ.

ಊರ್ಧ್ವಮೂಲಸ್ತ್ವವಾಕ್ಶಾಖಃ ಏಷೋಽಶ್ವತ್ಥಃ ಸನಾತನಃ ।
ತದೇವ ಶುಕ್ರಂ ತದ್ಬ್ರಹ್ಮ ತದೇವಾ ಮೃತಮುಚ್ಯತೇ ॥೪೫॥

ತಸ್ಮಿನ್ ಲೋಕಾಃ ಶ್ರಿತಾಃ ಸರ್ವೇ ತದುನಾತ್ಯೇತಿ ಕಶ್ಚನ ।
ಏತದ್ವೈ ತತ್ಸುರಶ್ರೇಷ್ಠಾಃ ಸಮ್ಯಗೇವ ಮಯೋದಿತಂ ॥೪೬॥

ಇದಂ ಸರ್ವಂ ಜಗತ್ಸಾಕ್ಷಾತ್ ಶಿವಃ ಕಂಪಯತೇ ಧ್ರುವಂ ।
ಮಹದ್ಭಯಮಿದಂ ವಜ್ರಂ ವಿದಿತ್ವಾ ಮುಚ್ಯತೇ ನರಃ ॥೪೭॥

ತಪತ್ಯಸ್ಯ ಭಯಾದಗ್ನಿರ್ಭಯಾತ್ತಪತಿ ಭಾಸ್ಕರಃ ।
ಭಯಾದಿಂದ್ರಶ್ಚ ವಾಯುಶ್ಚ ಮೃತ್ಯುರ್ಧಾವತಿ ಪಂಚಮಃ ॥೪೮॥

ಈ ಸಂಸಾರವೃಕ್ಷಕ್ಕಿಂತಲೂ ಮೇಲೆ ಮೀರಿರುವ ಬ್ರಹ್ಮತತ್ವವೇ ಬೀಜಭೂತವಾಗಿವುಳ್ಳ, ಮತ್ತು ಅವ್ಯಕ್ತಾದಿಸ್ಥಾವರಾಂತವಾಗಿರುವ, ಈ ಸಂಸಾರವೃಕ್ಷಕ್ಕೆ ಅದೇ ಬ್ರಹ್ಮನು ಕಾರಣವಾಗಿರುತ್ತದೆ. ಆ ಬ್ರಹ್ಮವಸ್ತುವೇ ಸಾಂಸಾರಿಕವಾದ ದೋಷವಿಲ್ಲದೆ ಪ್ರಕಾಶಮಾನವಾಗಿದೆ. ಮತ್ತು ಮೋಕ್ಷಸ್ವರೂಪವೂ ಆಗಿರುತ್ತದೆ. (ಅಶ್ವತ್ಥಃ=ಎಂದರೆ ಶ್ವಃ ನ ತಿಷ್ಠತೀತ್ಯಶ್ವತ್ಥಃ) ಎಂಬ ವ್ಯುತ್ಪತ್ತಿಯಿಂದ ಈ ಸಂಸಾರವು ನಶ್ವರವಾದದ್ದು ಎಂದರ್ಥವು. ॥೪೫॥

ಎಲೈ ಸುರಶ್ರೇಷ್ಠರೇ, ಪರಮಾರ್ಥಸತ್ಯಸ್ವರೂಪನಾದ ಆ ಪರಬ್ರಹ್ಮನಲ್ಲಿ ಮಾಯಾವಿಲಾಸವಶದಿಂದ ಸಮಸ್ತಲೋಕಗಳೂ ಪರಮಾರ್ಥವಾಗಿರುವಂತೆ ತೋರುತ್ತಿವೆ. ಆದುದರಿಂದ ಸಕಲ ಜಗತ್ತಿನ ಸೃಷ್ಟಿ ಸ್ಥಿತಿ ಲಯಗಳಿಗೆ ಕಾರಣವಾದ ಆ ಬ್ರಹ್ಮವಸ್ತುವನ್ನು ಯಾವ ವಿಕಾರವೂ ಅತಿಕ್ರಮಿಸುವುದಿಲ್ಲ. ॥೪೬॥

ಬಾಹ್ಯವಾದ ಸಕಲ ಜಗತ್ತನ್ನೂ ಬ್ರಹ್ಮನು ನಡುಗಿಸುತ್ತಾನೆ ಎಂದರೆ ಬ್ರಹ್ಮನ ಭಯದಿಂದಲೇ ಜಗತ್ತೆಲ್ಲವೂ ತಮ್ಮ ತಮ್ಮ ವ್ಯಾಪಾರದಲ್ಲಿ ನಿರತವಾಗಿರುವುವು. ಇಂತಹ ಜಗತ್ತನ್ನು ಬ್ರಹ್ಮನು ಪ್ರೇರಿಸುವನು. ಆ ಪರಶಿವನು ಮೇಲಕ್ಕೆತ್ತಿದ ವಜ್ರಾಯುಧದಂತೆ ಮಹಾಭಯಕ್ಕೆ ಕಾರಣವಾಗಿರುತ್ತಾನೆ. ನಿಶ್ಚಲನಾದ ಮತ್ತು ನಿತ್ಯನಾದ ಹೀಗೆ ಎಲ್ಲವನ್ನೂ ತನ್ನ ಅಧೀನವಾಗಿಟ್ಟು ಆಳುತ್ತಿರುವ ಆ ಬ್ರಹ್ಮನನ್ನು ತಿಳಿದುಕೊಂಡು ಸಂಸಾರಪಾಶದಿಂದ ಮನುಷ್ಯನು ಬಿಡುಗಡೆಯನ್ನು ಹೊಂದುವನು. ॥೪೭॥

ಅಗ್ನಿ, ಸೂರ್ಯ, ಇಂದ್ರ, ವಾಯು ಮತ್ತು ಯಮ ಇವರುಗಳು ಕೂಡ ಪರಶಿವನ ಹೆದರಿಕೆಯಿಂದ ತಮ್ಮ ತಮ್ಮ ವ್ಯಾಪಾರಗಳಲ್ಲಿ ನಿರತರಾಗಿ ಇರುತ್ತಾರೆ. ॥೪೮॥

ವರ್ತಮಾನೇ ಶರೀರೇಽಸ್ಮಿನ್ ಅಶಕ್ತೋ ಬೋದ್ಧುಮೀಶ್ವರಂ ।
ನರಃ ಸರ್ವೇಷು ಲೋಕೇಷು ಶರೀರತ್ವಾಯ ಕಲ್ಪತೇ ॥೪೯॥

ಯಥಾಽಽದರ್ಶೇ ಸ್ವಕಂ ರೂಪಂ ಯಥಾವನ್ನಿರ್ಮಲೇ ನರಃ ।
ತಥಾಽಪಶ್ಯತಿ ದೇಹೇ ಸ್ಮಿನ್ ಆತ್ಮಾನಂ ಬ್ರಹ್ಮ ಕೇವಲಂ ॥೫೦॥

ಜನ್ಮನಾಶವತಾಂ ಖಾನಾಂ ಪೃಥಗ್ಭಾವಂ ಪರಾತ್ಮನಃ ।
ತೇಷಾಂ ಜನ್ಮವಿನಾಶೌ ಚ ವಿದಿತ್ವಾನಾತ್ಮರೂಪತಃ ॥೫೧॥

ಪಶ್ಚಾದನಾತ್ಮರೂಪೇಣ ವಿದಿತಂ ಕೇವಲಾತ್ಮನಾ ।
ವಿದಿತ್ವಾ ಸ್ವಾನು ಭೂತ್ಯೈವ ಸ ಧೀರಸ್ತು ನ ಶೋಚತಿ ॥೫೨॥

ಬ್ರಹ್ಮವಿದ್ಯಾಸಂಪಾದನೆಗೆ ಯೋಗ್ಯವಾದ ಈ ಮನುಷ್ಯಶರೀರವನ್ನು ಪಡೆದು ಕೊಂಡು ಇದ್ದರೂ ಮನುಷ್ಯನು ಬ್ರಹ್ಮನನ್ನು ತಿಳಿದುಕೊಳ್ಳದಿದ್ದರೆ ಪುನಃ ಪುನಃ ಈ ಸಂಸಾರವನ್ನೇ ಹೊಂದುವನೇ ಹೊರತು ಅವನಿಗೆ ಮುಕ್ತಿಯು ಸಿಕ್ಕಲಾರದು. ಅಲ್ಲದೆ ಪುನಃ ಪುನಃ ದೇಹವನ್ನು ಪಡೆಯುತ್ತಿರುತ್ತಾನೆ. (ಆದುದರಿಂದ ಮನುಷ್ಯಶರೀರ ವನ್ನು ಪಡೆದ ಕಾಲದಲ್ಲೇ ಜಾಗ್ರತೆಯಾಗಿ ಮುಕ್ತಿಗೋಸ್ಕರ ಪ್ರಯತ್ನಪಡಬೇಕೆಂದು ಅರ್ಥವು.) ॥೪೯॥

ನಿರ್ಮಲವಾದ ಕನ್ನಡಿಯಲ್ಲಿ ತನ್ನ ರೂಪವನ್ನು ಹೇಗೆ ಸರಿಯಾಗಿ ನೋಡಿಕೊಳ್ಳುತ್ತಾನೆಯೋ ಹಾಗೆಯೇ ಈ ಶರೀರದಲ್ಲಿ ಶ್ರವಣಮನನಾದಿಗಳ ಮೂಲಕ ಆತ್ಮನನ್ನು ಸಾಕ್ಷಾತ್ಕರಿಸಲು ಶಕ್ತನಾಗುವನು. (ಸ್ವರ್ಗಾದಿ ಲೋಕಗಳು ಕೇವಲ ಭೋಗಸಾಧನಗಳಾದುದರಿಂದ ಅಲ್ಲಿ ಶ್ರವಣಾದಿಗಳಿಗೆ ಅವಕಾಶವಿಲ್ಲದ ಪ್ರಯುಕ್ತಜ್ಞಾನವು ಸುಲಭವಾಗಿ ದೊರಕಲಾರದೆಂದರ್ಥವು.) ॥೫೦॥

ಹುಟ್ಟುಸಾವುಗಳುಳ್ಳ ಅನಿತ್ಯಗಳಾದ ಇಂದ್ರಿಯಾದಿಗಳನ್ನು ಮೊದಲು ಆತ್ಮನಿ ಗಿಂತಲೂ ಭಿನ್ನವಾದುವುಗಳನ್ನಾಗಿ ತಿಳಿದುಕೊಳ್ಳಬೇಕು. ॥೫೧॥

ಆ ಬಳಿಕ ಅನಿತ್ಯವಾದ ಇಂದ್ರಿಯಗಳು ಆತ್ಮನಲ್ಲಿ ಅಧ್ಯಸ್ತವಾದುವುಗಳಾದ್ದ ರಿಂದ ಆತ್ಮನಿಗಿಂತಲೂ ಭಿನ್ನವಾಗಿರುವುದಿಲ್ಲ. ಸಕಲವೂ ಆತ್ಮರೂಪವಾಗಿಯೇ ಇರುವುದು ಎಂದು ಕ್ರಮೇಣ ತಿಳಿದುಕೊಂಡು ತನ್ನ ಅನುಭವಕ್ಕೆ ತರಬೇಕು. ಹೀಗೆ ತಿಳಿಯುವ ಧೀರನಾದ ಜ್ಞಾನಿಯು ಸಂಸಾರದಿಂದ ದುಃಖಪಡದೆ ಇರುತ್ತಾನೆ. ॥೫೨॥

ಇಂದ್ರಿಯೇಭ್ಯೋ ಮನಃ ಶ್ರೇಷ್ಠಂ ಮನಸಃ ಸತ್ತ್ವಮುತ್ತಮಂ ।
ಸತ್ತ್ವಾದಧಿ ಮಹಾನಾತ್ಮಾ ಮಹತೋಽವ್ಯಕ್ತಮುತ್ತಮಂ ॥೫೩॥

ಅವ್ಯಕ್ತಾತ್ತು ಪರಃ ಸಾಕ್ಷಾದ್ವ್ಯಾಪಕೋಽಲಿಂಗ ಏವ ಚ ।
ಯಂ ವಿದಿತ್ವಾ ನರಃ ಸಾಕ್ಷಾತ್ ಅಮೃತತ್ವಂ ಹಿ ಗಚ್ಛತಿ ॥೫೪॥

ನ ಸಂದೃಶೇ ತಿಷ್ಠತಿ ರೂಪಮಸ್ಯ
ನ ಚಕ್ಷುಷಾ ಪಶ್ಯತಿ ಕಶ್ಚಿದೇನಂ ।
ಹೃದಾಮನೀಷಾ ಮನಸಾಽಭಿಕ್ಲಪ್ತಃ
ಸಾಕ್ಷಾದಾತ್ಮಾ ಶಕ್ಯತೇ ವೇದಿತುಂ ಸಃ ॥೫೫॥

ಪೂರ್ವೋಕ್ತರೀತಿಯಂತೆ ಮನಸ್ಸೇ ಮೊದಲಾದ ಕಾರ್ಯಕರಣಕಲಾಪಗಳನ್ನು ಅವುಗಳ ಕಾರಣದಲ್ಲಿ ಅಂತರ್ಭೂತಗಳನ್ನಾಗಿ ತಿಳಿದು ಕ್ರಮೇಣ ಸಮಸ್ತ ಕಾರ್ಯ ಕರಣ ಸಂಘಾತಗಳಿಗೂ ಅಧಿಷ್ಠಾನಭೂತವಾದ ಬ್ರಹ್ಮವಸ್ತುವನ್ನು ತಿಳಿದುಕೊಳ್ಳ ಬೇಕೆಂದು ಈ ಶ್ಲೋಕದಲ್ಲಿ ಹೇಳುತ್ತಾರೆ.

ಚಕ್ಷುರಾದಿ ಇಂದ್ರಿಯಗಳಿಗಿಂತಲೂ ಮನಸ್ಸೇ ಶ್ರೇಷ್ಠವಾದದ್ದು. ಮನಸ್ಸಿಲ್ಲ ದಿದ್ದರೆ ಇಂದ್ರಿಯಗಳಿಂದ ಬರುವ ವೃತ್ತಿಗೂ, ಪ್ರವೃತ್ತಿಗೂ, ಮನಸ್ಸಿಗೂ ಕಾರ್ಯ ಕಾರಣಭಾವವೇ ಕೂಡುವುದಿಲ್ಲವಾದುದರಿಂದ ಮನಸ್ಸೇ ಶ್ರೇಷ್ಠವಾದುದು. ಆ ಮನಸ್ಸಿ ಗಿಂತಲೂ, ಅದಕ್ಕೆ ಕಾರಣಭೂತವಾದ ಬುದ್ಧಿಯು ಶ್ರೇಷ್ಠವಾದುದು. ಆ ಬುದ್ಧಿ ಗಿಂತಲೂ ಅದಕ್ಕೆ ಕಾರಣವಾದ ಅತಿಸೂಕ್ಷ್ಮವಾದ ಮೂಲಾವಿದ್ಯೆಯು ಶ್ರೇಷ್ಠ ವಾದುದು. ॥೫೩॥

ಆಮೂಲಾವಿದ್ಯೆಗಿಂತಲೂ ವ್ಯಾಪಕನೂ, ಲಿಂಗಶರೀರರಹಿತನೂ ಮತ್ತು ಮೋಕ್ಷಪ್ರದನೂ ಆದ ಪರಬ್ರಹ್ಮನು ಶ್ರೇಷ್ಠನು. ಲಿಂಗಶರೀರವಿದ್ದರೆ ಪುಣ್ಯಪಾಪಾದಿ ಗಳ ಲೇಪವುಂಟಾಗುವುದು. ಪರಮಾತ್ಮನಿಗಾದರೋ ಲಿಂಗಶರೀರವಿಲ್ಲದಿರುವ ಪ್ರಯುಕ್ತ ಪುಣ್ಯಪಾಪಾದಿ ಸಂಸ್ಪರ್ಶವೇ ಇರುವುದಿಲ್ಲವು. ಆದುದರಿಂದ ಅಲಿಂಗಃ ಎಂದು ವಿಶೇಷಣವನ್ನು ಕೊಟ್ಟಿದ್ದರಿಂದ ತನ್ನ ಹೊರತು ಬೇರೆ ಗಮಕವಿಲ್ಲದ ಪರ ಬ್ರಹ್ಮನು ಅಸಂಸಾರಿಯೆಂದು ಹೇಳಿದಂತಾಯಿತು. ॥೫೪॥

ಪರಬ್ರಹ್ಮನಿಗೆ ರೂಪವಿಲ್ಲದಿರುವುದರಿಂದ ಅವನು ಸಂದರ್ಶನವಿಷಯನಲ್ಲ. ಆದುದರಿಂದ ಯಾವನೂ ಇವನನ್ನು ಚಕ್ಷುರಾದಿ ಇಂದ್ರಿಯಗಳಿಂದ ಸಾಕ್ಷಾತ್ಕರಿಸ

ಏವಂ ಸಾಕ್ಷಾತ್ಸಚ್ಚಿದಾನಂದ ರೂಪಂ
ಭಾವಾ ಭಾವಾ ಶೇಷ ಲೋಕಸ್ಯ ಹೇತುಂ ।
ಶ್ರುತ್ಯಾ ಯುಕ್ತ್ಯಾ ಬ್ರಹ್ಮ ಜಾನಂತಿ ಮರ್ತ್ಯಾಃ
ವಿದ್ಯಾಯೋಗಾದೇವ ಮುಕ್ತಾ ಭವಂತಿ ॥೫೬॥

ವಿದ್ಯಾವೇದ್ಯಂ ಬ್ರಹ್ಮ ಯದ್ವೇದ ಸಿದ್ಧಂ
ತಸ್ಯಾಚಿಂತ್ಯಾ ಕಾಚಿದಸ್ತ್ಯೇವ ಶಕ್ತಿಃ ।
ಶಕ್ತ್ಯಾ ಭಿನ್ನಂ ತದ್ಭವತ್ಯದ್ವಯಂ ಸತ್
ಸತ್ಯಾನಂದಾ ಸಂಗಬೋಧೈಕರೂಪಂ ॥೫೭॥

ಏಕಂ ರೂಪಂ ಬ್ರಹ್ಮಣೋ ಜೀವರೂಪಂ
ಭೋಗ್ಯಂ ವಿಶ್ವಂ ಬ್ರಹ್ಮಣ ಸ್ತ್ವನ್ಯರೂಪಂ ।

ಲಾರನು. ಮತ್ತೇನೆಂದರೆ ನಿಶ್ಚಯಾತ್ಮಕವಾದ ಬುದ್ಧಿಯಿಂದ ಮನನಾದಿ ಸಾಧನಗಳಿಂದ ಪ್ರಕಾಶಿತನಾಗಿಯೇ ಈ ಆತ್ಮನು ಸಾಕ್ಷಾತ್ಕಾರವಿಷಯನಾಗುವನು. ||೫೫||

ಈ ರೀತಿಯಲ್ಲಿ ಮುಮುಕ್ಷುಗಳು ಭಾವಾಭಾವಾತ್ಮಕವಾದ ಸಮಸ್ತ ಜಗತ್ತಿಗೂ ಕಾರಣಭೂತನಾದ ಆ ಸಚ್ಚಿದಾನಂದಸ್ವರೂಪವನ್ನು ಶ್ರವಣದಿಂದಲೂ ಮತ್ತು ಮನನದಿಂದಲೂ ಸಹ ತಿಳಿಯುತ್ತಾರೆ. ಮತ್ತು ಜ್ಞಾನದಿಂದಲೇ ಮುಕ್ತಿಯನ್ನು ಹೊಂದುತ್ತಾರೆ. ||೫೬||

ಬ್ರಹ್ಮಜ್ಞಾನದಿಂದ ಪಡೆಯಲು ಸಾಧ್ಯವಾದ ಯಾವ ಬ್ರಹ್ಮವಸ್ತುವಿದೆಯೋ ಆ ಬ್ರಹ್ಮವಸ್ತುವಿಗೆ ಅಧೀನವಾಗಿ ಅಘಟಿತಘಟನೆಯನ್ನುಂಟುಮಾಡುವ ಒಂದು ಅನಿರ್ವಚನೀಯವಾದ ಶಕ್ತಿಯು ಇದ್ದೇತೀರಬೇಕು. (ಇಲ್ಲದಿದ್ದರೆ ಅಸಂಗನಾಗಿರತಕ್ಕ ಬ್ರಹ್ಮನಿಗೆ ಜಗತ್ಕಾರಣತ್ವಾದಿಗಳು ಸಂಗತವಾಗುವುದಿಲ್ಲ.) ಆ ಶಕ್ತಿಯಾದ ಮಾಯೆಯ ಮೂಲಕ ಬ್ರಹ್ಮನು ಆಯಾ ಉಪಾಧಿಗಳನ್ನು ಪಡೆದು ಭೇದವುಳ್ಳವನಾಗಿ ತೋರುತ್ತಾನೆ. ||೫೭||

ಈ ಶ್ಲೋಕದಲ್ಲಿ ಬ್ರಹ್ಮನ ಸೋಪಾಧಿಕವಾದ ಮೂರು ರೂಪಗಳನ್ನೂ ನಿರುಪಾಧಿಕವಾದ ಒಂದು ರೂಪವನ್ನು ಹೇಳುತ್ತಾನೆ.

ಮಲಿನ ಸತ್ತ್ವಪ್ರಧಾನವಾದ ಮಾಯೆಯಿಂದ ವಿಶಿಷ್ಟವಾದ ಬ್ರಹ್ಮಸ್ವರೂಪವೇ ಜೀವಸಂಜ್ಞೆಯನ್ನು ಹೊಂದುತ್ತದೆ. ತಮೋಗುಣ ಪ್ರಧಾನವಾದ ಮಾಯೆ

ಅನ್ಯದ್ರೂಪಂ ಬ್ರಹ್ಮಣಃ ಸರ್ವಶಾಸ್ತ್ರಂ
ಪ್ರಜ್ಞಾಮಾತ್ರಂ ಶುದ್ಧರೂಪಂ ಪರಸ್ಯ ॥೫೮॥

ಸರ್ವಾಜೀವೇ ಸರ್ವಸಂಸ್ಥೇ ಬೃಹಂತೇ ।
ತಸ್ಮಿನ್ ಜೀವೋ ಭ್ರಾಮ್ಯತೇ ಬ್ರಹ್ಮಚಕ್ರೇ ॥
ಬ್ರಹ್ಮಾತ್ಮಾನಂ ಪ್ರೇರಿತಾರಂ ಚ ಯುಕ್ತ್ವಾ ।
ಮತ್ವಾ ಚೈಕಂ ಯಾತಿ ಮರ್ತ್ಯೋಽಮೃತತ್ವಂ ॥೫೯॥

ಜ್ಞಾಜ್ಞೌ ಜೀವಾ ಜೀವಸಂಜ್ಞೌ ಪ್ರತೀತ್ಯಾ ।
ಶ್ರುತ್ಯಾ ಯುಕ್ತ್ಯಾ ಸ್ವಾನುಭೂತ್ಯಾ ಹ್ಯಭಿನ್ನೌ ॥
ಮಾಯಾಭೋಕ್ತೃ ಭೋಗಹೇತುಃ ಪರಾತ್ಮಾ ।
ರೂಪೈರೇಭಿ ರ್ವಿಶ್ವರೂಪೋ ಹ್ಯಕರ್ತಾ ॥೬೦॥

ಯಿಂದ ವಿಶಿಷ್ಟವಾದ ಅದೇ ಬ್ರಹ್ಮಸ್ವರೂಪವು ಭೋಗ್ಯವಾದ ಪ್ರಪಂಚರೂಪದಿಂದಿರುತ್ತದೆ. ವಿಶುದ್ಧಸತ್ತ್ವಪ್ರಧಾನವಾದ ಮಾಯೆಯೇ ಉಪಾಧಿಯಾಗಿವುಳ್ಳ ಬ್ರಹ್ಮಸ್ವರೂಪವೇ ಜೀವನಿಗೆ ತತ್ಕರ್ಮಾನುಗುಣವಾದ ಫಲವನ್ನು ಕೊಡತಕ್ಕ ಈಶ್ವರ ಚೈತನ್ಯವಾಗಿರುತ್ತದೆ. ಇದಲ್ಲದೇ ಮಾಯಾಸಂಸ್ಪರ್ಶಾದಿಗಳಿಲ್ಲದೇ ಇರುವ ಬ್ರಹ್ಮವೇ ಸಮಸ್ತವೇದಾಂತಗಳಿಂದ ಪ್ರತಿಪಾದ್ಯಮಾನವಾದ ಮತ್ತು ಸಚ್ಚಿದಾನಂದೈಕರಸರೂಪವಾದ ನಿರುಪಾಧಿಕಸ್ವರೂಪವಾಗಿರುತ್ತದೆ. ॥೫೮॥

ಯಾವ ಸಂಸಾರದಲ್ಲಿ ಸಮಸ್ತ ಜೀವಗಳೂ ತಮ್ಮ ತಮ್ಮ ಜೀವಿಕೆಯನ್ನು ಸಾಧಿಸುವರೋ ಮತ್ತು ಯಾವ ಸಂಸಾರದಲ್ಲಿ ಜೀವಿಗಳಿಗೆ ಸ್ಥಿತಿಯೂ ಮತ್ತು ಮರಣವೂ ಆಗುತ್ತದೆಯೋ ಅಂತಹ ಸಂಸಾರದಲ್ಲಿ ಜೀವನು ಇದ್ದುಕೊಂಡು ಈಶ್ವರನಿಂದ ತನ್ನ ಅಜ್ಞಾನದ ಮೂಲಕ ಭ್ರಮೆಗೊಳ್ಳುತ್ತಾನೆ. ಹೀಗಿರುತ್ತಿರಲು ಆ ಜೀವನು ತನ್ನಿಂದ ಸಂಪಾದಿಸಲ್ಪಟ್ಟ ಸುಕೃತದಿಂದಲೂ, ಕರ್ಮಾನುಷ್ಠಾನದಿಂದಲೂ ಮತ್ತು ಶ್ರವಣಮನನನಿಧಿಧ್ಯಾಸನಗಳಿಂದಲೂ, ಸಂಸಾರಪ್ರೇರಕನಾದ ಆ ಅದ್ವಿತೀಯನಾದ ಈಶ್ವರನನ್ನು ಸಾಕ್ಷಾತ್ಕರಿಸಿ ಮಾನವನು ಮುಕ್ತಿಯನ್ನು ಹೊಂದುತ್ತಾನೆ. ॥೫೯॥

"ತತ್ತ್ವಮಸಿ" ಎಂಬ ಶ್ರುತಿಯಲ್ಲಿ ಹೇಳಿರುವ ತತ್ಪದಾರ್ಥವು ಅಪರಿಚ್ಛಿನ್ನನಾದ ಪರಶಿವನನ್ನು ಹೇಳುತ್ತದೆ. "ತ್ವಂ" ಪದಾರ್ಥವೇ ಪರಿಚ್ಛಿನ್ನನಾದ ಜೀವನಾ

ಕ್ಷರಂ ಮಾಯಾ ಚಾಕ್ಷರಂ ಜೀವರೂಪಂ ।
ಕ್ಷರಾತ್ಮನಾ ಭಿದ್ಯತೇ ದೇವ ಏಕಃ ॥
ತಸ್ಯ ಧ್ಯಾನಾ ದ್ಯೋಜನಾತ್ತತ್ತ್ವಭಾವಾ ।
ದ್ಭೂಯಶ್ಚಾಂತೇ ವಿಶ್ವಮಾಯಾ ನಿವೃತ್ತಿಃ ॥೬೧॥

ಗಿರುವನು. ಇದರಲ್ಲಿ ತತ್ಪದಾರ್ಥವಾದ ಪರಶಿವನಿಗೆ " ಜ್ಞಃ " ಎಂಬ ಸಂಜ್ಞೆಯೂ, "ತ್ವಂ"ಪದಾರ್ಥವಾದ ಜೀವನಿಗೆ "ಅಜ್ಞಃ" ಎಂಬ ಸಂಜ್ಞೆಯೂ ಇರುತ್ತದೆ. ಇವರಿಬ್ಬರಲ್ಲಿ " ಜ್ಞಃ " ಎಂಬುವನೇ ಈಶ್ವರನೂ, " ಅಜ್ಞಃ " ಎಂದರೆ ಜೀವನೂ ಆಗಿರುವನು. ಇವರಿಬ್ಬರಿಗೆ ವ್ಯವಹಾರದೆಸೆಯಲ್ಲಿ ಭೇದವು ತೋರಿಬರುತ್ತದೆ. ವಸ್ತುತಃ " ತತ್ತ್ವಮಸಿ " " ಅಹಂಬ್ರಹ್ಮಾಸ್ಮಿ " ಎಂಬ ಈ ಎರಡು ಶ್ರುತಿಗಳಿಂದಲೂ ಮತ್ತು ಜ್ಞಾನಿಗಳ ಅನುಭವದಿಂದಲೂ, ಇವರಿಬ್ಬರೂ ಅಭಿನ್ನರಾಗಿರುತ್ತಾರೆ. ಜೀವನು ಮಲಿನಸತ್ತ್ವಪ್ರಧಾನವಾದ ಮಾಯೆಗೆ ಅಧೀನನಾಗಿ ಸಕಲ ವಿಷಯಗಳನ್ನೂ ಉಪಭೋಗಿಸುವನು. ಈಶ್ವರನಾದರೋ, ತನಗೆ ಅಧೀನವಾದ ಮಾಯೆಯಿಂದ ನಾನಾವಿಷಯರೂಪನಾಗಿ ಜೀವಭೋಗ್ಯವಸ್ತುಗಳಂತಿರುವನು. ಆದರೂ ವಸ್ತುತಃ ಈಶ್ವರನು ಕರ್ತೃವಲ್ಲವು. ॥೬೦॥

ಜ್ಞಾನೋದಯವಾಗಲು ಜ್ಞಾನದಿಂದ ನಾಶವಾಗುವಂತಹ ಮಾಯೆಯೂ ಮತ್ತು ನಾಶರಹಿತನಾದ ಜೀವರೂಪವನ್ನು ತಾಳಿದ ಈಶ್ವರನೂ, ಇವೆರಡರಿಂದ ಈಶ್ವರನು ಭಿನ್ನನಾಗುವನು. ಏಕೆಂದರೆ ವಸ್ತುತಃ ಮಾಯಾ ತತ್ಕಾರ್ಯಗಳು ಈಶ್ವರನಲ್ಲಿ ಅಧ್ಯಸ್ತವಾದುದರಿಂದ ಅಭೇದವಿದ್ದರೂ ಮಾಯಾವಶದಿಂದ ಭೇದವು ತೋರುತ್ತದೆ. ಆದರೆ ಸ್ವಸಜಾತೀಯ ವಿಜಾತೀಯ ಭೇದರಹಿತನೂ, ಸಚ್ಚಿದಾನಂದೈಕರಸಸ್ವರೂಪನೂ ಆದ ಬ್ರಹ್ಮನು ಸರ್ವರೂಪನು. " ಸರ್ವಂ ಖಲ್ವಿದಂ ಬ್ರಹ್ಮ " (ಸಮಸ್ತ ಪ್ರಪಂಚವೂ ಬ್ರಹ್ಮನಿಂದ ವ್ಯತಿರಿಕ್ತವಾದುದಲ್ಲ.) ಎಂಬ ನಿಧಿಧ್ಯಾಸನಾತ್ಮಕವಾದ ಜ್ಞಾನದಿಂದ ಸಕಲ ಭೇದಗಳೂ ಹೋಗಲಾಡಿಸಲ್ಪಡುತ್ತವೆ. ಅನಂತರ " ಅಹಂ ಬ್ರಹ್ಮಾಸ್ಮಿ " (ನಾನು ಬ್ರಹ್ಮನೇ ಆಗಿರುತ್ತೇನೆ) ಎಂಬ ಅಪರೋಕ್ಷಜ್ಞಾನದಿಂದ ಅವಿದ್ಯೆಯು ನಾಶವನ್ನು ಹೊಂದುತ್ತದೆ. ಆ ಮಾಯೆಯು ನಿವೃತ್ತವಾದರೂ ಸಹ ಪ್ರಾರಬ್ಧಕರ್ಮಾಧೀನವಾಗಿ ಮಾಯಾವಾಸನೆಯೂ ಜೀವನ್ಮುಕ್ತಿಕಾಲದಲ್ಲಿ ಅನುವೃತ್ತವಾಗಿರಲು, ಶರೀರಧಾರಣೆಗೆ ಯೋಗ್ಯವಾದ ಕೆಲಸಗಳಲ್ಲಿ ಜೀವನ್ಮುಕ್ತನು

ಜ್ಞಾತ್ವಾ ದೇವಂ ಸರ್ವಪಾಶಾಪಹಾನಿಃ।
ಕ್ಷೀಣೈಃ ಕ್ಲೇಶೈಃ ಜನ್ಮ ಮೃತ್ಯು ಪ್ರಹಾಣಿಃ॥
ತಸ್ಯಧ್ಯಾನಾ ನ್ಮೂಲಮಾಯಾ ವಿಭೇದೇ।
ವಿಶ್ವೈಶ್ವರ್ಯಂ ಯಾತಿ ಕೈವಲ್ಯರೂಪಂ ॥೬೨॥

ಏತತ್ ಜ್ಞೇಯಂ ನಿತ್ಯಮೇವಾತ್ಮಸಂಸ್ಥಂ।
ನಾತಃ ಪರಂ ವೇದಿತವ್ಯಂ ಹಿ ಕಿಂಚಿತ್॥
ಭೋಕ್ತಾ ಭೋಗ್ಯಂ ಪ್ರೇರಿತಾರಂ ಚ ಮತ್ವಾ।
ಸರ್ವಂ ಪ್ರೋಕ್ತಂ ತ್ರಿವಿಧಂ ಬ್ರಹ್ಮಮೇತತ್ ॥೬೩॥

ನಿರತನಾಗಿಯೇ ಇರುತ್ತಾನೆ. ಮರಣಾನಂತರ ವಿದೇಹಕೈವಲ್ಯಾವಸ್ಥೆಯಲ್ಲಿ ಸಕಲ ಮಾಯಾವಾಸನೆಯೂ ನಾಶಹೊಂದಿ ಬ್ರಹ್ಮಾತ್ಮಭಾವವನ್ನು ಪಡೆಯುವನು. ॥೬೧॥

ಹಿಂದೆ ಹೇಳಿದ ರೀತಿಯಂತೆ ಬ್ರಹ್ಮನನ್ನು ಸರ್ವಾತ್ಮರೂಪದಿಂದ ತಿಳಿದು ವಿದ್ವಾಂಸನು ಮಾಯಾಪಾಶದಿಂದ ಮುಕ್ತನಾಗುತ್ತಾನೆ. ತರುವಾಯ ಜ್ಞಾನದಿಂದ ಮೂಲಾವಿದ್ಯೆಯೂ ನಾಶಹೊಂದಲು ಜನ್ಮಮರಣಗಳಿಲ್ಲದೆ ಕೇವಲ ಬ್ರಹ್ಮಾತ್ಮರೂಪ ದಿಂದ ಅವಸ್ಥಾನರೂಪವಾದ ವಿದೇಹಕೈವಲ್ಯವನ್ನು ಪಡೆಯುತ್ತಾನೆ. ॥೬೨॥

ಮಾಯಾನಿವೃತ್ತಿಯಾದ ತರುವಾಯ ಜ್ಞಾನೋದಯವಾಗಲು ಆಪ್ತಕಾಮ ನಾಗುವುದರಿಂದ ಮಾಯಾಶಕ್ತಿವಶದಿಂದ ಭೋಕ್ತೃಭೋಗ್ಯಾದಿ ಭೇದಗಳಿಂದ ಭಿನ್ನವಾದ ಈ ಪ್ರಪಂಚವನ್ನು ಬ್ರಹ್ಮಾಭಿನ್ನವಾದುದನ್ನಾಗಿ ತಿಳಿದುಕೊಂಡು ಪೂರ್ವೋಕ್ತವಾದ ಪರಮಾತ್ಮಸ್ವರೂಪದಿಂದ ಇರುವಿಕೆಯನ್ನು ಹೊಂದಬೇಕು. ಇದೇ ಬ್ರಹ್ಮಭಾವವು. ಇದೇ ತಿಳಿದುಕೊಳ್ಳಲು ಯೋಗ್ಯವಾಗಿರುವುದು. ಇದಕ್ಕಿಂತ ಬೇರೆಯದಾದ ವಸ್ತುವೇ ಇರುವುದಿಲ್ಲ. ಸಂಸಾರದೆಸೆಯಲ್ಲಿ ಯಾವ ಭೋಕ್ತೃತ್ವ, ಭೋಗ್ಯತ್ವ, ಪ್ರೇರಯಿತೃತ್ವಗಳೆಂಬ ಮೂರು ಬಗೆಗಳಿರುವವೋ ಈ ಮೂರು ಭೇದ ಗಳೂ ಬ್ರಹ್ಮನಿಗೆ ಮಾಯಾವಿಲಾಸದಿಂದುಂಟಾದ ಔಪಾಧಿಕವಾದ ರೂಪಭೇದಗಳು. ಈ ರೂಪಭೇದಗಳನ್ನೂ ಬ್ರಹ್ಮತತ್ವದಿಂದ ವ್ಯತಿರಿಕ್ತವಾದವುಗಳನ್ನಾಗಿ ತಿಳಿಯ ಬಾರದು. ॥೬೩॥

ವಹ್ನೇರ್ಯಥಾ ಯೋನಿಗತಸ್ಯ ಮೂರ್ತಿಃ ।
ನ ದೃಶ್ಯತೇ ನೈವ ಚ ಲಿಂಗನಾಶಃ ॥
ಸ ಭೂಯ ಏವೇಂಧನ ಯೋನಿ ಗೃಹ್ಯಃ ।
ತದ್ವೋಭಯಂ ವೈ ಪ್ರಣವೇನ ದೇಹೇ ॥೬೪॥

ಸ್ವ ದೇಹ ಮರಣಿಂ ಕೃತ್ವಾ ಪ್ರಣವಂ ಚೋತ್ತರಾರಣಿಂ ।
ಧ್ಯಾನ ನಿರ್ಮಥನಾಭ್ಯಾಸಾದ್ದೇವಂ ಪಶ್ಯೇನ್ನಿಗೂಢವತ್ ॥೬೫॥

ಪೂರ್ವೋಕ್ತವಾದ ಬ್ರಹ್ಮಸ್ವರೂಪವನ್ನು ತಿಳಿದುಕೊಳ್ಳುವ ಉಪಾಯವನ್ನು ಹೇಳುತ್ತಾರೆ. ಅಗ್ನಿಹೋತ್ರಿಗಳು ಬನ್ನಿಮರದ ತುಂಡನ್ನು ಕೆಳಗೆ ಇಟ್ಟು ಅದರ ಮೇಲೆ ಆ ಮರದಶಂಕುವನ್ನು ಇಟ್ಟು ಕಡೆಯುತ್ತಾರೆ. ಮೊದಲು ಶಾಖ ಉಂಟಾಗಿ ಆಮೇಲೆ ಕಿಡಿಗಳು ಹೊರಡುತ್ತವೆ. ಆದರೂ ಅರಣಿಯ ಒಳಗಡೇ ಇರುವ ಅಗ್ನಿಯು ಮೊದಲು ಚಕ್ಷುರ್ಗ್ರಾಹ್ಯವಾಗುವುದಿಲ್ಲ. ಆದರೆ ಅರಣಿಯನ್ನು ಮಥನಮಾಡಲು ಅದರಿಂದ ಉಂಟಾಗುವ ಔಷ್ಣ್ಯದಿಂದ ಅದರೊಳಭಾಗದಲ್ಲಿ ಅಗ್ನಿಯಿದೆ. ಎಂದು ತಿಳಿಯಬಹುದು. ಅದರಂತೆಯೇ ಬ್ರಹ್ಮನೂ ಕೂಡ ಈ ಕಾರ್ಯಕರಣಸಂಘಾತದಲ್ಲಿ ವ್ಯಾಪಿಸಿ ಇರುವವನಾದರೂ ಗೋಚರನಾಗುವುದಿಲ್ಲ. ಆದರೂ ಅರಣಿಯಲ್ಲಿರುವ ಅಗ್ನಿಯನ್ನು ಹೇಗೋ ಹಾಗೆ ಬ್ರಹ್ಮನನ್ನೂ ಉಪಾಯಾಂತರದಿಂದ ತಿಳಿಯಬಹುದು. ಆ ಉಪಾಯವೇ ಓಂಕಾರವಾಗಿರುತ್ತದೆ. ಕ್ಷರಾಕ್ಷರರೂಪವನ್ನುದ್ದೇಶಿಸಿ ಆ ಓಂಕಾರ ಧ್ಯಾನದಿಂದಲೇ ಹೃದಯಪುಂಡರೀಕವರ್ತಿಯಾದ ಆಕಾಶದಲ್ಲಿ ಸುಲಭನಾಗಿರುವ ಬ್ರಹ್ಮನ ಸಗುಣ ಮತ್ತು ನಿರ್ಗುಣರೂಪವನ್ನು ಸಾಕ್ಷಾತ್ಕರಿಸಬಹುದು. ॥೬೪॥

ಓಂಕಾರವು ಹೇಗೆ ಸಾಕ್ಷಾತ್ಕಾರದಲ್ಲಿ ಉಪಾಯವಾಗುತ್ತದೆ ಎಂಬ ಅಂಶವನ್ನು ತಿಳಿಸುತ್ತಾರೆ. ತನ್ನ ದೇಹದಲ್ಲಿರುವ ಹೃದಯವನ್ನು ಕೆಳಭಾಗದ ಅರಣಿಯನ್ನಾಗಿ ಮಾಡಿ ಓಂಕಾರವನ್ನು ಮೇಲುಭಾಗದ ಅರಣಿಯನ್ನಾಗಿಮಾಡಿ, ಪರಬ್ರಹ್ಮನ ಅಥವಾ ಆ ಪರಬ್ರಹ್ಮನ ಉಪಾಸನೆ ಎಂದರೆ ಪುನಃ ಪುನಃ ಚಿಂತನೆಯನ್ನೇ ಅರಣಿ ನಿರ್ಮಂಥನವೆಂದು ತಿಳಿದು, ಬ್ರಹ್ಮಸಾಕ್ಷಾತ್ಕಾರವಾಗುವ ಪರ್ಯಂತವೂ ಓಂಕಾರಧ್ಯಾನವನ್ನೇ ಅನುವರ್ತಿಸಿ, ಸ್ವಪ್ರಕಾಶನಾದ ಬ್ರಹ್ಮನನ್ನು, ಅರಣಿಯಲ್ಲಡಗಿರುವ ಅಗ್ನಿಯನ್ನು ನಿರ್ಮಥನ ಮಾಡೋಣದರಿಂದ ಹೇಗೆ ತಿಳಿಯುತ್ತಾನೆಯೋ ಅದರಂತೆ, ಉಪಾಸಕನು ತಿಳಿಯುತ್ತಾನೆ. ॥೬೫॥

ತಿಲೇಷು ತೈಲಂ ದಧಿನೀವ ಸರ್ಪಿಃ ।
ಆಪಃ ಸ್ರೋತಸ್ಸ್ವರಣೀಷು ಚಾಗ್ನಿಃ ॥
ಏವ ಮಾತ್ಮಾತ್ಮನಿ ಗೃಹ್ಯತೇಽಸೌ ।
ಸತ್ಯೇ ನೈವಂ ತಪಸಾ ಯೋಽನುವೇತ್ತಿ ॥೬೬॥

ಸರ್ವ ವ್ಯಾಪಿನ ಮಾತ್ಮಾನಂ ಕ್ಷೀರೇ ಸರ್ಪಿರಿವಾರ್ಪಿತಂ ।
ಆತ್ಮವಿದ್ಯಾ ತಪೋಮೂಲಂ ತದ್ಬ್ರಹ್ಮೋಪನಿಷತ್ಪರಂ ॥೬೭॥

ಆತ್ಮಸಾಕ್ಷಾತ್ಕಾರಕ್ರಮವನ್ನು ಅನೇಕ ದೃಷ್ಟಾಂತಗಳಿಂದ ಪ್ರತಿಪಾದಿಸಿ ಸಾಧನೆಯ ರೀತಿಯನ್ನು ಮತ್ತೊಮ್ಮೆ ತಿಳಿಯಪಡಿಸುತ್ತಾರೆ.

ಲೋಕದಲ್ಲಿ ಎಳ್ಳಿನ ಕಾಳುಗಳಲ್ಲಿರುವ ಎಣ್ಣೆಯು ಹೇಗೆ ಬಾಹ್ಯಾಂಭ್ಯಂತರಗಳಲ್ಲಿಯೂ ವ್ಯಾಪಿಸಿ ಇರುವುದೋ, ಮೊಸರಿನಲ್ಲಿ ತುಪ್ಪವು ಬೆಣ್ಣೆಯ ರೂಪದಿಂದ ಹೇಗೆ ವ್ಯಾಪಿಸಿರುವುದೋ, ನದಿಯ ಪಾತ್ರದಲ್ಲಿರುವ ಮರಳಿನಮೇಲೆ ಪ್ರವಹಿಸುವ ನೀರು ಹೇಗೆ ಮರಳಿನಮೇಲೆಯೂ ಮತ್ತು ಒಳಭಾಗದಲ್ಲಿಯೂ ವ್ಯಾಪಿಸಿರುತ್ತದೆಯೋ, ಮತ್ತು ಕಾಷ್ಠಾದಿಗಳಲ್ಲಿ ಅಗ್ನಿಯು ಹೇಗೆ ವ್ಯಾಪಿಸಿರುತ್ತದೆಯೋ, ಅದರಂತೆ ಆತ್ಮನು ಸರ್ವಸ್ಥಳಗಳಲ್ಲಿಯೂ ಇರುವನು. ಎಣ್ಣೆ ಮುಂತಾದುವುಗಳು ಆಯಾ ಪದಾರ್ಥಗಳಲ್ಲಿ ಅಡಗಿದ್ದರೂ ನಮಗೆ ತಿಳಿಯದೇ ನಿಷ್ಪೀಡನಾದಿಗಳಿಂದ ಹೇಗೆ ತಿಳಿದುಬರುವುವೋ, ಅದರಂತೆ ಆತ್ಮನೂ ಹಾರ್ದಾಕಾಶದಲ್ಲಿರುವವನಾಗಿ ಧ್ಯಾನದಿಂದ ತಿಳಿಯಲ್ಪಡುವನು. ಇಂತಹ ಆತ್ಮನನ್ನು ಯಾವನು ಸತ್ಯವಚನಗಳಿಂದಲೂ, ವರ್ಣಾಶ್ರಮಾದಿ ಧರ್ಮಗಳ ಅನುಷ್ಠಾನಾದಿಗಳಿಂದಲೂ ತಪಸ್ಸಿನಿಂದಲೂ ಕ್ರಮೇಣ ತಿಳಿಯುತ್ತಾನೊ ಅವನೇ ಬ್ರಹ್ಮಸಾಕ್ಷಾತ್ಕಾರವನ್ನು ಪಡೆಯಲು ಸಮರ್ಥನಾಗುತ್ತಾನೆ. ॥೬೬॥

ಹಾಲಿನಲ್ಲಿ ಕಾರಣವಾದ ಬೆಣ್ಣೆಯರೂಪದಿಂದ ತುಪ್ಪವು ಹೇಗಿರುವುದೋ ಅದೇ ರೀತಿಯಲ್ಲಿ ಸಕಲ ಪ್ರಪಂಚದಲ್ಲಿಯೂ ಬ್ರಹ್ಮನು ಕಾರಣರೂಪದಿಂದ ವ್ಯಾಪಿಸಿರುವನು. ಇಂತಹ ಬ್ರಹ್ಮನು ಉಪನಿಷತ್ತುಗಳ ಶ್ರವಣದಿಂದಲೂ ವಿಹಿತವಾದ ವರ್ಣಾಶ್ರಮಗಳ ಧರ್ಮಾನುಷ್ಠಾನದಿಂದಲೂ, ಮನನನಿದಿಧ್ಯಾಸನಾದಿಗಳಿಂದಲೂ, ಸಾಕ್ಷಾತ್ಕಾರಯೋಗ್ಯನು. ಇವೇ ಅವನ ಸಾಕ್ಷಾತ್ಕಾರದಲ್ಲಿ ಸಾಧನಗಳಾಗಿರುವುವು. ॥೬೭॥

ಯಜ್ಞದಾನಾದಿಭಿಃ ಪುಂಸ್ಯಾಂ ಯೋಗಸಿದ್ಧಿರ್ಭವಿಷ್ಯತಿ ।
ಯೋಗಾತ್ಸಂಜಾಯತೇ ಜ್ಞಾನಂ ಜ್ಞಾನಾನ್ಮುಕ್ತಿರ್ನ ಕರ್ಮಣಾ ॥೬೮॥

ಅತ್ಯಾಶ್ರಮಿಭ್ಯಃ ಶಾಂತೇಭ್ಯೋ ವಕ್ತವ್ಯಂ ಬ್ರಹ್ಮವೇದನಂ ।
ನಾಪ್ರಶಾಂತಾಯ ದಾತವ್ಯಂ ನಾಪುತ್ರಾಯ ಕದಾಚನ ॥೬೯॥

ಕರ್ಮದಿಂದ ಚಿತ್ತಶುದ್ಧಿಜ್ಞಾನಪ್ರಾಪ್ತಿಯ ಕ್ರಮದಿಂದ ಮುಕ್ತಿಯು ಸಿಕ್ಕುವುದಾದರೂ ಕರ್ಮಾನುಷ್ಠಾನದಿಂದ ಕ್ರಮವಾಗಿ ಜ್ಞಾನವನ್ನು ಪಡದೇ ಮುಕ್ತಿಯನ್ನು ಹೊಂದುವನೇ ವಿನಾ ಸಾಕ್ಷಾತ್ ಕರ್ಮಾನುಷ್ಠಾನದಿಂದ ಮುಕ್ತಿಯನ್ನು ಹೊಂದಲಾರನು ಎಂಬ ಅಂಶವನ್ನು ತಿಳಿಸುತ್ತಾರೆ.

ಈಶ್ವರಾರ್ಪಣ ಬುದ್ಧಿಯಿಂದ ಅನುಷ್ಠಾನಮಾಡಿದ ಯಜ್ಞದಾನಾದಿಗಳಿಂದ ಚಿತ್ತವೃತ್ತಿನಿರೋಧರೂಪವಾದ ಯೋಗಸಿದ್ಧಿಯನ್ನು ಹೊಂದುತ್ತಾನೆ. ಯೋಗದ ಸತತಾಭ್ಯಾಸದಿಂದ ಜ್ಞಾನವನ್ನು ಪಡೆಯುತ್ತಾನೆ. ತರುವಾಯ ಜ್ಞಾನದಿಂದ ಮುಕ್ತಿಯುಂಟಾಗುತ್ತದೆ. ಕರ್ಮಾನುಷ್ಠಾನ ಮಾತ್ರದಿಂದಲೇ ಮುಕ್ತಿಯುಂಟಾಗುವುದಿಲ್ಲವು. ॥೬೮॥

ವೇದಾಂತವನ್ನು ವಿವೇಕವೈರಾಗ್ಯಗಳಿಲ್ಲದವರಿಗೆ ಉಪದೇಶಮಾಡಿದರೆ ಅಂಥವರು ಕರ್ಮತ್ಯಾಗಮಾಡಿದರೆ ದುರುಪಯೋಗವಾಗುವುದರಿಂದ ಉಪದೇಶಸಂಪ್ರದಾಯವನ್ನು ಕಾಪಾಡಬೇಕಾದುದರಿಂದ ಬ್ರಹ್ಮವಿದ್ಯೆಯಲ್ಲಿ ಅಧಿಕಾರಿಯು ಎಂದರೆ ತಕ್ಕ ಯೋಗ್ಯತೆಯುಳ್ಳವನು ಯಾರೆಂಬುದನ್ನು ತಿಳಿಸುತ್ತಾರೆ.

ಯಾರು ಧರ್ಮಾಚರಣೆ, ಚಿತ್ತಶುದ್ಧಿ, ವಿವೇಕ, ವೈರಾಗ್ಯಗಳನ್ನು ಪಡೆದು ಗೃಹಸ್ಥಾದ್ಯಾಶ್ರಮಗಳನ್ನು ಪರಿತ್ಯಜಿಸಿ, ಪರಮಹಂಸಪರಿವ್ರಾಜಕಾದ್ಯಾತ್ಮಕವಾದ ಸನ್ಯಾಸವನ್ನು ಸ್ವೀಕರಿಸುತ್ತಾರೋ ಮತ್ತು ಚಿತ್ತಸಮಾಧಾನವುಳ್ಳವರಾಗಿರುತ್ತಾರೋ ಅವರಿಗೇ ಬ್ರಹ್ಮವಿದ್ಯೋಪದೇಶವನ್ನು ಮಾಡಬೇಕು. ಇದಲ್ಲದೇ ಚಿತ್ತಸಮಾಧಾನವಿಲ್ಲದವರಿಗೂ ಮತ್ತು ಅಪುತ್ರರಿಗೂ "ಋಣಾನಿತ್ರೀಣ್ಯಪಾಕೃತ್ಯ ಮನೋಮೋಕ್ಷೇ ನಿವೇಶಯೇತ್" ಎಂಬ ವಿಧಿಯಂತೆ ಧರ್ಮಾಚರಣೆಯನ್ನು ಮಾಡಿ ಸಂಸ್ಕೃತವಾದ ಮನಸ್ಸಿಲ್ಲದವರಿಗೂ, ಉಪದೇಶಮಾಡಬಾರದು. ॥೬೯॥

ಅಗ್ನಿರಿತ್ಯಾದಿಭಿ ರ್ಮಂತ್ರೈ ರ್ಭಸ್ಮನೋದ್ಧೂಲನಂ ತಥಾ ।
ತ್ರಿಪುಂಡ್ರಧಾರಣಂ ಚಾಪಿ ವದನ್ತ್ಯತ್ಯಾಶ್ರಮಂ ಬುಧಾಃ ॥೭೦॥

ಶ್ರುತಿವಚನೇನ ಮಯೈವ ಸಮಸ್ತಂ ।
ಪರಮ ಕೃಪಾಬಲತಃ ಪಠಿತಂ ಚ ॥
ಯದಿ ವಿದಿತಂ ಸ ನರಃ ಸ್ವಕನೋಽಹಂ ।
ತರತಿ ಶಿವಂ ವಿಶತಿ ಪ್ರಿಯರೂಪಂ ॥೭೨॥

ಇತಿ ಶ್ರೀ ಸ್ಕಾಂದಪುರಾಣೇ ಸೂತಸಂಹಿತಾಯಾಂ ಚತುರ್ಥಸ್ಯ
ಯಜ್ಞವೈಭವಖಂಡಸ್ಯೋಪರಿಭಾಗೇ ಬ್ರಹ್ಮಗೀತಾಸು
ಕಠವಲ್ಲೀ ಶ್ವೇತಾಶ್ವತರವ್ಯಾಖ್ಯಾಯಾಂ ಏಕಾದಶೋಽಧ್ಯಾಯಃ

"ಅಗ್ನಿರಿತಿಭಸ್ಮ" ಎಂಬೀ ಮೊದಲಾದ ಮಂತ್ರಗಳಿಂದ ಶರೀರಕ್ಕೆ ಭಸ್ಮೋದ್ಧೂಲನಮಾಡಿ ತ್ರಿಪುಂಡ್ರಧಾರಣೆಯನ್ನು ಮಾಡುವುದು ಯಾವುದಿದೆಯೋ ಅದೇ ಮುಂತಾದುದು ಅತ್ಯಾಶ್ರಮಧರ್ಮದ ಲಕ್ಷಣವು. ಹೀಗೆಂದು ತಿಳಿದವರು ಹೇಳುತ್ತಾರೆ. ॥೭೦॥

ಯಾವನಿಗೆ ಶಿವನಲ್ಲಿ ಭಕ್ತಿಯೂ ಮತ್ತು ಅದರಂತೆ ಗುರುವಿನಲ್ಲಿ ಭಕ್ತಿಯೂ ಇರುತ್ತದೆಯೋ, ಅಂತಹ ಮಹಾತ್ಮನಿಗೆ ಹಿಂದೆ ಹೇಳಿದ ಸಮಸ್ತ ಸಾಧನಗಳೂ ಮತ್ತು ಜ್ಞಾನವೂ ದೊರೆಯುತ್ತವೆ. ॥೭೧॥

ವೇದವಾಕ್ಯಗಳಿಂದಲೇ ಸಮಸ್ತ ವೇದಾಂತವನ್ನೂ ನಾನೂ ಇಲ್ಲಿ ತಿಳಿಸಿರುತ್ತೇನೆ. ಇದನ್ನು ತಿಳಿದ ಮನುಷ್ಯನು ಸಂಸಾರಸಾಗರದಿಂದ ವಿನಿರ್ಮುಕ್ತನಾಗಿ ಸಚ್ಚಿದಾನಂದೈಕ ರಸಸ್ವರೂಪವಾದ ಬ್ರಹ್ಮಸಾಯುಜ್ಯವನ್ನು ಹೊಂದುತ್ತಾನೆ. ॥೭೨॥

ಇಲ್ಲಿಗೆ ಸ್ಕಾಂದಪುರಾಣದಲ್ಲಿ ಸೂತಸಂಹಿತೆಯಲ್ಲಿ ನಾಲ್ಕನೆಯ ಭಾಗವಾದ
ಯಜ್ಞವೈಭವಖಂಡದಲ್ಲಿ ಎರಡನೆಯ ಭಾಗದಲ್ಲಿರುವ,
ಉಪನಿಷತ್ತುಗಳಂತಿರುವ ಬ್ರಹ್ಮಗೀತೆಯಲ್ಲಿ ಕಠವಲ್ಲೀ ಮತ್ತು ಶ್ವೇತಾಶ್ವತರೋಪನಿಷತ್ತಿನ ತತ್ವದ ಅರ್ಥವನ್ನು ತಿಳಿಸುವ ಹನ್ನೊಂದನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಅಥಾಸ್ಯಾಃ ಶ್ರೀಮತ್ಸ್ಕಾಂದಪುರಾಣಾಂತರ್ಗತ ಸೂತಸಂಹಿತಾಯಾಶ್ಚತುರ್ಥಸ್ಯ ಯಜ್ಞವೈಭವಖಂಡಸ್ಯೋಪರಿಭಾಗೇ ಬ್ರಹ್ಮಗೀತಾ

॥ ದ್ವಾದಶೋಽಧ್ಯಾಯಃ ॥

ಹನ್ನೆರಡನೆಯ ಅಧ್ಯಾಯವು

॥ ಬ್ರಹ್ಮೋವಾಚ ॥

ವಕ್ಷ್ಯೇ ಸಾರತರಂ ಸಾಕ್ಷಾತ್ ಸರ್ವಶಾಸ್ತ್ರಾರ್ಥ ಸಂಗ್ರಹಂ ।
ಶ್ರದ್ಧಯಾ ಸಹಿತಾ ಯೂಯಂ ಶೃಣುತಾತೀವ ಶೋಭನಂ ॥೧॥

ಅಸ್ತಿತಾವ ದಹಂ ಶಬ್ದ ಪ್ರತ್ಯಯಾಲಂಬನಂ ಪರಂ ।
ಸರ್ವೇಷಾಂ ನಃ ಪರಂ ಜ್ಞಾನಂ ಸ ಏವಾತ್ಮಾ ನ ಸಂಶಯಃ ॥೨॥

ಹಿಂದೆ ಇಲ್ಲಿಯ ವರೆಗೂ ಹೇಳಿದ ವೇದಾಂತಸಾರಾರ್ಥವನ್ನು ಸಂಗ್ರಹದಿಂದ ಈ ಅಧ್ಯಾಯದಲ್ಲಿ ಹೇಳುತ್ತಾರೆ.

ಎಲೈ ದೇವತೆಗಳಿರಾ, ಸಮಸ್ತ ಉಪನಿಷತ್ತುಗಳಲ್ಲಿಯೂ ವಿಸ್ತಾರವಾಗಿ ಯಾವ ವಿಷಯಗಳು ಹೇಳಲ್ಪಟ್ಟಿವೆಯೋ ಆ ಸಮೀಚೀನವಾದ ವಿಷಯಗಳನ್ನು ಸಂಗ್ರಹಿಸಿ ಹೇಳುವೆನು. ಶ್ರದ್ಧಾಯುತರಾಗಿ ಕೇಳುವವರಾಗಿರಿ. ॥೧॥

ಕಾರ್ಯಕರಣಗಳ ಸಂಘಾತವಾದ ಈ ದೇಹದಿಂದ ವಿಶಿಷ್ಟವಾದ ಚೈತನ್ಯವೇ ಅಹಂ ಶಬ್ದವಾಚ್ಯವಾಗಿ ವ್ಯವಹಾರದಲ್ಲಿ ಕಂಡುಬಂದರೂ ದೇಹೇಂದ್ರಿಯಗಳಿಗೆ ಪ್ರಕಾಶವು ಚೈತನ್ಯದಿಂದಲೇ ಉಂಟಾಗಬೇಕಾದುದರಿಂದ, ದೇಹೇಂದ್ರಿಯಾದಿಗಳು ಚೈತನ್ಯಸ್ವರೂಪಗಳಲ್ಲವು. ಮತ್ತೇನೆಂದರೆ ದೇಹೇಂದ್ರಿಯಾದಿಗಳನ್ನು ಪ್ರಕಾಶಪಡಿಸತಕ್ಕ ಚೈತನ್ಯವೇ “ಅಹಂ” ಶಬ್ದಕ್ಕೆ ಲಕ್ಷ್ಯಾರ್ಥವಾಗಿರುವುದು. ದೇಹವು “ಅಹಂ” ಶಬ್ದಕ್ಕೆ ವಾಚ್ಯವಲ್ಲವು. ಇದರಲ್ಲಿ ಯಾವ ಸಂಶಯವೂ ಇರುವುದಿಲ್ಲ. ॥೨॥

ಸೋಽಯಂ ಸ್ವಾವಿದ್ಯಯಾ ಸಾಕ್ಷಾಚ್ಛಿವಃ ಸನ್ನಪಿ ವಸ್ತುತಃ ।
ಸ್ವ ಶಿವತ್ವ ಮವಿಜ್ಞಾಯ ಸಂಸಾರೀವಾವಭಾಸತೇ ॥೩॥

ವೇದೋದಿತೇನ ಮಾರ್ಗೇಣ ಪಾರಂಪರ್ಯ ಕ್ರಮೇಣ ತು ।
ಮುಮುಕ್ಷುತ್ವಂ ದೃಢಂ ಪ್ರಾಪ್ಯ ಪುನಃ ಶಾಂತ್ಯಾದಿ ಸಾಧನೈಃ ॥೪॥

ಸಹಿತಃ ಶಿವಭಕ್ತ್ಯಾಚ ಗುರೋಃಪಾದೌ ಪ್ರಣಮ್ಯಚ ।
ವೇದಾಂತಾನಾಂ ಮಹಾವಾಕ್ಯ ಶ್ರವಣೇನ ತಥೈವಚ ॥೫॥

ಮನನೇನ ತಥಾ ದೇವಾಃ ಧ್ಯಾನೇನ ಪರಮಾತ್ಮನಃ ।
ಪ್ರತ್ಯಗ್ಬ್ರಹ್ಮೈಕತಾ ಜ್ಞಾನಂ ಲಬ್ಧ್ವಾ ಯಾತಿ ಶಿವಂ ಪರಂ ॥೬॥

ಚಿನ್ಮಾತ್ರನಾದ ಪರಬ್ರಹ್ಮನು ತನ್ನ ಅವಿದ್ಯೆಯಿಂದ ತನ್ನ ಅಸಂಸಾರಿಯಾದ ಶಿವಸ್ವರೂಪವನ್ನು ತಿಳಿಯದವನಾಗಿ ಸಂಸಾರಿಯಂತೆಯೇ ತೋರುವನು. ವಸ್ತುತಃ ಅವನು ಸಂಸಾರಿಯಾಗಿರುವುದಿಲ್ಲ. ॥೩॥

ಸಂಸಾರವು ಜನರಲ್ಲಿ ತಮ್ಮ ಸ್ವರೂಪದ ಅಜ್ಞಾನದಿಂದ ಪ್ರಾಪ್ತವಾಗಿರುವುದರಿಂದ ಅಜ್ಞಾನ ನಿವೃತ್ತಿಗೆ ಜ್ಞಾನಕ್ಕಿಂತಲೂ ಬೇರೆಯ ಸಾಧನವಿರುವುದಿಲ್ಲ. ಆ ಅಜ್ಞಾನವು ಇದೇ ಕ್ರಮದಿಂದ ನಷ್ಟವಾಗಿ ಆತ್ಮಜ್ಞಾನವು ಸಿದ್ಧಿಸುತ್ತದೆಯೆಂಬ ಅಂಶವನ್ನು ಹೇಳುತ್ತಾರೆ.

ಈಶ್ವರಾರ್ಪಣಬುದ್ಧಿಯಿಂದ ವೇದೋಕ್ತವಾದ ಕರ್ಮಾನುಷ್ಠಾನವನ್ನು ಮಾಡಿ ಅದರಿಂದ ಕ್ರಮವಾಗಿ ಚಿತ್ತಶುದ್ಧಿ ಸಾಧನಚತುಷ್ಟಯ ಸಂಪತ್ತಿಯೇ ಮೊದಲಾದ ಬಹಿರಂಗ ಮತ್ತು ಅಂತರಂಗ ಸಾಧನಗಳನ್ನು ಹೊಂದಿ ಗುರುಪರಂಪರಾ ಕ್ರಮದಿಂದ ಬಂದಿರುವ ಉಪದೇಶ ಮೂಲಕವಾಗಿ ಶಮದಮಾದಿ ಸಾಧನಷಟ್ಕ ಸಂಪತ್ತಿ ಮುಂತಾದುವುಗಳನ್ನೂ ಪಡೆದು ಆ ಮೂಲಕ ಮೋಕ್ಷಾಧಿಕಾರವನ್ನು ಹೊಂದಬೇಕು. ॥೪॥

ಶಿವಭಕ್ತಿಯುತನಾಗಿ ಶಿಷ್ಯನು ಗುರುವನ್ನು ನಮಸ್ಕರಿಸಿ, "ತತ್ತ್ವಮಸಿ" "ಅಹಂ ಬ್ರಹ್ಮಾಸ್ಮಿ" ಎಂಬ ಇವೇ ಮೊದಲಾದ ವೇದಾಂತವಾಕ್ಯಗಳ ಶ್ರವಣ ಮನನನಿದಿಧ್ಯಾಸಗಳನ್ನೂ ಮಾಡಿ ಬ್ರಹ್ಮಾತ್ಮೈಕ್ಯದಿಂದ ಶಾಂತಿಯಲ್ಲಿ ಅವಸ್ಥಿತಿರೂಪ ವಾದ ಮೋಕ್ಷವನ್ನು ಹೊಂದುತ್ತಾನೆ. ॥೫-೬॥

ಪ್ರತ್ಯಗಾತ್ಮಾನ ಮದ್ವಂದ್ವ ಮಹಂ ಶಬ್ದೋಪಲಕ್ಷಿತಂ ।
ಶಿವರೂಪೇಣ ಸಂಪಶ್ಯನ್ನೇವ ಯಾತಿ ಸ್ವಪೂರ್ಣತಾಂ ॥೭॥

ಶಿವರೂಪತಯಾ ಭಾತೇಽಹಂ ಶಬ್ದಾರ್ಥೇ ಮುನೀಶ್ವರಾಃ ।
ಅವಿದ್ಯಾ ವಿಲಯಂ ಯಾತಿ ವಿದ್ಯಯಾ ಪರಯೈವ ತು ॥೮॥

ವಿದ್ಯಯಾ ಪರಯಾಽವಿದ್ಯಾ ನಿವೃತ್ತಾ ಬ್ರಹ್ಮ ಕೇವಲಂ ।
ಶಿಷ್ಯತೇ ಖಲು ನಾಭಾವೋ ಭಾವೋ ನಾನ್ಯಸ್ತಥಾಽಪಿ ಚ ॥೯॥

ವ್ಯವಹಾರ ದೃಶಾಽವಿದ್ಯಾ ತನ್ನಿವೃತ್ತಿಶ್ಚ ಕಥ್ಯತೇ ।
ತತ್ತ್ವದೃಷ್ಟ್ಯಾತು ನಾವಿದ್ಯಾ ತನ್ನಿವೃತ್ತಿಶ್ಚ ಹೇ ಸುರಾಃ ॥೧೦॥

ಶಾಂತಿದಾಂತ್ಯಾದಿಗಳಿಂದಲೂ, ಶ್ರವಣ ಮನನಾದಿಗಳಿಂದಲೂ, ಉತ್ಪನ್ನವಾದ ಬ್ರಹ್ಮಾತ್ಮೈಕ್ಯಜ್ಞಾನದಿಂದ ಸಾಕ್ಷಾಚ್ಚಿನ್ಮಾತ್ರಸ್ವರೂಪವೂ, ಸುಖದುಃಖಾದಿಗಳಿಂದ ವಿನಿರ್ಮುಕ್ತವೂ ಯುಷ್ಮಚ್ಛಬ್ದ ಮತ್ತು ಅಸ್ಮಚ್ಛಬ್ದಗಳಿಂದ ಉಪಲಕ್ಷಿತವಾದುದಾಗಿಯೂ, ಇರುವ ಜೀವ, ಬ್ರಹ್ಮರ ಸ್ವರೂಪವನ್ನು ಅಭಿನ್ನ ಅಪರಿಚ್ಛಿನ್ನ ಶಿವಸ್ವರೂಪದಿಂದ ಸಾಕ್ಷಾತ್ಕರಿಸುವವನಾಗಿ ಆ ಸಮಕಾಲದಲ್ಲಿಯೇ ಪರಿಪೂರ್ಣತೆಯನ್ನು ಹೊಂದುತ್ತಾನೆ. ॥೭॥

ಅಸ್ಮಚ್ಛಬ್ದಾರ್ಥವಾದ ಜೀವನೆಂಬ ವಿಷಯಿಗೂ, ಯುಷ್ಮಚ್ಛಬ್ದಾರ್ಥವಾದ ವಿಷಯಗಳಿಗೂ ಮೋಕ್ಷಕಾಲದಲ್ಲಿ ಪರಬ್ರಹ್ಮವಿಷಯವಾದ ವಿದ್ಯೆಯಿಂದ ಅಭೇದ ಜ್ಞಾನವುಂಟಾಗಲು ಎಂದರೆ ಬ್ರಹ್ಮಸತ್ಯಂ ಜಗನ್ಮಿಥ್ಯಾ ಜೀವೋ ಬ್ರಹ್ಮೈವ ನಾಪರಃ ಎಂಬ ತತ್ವಸಾಕ್ಷಾತ್ಕಾರದಿಂದ ಅವಿದ್ಯೆಯು ಲಯವನ್ನು ಹೊಂದಲು, ತನ್ಮೂಲವಾದ ಭಾವಾಭಾವಾತ್ಮಕವಾದ ಪ್ರಪಂಚವೂ ಲಯವಾಗುತ್ತದೆ. ತರುವಾಯ ಬ್ರಹ್ಮಾತ್ಮೈಕ್ಯದ ಅಪರೋಕ್ಷಾನುಭವದಿಂದ ಬ್ರಹ್ಮವಸ್ತುವು ಒಂದೇ ಉಳಿಯುತ್ತದೆ. ॥೮-೯॥

ಅವಿದ್ಯೆಯೂ, ಮತ್ತು ಅದರ ನಿವೃತ್ತಿಯೂ, ವ್ಯವಹಾರದೃಷ್ಟಿಯಿಂದ ಹೇಳಲ್ಪಡುತ್ತಿವೆ. ಏಕೆಂದರೆ ವ್ಯವಹಾರದಶೆಯಲ್ಲಿಮಾತ್ರ ಅವಿದ್ಯೆಯು ಇರುತ್ತದೆ. ಮೋಕ್ಷಕಾಲದಲ್ಲಿಯೂ, ಅವಿದ್ಯಾನಿವೃತ್ತಿಯು ಇದೆಯೆಂದು ಹೇಳುವುದೂ ಕೂಡ ಅಜ್ಞರ ದೃಷ್ಟಿಯಿಂದ ಎಂದು ತಿಳಿಯಬೇಕು. ಏಕೆಂದರೆ ಬ್ರಹ್ಮಭಾವವನ್ನು ಹೊಂದಿದವನ ದೃಷ್ಟಿಯಿಂದ ಅವಿದ್ಯೆಯು ಇರುವುದಿಲ್ಲ. ಅದರ ನಿವೃತ್ತಿಯೂ ಇರುವುದಿಲ್ಲ. ಮತ್ತೇ

ಬ್ರಹ್ಮರೂಪತಯಾ ಬ್ರಹ್ಮ ಕೇವಲಂ ಪ್ರತಿಭಾಸತೇ ।
ಜಗದ್ರೂಪತಯಾಽಪ್ಯೇತ ದ್ಬ್ರಹ್ಮೈವ ಪ್ರತಿಭಾಸತೇ ॥೧೧॥

ವಿದ್ಯಾಽವಿದ್ಯಾದಿ ಭೇದೇನ ಭಾವಾ ಭಾವಾದಿ ಭೇದತಃ ।
ಗುರುಶಿಷ್ಯಾದಿ ಭೇದೇನ ಬ್ರಹ್ಮೈವ ಪ್ರತಿಭಾಸತೇ ॥೧೨॥

ಬ್ರಹ್ಮ ಸರ್ವಮಿತಿ ಜ್ಞಾನಂ ಬ್ರಹ್ಮ ಪ್ರಾಪ್ತೇಽಸ್ತು ಸಾಧನಂ ।
ಜಗನ್ಮಾಯೇತಿ ವಿಜ್ಞಾನ ಮಜ್ಞಾನಂ ಫಲತೋ ಭವೇತ್ ॥೧೩॥

ತಥಾಽಪಿ ಪರಮಾದ್ವೈತ ಜ್ಞಾನ ಸ್ಯೇದಂ ತು ವೇದನಂ ।
ಉಪಕಾರಕ ಮತ್ಯಂತಂ ತದ್ದೃಷ್ಟ್ವಾ ವಕ್ತಿ ಚ ಶ್ರುತಿಃ ॥೧೪॥

ಯಥಾ ಭಾತಸ್ವರೂಪೇಣ ಸತ್ಯತ್ವೇನ ಜಗಚ್ಛ್ರುತಿಃ ।
ಅಂಗೀಕೃತ್ಯ ಹಿತಂ ನೄಣಾಂ ಕದಾಚಿದ್ವಕ್ತಿ ಸಾದರಂ ॥೧೫॥

ನೆಂದರೆ ಜ್ಞಾನಿಗೆ ಸಕಲವೂ ಬ್ರಹ್ಮಭೂತವಾಗಿಯೇ ಗೋಚರಿಸುವುದರಿಂದ ಬ್ರಹ್ಮನನ್ನು ಬಿಟ್ಟು ಯಾವ ವಸ್ತುವೂ ವಾಸ್ತವವಾಗಿ ಇರುವುದಿಲ್ಲ. ॥೧೦॥

ಜ್ಞಾನಿಗೆ ಸಕಲ ಪ್ರಪಂಚವೂ ಬ್ರಹ್ಮರೂಪದಿಂದಲೇ ಗೋಚರವಾಗುವುದೇ ವಿನಾ ಭೇದಭಾವನೆಯಿಂದ ತೋರುವುದಿಲ್ಲ. ॥೧೧॥

ಬ್ರಹ್ಮವಿತ್ತಾದ ಜ್ಞಾನಿಗೆ ವಿದ್ಯಾ ಮತ್ತು ಅವಿದ್ಯೆಗಳಿಗಿರುವ ಭೇದವೂ, ಭಾವ ಮತ್ತು ಅಭಾವರೂಪವಾದ ಪ್ರಪಂಚಕ್ಕಿರುವ ಭೇದವೂ ಮತ್ತು ವಿದ್ಯೋಪದೇಶಕನಾದ ಗುರುವಿಗೂ ಮತ್ತು ತನಗೂ ಪರಸ್ಪರವಾಗಿರತಕ್ಕ ಭೇದವೂ, ಇವೆಲ್ಲವೂ ವಾಸ್ತವವಾಗಿ ಇಲ್ಲದೆ ಬ್ರಹ್ಮಸ್ವರೂಪವಾಗಿಯೇ ತೋರುತ್ತದೆ. ॥೧೨॥

ಸಮಸ್ತವೂ ಬ್ರಹ್ಮಸ್ವರೂಪವೆಂದು ಸಕಲವನ್ನೂ ಬ್ರಹ್ಮನೆಂದು ತಿಳಿದುಕೊಳ್ಳುವಿಕೆಯೇ ಬ್ರಹ್ಮಪ್ರಾಪ್ತಿಗೆ ಸಾಧನವಾಗಿರುತ್ತದೆ. ಆದರೆ ಮೊದಲು ಬ್ರಹ್ಮನಲ್ಲಿ ಜಗತ್ತನ್ನು ಅಧ್ಯಾರೋಪಮಾಡಿ, ತರುವಾಯ ಅದು ಆಧ್ಯಾಸಿಕವಾಗಿ ಮಿಥ್ಯಾಭೂತವೆಂದು ನಿಷೇಧಮಾಡುವುದೂ, ಅದ್ವಿತೀಯವಾದ ಬ್ರಹ್ಮಸ್ವರೂಪವನ್ನು ತಿಳಿದುಕೊಳ್ಳುವುದಕ್ಕೆ ಸಾಧನವಾಗಿರುತ್ತದೆ. ವೇದವೂ ಸೃಷ್ಟಿಲಯಾದಿಗಳನ್ನು ಇದೇ ರೀತಿಯಲ್ಲಿ ಅಧ್ಯಾರೋಪಾಪವಾದ ರೀತಿಯಿಂದ ಹೇಳಿರುತ್ತದೆ. ॥೧೩-೧೪॥

"ಆತ್ಮನ ಆಕಾಶಃ ಸಂಭೂತಃ ಆಕಾಶಾದ್ವಾಯುಃ ವಾಯೋರಗ್ನಿಃ" ಇವೇ ಮೊದಲಾದ ಶ್ರುತಿವಾಕ್ಯಗಳು ಜನರಿಗೆ ವ್ಯಾವಹಾರಿಕವಾಗಿ ಉಂಟಾಗಿರುವ ಅನುಭವ

ಸತ್ಯತ್ವೇನ ಜಗದ್ಭಾನಂ ಸಂಸಾರಸ್ಯ ಪ್ರವರ್ತಕಂ ।
ಅಸತ್ಯತ್ವೇನ ಭಾನಂ ತು ಸಂಸಾರಸ್ಯ ನಿವರ್ತಕಂ ॥೧೬॥

ಅತಃ ಸಂಸಾರ ನಾಶಾಯ ಕದಾಚಿತ್ಪರಮಾ ಶ್ರುತಿಃ ।
ಜಗತ್ಸರ್ವಮಿದಂ ಮಾಯಾ ವದತ್ಯತ್ಯಂತ ನಿರ್ಮಲಾ ॥೧೭॥

ಅತೀವ ಪಕ್ವಚಿತ್ತಸ್ಯ ಚಿತ್ತಪಾಕಮುಪೇಕ್ಷ್ಯ ಸಾ ।
ಸರ್ವಂ ಬ್ರಹ್ಮೇತಿ ಕಲ್ಯಾಣೀ ಶ್ರುತಿರ್ವದತಿ ಸಾದರಂ ॥೧೮॥

ಬ್ರಹ್ಮೈವ ಕೇವಲಂ ಶುದ್ಧಂ ವಿದ್ಯತೇ ತತ್ತ್ವದರ್ಶನೇ ।
ನ ಚ ವಿದ್ಯಾ ನ ಚಾವಿದ್ಯಾ ನ ಜಗಚ್ಚ ನ ಚಾಪರಂ ॥೧೯॥

ವನ್ನು ಅನುಸರಿಸಿ ವಾಯ್ವಾಕಾಶಾದಿಗಳಿಗೆ ಕೇವಲ ಸಾಧ್ಯಸಾಧನಭಾವಮಾತ್ರವನ್ನು ಪ್ರತಿಪಾದಿಸುವುವೇ ಹೊರತು ಜಗತ್ತಿಗೆ ಸತ್ಯತ್ವವನ್ನು ಪ್ರತಿಪಾದಿಸುವುದಿಲ್ಲ. ಇದರಿಂದ ಜನರ ತಿಳಿವಳಿಕೆಯು ಸೂಕ್ಷ್ಮ ತತ್ವಗ್ರಹಣದಲ್ಲಿಯೂ ಮುಂದುವರಿಯಲು ಸಹಾಯವಾಗುವುದರಿಂದ ಶ್ರುತಿಯೂ ಹಾಗೆ ಹೇಳುತ್ತಿದೆ. ||೧೫||

ಅಜ್ಞಾನದಿಂದ ವ್ಯವಹಾರದಲ್ಲಿ ಜಗತ್ತು ಸತ್ಯವಾಗಿರುವಂತೆ ತೋರುತ್ತಿರುವಿಕೆಯೇ ಈ ಸಂಸಾರಕ್ಕೆ ಪ್ರವರ್ತಕವಾಗಿದೆ. ಎಂದರೆ ಪುನಃ ಪುನಃ ಹುಟ್ಟುಸಾವುಗಳನ್ನುಂಟುಮಾಡತಕ್ಕದ್ದಾಗಿರುತ್ತದೆ. ಬ್ರಹ್ಮಜ್ಞಾನವಾದ ಮೇಲೆ ಜಗತ್ತನ್ನು ಅಸತ್ಯವೆಂದು ತಿಳಿಯುವಿಕೆಯು ಸಂಸಾರವನ್ನು ನಿವೃತ್ತಿಮಾಡತಕ್ಕದ್ದಾಗಿರುತ್ತದೆ. ||೧೬||

ಆದುದರಿಂದಲೇ ಅಜ್ಞರನ್ನು ಅನುಗ್ರಹಿಸುವುದಕ್ಕೋಸ್ಕರ ಪರಮಕಾರುಣಿಕವಾದ ಪುರುಷದೋಷರಹಿತವಾದ ಶ್ರುತಿಯು ಸಕಲ ಪ್ರಪಂಚವೂ ಮಾಯಾ ನಿರ್ಮಿತವಾದುದು. ಪಾರಮಾರ್ಥಿಕವಾದುದಲ್ಲವು. ಎಂದು ತಿಳಿಯಹೇಳುತ್ತಾ ಜ್ಞಾನದಿಂದ ಅಜ್ಞಾನವು ಹೋಗಲು, ಸಂಸಾರದುಃಖವೂ ನಿವೃತ್ತಿಯಾಗುವಂತೆ ಮಾಡಲು ಹೀಗೆ ಹೇಳುತ್ತಿದೆ. ||೧೭||

ಅತ್ಯಂತವಾಗಿ ಚಿತ್ತಶುದ್ಧಿಯನ್ನು ಪಡೆದಿರುವ ಮನುಷ್ಯನಿಗೆ ಅವನ ಚಿತ್ತದ ಪರಿಪಕ್ವಸ್ಥಿತಿಯನ್ನು ಅನುಸರಿಸಿ ಸಕಲವೂ ಬ್ರಹ್ಮಸ್ವರೂಪವಾಗಿಯೇ ಇದೆಯೆಂದೂ ಪ್ರಪಂಚವು ಮಿಥ್ಯಾಭೂತವಾದುದೆಂದೂ, ಉಪದೇಶಮಾಡುತ್ತದೆ. ಬ್ರಹ್ಮವಿದ್ಯೆಯಿಂದ

ಅತಃ ಪರಮ ನಿರ್ವಾಣನಿಷ್ಠಸ್ಯ ಪರಯೋಗಿನಃ ।
ಯಥಾ ಯಥಾಽವ ಭಾಸೋಽಯಂ ಶಿವ ಏವ ನ ಚಾಪರಂ ॥೨೦॥

ಭೂತ ಪೂರ್ವಾನು ಸಂಧಾನಾತ್ಕಥ್ಯತೇ ನ ಚ ವಸ್ತುತಃ ।
ಯಥಾ ಯಥಾಽವ ಭಾಸೋಽಯಂ ಶಿವ ಇತ್ಯಪಿ ವೇದನಂ ॥೨೧॥

ನ ಹಿ ನಿರ್ವಾಣ ನಿಷ್ಠಸ್ಯ ಶಿವಸ್ಯ ಪರಯೋಗಿನಃ ।
ಯಥಾಯಥೇತಿ ಯತ್ಕಿಂಚಿದ್ಭಾಸತೇ ಪರಮಾರ್ಥತಃ ॥೨೨॥

ತಥಾತಥಾಽವಭಾಸೇನ ಸ್ವೇನ ರೂಪೇಣ ಕೇವಲಂ ।
ಸ್ತಿಮಿತೋದಧಿವದ್ಯೋಗೀ ಸ್ವಯಂ ತಿಷ್ಠತಿ ನಾನ್ಯಥಾ ॥೨೩॥

ತತ್ವಜ್ಞಾನೋದಯವಾಗಲು ಬ್ರಹ್ಮವಸ್ತುವು ಒಂದೇ ವಿಶುದ್ಧವಾಗಿ ತೋರುತ್ತದೆ. ಇತರ ವಿದ್ಯೆಯೂ, ಅವಿದ್ಯೆಯೂ, ಜಗತ್ತೂ ಇವೆಲ್ಲವೂ ಅವಾಸ್ತವವಾದವುಗಳು. ಎಂದರೆ ಅಸತ್ಯವಾದವುಗಳೆಂದು ಉಪಾಸಕನು ಮನಗಾಣುತ್ತಾನೆ. ||೧೮-೧೯||

ನಮಗೆ ಈ ಪ್ರಪಂಚವು ಯಾವ ಯಾವ ಪ್ರಕಾರದಿಂದ ತೋರುತ್ತಿದೆಯೋ ಆ ಸಮಸ್ತ ಪ್ರಕಾರಗಳಿಂದಲೂ, ಅದಕ್ಕೆ ಸಾಕ್ಷಿಭೂತನಾದ ಬ್ರಹ್ಮನಾಗಿಯೇ ಬ್ರಹ್ಮನಿಷ್ಠನಾದವನಿಗೆ ತೋರುವುದು. ಬ್ರಹ್ಮನಿಗಿಂತ ವ್ಯತಿರಿಕ್ತವಾಗಿ ಯಾವುದೂ ತೋರುವುದಿಲ್ಲ. ||೨೦||

ಬ್ರಹ್ಮನಿಷ್ಠನಿಗೆ ಜಗದ್ವಿಷಯಕವಾದ ಸಮಸ್ತ ತಿಳಿವಳಿಕೆಗಳೂ, ಭೂತ ಪೂರ್ವಸ್ಥಿತಿಯ ಸ್ಮೃತಿಯಾಗಿರುತ್ತದೆ. ಎಂದರೆ ಅವನು ಅಜ್ಞಾನಾವಸ್ಥೆಯಲ್ಲಿದ್ದಾಗ ಈ ಜಗತ್ತು ನಾನಾಪ್ರಕಾರವಾಗಿ ತಿಳಿಯುತ್ತಿದ್ದಂತೆಯೇ ವಿದ್ವದವಸ್ಥೆಯಲ್ಲಿರುವಾಗಲೂ ಆ ಅವಿದ್ವದವಸ್ಥೆಯ ಸ್ಮೃತಿಯೇ ಹೊರತು ಬೇರೆ ಯಾವುದೂ ಇರುವುದಿಲ್ಲ. ಆ ಸ್ಮೃತಿಯೂ ಪರಮಾರ್ಥವಾದುದಲ್ಲ. ಈ ಜ್ಞಾನವು ಅವಿದ್ಯೆಯ ಕಾರ್ಯವಾದುದರಿಂದ ವಿದ್ಯೆಯು ಉತ್ಪನ್ನವಾಗಲು ನಾಶವನ್ನು ಹೊಂದುತ್ತದೆ. ಆ ಜೀವನ್ಮುಕ್ತನಿಗೆ ಈ ಜಗತ್ತು ದಗ್ಧಪಟದಂತೆ ತೋರುತ್ತಾ ಕಾರ್ಯಕಾರಿಯಾಗದೆ ಇರುತ್ತದೆ. ||೨೧||

ಮೋಕ್ಷದಶೆಯಲ್ಲಿರುವ ಜೀವನ್ಮುಕ್ತನಾದ ಜ್ಞಾನಿಗೆ ಲೋಕವು ಯಾವ ಪ್ರಕಾರದಿಂದಲೂ ತೋರುವುದಿಲ್ಲ. ಎಲ್ಲಾ ಪ್ರಕಾರದಿಂದಲೂ ಜಗತ್ತೂ ತನ್ನ

ಪರ ನಿರ್ವಾಣ ನಿಷ್ಠಸ್ಯ ಯೋಗಿನಃ ಪರಮಾಂ ಸ್ಥಿತಿಂ ।
ಸ್ವಯಂ ಚ ನ ವಿಜಾನಾತಿ ನ ಹರಿರ್ನ ಮಹೇಶ್ವರಃ ॥೨೪॥

ನ ಮಯಾ ಚ ಪರಿಜ್ಞಾತುಂ ಶಕ್ಯತೇ ಯೋಗಿನಃ ಸ್ಥಿತಿಃ ।
ನಾಪಿ ವೇದೇನ ಮಾನೇನ ನ ಚ ಸ್ಮೃತಿ ಪುರಾಣ ಕೈಃ ॥೨೫॥

ಅಹೋ ನಿರ್ವಾಣ ನಿಷ್ಠಸ್ಯ ಯೋಗಿನಃ ಪರಮಾ ಸ್ಥಿತಿಃ ।
ಯಾದೃಶೀ ಪರಮಾ ನಿಷ್ಠಾ ತಾದೃಶ್ಯೇವ ಹಿ ಕೇವಲಂ ॥೨೬॥

ಏವಂ ರೂಪಾ ಪರಾ ನಿಷ್ಠಾ ಶಿವಸ್ಯಾಸ್ತಿ ಸ್ವಭಾವತಃ ।
ಶಿವಾಯಾಶ್ಚಾಂಬಿಕಾ ಭರ್ತುಃ ಪ್ರಸಾದೇನ ಹರೇರಪಿ ॥೨೭॥

ಆತ್ಮ ರೂಪದಿಂದಲೇ ಕಾಣುತ್ತದೆ. ಅದು ಹೇಗೆಂದರೆ ನಿಶ್ಚಲವಾದ ಸಮುದ್ರದಂತೆ ಯೋಗಿಯು ಅಕ್ಷೋಭ್ಯನಾಗಿರುವನು. ವಿಷಯೇಂದ್ರಿಯಸಂಯೋಗಗಳು ಸುಖ ದುಃಖಗಳನ್ನುಂಟುಮಾಡಲಾರದೆ ಇರುತ್ತವೆ. ||೨೨-೨೩||

ಬ್ರಹ್ಮಾತ್ಮೈಕ್ಯಸ್ವರೂಪವಾದ ಮೋಕ್ಷಸ್ಥಿತಿಯಲ್ಲಿ ಇರುವ ಯೋಗಿಯ ಆ ಸ್ಥಿತಿಯನ್ನು ಯೋಗಿಯೂ ತಾನೇ ತಿಳಿದುಕೊಳ್ಳುವುದಿಲ್ಲ. ವಿಷ್ಣು ಮಹೇಶ್ವರರೂ ಕೂಡ ಅವನ ಅವಸ್ಥೆಯನ್ನು ತಿಳಿಯಲಾರರು. ||೨೪||

ಎಲೈ ದೇವತೆಗಳಿರಾ, ಯೋಗಿಯ ಆ ಅನಿರ್ವಚನೀಯವಾದ ನಿರ್ವಾಣಾವಸ್ಥೆಯನ್ನು ತಿಳಿದುಕೊಳ್ಳಲು ನನಗೂ ಅಶಕ್ಯವಾಗಿರುವುದು. ಇದಲ್ಲದೆ ವೇದದಿಂದಲೂ, ಅನುಮಾನ ಮುಂತಾದ ಪ್ರಮಾಣಗಳಿಂದಲೂ, ಸ್ಮೃತಿಗಳಿಂದಲೂ ಮತ್ತು ಪುರಾಣಗಳಿಂದಲೂ ಯೋಗಿಯ ಆ ಉತ್ತಮವಾದ ಮೋಕ್ಷಾವಸ್ಥೆಯನ್ನು ತಿಳಿದುಕೊಳ್ಳಲು ಸಾಧ್ಯವಿರುವುದಿಲ್ಲವು. ||೨೫||

ಯೋಗಿಯ ಸ್ಥಿತಿಯು ಯಾವ ರೀತಿಯಲ್ಲಿದೆಯೆಂದು ಹೇಳುವುದೇ ಅಸಾಧ್ಯವಾಗಿರುತ್ತದೆ. ಏಕೆಂದರೆ ಅದನ್ನು ಉಪಮಾನಾದಿಗಳನ್ನು ನಿರೂಪಿಸಿ, ವರ್ಣಿಸಲು ಸಾಧ್ಯವಿಲ್ಲ. ಮತ್ತೇನೆಂದರೆ ಅದು ಯಾವ ರೀತಿಯಲ್ಲಿರುವುದೋ ಅದೇ ರೀತಿಯಲ್ಲಿರುವುದು. ಎಂದರೆ ಅದಕ್ಕೆ ಅದೇ ಉಪಮಾನವು! ಹೀಗಿರುತ್ತಿರಲು ಆ ಸ್ಥಿತಿಯನ್ನು ಹೇಗೆತಾನೇ ವರ್ಣಿಸಲು ಸಾಧ್ಯ? ||೨೬||

ಪೂರ್ವೋಕ್ತವಾದ ನಿರ್ವಾಣಾವಸ್ಥೆಯು ಶಿವಸ್ವರೂಪನಾಗಿರುವ ಜ್ಞಾನಿಗೆ

ತಥಾ ಮಮಾಪಿ ಚಾನ್ಯೇಷಾಂ ನ ಚೋದ್ಯಾರ್ಹೋ ಮಹೇಶ್ವರಃ ।
ತಾದೃಗ್ರೂಪೋ ಮಹಾದೇವಃ ಖಲು ಸಾಕ್ಷಾತ್ಸನಾತನಃ ॥೨೮॥

ಈದೃಶೀ ಪರಮಾನಿಷ್ಠಾ ಗುರೋಃ ಸಾಕ್ಷಾನ್ನಿರೀಕ್ಷಣಾತ್ ।
ಕರ್ಮಸಾಮ್ಯೇ ತ್ವನಾಯಾಸಾತ್ಸಿದ್ಧ್ಯತ್ಯೇವ ನ ಸಂಶಯಃ ॥೨೯॥

ದೇಶಿಕಂ ದೇವದೇವೇಶಂ ಶಿವಂ ವಿದ್ಯಾದ್ವಿಚಕ್ಷಣಃ ।
ತದಿಷ್ಟಂ ಸರ್ವಯತ್ನೇನ ಪ್ರಕುರ್ಯಾತ್ಸರ್ವದಾಽಽದರಾತ್ ॥೩೦॥

ಸ್ವಸ್ಯಾನಿಷ್ಟಮಪಿ ಪ್ರಾಜ್ಞಃ ಪ್ರಕುರ್ಯಾದ್ಗುರುಣೋದಿತಃ ।
ಗುರೋರಿಷ್ಟಂ ಪ್ರಕುರ್ವಾಣಃ ಪರಂ ನಿರ್ವಾಣಮೃಚ್ಛತಿ ॥೩೧॥

ಹೇಗೋ ಹಾಗೆ ಶಿವನಿಗೂ ಸ್ವಾಭಾವಿಕವಾಗಿಯೇ ಇರುತ್ತದೆ. ಈಶ್ವರಾನುಗ್ರಹದಿಂದ ಪಾರ್ವತಿಗೂ ಮತ್ತು ವಿಷ್ಣುವಿಗೂ ಅಂತಹ ಜ್ಞಾನವು ಇರುತ್ತದೆ. ||೨೭||

ನನಗೂ ಮತ್ತು ಇತರರಿಗೂ ಆ ಚಿರಂತನನಾದ ಪರಮೇಶ್ವರನು ಸಾಕ್ಷಾತ್ಕರಿಸಲು ಅಸಾಧ್ಯನು. ||೨೮||

ಪೂರ್ವೋಕ್ತವಾದ ಬ್ರಹ್ಮಾತ್ಮೈಕ್ಯರೂಪವಾದ ಮೋಕ್ಷವು ಬ್ರಹ್ಮವಿದ್ಯೋಪದೇಶವನ್ನು ಈಕ್ಷಣಶಾಂತಿಪೂರ್ವಕವಾಗಿ ಮಾಡುವ ಗುರುವನ್ನು ಪಡೆದು, ತರುವಾಯ ಗುರೂಪದೇಶದಿಂದ ಪುಣ್ಯಪಾಪಗಳು ಸಮಭಾವವನ್ನು ಪಡೆಯಲು, ಎಂದರೆ ಪುಣ್ಯಪಾಪಗಳು ಸುಖದುಃಖರೂಪವಾದ ಫಲವನ್ನು ಕೊಡಲು ಅಸಮರ್ಥವಾದವುಗಳಾಗುತ್ತಿರಲು ಯಾವ ಪ್ರಯಾಸವೂ ಇಲ್ಲದೇ ಮೋಕ್ಷಾನಂದಾನುಭವವು ಸಿದ್ಧಿಸುತ್ತದೆ. ಇದರಲ್ಲಿ ಯಾವ ಸಂದೇಹವೂ ಇರುವುದಿಲ್ಲ. ||೨೯||

ತನಗೆ ವಿದ್ಯೆಯನ್ನು ಉಪದೇಶಿಸಿದ ಗುರುವನ್ನು ಜ್ಞಾನಿಯು ಸಾಕ್ಷಾತ್ ಶಿವಸ್ವರೂಪನನ್ನಾಗಿ ತಿಳಿದುಕೊಳ್ಳಬೇಕು. ಯಾವಾಗಲೂ ಸಾಧ್ಯವಾದ ಎಲ್ಲ ಪ್ರಯತ್ನದಿಂದಲೂ, ಗುರುವಿಗೆ ಅಭಿಮತವಾದ ಕೆಲಸವನ್ನೇ ಆದರಪುರಸ್ಸರವಾಗಿ ಮಾಡಬೇಕು. ||೩೦||

ತನಗೆ ಅನಿಷ್ಟವಾದ ಕೆಲಸವಾದರೂ ಅದು ಗುರುವಿಗೆ ಅಭಿಮತವಾದಲ್ಲಿ, ವಿವೇಕಿಯು ಸರ್ವಥಾ ಅದನ್ನು ನೆರವೇರಿಸಲೇಬೇಕು. ಹೀಗೆ ಗುರುವಿಗೆ ಅಭಿಮತವಾದುದನ್ನು ನೆರವೇರಿಸುವವನು ಮೋಕ್ಷವನ್ನು ಹೊಂದುತ್ತಾನೆ. ||೩೧||

ಸ್ವಾಶ್ರಮಂ ಚ ಸ್ವಜಾತಿಂ ಚ ಸ್ವಕೀರ್ತಿಂ ಚ ತಥೈವ ಚ ।
ಸ್ವಾದೃಷ್ಟಂ ಲೋಕವಿದ್ವಿಷ್ಟಂ ಬಂಧು ಪುತ್ರಾದಿ ಸಂಗಮಂ ॥೩೨॥

ಗೃಹಕ್ಷೇತ್ರ ಧನಾದೀನಾಂ ಹಾನಿಂ ಕ್ಲೇಶಂ ಸುಖಂ ತಥಾ ।
ಅನವೇಕ್ಷ್ಯ ಗುರೋರಿಷ್ಟಂ ಕುರ್ಯಾನ್ನಿತ್ಯಮತಂದ್ರಿತಃ ॥೩೩॥

ಗುರೌ ಪ್ರೀತೇ ಶಿವಃ ಸಾಕ್ಷಾತ್ಪ್ರಸನ್ನಃ ಪ್ರತಿಭಾಸತೇ ।
ಗುರೋರ್ದೇಹೇ ಮಹಾದೇವಃ ಸಾಂಬಃ ಸನ್ನಿಹಿತಃ ಸದಾ ॥೩೪॥

ಗುರೋ ರನಿಷ್ಟಂ ಮೋಹಾದ್ವಾ ನ ಕುರ್ಯಾತ್ಕುರುತೇ ಯದಿ ।
ಪಚ್ಯತೇ ನರಕೇ ತೀವ್ರೇ ಯಾವದಾಭೂತ ಸಂಪ್ಲವಂ ॥೩೫॥

ಶಿವೇ ಕ್ರುದ್ಧೇ ಗುರುಸ್ತ್ರಾತಾ ಗುರೌಕ್ರುದ್ಧೇ ನ ಕಶ್ಚನ ।
ತಸ್ಮಾದಿಷ್ಟಂ ಗುರೋಃ ಕುರ್ಯಾ ತ್ಕಾಯೇನ ಮನಸಾ ಗಿರಾ ॥೩೬॥

ವರ್ಣಾಶ್ರಮಧರ್ಮಗಳನ್ನೂ, ಜಾತಿಯನ್ನೂ, ಕೀರ್ತಿಯನ್ನೂ ಅದೇರೀತಿಯಲ್ಲಿ ಅದೃಷ್ಟಫಲವಾದ ಸ್ವರ್ಗಾದಿಗಳನ್ನೂ, ಧರ್ಮದ್ವೇಷವನ್ನೂ, ಬಾಂಧವರೇನು ಮತ್ತು ಮಕ್ಕಳೇನು ಇವರೇ ಮೊದಲಾದವರ ಸಂಬಂಧವನ್ನೂ, ಗೃಹ, ಕ್ಷೇತ್ರ, ಧನಾದಿಗಳನ್ನೂ, ಅನಿಷ್ಟವನ್ನೂ, ಕಷ್ಟವನ್ನೂ, ಸುಖವನ್ನೂ ಗಣನೆಮಾಡದೆ, ಇವೆಲ್ಲವನ್ನೂ ಪರಿತ್ಯಜಿಸಿಯಾದರೂ ಗುರುವಿಗೆ ಅಭಿಮತವಾದ ಕಾರ್ಯವನ್ನೇ ಋಜುಮಾರ್ಗದಿಂದ ಆಲಸ್ಯವಿಲ್ಲದೆ ಮಾಡಬೇಕು. ॥೩೨-೩೩॥

ಗುರುವು ಸುಪ್ರೀತನಾಗಲು ಪರಶಿವನು ಸಾಕ್ಷಾತ್ತಾಗಿ ಪ್ರಸನ್ನನಾಗಿ ಕೈವಲ್ಯವನ್ನುಂಟುಮಾಡುವನು. ಏಕೆಂದರೆ ಗುರುವಿನ ದೇಹದಲ್ಲಿ ಅಂಬಿಕಾಸಹಿತನಾದ ಪರಮೇಶ್ವರನೇ ಸಾಕ್ಷಾತ್ತಾಗಿ ಯಾವಾಗಲೂ ನೆಲೆಸಿರುವನು. ॥೩೪॥

ಗುರುವಿಗೆ ಅನಿಷ್ಟವಾದುದನ್ನು ಮಾಡಬಾರದು. ಯಾವನಾದರೂ ಒಂದು ವೇಳೆ ಅಜ್ಞಾನದಿಂದ ಅನಿಷ್ಟವನ್ನು ಮಾಡಿದರೆ ಅವನು ತೀವ್ರವಾದ ನರಕದಲ್ಲಿ ಯಾತನೆಯನ್ನು ಅನುಭವಿಸುತ್ತಾನೆ. ॥೩೫॥

ಈಶ್ವರನು ಕೋಪಗೊಂಡರೆ ಗುರುವು ಕಾಪಾಡುತ್ತಾನೆ. ಆದರೆ ಗುರುವು ಕೋಪಗೊಂಡಲ್ಲಿ ಯಾವನೂ ರಕ್ಷಕನಾಗಲಾರನು. ಆದುದರಿಂದ ಕಾಯಿಕವಾಗಿಯೂ,

ಗುರುರ್ನಾಮಾತ್ಮನೋ ನಾನ್ಯಃ ಸತ್ಯಮೇವ ನ ಸಂಶಯಃ ।
ಆತ್ಮಲಾಭಾತ್ಪರೋ ಲಾಭೋ ನಾಸ್ತಿ ನಾಸ್ತಿ ನ ಸಂಶಯಃ ॥೩೭॥

ಅನಾತ್ಮರೂಪಂ ದೇಹಾದಿ ಯೋ ದದಾತಿ ಪಿತಾ ತು ಸಃ ।
ನ ಗುರುಃ ಕಥಿತಂ ಪ್ರಾಜ್ಞೈಃ ಕ್ಲೇಶಹೇತು ಪ್ರದೋ ಹಿ ಸಃ ॥೩೮॥

ಅಷ್ಟೈಶ್ವರ್ಯ ಪ್ರದಸ್ತದ್ವತ್ ಗಂಧರ್ವಾದಿ ಪದಪ್ರದಃ ।
ಸಾರ್ವಭೌಮ ಪ್ರದಶ್ಚಾಪಿ ನ ಗುರುಃ ಕ್ಲೇಶದೋ ಹಿ ಸಃ ॥೩೯॥

ಮಂತ್ರ ತಂತ್ರಾದಿದಸ್ತದ್ವ ಲ್ಲೌಕಿಕೋಪಾಯದಸ್ತಥಾ ।
ನ ಗುರುಃ ಕಥಿತಃ ಪ್ರಾಜ್ಞೈಃ ಕ್ಲೇಶಹೇತು ಪ್ರದೋ ಹಿ ಸಃ ॥೪೦॥

ಮಾನಸಿಕವಾಗಿಯೂ, ವಾಕ್ಕಿನಿಂದಲೂ ಗುರುವಿಗೆ ಅನಿಷ್ಟವಾದುದನ್ನು ಆಚರಿಸ ಬಾರದು. ॥೩೬॥

ಗುರುವು ಆತ್ಮನಿಗಿಂತಲೂ ಬೇರೆಯಾದವನಲ್ಲ. ಆತ್ಮಲಾಭಕ್ಕಿಂತಲೂ ಒಳ್ಳೇಯದಾದ ಮಿಗಿಲಾದ ಲಾಭವು ಯಾವುದೂ ಇರುವುದಿಲ್ಲ. ಇದರಲ್ಲಿ ಯಾವ ಸಂಶಯವೂ ಇರುವುದಿಲ್ಲ. ॥೩೭॥

ಅನಾತ್ಮರೂಪವಾದ ದೇಹೇಂದ್ರಿಯಾದಿಗಳನ್ನು ಯಾವನು ಕೊಡುತ್ತಾನೋ ಅವನು ತಂದೆಯೆಂದು ಹೇಳಿಸಿಕೊಳ್ಳಲ್ಪಡುತ್ತಾನೆಯೇ ಹೊರತು ಅವನನ್ನು ಗುರುವೆಂದು ಪ್ರಾಜ್ಞರು ಹೇಳುವುದಿಲ್ಲ. ಆ ಶರೀರಪ್ರದನು ಸಂಸಾರರೂಪವಾದ ಕ್ಲೇಶವನ್ನು ಕೊಡತಕ್ಕವನು. ಆದುದರಿಂದಲೇ ಅವನು ಎಂದಿಗೂ ಗುರುಸಮನಾಗಲಾರನು. ॥೩೮॥

ಇದೇ ರೀತಿಯಲ್ಲಿ ಗಂಧರ್ವಾದಿಗಳ ಪದವಿಯನ್ನು ಕೊಡತಕ್ಕವನೂ, ಮತ್ತು ಸಾರ್ವಭೌಮಪದವಿಯನ್ನು ಕೊಡತಕ್ಕವನೂ ಸಹ ಪುನಃ ಸಂಸಾರರೂಪವಾದ ಕ್ಲೇಶವನ್ನು ಕೊಡತಕ್ಕವನೇ ಹೊರತು ವಿದ್ಯೋಪದೇಶಕನಾದ ಸಂಸಾರದುಃಖವನ್ನು ನಿವಾರಿಸಿ ಮೋಕ್ಷಾನಂದವನ್ನು ಕೊಡಬಲ್ಲ ಗುರುಸಮನಲ್ಲವು. ॥೩೯॥

ಇದಲ್ಲದೇ ಮಂತ್ರ ತಂತ್ರಗಳನ್ನು ಉಪದೇಶಮಾಡಿದವನೂ ಲೌಕಿಕವಾದ ರಾಜಸೇತ್ಯಾದಿ ಉಪಾಯಗಳನ್ನು ಹೇಳಿಕೊಡುವವನೂ, ಸಹ ಕ್ಲೇಶವನ್ನುಂಟು ಮಾಡುವರು. ಇವರನ್ನು ವಿವೇಕಿಗಳು ಗುರುಗಳೆಂದು ಹೇಳುವುದಿಲ್ಲ. ॥೪೦॥

ಸತ್ಯವತ್ಸಕಲಂ ಭಾತಂ ನಿಶ್ಚಿತ್ಯಾಸತ್ಯ ರೂಪತಃ ।
ಸರ್ವಸಾಕ್ಷಿತಯಾಽಽತ್ಮಾನಂ ವಿಭಜ್ಯ ಪರಚೇತನಂ ॥೪೧॥

ಯಸ್ತ್ವಂ ತದಿತಿ ವೇದಾಂತ ಪ್ರದೀಪೇನ ಸ್ವಕಂ ನಿಜಂ ।
ಶಿವತ್ವಂ ಬೋಧಯತ್ಯೇಷ ಗುರುಃ ಸಾಕ್ಷಾನ್ನ ಚಾಪರಃ ॥೪೨॥

ದೃಶ್ಯರೂಪ ಮಿದಂ ಸರ್ವಂ ದೃಗ್ರೂಪೇಣ ವಿಲಾಪ್ಯ ಚ ।
ದೃಗ್ರೂಪಂ ಬ್ರಹ್ಮ ಯೋ ವಕ್ತಿ ಸ ಗುರುರ್ನಾಪರಃ ಪುಮಾನ್ ॥೪೩॥

ಪರಮಾದ್ವೈತ ವಿಜ್ಞಾನಂ ಕೃಪಯೈವ ದದಾತಿ ಯಃ ।
ಸೋಽಯಂ ಗುರುರ್ಗುರುಃ ಸಾಕ್ಷಾಚ್ಛಿವ ಏವ ನ ಸಂಶಯಃ ॥೪೪॥

"ಸನ್ ಘಟಃ" "ಸನ್ ಪಟಃ" ಎಂಬೀ ಜ್ಞಾನಗಳಿಂದ ಘಟಾದಿ ದ್ವೈತ ಪ್ರಪಂಚದಲ್ಲಿ ಯಾವ ಸತ್ಯತ್ವವು ತೋರಿಬರುವುದೋ ಆ ಸತ್ಯತ್ವವು ವಸ್ತುತಃ ಪ್ರಪಂಚದಲ್ಲಿರುವುದಲ್ಲವು. ಎಂದು ನಿಶ್ಚಯಿಸಿ ದೇಹೇಂದ್ರಿಯಾದಿ ಸಂಘಾತಗಳನ್ನು ಸಾಕ್ಷಿರೂಪದಿಂದ ಪ್ರಕಾಶಿಸುವ ಚಿನ್ಮಾತ್ರಸ್ವರೂಪವನ್ನು ಪ್ರಪಂಚದಿಂದ ಪ್ರತ್ಯೇಕ ಗೊಳಿಸಿ "ತತ್ತ್ವಮಸಿ, ಅಹಂ ಬ್ರಹ್ಮಾಸ್ಮಿ" ಇವೇ ಮೊದಲಾದ ಬ್ರಹ್ಮಾತ್ಮೈಕ್ಯ ಪ್ರತಿಪಾದಕವಾದ ಶ್ರುತಿಯನ್ನು ಉದಾಹರಿಸುವುದರಿಂದ ಯಾವನು ಜೀವಸ್ವರೂಪಕ್ಕೆ ಬ್ರಹ್ಮಸ್ವರೂಪದೊಂದಿಗೆ ಐಕ್ಯವನ್ನು ಈಕ್ಷಣಪೂರ್ವಕವಾಗಿ ಮನಗಾಣಿಸಿ ಬೋಧಿಸುವನೋ ಅವನೇ ಉಪದೇಶಕನು. ಅಥವಾ ಆತನು ವಿದ್ಯಾಗುರುವೇ ಹೊರತು ಪೂರ್ವೋಕ್ತರಾದ ಮಂತ್ರತಂತ್ರಗಳನ್ನು ಉಪದೇಶಿಸಿದವರು ಗುರುಗಳಲ್ಲವು. ॥೪೧-೪೨॥

ದೃಶ್ಯರೂಪವಾದ, ಎಂದರೆ ಜ್ಞಾನ ವಿಷಯವಾದ ಈ ಸಕಲ ಪ್ರಪಂಚವನ್ನೂ ದೃಗ್ರೂಪದಿಂದ ಎಂದರೆ ಜ್ಞಾನರೂಪನಾದ ಆತ್ಮನಲ್ಲಿ ಅಧ್ಯಸ್ತವಾದುದನ್ನಾಗಿ ತಿಳಿದುಕೊಂಡು ಅಧಿಷ್ಠಾನಭೂತವಾದ ಆ ಜ್ಞಾನವನ್ನೇ ಬ್ರಹ್ಮಸ್ವರೂಪವನ್ನಾಗಿ ಯಾರು ಬೋಧಿಸುವನೋ ಅವನೇ ಗುರುವು ತದಿತರರು ಗುರುಗಳಲ್ಲವು. ॥೪೩॥

ಶ್ರೇಷ್ಠವಾದ ಅದ್ವೈತಜ್ಞಾನವನ್ನು ಯಾವನು ದಯೆಯಿಂದ ಅನುಗ್ರಹಿಸುತ್ತಾನೋ ಅವನು ಗುರುಗಳಾದ ಪಿತ್ರಾದಿಗಳಿಗೂ ಗುರುವಾಗಿರುವನು. (ಎಂದರೆ ನಮಗೆ ತಂದೆ ತಾಯಿಗಳೂ ಗುರುಗಳೇ ಆಗಿರುತ್ತಾರೆ. ವಿದ್ಯೋಪದೇಶಕನು ಆ

ತಾದೃಶಂ ದೇಶಿಕಂ ಸಾಕ್ಷಾದ್ವೇದಾಂತಾಂಬುಜ ಭಾಸ್ಕರಂ ।
ತೋಷಯೇತ್ಸರ್ವಯತ್ನೇನ ಶ್ರೇಯಸೇ ಭೂಯಸೇ ನರಃ ॥೪೫॥

ಸರ್ವ ವೇದಾಂತವಾಕ್ಯಾನಾ ಮರ್ಥಃ ಸಂಗ್ರಹರೂಪತಃ ।
ಕಥಿತಶ್ಚ ಮಯಾ ದೇವಾಃ ಮಾಮಾಹ ಪರಮೇಶ್ವರಃ ॥೪೬॥

ಸರ್ವಜ್ಞಃ ಸರ್ವ ವಿತ್ಸಾಕ್ಷಾದಾಪ್ತಕಾಮಃ ಕೃಪಾಕರಃ ।
ಸರ್ವದೋಷ ವಿನಿರ್ಮುಕ್ತಃ ಸತ್ಯಮೇವಾ ಬ್ರವೀನ್ಮಮ ॥೪೭॥

ಯಥಾಽಽಹ ಸರ್ವ ವೇದಾನಾಮರ್ಥಂ ಸರ್ವಜ್ಞ ಈಶ್ವರಃ ।
ತಥೈವ ಕಥಿತೋಽಸ್ಮಾಭಿಃ ಸತ್ಯಮೇವ ನ ಸಂಶಯಃ ॥೪೮॥

ಗುರುಗಳಿಗೇ ಗುರುವಾಗಿರುತ್ತಾನೆ. ಎಂದರ್ಥವು.) ಮತ್ತು ಅವನೇ ಸಾಕ್ಷಾಚ್ಛಿವ ಸ್ವರೂಪನಾಗಿರುವನು. ||೪೪||

ವೇದಾಂತವೆಂಬ ಕಮಲಕ್ಕೆ ಸೂರ್ಯಪ್ರಾಯನಾದ ಅಂತಹ ಗುರುವನ್ನು ಮನುಷ್ಯನು ತನ್ನ ಸರ್ವಪ್ರಯತ್ನದಿಂದಲೂ ಸಂತೋಷಪಡಿಸಬೇಕು. ಇದು ಹೆಚ್ಚಾದ ಶ್ರೇಯಸ್ಸಿಗೆ ಕಾರಣವಾಗುತ್ತದೆ. ||೪೫||

ಎಲೈ ದೇವತೆಗಳಿರಾ, ಸಕಲ ವೇದಾಂತವಾಕ್ಯಗಳ ಅರ್ಥವನ್ನು ಸಂಕ್ಷೇಪದಿಂದ ನಿಮಗೆ ನಾನು ಹೇಳಿತ್ತೇನೆ. ಈ ವಿಷಯವನ್ನು ನನಗೆ ಶಿವನೇ ಹೀಗೆಂದು ಹೇಳಿರುತ್ತಾನೆ. ||೪೬||

ಸಾಮಾನ್ಯರೂಪದಿಂದಲೂ ಮತ್ತು ವಿಶೇಷರೂಪದಿಂದಲೂ ಸಮಸ್ತವಸ್ತುಗಳ ಸ್ವರೂಪವನ್ನೂ ತಿಳಿದುಕೊಂಡಿರುವ, ಆಪ್ತಕಾಮನಾದ, ತುಂಬ ದಯಾಶಾಲಿಯಾದ ಮತ್ತು ಅವಿದ್ಯಾದೋಷದಿಂದ ಬಾಹಿರನಾದ ಆ ಪರಮೇಶ್ವರನೇ ಈ ವಿಷಯ ವನ್ನು ನನಗೆ ಹೇಳಿರುವನು. ಇದರಲ್ಲಿ ಯಾವ ಸಂಶಯವೂ ಇರುವುದಿಲ್ಲ. ||೪೭||

ಪರಮೇಶ್ವರನು ಯಾವರೀತಿಯಲ್ಲಿ ನನಗೆ ವೇದಾರ್ಥಗಳನ್ನು ತಿಳಿಸಿದನೋ ಅದೇ ರೀತಿಯಲ್ಲಿ ನಿಮಗೂ ನಾನು ತಿಳಿಸಿರುವೆನು. ಇದು ಸತ್ಯವಾಗಿರುತ್ತದೆ. ||೪೮||

†

ಸ್ವ ಪ್ರಕಾಶ ಸ್ವರೂಪಸ್ಯ ಸ್ವತಃ ಶುದ್ಧಸ್ಯ ಶೂಲಿನಃ ।
ಕರಾಮಲಕ ವತ್ಸರ್ವಂ ಪ್ರತ್ಯಕ್ಷಂ ಹಿ ನ ಸಂಶಯಃ ॥೪೯॥

ವೇದಾನಾ ಮನ್ಯಥೈವಾರ್ಥಂ ಯೇವದಂತಿ ವಿಮೋಹಿತಾಃ ।
ಮಹಾ ಸಾಹಸಿಕಾ ಏವ ತೇ ನರಾ ನ ಹಿ ಸಂಶಯಃ ॥೫೦॥

ಮದುಕ್ತಾರ್ಥ ಪ್ರಕಾರೇಣ ವಿನಾ ಯೇ ಪ್ರವದಂತಿ ತೇ ।
ಅಂಧಕೂಪೇ ನಿರಾಲಂಬೇ ಪತಂತ್ಯೇವ ನ ಸಂಶಯಃ ॥೫೧॥

ವೇದಾರ್ಥಃ ಪರಮಾದ್ವೈತಂ ನೇತರ ತ್ಸುರಪುಂಗವಾಃ ।
ನೋ ಚೇ ದತ್ರೈವ ಮೇ ಮೂರ್ಧಾ ಪತಿಷ್ಯತಿ ನ ಸಂಶಯಃ ॥೫೨॥

ಶುದ್ಧನೂ, ಸ್ವಪ್ರಕಾಶಸ್ವರೂಪನೂ ಆದ ಪರಮೇಶ್ವರನಿಗೆ ಸಕಲ ವಿಷಯವೂ ಕರತಲಾಮಲಕದಂತೆ (ಕೈಯಲ್ಲಿರುವ ನೆಲ್ಲಿಯಕಾಯಿಯು ಹೇಗೆ ಸ್ಪಷ್ಟವಾಗಿ ಅದರ ಎಲ್ಲ ಭಾಗವೂ ತೋರುವುದೋ ಅದರಂತೆ ಎಂದರ್ಥವು.) ಪ್ರತ್ಯಕ್ಷವಾಗಿರುತ್ತದೆ. ಇದರಲ್ಲಿ ಸಂಶಯವಿಲ್ಲ. ॥೪೯॥

ವೇದಗಳಿಗೆ ವಿಪರೀತಾರ್ಥವನ್ನು ಯಾರು ವಿವೇಕಹೀನರಾಗಿ ಹೇಳುತ್ತಾರೋ ಅವರು ಮೂಢರಾಗಿ ಉನ್ಮಾರ್ಗಪ್ರವರ್ತಕರೇ ಆಗಿರುತ್ತಾರೆ. ಇದರಲ್ಲಿ ಸಂಶಯವಿಲ್ಲ. (ಎಂದರೆ ಕರ್ಮಿಗಳು ವೇದಗಳಿಗೆ ಕರ್ಮಪ್ರತಿಪಾದನೆಯೇ ಮುಖ್ಯಾರ್ಥವೆಂದು ಹೇಳುತ್ತಾರೆ. ತಾರ್ಕಿಕರು ವೇದಗಳು ದ್ವೈತಾತ್ಮಪ್ರತಿಪಾದಕಗಳೆಂದು ಹೇಳುತ್ತಾರೆ. ಅವರನ್ನು ಉದ್ದೇಶಿಸಿ ಈ ಶ್ಲೋಕವು ಪ್ರವೃತ್ತಿಸಿರುತ್ತದೆ.) ॥೫೦॥

ವೇದಗಳಿಗೆ ನಾನು ಈ ಹೇಳಿದ ಅರ್ಥವನ್ನು ಬಿಟ್ಟು ವಿಪರೀತಾರ್ಥವನ್ನು ಯಾರು ಕಲ್ಪಿಸುತ್ತಾರೆಯೋ ಅವರು ಅಜ್ಞಾನಾಂಧಕಾರವೆಂಬ ಭಾವಿಯಲ್ಲಿ ಯಾವ ಆಶ್ರಯವೂ ಇಲ್ಲದೆ ಬೀಳುತ್ತಾರೆ. ಇದರಲ್ಲಿ ಸಂಶಯವಿರುವುದಿಲ್ಲವು. ॥೫೧॥

ಎಲೈ ದೇವಶ್ರೇಷ್ಠರೇ, ಅದ್ವೈತವೇ ವೇದಾರ್ಥವಾಗಿರುತ್ತದೆ. (ವೇದವು ಅದ್ವೈತಾತ್ಮನನ್ನೇ ಮುಖ್ಯವಾಗಿ ಪ್ರತಿಪಾದಿಸುತ್ತದೆ.) ಅದಕ್ಕಿಂತಲೂ ಬೇರೆಯಾದ ಕರ್ಮಾದಿಗಳನ್ನು ಮುಖ್ಯವಾಗಿ ಪ್ರತಿಪಾದಿಸುವುದಿಲ್ಲ. ವೇದಗಳಿಗೆ ಪೂರ್ವೋಕ್ತವಾದ ಅರ್ಥವು ಅಲ್ಲದಿದ್ದಲ್ಲಿ ಈಗಲೇ ನನ್ನ ಶಿರಸ್ಸು ನಿಸ್ಸಂಶಯವಾಗಿಯೂ ಕೆಳಗೆ ಬೀಳುವುದು! ॥೫೨॥

ಅನ್ಯಥಾ ವೇದವಾಕ್ಯಾನಾ ಮರ್ಥ ಇತ್ಯಭಿಶಂಕಯಾ ।
ಅನಿಶ್ಚಿತಾರ್ಥಾ ಶ್ಚೇನ್ಮೂರ್ಧಾ ಯುಷ್ಮಾಕಂ ಚ ಪತಿಷ್ಯತಿ ॥೫೩॥

ಇತಃ ಪರಂ ನ ವಕ್ತವ್ಯಂ ವಿದ್ಯತೇ ಸುರಪುಂಗವಾಃ ।
ಸತ್ಯಮೇವ ಮಯಾ ಪ್ರೋಕ್ತಂ ಶಂಭೋಃ ಪಾದೌ ಸ್ಪೃಶಾಮ್ಯಹಂ॥೫೪॥

॥ ಸೂತ ಉವಾಚ ॥

ಏವಮುಕ್ತ್ವಾ ಮಹಾತೇಜಾಃ ಬ್ರಹ್ಮಾಚ ಸುರಪುಂಗವಾನ್ ।
ಪ್ರತ್ಯಗ್ಭೂತಂ ಪರಾನಂದಂ ಪಾರ್ವತೀ ಪತಿಮೀಶ್ವರಂ ॥೫೫॥

ಪರಮಾದ್ವೈತ ರೂಪಂ ತಂ ಭವರೋಗಸ್ಯ ಭೇಷಜಂ ।
ಸ್ಮೃತ್ವಾ ನತ್ವಾ ಪುನಃ ಸ್ತುತ್ವಾ ಭಕ್ತ್ಯಾ ಪರವಶೋಽಭವತ್ ॥೫೬॥

ದೇವಾಶ್ಚ ದೇವದೇವೇಶಂ ಸ್ಮೃತ್ವಾ ಸಾಂಬಂ ತ್ರಿಯಂಬಕಂ ।
ಪ್ರಣಮ್ಯ ದಂಡವದ್ಭೂಮೌ ವಿವಶಾ ಅಭವನ್ಮುದಾ ॥೫೭॥

ವೇದವಾಕ್ಯಗಳ ಅರ್ಥವು ಪೂರ್ವೋಕ್ತವಾದ ರೀತಿಗಳಿಗಿಂತಲೂ ವಿಪರೀತವಾಗಿದೆಯೆಂದು ನೀವು ತಿಳಿದುಕೊಂಡರೆ ನಿಮ್ಮ ಶಿರಸ್ಸುಗಳೂ ನಿಸ್ಸಂಶಯವಾಗಿ ಕೆಳಗೆ ಬೀಳುವುವು. ಎಂದರೆ ಮೋಕ್ಷವು ದೊರೆಯದೇ ಹೋಗುವುದು ಮರಣಕ್ಕೆ ಸಮವೆಂದು ಭಾವವು. ॥೫೩॥

ಎಲೈ ಸುರಶ್ರೇಷ್ಠರೇ, ಇದಕ್ಕಿಂತಲೂ ಹೆಚ್ಚು ಹೇಳಬೇಕಾದದ್ದು ಇರುವುದಿಲ್ಲ. ನಾನು ಹೇಳಿರುವುದೇ ನಿಜವಾಗಿರುತ್ತದೆ. ಹೀಗೆಂದು ಆ ಪರಶಿವನ ಪಾದದ ಆಣೆ ಇಟ್ಟು ಹೇಳಿ, ನಾನು ಆ ಪರಶಿವನನ್ನು ನಮಸ್ಕರಿಸುತ್ತೇನೆ. ॥೫೪॥

ಸೂತಮಹರ್ಷಿಯು ಹೇಳಿದನು---ಮಹಾ ತೇಜಸ್ವಿಯಾದ ಆ ಬ್ರಹ್ಮನು ದೇವತೆಗಳನ್ನುದ್ದೇಶಿಸಿ ಹೀಗೆಂದು ಹೇಳಿ, ಪ್ರತ್ಯಕ್ಸ್ವರೂಪನೂ, ಅಖಂಡಾನಂದ ಸ್ವರೂಪನೂ, ಪಾರ್ವತೀಪತಿಯೂ, ಅದ್ವೈತರೂಪನೂ, ಸಂಸಾರರೋಗಕ್ಕೆ ಔಷಧ ದಂತಿರುವವನೂ, ಆದ ಶಿವನನ್ನು ಸ್ಮರಿಸಿ, ನಮಸ್ಕರಿಸಿ, ಪುನಃ ಭಕ್ತಿಪುರಸ್ಸರವಾಗಿ ಸ್ತುತಿಸಿ, ಆನಂದತುಂದಿಲನಾದನು. ॥೫೫-೫೬॥

ದೇವತೆಗಳೂ ಸಹ ಅಂಬಿಕಾ ಸಹಿತನಾದ ತ್ರಿನಯನೇಶ್ವರನನ್ನು ಸ್ಮರಿಸಿ ಭೂಮಿಯಲ್ಲಿ ದಂಡಾಕಾರವಾಗಿ ನಮಸ್ಕರಿಸಿ ಸಂತೋಷಪರವಶರಾದರು. ॥೫೭॥

ದೇವದೇವೋ ಮಹಾದೇವೋ ಮಹಾ ಕಾರುಣಿಕೋತ್ತಮಃ ।
ತತ್ರೈವಾವಿರ ಭೂದ್ದೇವ್ಯಾ ಸಹ ಸತ್ಯತಪೋಧನಾಃ ॥೫೮॥

ವಿಷ್ಣುಶ್ಚ ಪದ್ಮಯಾ ಸಾರ್ಧಂ ತತ್ರೈವ ಬ್ರಹ್ಮವಿತ್ತಮಾಃ ।
ಆಗತೋ ಭಗವಾನ್ ದ್ರಷ್ಟುಂ ಅಶೇಷ ಸುರನಾಯಕಂ ॥೫೯॥

ಪುಷ್ಪವೃಷ್ಟಿ ರಭವ ದ್ಯಥಾ ಪುರಾ ।
ಸ್ವಸ್ತಿಪೂರ್ವ ವಚನಾನಿ ಚಾ ಭವನ್ ॥
ತತ್ರ ಭಕ್ತಿಸಹಿತೇನ ವಿಷ್ಣುನಾ ।
ಪದ್ಮಯಾ ಚ ಪರಿಪೂಜಿತಃ ಶಿವಃ ॥೬೦॥

ಶಂಕರೋಽಪಿ ಶಶಿಶೇಖರಃ ಪರಃ ।
ತ್ವಂಬಯೈವ ಸಹಿತಃ ಸನಾತನಃ ॥
ತತ್ರ ನೃತ್ಯ ಮಕರೋ ದತಿ ಪ್ರಭುಃ ।
ಸ್ವಸ್ವರೂಪ ಪರವೇದನ ಪ್ರಿಯಾತ್ ॥೬೧॥

ಸರ್ವಲೋಕ ಜನನೀ ಶಿವಾ ಪರಾ ।
ಪಾಪನಾಶಕರ ಬೋಧ ದಾಯಿನೀ ॥

ಸತ್ಯ ಮತ್ತು ತಪಸ್ಸೇ ಧನವಾಗಿವುಳ್ಳ ದೇವತೆಗಳೇ, ಮಹಾದೇವನೂ ಅಲ್ಲಿಯೇ ಅಂಬಿಕಾಸಹಿತನಾಗಿ ಆವಿರ್ಭವಿಸಿದನು.॥೫೮॥

ಎಲೈ ಬ್ರಾಹ್ಮಣೋತ್ತಮರೇ, ವಿಷ್ಣುವೂ, ಸಕಲದೇವತೆಗಳಿಗೂ ನಾಯಕನಾದ ಶಿವನನ್ನು ನೋಡುವುದಕ್ಕೋಸ್ಕರ ಲಕ್ಷ್ಮೀಸಹಿತನಾಗಿ ಬಂದನು. ॥೫೯॥

ಹಿಂದಿನಂತೆಯೇ ಪುಷ್ಪವೃಷ್ಟಿಯೂ ಮತ್ತು ಸ್ವಸ್ತಿವಾಚನಗಳೂ ಆದವು. ಅಲ್ಲಿ ಭಕ್ತಿಯುತನಾದ ವಿಷ್ಣುವಿನಿಂದಲೂ ಮತ್ತು ಲಕ್ಷ್ಮಿಯಿಂದಲೂ, ಪರಶಿವನೂ ಪೂಜಿಸಲ್ಪಟ್ಟನು. ॥೬೦॥

ಚಿರಂತನನೂ, ಚಂದ್ರಚೂಡನೂ ಆದ ಶಂಕರನೂ ಸಹ ಅಂಬಿಕಾಸಹಿತನಾಗಿ ಸ್ವಸ್ವರೂಪವನ್ನು ತಿಳಿಸಲು ಪ್ರೀತಿಯಿಂದ ನೃತ್ಯವನ್ನು ಮಾಡಿದನು. ॥೬೧॥

ಲೋಕಮಾತೆಯಾದ ಮತ್ತು ಪಾಪನಾಶಕವಾದ ಜ್ಞಾನವನ್ನು ಉಪದೇಶಿಸುವ ಅಂಬಿಕೆಯೂ ಬ್ರಹ್ಮೇಂದ್ರಾದಿ ದೇವತೆಗಳನ್ನು ಸಹಾನುಭೂತಿಯನ್ನು ಸೂಚಿ

ಬ್ರಹ್ಮವಜ್ರಧರ ಪೂರ್ವಕಾನಿಮಾನ್ ।
ಸ್ವಾನುಭೂತಿ ಸಹಿತೇನ ಚಕ್ಷುಷಾ ॥೬೨॥

ವಿಲೋಕ್ಯ ಕಾರುಣ್ಯ ಬಲೇನ ಕೇವಲಂ ।
ಪ್ರಬೋಧಯಾಮಾಸ ಸುರೋತ್ತಮಾನಿಮಾನ್ ॥
ಪುನಃ ಪ್ರಜಾನಾಥ ಪುರಸ್ಸರಾಃ ಸುರಾಃ ।
ಪ್ರನೃತ್ಯಮಾನಂ ತು ಶಿವಂ ಶಿವಾಮಪಿ ॥೬೩॥

ತ್ವಕ್ಚಕ್ಷುಷೈವ ದದೃಶುಃ ಶ್ರುತಿಮಸ್ತಕೋತ್ಥ ।
ವಿಜ್ಞಾನರೂಪ ಪರಲೋಚನ ಗೋಚರಾರ್ಹಂ ॥
ಭಕ್ತ್ಯಾ ಪುನಃ ಪರಮಕಾರುಣಿಕಂ ಮಹಾಂತಂ ।
ಪಂಚಾಕ್ಷರೇಣ ಭವಪಾಶಹರೇಣ ಪೂಜ್ಯಂ ॥೬೪॥

ತುಷ್ಟುವುಃ ಶ್ರುತಿವಚೋಭಿ ರಾದರಾ ।
ನ್ನಷ್ಟ ಕಷ್ಟ ಭವಪಾಶ ಬಂಧನಾಃ ॥
ಇಷ್ಟಸಿದ್ಧಿ ರಭವದ್ಧಿ ವಃ ಸುರಾಃ ।
ಇತ್ಯವೋಚದಶುಭಾ ಪಹಃ ಶಿವಃ ॥೬೫॥

ಸುವ ಕಣ್ಣಿನಿಂದ ನೋಡಿ, ಜಾಗ್ರತೆಗೊಳಿಸಿದಳು. ತರುವಾಯ ಬ್ರಹ್ಮನೇ ಮೊದಲಾದ ದೇವತೆಗಳು ನೃತ್ಯವನ್ನು ಮಾಡುವ ಪರಮೇಶ್ವರನನ್ನೂ ಮತ್ತು ಪಾರ್ವತಿಯನ್ನೂ ಚರ್ಮಚಕ್ಷುಸ್ಸಿನಿಂದಲೇ ನೋಡಿದರು. ಆ ಬಳಿಕ ಬ್ರಹ್ಮವಿದ್ಯಾವೇದ್ಯನೂ ಮತ್ತು ಕಾರುಣಿಕನೂ ಆದ ಶಿವನನ್ನು ಸಂಸಾರಪಾಶದುಃಖದಿಂದ ಬಿಡಿಸುವ ಪಂಚಾಕ್ಷರೀಜಪದಿಂದ ಸಂತೋಷಪಡಿಸಿದರು. ॥೬೨-೬೩-೬೪॥

ಸಂಸಾರ ಪಾಶದಿಂದ ವಿಮುಕ್ತರಾದ ಆ ದೇವತೆಗಳು ಶ್ರುತಿವಾಕ್ಯಗಳಿಂದ ಈಶ್ವರನನ್ನು ಸ್ತುತಿಸಿದರು. ಹೀಗೆ ಸ್ತುತಿಸಲು ಅಮಂಗಳಗಳನ್ನು ಹೋಗಲಾಡಿಸುವ ಪರಮೇಶ್ವರನು ದೇವತೆಗಳನ್ನು ಕುರಿತು ಹೀಗೆಂದು ಹೇಳಿದನು. ಎಲೈ ಸುರಶ್ರೇಷ್ಠರೇ, ನಿಮಗೆ ಇಷ್ಟಸಿದ್ಧಿಯು ಉಂಟಾಗಿರುತ್ತದೆ. ॥೬೫॥

ಶಾಂಕರೀ ಚ ಶರಣಾಗತ ಪ್ರಿಯಾ ।
ಬಂಧಹೇತು ಮಲನಾಶ ಕಾರಿಣೀ ॥
ಮತ್ಪ್ರಸಾದ ಬಲ ಲಬ್ಧ ವೇದನಾಃ ।
ಇತ್ಯವೋಚ ದಭವನ್ನಿತಿ ಪ್ರಿಯಾ(ಃ) ॥೬೬॥

ಕೇಶವೋಽಪಿ ಸುರಪುಂಗವಾನ್ ಪ್ರತಿ ।
ಪ್ರಾಹ ಶಂಭು ರಯಮದ್ಭುತಃ ಪ್ರಭುಃ ॥
ಸರ್ವವೇದ ಶಿರಸಾಮ ಗೋಚರಃ ।
ಪ್ರೀತ ಏವ ಭವತಾಮಿತಿ ದ್ವಿಜಾಃ ॥೬೭॥

ದೇವೋಽಪಿ ಕಾರುಣ್ಯದಯಾರ್ದ್ರಮಾನಸಃ ।
ಸುರಾ ನ ಶೇಷಾ ನಜ ಪೂರ್ವಕಾ ನಪಿ ॥
ಉವಾಚ ಗೀತಾ ಮತಿ ಶೋಭನಾ ಮಿಮಾಂ ।
ಮಮಾನುಕೂಲಾಮಪಿ ಯಃ ಪಠೇತ್ ದ್ವಿಜಃ ॥೬೮॥

ಬಂಧಕಾರಣವಾದ ಸಂಸಾರವನ್ನು ಹೋಗಲಾಡಿಸಲು ಶಕ್ತಳಾದ ಮತ್ತು ಶರಣಾಗತರಲ್ಲಿ ಪ್ರೀತಿಯುಳ್ಳ ಪಾರ್ವತಿಯೂ ಕೂಡ ದೇವತೆಗಳನ್ನುದ್ದೇಶಿಸಿ, ಎಲೈ ದೇವತೆಗಳಿರಾ, ನೀವು ನನ್ನ ಅನುಗ್ರಹದಿಂದ ಜ್ಞಾನವನ್ನು ಪಡೆದವರಾಗಿರುತ್ತೀರಿ. ಹೀಗೆಂದು ಹೇಳಿದಳು. ॥೬೬॥

ವಿಷ್ಣುವೂ ಸಹ ಸುರಶ್ರೇಷ್ಠರನ್ನು ಕುರಿತು ಹೀಗೆಂದು ಹೇಳಿದನು.– ಎಲೈ ಸುರಶ್ರೇಷ್ಠರೇ, ಆಶ್ಚರ್ಯಕಾರಕನಾದ ಮತ್ತು ವೇದಾಂತ ವೇದ್ಯನಾದ ಶಿವನು ನಿಮ್ಮಗಳ ಭಕ್ತಿಯಿಂದ ಸಂತುಷ್ಟನಾಗಿರುವನು. ॥೬೭॥

ದಯೆಯಿಂದ ಕರಗಿದ ಮನಸ್ಸುಳ್ಳ ಶಿವನೂ ಬ್ರಹ್ಮನೇ ಮೊದಲಾದ ಸಕಲ ದೇವತೆಗಳನ್ನೂ ಕುರಿತು, ನನಗೆ ಇಷ್ಟವಾದ ಮತ್ತು ಮಂಗಳಕರವಾದ ಈ ಗೀತೆಯನ್ನು ಹೇಳಿದನು. ॥೬೮॥

ಸ ಯಾತಿ ಮಾನೋಽಪ ನಿರಸ್ತಬಂಧನಃ ।
ಪರಾ ಶಿವಾ ವಾಚಿ ಸದೈವ ವರ್ತತೇ ॥
ದಿವಾಕರೇಣಾಪಿ ಸಮಶ್ಚ ತೇಜಸಾ ।
ಶ್ರಿಯಾ ಮುಕುಂದೇನ ಸಮಃ ಸದಾ ಭವೇತ್ ॥೬೯॥

ಏಷಾ ಗೀತಾ ಬ್ರಹ್ಮಗೀತಾಽಭಿಧಾನಾ ।
ಶ್ರುತ್ಯಾ ಯುಕ್ತಾ ಸರ್ವಗೀತೋತ್ತಮಾ ಚ ॥
ವೇದಾಕಾರಾ ವೇದನಿಷ್ಠೈರ್ದ್ವಿಜೇಂದ್ರೈಃ ।
ಭಕ್ತ್ಯಾ ಪಾಠ್ಯಾ ನೈವ ಶೂದ್ರಾದಿಭಿಶ್ಚ ॥೭೦॥

ಇತ್ಯೇವಂ ಪರಮಶಿವಃ ಪ್ರಭಾಷ್ಯ ನಾಥಃ ।
ಶಿಷ್ಟಾನಾಮಶುಭ ಹರಃ ಪುರತ್ರಯಾರಿಃ ॥
ಭಕ್ತಾನಾ ಮಮಲ ಸುಖಪ್ರಬೋಧಕಾರೀ ।
ತತ್ರೈವ ಸ್ಫುರಣ ಸುಖೇ ತಿರೋ ಬಭೂವ ॥೭೧॥

ಈ ಬ್ರಹ್ಮಗೀತೆಯನ್ನು ತ್ರೈವರ್ಣಿಕರಲ್ಲಿಯೂ ಯಾವನು ಪಠಿಸುತ್ತಾನೋ ಅವನು ಸಂಸಾರಪಾಶದಿಂದ ವಿನಿರ್ಮುಕ್ತನಾಗುತ್ತಾನೆ. ಅವನ ವಾಕ್ಕುಗಳಲ್ಲಿ ಸರ್ವದಾ ಆ ಅಂಬಿಕೆಯೇ ನೆಲೆಸಿರುವವಳಾಗುತ್ತಾಳೆ. ಮತ್ತು ಅವನು ತೇಜಸ್ಸಿನಿಂದ ಸೂರ್ಯನಿಗೆ ಸದೃಶನಾಗಿಯೂ, ಕಾಂತಿಯಿಂದ ವಿಷ್ಣುವಿಗೆ ಸದೃಶನಾಗಿಯೂ ಇರುತ್ತಾನೆ. ॥೬೯॥

ಸರ್ವಗೀತೆಗಳಲ್ಲಿಯೂ ಉತ್ತಮವಾದ, ವೇದವಾಕ್ಯಗಳಿಂದ ಕೂಡಿರುವ, ಮತ್ತು ಬ್ರಹ್ಮಗೀತೆಯೆಂಬ ಹೆಸರುಳ್ಳ ಈ ಗೀತೆಯನ್ನು ವೇದಾಧ್ಯಯನ ಸಂಪನ್ನರಾದ ತ್ರೈವರ್ಣಿಕರೇ ಪಠಿಸಬೇಕು. ಜಘನ್ಯರಾದ ಶೂದ್ರಾದಿಗಳು, ಎಂದರೆ ಅಸಂಸ್ಕೃತವಾದ ಮನಸ್ಸುಳ್ಳವರು, ಇದನ್ನು ಪಠಿಸಬಾರದು. ॥೭೦॥

ಭಕ್ತರಿಗೆ ಜ್ಞಾನಸುಖವನ್ನು ದಯಪಾಲಿಸುವವನೂ, ತ್ರಿಪುರಾರಿಯೂ, ಸತ್ಪುರುಷರ ಅಮಂಗಳವನ್ನು ದೂರಮಾಡುವವನೂ, ಆದ ಪರಶಿವನು ಮೇಲೆ ಹೇಳಿದ ಪ್ರಕಾರದಿಂದ ಹೇಳಿ ಆ ಸ್ಥಳದಲ್ಲಿಯೇ ಆನಂದಾನುಭವದಲ್ಲಿರುತ್ತಾ ಅಂತರ್ಧಾನನಾದನು. ಎಂದರೆ ಮಾಯಾವಿಲಾಸದಿಂದ ತಾನು ಸ್ವೀಕರಿಸಿದ್ದ ಸೋಪಾಧಿಕವಾದ ರೂಪವನ್ನು ಬಿಟ್ಟು ಅಖಂಡಾನಂದೈಕರಸಸ್ವರೂಪನಾದನು ಎಂದು ಅರ್ಥವು. ॥೭೧॥

ದೈ(ದೇ)ವೀ ಸಾ ಸಕಲ ಜಗದ್ವಿಚಿತ್ರ ಚಿತ್ರಾ ।
ಕಾರುಣ್ಯಾದಖಿಲ ಸುರಾನಜಂ ವಿಲೋಕ್ಯ ॥
ಸುಪ್ರೀತಾ ಪರಮಸುಖ ಪ್ರಬೋಧರೂಪಾ ।
ತತ್ರೈವ ಸ್ಫುರಣ ಸುಖೇ ತಿರೋಬಭೂವ ॥೭೨॥

ವಿಷ್ಣುರ್ಲಕ್ಷ್ಮ್ಯಾ ಸಾಕಮಾಶ್ವಾಸ್ಯ ದೇವಾನ್ ।
ಹೃಷ್ಟಸ್ತುಷ್ಟಃ ಸ್ವಸ್ಯ ವೈಕುಂಠ ಮಾಪ ॥
ಬ್ರಹ್ಮಾ ದೇವಾನಾತ್ಮ ವಿದ್ಯಾಽಭಿಯುಕ್ತಾನ್ ।
ತ್ಯಕ್ತ್ವಾ ರುದ್ರಧ್ಯಾನ ನಿಷ್ಠೋ ಬಭೂವ ॥೭೩॥

ದೇವಾಃ ಸರ್ವೇ ದಂಡವದ್ಭೂಮಿಭಾಗೇ ।
ಭಕ್ತ್ಯಾಸಾರ್ಧಂ ಪದ್ಮಯೋನಿಂ ಪ್ರಣಮ್ಯ ॥
ಹೃಷ್ಟ್ವಾತ್ಮಾನಃ ಸತ್ಯಬೋಧೈಕ ನಿಷ್ಠಾಃ ।
ಸದ್ಯಃ ಸ್ವಂ ಸ್ವಂ ದೇಶಮಾಯುರ್ದ್ವಿಜೇಂದ್ರಾಃ ॥೭೪॥

ಜಗತ್ತಿಗೆ ಆಶ್ಚರ್ಯವನ್ನುಂಟುಮಾಡುವ ನಡತೆಯುಳ್ಳ ದಯಾಮಯಳಾದ ಆ ದೇವಿಯೂ ದೇವತೆಗಳನ್ನೂ ಮತ್ತು ಬ್ರಹ್ಮನನ್ನೂ ನೋಡಿ ಅವರ ಸುಖದಿಂದ ತೃಪ್ತಿಗೊಂಡವಳಾಗಿ ಅಲ್ಲಿಯೇ ಅಖಂಡಜ್ಞಾನಾನಂದರಸದ ಅನುಭವದ ಸುಖದಲ್ಲಿರುತ್ತಾ ಅಂತರ್ಧಾನಳಾದಳು. ॥೭೨॥

ವಿಷ್ಣುವು ಸಂತೋಷಗೊಂಡವನಾಗಿ ದೇವತೆಗಳನ್ನು ಆಶ್ವಾಸನೆಗೊಳಿಸಿ ಪ್ರೇಯಸಿಯಾದ ಲಕ್ಷ್ಮಿಯೊಂದಿಗೆ ವೈಕುಂಠಲೋಕವನ್ನು ಕುರಿತು ತೆರಳಿದನು. ಬ್ರಹ್ಮನು ಆತ್ಮವಿದ್ಯೆಯಲ್ಲಿ ಆದರ ಉಳ್ಳವರಾದ ದೇವತೆಗಳನ್ನು ಅನುಜ್ಞೆಕೊಟ್ಟು ಕಳುಹಿಸಿ ಶಿವನ ಧ್ಯಾನದಲ್ಲಿ ಮಗ್ನನಾದನು. ॥೭೩॥

ಸಕಲ ದೇವತೆಗಳೂ ಭಕ್ತಿಯಿಂದ ಭೂಮಿಯಲ್ಲಿ ದಂಡಾಕಾರವಾಗಿ ಬ್ರಹ್ಮನನ್ನು ನಮಸ್ಕರಿಸಿ, ಸಂತೋಷಗೊಂಡವರಾಗಿ ಮತ್ತು ಸತ್ಯಜ್ಞಾನಾನಂದಾತ್ಮಕನಾದ ಬ್ರಹ್ಮನ ಧ್ಯಾನದಲ್ಲಿ ನಿರತರಾಗಿ, ಆಗಲೇ ತಮ್ಮ ತಮ್ಮ ನಿವಾಸಸ್ಥಳವನ್ನು ಪಡೆದರು. ॥೭೪॥

ಇತ್ಥಂ ಸಾಕ್ಷಾದ್ಬ್ರಹ್ಮಗೀತಾ ಭವದ್ಭಿಃ ।
ಶುದ್ಧಜ್ಞಾನೈ ರಾದರೇಣ ಶ್ರುತೈ ವ ॥
ಮತ್ತಃ ಶ್ರದ್ಧಾಭಕ್ತಿ ಯುಕ್ತಸ್ಯ ವಿಪ್ರಾಃ ।
ನಿತ್ಯಂ ದೇಯಾ ನೇತರಸ್ಯಾತಿ ಶುದ್ಧಾ ॥೭೫॥

ಇತಿ ಪರಶಿವಭಕ್ತ್ಯಾ ಪ್ರಾಪ್ತವಿದ್ಯಸ್ತು ಸೂತಃ ।
ಸುಖಘನ ಶಿವತತ್ತ್ವ ಪ್ರಾಪಿಕಾಮೇವ ಗೀತಾಂ ॥
ಮುನಿಗಣ ಹಿತಬುದ್ಧ್ಯಾ ಆಭಾಷ್ಯ ನಿರ್ವಾಣರೂಪಂ ।
ಪರತರಮವಲೋಕ್ಯ ಪ್ರಜ್ಞಯಾ ಮೌನ ಮಾಪ ॥೭೬॥

ಮುನಯಶ್ಚ ಗುರುಂ ಪರವೇದಿನಂ ।
ಪ್ರಣಿಪತ್ಯ ಸಮಸ್ತ ಹಿತಪ್ರದಂ ॥
ಹೃದಯಸ್ಥ ಮಹಂ ಪದಲಕ್ಷಿತಂ ।
ಪರತತ್ತ್ವತಯೈವ ವಿದುಃ ಸ್ಥಿರಂ ॥೭೭॥

ಎಲೈ ಬ್ರಾಹ್ಮಣೋತ್ತಮರೇ, ಪರಿಶುದ್ಧವಾದ ಜ್ಞಾನವುಳ್ಳ ನೀವು ಆದರ ಪುರಸ್ಸರವಾಗಿ ಶ್ರದ್ಧಾಭಕ್ತಿಯುತನಾದ ನನ್ನ ದೆಸೆಯಿಂದ ಬ್ರಹ್ಮಗೀತೆಯನ್ನು ಆದರದಿಂದ ಪೂರ್ವೋಕ್ತರೀತಿಯಲ್ಲಿ ಕೇಳಿರುತ್ತೀರಿ. ನಿತ್ಯಶುದ್ಧವಾಗಿರುವ ಈ ಗೀತೆಯನ್ನು ಅನಧಿಕಾರಿಗೆ ಉಪದೇಶಮಾಡಬಾರದು. ॥೭೫॥

ಈ ರೀತಿಯಲ್ಲಿ ಆ ಪರಶಿವನಲ್ಲಿರುವ ಭಕ್ತಿಯಿಂದ ಸೂತನು ಅದ್ವೈತಾತ್ಮ ಜ್ಞಾನದ ಅನುಭವವನ್ನು ಹೊಂದಿದವನಾಗಿ ಆನಂದಸ್ವರೂಪವಾದ ಶಿವತತ್ತ್ವಜ್ಞಾನ ವನ್ನು ಸಂಪಾದಿಸಿ ಕೊಡುವ ಗೀತೆಯನ್ನು ಮುನಿವೃಂದದ ಹಿತಕ್ಕೋಸ್ಕರವಾಗಿ ಹೇಳಿ, ತರುವಾಯ ಪರಶಿವನನ್ನು ತನ್ನಲ್ಲಿ ಸಾಕ್ಷಾತ್ಕರಿಸಿ, ಆ ಜ್ಞಾನದಿಂದ ಮೌನ ಮುದ್ರೆಯನ್ನವಲಂಬಿಸಿದನು. (ಬ್ರಹ್ಮಧ್ಯಾನದಲ್ಲಿ ಆಸಕ್ತನಾದನೆಂದರ್ಥವು.) ॥೭೬॥

ಮುನಿಗಳೂ ಕೂಡ ಬ್ರಹ್ಮವಿತ್ತಾದ ಮತ್ತು ಸಮಸ್ತರಿಗೂ ಹಿತೋಪದೇಶ ವನ್ನು ಮಾಡುವ ಗುರುವನ್ನು ನಮಸ್ಕರಿಸಿ ಹಾರ್ದಾಕಾಶದಲ್ಲಿ ಸ್ಫುರಿಸುತ್ತಿರುವ, ಅಸ್ಮಚ್ಛಬ್ದದಿಂದ ಉಪಲಕ್ಷಿತನಾದ, ಜೀವನನ್ನು ಬ್ರಹ್ಮಾಭಿನ್ನನನ್ನಾಗಿ ತಿಳಿದು

**ಇತಿ ಶ್ರೀಸ್ಕಾಂದಪುರಾಣೇ ಸೂತಸಂಹಿತಾಯಾಂ ಚತುರ್ಥಸ್ಯ
ಯಜ್ಞವೈಭವಖಂಡಸ್ಯೋಪರಿಭಾಗೇ ಬ್ರಹ್ಮಗೀತಾಸೂಪನಿಷತ್ಸು ಶಿವಸ್ಯ
ಅಹಂ ಪ್ರತ್ಯಯಾಶ್ರಯತ್ವವಿವರಣಂ ನಾಮ
ದ್ವಾದಶೋಽಧ್ಯಾಯಃ**

ಬ್ರಹ್ಮಗೀತಾ ಸಮಾಪ್ತಾ

ಕೊಂಡರು. "ತತ್ತ್ವಮಸಿ" ಎಂಬ ಶ್ರುತಿವಾಕ್ಯವನ್ನು ಚೆನ್ನಾಗಿ ಅನುಸಂಧಾನ ಮಾಡಿ ತತ್ತ್ವಂ ಪದಾರ್ಥಗಳ ಐಕ್ಯವನ್ನು ಚೆನ್ನಾಗಿ ಶೋಧನೆಮಾಡಿ ತಿಳಿದ ರೆಂದರ್ಥವು. ||೭೭||

ಇಲ್ಲಿಗೆ ಸ್ಕಾಂದಪುರಾಣದ ಸೂತಸಂಹಿತೆಯಲ್ಲಿ ನಾಲ್ಕನೆಯ ಭಾಗವಾದ
ಯಜ್ಞವೈಭವಖಂಡದಲ್ಲಿ ಎರಡನೆಯ ಭಾಗದಲ್ಲಿರುವ,
ಉಪನಿಷತ್ತುಗಳಂತಿರುವ ಬ್ರಹ್ಮಗೀತೆಯಲ್ಲಿ ಶಿವನ ಅಹಂ ಪ್ರತ್ಯಯಾಶ್ರಯತ್ವವನ್ನು
ವಿವರಿಸಿರುವ ಹನ್ನೆರಡನೆಯ ಅಧ್ಯಾಯವು ಮುಗಿದುದು.

ಬ್ರಹ್ಮಗೀತೆಯು ಮುಗಿದುದು.

|| ಶ್ರೀರಸ್ತು ||

ಮಹಿಶೂರಾಧಿಪ **ಜಯಚಾಮರಾಜೇಂದ್ರ** ಶಾಸನಾತ್ ।
ಶ್ರೀಸೂತಸಂಹಿತಾರ್ಥಾನುವಾದಂ ಕನ್ನಡಭಾಷಯಾ ॥
ಸುಬ್ಬಮ್ಮಾಂಬಾದೇವಯಜ್ವತನಯಃ ಚಂದ್ರಶೇಖರಃ ।
ಜನಾನಾಮುಪಕಾರಾಯ ರಚಯಾಮಾಸ ಸಾದರಂ ॥
ವಾಣೀಸೇವಾಂ ರಾಜಸೇವಾಂ ಜನಸೇವಾಂ ಮುದಾ ಕೃತಾಂ ।
ಸ್ವೀಕೃತ್ಯ ತುಷ್ಯತು ಶಿವಃ ಸಾಂಬೋ ರಾಜಾ ಚ ಭಾರತೀ ॥

ಶ್ರೀ ಜಯಚಾಮರಾಜೇಂದ್ರಗ್ರಂಥರತ್ನಮಾಲಾ

ಪುಷ್ಪರತ್ನಸಂಖ್ಯಾ ೨೨–೫

ಶ್ರೀಮತ್ಸ್ಕಾಂದಪುರಾಣಾಂತರ್ಗತಾ

ಸೂತಸಂಹಿತಾ

(ಸಂಸ್ಕೃತಮೂಲ, ಕನ್ನಡದಲ್ಲಿ ಅರ್ಥಾನುವಾದ, ವಿವರಣೆಗಳೊಡನೆ.)

ಸೂತಗೀತಾ

ಅನುವಾದಕ

ಆಸ್ಥಾನ ಮಹಾವಿದ್ವಾನ್,

ಎಡತೊರೆ ಚಂದ್ರಶೇಖರಶಾಸ್ತ್ರೀ, ಎಂ.ಎ.,

ಸಾಹಿತ್ಯವಿದ್ವಾನ್

ಮೈಸೂರು

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್

೧೯೪೫

Printed by T. S. Raghavachar, Manager,
Sree Panchacharya Electric Press
Savaji Rao Road, Mysore

For The Palace Mysore.

ಮುನ್ನುಡಿ

॥ ಶ್ರೀಗಣೇಶಶಾರದಾಗುರುಭ್ಯೋ ನಮಃ ॥

ತತ್ತ್ವವನ್ನು ತಿಳಿಯಬಯಸುವುದೂ, ಗೊತ್ತಾದ ತಿಳಿವಳಿಕೆಯನ್ನು ಇತರರಲ್ಲೂ ಹರಡುವುದೂ ಮಾನವನ ಹುಟ್ಟುಗುಣವಾಗಿದೆ. ಈ ತತ್ತ್ವವಿಮರ್ಶೆಯು ಎರಡು ಪ್ರಕಾರದಲ್ಲಿ ಮುಂದುವರೆದಿದೆ. ಮೊದಲನೆಯದನ್ನು ಹೀಗೆ ಸೂಚಿಸಬಹುದು. ನಮಗೆ ಬಾಹ್ಯಪ್ರಪಂಚದಿಂದ ಬರುತ್ತಿರುವ ಅನುಭವಗಳನ್ನು ಅವಲಂಬಿಸಿ ಅದರ ಮೂಲಭೂತವಾದ ತತ್ತ್ವದ ಸ್ವರೂಪವನ್ನು ಮನಗಾಣುವುದು. ಈ ಪ್ರಪಂಚದಲ್ಲಿ ಕಾಣಬರುವ ಸೌಂದರ್ಯ, ಉದ್ದೇಶ, ಕ್ರಮ, ಇವುಗಳಿಂದ ಇದೆಲ್ಲಕ್ಕೂ ಮೂಲಕಾರಣವೂ, ಪ್ರೇರಕವೂ ಆದ ತತ್ತ್ವವು ಒಂದೇ ಎಂದೂ, ಅದು ಸರ್ವಜ್ಞನೂ, ಸರ್ವಶಕ್ತನೂ, ಸಚ್ಚಿದಾನಂದರೂಪನೂ ಆದುದೆಂದೂ ಗೊತ್ತಾಗುತ್ತದೆ. ಈ ಬಾಹ್ಯಪ್ರಪಂಚದ ಆನಂತ್ಯದಿಂದ ಎಲ್ಲವನ್ನೂ ವಿಮರ್ಶಿಸಿ ಮುಗಿಸುವುದು ಪರಿಮಿತವಾದ ಶಕ್ತಿಸ್ವರೂಪವುಳ್ಳ ನಮ್ಮ ಮನಸ್ಸಿಗೆ ಅಸಾಧ್ಯವೆಂದೂ ಗೊತ್ತಾಗುತ್ತದೆ. ಆಮೇಲೆ ತತ್ತ್ವವಿಮರ್ಶೆಯ ಎರಡನೆಯ ಪ್ರಕಾರವು ಮುಂದುವರಿಯುತ್ತದೆ. ಇದೇ ಅಧ್ಯಾತ್ಮಪ್ರಪಂಚದ ವಿಮರ್ಶೆಯು.

ಬಾಹ್ಯಪ್ರಪಂಚದಲ್ಲಿ ತತ್ತ್ವವನ್ನು ವಿಮರ್ಶಿಸಿ ಬಳಲಿದ ಮಾನವನ ಮನಸ್ಸು ಆಂತರವಾದ ಆಧ್ಯಾತ್ಮಿಕಪ್ರಪಂಚವನ್ನೂ ವಿಮರ್ಶಿಸುತ್ತದೆ. ಈ ನಮ್ಮ ಶರೀರದಲ್ಲಿ ಇಂದ್ರಿಯಗಳು ಜ್ಞಾನೇಂದ್ರಿಯಗಳೆಂದೂ ಕರ್ಮೇಂದ್ರಿಯಗಳೆಂದೂ ಎರಡು ಬಗೆಯಾಗಿವೆ. ಪ್ರಾಣಗಳು ಐದು ಎಂದೂ, ಅಂತಃಕರಣವು ನಾಲ್ಕುಬಗೆಯಾಗಿದೆ ಎಂದೂ, ಅವುಗಳ ವ್ಯಾಪಾರವಿಶೇಷಗಳಿಂದ ಗೊತ್ತಾಗುತ್ತದೆ. ನಮ್ಮ ಪ್ರತಿದಿನದ ಜೀವನದಲ್ಲಿ ಅನುಭವಕ್ಕೆ ಬರುವ ಮೂರು ಅವಸ್ಥೆಗಳನ್ನೂ, ಎಚ್ಚರ, ಕನಸು, ನಿದ್ರೆ, ಇವುಗಳನ್ನೂ ವಿಮರ್ಶಿಸಿದರೆ ಈ ಎಲ್ಲಕ್ಕೂ ಆಂತರವಾದ ತತ್ತ್ವವು ಜೀವಾತ್ಮನೆಂದೂ, ಅವನೂ ಸಚ್ಚಿದಾನಂದರೂಪನೆಂದೂ, ನಮ್ಮ ಈ ಒಟ್ಟು ಅನುಭವದ ಆಧಾರದ ಮೇಲೆ ಗೊತ್ತಾಗುತ್ತದೆ. ಆದರೂ ಜೀವನ ದುಃಖಕ್ಕೆ, ಎಂದರೆ ಕರ್ತೃತ್ವ, ಭೋಕ್ತೃತ್ವ, ಜನನ, ಮರಣಗಳ ಪ್ರವಾಹದಲ್ಲಿ ನಿರ್ಬಂಧದಿಂದ ಸಿಕ್ಕಿಕೊಂಡಿರುವಿಕೆ ಎಂಬ

ದುಃಖಕ್ಕೆ, ಆತ್ಮನ ನಿಜಸ್ವರೂಪವನ್ನು ತಿಳಿಯದಿರುವಿಕೆ ಎಂಬ ಅಜ್ಞಾನವೇ ಕಾರಣ ವೆಂಬುದೂ ಗೊತ್ತಾಗುತ್ತದೆ. ಈ ತಿಳಿವಳಿಕೆಯನ್ನು ಈ ಸೂತಸಂಹಿತೆಯು ಸುಲಭ ವಾಗಿಯೂ, ವಿಶದವಾಗಿಯೂ ತಿಳಿಸುತ್ತಿದೆ. ಈ ಅಜ್ಞಾನವನ್ನು ಜ್ಞಾನವೇ ಹೋಗ ಲಾಡಿಸಬಲ್ಲದು. ಆದುದರಿಂದ ಜ್ಞಾನವೇ ಮುಕ್ತಿಸಾಧನವೆಂದು ಎಲ್ಲ ಶಾಸ್ತ್ರಗಳಲ್ಲೂ ಹೇಳಿರುವಂತೆ ಇಲ್ಲಿಯೂ ಹೇಳಿದೆ.

ಈ ಅಜ್ಞಾನವು ಹೋಗಬೇಕಾದರೆ ಚಿತ್ತವು ಶುದ್ಧವಾಗಬೇಕು. ಚಿತ್ತದಲ್ಲಿ ರುವ ಅಶುದ್ಧಿ ಅಥವಾ ಮಲವು ರಾಗದ್ವೇಷರೂಪವಾಗಿದೆ. ಈ ರಾಗದ್ವೇಷಗಳು ಅಜ್ಞಾನ ಅಭಿಮಾನಮೂಲಕವಾಗಿವೆ. ಇವುಗಳ ನಿವೃತ್ತಿಯು ಧರ್ಮಾಚರಣೆ, ನಿಷ್ಕಾಮಕರ್ಮಾಚರಣೆಯಿಂದ ಆಗಬೇಕಾಗಿದೆ. ಹೀಗೆ ಧರ್ಮಾಚರಣೆ, ಚಿತ್ತಶುದ್ಧಿ, ಅಜ್ಞಾನನಾಶ, ಜ್ಞಾನಪ್ರಾಪ್ತಿಗಳೂ ಕಡೆಗೆ ಮೋಕ್ಷವೂ ಕ್ರಮವಾಗಿ ಎಲ್ಲರಿಗೂ ಅವರವರ ಪ್ರಯತ್ನಾನುಸಾರವಾಗಿ ದೊರೆಯುತ್ತವೆಂದೂ, ಈ ಸೂತಸಂಹಿತೆಯಲ್ಲಿ ವಿವರಿಸಿದೆ. ಇದಕ್ಕಾಗಿ ಎಲ್ಲರೂ ಮಾಡಬೇಕಾದ ಧರ್ಮಾಚರಣೆಯ ವಿವರಣೆಗಳನ್ನು ಈ ಸೂತಗೀತೆಯಲ್ಲಿ ಹೇಳಿದೆ. ಪುರುಷಾರ್ಥಗಳು, ಧರ್ಮ, ಅರ್ಥ, ಕಾಮ, ಮೋಕ್ಷಗಳು ನಾಲ್ಕು ಎಂದು ಪ್ರಸಿದ್ಧವಾಗಿವೆ. ಆದರೂ ಸಾಮಾನ್ಯವಾಗಿ ಜನರು ಅರ್ಥ, ಕಾಮಗಳಿಗಾಗಿಯೇ ದುಡಿಯುತ್ತಿರುತ್ತಾರೆ. ಧರ್ಮವು ಅತೀಂದ್ರಿಯವಾಗಿರು ವುದರಿಂದಲೂ, ಅದರ ಆಚರಣೆಯಲ್ಲಿ ದೇಹಶ್ರಮವೂ, ಸ್ವಾರ್ಥತ್ಯಾಗವೂ ಸೇರಿರುವುದ ರಿಂದಲೂ ಧರ್ಮವು ಅವಿವೇಕಿಗಳಿಗೆ ಬೇಡವಾಗಿರುತ್ತದೆ.

ಧರ್ಮಸ್ಯ ಫಲಮಿಚ್ಛಂತಿ ಧರ್ಮಂ ನೇಚ್ಛಂತಿ ಮಾನವಾಃ ।
ನ ಪಾಪ ಫಲಮಿಚ್ಛಂತಿ ಪಾಪಂ ಕುರ್ವಂತಿ ಮಾನವಾಃ ॥

ಅದರಂತೆ ಮೋಕ್ಷವು ಸನ್ಯಾಸವನ್ನು ಒಳಗೊಂಡಿರುವುದರಿಂದ, ಎಲ್ಲವನ್ನೂ ಪಡೆ ಯಲು ದುಡಿಯುತ್ತಿರುವ ಅಜ್ಞಾನಿಗಳಿಗೆ ಅದೂ ಅಸಹ್ಯವಾಗಿ ಬೇಡವಾಗಿದೆ. ಹೀಗಿ ದ್ದರೂ ವಿವೇಕಿಗಳೂ ದೂರದರ್ಶಿಗಳೂ ಆದ ವಿಮರ್ಶಕರಿಗೆ ಬೇಕಾದ ಮೋಕ್ಷಸಾಧ ನದ ಉಪದೇಶವು ಇಲ್ಲಿ ದೊರೆಯುತ್ತದೆ. ಬ್ರಹ್ಮಗೀತೆಯಲ್ಲಿ ಉಪನಿಷತ್ತುಗಳ ಮುಖ್ಯತಾತ್ಪರ್ಯವಾದ ಬ್ರಹ್ಮಾತ್ಮೈಕ್ಯಜ್ಞಾನಕ್ಕೆ ಹೆಚ್ಚು ಪ್ರಾಧಾನ್ಯವನ್ನು ಕೊಟ್ಟಿದೆ. ಈ ಸೂತಗೀತೆಯಲ್ಲಿ ಮೋಕ್ಷಸಾಧನವಾದ ಧರ್ಮೋಪದೇಶಕ್ಕೆ ಹೆಚ್ಚು ಪ್ರಾಮುಖ್ಯವನ್ನು ಕೊಟ್ಟಿರುವಂತಿದೆ ಎನ್ನಬಹುದು.

ಅರ್ಥ, ಕಾಮಗಳ ಸಂಪಾದನೆಯಲ್ಲಿ ದುಡಿದು ಕೃತಾರ್ಥರಾಗದೆ ಬಳಲು ತ್ತಿರುವ ಜನರನ್ನು ಧರ್ಮ, ಮೋಕ್ಷಗಳಲ್ಲಿ ಆಸಕ್ತರಾಗುವಂತೆ ಮಾಡುವುದು ಎಲ್ಲ ಪುರಾಣಗಳ ಮುಖ್ಯೋದ್ದೇಶವಾಗಿದೆ. ಅದರಂತೆ ಈ ಸೂತಸಂಹಿತೆಯೂ ಈ ಮಹಾ ಕಾರ್ಯವನ್ನು ತುಂಬ ಹೃದಯಂಗಮವಾದ ರೀತಿಯಲ್ಲಿ ನೆರವೇರಿಸುತ್ತದೆ. ಇದರಲ್ಲಿ ರುವ ಮತ್ತೊಂದು ವಿಶೇಷವೇನೆಂದರೆ, ಮತಾಭಿಮಾನದಿಂದ ಮಾನವನ ಹೃದ ಯವು ಸಂಕುಚಿತವಾಗದಂತೆ ಮಾಡಲು, ಪರಮತಗಳಲ್ಲಿ ಸಹನೆ, ಗೌರವ, ಸಹಾನು ಭೂತಿ, ಸಹಕಾರಗಳನ್ನು ತೋರಿಸುವಷ್ಟುಮಟ್ಟಿಗೆ ಮನೋವೈಶಾಲ್ಯವನ್ನುಂಟು ಮಾಡುವುದೂ, ಜನರು ಅಜ್ಞಾನದಿಂದ ಅಲಸರಾಗದಂತೆಯೂ, ಧರ್ಮಾಚರಣೆಯಲ್ಲಿ ವಿಶಿಷ್ಟಧರ್ಮಾಚರಣೆಯಲ್ಲಿ, ಚಟುವಟಿಕೆ ಆದರಗಳುಳ್ಳವರಾಗುವಂತೆಯೂ, ಮಾಡುವುದು ಈ ಪುರಾಣಸಂಹಿತೆಯ ಮುಖ್ಯೋದ್ದೇಶವಾಗಿದೆ.

ಈ ಗ್ರಂಥದ ಮುದ್ರಣಕಾರ್ಯದಲ್ಲಿ ಪಾಠಾಂತರಗಳು ಮತ್ತು ಪರಿಷ್ಕರಣಗಳಿ ಗಾಗಿ ನಮ್ಮ ಮನೆಯಲ್ಲಿದ್ದ ಸೂತಸಂಹಿತೆಯ ಆಂಧ್ರಾಕ್ಷರದ ಪ್ರತಿ ಒಂದು, ಅರಮನೆಯ ಪುಸ್ತಕಭಂಡಾರದಲ್ಲಿದ್ದ, ಪೂನಾ ಆನಂದಾಶ್ರಮದಿಂದ ಪ್ರಕಟಿತವಾದ, ದೇವನಾಗರೀಲಿಪಿಯಲ್ಲಿರುವ ಪ್ರತಿ ಒಂದು, ಈ ಎರಡನ್ನೂ ಉಪಯೋಗಿಸಿಕೊಂಡು ಮುಖ್ಯವಾದ ಪಾಠಾಂತರಗಳನ್ನು ಮುಂದನೆಯ ಕಂಸಗಳಲ್ಲಿ ತೋರಿಸಿರುತ್ತೇನೆ. ಈ ಸಂಹಿತೆಗೆ ಮಾಧವಾಚಾರ್ಯರು ತಾತ್ಪರ್ಯದೀಪಿಕೆ ಎಂಬ ವ್ಯಾಖ್ಯಾನವನ್ನು ಬರೆದಿರು ತ್ತಾರೆ. ಇವರನ್ನು ಶ್ರೀಮತ್ಕಾಶೀವಿಲಾಸಕ್ರಿಯಾಶಕ್ತಿ ಪರಮಭಕ್ತ ತ್ರ್ಯಂಬಕ ಪಾದಾಬ್ಜ ಸೇವಾಪರಾಯಣರೆಂದೂ, ಉಪನಿಷನ್ಮಾರ್ಗಪ್ರವರ್ತಕರೆಂದೂ, ವರ್ಣಿಸಿದೆ. ಈ ವ್ಯಾಖ್ಯಾನದ ಆಧಾರದ ಮೇಲೆ ನಾನು ಈ ಕನ್ನಡ ಅರ್ಥಾನುವಾದವನ್ನು ಬರೆದು ಮುದ್ರಿಸಿರುತ್ತೇನೆ.

ಇಂತಹ ಗ್ರಂಥದ ಪ್ರಕಟನೆಯಿಂದ ಜನರ ನಡೆ ನುಡಿ ಸಂಸ್ಕೃತಿಗಳು ಮೇಲ್ಪಟ್ಟು, ಧರ್ಮಾಚರಣೆಯಲ್ಲಿ ಆದರವು ಜನರ ಮತ್ತು ಮುಖಂಡರ ಮನಸ್ಸಿನಲ್ಲಿ ಬೇರೂರಿ ಬಲಗೊಂಡರೆ ಮಾತ್ರ ಜಗತ್ಕಲ್ಯಾಣಸಾಧನೆಯಾಗುತ್ತದೆ. ಈ ತತ್ವವನ್ನು ಮನಗಂಡಿರುವ, ನಮ್ಮನ್ನಾಳುತ್ತಿರುವ ಮಹಾಪ್ರಭುಗಳಾದ **ಶ್ರೀಜಯಚಾಮ ರಾಜೇಂದ್ರ ಒಡೆಯರ್ ಬಹದೂರ್ ಜಿ. ಸಿ. ಎಸ್. ಐ.** ಮಹಾಸ್ವಾಮಿಯವರ ಆಜ್ಞಾನುಸಾರವಾಗಿ ಈ ಗ್ರಂಥವನ್ನು ಪ್ರಕಟಿಸಲಾಗಿದೆ. ಇವರ ಘನವಾದ ಈ ಉದ್ದೇ ಶವು ಸರ್ವದಾ ನೆರವೇರುತ್ತಿರಲೆಂದು ದೇವರಲ್ಲಿ ಮೊರೆಯಿಡುತ್ತಿದೇನೆ.

ಇಂತಹ ಸೇವಾವಕಾಶವನ್ನು ಅನುಗ್ರಹಿಸಿರುವ ನಮ್ಮ ಪ್ರಭುವರ್ಯರಲ್ಲಿ ಕೃತಜ್ಞತಾಪೂರ್ವಕ ವಂದನೆಗಳನ್ನು ಸಮರ್ಪಿಸುತ್ತೇನೆ. ಪರಸಂವಿದ್ರೂಪಿಣಿಯೂ, ಚಿಚ್ಛಕ್ತಿಸ್ವರೂಪಳೂ ಆಗಿರುವ, ತ್ರಿಪುರಸುಂದರೀ, ಭುವನೇಶ್ವರೀ, ಕಾಮೇಶ್ವರೀ, ಲಲಿತಾ ಪರಮೇಶ್ವರೀ, ರಾಜರಾಜೇಶ್ವರೀ, ಚಾಮುಂಡೇಶ್ವರೀ ಮುಂತಾದ ದಿವ್ಯ ನಾಮಗಳಿಂದ ಪ್ರಸಿದ್ಧಳಾಗಿರುವ, ಜಗನ್ಮಾತೆಯ ಕೃಪಾನುಗ್ರಹದಿಂದ ನಮ್ಮ ಮಹಾಸ್ವಾಮಿಯವರು ನನಗೆ ಅಪ್ಪಣೆಮಾಡಿರುವ ಕಾರ್ಯಗಳಲ್ಲಿ ನಾಲ್ಕನೆಯದಾದ ಈ ಸೂತಸಂಹಿತಾ ಪ್ರಕಟನ ಕಾರ್ಯವೂ ನೆರವೇರಿರುತ್ತದೆ. ಇದರಂತೆ ಆ ಮಹಾನುಭಾವರು ಅಪ್ಪಣೆಮಾಡಿರುವ ಇತರ ಕಾರ್ಯಗಳನ್ನೂ ನೆರವೇರಿಸಲು ತಕ್ಕ ಶಕ್ತಿ ವಿವೇಕಗಳನ್ನು ಕರುಣಿಸಿ ನನ್ನನ್ನು ಧನ್ಯನನ್ನಾಗಿ ಮಾಡಲೆಂದು ಆ ಮಹಾತಾಯಿಯ ಅಡಿದಾವರೆಗಳಲ್ಲಿ ಭಕ್ತಿಯಿಂದ ಪ್ರಾರ್ಥಿಸುತ್ತಿರುತ್ತೇನೆ.

ಪಾರ್ಥಿವಸಂವತ್ಸರದ
ಕಾರ್ತಿಕ ಕೃಷ್ಣ ಚತುರ್ಥೀ
ಶುಕ್ರವಾರ, 23—11—1945

ಎಡತೊರೆ ದೇವಯ್ಯದೀಕ್ಷಿತರ ಮಗ
ಚಂದ್ರಶೇಖರಶಾಸ್ತ್ರೀ

ಶ್ರೀಸೂತಸಂಹಿತೆಯ ಸೂತಗೀತೆಯಲ್ಲಿರುವ ವಿಷಯಗಳ ಸೂಚಿಕೆ

|| ಶ್ರೀಃ ||

ಅಥಾಸ್ಯಾಃ ಶ್ರೀಮತ್ಸ್ಕಾಂದಪುರಾಣಾಂತರ್ಗತ ಸೂತಸಂಹಿತಾಯಾಶ್ಚತುರ್ಥಸ್ಯ ಯಜ್ಞವೈಭವಖಂಡಸ್ಯೋಪರಿಭಾಗೇ ಸೂತಗೀತಾ

|| ಪ್ರಥಮೋಽಧ್ಯಾಯಃ ||

ಒಂದನೆಯ ಅಧ್ಯಾಯವು

ಐಶ್ವರಂ ಪರಮಾನಂದಮನಂತಂ ಸತ್ಯಚಿದ್ಘನಂ ।
ಆತ್ಮತ್ವೇನೈವ ಪಶ್ಯಂತಂ ನಿಸ್ತರಂಗಸಮುದ್ರವತ್ ॥೧॥

ನಿರ್ವಿಕಲ್ಪಂ ಸುಸಂಪೂರ್ಣಂ ಸುಪ್ರಸನ್ನಂ ಶುಚಿಸ್ಮಿತಂ ।
ಭಾಸಯಂತಂ ಜಗದ್ಭಾಸಾ ಭಾನುಮಂತಮಿವಾಪರಂ ॥೨॥

ಪ್ರಣಮ್ಯ ಮುನಯಸ್ಸೂತಂ ದಂಡವತ್ಪೃಥಿವೀತಲೇ ।
ಕೃತಾಂಜಲಿಪುಟಾ ಭೂತ್ವಾ ತುಷ್ಟುವುಃ ಪರಯಾ ಮುದಾ ॥೩॥

|| ಶ್ರೀಗಣೇಶಶಾರದಾಗುರುಚರಣಾರವಿಂದೇಭ್ಯೋ ನಮಃ ||

ಅದ್ವೈತೇ ಬ್ರಹ್ಮ ಸತ್ಯಂ ಜಗದದಿಮನೃತಂ ಮಾಯಯಾ ಭಾಸಮಾನಂ ।
ಜೀವೋ ಬ್ರಹ್ಮಸ್ವರೂಪೋಽಪ್ಯಹಮಿತಿ ಮಮ ಚೇತ್ಯಸ್ತಿ ದೇಹೇಽಭಿಮಾನಾತ್ ।
ಶ್ರುತ್ಯಾ ಬ್ರಹ್ಮಾಹಮಸ್ಮೀತ್ಯನುಭವ ಉದಿತೇ ಕಾಮಕರ್ಮಪ್ರಣಾಶೇ ।
ಮಾಯಾ ಸಂಸಾರ ಮುಕ್ತೋ ರಿಹ(ರಿವ) ಭವತಿ ಸದಾ (ಪುನಃ) ಸಚ್ಚಿದಾನಂದರೂಪಃ ॥

ಉಪನಿಷತ್ತುಗಳಲ್ಲಿ ವಿವರಿಸಿರುವ ಅದ್ವೈತಸಿದ್ಧಾಂತಕ್ಕೆ ಸಂಬಂಧಿಸಿರುವ, ಮುಖ್ಯವಾಗಿ ಜ್ಞಾಪಕದಲ್ಲಿರಬೇಕಾದ ಅಂಶಗಳನ್ನು ಈ ಪದ್ಯದಲ್ಲಿ ಸಂಗ್ರಹಿಸಿರುತ್ತೇನೆ. ಅದ್ವೈತಸಿದ್ಧಾಂತದಲ್ಲಿ ಬ್ರಹ್ಮತತ್ವ ಒಂದೇ ಸತ್ಯವಾದುದು. ಎಂದರೆ ಹಿಂದಿನ, ಈಗಿನ ಮತ್ತು ಮುಂದಿನ ಕಾಲಗಳಲ್ಲಿ ಬಾಧೆಯನ್ನು ಪಡೆಯದೆ ಇರುವ,

ವಿಕಾರವನ್ನೂ ಹೊಂದದೆ ಇರುವ ಚೈತನ್ಯವು ಪರಬ್ರಹ್ಮ ಒಂದೇ ಆಗಿರುತ್ತದೆ. ಈ ಕಾಣಬರುತ್ತಿರುವ ಪ್ರಪಂಚವು ಪಾರಮಾರ್ಥಿಕವಾಗಿ ಸತ್ಯವಾದುದಲ್ಲವು ; ಯಾವಾಗಲೂ ಬದಲಾಯಿಸುತ್ತಲೇ ಇರುತ್ತಾ, ಸೃಷ್ಟಿ, ಸ್ಥಿತಿ, ನಾಶಗಳನ್ನು ಪಡೆಯುತ್ತಲೇ ಇರುತ್ತದೆ. ಈ ಪ್ರಪಂಚದ ಮೂಲತತ್ವದ ವಾಸ್ತವವಾದ ತತ್ವವು ತಿಳಿಯದೆ ಇರುವವರೆಗೂ ಆ ಅಜ್ಞಾನದಿಂದ ಅದು ತೋರುತ್ತಿರುತ್ತದೆ. ಜೀವನೂ ಸಚ್ಚಿದಾನಂದ ಸ್ವರೂಪದಲ್ಲಿ ಬ್ರಹ್ಮರೂಪನೇ ಆಗಿರುತ್ತಾನೆ. ಹಾಗಿದ್ದರೂ ದೇಹ ಮುಂತಾದ ಉಪಾಧಿಗಳಲ್ಲಿ ನಾನು, ನನ್ನದು, ಎಂಬ ಅಭಿಮಾನದಿಂದ ಅಲ್ಲಿರುವಂತೆ ತೋರುತ್ತಿರುತ್ತಾನೆ. ವಾಸ್ತವವಲ್ಲದ, ಅಧ್ಯಾಸಿಕವಾದ, ಅಧಿಷ್ಠಾನಚೈತನ್ಯತತ್ವದಸ್ವರೂಪದ ತಿಳಿವಳಿಕೆ ಇಲ್ಲದಿರೋಣದರಿಂದ ಉಂಟಾದ, ಸಂಬಂಧದಿಂದ ಅಲ್ಲಿರುವಂತೆ ತೋರುತ್ತಿರುತ್ತಾನೆ. ವೇದಾಂತದಲ್ಲಿರುವ ಮಹಾವಾಕ್ಯಗಳ, “ ಸರ್ವಂ ಖಲ್ವಿದಂ ಬ್ರಹ್ಮ, ಅಯಮಾತ್ಮಾಬ್ರಹ್ಮ, ಅಹಂಬ್ರಹ್ಮಾಸ್ಮಿ” ಎಂದು ಮುಂತಾದ ವಾಕ್ಯಗಳ ಅರ್ಥವನ್ನು ತಿಳಿದ ಮೇಲೆ ಮನನದಿಂದ ಆ ಅರಿವು ಅಪರೋಕ್ಷಾನುಭವವಾಗಲು, ಅವಿದ್ಯೆಯೂ, ಕಾಮವೂ, ಕರ್ಮವೂ, ವಿವೇಕ ವೈರಾಗ್ಯಗಳಿಂದ ನಷ್ಟವಾಗಲು, ಅಜ್ಞಾನದ ಕಾರ್ಯವಾಗಿ, ಮಾಯಿಕವಾಗಿ ತೋರುತ್ತಿದ್ದ, ಕರ್ತೃತ್ವ, ಭೋಕ್ತೃತ್ವ, ಜನನ, ಮರಣ ಪ್ರವಾಹದಲ್ಲಿ ಸಿಕ್ಕಿಕೊಂಡಿರುವಿಕೆ ಎಂಬ ಸಂಸಾರ ದುಃಖವೂ ನಷ್ಟವಾಗಿ, ಮೋಕ್ಷವಾಗಲು, ಇಲ್ಲಿಯೇ, ಈಗಲೇ, ದೇಶಾಂತರ ಕಾಲಾಂತರಗಳ ನಿರೀಕ್ಷಣೆಯ ಅವಶ್ಯಕತೆ ಇಲ್ಲದೆ, ಸಚ್ಚಿದಾನಂದರೂಪವಾದ ಬ್ರಹ್ಮಾತ್ಮೈಕ್ಯದ ಸಾಕ್ಷಾತ್ಕಾರದಿಂದ, ಜೀವನು ಎಂದಿನಂತೆಯೇ ನಿತ್ಯಶುದ್ಧ ಬುದ್ಧಮುಕ್ತಸ್ವರೂಪನಾಗಿ ಉಳಿದಿರುತ್ತಾನೆ. ಈ ಜಗತ್ತಿನ ಸೃಷ್ಟಿ ಸ್ಥಿತಿ ಲಯಗಳೆಂಬ ಮಹಾಕಾರ್ಯವನ್ನು ನೆರವೇರಿಸಬಲ್ಲದ್ದರಿಂದ ದೊಡ್ಡದಾದ ಮಾಯೆಯೆಂಬ ಉಪಾಧಿಯಿಂದ ಕೂಡಿ ಇರುವ ಚೈತನ್ಯಕ್ಕೆ ಸರ್ವಜ್ಞನೂ ಸರ್ವಶಕ್ತನೂ ಆಗಿರುವ ಈಶ್ವರನೆಂದೂ, ಅಲ್ಪಜ್ಞನೂ ಅಲ್ಪಶಕ್ತನೂ ಆದ ಅವಿದ್ಯೆ ಎಂಬ ಚಿಕ್ಕದಾದ ಉಪಾಧಿಯಿಂದ ಕೂಡಿರುವ ಚೈತನ್ಯಕ್ಕೆ ಜೀವನೆಂದೂ ಹೆಸರಿದೆ. ಹೀಗೆ ಎಲ್ಲ ವೇದಾಂತಶಾಸ್ತ್ರಗಳಲ್ಲೂ ವಿವರಿಸಬೇಕಾದ ಪ್ರಪಂಚ, ಈಶ್ವರ, ಜೀವ ಇವರ ಸ್ವರೂಪ ಮತ್ತು ಇವರಿಗೆ ಪರಸ್ಪರವಾಗಿರುವ ಸಂಬಂಧದಸ್ವರೂಪವನ್ನೂ ಉಪನಿಷತ್ತುಗಳಲ್ಲಿ ವಿವರಿಸಿರುವುದನ್ನು ಅನುಸರಿಸಿ ಇಲ್ಲಿಯೂ ಸಂಗ್ರಹವಾಗಿ ವಿವರಿಸಿದೆ. ಇಂತಹ ಚೈತನ್ಯದ ತಿಳಿವಳಿಕೆಯಿಂದ ಎಲ್ಲರಿಗೂ ಅಜ್ಞಾನನಾಶವೆಂಬ ಪರಮಪುರುಷಾರ್ಥದ ಸಿದ್ಧಿಯು ದೊರೆಯುವಂತಾಗಲಿ.

ನಮಸ್ತೇ ಭಗವನ್ ಶಂಭುಪ್ರಸಾದಾದಾಪ್ತವೇದನ ।
ನಮಸ್ತೇ ಭಗವನ್ ಶಂಭುಚರಣಾಂಭೋಜ ವಲ್ಲಭ ॥೪॥

ನಮಸ್ತೇ ಶಂಭುಭಕ್ತಾನಾಮಗ್ರಗಣ್ಯ ಸಮಾಹಿತ ।
ನಮಸ್ತೇ ಶಂಭುಭಕ್ತಾನಾಮತೀವ ಹಿತಬೋಧಕ ॥೫॥

ಈ ಪ್ರಪಂಚದಲ್ಲಿ ಸದ್ವಿದ್ಯೆಯನ್ನಪೇಕ್ಷಿಸುವವರು ಎಲ್ಲಕ್ಕಿಂತಲೂ ಮೊದಲು ಗುರುನಮಸ್ಕಾರವನ್ನೂ, ಗುರುಸ್ತುತಿಯನ್ನೂ ಮಾಡಬೇಕು. ಇಲ್ಲವಾದರೆ ವಿದ್ಯೆಯು ಸುಲಭವಾಗಿಯೂ, ಶೀಘ್ರವಾಗಿಯೂ ದೊರೆಯುವುದಿಲ್ಲವು. ಹೀಗೆಂಬ ಈ ತತ್ವವನ್ನು ಪ್ರಕಾಶಗೊಳಿಸಬೇಕೆಂದು, ಸೂತಗೀತೆಯನ್ನು ಕೇಳಬೇಕೆಂಬ ಅಪೇಕ್ಷೆಯುಳ್ಳ ನೈಮಿಶಾರಣ್ಯವಾಸಿಗಳಾದ ಋಷಿಗಳು ಮಾಡಿರುವ ನಮಸ್ಕಾರರೂಪವಾದ ಮಂಗಳಶ್ಲೋಕಗಳು ಈ ರೀತಿಯಾಗಿವೆ.

ಈಶ್ವರಸ್ವರೂಪವಾಗಿರುವ ಮತ್ತು ಪಾರವಿಲ್ಲದೇ ಇರುವ ಯಾವಾಗಲೂ ನಾಶವಿಲ್ಲದೆ ನಿತ್ಯವಾಗಿರುವ ಅಖಂಡಸಚ್ಚಿದಾನಂದಜ್ಞಾನರೂಪವಾಗಿರುವ ಪರಮಾನಂದವನ್ನು ತನ್ನ ಆತ್ಮಸ್ವರೂಪವನ್ನಾಗಿ ತಿಳಿದು ಅನುಸಂಧಾನಮಾಡುತ್ತಿರುವ ಮತ್ತು ಖಂಡವೃತ್ತಿಜ್ಞಾನಗಳೆಂಬ ತೆರೆಯಿಲ್ಲದ ಸಮುದ್ರವೋ ಎನ್ನುವ ಹಾಗೆ ನಿಶ್ಚಲನೂ, ಸುನಿರ್ಮಲನೂ, ಶುಭ್ರವಾದ ಮಂದಹಾಸವುಳ್ಳವನೂ, ಕಾಂತಿಯಿಂದ ಜಗತ್ತನ್ನು ಪ್ರಕಾಶಿಸುವ ಎರಡನೆಯ ಸೂರ್ಯನೋ ಎನ್ನುವ ಹಾಗೆ ಕಾಣುತ್ತಿರುವವನೂ ಆದ ಸೂತಮುನಿಯನ್ನು ನೈಮಿಶಾರಣ್ಯವಾಸಿಗಳಾದ ಋಷಿಗಳು ಭಕ್ತಿಯಿಂದ ನೆಲದಮೇಲೆ ಸಾಷ್ಟಾಂಗ ಪ್ರಣಾಮಮಾಡಿ ಎದ್ದು ಕೈಜೋಡಿಸಿಕೊಂಡು ಹೆಚ್ಚಾದ ಸಂತೋಷದಿಂದ ಹೀಗೆ ಸ್ತೋತ್ರಮಾಡಿದರು. ॥೧-೨-೩॥

ಈಶ್ವರಾನುಗ್ರಹದಿಂದ ದಿವ್ಯಜ್ಞಾನವನ್ನು ಪಡೆದಿರುವ ಪೂಜ್ಯನೇ, ನಿನಗೆ ನಮಸ್ಕಾರವು. ಪರಮೇಶ್ವರನ ಚರಣಕಮಲಗಳನ್ನು ಭಕ್ತಿಯಿಂದ ಧ್ಯಾನಿಸುತ್ತಾ ಪ್ರೀತಿಯಿಂದ ಅಲ್ಲಿಯೇ ನೆಲೆಸಿರುವ ಮನಸ್ಸುಳ್ಳ ಸೂತಮುನಿಯೇ, ಹೀಗೆ ಷಡ್ಗುಣೈಶ್ವರ್ಯಸಂಪನ್ನನಾದ ನಿನಗೆ ನಮಸ್ಕಾರವು. ॥೪॥

ಈಶ್ವರಭಕ್ತರೊಳಗೆ ಶ್ರೇಷ್ಠನಾದವನೇ, ಚಿತ್ತೈಕಾಗ್ರತೆಯುಳ್ಳವನೇ, ನಿನಗೆ ನಮಸ್ಕಾರವು. ಈಶ್ವರನ ಭಕ್ತರಿಗೆ ಹೆಚ್ಚಾದ ಹಿತಬೋಧಕನೇ, ನಿನಗೆ ನಮಸ್ಕಾರವು. ಚಿತ್ತೈಕಾಗ್ರತೆಯುಳ್ಳ ಶಾಂತರಿಂದಲೇ 'ತತ್ವವು ಬೋಧಿಸಲ್ಪಟ್ಟೀತಲ್ಲದೇ ಬೇರೆಯವರಿಂದಾಗಲಾರದು. ಹೀಗೆಂಬುದು ಈ ಸ್ತೋತ್ರದ ತಾತ್ಪರ್ಯವು. ॥೫॥

ನಮಸ್ತೇ ವೇದವೇದಾಂತಪದ್ಮಖಂಡ ದಿವಾಕರ ।
ವ್ಯಾಸವಿಜ್ಞಾನದೀಪಸ್ಯ ವರ್ತಿಭೂತಾಯ ತೇ ನಮಃ ॥೬॥

ಪುರಾಣಮುಕ್ತಾಮಾಲಾಯಾಃ ಸೂತ್ರಭೂತಾಯ ತೇ ನಮಃ ।
ಅಸ್ಮಾಕಂ ಭವವೃಕ್ಷಸ್ಯ ಕುಠಾರಾಯ ನಮೋಽಸ್ತು ತೇ ॥೭॥

ಕೃಪಾಸಾಗರ ಸರ್ವೇಷಾಂ ಹಿತಪ್ರದ ನಮೋಽಸ್ತು ತೇ ।
ನಮೋಽವಿಜ್ಞಾತದೋಷಾಯ ನಮೋ ಜ್ಞಾನಗುಣಾಯ ತೇ ॥೮॥

ಮಾತೃಭೂತಾಯ ಮರ್ತ್ಯಾನಾಂ ವ್ಯಾಸಶಿಷ್ಯಾಯ ತೇ ನಮಃ ।
ಧರ್ಮಿಷ್ಠಾಯ ನಮಸ್ತುಭ್ಯಂ ಬ್ರಹ್ಮನಿಷ್ಠಾಯ ತೇ ನಮಃ ॥೯॥

ಸಮಾಯ ಸರ್ವಜಂತೂನಾಂ ಸಾರಭೂತಾಯ ತೇ ನಮಃ ।
ಸಾಕ್ಷಾತ್ಸತ್ಯಪರಾಣಾಂ ತು ಸತ್ಯಭೂತಾಯ ತೇ ನಮಃ ॥೧೦॥

ವೇದವೇದಾಂತಗಳೆಂಬ ಕಮಲಸಮೂಹಕ್ಕೆ ಸೂರ್ಯನಂತೆ ವಿಕಾಸಕಾರಣನೇ, ನಿನಗೆ ನಮಸ್ಕಾರವು. ವೇದವ್ಯಾಸರು ಬೋಧಿಸಿರುವ ವೇದಾಂತಶಾಸ್ತ್ರಜ್ಞಾನವೆಂಬ ದೀಪಕ್ಕೆ ಬತ್ತಿಯಂತಿರುತ್ತಾನಂದದಂತೆ ಅದನ್ನು ಕಾಪಾಡುವ ನಿನಗೆ ನಮಸ್ಕಾರವು.॥೬॥

ಪುರಾಣಗಳೆಂಬ ಮುತ್ತಿನಸರಕ್ಕೆ ದಾರದಂತಿರುವ ನಿನಗೆ ನಮಸ್ಕಾರವು. ನಮ್ಮಗಳ ಸಂಸಾರದುಃಖವೆಂಬ ವೃಕ್ಷಕ್ಕೆ ಕೊಡಲಿಯಾಗಿರುವ ನಿನಗೆ ನಮಸ್ಕಾರವು. ಮರಕ್ಕೆ ಕೊಡಲಿಯಂತೆ, ಸದ್ಗುರುವು ಸಂಸಾರಕ್ಕೆ, ಸಮೂಲನಾಶಕನು. ಸಕಲ ಅಜ್ಞಾನವೂ ಸದ್ಗುರುವಿನ ಹಿತೋಪದೇಶದಿಂದ ನಾಶವಾಗುತ್ತದೆ. ॥೭॥

ಸಕಲರಿಗೂ ಹಿತವನ್ನುಂಟುಮಾಡತಕ್ಕ ದಯಾಸಮುದ್ರನೇ, ನಿನಗೆ ನಮಸ್ಕಾರವು. ದೋಷರಹಿತನಾದ ನಿನಗೆ ನಮಸ್ಕಾರವು. ಜ್ಞಾನಗುಣನಾದ ನಿನಗೆ ನಮಸ್ಕಾರವು. ॥೮॥

ಸನ್ಮಾರ್ಗಪ್ರವರ್ತನೆಯನ್ನು ಉಂಟುಮಾಡಲು, ಮಕ್ಕಳಿಗೆ ತಾಯಿಯಂತೆ, ಮನುಷ್ಯರಿಗೆ ಹಿತೋಪದೇಶಕನಾದ, ವ್ಯಾಸಶಿಷ್ಯನಾದ ನಿನಗೆ ನಮಸ್ಕಾರವು. ಧರ್ಮದಲ್ಲಿ ನಿರತನೂ, ಬ್ರಹ್ಮವಸ್ತುವಿನ ಜ್ಞಾನದಲ್ಲಿ ನಿಷ್ಠನೂ, ಆದ ನಿನಗೆ ನಮಸ್ಕಾರವು. ॥೯॥

ಸರ್ವ ಪ್ರಾಣಿಗಳಿಗೂ ಸಮರೂಪನೂ ಎಂದರೆ ಒಂದೇ ಸಮವಾಗಿ ವ್ಯಾಪಿ

ನಮೋ ನಮೋ ನಮಸ್ತುಭ್ಯಂ ಪುನರ್ಭೂಯೋ ನಮೋ ನಮಃ ।
ಅಸ್ಮಾಕಂ ಗುರುವೇ ಸಾಕ್ಷಾನ್ನಮಸ್ತ್ವಾತ್ಮಪ್ರದಾಯಿನೇ ॥೧೧॥

ಏವಂ ಗೋತ್ರರ್ಷಯಸ್ಸ್ತುತ್ವಾ ಸೂತಂ ಸರ್ವಹಿತಪ್ರದಂ ।
ಪ್ರಶ್ನಂ ಪ್ರಚಕ್ರಿರೇ ಸರ್ವೇ ಸರ್ವಲೋಕ ಹಿತೈಷಿಣಃ ॥೧೨॥

ಸೋಽಪಿ ಸೂತಃ ಸ್ವತಸ್ಸಿದ್ಧಃ ಸ್ವರೂಪಾನುಭವಾತ್ಪರಾತ್ ।
ಉತ್ಥಾಯ ಸ್ವಗುರುಂ ವ್ಯಾಸಂ ದಧ್ಯೌ ಸರ್ವಹಿತೇ ರತಮ್ ॥೧೩॥

ಅಸ್ಮಿನ್ನವಸರೇ ವ್ಯಾಸಃ ಸಾಕ್ಷಾತ್ಸತ್ಯವತೀಸುತಃ ।
ಭಸ್ಮೋದ್ಧೂಳಿತ ಸರ್ವಾಂಗ ಸ್ತ್ರಿಪುಂಡ್ರಾಂಕಿತ ಮಸ್ತಕಃ ॥೧೪॥

ಸಿರುವ, ಸಾರಭೂತನೂ ಆದ ನಿನಗೆ ನಮಸ್ಕಾರವು. ಪ್ರತ್ಯಕ್ಷವಾದ ಸತ್ಯವಸ್ತುವನ್ನು ಅರಿಯಲು ಅಸಕ್ತರಾದವರಲ್ಲಿ ಸತ್ಯನಾದ ನಿನಗೆ ನಮಸ್ಕಾರವು. ॥೧೦॥

ನಿನಗೆ ಬಾರಿಬಾರಿಗೂ ಅನಂತಾನಂತ ನಮಸ್ಕಾರಗಳು. ಪ್ರತ್ಯಕ್ಷವಾಗಿ ಸ್ವಾತ್ಮ ಪ್ರದಾನಮಾಡುವ ಎಂದರೆ ಶಿಷ್ಯರಿಗೆ ಅವರ ಆತ್ಮಸ್ವರೂಪವಾದ ಸಚ್ಚಿದಾನಂದರೂಪ ವಾಗಿರುವಿಕೆಯನ್ನು ತಿಳಿಯಿಸಿಕೊಡುವ, ನಮ್ಮ ಪ್ರತ್ಯಕ್ಷ ಗುರುವಾದ ನಿನಗೆ ನಮ ಸ್ಕಾರವು. ಗುರು ನಮಸ್ಕಾರಕ್ಕೆ ಆತ್ಮಸಾಕ್ಷಾತ್ಕಾರವೇ ಫಲವು. ॥೧೧॥

ಈ ರೀತಿಯಾಗಿ ಸತ್ಕುಲಪ್ರಸೂತರಾದ ಆ ಋಷಿಗಳು ಸಕಲರಿಗೂ ಹಿತ ವನ್ನುಂಟುಮಾಡುವ ಸೂತನನ್ನು ಸ್ತುತಿಸಿ ಸರ್ವಲೋಕಕ್ಕೂ ಹಿತವನ್ನು ಬಯಸು ವವರಾಗಿ ಎಲ್ಲರೂ ಹೀಗೆ ಪ್ರಶ್ನಿಸಿದರು. ॥೧೨॥

ಶ್ರೇಷ್ಠವಾದ ಸ್ವರೂಪಾನುಸಂಧಾನದಿಂದ ತಾನಾಗಿಯೇ ಮುಕ್ತನಾದ ಸೂತನೂ ಕೂಡ ಮೇಲಕ್ಕೆದ್ದು ಸಕಲ ಪ್ರಪಂಚದ ಮಂಗಳದಲ್ಲಿ ನಿರತರಾದ ತನ್ನ ಗುರುಗಳಾದ ವ್ಯಾಸರನ್ನು ಧ್ಯಾನಿಸಿದನು. ಗುರುವಿನ ಅನುಜ್ಞೆಯಿಲ್ಲದೇ ತತ್ವಾರ್ಥಸ್ಫೂರ್ತಿಯಾಗ ಲಾರದೆಂಬುದನ್ನು ಮನಗಂಡು ವಿಶೇಷವಾಗಿ ಧ್ಯಾನಾಸಕ್ತನಾದನು. ನನ್ನ ಎಂದರೆ ಸೂತನಾದ ನಾನು ಹೇಳಿದ ಗೀತೆಯನ್ನು ತಿಳಿಸುವಾಗ ನಿನ್ನ ಎಂದರೆ ಗುರುವಾದ ವ್ಯಾಸಮಹರ್ಷಿಯ ಅನುಗ್ರಹವಿರಬೇಕೆಂಬುದು ಅವನ ಅಭಿಪ್ರಾಯ. ॥೧೩॥

ಇಷ್ಟರಲ್ಲೇ ಸತ್ಯವತೀ ದೇವಿಯ ಸ್ವಂತ ಮಕ್ಕಳೂ, ಭಸ್ಮದಿಂದ ಅನುಲೇಪಿಸ ಲ್ಪಟ್ಟ ಸಕಲಾವಯವಗಳುಳ್ಳವರೂ, ತ್ರಿಪುಂಡ್ರದಿಂದಲಂಕೃತವಾದ ಲಲಾಟವುಳ್ಳ ವರೂ, ಆದ ವ್ಯಾಸರು ॥೧೪॥

ಕೃಷ್ಣಾಜಿನೀ ಸೋತ್ತರೀಯ ಆಷಾಢೇನ ವಿರಾಜಿತಃ ।
ರುದ್ರಾಕ್ಷಮಾಲಾಭರಣಸ್ತತ್ರೈವಾಽಽವಿರಭೂತ್ಸ್ವಯಂ ॥೧೫॥

ತಂ ದೃಷ್ಟ್ವಾ ದೇಶಿಕೇಂದ್ರಾಣಾಂ ದೇಶಿಕಂ ಕರುಣಾಕರಂ ।
ಸೂತಃ ಸತ್ಯವತೀಸೂನುಂ ಸ್ವಶಿಷ್ಯೈಸ್ಸಹ ಸತ್ತಮೈಃ ॥೧೬॥

ಪ್ರಣಮ್ಯ ದಂಡವದ್ಭೂಮೌ ಪ್ರಸನ್ನೇಂದ್ರಿಯ ಮಾನಸಃ ।
ಯಥಾಽರ್ಹಂ ಪೂಜಯಾಮಾಸ ದತ್ವಾ ಚಾಸನಮುತ್ತಮಮ್ ॥೧೭॥

ಭಗವಾನಪಿ ಸರ್ವಜ್ಞಃ ಸಾಕ್ಷಾತ್ಸತ್ಯವತೀಸುತಃ ।
ಪ್ರಾಹ ಗಂಭೀರಯಾ ವಾಚಾ ಸ್ವಶಿಷ್ಯಂ ಪ್ರತಿ ಸತ್ತಮಃ ॥೧೮॥

ಕೃಷ್ಣಾಜಿನವನ್ನು ಧರಿಸಿದವರೂ, ಉತ್ತರೀಯದಿಂದ ಕೂಡಿದವರೂ, ಪಲಾಶ ದಂಡದಿಂದ ಪ್ರಕಾಶಿತರೂ, ರುದ್ರಾಕ್ಷಮಾಲೆಯೆಂಬ ಆಭರಣವುಳ್ಳವರೂ, ಆಗಿ ವ್ಯಾಸರು ಅಲ್ಲಿಯೇ ತಾವಾಗಿಯೇ ಪ್ರತ್ಯಕ್ಷರಾದರು. ನೆಚ್ಚಿನ ಶಿಷ್ಯನ ನಿಜವಾದ ಭಕ್ತಿಗೆ ಒಲಿಯುವ ಗುರುಗಳು ಯಾವಾಗಲೂ ಕಣ್ಣುಮುಂದೆಯೇ ಬಂದು ನಿಲ್ಲುತ್ತಾರೆಂಬುದರಲ್ಲಿ ಸಂದೇಹವಿಲ್ಲವು. ||೧೫||

ಗುರೂತ್ತಮರೊಳಗೆ ಗುರುವಾದ, ದಯಾಸಮುದ್ರರಾದ, ಸತ್ಯವತೀಪುತ್ರರಾದ ವ್ಯಾಸರನ್ನು ನೋಡಿ ಕೂಡಲೇ ಸೂತನು ಅತ್ಯಂತ ಶ್ರೇಷ್ಠರಾದ ತನ್ನ ಶಿಷ್ಯರೊಡನೆ, ||೧೬||

ಭೂಮಿಯ ಮೇಲೆ ಸಾಷ್ಟಾಂಗಪ್ರಣಾಮಮಾಡಿ ನಿರ್ಮಲವೂ ವಿಕಾಸಿತವೂ ಆದ ಮನಸ್ಸೂ ಮತ್ತು ಇಂದ್ರಿಯಗಳುಳ್ಳವನಾಗಿ ಉತ್ತಮವಾದ ಆಸನವನ್ನು ಕೊಟ್ಟು ಶಾಸ್ತ್ರಾನುಸಾರವಾಗಿ ಆ ವ್ಯಾಸರನ್ನು ಭಕ್ತಿಯಿಂದ ಪೂಜಿಸಿದನು. ||೧೭||

ಲೋಕಪೂಜ್ಯರೂ, ಸೃಷ್ಟಿಸ್ಥಿತಿಗಳನ್ನರಿತವರೂ, ಸರ್ವಜ್ಞರೂ, ಸಾಕ್ಷಾತ್ಸತ್ಯವತೀ ಪುತ್ರರೂ, ಅತ್ಯಂತ ಶ್ರೇಷ್ಠರೂ ಆದ ವ್ಯಾಸರೂ ಕೂಡ ಗಂಭೀರವಾದ ಮಾತಿನಿಂದ ತನ್ನ ಶಿಷ್ಯನನ್ನು ಕುರಿತು ಹೀಗೆ ಹೇಳಿದರು. ಗುರುವಚನದಲ್ಲಿರುವ ಅರ್ಥಗಾಂಭೀರ್ಯವೇ ಶಿಷ್ಯನ ಬುದ್ಧಿವಿಕಾಸವನ್ನುಂಟುಮಾಡೀತಲ್ಲದೆ ಬೇರೆಯಲ್ಲವು. ಆಪಾತರಮಣೀಯವಾದ ಗುರುವಚನವೂ ಬೇಗ ಫಲಕಾರಿಯಾಗಲಾರದು. ||೧೮||

ಭದ್ರಮಸ್ತು ಸುಸಂಪೂರ್ಣಂ ಸೂತ ಶಿಷ್ಯ ಮಮಾಸ್ತಿಕೇ ।
ತವೈಷಾಮಪಿ ಕಿಂ ಕಾರ್ಯಂ ಮಯಾ ತದ್ಬ್ರೂಹಿ ಮೇಽನಘ॥೧೯॥

ಏವಂ ವ್ಯಾಸವಚಶ್ಶ್ರುತ್ವಾ ಸೂತಃ ಪೌರಾಣಿಕೋತ್ತಮಃ ।
ಉವಾಚ ಮಧುರಂ ವಾಕ್ಯಂ ಲೋಕಾನಾಂ ಹಿತಮುತ್ತಮಂ ॥೨೦॥

॥ ಸೂತ ಉವಾಚ ॥

ಇಮೇ ಹಿ ಮುನಯಶ್ಶುದ್ಧಾಸ್ಸತ್ಯಧರ್ಮಪರಾಯಣಾಃ ।
ಮದ್ಗೀತಾ ಶ್ರವಣೇ ತೇಷಾಮಸ್ತಿ ಶ್ರದ್ಧಾ ಮಹತ್ತರಾ ॥೨೧॥

ಭವತ್ಪ್ರಸಾದೇ ಸತ್ಯೇವ ಶಕ್ಯತೇ ಸಾ ವಿಭಾಷಿತುಂ ।
ಯದಿ ಪ್ರಸನ್ನೋ ಭಗವನ್ ವದೇತ್ಯಜ್ಞಾಪಯಾದ್ಯ ಮಾಂ ॥೨೨॥

ಆ ಮೇಲೆ ವ್ಯಾಸರು, "ಎಲೌ ನನ್ನ ಶಿಷ್ಯನೂ ಮತ್ತು ಆಸ್ತಿಕನೂ ಆದ ಸೂತನೇ, ನಿನಗೂ ಈ ನಿನ್ನ ಶಿಷ್ಯರಾದ ಮಹರ್ಷಿಗಳಿಗೂ ಪರಿಪೂರ್ಣವಾದ ಮಂಗಳವುಂಟಾಗಲಿ. ಪಾಪರಹಿತನೇ, ನಿನಗೂ ನಿನ್ನ ಈ ಶಿಷ್ಯರಿಗೂ ನನ್ನಿಂದಾಗ ಬೇಕಾದ ಕಾರ್ಯವಾವುದೆಂಬುದನ್ನು ತಿಳಿಸು" ಎಂದು ಹೇಳಿದರು. ||೧೯||

ಈ ರೀತಿಯಾದ ವ್ಯಾಸರ ಮಾತನ್ನು ಕೇಳಿ ಪೌರಾಣಿಕರಲ್ಲಿ ಶ್ರೇಷ್ಠನಾದ ಸೂತನು ಲೋಕಗಳಿಗೂ ಮತ್ತು ಜನಗಳಿಗೂ ಹಿತವೂ ಮತ್ತು ಉತ್ತಮವೂ ಆದ ಈ ಮಾತನ್ನು ಮಧುರವಾಗಿ ಹೇಳಿದನು. ||೨೦||

ಸೂತನು ಹೇಳಿದನು— ಪೂಜ್ಯರೇ, ಪರಿಶುದ್ಧರೂ, ಸತ್ಯದಲ್ಲೂ, ಧರ್ಮದಲ್ಲೂ ಪರಾಯಣರೂ ಆದವರು ಈ ಮುನಿಗಳು. ಇವರೆಲ್ಲರಿಗೂ ನನ್ನ (ಸೂತ) ಗೀತೆಯನ್ನು ಕೇಳಬೇಕೆಂಬ ಒಂದು ದೊಡ್ಡ ಶ್ರದ್ಧೆಯಿಂದಕೂಡಿದ ಬಯಕೆ ಇದೆ.||೨೧||

ಪೂಜ್ಯರೇ, ಆ ಗೀತೆಯನ್ನು ಹೇಳಲು ತಮ್ಮ ಅನುಗ್ರಹವಿದ್ದರೆ ಮಾತ್ರ ಸಾಧ್ಯವು. ತಾವು ನನ್ನ ವಿಷಯದಲ್ಲಿ ಪ್ರಸನ್ನರಾಗಿರುವುದಾದರೆ ಈ ದಿನ ನನ್ನನ್ನು ಹಾಗೆ ಮಾಡಲು ಆಜ್ಞಾಪಿಸಿರಿ, ಎಂದು ಹೇಳಿದನು. ||೨೨||

ಇತಿ ಸೂತವಚಃ ಶ್ರುತ್ವಾ ಭಗವಾನ್ ಕರುಣಾನಿಧಿಃ ।
ತ್ವದೀಯಾಮದ್ಯ ತಾಂ ಗೀತಾಂ ವದೈಷಾಮರ್ಥಿನಾಂ ಶುಭಾಂ ॥೨೩॥

ಇತ್ಯುಕ್ತ್ವಾ ಶಿಷ್ಯಮಾಲಿಂಗ್ಯ ಹೃದಯಂ ತಸ್ಯ ಸಂಸ್ಪೃಶನ್ ।
ಸಾಂಬಂ ಸರ್ವೇಶ್ವರಂ ಧ್ಯಾತ್ವಾ ನಿರೀಕ್ಷ್ಯೈನಂ ಕೃಪಾಬಲಾತ್ ॥೨೪॥

ಸ್ಥಾಪಯಿತ್ವಾ ಮಹಾದೇವಂ ಹೃದಯೇ ತಸ್ಯ ಸುಸ್ಥಿರಂ ।
ತಸ್ಯ ಮೂರ್ಧಾನಮಾಘ್ರಾಯ ಭಗವಾನಗಮದ್ಗುರುಃ ॥೨೫॥

ಸೋಽಪಿ ಸೂತಃ ಪುನಸ್ಸಾಂಬಂ ಧ್ಯಾತ್ವಾ ದೇವಂ ತ್ರಿಯಂಬಕಂ ।
ಪ್ರಣಮ್ಯ ದಂಡವದ್ಭೂಮೌ ಸ್ಮೃತ್ವಾ ವ್ಯಾಸಂ ಚ ಸದ್ಗುರುಂ ॥೨೬॥

ಕೃತಾಂಜಲಿಪುಟೋ ಭೂತ್ವಾ ಮಂತ್ರಮಾದ್ಯಂ ಷಡಕ್ಷರಂ ।
ಜಪಿತ್ವಾ ಶ್ರದ್ಧಯಾ ಸಾರ್ಧಂ ನಿರೀಕ್ಷ್ಯ ಮುನಿಪುಂಗವಾನ್ ॥೨೭॥

ಹೀಗೆಂಬ ಸೂತನ ಮಾತನ್ನು ಕೇಳಿ ದಯಾಸಮುದ್ರರೂ, ಜ್ಞಾನವೈರಾಗ್ಯಾದಿ ಪೂರ್ಣರೂ ಆದ ವ್ಯಾಸರು ಸೂತನನ್ನು ಕುರಿತು, ಓ ಸೂತನೇ, ಮಂಗಳಕರವಾದ ನಿನ್ನ ಆ ಗೀತೆಯನ್ನು ಕೇಳಲಪೇಕ್ಷಿಸುತ್ತಿರುವ ಈ ಋಷಿಗಳಿಗೆ ಈ ದಿನ ನೀನು ಚನ್ನಾಗಿ ತಿಳಿಸು. ॥೨೩॥

ಎಂದು ಹೇಳಿ, ವ್ಯಾಸನು ಶಿಷ್ಯನನ್ನು ಆಲಿಂಗನೆಮಾಡಿಕೊಂಡು ಅವನ ಹೃದಯವನ್ನು ಮುಟ್ಟಿದವನಾಗಿ ಸರ್ವೇಶ್ವರನಾದ ಸಾಂಬಶಿವನನ್ನು ಧ್ಯಾನಿಸುತ್ತಾ ಆ ಶಿಷ್ಯನನ್ನು ಈಕ್ಷಣಶಾಂತಿರೂಪವಾದ ಅನುಗ್ರಹಸಾಮರ್ಥ್ಯದಿಂದ ನೋಡಿ. ॥೨೪॥

ಅವನ (ಸೂತನ) ಹೃದಯದಲ್ಲಿ ಪರಶಿವನನ್ನು ಸ್ಥಿರವಾಗಿ ಸ್ಥಾಪಿಸಿ, ಅವನ ಶಿರಸ್ಸನ್ನು ಆಘ್ರಾಣಿಸಿ, ಅಂತರ್ಧಾನವನ್ನೈದಿದರು. ಸರ್ವಾಂತರ್ಯಾಮಿಯಾದ ಪರಮಾತ್ಮನನ್ನು ಮೊದಲು ಗುರುಪ್ರಸಾದದಿಂದ ತನ್ನ ಹೃದಯದಲ್ಲಿ ಸ್ಥಿರವಾಗಿ ಸ್ಥಾಪನೆಮಾಡಿಕೊಂಡವನೇ ತತ್ವನಿರೂಪಣೆಮಾಡಲು ಯೋಗ್ಯನಾಗುತ್ತಾನೆಂಬುದನ್ನು ವ್ಯಾಸರು ಪ್ರಕಟಿಸಿರುತ್ತಾರೆ. ॥೨೫॥

ಆ ಸೂತನೂ ಕೂಡ ಮತ್ತೆ ಸಾಂಬಮೂರ್ತಿಯಾದ ತ್ರ್ಯಂಬಕನನ್ನು ಧ್ಯಾನಿಸಿ ಭೂಮಿಯಲ್ಲಿ ಸಾಷ್ಟಾಂಗಪ್ರಣಾಮಮಾಡಿ ಸದ್ಗುರುವಾದ ವ್ಯಾಸರನ್ನು ಸ್ಮರಿಸಿ, ॥೨೬॥

ಕೃತಪ್ರಣಾಮೋ ಮುನಿಭಿಃ ಸ್ವಗೀತಾಮತಿ ನಿರ್ಮಲಾಂ ।
ವಕ್ತುಮಾರಭತೇ ಸೂತಃ ಸರ್ವಲೋಕಹಿತೇ ರತಃ ॥೨೮॥

ಇತಿ ಶ್ರೀಸ್ಕಾಂದಪುರಾಣೇ ಸೂತಸಂಹಿತಾಯಾಂ ಚತುರ್ಥಸ್ಯ ಯಜ್ಞವೈಭವಖಂಡಸ್ಯೋಪರಿಭಾಗೇ ಸೂತಗೀತಾಸೂಪನಿಷತ್ಸು ಪ್ರಥಮೋಽಧ್ಯಾಯಃ

ಕೈಜೋಡಿಸಿದವನಾಗಿ, ಆದ್ಯಮಂತ್ರವಾದ ಷಡಕ್ಷರಮಂತ್ರವನ್ನು ಜಪಿಸಿ, ಶ್ರದ್ಧೆಯಿಂದೊಡಗೂಡಿದವನಾಗಿ ಋಷಿಶ್ರೇಷ್ಠರನ್ನು ನೋಡಿ, ॥೨೭॥

ಋಷಿಗಳಿಂದ ನಮಸ್ಕಾರಮಾಡಲ್ಪಟ್ಟವನಾಗಿ, ಸರ್ವಲೋಕಗಳ ಹಿತದಲ್ಲಿ ಆಸಕ್ತನಾದ ಸೂತನು ಅತ್ಯಂತ ಪರಿಶುದ್ಧವಾದ ತನ್ನ ಗೀತೆಯನ್ನು ಹೇಳುವುದಕ್ಕೆ ಉಪಕ್ರಮಿಸುತ್ತಾನೆ. ॥೨೮॥

ಇಲ್ಲಿಗೆ ಸೂತಸಂಹಿತೆಯ ಸೂತಗೀತೆಯಲ್ಲಿ ಪ್ರಥಮಾಧ್ಯಾಯವು ಮುಗಿದುದು.

|| ಶ್ರೀಃ ||

ಅಥಾಸ್ಯಾಃ ಶ್ರೀಮತ್ಸ್ಕಾಂದಪುರಾಣಾಂತರ್ಗತ ಸೂತಸಂಹಿತಾಯಾಶ್ಚತುರ್ಥಸ್ಯ ಯಜ್ಞವೈಭವಖಂಡಸ್ಯೋಪರಿಭಾಗೇ ಸೂತಗೀತಾ

|| ದ್ವಿತೀಯೋಽಧ್ಯಾಯಃ ||

ಎರಡನೆಯ ಅಧ್ಯಾಯವು

|| ಸೂತ ಉವಾಚ ||

ಶೃಣುತ ಬ್ರಹ್ಮವಿಚ್ಛ್ರೇಷ್ಠಾಃ ಭಾಗ್ಯವಂತಸ್ಸಮಾಹಿತಾಃ ।
ವಕ್ಷ್ಯಾಮಿ ಪರಮಂ ಗುಹ್ಯಂ ವಿಜ್ಞಾನಂ ವೇದಸಮ್ಮತಂ ||೧||

ಅಸ್ತಿ ಕಶ್ಚಿತ್ಸ್ವತಸ್ಸಿದ್ಧಃ ಸತ್ಯಜ್ಞಾನಸುಖಾದ್ವಯಃ ।
ವಿಶ್ವಸ್ಯ ಜಗತಃ ಕರ್ತಾ ಪಶುಪಾಶವಿಲಕ್ಷಣಃ ||೨||

ಸೂತನು ಹೇಳಿದನು—ಬ್ರಹ್ಮಜ್ಞಾನಿಗಳೊಳಗೆ ಶ್ರೇಷ್ಠರಾದ ಕಾರಣವೇ ಸುಕೃತಶಾಲಿಗಳಾದ ಋಷಿಗಳೇ, ಮೂಲಪ್ರಮಾಣವಾದ ವೇದಕ್ಕೆ ಸಮ್ಮತವಾದ, ವಿರೋಧವಲ್ಲದ, ರಹಸ್ಯವೂ ಮತ್ತು ಶ್ರೇಷ್ಠವೂ ಆದ ಶಾಸ್ತ್ರತತ್ವವನ್ನು ಹೇಳುತ್ತೇನೆ. ಚಿತ್ತೈಕಾಗ್ರತೆಯುಳ್ಳವರಾಗಿ ಕೇಳಿರಿ. ||೧||

ಸಚ್ಚಿದಾನಂದಸ್ವರೂಪನೂ, ಅದ್ವಿತೀಯನೂ, ಸ್ವಯಂ ನಿತ್ಯಮುಕ್ತನೂ, ಈ ಸಮಸ್ತವಾದ ಪ್ರಪಂಚದ ಸೃಷ್ಟಿ, ಸ್ಥಿತಿ, ಸಂಹಾರಗಳಿಗೆ ಕರ್ತೃವಾಗಿಯೂ ಇರುವ ಪರಮಾತ್ಮನೊಬ್ಬನು ಪಶುಪಾಶಗಳಿಗಿಂತಲೂ ವಿಜಾತೀಯನಾಗಿರುತ್ತಾನೆ. (ಮುಂದೆ ಹೇಳುವ ದೇಹೇಂದ್ರಿಯಗಳೇ ಮೊದಲಾದ ಮೂವತ್ತೈದು ವಸ್ತುಗಳಿಗೆ ಪಾಶಗಳೆಂದೂ, ಇವುಗಳಿಂದ ಬದ್ಧನಾಗುವ ಜೀವನು ಪಶುವೆಂದೂ, ಇವುಗಳಿಗಿಂತಲೂ ವಿಲಕ್ಷಣನೇ ಸಚ್ಚಿದಾನಂದಾತ್ಮಕನಾದ ಪರಮಾತ್ಮನೆಂದೂ, ತಾತ್ಪರ್ಯವು.) ||೨||

ಆಕಾಶಾದೀನಿ ಭೂತಾನಿ ಪಂಚ ತೇಷಾಂ ಪ್ರಕೀರ್ತಿತಾಃ ।
ಗುಣಾಃ ಶಬ್ದಾದಯಃ ಪಂಚ ಪಂಚ ಕರ್ಮೇಂದ್ರಿಯಾಣಿ ಚ ॥೩॥

ಜ್ಞಾನೇಂದ್ರಿಯಾಣಿ ಪಂಚೈವ ಪ್ರಾಣಾದ್ಯಾ ದಶವಾಯವಃ ।
ಮನೋ ಬುದ್ಧಿರಹಂಕಾರಶ್ಚಿತ್ತಂ ಚೇತಿ ಚತುಷ್ಟಯಂ ॥೪॥

ತೇಷಾಂ ಕಾರಣಭೂತೈಕಾಽವಿದ್ಯಾ ಷಟ್ತ್ರಿಂಶಕಃ ಪಶುಃ ।
ವಿಶ್ವಸ್ಯ ಜಗತಃ ಕರ್ತಾ ಪಶೋರನ್ಯಃ ಪರಃ ಶಿವಃ ॥೫॥

ಆತ್ಮಾನಃ ಪಶವಸ್ಸರ್ವೇ ಪ್ರೋಕ್ತಾ ಅಜ್ಞಾನಿನಸ್ಸದಾ ।
ಅಜ್ಞಾನಮಾತ್ಮನಾಮೇಷಾಮನಾದ್ಯೇವ ಸ್ವಭಾವತಃ ॥೬॥

ಸಂಸಾರ ಬೀಜಮಜ್ಞಾನಂ ಸಂಸಾರಜ್ಞಃ ಪುಮಾನ್ ಯತಃ ।
ಜ್ಞಾನಾತ್ತಸ್ಯ ನಿವೃತ್ತಿಸ್ಸ್ಯಾತ್ಪ್ರಕಾಶಾತ್ತಮಸೋ ಯಥಾ ॥೭॥

ಅವುಗಳೊಳಗೆ (ಆ ಪಶುಪಾಶಗಳೊಳಗೆ) ಆಕಾಶವೇ ಮೊದಲಾದ ಪಂಚ ಭೂತಗಳೂ, ಅವುಗಳ ಶಬ್ದ ಸ್ಪರ್ಶ ಮೊದಲಾದ ಐದು ಗುಣಗಳೂ, ವಾಕ್ ಮೊದಲಾದ ಐದು ಕರ್ಮೇಂದ್ರಿಯಗಳೂ, ಶ್ರೋತ್ರವೇ ಮೊದಲಾದ ಐದು ಜ್ಞಾನೇಂದ್ರಿಯಗಳೂ, ಪ್ರಾಣಾನವ್ಯಾನೋದಾನಸಮಾನ ನಾಗ ಕೂರ್ಮ ಕೃಕರ ದೇವದತ್ತ ಧನಂಜಯ ಗಳೆಂಬ ದಶವಾಯುಗಳೂ, ಮನಸ್ಸು, ಬುದ್ಧಿಯು, ಚಿತ್ತವೂ, ಅಹಂಕಾರವೂ ಎಂಬ ಈ ನಾಲ್ಕೂ, ||೩-೪||

ಇವುಗಳಿಗೆ ಮೂಲಕಾರಣಭೂತವಾದ ಅವಿದ್ಯೆ ಒಂದೂ, ಈ ಮೂವತ್ತೈದೂ ಬಂಧಕಗಳಾದ್ದರಿಂದ ಪಾಶವೆಂದೂ, ಇವುಗಳಿಂದ ಬದ್ಧನಾಗುವ ಮೂವತ್ತಾರನೆಯವ ನಾದ ಜೀವನು ಪಶುವೆಂದೂ ವ್ಯವಹಾರವಿದೆ. ಇವೆಲ್ಲವುಗಳಿಗಿಂತಲೂ ಶ್ರೇಷ್ಠನಾದ ತನ್ನ ಉಪಾಧಿಯಾದ ಮಾಯೆಗೆ ವಶನಾಗದ ಪರಶಿವನೇ ಸಕಲ ಜಗತ್ಕರ್ತೃವು.||೫||

ಅಜ್ಞಾನೋಪಾಧಿಗೆ ಅಧೀನವಾಗಿರುವ ಎಲ್ಲಾ ಜೀವರುಗಳೂ ಎಲ್ಲಾ ಕಾಲ ದಲ್ಲಿಯೂ ಪಶುಗಳೆಂದೂ ಹೇಳಲ್ಪಟ್ಟಿರುತ್ತಾರೆ. ಈ ಆತ್ಮರುಗಳ ಅಜ್ಞಾನವು ಸ್ವಭಾವ ವಾಗಿಯೇ ಅನಾದಿಯಾದದ್ದು. ಆದಿಯುಂಟೆಂದರೆ ಅದಕ್ಕೆ ಕಾರಣವಿಲ್ಲವಾಗುತ್ತದೆ.||೬||

ಅಜ್ಞಾನವೇ ಈ ಸಂಸಾರಕ್ಕೆ ಮೂಲಕಾರಣವು. ಏಕೆಂದರೆ ಅಜ್ಞಾನಿಯಾದ ಪುರುಷನು ಮಾತ್ರ ಸಂಸಾರಿಯಾಗಿದಾನೆ. ಜ್ಞಾನಿಯಾದವನು ಹಾಗಿರುವುದಿಲ್ಲವು.

ಅಜ್ಞಾನಾಕಾರಭೇದೇನಾ ವಿದ್ಯಾಖ್ಯೇನೈವ ಕೇವಲಂ ।
ಪಶೂನಾಮಾತ್ಮನಾಂ ಭೇದಃ ಕಲ್ಪಿತೋ ನ ಸ್ವಭಾವತಃ ॥೮॥

ಅಜ್ಞಾನಾಕಾರಭೇದೇನ ಮಾಯಾಽಽಖ್ಯೇನೈವ ಕೇವಲಂ ।
ವಿಭಾಗಃ ಕಲ್ಪಿತೋ ವಿಪ್ರಾಃ ಪರಮಾತ್ಮತ್ವಲಕ್ಷಣಃ ॥೯॥

ಘಟಾಕಾಶ ಮಹಾಕಾಶ ವಿಭಾಗಃ ಕಲ್ಪಿತೋ ಯಥಾ ।
ತಥೈವ ಕಲ್ಪಿತೋ ಭೇದೋ ಜೀವಾತ್ಮ ಪರಮಾತ್ಮನೋಃ ॥೧೦॥

ಬೆಳಕಿನಿಂದ ಕತ್ತಲೆಗೆ ಹೇಗೋ ಹಾಗೆ, ಆ ಅಜ್ಞಾನದ ನಿವೃತ್ತಿಯು ಜ್ಞಾನದಿಂದಮಾತ್ರ ಉಂಟಾಗುತ್ತದೆ. ಆದುದರಿಂದ ಸಂಸಾರವು ಅಜ್ಞಾನರೂಪವಾದುದು. ॥೭॥

ಪಶುಗಳೆಂಬ ಈ ಜೀವಾತ್ಮರುಗಳ ಪರಸ್ಪರ ಭೇದವೂ ಕೂಡ ಅವಿದ್ಯೆಯೆಂಬ ಹೆಸರುಳ್ಳ ಅಜ್ಞಾನದ ಆಕಾರ (ರೂಪ) ಭೇದದಿಂದ ಕೃತಕವಾದದ್ದೇ ಅಲ್ಲದೆ, ಆತ್ಮರ ಸ್ವಭಾವದಿಂದುಂಟಾದುದಲ್ಲವು. ಅಜ್ಞಾನದಲ್ಲಿ ಮಾಯೆ, ಅವಿದ್ಯೆ, ಎಂದು ಎರಡು ಬಗೆ ಇದೆ. ॥೮॥

ಬ್ರಾಹ್ಮಣರೇ, ಮಾಯೆ ಎಂಬ ಹೆಸರುಳ್ಳ ಅಜ್ಞಾನದ ಉಪಾಧಿಭೇದದಿಂದಲೇ ಪರಮೇಶ್ವರನೆಂಬ ವಿಭಾಗವೂ ಕೂಡ ಕಲ್ಪಿತವಾದದ್ದೇ ಆಗಿದೆ. ಎಂದರೆ ಶಾಸ್ತ್ರದಲ್ಲಿ ಭಾವಪದಾರ್ಥವೆಂದು ಪರಿಗಣಿಸಲ್ಪಟ್ಟಿರುವ, ಮೂಲಪ್ರಕೃತಿ, ಮಾಯೆ ಮೊದಲಾದ ಶಬ್ದಗಳಿಂದ ಕರೆಯಲ್ಪಡುವ ಅಜ್ಞಾನಕ್ಕೆ ಎರಡು ಆಕಾರಗಳಿರುತ್ತವೆ. ಅವುಗಳಲ್ಲಿ ಮಲಿನಸತ್ವಪ್ರಧಾನವಾದದ್ದು ಅವಿದ್ಯಾ ಎಂಬ ಹೆಸರುಳ್ಳದ್ದು. ವಿಶುದ್ಧಸತ್ವಪ್ರಧಾನ ವಾದ ಎರಡನೆಯದು ಮಾಯಾ ಎಂಬ ಹೆಸರುಳ್ಳದ್ದು. ಮೊದಲನೆಯದು ಸತ್ವಮಾಲಿನ್ಯದ ನ್ಯೂನಾಧಿಕಭೇದದಿಂದ ನಾನಾರೂಪವಾಗುತ್ತದೆ. ಅದರಿಂದ ಪಶುಗಳೆಂಬ ಜೀವಾತ್ಮರ ಭೇದವೂ ಉಂಟಾಗುತ್ತದೆ. ಇದು ವಾಸ್ತವವಲ್ಲವು. ಮಾಯೆಯೆಂಬ ಎರಡನೆಯ ಅಜ್ಞಾನಾಕಾರದಿಂದ ಸರ್ವಜ್ಞನಾದ, ಸರ್ವಶಕ್ತನಾದ ಈಶ್ವರನೆಂದು ವಿಭಾಗವು ಕಲ್ಪಿಸಲ್ಪಟ್ಟಿದೆ. ॥೯॥

ಘಟಾಕಾಶ, ಮಹಾಕಾಶವೆಂಬ ವಿಭಾಗವು ಹೇಗೆ ಕಲ್ಪಿತವೋ, ಎಂದರೆ ಉಪಾಧಿಯಿಂದ ಮಾತ್ರ ಆಕಾಶಕ್ಕೆ ಭೇದವಲ್ಲದೇ ವಾಸ್ತವವಾಗಿಲ್ಲವೋ, ಹಾಗೆಯೇ ಜೀವಾತ್ಮ ಪರಮೇಶ್ವರರಿಗೂ ಭೇದವು ಉಪಾಧಿಯಿಂದ ಮಾತ್ರ ಕಲ್ಪಿತವಲ್ಲದೇ ವಾಸ್ತವವಾಗಿ ಭೇದವಿಲ್ಲವು. ॥೧೦॥

ಯಥಾ ಜೀವಬಹುತ್ವಂ ತು ಕಲ್ಪಿತಂ ಮುನಿಪುಂಗವಾಃ ।
ತಥಾ ಪರ ಬಹುತ್ವಂ ಚ ಕಲ್ಪಿತಂ ನ ಸ್ವಭಾವತಃ ॥೧೧॥

ಯಥೋಽಚ್ಚಾವಚ ಭಾವಸ್ತು ಜೀವಭೇದೇ ತು ಕಲ್ಪಿತಃ ।
ತಥೋಽಚ್ಚಾವಚ ಭಾವಶ್ಚ ಪರಭೇದೇ ಚ ಕಲ್ಪಿತಃ ॥೧೨॥

ದೇಹೇಂದ್ರಿಯಾದಿಸಂಘಾತವಾಸನಾಭೇದ ಭೇದಿತಾ ।
ಅವಿದ್ಯಾ ಜೀವಭೇದಸ್ಯ ಹೇತುಃ ನಾನ್ಯಃ ಪ್ರಕೀರ್ತಿತಃ ॥೧೩॥

ಗುಣಾನಾಂ ವಾಸನಾಭೇದ ಭೇದಿತಾ ಯಾ ದ್ವಿಜರ್ಷಭಾಃ ।
ಮಾಯಾ ಸಾ ಪರಭೇದಸ್ಯ ಹೇತುರ್ನಾನ್ಯಃ ಪ್ರಕೀರ್ತಿತಃ ॥೧೪॥

ಯಸ್ಯ ಮಾಯಾ ಗತಂ ಸತ್ವಂ ಶರೀರಂ ಸ್ಯಾತ್ತಮೋಗುಣಃ ।
ಸಂಹಾರಾಯ ತ್ರಿಮೂರ್ತೀನಾಂ ಸ ರುದ್ರಃ ಸ್ಯಾನ್ನ ಚಾಪರಃ ॥೧೫॥

ಎಲೈ ಮುನಿಶ್ರೇಷ್ಠರೇ, ಜೀವರಲ್ಲಿ ಹೇಗೆ ನಾನಾತ್ವವು ಕಲ್ಪಿತವೋ ಹಾಗೆಯೇ ಪರನಾದ ಈಶ್ವರನಲ್ಲಿಯೂ ಬಹುತ್ವವು ಕಲ್ಪಿತವಲ್ಲದೇ ವಾಸ್ತವವಲ್ಲವು. ಜೀವರ ಭೇದದಲ್ಲಿ ಹೇಗೆ ಉಚ್ಚನೀಚಭಾವವು ಕಲ್ಪಿತವೋ ಹಾಗೆ ಈಶ್ವರ, ಬ್ರಹ್ಮಾ, ವಿಷ್ಣು, ರುದ್ರ ಎಂದು ಭೇದವು ಕಲ್ಪಿತವಾದದ್ದೇ ಆಗಿ ತೋರುತ್ತಿರುತ್ತದೆ. ॥೧೧-೧೨॥

ಈ ಜೀವಭೇದಕ್ಕೆ ಶರೀರೇಂದ್ರಿಯಗಳೇ ಮೊದಲಾದ ಸಮೂಹಗಳ ಸಂಸ್ಕಾರ ಭೇದಭಿನ್ನವಾದ ಅವಿದ್ಯೆರೂಪಭೇದಗಳೇ ತಾರತಮ್ಯಕ್ಕೆ ಕಾರಣವಲ್ಲದೇ ಬೇರೆಕಾರಣವಿಲ್ಲವು. ॥೧೩॥

ಬ್ರಾಹ್ಮಣಶ್ರೇಷ್ಠರೇ, ಸತ್ವರಜಸ್ತಮೋಗುಣಗಳ ಪರಿಣಾಮಭೇದದಿಂದುಂಟಾದ ವಾಸನಾಭೇದಭಿನ್ನವಾದ ಯಾವ ಮಾಯೆಯುಂಟೋ ಅದು ಪರಭೇದಕ್ಕೆ ಎಂದರೆ ಈಶ್ವರ, ಬ್ರಹ್ಮಾ, ವಿಷ್ಣು, ರುದ್ರ, ಹಿರಣ್ಯಗರ್ಭ, ವಿರಾಟ್ ಮುಂತಾದ ಭೇದಕ್ಕೆ ಕಾರಣವಲ್ಲದೇ ಬೇರೆಯಲ್ಲವು. ॥೧೪॥

ತ್ರಿಮೂರ್ತಿಗಳೊಳಗೆ ಮಾಯಾಗತ ಸತ್ವವೇ ಯಾರ ಶರೀರವೋ, ಸಂಹಾರ ಕಾರ್ಯಕ್ಕೋಸ್ಕರ ತಮಸ್ಸೇ ಯಾರಿಗೆ ಗುಣವೋ ಆತನೇ ರುದ್ರನಲ್ಲದೇ ಬೇರೆ ಯಲ್ಲವು. ॥೧೫॥

ತಥಾ ಯಸ್ಯ ತಮಸ್ಸಾಕ್ಷಾಚ್ಛರೀರಂ ಸಾತ್ವಿಕೋ ಗುಣಃ ।
ಪಾಲನಾಯ ತ್ರಿಮೂರ್ತೀನಾಂ ಸ ವಿಷ್ಣುಸ್ಸ್ಯಾನ್ನ ಚಾಪರಃ ॥೧೬॥

ರಜೋ ಯಸ್ಯ ಶರೀರಂ ಸ್ಯಾತ್ತ್ರದೇವೋತ್ಪಾದನಾಯ ಚ ।
ತ್ರಿಮೂರ್ತೀನಾಂ ಸ ವೈ ಬ್ರಹ್ಮಾ ಭವೇದ್ವಿಪ್ರಾ ನ ಚಾಪರಃ ॥೧೭॥

ರುದ್ರಸ್ಯ ವಿಗ್ರಹಂ ಶುಕ್ಲಂ ಕೃಷ್ಣಂ ವಿಷ್ಣೋಶ್ಚ ವಿಗ್ರಹಂ ।
ಬ್ರಹ್ಮಣೋ ವಿಗ್ರಹಂ ರಕ್ತಂ ಚಿಂತಯೇದ್ಭುಕ್ತಿಮುಕ್ತಯೇ ॥೧೮॥

ಶೌಕ್ಲ್ಯಂ ಸತ್ವ ಗುಣಾಜ್ಜಾತಂ ರಾಗೋ ಜಾತೋ ರಜೋಗುಣಾತ್ ।
ಕಾರ್ಷ್ಣ್ಯಂ ತಮೋಗುಣಾಜ್ಜಾತಮಿತಿ ವಿದ್ಯಾತ್ಸಮಾಸತಃ ॥೧೯॥

ಪರತತ್ತ್ವೈಕತಾ ಬುದ್ಧ್ಯಾ ಬ್ರಹ್ಮಾಣಂ ವಿಷ್ಣುಮೀಶ್ವರಂ ।
ಪರತತ್ತ್ವತಯಾ ವೇದಾ ವದಂತಿ ಸ್ಮೃತಯೋಽಪಿ ಚ ॥೨೦॥

ಪುರಾಣಾನಿ ಸಮಸ್ತಾನಿ ಭಾರತ ಪ್ರಮುಖಾನ್ಯಪಿ ।
ಪರತತ್ತ್ವೈಕತಾ ಬುದ್ಧ್ಯಾ ತಾನ್ ಪರಂ ಪ್ರವದಂತಿ ಚ ॥೨೧॥

ಬ್ರಾಹ್ಮಣರೇ, ತ್ರಿಮೂರ್ತಿಗಳೊಳಗೆ ಯಾರ ಶರೀರವು ತಮೋಗುಣವೋ, ಪಾಲನೆಗೆ ಸತ್ವವೇ ಗುಣವಾಗಿದೆಯೋ, ಅವನೇ ವಿಷ್ಣುವು. ಹಾಗೆಯೇ ಯಾರ ಶರೀರವು ರಜಸ್ಸೋ, ಸೃಷ್ಟಿಗೋಸ್ಕರವಾಗಿ ಅದೇ ಗುಣವೋ, ಅವನೇ ಬ್ರಹ್ಮನು. ಬೇರೆಯವರಾಗುವುದಿಲ್ಲವು. ॥೧೬-೧೭॥

ಯಾವ ಕಾರಣದಿಂದ ಈ ಜಗತ್ತೆಂಬ ಕಪಟನಾಟಕಕ್ಕೋಸ್ಕರ ರುದ್ರ ವಿಷ್ಣು ಬ್ರಹ್ಮರು ಸತ್ವರಜಸ್ತಮೋಮೂರ್ತಿಗಳೋ, ಆ ಕಾರಣದಿಂದ ಈ ಸಂಸಾರದ ಭೋಗಗಳನ್ನೂ, ಹಾಗೆಯೇ ಮುಕ್ತಿಯನ್ನೂ ಹೊಂದಲೋಸುಗ ರುದ್ರನ ವಿಗ್ರಹವನ್ನು (ದೇಹವನ್ನು) ಶುಕ್ಲವಾದದ್ದನ್ನಾಗಿಯೂ, ವಿಷ್ಣುವಿನ ದೇಹವನ್ನು ಕಪ್ಪಾದದ್ದನ್ನಾಗಿಯೂ, ಬ್ರಹ್ಮನ ಶರೀರವನ್ನು ಕೆಂಪಾದದ್ದನ್ನಾಗಿಯೂ ಧ್ಯಾನಿಸಬೇಕು. ॥೧೮॥

ಸತ್ವಗುಣದಿಂದ ಶೌಕ್ಲ್ಯವೂ (ಶುಭ್ರತೆಯೂ), ರಜೋಗುಣದಿಂದ ರಾಗವೂ, ತಮೋಗುಣದಿಂದ ಕಪ್ಪೂ ಉಂಟಾಯಿತೆಂದು ತಿಳಿಯಬೇಕು. ಮೊದಲೇ ಈ ಕ್ರಮವನ್ನು ಒಟ್ಟಿನಲ್ಲಿ ನಿರೂಪಿಸಲಾಗಿದೆ. ॥೧೯॥

ಪರತತ್ತ್ವದ ಏಕತ್ವ ಎಂದರೆ ಭೇದವಿಲ್ಲದಿರುವಿಕೆಯ ಭಾವನೆಯಿಂದಲೇ, ಬ್ರಹ್ಮಾ ವಿಷ್ಣು ಮಹೇಶ್ವರನನ್ನು ಪರತತ್ತ್ವರೂಪದಿಂದಲೇ ವೇದಗಳೂ ಸ್ಮೃತಿಗಳೂ,

ಬ್ರಹ್ಮವಿಷ್ಣ್ವಾದಿರೂಪೇಣ ಕೇವಲಂ ಮುನಿಪುಂಗವಾಃ ।
ಬ್ರಹ್ಮವಿಷ್ಣ್ವಾದಯಸ್ತ್ವೇವ ನ ಪರಂ ತತ್ತ್ವಮಾಸ್ತಿಕಾಃ ॥೨೨॥

ತಥಾಽಪಿ ರುದ್ರಸ್ಸರ್ವೇಷಾಮುತ್ಕೃಷ್ಟಃ ಪರಿಕೀರ್ತಿತಃ ।
ಸ್ವಶರೀರತಯಾ ಯಸ್ಮಾನ್ಮನುತೇ ಸತ್ತ್ವಮುತ್ತಮಂ ॥೨೩॥

ರಜಸಸ್ತಮಸಃ ಸತ್ತ್ವಮುತ್ಕೃಷ್ಟಂ ಹಿ ದ್ವಿಜೋತ್ತಮಾಃ ।
ಸತ್ತ್ವಾತ್ಸುಖಂ ಚ ಜ್ಞಾನಂ ಚ ಯತ್ಕಿಂಚಿದಪರಂ ಪರಂ ॥೨೪॥

ಮಹಾಭಾರತವೇ ಮೊದಲಾದ ಸಮಸ್ತ ಪುರಾಣಗಳೂ ಅಭೇದರೂಪದಿಂದಲೇ ಆ ಮೂವರನ್ನೂ ಪರ (ಶ್ರೇಷ್ಠ ಅಥವಾ ಈಶ್ವರ) ರೆಂಬುದಾಗಿಯೂ ಸಾರುತ್ತವೆ. ॥೨೦-೨೧॥

ಮುನಿಪುಂಗವರೇ, ಬ್ರಹ್ಮಾ, ವಿಷ್ಣು ಮೊದಲಾದ ರೂಪದಿಂದ ಮಾತ್ರವೇ ಬ್ರಹ್ಮ ವಿಷ್ಣು ಮೊದಲಾದ ಭೇದವಲ್ಲದೆ, ಎಲೌ ಆಸ್ತಿಕರೇ, ಬೇರೆಯ ಭೇದವಿಲ್ಲವು. ಎಂದರೆ ತ್ರಿಮೂರ್ತಿಗಳಿಗೆ ಎರಡು ರೂಪಗಳಿವೆಯೆಂಬುದು ಶಾಸ್ತ್ರಸಿದ್ಧಾಂತವು. ಅವುಗಳಲ್ಲಿ ಅನಾವೃತ (ಆವರಣವಿಲ್ಲದ) ಜ್ಞಾನವುಳ್ಳೋಣದರಿಂದ ಅವರಿಗೆ ಪರತತ್ತ್ವವೆಂಬ ರೂಪವೂ, ಬ್ರಹ್ಮಾ ವಿಷ್ಣು ಮಹೇಶ್ವರರೆಂಬ ಆವರಣಜ್ಞಾನದಿಂದ ಆಯಾಯ ವಿಶೇಷ ರೂಪಗಳೂ ಮತ್ತು ಅಪರತತ್ತ್ವವೆಂಬ ರೂಪವೂ ಉಂಟಾಯಿತು. ಮೊದಲನೆಯದರಲ್ಲಿ ಭೇದವಿಲ್ಲವೆಂದೂ, ಏಕರೂಪವೇ ಎಂದೂ, ಎರಡನೆಯದರಲ್ಲಿ ಮಾತ್ರ ಉಪಾಧಿಗತವಾದ ಭೇದವೆಂದೂ ವ್ಯವಸ್ಥೆಯಾದಂತಾಯ್ತು. ॥೨೨॥

ಈ ಗುಣಮೂರ್ತಿಗಳಿಗೆ ಪರತತ್ತ್ವವೆಂಬುದು ಸಮಾನವಾಗಿದ್ದರೂ ಎಲ್ಲರಿಗಿಂತಲೂ ಈಶ್ವರನು ಉತ್ಕೃಷ್ಟನೆಂದು ಹೇಳಲ್ಪಟ್ಟಿದ್ದಾನೆ. ಅದಕ್ಕೆ ಕಾರಣವೂ ಕೂಡ ಉತ್ತಮವಾದ ಸತ್ತ್ವವನ್ನು ತನ್ನ ಶರೀರವನ್ನಾಗಿ ಭಾವಿಸಿರುವುದೇ ಆಗಿರುತ್ತದೆ. ॥೨೩॥

ಎಲೌ ಬ್ರಾಹ್ಮಣಶ್ರೇಷ್ಠರೇ, ರಜಸ್ಸು ಮತ್ತು ತಮಸ್ಸಿಗಿಂತಲೂ ಸತ್ತ್ವವು ಶ್ರೇಷ್ಠವಾದುದಷ್ಟೇ. ಯಾವ ಒಂದು ಸುಖವೂ ಮತ್ತು ಜ್ಞಾನವೂ, ಅಪರವೂ ಮತ್ತು ಪರವೂ ಸಹ, ಸತ್ತ್ವದ ದೆಸೆಯಿಂದಲೇ ಉಂಟಾಗತಕ್ಕದ್ದು. ॥೨೪॥

ಪರತತ್ತ್ವಪ್ರಕಾಶಸ್ತು ರುದ್ರಸ್ಯೈವ ಮಹತ್ತರಃ ।
ಬ್ರಹ್ಮವಿಷ್ಣ್ವಾದಿದೇವಾನಾಂ ನ ತಥಾ ಮುನಿಪುಂಗವಾಃ ॥೨೫॥

ಪರತತ್ತ್ವತಯಾ ರುದ್ರಃ ಸ್ವಾತ್ಮಾನಂ ಮನುತೇ ಭೃಶಂ ।
ಪರತತ್ವಪ್ರಕಾಶೇನ ನ ತಥಾ ದೇವತಾಂತರಂ ॥೨೬॥

ಹರ ಬ್ರಹ್ಮಾದಿ ರೂಪೇಣ ಸ್ವಾತ್ಮಾನಂ ಮನ್ವತೇ ಭೃಶಮ್ ।
ಹರ ಬ್ರಹ್ಮಾದಯೋ ದೇವಾ ನ ತಥಾ ರುದ್ರ ಆಸ್ತಿಕಾಃ ॥೨೭॥

ರುದ್ರಃ ಕಥಂ ಚಿತ್ಕಾರ್ಯಾರ್ಥಂ ಮನುತೇ ರುದ್ರರೂಪತಃ ।
ನ ತಥಾ ದೇವತಾಃ ಸರ್ವಾ ಬ್ರಹ್ಮಸ್ಫೂರ್ತ್ಯಲ್ಪತಾ ಬಲಾತ್ ॥೨೮॥

ಬ್ರಹ್ಮವಿಷ್ಣ್ವಾದಯೋ ದೇವಾಃ ಸ್ವಾತ್ಮಾನಂ ಮನ್ವತೇಽಂಜಸಾ ।
ನ ಕಶ್ಚಿತ್ತತ್ತ್ವರೂಪೇಣ ನ ತಥಾ ರುದ್ರ ಆಸ್ತಿಕಾಃ ॥೨೯॥

ಮುನಿಪುಂಗವರೇ, ಈಶ್ವರನಲ್ಲಿ ಪರತತ್ತ್ವದಪ್ರಕಾಶವೇ ಶ್ರೇಷ್ಠವಾದದ್ದು. ಬ್ರಹ್ಮ, ವಿಷ್ಣು ಮೊದಲಾದವರದು ಹಾಗಿಲ್ಲವು. ॥೨೫॥

ರುದ್ರನು ಸ್ವಾತ್ಮವನ್ನು ಪರತತ್ತ್ವಭಾವದಿಂದ ಚೆನ್ನಾಗಿ ಭಾವಿಸಿರುತ್ತಾನೆ. ಪರತತ್ತ್ವಪ್ರಕಟನಭಾವದಿಂದ ಬೇರೆಯ ದೇವತೆಯು ಹಾಗಿಲ್ಲ. ॥೨೬॥

ಹರಿಬ್ರಹ್ಮಾದಿ ದೇವತೆಗಳು ಸ್ವಾತ್ಮನನ್ನು ಹರಿಬ್ರಹ್ಮಾದಿರೂಪದಿಂದ ಚೆನ್ನಾಗಿ ಭಾವಿಸಿರುತ್ತಾರೆ. ಎಲೌ ಆಸ್ತಿಕರೇ, ರುದ್ರನು ಹಾಗಲ್ಲ. ಅವನು ಪರತತ್ತ್ವರೂಪದಿಂದ ಪ್ರಕಾಶಿತನಾಗಿರುತ್ತಾನೆ. ॥೨೭॥

ಹರಿಬ್ರಹ್ಮರಿಗೆ ಹೇಗೆ ಹರಿಬ್ರಹ್ಮರೂಪತ್ವಾಭಿಮಾನವೋ ಹಾಗೆ ರುದ್ರನಿಗೆ ರುದ್ರತ್ವಾಭಿಮಾನವಿಲ್ಲವು. ಮತ್ತೇನೆಂದರೆ ಸಂಹಾರಕಾರ್ಯನಿರ್ವಾಹಕ್ಕೋಸ್ಕರ ಅತಿ ಪ್ರಯತ್ನದಿಂದ ತನ್ನನ್ನು ರುದ್ರರೂಪದಿಂದ ಭಾವಿಸಿಕೊಳ್ಳುತ್ತಾನೆಯೇ ಹೊರತು, ಸರ್ವದಾ ತನ್ನನ್ನು ಪರಬ್ರಹ್ಮರೂಪನೆಂದು ತಿಳಿದಿರುತ್ತಾನೆ. ಆದರೆ ಇತರ ಎಲ್ಲಾ ದೇವತೆಗಳೂ ಹಾಗಲ್ಲ. ಏಕೆಂದರೆ ಅವರುಗಳಿಗೆ ಆ ಬ್ರಹ್ಮಸ್ಫೂರ್ತಿಯು ಅತ್ಯಲ್ಪವಾಗಿರುತ್ತದೆ. ॥೨೮॥

ಆಸ್ತಿಕರೇ, ಬ್ರಹ್ಮ ವಿಷ್ಣು ಮುಂತಾದ ದೇವತೆಗಳು ಸ್ವಾತ್ಮನನ್ನು ಬೇಗನೆ ಬ್ರಹ್ಮ ವಿಷ್ಣುರೂಪದಿಂದ ಭಾವಿಸಿಕೊಳ್ಳುತ್ತಾರೆ. ಯಾವನೊಬ್ಬನೂ ತನ್ನನ್ನು

ಬ್ರಹ್ಮವಿಷ್ಣ್ವಾದಯೋ ದೇವಾಃ ಸ್ವಾತ್ಮಾನಂ ಮನ್ವತೇಽಂಜಸಾ ।
ಕಥಂಚಿತ್‌ತತ್ವರೂಪೇಣ ನ ತಥಾ ರುದ್ರ ಆಸ್ತಿಕಾಃ ॥೩೦॥

ತತ್ತ್ವಬುದ್ಧಿಃ ಸ್ವತಃ ಸಿದ್ಧಾ ರುದ್ರಸ್ಯಾಸ್ಯ ತಪೋಧನಾಃ ।
ಹರಿಬ್ರಹ್ಮಾದಿ ಬುದ್ಧಿಸ್ತು ತೇಷಾಂ ಸ್ವಾಭಾವಿಕೀ ಮತಾ ॥೩೧॥

ಹರಿ ಬ್ರಹ್ಮಾದಿ ದೇವಾನ್ ಯೇ ಪೂಜಯಂತಿ ಯಥಾಬಲಂ ।
ಅಚಿರಾನ್ನ ಪರಪ್ರಾಪ್ತಿಸ್ತೇಷಾಮಸ್ತಿ ಕ್ರಮೇಣ ಹಿ ॥೩೨॥

ರುದ್ರಂ ಯೇ ವೇದವಿಚ್ಛ್ರೇಷ್ಠಾಃ ಪೂಜಯಂತಿ ಯಥಾಬಲಂ ।
ತೇಷಾಮಸ್ತಿ ಪರಪ್ರಾಪ್ತಿರಚಿರಾನ್ನ ಕ್ರಮೇಣ ತು ॥೩೩॥

ಪರಮಾರ್ಥರೂಪದಿಂದ ಭಾವಿಸುವುದಿಲ್ಲ. ಈಶ್ವರನು ಮಾತ್ರ ಹಾಗಲ್ಲ. ಪರರೂಪದಿಂದಲೇ ತನ್ನನ್ನು ತಿಳಿಯುತ್ತಿರುತ್ತಾನೆ. ॥೨೯॥

ಆಸ್ತಿಕರೇ, ಬ್ರಹ್ಮ ವಿಷ್ಣ್ವಾದಿ ದೇವತೆಗಳು ಸ್ವಾತ್ಮವನ್ನು ಅಲ್ಪಕಾಲ ಮಾತ್ರ ಅತಿ ಪ್ರಯಾಸದಿಂದ ಪರತತ್ತ್ವರೂಪದಿಂದ ಭಾವಿಸಿಕೊಳ್ಳುತ್ತಾರೆ. ಈಶ್ವರನು ಮಾತ್ರ ಹಾಗಲ್ಲವು. ಏಕೆಂದರೆ, ಯಾವಾಗಲೂ ಅನಾವೃತವಾಗಿರುವ ಚಿತ್ತತ್ವದಿಂದ ಪ್ರಯತ್ನವಿಲ್ಲದೇ ಸರ್ವದಾ ಪರತತ್ತ್ವರೂಪದಿಂದಲೇ ತನ್ನನ್ನು ತಿಳಿಯುತ್ತಾನೆ. ॥೩೦॥

ಎಲೌ ತಪೋಧನರೇ, ಈ ರುದ್ರನಿಗೆ ತಾನು ಪರತತ್ತ್ವವೆಂಬ ಬುದ್ಧಿಯು ಸ್ವಭಾವಸಿದ್ಧವಾಗಿದೆ. ಉಳಿದವರಿಗೆ ತಾವು ಹರಿ ಬ್ರಹ್ಮಾದಿಗಳೆಂಬ ಬುದ್ಧಿಯು ಸ್ವಾಭಾವಿಕವಾಗಿದೆ. ॥೩೧॥

ಹರಿ ಬ್ರಹ್ಮಾದಿಗಳನ್ನು ಯಾರು ತಮ್ಮ ಶಕ್ತಿಗೆ ಅನುಸಾರವಾಗಿ ಉಪಾಸನೆ ಮಾಡುತ್ತಾರೋ ಅವರಿಗೆ ಶೀಘ್ರವಾಗಿ ಪರಪ್ರಾಪ್ತಿಯಿಲ್ಲವು. ಮತ್ತೇನೆಂದರೆ ಕಾಲ ಕ್ರಮದಲ್ಲಿ ಪರಪ್ರಾಪ್ತಿಯು ನಿಶ್ಚಿತವು. ॥೩೨॥

ವೇದಜ್ಞಾನಿಗಳೊಳಗೆ ಶ್ರೇಷ್ಠರೇ, ಯಾರು ಈಶ್ವರನನ್ನು ತಮ್ಮ ಶಕ್ತ್ಯನುಸಾರವಾಗಿ ಪೂಜಿಸುತ್ತಾರೋ ಅವರಿಗೆ ಶೀಘ್ರದಲ್ಲಿಯೇ ಪರಪ್ರಾಪ್ತಿಯಲ್ಲದೇ ಕ್ರಮೇಣ ಸಾವಕಾಶವಾಗಿ ಅಲ್ಲವು. ॥೩೩॥

ರುದ್ರಾಕಾರತಯಾ ರುದ್ರೋ ವರಿಷ್ಠೋ ದೇವತಾಂತರಾತ್ ।
ಇತಿ ನಿಶ್ಚಯಬುದ್ಧಿಸ್ತು ನರಾಣಾಂ ಮುಕ್ತಿದಾಯಿನೀ ॥೩೪॥

ಗುಣಾಭಿಮಾನಿನೋ ರುದ್ರಾದ್ಧರಿ ಬ್ರಹ್ಮಾದಿ ದೇವತಾಃ ।
ವರಿಷ್ಠಾ ಇತಿ ಬುದ್ಧಿಸ್ತು ಸತ್ಯಂ ಸಂಸಾರಕಾರಣಂ ॥೩೫॥

ಪರತತ್ತ್ವಾದಪಿ ಶ್ರೇಷ್ಠೋ ರುದ್ರೋ ವಿಷ್ಣುಃ ಪ್ರಜಾಪತಿ(ಪಿತಾಮಹ)ಃ ।
ಇತಿ ನಿಶ್ಚಯಬುದ್ಧಿಸ್ತು ಸತ್ಯಂ ಸಂಸಾರಕಾರಣಮ್ ॥೩೬॥

ರುದ್ರೋ ವಿಷ್ಣುಃ ಪ್ರಜಾನಾಥಃ ಸ್ವರಾಟ್ ಸಮ್ರಾಟ್ ಪುರಂದರಃ ।
ಪರತತ್ತ್ವಮಿತಿ ಜ್ಞಾನಂ ನರಾಣಾಂ ಮುಕ್ತಿಕಾರಣಮ್ ॥೩೭॥

ಅಮಾತ್ಯೇ ರಾಜಬುದ್ಧಿಸ್ತು ನ ದೋಷಾಯ ಫಲಾಯ ಹಿ ।
ತಸ್ಮಾದ್ಬ್ರಹ್ಮಮತಿರ್ಮುಖ್ಯಾ ಸರ್ವತ್ರ ನ ಹಿ ಸಂಶಯಃ ॥೩೮॥

ರುದ್ರಸ್ವರೂಪವುಳ್ಳೋಣದರಿಂದಲೇ ರುದ್ರನು ಬೇರೆ ದೇವತೆಗಳಿಗಿಂತಲೂ ಶ್ರೇಷ್ಠನೆಂಬ ಬುದ್ಧಿಯು ನಿಶ್ಚಯವಾಗಿಯೂ ಮನುಷ್ಯರಿಗೆ ಮೋಕ್ಷವನ್ನುಂಟು ಮಾಡತಕ್ಕದ್ದು. ಏಕೆಂದರೆ ರುದ್ರನು ವಿಶಿಷ್ಟವಾದ ಸತ್ತ್ವೋಪಾಧಿಯುಳ್ಳವನು.॥೩೪॥

ಸತ್ತ್ವಾದಿ ಗುಣಾಭಿಮಾನಿಗಳಾದ ಹರಿ ಬ್ರಹ್ಮಾದಿ ದೇವತೆಗಳು ರುದ್ರನಿಗಿಂತಲೂ ಶ್ರೇಷ್ಠರೆಂಬ ಬುದ್ಧಿಯು ನಿಶ್ಚಯವಾಗಿಯೂ ಸಂಸಾರಕ್ಕೆ ಕಾರಣವು. ॥೩೫॥

ಪರತತ್ತ್ವಕ್ಕಿಂತಲೂ ರುದ್ರನಾಗಲೀ, ವಿಷ್ಣುವಾಗಲೀ, ಹಾಗೆಯೇ ಪಿತಾಮಹನಾಗಲೀ ಶ್ರೇಷ್ಠನೆಂಬ ಬುದ್ಧಿಯೂ ನಿಜವಾಗಿ ಸಂಸಾರಕ್ಕೆ ಕಾರಣವು. ॥೩೬॥

ಮನುಷ್ಯರಿಗೆ ರುದ್ರನಾಗಲೀ, ವಿಷ್ಣುವಾಗಲೀ, ಬ್ರಹ್ಮನಾಗಲೀ, ಸ್ವರಾಜನಾಗಲೀ ಸಮ್ರಾಜನಾಗಲೀ ಅಥವಾ ಪುರಂದರನಾಗಲೀ ಪರತತ್ತ್ವವೆಂಬ ಜ್ಞಾನವು ಮೋಕ್ಷಕ್ಕೆ ಕಾರಣವು. ಏಕೆಂದರೆ ನಿಕೃಷ್ಟದಲ್ಲಿ ಉತ್ಕೃಷ್ಟಬುದ್ಧಿಯು ಶ್ರೇಯಸ್ಕರವು. ॥೩೭॥

ಮಂತ್ರಿಯನ್ನೇ ರಾಜನೆಂದು ತಿಳಿಯುವುದು ದೋಷಕ್ಕೆ ಕಾರಣವಾಗುವುದಿಲ್ಲವು. ಮತ್ತೇನೆಂದರೆ ನಿಶ್ಚಯವಾಗಿಯೂ ಅದು ಪ್ರಯೋಜನಕ್ಕೆ ಕಾರಣವಾಗುತ್ತದೆ. ಆದಕಾರಣ ಎಲ್ಲವರಲ್ಲೂ ಬ್ರಹ್ಮನೆಂಬ ಬುದ್ಧಿಯು ಮುಖ್ಯವೆಂಬುದರಲ್ಲಿ ಸಂದೇಹವಿಲ್ಲವು. ಆದರೆ ಉತ್ಕೃಷ್ಟದಲ್ಲಿ ನಿಕೃಷ್ಟಬುದ್ಧಿಯನ್ನಿಡುವುದು ಅಪಾಯಕರವು.॥೩೮॥

ತಥಾಽಪಿ ರುದ್ರೇ ವಿಪ್ರೇಂದ್ರಾಃ ಪರತತ್ತ್ವಮತಿಃ ಭೃಶಮ್ ।
ವರಿಷ್ಠಾ ನ ತಥಾಽನ್ಯೇಷು ಪರಸ್ಫೂರ್ತ್ಯಲ್ಪತಾ ಬಲಾತ್ ॥೩೯॥

ಅಸ್ತಿ ರುದ್ರಸ್ಯ ವಿಪ್ರೇಂದ್ರಾ ಅಂತಸ್ಸತ್ತ್ವಂ ಬಹಿಸ್ತಮಃ ।
ವಿಷ್ಣೋರಂತಸ್ತಮಃ ಸತ್ತ್ವಂ ಬಹಿರಸ್ತಿ ರಜೋಗುಣಃ ॥೪೦॥

ಅಂತರ್ಬಹಿಶ್ಚ ವಿಪ್ರೇಂದ್ರಾ ಅಸ್ತಿ ತಸ್ಯ ಪ್ರಜಾಪತೇಃ ।
ಅತೋಽಪೇಕ್ಷ್ಯ ಗುಣಂ ಸತ್ತ್ವಂ ಮನುಷ್ಯಾ ವಿವದಂತಿ ಚ ॥೪೧॥

ಹರಿಶ್ಶ್ರೇಷ್ಠೋ ಹರಶ್ಶ್ರೇಷ್ಠ ಇತ್ಯಹೋ ಮೋಹವೈಭವಮ್ ।
ಸತ್ತ್ವಾಭಾವಾತ್ಪ್ರಜಾನಾಥಂ ವರಿಷ್ಠಂ ನೈವ ಮನ್ವತೇ ॥೪೨॥

ಅನೇಕಜನ್ಮಸಿದ್ಧಾನಾಂ ಶ್ರೌತಸ್ಮಾರ್ತಾನುವರ್ತಿನಾಮ್ ।
ಹರಃ ಶ್ರೇಷ್ಠೋ ಹರೇಃ ಸಾಕ್ಷಾದಿತಿ ಬುದ್ಧಿಃ ಪ್ರಜಾಯತೇ ॥೪೩॥

ಹಾಗಾದಾಗ್ಯೂ ಈಶ್ವರನಲ್ಲಿ ಎಲೈ ಬ್ರಾಹ್ಮಣಶ್ರೇಷ್ಠರೇ, ಪರತತ್ತ್ವವೆಂಬ ಬುದ್ಧಿಯು ನಿಶ್ಚಯವಾಗಿಯೂ ಶ್ರೇಷ್ಠವಾದದು. ಉಳಿದವರಲ್ಲಿ ಹಾಗಲ್ಲ. ಏಕೆಂದರೆ ಅವರಲ್ಲಿ ಪರತತ್ತ್ವದ ಸ್ಫೂರ್ತಿಯು ಅಲ್ಪತೆಯೇ ಅದಕ್ಕೆ ಕಾರಣವು. ॥೩೯॥

ಎಲೈ ಬ್ರಾಹ್ಮಣೋತ್ತಮರೇ, ರುದ್ರನಿಗೆ ಒಳಗೆ ಸತ್ತ್ವವೂ ಹೊರಗೆ ತಮಸ್ಸೂ ಇದೆ. ವಿಷ್ಣುವಿಗೆ ಒಳಗೆ ತಮಸ್ಸೂ ಹೊರಗೆ ಸತ್ತ್ವವೂ ಇದೆ. ॥೪೦॥

ಬ್ರಾಹ್ಮಣಶ್ರೇಷ್ಠರೇ, ಆ ಬ್ರಹ್ಮನಿಗೆ ಒಳಗೂ ಹೊರಗೂ ರಜೋಗುಣವೇ ಇರುತ್ತದೆ. ಆದುದರಿಂದ ಈ ಸತ್ತ್ವಗುಣವನ್ನು ಅಪೇಕ್ಷಿಸಿಕೊಂಡು ಮನುಷ್ಯರು ತಮ್ಮತಮ್ಮಲ್ಲಿ, ॥೪೧॥

ಹರಿಯೇ ಶ್ರೇಷ್ಠನೆಂದೂ, ಹರನೇ ಶ್ರೇಷ್ಠನೆಂದೂ ವಿವಾದಮಾಡುತ್ತಿರುತ್ತಾರೆ. ಆಹೋ, ಇದು ಏನು ಭ್ರಾಂತಿಯ ವೈಭವವು! ಸತ್ತ್ವಸಂಬಂಧವಿಲ್ಲದೇ ಇರುವುದರಿಂದ ಬ್ರಹ್ಮನನ್ನು ಶ್ರೇಷ್ಠನೆಂದು ಅವರು ಭಾವಿಸುವುದಿಲ್ಲವು. ॥೪೨॥

ಅನೇಕ ಜನ್ಮಗಳಿಂದ ಸಿದ್ಧಿಯನ್ನು ಪಡೆದಿರುವ, ಶ್ರೌತಸ್ಮಾರ್ತ ಧರ್ಮಗಳನ್ನು ಅನುಸರಿಸುವವರಿಗೆ ಮಾತ್ರ ಸಾಕ್ಷಾತ್ತಾದ ಹರನೇ ಹರಿಗಿಂತಲೂ ವಿಶಿಷ್ಟವಾದ ಸತ್ತ್ವೋಪಾಧಿಯುಳ್ಳವನಾದುದರಿಂದ ಉತ್ತಮನೆಂಬ ಬುದ್ಧಿಯುಂಟಾಗುತ್ತದೆ. ॥೪೩॥

ಮಹಾಪಾಪವತಾಂ ನೃಣಾಂ ಹರಿಃ ಶ್ರೇಷ್ಠೋ ಹರಾದಿತಿ ।
ಬುದ್ಧಿರ್ವಿಜಾಯತೇ ತೇಷಾಂ ಸದಾ ಸಂಸಾರ ಏವ ಹಿ ॥೪೪॥

ನಿರ್ವಿಕಲ್ಪೇ ಪರೇ ತತ್ತ್ವೇ ಶ್ರದ್ಧಾ ಯೇಷಾಂ ವಿಜಾಯತೇ ।
ಅಯತ್ನಸಿದ್ಧಾ ಪರಮಾ ಮುಕ್ತಿಸ್ತೇಷಾಂ ನ ಸಂಶಯಃ ॥೪೫॥

ನಿರ್ವಿಕಲ್ಪಂ ಪರಂ ತತ್ತ್ವಂ ನಾಮ ಸಾಕ್ಷಾಚ್ಛಿವಃ ಪರಃ ।
ಸೋಽಯಂ ಸಾಂಬಸ್ತ್ರಿನೇತ್ರಶ್ಚ ಚಂದ್ರಾರ್ಧಕೃತಶೇಖರಃ ॥೪೬॥

ಸ್ವಾತ್ಮತತ್ತ್ವಸುಖಸ್ಫೂರ್ತಿ ಪ್ರಮೋದಾತ್ತಾಂಡವಪ್ರಿಯಃ ।
ರುದ್ರ ವಿಷ್ಣು ಪ್ರಜಾನಾಥೈರುಪಾಸ್ಯೋ ಗುಣಮೂರ್ತಿಭಿಃ ॥೪೭॥

ಮಹಾಪಾಪಗಳನ್ನು ಮಾಡಿರುವ ಮನುಜರಿಗೆ ಮಾತ್ರ ಹರನಿಗಿಂತಲೂ ಹರಿಯು ಶ್ರೇಷ್ಠನೆಂಬುದಾಗಿ ವಿಪರೀತಬುದ್ಧಿಯು ಉಂಟಾಗುತ್ತದೆ. ಅವರಿಗೆ ಎಲ್ಲಾ ಕಾಲದಲ್ಲಿಯೂ ಸಂಸಾರವಲ್ಲದೆ ಬೇರೆ ಇಲ್ಲವು. ॥೪೪॥

ನಿರ್ವಿಕಲ್ಪವಾದ ಪರತತ್ತ್ವದಲ್ಲಿ ಯಾರಿಗೆ ವಿಶೇಷವಾಗಿ ಶ್ರದ್ಧೆಯುಂಟಾಗುತ್ತದೋ ಅವರಿಗೆ ಪ್ರಯತ್ನವಿಲ್ಲದೇ ಪರಮ ಮೋಕ್ಷಪ್ರಾಪ್ತಿಯು ಉಂಟಾಗುತ್ತದೆಂಬುದರಲ್ಲಿ ಸಂಶಯವಿಲ್ಲವು. ॥೪೫॥

ನಿರ್ವಿಕಲ್ಪವಾದ ಪರತತ್ತ್ವವೆಂದರೆ ಪ್ರಸಿದ್ಧನಾದ ಸಾಕ್ಷಾತ್ಪರಶಿವನಲ್ಲದೇ ಬೇರೆಯಲ್ಲವು. ಅಂತಹವನು ಸಾಂಬಶಿವನೂ, ತ್ರಿನೇತ್ರನೂ ಆದ ಚಂದ್ರಾರ್ಧಶೇಖರನು. ಎಂದರೆ ಶಿವನು ತಾನಾಗಿಯೇ ಲೀಲೆಯಿಂದ ತನ್ನ ಶಿವ ಶಕ್ತಿ ಉಭಯ ರೂಪತ್ವವನ್ನು ಪ್ರಕಟಪಡಿಸುವುದಕ್ಕಾಗಿ ಅರ್ಧನಾರೀಶ್ವರ ರೂಪವನ್ನು ಪಡೆದಿರುತ್ತಾನೆ. ಇತರರಾದ ಬ್ರಹ್ಮ ವಿಷ್ಣು ಮುಂತಾದವರು ಅಂತಹ ವಿಶೇಷ ಲಕ್ಷಣದಿಂದ ಕೂಡಿದ ವಿಗ್ರಹವುಳ್ಳವರಾಗಿಲ್ಲವು. ॥೪೬॥

ಸ್ವಾತ್ಮತತ್ತ್ವಾನಂದದ ಸ್ಫೂರ್ತಿಯಿಂದಾದ ಸಂತೋಷದಿಂದ ಶಿವನು ತಾಂಡವದಲ್ಲಿ ಪ್ರೀತಿಯುಳ್ಳವನಾಗುತ್ತಾನೆ. ಗುಣಮೂರ್ತಿಗಳಾದ ರುದ್ರ, ವಿಷ್ಣು, ಬ್ರಹ್ಮ ಇವರಿಂದಲೂ ಶಿವನು ಸೇವಿಸಲ್ಪಡತಕ್ಕವನಾಗಿದ್ದಾನೆ. ॥೪೭॥

ಈದೃಶೀ ಪರಮಾ ಮೂರ್ತಿರ್ಯಸ್ಯಾ ಸಾಧಾರಣೀ ಸದಾ ।
ತದ್ಧಿ ಸಾಕ್ಷಾತ್ಪರಂ ತತ್ತ್ವಂ ನಾಸ್ಯತ್ಸತ್ಯಂ ಮಯೋದಿತಂ ॥೪೮॥

ವಿಷ್ಣುಂ ಬ್ರಹ್ಮಾಣಮನ್ಯಂ ವಾ ಸ್ವಮೋಹಾನ್ಮನ್ವತೇ ಪರಂ ।
ನ ತೇಷಾಂ ಮುಕ್ತಿರೇಷಾಽಸ್ತಿ ತತಸ್ತೇ ನ ಪರಂ ಪದಂ ॥೪೯॥

ತಸ್ಮಾದೇಷಾ ಪರಾ ಮೂರ್ತಿರ್ಯಸ್ಯಾಸಾಧಾರಣೀ ಭವೇತ್ ।
ಸ ಶಿವಃ ಸಚ್ಚಿದಾನಂದಃ ಸಾಕ್ಷಾತ್ತತ್ವಂ ನ ಚಾಪರಃ ॥೫೦॥

ಬ್ರಹ್ಮಾ ವಿಷ್ಣುಶ್ಚ ರುದ್ರಶ್ಚ ವಿಭಕ್ತಾ ಅಪಿ ಪಂಡಿತಾಃ ।
ಪರಮಾತ್ಮ ವಿಭಾಗಸ್ಥಾ ನ ಜೀವವ್ಯೂಹ ಸಂಸ್ಥಿತಾಃ ॥೫೧॥

ಅವಿದ್ಯೋಽಪಾಧಿಕೋ ಜೀವೋ ನ ಮಾಯೋಽಪಾಧಿಕಃ ಖಲು ।
ಮಾಯೋಽಪಾಧಿಕಚೈತನ್ಯಂ ಪರಮಾತ್ಮಾ ಹಿ ನಾಪರಂ ॥೫೨॥

ಈ ಪ್ರಕಾರವಾಗಿರತಕ್ಕ ಸರ್ವಶ್ರೇಷ್ಠವಾದ ಅಸಾಧಾರಣಮೂರ್ತಿಯು ಯಾರಿಗೆ ಎಲ್ಲಾ ಕಾಲದಲ್ಲೂ ಇರುತ್ತದೋ, ಅದೇ ಸಾಕ್ಷಾತ್ತಾದ ಪರತತ್ತ್ವವಲ್ಲದೇ ಬೇರೆಯಲ್ಲವು. ಸತ್ಯವೇ ನನ್ನಿಂದ ಹೇಳಲ್ಪಟ್ಟಿದೆ. ॥೪೮॥

ವಿಷ್ಣುವನ್ನಾಗಲೀ, ಬ್ರಹ್ಮನನ್ನಾಗಲೀ, ಬೇರೆಯವನನ್ನಾಗಲೀ, ತಮ್ಮ ಅಜ್ಞಾನದಿಂದ ಪರನನ್ನಾಗಿ ಯಾರು ಭಾವಿಸುವರೋ ಅವರಿಗೆ ಈ ಮುಕ್ತಿಯು ಉಂಟಾಗಲಾರದು. ಆದ್ದರಿಂದ ಅವರ ಸ್ಥಿತಿಯು ಪರಪದವಲ್ಲವು. ॥೪೯॥

ಆದ್ದರಿಂದ ಅಸಾಧಾರಣವಾದ ಉತ್ಕೃಷ್ಟವಾದ ಶಿವಮೂರ್ತಿಯು ಯಾರಿಗೆ ಇದೆಯೋ ಅವನೇ ಸಾಕ್ಷಾತ್ಸಚ್ಚಿದಾನಂದನಾದ ಶಿವನು ಮತ್ತು ಪರತತ್ತ್ವವು ಬೇರೆಯಲ್ಲವು. ॥೫೦॥

ಪಂಡಿತರೇ, ಬ್ರಹ್ಮಾ, ವಿಷ್ಣು, ರುದ್ರರೆಂದು ವಿಭಾಗಿಸಲ್ಪಟ್ಟವರೂ ಕೂಡ ಪರಮಾತ್ಮನೆಂಬ ತರಗತಿಯ, ಸಾಲಿನ, ವಿಭಾಗಕ್ಕೆ ಸೇರಿದವರೇ ವಿನಾ ಜೀವರ ಸಮೂಹದಲ್ಲಿ ಸೇರಿರತಕ್ಕವರಲ್ಲವು. ಏಕೆಂದರೆ, ॥೫೧॥

ಜೀವನು ಅವಿದ್ಯೆಯನ್ನೇ ಉಪಾಧಿಯಾಗಿ ಉಳ್ಳವನಲ್ಲದೇ ಮಾಯೆಯನ್ನು ಉಪಾಧಿಯಾಗಿ ಉಳ್ಳವನಲ್ಲವಷ್ಟೆ? ಮಾಯೆಯನ್ನು ಉಪಾಧಿಯಾಗಿ ಉಳ್ಳ ಚೈತನ್ಯವು ಪರಮಾತ್ಮನಲ್ಲದೇ ಬೇರೆಯವರಲ್ಲವು. ॥೫೨॥

ಮಾಯಾಕಾರ್ಯ ಗುಣಚ್ಛನ್ನಾ ಬ್ರಹ್ಮವಿಷ್ಣು ಮಹೇಶ್ವರಾಃ ।
ಮಾಯೋಪಾಧಿ ಪರವ್ಯೂಹಾ ನ ಜೀವವ್ಯೂಹಸಂಸ್ಥಿತಾಃ ॥೫೩॥

ಪರಮಾತ್ಮ ವಿಭಾಗತ್ವಂ ಬ್ರಹ್ಮಾದೀನಾಂ ದ್ವಿಜರ್ಷಭಾಃ ।
ಸಮಾನಮಪಿ ರುದ್ರಸ್ತು ವರಿಷ್ಠೋ ನಾತ್ರಸಂಶಯಃ ॥೫೪॥

ಬ್ರಹ್ಮಾ ವಿಷ್ಣುಶ್ಚ ರುದ್ರಸ್ಯ ಸ್ವಾಸಾಧಾರಣರೂಪತಃ ।
ಸ್ವವಿಭೂತ್ಯಾತ್ಮನಾ ಚಾಪಿ ಕುರ್ವಾತೇ ಏವ ಸೇವನಂ ॥೫೫॥

ರುದ್ರಸ್ಸ್ವೇನೈವ ರೂಪೇಣ ವಿಷ್ಣೋಶ್ಚ ಬ್ರಹ್ಮಣಸ್ತಥಾ ।
ಸೇವನಂ ನೈವ ಕುರುತೇ ವಿಭೂತೇ ರ್ವಾ ದ್ವಯೋರಪಿ ॥೫೬॥

ಕೇವಲಂ ಕೃಪಯಾ ರುದ್ರೋ ಲೋಕಾನಾಂ ಹಿತಕಾಮ್ಯಯಾ ।
ಸ್ವವಿಭೂತ್ಯಾತ್ಮನಾ ವಿಷ್ಣೋರ್ಬ್ರಹ್ಮಣಶ್ಚಾಪರಸ್ಯ ಚ ॥೫೭॥

ಮಾಯೆಯ ಕಾರ್ಯಗಳಾದ ಸತ್ತ್ವಾದಿಗುಣಗಳಿಂದಾದ ಉಪಾಧಿಗಳಿಂದ ಆವೃತರಾದ ಬ್ರಹ್ಮಾ-ವಿಷ್ಣು-ಮಹೇಶ್ವರರೂ ಮಾಯೆಯೆಂಬ ಉಪಾಧಿಯುಳ್ಳ ಪರ ವ್ಯೂಹ, ಅಂತರ್ಯಾಮಿ, ಅರ್ಚಾವತಾರ ಮುಂತಾದ ಸಮೂಹದವರಲ್ಲದೇ ಜೀವಸಮೂಹದಲ್ಲಿರತಕ್ಕವರು ಅಲ್ಲವು. ॥೫೩॥

ಎಲೌ ಬ್ರಾಹ್ಮಣಶ್ರೇಷ್ಠರೇ, ಪರಮಾತ್ಮನೆಂಬ ವಿಭಾಗದಲ್ಲಿ ಸೇರುವಿಕೆಯೆಂಬುದು ಬ್ರಹ್ಮಾದಿಗಳಿಗೆ ಸಮಾನವಾಗಿದ್ದರೂ ಈಶ್ವರನು ಮಾತ್ರ ಅತ್ಯಂತ ಶ್ರೇಷ್ಠನೆಂಬುದರಲ್ಲಿ ಸಂದೇಹವಿಲ್ಲವು. ॥೫೪॥

ಬ್ರಹ್ಮನೂ ಮತ್ತು ವಿಷ್ಣುವೂ ಕೂಡ ತಮ್ಮ ವಿಜಾತೀಯ ರೂಪದಿಂದಲೂ, ತಮ್ಮ ಮಹಿಮೆಯಿಂದಲೂ ಮತ್ತು ಅಂಶದಿಂದಲೂ ರುದ್ರನ ಸೇವೆಯನ್ನು ಮಾಡಿಯೇ ಮಾಡುತ್ತಾರೆ. ॥೫೫॥

ರುದ್ರನು ತನ್ನದೇ ಆಗಿರುವ ರೂಪದಿಂದ ವಿಷ್ಣುವಿನ ಮತ್ತು ಬ್ರಹ್ಮನ ಅಥವಾ ಅವರಿಬ್ಬರ ವಿಭೂತಿಯ ಸೇವೆಯನ್ನಾಗಲೀ ಎಂದಿಗೂ ಮಾಡುವವನಲ್ಲವು. ಆದರೂ, ॥೫೬॥

ಎಲೌ ಬ್ರಾಹ್ಮಣರೇ, ಈಶ್ವರನು ಪ್ರಪಂಚಗಳಿಗೆ ಹಿತವಾಗಲೆಂಬ ಅಪೇಕ್ಷೆಯಿಂದ, ದಯಾವಿಶಿಷ್ಟನಾಗಿ ಮಾತ್ರ ಸ್ವಮಹಿಮಾರೂಪದಿಂದ ವಿಷ್ಣುವಿನ, ಬ್ರಹ್ಮನ

ಕರೋತಿ ಸೇವಾಂ ಹೇ ವಿಪ್ರಾಃ ಕದಾಚಿತ್ಸತ್ಯಮೀರಿತಂ ।
ನ ತಥಾ ಬ್ರಹ್ಮಣಾ ವಿಷ್ಣುಃ ನ ಬ್ರಹ್ಮಾ ನ ಪುರಂದರಃ ॥೫೮॥

ಏತಾವನ್ಮಾತ್ರಮಾಲಂಬ್ಯ ರುದ್ರಂ ವಿಷ್ಣುಂ ಪ್ರಜಾಪತಿಂ ।
ಮನ್ಯತೇ ಹಿ ಸಮಂ ಮರ್ತ್ಯಾ ಮಾಯಯಾ ಪರಿಮೋಹಿತಾಃ ॥೫೯॥

ಕೇಚಿದೇಷಾಂ ಮಹಾಯತ್ನಾತ್ಸಾಮ್ಯಂ ವಾಂಛಂತಿ ಮೋಹಿತಾಃ ।
ಹರೇರಜಸ್ಯ ಚೋತ್ಕರ್ಷಂ ಹರಾದ್ವಾಂಛಂತಿ ಕೇಚನ ॥೬೦॥

ರುದ್ರೇಣ ಸಾಮ್ಯಮನ್ಯೇಷಾಂ ವಾಂಛಂತಿ ಚ ವಿಮೋಹಿತಾಃ ।
ತೇ ಮಹಾಪಾತಕೈರ್ಯುಕ್ತಾ ಯಾಸ್ಯಂತಿ ನರಕಾರ್ಣವಂ ॥೬೧॥

ರುದ್ರಾದುತ್ಕರ್ಷಮನ್ಯೇಷಾಂ ಯೇ ವಾಂಛಂತಿ ವಿಮೋಹಿತಾಃ ।
ಪಚ್ಯಂತೇ ನರಕೇ ತೀವ್ರೇ ಸದಾ ತೇ ನ ಹಿ ಸಂಶಯಃ ॥೬೨॥

ಅಥವಾ ಬೇರೊಬ್ಬನ ಸೇವೆಯನ್ನು ಯಾವಾಗಲಾದರೂ ಮಾಡುವುದೂ ಉಂಟು. ನಾನು ಸತ್ಯವನ್ನೇ ಹೇಳುತ್ತೇನೆ. ಹಾಗೆ ವಿಷ್ಣುವು ಬ್ರಹ್ಮನಿಂದಾಗಲೀ, ವಿಷ್ಣುವಿನಿಂದ ಬ್ರಹ್ಮನಾಗಲೀ, ಅಥವಾ ಪುರಂದರನಾಗಲೀ ಪೂಜಿಸಲ್ಪಡುವುದಿಲ್ಲವು. ||೫೭-೫೮||

ಇಷ್ಟನ್ನು ಮಾತ್ರ ಅವಲಂಬಿಸಿ (ಆಶ್ರಯಿಸಿ) ರುದ್ರನನ್ನೂ, ವಿಷ್ಣುವನ್ನೂ, ಮತ್ತು ಬ್ರಹ್ಮನನ್ನು ಸಮಾನರನ್ನಾಗಿ ಮನುಷ್ಯರು ಅಜ್ಞಾನದಿಂದ ಕೂಡಿದವರಾಗಿ ಭಾವಿಸುತ್ತಾರೆ. ||೫೯||

ಅಜ್ಞಾನಮೋಹಿತರಾದ ಕೆಲವರು ಇವರುಗಳಿಗೆ ಮಹಾಕ್ಲೇಶದಿಂದ ಸಾಮ್ಯವನ್ನು (ಸಮಾನತೆಯನ್ನು) ಸಾಧಿಸಲು ಅಪೇಕ್ಷಿಸುತ್ತಾರೆ! ಇನ್ನು ಕೆಲವರು ವಿಷ್ಣುವಿಗೂ ಮತ್ತು ಬ್ರಹ್ಮನಿಗೂ ಹರನಿಗಿಂತ ಉತ್ಕರ್ಷವನ್ನೂ ಅಪೇಕ್ಷಿಸುತ್ತಾರೆ! ||೬೦||

ಮಾಯಾಗ್ರಸ್ತರಾದ ಕೆಲವರು ಬೇರೆ ದೇವತೆಗಳಿಗೂ ಈಶ್ವರನೊಡನೆ ಸಮಾನತೆಯನ್ನು ಅಪೇಕ್ಷಿಸುತ್ತಾರೆ. ಮಹಾಪಾಪಗಳಿಂದ ಕೂಡಿರುವ ಅವರು ನರಕಸಮುದ್ರವನ್ನೇ ಸೇರುತ್ತಾರೆ. ||೬೧||

ಮೋಹಿತರಾದ ಯಾರು ಬೇರೆಯ ದೇವತೆಗಳಿಗೆ ರುದ್ರನಿಗಿಂತಲೂ ಉತ್ಕರ್ಷವನ್ನು ಅಪೇಕ್ಷಿಸುತ್ತಾರೋ ಅವರು ಕಠಿಣವಾದ ನರಕದಲ್ಲಿ ಎಲ್ಲಾ ಕಾಲದಲ್ಲಿಯೂ ಬೇಯಿಸಲ್ಪಡುತ್ತಾರೆಂಬುದರಲ್ಲಿ ಸಂಶಯವಿಲ್ಲವು. ||೬೨||

ಕೇಚಿದದ್ವೈತಮಾಶ್ರಿತ್ಯ ಬೈಡಾಲವ್ರತಿಕಾ ನರಾಃ ।
ಸಾಮ್ಯಂ ರುದ್ರೇಣ ಸರ್ವೇಷಾಂ ಪ್ರವದಂತಿ ವಿಮೋಹಿತಾಃ ॥೬೩॥

ದೇಹಾಕಾರೇಣ ಚೈಕತ್ವೇ ಸತ್ಯಪಿ ದ್ವಿಜಪುಂಗವಾಃ ।
ಶಿರಸಾ ಪಾದಯೋಸ್ಸಾಮ್ಯಂ ಸರ್ವಥಾ ನಾಸ್ತಿ ಹಿ ದ್ವಿಜಾಃ ॥೬೪॥

ಯಥಾಽಸ್ಯಾಪಾನಯೋಃ ಸಾಮ್ಯಂ ಛಿದ್ರತೋಽಪಿ ನ ವಿದ್ಯತೇ ।
ತಥೈಕತ್ವೇ ಚ ಸರ್ವೇಷಾಂ ರುದ್ರಸಾಮ್ಯಂ ನ ವಿದ್ಯತೇ ॥೬೫॥

ವಿಷ್ಣುಪ್ರಜಾಪತೀಂದ್ರಾಣಾಮುತ್ಕರ್ಷಂ ಶಂಕರಾದಪಿ ।
ಪ್ರವದಂತೀವ ವಾಕ್ಯಾನಿ ಶ್ರೌತಾನಿ ಪ್ರತಿಭಾಂತಿ ಚ ॥೬೬॥

ಪೌರಾಣಿಕಾನಿ ವಾಕ್ಯಾನಿ ಸ್ಮಾರ್ತಾನಿ ಪ್ರತಿಭಾಂತಿ ಚ ।
ತಾನಿ ತತ್ತ್ವಾತ್ಮನಾ ತೇಷಾಮುತ್ಕರ್ಷಂ ಪ್ರವದಂತಿ ಹಿ ॥೬೭॥

ಮಾರ್ಜಾರವ್ರತ (ಬೆಕ್ಕಿನಸನ್ಯಾಸ)ವನ್ನು ಆಶ್ರಯಿಸಿರುವ ಕೆಲವರು ಅದ್ವೈತವನ್ನವಲಂಬಿಸಿ ಸಕಲರಿಗೂ ಈಶ್ವರನೊಡನೆ ಸಮಾನತೆಯನ್ನು ಮೋಹಿತರಾಗಿ ಪ್ರಕಾಶಿಸುತ್ತಾರೆ. ||೬೩||

ಎಲೌ ಬ್ರಾಹ್ಮಣಶ್ರೇಷ್ಠರೇ, ಶರೀರರೂಪವೆಂಬ ಅಭಿಪ್ರಾಯದಿಂದ ಒಂದೆಂಬ ಭಾವನೆಯಿದ್ದರೂ, ಬ್ರಾಹ್ಮಣರೇ, ಕಾಲುಗಳಿಗೆ ತಲೆಯೊಡನೆ ಸಮಾನತೆಯು ನಿಜವಾಗಿಯೂ ಇಲ್ಲವಷ್ಟೇ! ||೬೪||

ರಂಧ್ರವುಳ್ಳಮಾತ್ರಕ್ಕೆ ಮುಖಕ್ಕೂ ಮತ್ತು ಅಪಾನಕ್ಕೂ ಹೇಗೆ ಸಾಮ್ಯವಿಲ್ಲವೋ ಹಾಗೆ, ಎಲ್ಲದರಲ್ಲಿಯೂ ಏಕತ್ವವೆಂಬುದಿದ್ದರೂ ಎಲ್ಲರಿಗೂ ರುದ್ರನೊಡನೆ ಸಮಾನತೆಯೆಂಬುದಿಲ್ಲವು. ||೬೫||

ಕೆಲವು ವೇದವಾಕ್ಯಗಳೂ ಕೂಡ ವಿಷ್ಣು, ಬ್ರಹ್ಮ ಮತ್ತು ಇಂದ್ರರಿಗೆ ಶಂಕರನಿಗಿಂತಲೂ ಉತ್ಕರ್ಷವನ್ನು ಹೇಳುತ್ತವೆಯೋ ಎನ್ನುವ ಹಾಗೆ ತೋರುತ್ತವೆ. ||೬೬||

ಪುರಾಣಸಂಬಂಧವಾದ ವಾಕ್ಯಗಳೂ ಸ್ಮೃತಿಯ ವಾಕ್ಯಗಳೂ ಹಾಗೆಯೇ ತೋರಿಬರುತ್ತವೆ. ಆದರೆ ಆ ವಾಕ್ಯಗಳು ಆಯಾಯ ದೇವತೆಗಳ ಉತ್ಕರ್ಷವನ್ನು ಪರತತ್ತ್ವವೆಂಬ ಭಾವನೆಯಿಂದ ಹೇಳುವುದಕ್ಕೆ ಮಾತ್ರ ಹೊರಟಿರುವವಲ್ಲದೇ ಬೇರೆಯಲ್ಲವು. ||೬೭||

ವಿಷ್ಣು ಪ್ರಜಾಪತೀಂದ್ರೇಭ್ಯೋ ರುದ್ರಸ್ಯೋತ್ಕರ್ಷವಾಸ್ತಿಕಾಃ ।
ವದಂತಿ ಯಾನಿ ವಾಕ್ಯಾನಿ ತಾನಿ ಸರ್ವಾಣಿ ಹೇ ದ್ವಿಜಾಃ ॥೬೮॥

ಪ್ರವದಂತಿ ಸ್ವರೂಪೇಣ ತಥಾ ತತ್ತ್ವಾತ್ಮನಾಽಪಿ ಚ ।
ನೈವಂ ವಿಷ್ಣ್ವಾದಿದೇವಾನಾಮಿತಿ ತತ್ತ್ವವ್ಯವಸ್ಥಿತಿಃ ॥೬೯॥

ಬಹುನೋಕ್ತೇನ ಕಿಂ ಜೀವಾಸ್ತ್ರಿಮೂರ್ತೀನಾಂ ವಿಭೂತಯಃ ।
ವರಿಷ್ಠಾ ಹಿ ವಿಭೂತಿಭ್ಯಸ್ತೇ ವರಿಷ್ಠಾ ನ ಸಂಶಯಃ ॥೭೦॥

ತೇಷು ರುದ್ರೋ ವರಿಷ್ಠಶ್ಚ ತತೋ ಮಾಯೀ ಪರಶ್ಶಿವಃ ।
ಮಾಯೀ ವಿಶಿಷ್ಟಾತ್ಸರ್ವಜ್ಞಃಸಾಂಬಸ್ಸತ್ಯಾದಿ ಲಕ್ಷಣಃ ॥೭೧॥

ವರಿಷ್ಠೋ ಮುನಯಸ್ಸಾಕ್ಷಾಚ್ಛಿವೋ ನಾತ್ರ ವಿಚಾರಣಾ ।
ಶಿವಾದ್ವರಿಷ್ಠೋಽನ್ಯೋನಾಸ್ತಿ ಮಯಾ ಸತ್ಯ ಮುದೀರಿತಂ ॥೭೨॥

ಎಲೌ ಆಸ್ತಿಕರಾದ ಬ್ರಾಹ್ಮಣರೇ, ಯಾವ ಶ್ರುತಿವಾಕ್ಯಗಳು ರುದ್ರನಿಗೆ ವಿಷ್ಣು ಬ್ರಹ್ಮ ಮತ್ತು ಇಂದ್ರರಿಗಿಂತಲೂ ಉತ್ಕರ್ಷವನ್ನು ಹೇಳುತ್ತವೆಯೋ ಆ ಎಲ್ಲಾ ವಾಕ್ಯಗಳೂ ಕೂಡ, ||೬೮||

ಸ್ವರೂಪದಿಂದಲೂ ಮತ್ತು ತತ್ತ್ವಭಾವನೆಯಿಂದಲೂ ಯಥಾರ್ಥವನ್ನೇ ಹಾಗೆ ಹೇಳುತ್ತವೆ. ಇದೇ ರೀತಿಯಿಂದ ವಿಷ್ಣ್ವಾದಿದೇವತೆಗಳಿಗೂ ಹಾಗೆಯೇ ಎಂಬುದು ಸಿದ್ಧಾಂತವಲ್ಲ. ಇದು ತತ್ತ್ವದ ವ್ಯವಸ್ಥೆಯು. ||೬೯||

ಹೆಚ್ಚು ಹೇಳಿದ್ದರಿಂದ ಫಲವೇನು? ಜೀವರುಗಳೆಲ್ಲರೂ ತ್ರಿಮೂರ್ತಿಗಳ ವಿಭೂತಿಗಳು. ಅವರ ವಿಭೂತಿಗಳು ಎಂದರೆ ಮಹಿಮೆಗಳು, ವಿಶೇಷವಾದವುಗಳು. ಆ ವಿಭೂತಿಗಳಿಗಿಂತಲೂ ಅವರು ಅತಿಶ್ರೇಷ್ಠರೆಂಬುದರಲ್ಲಿ ಸಂಶಯವಿಲ್ಲವು. ||೭೦||

ಆ ತ್ರಿಮೂರ್ತಿಗಳೊಳಗೂ ರುದ್ರನು ಅತ್ಯಂತ ಶ್ರೇಷ್ಠನು ಅವನಿಗಿಂತಲೂ ಮಾಯೋಪಾಧಿಕನಾದ ಶಿವನು ಶ್ರೇಷ್ಠನು. ಮಾಯಾವಿಶಿಷ್ಟನಾದ ಶಿವನಿಗಿಂತಲೂ ಸರ್ವಜ್ಞನೂ ಮತ್ತು ಸಚ್ಚಿದಾನಂದಾತ್ಮಕನೂ ಆದ ಸಾಂಬನು ಶ್ರೇಷ್ಠನು. ||೭೧|| ಎಲ್ಲರಿಗಿಂತಲೂ ಸಾಕ್ಷಾತ್ಪರಶಿವನು ಶ್ರೇಷ್ಠನು. ಎಲೌ ಮುನಿಗಳೇ, ಈ ವಿಷಯ ದಲ್ಲಿ ಸಂಶಯವೇ ಬೇಡ. ಶಿವನಿಗಿಂತಲೂ ಶ್ರೇಷ್ಠನಾದವನು ಇಲ್ಲವೇ ಇಲ್ಲವು. ನನ್ನಿಂದ ಸತ್ಯವೇ ಹೇಳಲ್ಪಟ್ಟಿದೆ. ||೭೨||

ಶಿವಸ್ವರೂಪಮಾಲೋಡ್ಯ ಪ್ರವದಾಮಿ ಸಮಾಸತಃ ।
ಶಿವಾದನ್ಯತಯಾ ಭಾತಂ ಶಿವ ಏವ ನ ಸಂಶಯಃ ॥೨೩॥

ಶಿವಾದನ್ಯತಯಾ ಭಾತಂ ಶಿವಂ ಯೋ ವೇದ ವೇದತಃ ।
ಸ ವೇದ ಪರಮಂ ತತ್ವಂ ನಾಸ್ತಿ ಸಂಶಯ ಕಾರಣಂ ॥೨೪॥

ಯಶ್ಶಿವಂ ಸಕಲಂ ಸಾಕ್ಷಾದ್ವೇದ ವೇದಾಂತವಾಕ್ಯತಃ ।
ಸ ಮುಕ್ತೋ ನಾತ್ರ ಸಂದೇಹಃ ಸತ್ಯಮೇವ ಮಯೋದಿತಂ ॥೨೫॥

ಭಾಸಮಾನಮಿದಂ ಸರ್ವಂ ಭಾನಮೇವೇತಿ ವೇದ ಯಃ ।
ಸ ಭಾನರೂಪಂ ದೇವೇಶಂ ಯಾತಿ ನಾತ್ರ ವಿಚಾರಣಾ ॥೨೬॥

ಪ್ರತೀತಮಖಿಲಂ ಶಂಭುಂ ತರ್ಕತಶ್ಚ ಪ್ರಮಾಣತಃ ।
ಸ್ವಾನುಭೂತ್ಯಾ ಚ ಯೋ ವೇದ ಸ ಏವ ಪರಮಾರ್ಥವಿತ್ ॥೨೭॥

ಈಶ್ವರನ ಸ್ವರೂಪವೇನೆಂಬುದನ್ನು ಚೆನ್ನಾಗಿ ಮಥನಮಾಡಿ ಸಂಕ್ಷೇಪವಾಗಿ ಹೇಳುತ್ತೇನೆ. ಶಿವನಿಗಿಂತಲೂ ಬೇರೆಯಾಗಿ ತೋರುವುದೆಲ್ಲವೂ ಶಿವನೇ ಎಂಬುದರಲ್ಲಿ ಸಂಶಯುವೇ ಇಲ್ಲವು. ॥೨೩॥

ವೇದ, ಶಾಸ್ತ್ರಾಭ್ಯಾಸದಿಂದಲೂ ಕೂಡ ಶಿವನಿಗಿಂತಲೂ ಬೇರೆಯದಾಗಿ ತೋರಿದ್ದನ್ನೂ ಸಹ ಶಿವನನ್ನಾಗಿಯೇ ಯಾರು ತಿಳಿಯುತ್ತಾರೋ, ಅವರೇ ಪರಮತತ್ವವನ್ನು ತಿಳಿದವರೆಂಬುದರಲ್ಲಿ ಸಂದೇಹಕ್ಕೆ ಕಾರಣವೇ ಇಲ್ಲವು. ॥೨೪॥

ಯಾವನು ವೇದಾಂತವಾಕ್ಯಗಳಿಂದ ಸಕಲವನ್ನೂ ಪರಶಿವನನ್ನಾಗಿ ತಿಳಿಯುತ್ತಾನೋ ಆತನೇ ಸಂಸಾರದಿಂದ ಮುಕ್ತನೆಂಬುದರಲ್ಲಿ ಸಂದೇಹವಿಲ್ಲವು. ಸತ್ಯವೇ ನನ್ನಿಂದ ಹೇಳಲ್ಪಟ್ಟಿದೆ. ॥೨೫॥

ತೋರತಕ್ಕ ಈ ಎಲ್ಲವೂ ತೋರುವಿಕೆಗಿಂತಲೂ ಬೇರೆಯಲ್ಲವೆಂದು ಯಾರು ತಿಳಿಯುತ್ತಾರೋ ಅವರು ಆ ಪ್ರಕಾಶರೂಪನಾದ ಪರಮಾತ್ಮನನ್ನು ಹೊಂದುತ್ತಾರೆ. ಈ ವಿಷಯದಲ್ಲಿ ಸಂಶಯವಿಲ್ಲವು. ತೋರಿರತಕ್ಕ ಸಮಸ್ತವನ್ನೂ ವಿಚಾರದಿಂದಲೂ, ಪ್ರಮಾಣದಿಂದಲೂ ಮತ್ತು ಸ್ವಾನುಭವದಿಂದಲೂ ಸಹ ಪರಶಿವನನ್ನಾಗಿ ಯಾರು ತಿಳಿಯುತ್ತಾರೋ ಅವರೇ ಪರಮಾರ್ಥವನ್ನು ತಿಳಿದವರು ॥೨೬-೨೭॥

ಜಗದ್ರೂಪತಯಾ ಪಶ್ಯನ್ನಪಿ ನೈವ ಪ್ರಪಶ್ಯತಿ ।
ಪ್ರತೀತಮಖಿಲಂ ಬ್ರಹ್ಮ ಸಂಪಶ್ಯನ್ನ ಹಿ ಸಂಶಯಃ ॥೭೮॥

ಅಪ್ರತೀತಂ ಪ್ರತೀತಂ ಚ ಸದಸಚ್ಚ ಪರಶ್ಶಿವಃ ।
ಇತಿ ವೇದಾಂತವಾಕ್ಯಾನಾಂ ನಿಷ್ಠಾ ಕಾಷ್ಠಾ ಸುದುರ್ಲಭಾ ॥೭೯॥

ಇತಿ ಸಕಲಂ ಕೃಪಯಾ ಮಯೋದಿತಂ ವಃ
ಶ್ರುತಿವಚಸಾ ಕಥಿತಂ ಯಥಾ ತಥೈವ ।
ಯದಿ ಹೃದಯೇ ನಿಹಿತಂ ಸಮಸ್ತಮೇತತ್
ಪರಮಗತಿರ್ಭವತಾಮಿಹೈವ ಸಿದ್ಧಾ ॥೮೦॥

ಇತಿ ಶ್ರೀಸ್ಕಾಂದಪುರಾಣೇ ಸೂತಸಂಹಿತಾಯಾಂ ಚತುರ್ಥಸ್ಯ ಯಜ್ಞವೈಭವಖಂಡಸ್ಯೋಪರಿಭಾಗೇ ಸೂತಗೀತಾಸೂಪನಿಷತ್ಸು ದ್ವಿತೀಯೋಽಧ್ಯಾಯಃ

ಜ್ಞಾನಿಯು ಪ್ರಪಂಚವನ್ನು ಜಗತ್ತೆಂಬ ಆಕಾರದಿಂದ ನೋಡುವವನಾಗಿದ್ದರೂ, ಪರಮಾರ್ಥವೆಂದು ಮಾತ್ರ ಅದನ್ನು ನೋಡುವುದಿಲ್ಲವು. ತೋರತಕ್ಕ ಸಕಲವನ್ನೂ ಬ್ರಹ್ಮವನ್ನಾಗಿ ನೋಡುತ್ತಾನೆಂಬುದರಲ್ಲಿ ಸಂಶಯವಿಲ್ಲವು. ||೭೮||

ತೋರದೇ ಇರತಕ್ಕದ್ದೂ, ತೋರತಕ್ಕದ್ದೂ, ಸತ್ತೂ, ಅಸತ್ತೂ ಕೂಡ ಪರಶಿವನು. ಹೀಗೆಂಬ ವೇದಾಂತವಾಕ್ಯಗಳ ಪರಾಕಾಷ್ಠೆಯ ನಿಶ್ಚಯವು ಸತ್ಯವಾಗಿಯೂ ಸುಲಭವಾಗಿ ದೊರೆಯುವುದಲ್ಲವು. ||೭೯||

ಈ ರೀತಿಯಾಗಿ ದಯೆಯಿಂದ ನನ್ನಿಂದ ಹೇಳಲ್ಪಟ್ಟ ಈ ಎಲ್ಲವೂ ನಿಮಗೋಸ್ಕರ ವೇದವಾಕ್ಯಗಳಿಂದ ಹೇಗೆ ಹೇಳಲ್ಪಟ್ಟಿದೆಯೋ ಹಾಗೆಯೇ ಹೇಳಲ್ಪಟ್ಟಿದೆ. ಋಷಿಶ್ರೇಷ್ಠರೇ, ಸಮಸ್ತವಾದ ಈ ವಿಷಯವು ಹೃದಯದಲ್ಲಿ ಧರಿಸಲ್ಪಟ್ಟದ್ದೇ ಆದರೆ ನಿಮ್ಮೆಲ್ಲರಿಗೂ ಪರಮೋತ್ಕೃಷ್ಟವಾದ ಮೋಕ್ಷವು ಈಗಲೇ ಇಲ್ಲಿಯೇ ಸಿದ್ಧವಾಗುತ್ತದೆ. ||೮೦||

ಇಲ್ಲಿಗೆ ಸೂತಸಂಹಿತೆಯ ಸೂತಗೀತೆಯಲ್ಲಿ ಎರಡನೆಯ ಅಧ್ಯಾಯವು ಮುಗಿದುದು.

|| ಶ್ರೀಃ ||

ಅಥಾಸ್ಯಾಃ ಶ್ರೀಮತ್ಸ್ಕಾಂದಪುರಾಣಾಂತರ್ಗತ ಸೂತಸಂಹಿತಾಯಾಶ್ಚತುರ್ಥಸ್ಯ ಯಜ್ಞವೈಭವಖಂಡಸ್ಯೋಪರಿಭಾಗೇ ಸೂತಗೀತಾ

|| ತೃತೀಯೋಽಧ್ಯಾಯಃ ||

ಮೂರನೆಯ ಅಧ್ಯಾಯವು

|| ಸೂತ ಉವಾಚ ||

ಶಿವಾತ್ತತ್ತ್ವಪರಾನಂದಪ್ರಕಾಶೈಕ ಲಕ್ಷಣಾತ್ ।
ಆವಿರ್ಭೂತಮಿದಂ ಸರ್ವಂ ಚೇತನಾಚೇತನಾತ್ಮಕಂ ||೧||

ಅದ್ವಿತೀಯೋಽವಿಕಾರೀ ಚ ನಿರ್ಮಲಸ್ಸ ಶಿವಃ ಪರಃ ।
ತಥಾಽಪಿ ಸೃಜತಿ ಪ್ರಾಜ್ಞಾಃ ಸರ್ವಮೇತಚ್ಚರಾಚರಂ ||೨||

ಮಣಿಮಂತ್ರೌಷಧಾದೀನಾಂ ಸ್ವಭಾವೋಽಪಿ ನ ಶಕ್ಯತೇ ।
ಕಿಮು ವಕ್ತವ್ಯಮಾಶ್ಚರ್ಯಂ ವಿಭೋರಸ್ಯ ಪರಾತ್ಮನಃ ||೩||

ಸೂತನು ಹೇಳಿದನು—ಸಚ್ಚಿದಾನಂದ ಮಾತ್ರ ಸ್ವಲಕ್ಷಣನಾದ ಪರಶಿವನ ದೆಸೆಯಿಂದಲೇ ಈ ಚೇತನಾಚೇತನಾತ್ಮಕವಾದ ಸಕಲವೂ ಉತ್ಪನ್ನವಾಯಿತು. ||೧||

ಎಲೌ ಪ್ರಾಜ್ಞರೇ, ಆ ಪರಶಿವನು ಅದ್ವಿತೀಯನೂ, ಅವಿಕಾರಿಯೂ ಮತ್ತು ನಿರ್ಮಲನು. ಹಾಗಾದರೂ ಸಮಸ್ತವಾದ ಈ ಚರಾಚರವನ್ನು ಅವನೇ ಸೃಷ್ಟಿಸುತ್ತಾನೆ. ||೨||

ಮಣಿ, ಮಂತ್ರ, ಔಷಧ ಮೊದಲಾದುವುಗಳ ಸ್ವಭಾವವೂ ಕೂಡ ತಿಳಿಯಲು ಸಾಧ್ಯವಾಗುವುದಿಲ್ಲವು. ಇನ್ನು ಸರ್ವಶಕ್ತನಾದ ಈ ಪರಮಾತ್ಮನ ಸ್ವಭಾವವನ್ನು ಹೇಳತಕ್ಕದ್ದೇನು. ||೩||

ಶ್ರುತಿಃ ಪುರಾತನೀ ಸಾಧ್ವೀ ಸರ್ವಮಾನೋತ್ತಮೋತ್ತಮಾ ।
ಪ್ರಾಹ ಚಾದ್ವೈತನೈರ್ಮಲ್ಯಂ ನಿರ್ವಿಕಾರತ್ವಮಾತ್ಮನಃ ॥೪॥

ಸರ್ಗಸ್ಥಿತ್ಯಂತಮಪ್ಯಾಹ ಚೇತನಾಚೇತನಸ್ಯ ಚ ।
ಅತೀಂದ್ರಿಯಾರ್ಥವಿಜ್ಞಾನೇ ಮಾನಂ ನಃ ಶ್ರುತಿರೇವ ಹಿ ॥೫॥

ಶ್ರುತ್ಯೈಕಗಮ್ಯೇ ಸೂಕ್ಷ್ಮಾರ್ಥೇ ಸ ತರ್ಕಃ ಕಿಂ ಕರಿಷ್ಯತಿ ।
ಮಾನಾನುಗ್ರಾಹಕಸ್ತರ್ಕೋ ನ ಸ್ವತಂತ್ರಃ ಕದಾಚನ ॥೬॥

ಶ್ರುತಿಃ ಸನಾತನೀ ಶಂಭೋರಭಿವ್ಯಕ್ತಾ ನ ಸಂಶಯಃ ।
ಶಂಕರೇಣ ಪ್ರಣೀತೇತಿ ಪ್ರವದಂತ್ಯಪರೇ ಜನಾಃ ॥೭॥

ಪರಮ ಪ್ರಾಚೀನವೂ, ಸರ್ವಪ್ರಮಾಣಗಳೊಳಗೆ ಉತ್ತಮೋತ್ತಮವೂ ಮತ್ತು ಪವಿತ್ರತಮವೂ ಆದ ವೇದವು ಅದ್ವೈತದ ನೈರ್ಮಲ್ಯವನ್ನೂ ಮತ್ತು ಆತ್ಮನ ನಿರ್ವಿಕಾರತ್ವವನ್ನೂ ಹೇಳುತ್ತದೆ. ॥೪॥

ಚೇತನಾಚೇತನವಾದ ಈ ಜಗತ್ತಿನ ಸೃಷ್ಟಿ, ಸ್ಥಿತಿ ಮತ್ತು ನಾಶವನ್ನೂ ಆ ವೇದವೇ ಹೇಳುತ್ತದೆ. ಇಂದ್ರಿಯಗಳಿಗೆ ಗೋಚರವಲ್ಲದ ಪರಾರ್ಥದ ವಿಶೇಷ ತಿಳಿವಳಿಕೆಯುಂಟಾಗಬೇಕಾದರೆ ನಮಗೆ ವೇದವೇ ಪ್ರಮಾಣವಷ್ಟೇ. ॥೫॥

ವೇದವೊಂದರಿಂದಲೇ ತಿಳಿಯಲು ಯೋಗ್ಯವಾದ ಸೂಕ್ಷ್ಮಾರ್ಥವಿಷಯದಲ್ಲಿ ಆ ತರ್ಕವು ಏನನ್ನು ತಾನೇ ಮಾಡುತ್ತದೆ? ಆ ತರ್ಕವು ಪ್ರತ್ಯಕ್ಷಾದಿ ಪ್ರಮಾಣಗಳಿಗೆ ಉಪಕಾರಕ (ಸಹಾಯ)ವಲ್ಲದೇ ಅದು ಯಾವಾಗಲೂ ಸ್ವತಂತ್ರವಾದ ಪ್ರಮಾಣ ವಲ್ಲವು. ॥೬॥

ಅಪ್ರಾಮಾಣ್ಯವೂ, ಅರ್ಥವನ್ನು ಬೇರೆಯಾಗಿ ಮಾಡುವಿಕೆಯೂ ಪ್ರಮಾಣ ದಲ್ಲಿರುವ ಮುಖ್ಯ ದೋಷಗಳು. ಇವೆರಡೂ ವೇದವಲ್ಲಿಲ್ಲ. ವೇದವೇನಾದರೂ ಪೌರು ಷೇಯವಾಗಿ ಇದ್ದಿದ್ದರೆ ಈ ದೋಷವು ಸಂಭವಿಸಬಹುದು. ಪರಮಪ್ರಾಚೀನವಾದ ಈ ವೇದವು ಪರಮಾತ್ಮನಿಂದ ತಾನಾಗಿಯೇ ಅಭಿವ್ಯಕ್ತವಾಯಿತೆಂಬುದರಲ್ಲಿ ಯಾವ ಸಂಶಯವೂ ಇಲ್ಲ. ಬೇರೆ ಕೆಲವರು ಶಂಕರನಿಂದ ವೇದವು ರಚಿಸಲ್ಪಟ್ಟಿತೆಂದು ಹೇಳುತ್ತಾರೆ. ॥೭॥

ಯದಾ ಸಾಽನಾದಿಭೂತ್ವೈವ ತದಾ ಮಾನಮತೀವ ಸಾ ।
ಸ್ವತಶ್ಚ ಪರತೋ ದೋಷೋ ನಾಸ್ತಿ ಯಸ್ಮಾದ್ದ್ವಿಜರ್ಷಭಾಃ ॥೮॥

ಸ್ವತೋ ದೋಷೋ ನ ವೇದಸ್ಯ ವಿದ್ಯತೇ ಸೂಕ್ಷ್ಮದರ್ಶನೇ ।
ಅಸ್ತಿ ಚೇದ್ವ್ಯವಹಾರಸ್ಯ ಲೋಪ ಏವ ಪ್ರಸಜ್ಯತೇ ॥೯॥

ಪರತಶ್ಚ ನ ದೋಷೋಽಸ್ತಿ ಪರಸ್ಯಾಭಾವತೋ ದ್ವಿಜಾಃ ।
ಸ್ವತೋ ದುಷ್ಟೋಽಪಿ ಶಬ್ದಸ್ತು ಮಾನಮೇವಾಪ್ತಸಂಗಮಾತ್ ॥೧೦॥

ಇತಿ ವಾರ್ತಾಽಪಿ ವಾರ್ತೈವ ಮುನೀಂದ್ರಾಃ ಸೂಕ್ಷ್ಮದರ್ಶನೇ ।
ಸ್ವತೋ ದುಷ್ಟಃ ಕಥಂ ಮಾನಂ ಭವತ್ಯನ್ಯಸ್ಯ ಸಂಗಮಾತ್ ॥೧೧॥

ಯಾವಾಗ ವೇದವು ಅನಾದಿಭೂತವಾದದ್ದೆಂದಾಯಿತೋ ಆಗಲೇ ಅದು ಹೆಚ್ಚು ಪ್ರಮಾಣವಾಯಿತು. ಬ್ರಾಹ್ಮಣಶ್ರೇಷ್ಠರೇ, ಯಾವ ಕಾರಣದಿಂದ ಸ್ವತಃ ಎಂದರೆ ತನ್ನಿಂದಲಾಗಲೀ ಅಥವಾ ಬೇರೆಯವರಿಂದಲಾಗಲೀ ದೋಷವೆಂಬುದು ಇಲ್ಲವೇ ಇಲ್ಲವೋ ಆ ಕಾರಣದಿಂದ ಅದು ಪರಮ ಪ್ರಮಾಣವು. ॥೮॥

ಎಷ್ಟು ಸೂಕ್ಷ್ಮವಾಗಿ ವಿಚಾರಮಾಡಿದರೂ ವೇದಕ್ಕೆ ಸ್ವತಃ ದೋಷವೆಂಬುದು ಇಲ್ಲವೇ ಇಲ್ಲವು. ಹಾಗೆ ಇರುವುದೇ ಆದರೆ ವ್ಯವಹಾರಕ್ಕೆ ಲೋಪವೇ ಉಂಟಾಗುತ್ತದೆ. ವೇದವು ಸುಳ್ಳಾಗಲೀ ಅಥವಾ ತಪ್ಪಾಗಲೀ ಆಗದಿದ್ದರೆ ಜಗತ್ತಿನ ವ್ಯವಹಾರ ಚಕ್ರವು ಎಂದೂ ತಿರುಗುತ್ತಿರಲಿಲ್ಲ. ಆದ್ದರಿಂದ ವೇದವು ಸರ್ವಥಾ ಪರಮಪ್ರಮಾಣವು. ॥೯॥

ಬೇರೆಯವರಿಂದಲೂ ವೇದಕ್ಕೆ ದೋಷವು ಸಂಭವಿಸಲಾರದು. ಅದನ್ನು ವಿರಚಿಸಿರುವ ಬೇರೆಯವನೆಂಬ ಪುರುಷನು ಯಾವನೂ ಇಲ್ಲವು. ಎಲೈ ಬ್ರಾಹ್ಮಣರೇ, ಶಬ್ದವೆಂಬ ಪ್ರಮಾಣವು ಸ್ವತಃ ದುಷ್ಟವಾದದ್ದಾದರೂ ಆಪ್ತನ ಸಂಬಂಧದಿಂದ ಅದು ಪ್ರಮಾಣವೇ ಆಗುತ್ತದಲ್ಲದೇ ಅಪ್ರಮಾಣವಾಗಲಾರದು. ॥೧೦॥

ಮುನೀಂದ್ರರೇ, ಮೇಲೆ ಹೇಳಿದ ಈ ವಾರ್ತೆಯೂ ಕೇವಲ ವಾರ್ತಾಮಾತ್ರ ವಲ್ಲದೆ ಬೇರೆಯಲ್ಲವು. ಸ್ವಭಾವವಾಗಿ ದುಷ್ಟವಾದದ್ದು ಬೇರೆಯವನ ಸಂಬಂಧದಿಂದ ಲಾದರೂ ಸೂಕ್ಷ್ಮವಾಗಿ ವಿಚಾರಿಸಿದರೆ, ಹೇಗೆತಾನೇ ಪ್ರಮಾಣವಾಗಬಹುದು ? ॥೧೧॥

ಯತ್ಸಂಬಂಧೇನ ಯೋ ಭಾವೋ ಯಸ್ಯ ಪ್ರಾಜ್ಞಾಃ ಪ್ರಸಿಧ್ಯತಿ ।
ಸ ತಸ್ಯ ಭ್ರಾಂತಿರೇವ ಸ್ಯಾನ್ನ ಸ್ವಭಾವಃ ಕಥಂಚನ ॥೧೨॥

ಜಪಾಕುಸುಮಲೌಹಿತ್ಯಂ ವಿಭಾತಿ ಸ್ಫಟಿಕೇ ಭೃಶಂ ।
ತಥಾಽಪಿ ತಸ್ಯ ಲೌಹಿತ್ಯಂ ಭ್ರಾಂತಿರೇವ ನ ವಾಸ್ತವಂ ॥೧೩॥

ವಹ್ನಿಪಾಕಜಲೌಹಿತ್ಯಮಿಷ್ಟಕಾಯಾಂ ನ ವಾಸ್ತವಂ ।
ಲೌಹಿತ್ಯಂ ತೈಜಸಾಂಶಸ್ತು ನೇಷ್ಟಕಾಯಾ ನಿರೂಪಣೇ ॥೧೪॥

ಅನ್ಯತ್ರಾನ್ಯಸ್ಯ ಧರ್ಮಸ್ತು ಪ್ರತೀತೋ ವಿಭ್ರಮೋ ಮತಃ ।
ಆಪ್ತಾಪೇಕ್ಷೀ ತು ಶಬ್ದಸ್ತು ಪ್ರಾಮಾಣ್ಯಾಯ ನ ಸರ್ವಥಾ ॥೧೫॥

ಅನಾಪ್ತಯೋಗಾಚ್ಛಬ್ದಸ್ಯ ಪ್ರಾಮಾಣ್ಯಂ ಮುನಿಪುಂಗವಾಃ ।
ಸ್ವತಃ ಸಿದ್ಧಂ ತಿರೋಭೂತ ಸ್ವನಾಶಾಯ ಹಿ ಕೇವಲಂ ॥೧೬॥

ಪ್ರಾಜ್ಞರೇ, ಯಾರ ಸಂಬಂಧದಿಂದ ಯಾರಿಗೆ ಯಾವ ಭಾವವುಂಟಾಗುತ್ತದೋ, ಅದು ಆತನಿಗೆ ಬರಿಯ ಭ್ರಾಂತಿಯಲ್ಲದೇ, ಯಾವರೀತಿಯಿಂದಲೂ ಸ್ವಭಾವವಾಗಲಾರದು. ||೧೨||

ಹೇಗೆಂದರೆ, ಜಪಾಕುಸುಮದ ಕೆಂಪು ಸ್ಫಟಿಕದಲ್ಲಿ ಬಹಳವಾಗಿ ಪ್ರಕಾಶಿಸುತ್ತದೆ. ಆದಾಗ್ಯೂ ಕೆಂಪು ಸ್ಫಟಿಕದ್ದೆಂಬುದು ಬರಿಯ ಭ್ರಾಂತಿಯಲ್ಲದೇ ವಾಸ್ತವವಲ್ಲವು. ||೧೩||

ಬೆಂಕಿಯಿಂದ ಬೇಯಿಸುವಾಗ ಉಂಟಾದ ಕೆಂಪು ಇಟ್ಟಿಗೆಯಲ್ಲಿ ತೋರಿದರೂ ಅದು ವಾಸ್ತವವಲ್ಲವು. ಲೌಹಿತ್ಯವೆಂಬುದು ಅಗ್ನಿಯ ಅಂಶವಲ್ಲದೆ ಎಷ್ಟು ವಿಚಾರ ಮಾಡಿದರೂ ಇಟ್ಟಿಗೆಯದಲ್ಲವು. ||೧೪||

ಬೇರೆ ಕಡೆಯಲ್ಲಿ ತೋರಿದ ಬೇರೆಯದರ ಧರ್ಮವಾದರೂ ಭ್ರಾಂತಿಯೆಂದೇ ಸಿಶ್ಚಿತವು. ಆಪ್ತನನ್ನು ಅಪೇಕ್ಷಿಸುವ ಶಬ್ದವಾದರೂ ಸರ್ವಥಾ ಪ್ರಾಮಾಣ್ಯಕ್ಕೆ ಬರಲಾರದು. ||೧೫||

ಋಷಿಶ್ರೇಷ್ಠರೇ, ಸ್ವತಃ ಸಿದ್ಧವಾದ ಶಬ್ದದ ಪ್ರಾಮಾಣ್ಯವು ಅನಾಪ್ತಸಂಬಂಧದಿಂದ ಅಚ್ಛಾದಿತವಾದದ್ದೇ ಆದರೆ ಅದು ತನ್ನ ನಾಶಕ್ಕೆ ಮಾತ್ರ ಕಾರಣವಾದೀತಲ್ಲದೇ ಬೇರೆಯಿಲ್ಲವು. ||೧೬||

ಯದಾ ಸಾ ಶಂಕರೇಣೋಕ್ತಾ ತದಾಽಪಿ ಶ್ರುತಿರಾಸ್ತಿಕಾಃ ।
ಪ್ರಮಾಣಂ ಸುತರಾಮಾಪ್ತತಮ ಏವ ಮಹೇಶ್ವರಃ ॥೧೭॥

ಸರ್ವದೋಷವಿಹೀನಸ್ಯ ಮಹಾಕಾರುಣಿಕಸ್ಯ ಚ ।
ಸರ್ವಜ್ಞಸ್ಯೈವ ಶುದ್ಧಸ್ಯ ಕಥಂ ದೋಷಃ ಪ್ರಕಲ್ಪ್ಯತೇ ॥೧೮॥

ಸರ್ವದೋಷವಿಶಿಷ್ಟಸ್ಯ ನಿರ್ಘೃಣಸ್ಯ ದುರಾತ್ಮನಃ ।
ಅಲ್ಪಜ್ಞಸ್ಯ ಚ ಜೀವಸ್ಯ ದೃಷ್ಟಾಽನಾಪ್ತಿರ್ಹಿ ಸತ್ತಮಾಃ ॥೧೯॥

ಯಸ್ಯ ಸ್ಮರಣಮಾತ್ರೇಣ ಸಮಲೋ ನಿರ್ಮಲೋ ಭವೇತ್ ।
ಬ್ರೂತ ಸತ್ಯತಪೋನಿಷ್ಠಾಃ ಕಥಂ ಸ ಮಲಿನೋ ಭವೇತ್ ॥೨೦॥

ಅತಃ ಪಕ್ಷದ್ವಯೇನಾಪಿ ವೇದೋ ಮಾನಂ ನ ಸಂಶಯಃ ।
ವೇದೋಽನಾದಿಃ ಶಿವಸ್ತಸ್ಯ ವ್ಯಂಜಕಃ ಪರಮಾರ್ಥತಃ ॥೨೧॥

ಆಸ್ತಿಕರೇ, ಯಾವಾಗ ಆ ವೇದವು ಶಂಕರನಿಂದ ಹೇಳಲ್ಪಟ್ಟಿತೋ ಆಗಲೂ ಅದು ಮುಖ್ಯ ಪ್ರಮಾಣವಾಯ್ತು. ಏಕೆಂದರೆ, ಮಹೇಶ್ವರನು ಅತ್ಯಂತ ಆಪ್ತನಾದವನಷ್ಟೇ. ||೧೭||

ಸಕಲ ದೋಷರಹಿತನೂ, ಮಹಾದಯಾಶಾಲಿಯೂ, ಸರ್ವಜ್ಞನೂ ಮತ್ತು ಶುದ್ಧನೂ ಆದ ಪರಮಾತ್ಮನಿಗೆ ಹೇಗೆತಾನೆ ದೋಷವು ಕಲ್ಪಿಸಲ್ಪಡುತ್ತದೆ ? ಸ್ವತಃ ಶುದ್ಧವಾದ ವಸ್ತುವಿಗೆ ಕಲ್ಪಿಸಲ್ಪಟ್ಟ ದೋಷವು ಸಂಬಂಧಿಸಲಾರದು. ||೧೮||

ಎಲೌ ಶ್ರೇಷ್ಠತಮರೇ, ಸಕಲ ದೋಷಗಳಿಂದ ಕೂಡಿದವನೂ, ನಿರ್ಘೃಣನೂ, ದುರಾತ್ಮನೂ ಮತ್ತು ಅಲ್ಪಜ್ಞನೂ ಆದ ಜೀವನಿಗೆ ಮಾತ್ರ ಅನಾಪ್ತಭಾವವು (ವಂಚನೆಯು) ಇದೆಯೆಂದು ಕಾಣಲ್ಪಟ್ಟಿದೆಯಷ್ಟೇ. ||೧೯||

ಯಾವನ ಸ್ಮರಣಮಾತ್ರದಿಂದಲೇ ಸಕಲ ಪಾಪಗಳಿಂದ ಕೂಡಿದವನೂ ನಿರ್ಮಲನಾಗುತ್ತಾನೋ, ಎಲೌ ಸತ್ಯ ಮತ್ತು ತಪಸ್ಸುಗಳಲ್ಲಿ ನಿರತರಾದವರೇ, ಅಂತಹ ಪರಮಾತ್ಮನು ಹೇಗೆತಾನೆ ದೋಷವುಳ್ಳವನಾಗುತ್ತಾನೆ? ಹೇಳಿರಿ. ||೨೦||

ಆದ್ದರಿಂದ ಎರಡು ರೀತಿಯಿಂದಲೂ ವೇದವು ಪ್ರಮಾಣವೆಂಬುದರಲ್ಲಿ ಸಂಶಯವಿಲ್ಲವು. ವೇದವು ಅನಾದಿಯಾದದ್ದು. ಅದಕ್ಕೆ ಶಿವನು ಅಭಿವ್ಯಂಜಕನು; ಎಂಬುವುದು ಪರಮಾರ್ಥವು. ||೨೧||

ಅಭಿವ್ಯಕ್ತಿಮುಪೇಕ್ಷ್ಯೈವ ಪ್ರಣೇತೇತ್ಯುಚ್ಯತೇ ಶಿವಃ ।
ತಸ್ಮಾದ್ವೇದೋಪದಿಷ್ಟಾರ್ಥೋ ಯಥಾರ್ಥೋನಾತ್ರಸಂಶಯಃ॥೨೨॥

ಇಹ ತಾವನ್ಮಯಾ ಪ್ರೋಕ್ತಮದ್ವಿತೀಯಃ ಪರಃ ಶಿವಃ ।
ತಥಾಽಪಿ ತೇನ ಸಕಲಂ ನಿರ್ಮಿತಂ ತತ್ಸ ಏವ ಹಿ ॥೨೩॥

ಚಿತ್ಸ್ವರೂಪಶ್ಶಿವಶ್ಚೇತ್ಯಂ ಜಗತ್ ಸರ್ವಂ ಚರಾಚರಂ ।
ತಥಾ ಸತಿ ವಿರುದ್ಧಂ ತತ್ ಜಗಚ್ಛಂಭುಃ ಕಥಂ ಭವೇತ್ ॥೨೪॥

ಇತ್ಯೇವಮಾದಿ ಚೋದ್ಯಸ್ಯ ದ್ವಿಜೇಂದ್ರಾ ನಾಸ್ತಿ ಸಂಭವಃ ।
ಯತ್ರ ವೇದವಿರೋಧಸ್ಸ್ಯಾತ್ತತ್ರ ಚೋದ್ಯಸ್ಯ ಸಂಭವಃ ॥೨೫॥

ಈ ಅಭಿವ್ಯಕ್ತಿ ಎಂದರೆ ಪ್ರಕಾಶವಾಗುವಿಕೆಯನ್ನುದ್ದೇಶಿಸಿಯೇ ಈಶ್ವರನು ನಿರ್ಮಾಪಕನು ಎಂದು ಹೇಳಲ್ಪಡುತ್ತದೆ. ಆದ್ದರಿಂದ ವೇದದಿಂದ ಉಪದೇಶಿಸಲ್ಪಟ್ಟ ಅರ್ಥವೇ ಸತ್ಯವಾದದ್ದೆಂಬುದರಲ್ಲಿ ಸಂಶಯವಿಲ್ಲವು. ||೨೨||

ಈಗ ಇಲ್ಲಿಯಾದರೋ ನನ್ನಿಂದ ಪರಶಿವನು ಅದ್ವಿತೀಯನೆಂದು ಹೇಳಲ್ಪಟ್ಟಿತು. ಹಾಗಾದರೂ ಸಕಲವೂ ಅವನಿಂದಲೇ ನಿರ್ಮಿಸಲ್ಪಟ್ಟಿತು. ಅದೆಲ್ಲವೂ ಅವನೇ ಆಗಿರುವುದು ಸತ್ಯವು. ||೨೩||

ಪರಶಿವನು ಚಿತ್ಸ್ವರೂಪನು, ಸಕಲ ಚರಾಚರಾತ್ಮಕವಾದ ಜಗತ್ತು ಆ ಚಿದ್ರೂಪದಲ್ಲಿ ಆರೋಪಿತವು. ಅದು ಆತನಿಗೆ ಭೋಗ್ಯವಾದದ್ದರಿಂದ ಅದಕ್ಕೂ ಚೇತನತ್ವವುಂಟು. ಅಧ್ಯಸ್ತವಾದದ್ದು ತನಗೆ ಆಶ್ರಯವಾದದ್ದಕ್ಕಿಂತ ಬೇರೆಯಲ್ಲವು. ಹೇಗೆಂದರೆ, ಹಗ್ಗದಲ್ಲಿ ಸರ್ಪವು ಅಧ್ಯಸ್ತವಾದರೂ ಅಧ್ಯಸ್ತವಾದ ಆ ಸರ್ಪವು ತನಗೆ ಆಶ್ರಯವಾದ ಹಗ್ಗಕ್ಕಿಂತ ಹೇಗೆ ಬೇರೆಯಲ್ಲವೋ, ಹಾಗೆ ಅಧ್ಯಸ್ತವಾದ ಈ ಜಗತ್ತು ಆಶ್ರಯವಾದ ಚೇತನವಸ್ತುವಿಗಿಂತಲೂ ಬೇರೆಯಲ್ಲವು. ಹಾಗಾದರೆ ಪರಶಿವನು ಚಿದ್ರೂಪನು, ಜಗತ್ತು ಜಡವಾದದ್ದು, ಚೈತನ್ಯ ಮತ್ತು ಜಡತ್ವ, ಪರಸ್ಪರ ವಿರುದ್ಧವಾದ ಧರ್ಮಗಳು. ಹಾಗಾದರೂ ಜಡವು ಚೇತನವಾಗುವುದಾದರೂ ಹೇಗೆ? ಎಂಬ ಇವೇ ಮೊದಲಾದ ಚೋದ್ಯ (ಆಕ್ಷೇಪ)ಕ್ಕೆ ಎಲೌ ಬ್ರಾಹ್ಮಣಶ್ರೇಷ್ಠರೇ, ಅವಕಾಶವಿಲ್ಲವು. ಎಲ್ಲಿ ವೇದಕ್ಕೆ ವಿರೋಧವಿರುತ್ತದೋ ಅಲ್ಲಿ ಮಾತ್ರ ಆಕ್ಷೇಪಕ್ಕೆ

ಚೋದನಾ ಲಕ್ಷಣೇ ಧರ್ಮೇ ನ ಯಥಾ ಚೋದ್ಯಸಂಭವಃ ।
ತಥಾ ನ ಚೋದನಾಗಮ್ಯೇ ಶಿವೇ ಚೋದ್ಯಸ್ಯ ಸಂಭವಃ ॥೨೬॥

ಬಾಧ್ಯಬಾಧಕಭಾವಸ್ತು ವ್ಯಾಧಿಭೇಷಜಯೋರ್ಯಥಾ ।
ಶಾಸ್ತ್ರೇಣ ಗಮ್ಯತೇ ತದ್ವದಯಮರ್ಥೋಽಪಿ ನಾನ್ಯತಃ ॥೨೭॥

ಅವಕಾಶವುಂಟು. ಆದುದರಿಂದ ಮೇಲೆ ಹೇಳಿದ ನಿರ್ವಿಕಾರ ರೂಪಕ್ಕೂ ಜಗದ್ರೂಪಕ್ಕೂ ವೇದವೇ ಪ್ರಮಾಣವಾದದ್ದರಿಂದ ಇವಕ್ಕಿಂತಲೂ ಬೇರೆಯಾದ ತತ್ತ್ವವಿಲ್ಲವು. ॥೨೪-೨೫॥

ಪೂರ್ವಮೀಮಾಂಸಾಶಾಸ್ತ್ರ ಪ್ರವರ್ತಕರಾದ ಜೈಮಿನಿಗಳು "ಅಥಾತೋ ಧರ್ಮಜಿಜ್ಞಾಸಾ" ಎಂಬ ತಮ್ಮ ಮೊದಲನೆಯ ಸೂತ್ರದಲ್ಲಿ ಧರ್ಮದ ಜಿಜ್ಞಾಸೆಯನ್ನು ಮಾಡಿದ್ದಾರೆ. ಆಮೇಲೆ ಧರ್ಮದ ಸ್ವರೂಪವನ್ನು ಅದರ ಲಕ್ಷಣಪೂರ್ವಕವಾಗಿ "ಚೋದನಾ ಲಕ್ಷಣೋಽರ್ಥೋಧರ್ಮಃ" ಎಂದು ಹೇಳಿದ್ದಾರೆ. ಇದಕ್ಕೆ ಅರ್ಥ ವಿಚಾರಮಾಡಿದರೆ, ಲಕ್ಷಣವೆಂದರೆ ಪ್ರಮಾಣವೆಂದರ್ಥ. ಚೋದನೆ ಎಂದರೆ ಯಾಗಾದಿ ಕ್ರಿಯೆಯಲ್ಲಿ ಪ್ರವೃತ್ತಿಯನ್ನುಂಟುಮಾಡುವ "ಸ್ವರ್ಗಕಾಮೋ ಯಜೇತ" ಮುಂತಾದ ವಚನವು. ಈ ವಿಧಿಯೇ ಪ್ರಮಾಣವಾಗಿವುಳ್ಳ ಧರ್ಮದಲ್ಲಿ (ಯಾಗಾದಿಗಳಲ್ಲಿ) ಚೋದ್ಯವೆಂದರೆ ಹೇಗೆ ವಿಪ್ರತಿಪತ್ತಿ ಇಲ್ಲವೋ ಹಾಗೆ ವೇದವಚನಪ್ರಮಾಣಗಳಿಂದ ಹೊಂದಲು ಯೋಗ್ಯನಾದ ಪರಶಿವನಲ್ಲಿ ವಿಪ್ರತಿಪತ್ತಿಗೆ ಅವಕಾಶವಿಲ್ಲವು. ಎಂದರೆ ಪರಮಾತ್ಮನು ತನ್ನ ಸ್ವರೂಪಕ್ಕೆ ಸ್ವಲ್ಪವೂ ಚ್ಯುತಿಯುಬ್ಬದಂತೆ ಸೃಷ್ಟಿ-ಸ್ಥಿತಿ-ಲಯಗಳಿಗೆ ನಿಯಾಮಕನಾಗಿರುವನೆಂದು ತಾತ್ಪರ್ಯವು. ॥೨೬॥

ರೋಗ ಮತ್ತು ಔಷಧ ಇವುಗಳಿಗೆ ಬಾಧ್ಯ-ಬಾಧಕಭಾವವೆಂಬುದು ಹೇಗೆ ಶಾಸ್ತ್ರದಿಂದ ತಿಳಿಯಲ್ಪಡುತ್ತದೋ ಹಾಗೆ ಈ ಈಶ್ವರಸ್ವರೂಪದ ಅರಿವೂ ರಾಗ, ದ್ವೇಷ, ಅಹಂ, ಮಮ ಎಂಬ ಅಭಿಮಾನವುಳ್ಳ ಪ್ರಪಂಚದಲ್ಲಿನ ವ್ಯವಹಾರವೂ ಬಾಧ್ಯ ಬಾಧಕಗಳೆಂದು ವೇದದಲ್ಲಿ ನಿರ್ಣಯಿಸಲ್ಪಟ್ಟಿದೆ. ಆ ವೇದದಲ್ಲಿಯೇ ಈಶ್ವರನ ನಿರ್ವಿಕಾರ ಸ್ವರೂಪಕ್ಕೂ, ಪ್ರಪಂಚದ ವಿಚಿತ್ರಕಾರ್ಯಗಳಿಗೂ ಬಾಧ್ಯ-ಬಾಧಕವೆಂಬುದು ಇಲ್ಲವೇ ಇಲ್ಲವೆಂದೂ, ಅಧ್ಯಾರೋಪ ಅಪವಾದನ್ಯಾಯವನ್ನು ಅನುಸರಿಸಿ, ಹೇಳಿದೆ. ಆದುದರಿಂದ ಅದು ಗೌಣವಲ್ಲದೇ ಮುಖ್ಯವಲ್ಲವೆಂದು ತಾತ್ಪರ್ಯವು. ॥೨೭॥

ಈಶ್ವರಸ್ಯ ಸ್ವರೂಪೇ ಚ ಜಗತ್ಸರ್ಗಾದಿಷು ದ್ವಿಜಾಃ ।
ಅತೀಂದ್ರಿಯಾರ್ಥೇಷ್ವನ್ಯೇಷು ಮಾನಂ ನಃ ಶ್ರುತಿರೇವ ಹಿ ॥೨೮॥

ಅಥವಾ ದೇವದೇವಸ್ಯ ಸರ್ವದುರ್ಘಟಕಾರಿಣೀ ।
ಶಕ್ತಿರಸ್ತಿ ತಯಾ ಸರ್ವಂ ಘಟತೇ ಮಾಯಯಾಽನಘಾಃ ॥೨೯॥

ಪ್ರತೀತಿಸಿದ್ಧಾ ಸಾ ಮಾಯಾ ತತ್ತ್ವತೋಽತ್ರ ನ ಸಂಶಯಃ ।
ತಯಾ ದುರ್ಘಟಕಾರಿಣ್ಯಾ ಸರ್ವಂ ತಸ್ಯೋಪಪದ್ಯತೇ ॥೩೦॥

ಸಾ ತಿಷ್ಠತು ಮಹಾಮಾಯಾ ಸರ್ವದುರ್ಘಟಕಾರಿಣೀ ।
ವೇದಮಾನೇನ ಸಂಸಿದ್ಧಂ ಸರ್ವಂ ತದ್ಗ್ರಾಹ್ಯಮೇವ ಹಿ ॥೩೧॥

ಚೋದ್ಯಾನರ್ಹೇ ತು ವೇದಾರ್ಥೇ ಚೋದ್ಯಂ ಕುರ್ವನ್ ಪತತ್ಯಧಃ ।
ಅತಃ ಸರ್ವಂ ಪರಿತ್ಯಜ್ಯ ವೇದಮೇಕಂ ಸಮಾಶ್ರಯೇತ್ ॥೩೨॥

ಎಲೌ ಬ್ರಾಹ್ಮಣರೇ, ಪರಮಾತ್ಮನ ಸ್ವರೂಪದಲ್ಲಿಯೂ, ಪ್ರಪಂಚದ ಸೃಷ್ಟಿ ಸ್ಥಿತ್ಯಾದಿ ವ್ಯವಹಾರಗಳಲ್ಲಿಯೂ ಮತ್ತು ಇಂದ್ರಿಯಗಳಿಗೆ ಗೋಚರಿಸದ ಬೇರೆಯ ವಿಷಯಗಳಲ್ಲಿಯೂ ನಮಗೆ ವೇದವೇ ಪರಮ ಪ್ರಮಾಣವಷ್ಟೇ. ॥೨೮॥

ಎಲೌ ಪರಿಶುದ್ಧರೇ, ಅಲ್ಲಿ ಹೀಗೆ ಹೇಳಿದೆ. ದೇವ-ದೇವನಾದ ಪರಮಾತ್ಮನಿಗೆ ಸಕಲ ದುರ್ಘಟಘಟನೆಗಳನ್ನೂ ಉಂಟುಮಾಡತಕ್ಕ ಶಕ್ತಿಯೊಂದಿದೆ. ಆ ಮಾಯೆಯಿಂದ ಸಕಲವೂ ಘಟಿಸುತ್ತದೆ. ಆದುದರಿಂದ ಹಿಂದೆ ಹೇಳಿದ ವಿರೋಧಕ್ಕೆ ಅವಕಾಶವಿಲ್ಲವೆಂದೂ ಮಾಯೆಯು ಎಲ್ಲಕ್ಕೂ ಕಾರಣವೆಂದೂ ಅಭಿಪ್ರಾಯವು. ॥೨೯॥

ಪರಮಾರ್ಥವಾಗಿ ವಿಚಾರಮಾಡಿದರೆ ಆ ಮಾಯೆಯೆಂಬುದು ಬರಿಯ ತೋರಿಕೆ ಮಾತ್ರದಿಂದ ಸಿದ್ಧಿಸಬೇಕೆಂಬುದರಲ್ಲಿ ಸಂದೇಹವಿಲ್ಲವು. ದುರ್ಘಟಘಟನೆಗಳನ್ನುಂಟುಮಾಡುವ ಆ ಮಾಯೆಯಿಂದ ಸರ್ವವೂ ಆ ಈಶ್ವರನಲ್ಲಿ ಯುಕ್ತವಾಗುತ್ತದಲ್ಲದೆ ಅನುಚಿತವಾಗಲಾರದು. ॥೩೦॥

ಸಕಲ ಅನರ್ಥಗಳನ್ನು ಉಂಟುಮಾಡತಕ್ಕ ಆ ಮಾಯೆಯು ಹಾಗಿರಲಿ. ವೇದಪ್ರಮಾಣದಿಂದ ಸಿದ್ಧವಾಗುವ ಸರ್ವವೂ ಗ್ರಾಹ್ಯವೆಂಬುದರಲ್ಲಿ ಸಂದೇಹವಿಲ್ಲವಷ್ಟೆ. ॥೩೧॥

ಆಕ್ಷೇಪಕ್ಕೆ ಅನುಚಿತವಾದ ವೇದಾರ್ಥವಲ್ಲಿ ಕುಚೋದ್ಯವನ್ನು ಮಾಡತಕ್ಕ

ರೂಪಾವಲೋಕನೇ ಚಕ್ಷುರ್ಯಥಾಽಸಾಧಾರಣಂ ಭವೇತ್ ।
ತಥಾ ಧರ್ಮಾದಿವಿಜ್ಞಾನೇ ವೇದೋಽಸಾಧಾರಣಃ ಪರಃ ॥೩೩॥

ರೂಪಾವಲೋಕನಸ್ಯೇದಂ ಯಥಾ ಘ್ರಾಣಂ ನ ಕಾರಣಂ ।
ತಥಾ ಧರ್ಮಾದಿಬುದ್ಧೇಸ್ತು ದ್ವಿಜಾಸ್ತರ್ಕೋ ನ ಕಾರಣಂ ॥೩೪॥

ತಸ್ಮಾದ್ವೇದೋದಿತೇನೈವ ಪ್ರಕಾರೇಣ ಮಹೇಶ್ವರಃ ।
ಅದ್ವಿತೀಯಸ್ಸ್ವಯಂ ಶುದ್ಧಸ್ತಥಾಽಪೀದಂ ಜಗತ್ತತಃ ॥೩೫॥

ಆವಿರ್ಭೂತಂ ತಿರೋಭೂತಂ ಸ ಏವ ಸಕಲಂ ಜಗತ್ ।
ವೈಭವಂ ತಸ್ಯ ವಿಜ್ಞಾತುಂ ನ ಶಕ್ಯಂ ಭಾಷಿತುಂ ಮಯಾ ॥೩೬॥

ಸ ಏವ ಸಾಹಸೀ ಸಾಕ್ಷಾತ್ಸರ್ವರೂಪತಯಾ ಸ್ಥಿತಃ ।
ಪರಿಜ್ಞಾತುಂ ಚ ವಕ್ತುಂ ಚ ಸಮರ್ಥೋ ನಾ ಪರಃ ಪುಮಾನ್॥೩೭॥

ಮನುಷ್ಯನು ಪತಿತನಾಗುತ್ತಾನೆ. ಆದ್ದರಿಂದ ತತ್ವಜ್ಞಾನವನ್ನು ಅಪೇಕ್ಷಿಸುವವರು ಸರ್ವವನ್ನೂ ಬಿಟ್ಟು ವೇದ ಒಂದನ್ನೇ ಚೆನ್ನಾಗಿ ಆಶ್ರಯಿಸಬೇಕು. ||೩೨||

ಪದಾರ್ಥದ ರೂಪವನ್ನು (ಬಣ್ಣವನ್ನು) ತಿಳಿಯಲು ಕಣ್ಣು ಹೇಗೆ ಅಸಾಧಾರಣವಾದದ್ದೋ, ಹಾಗೆ ಧರ್ಮವೇ ಮೊದಲಾದುವುಗಳನ್ನು ತಿಳಿಯುವುದಕ್ಕೆ ವೇದವೇ ಅಸಾಧಾರಣ ಸಾಧನವು ಮತ್ತು ಮುಖ್ಯವು. ||೩೩||

ಬಣ್ಣವನ್ನು ತಿಳಿಯಲು ಈ ಮೂಗು ಹೇಗೆ ಸಾಧನವಾಗಲಾರದೋ ಹಾಗೆ, ಎಲೌ ಬ್ರಾಹ್ಮಣರೇ, ತರ್ಕ, ಯುಕ್ತಿಯಾವರೋ ಸ್ವತಂತ್ರ ಸಾಧನವಲ್ಲವು. ||೩೪||

ಆದುದರಿಂದ ವೇದವಲ್ಲಿ ಹೇಳಲ್ಪಟ್ಟಿರುವ ರೀತಿಯಿಂದಲೇ ಪರಮೇಶ್ವರನು ಅದ್ವಿತೀಯನು ಮತ್ತು ಸ್ವಯಂ ಸ್ಫಟಿಕದಂತೆ ಸುನಿರ್ಮಲನೂ ಹೌದು. ಆದರೂ ಈ ಪ್ರಪಂಚವು ಅವನಿಂದಲೇ ಉಂಟಾಗುತ್ತದೆ. ||೩೫||

ಉತ್ಪನ್ನವಾಗುತ್ತಿರುವ ಮತ್ತು ಅಡಗಿಹೋಗುತ್ತಿರುವ, ಹೊರಗೆ ಕಾಣುವ ಮತ್ತು ಕಾಣದೇ ಇರುವ ಸಕಲ ಪ್ರಪಂಚವೂ ಆ ಪರಮಾತ್ಮನೇ. ಆತನ ಮಹಿಮೆಯನ್ನು ತಿಳಿಯುವುದಕ್ಕೂ ಮತ್ತು ಬಾಯಿಂದ ಹೇಳುವುದಕ್ಕೂ ನನ್ನಿಂದ ಸಾಧ್ಯವಿಲ್ಲ. ||೩೬||

ಪರಮ ಸಾಹಸಿಯೂ, ಚತುರನೂ ಆದ ಆತನೇ ಪ್ರತ್ಯಕ್ಷನಾಗಿ ಸಕಲ ರೂಪದಿಂದಲೂ ಇರುವವನಾದ್ದರಿಂದ ತಿಳಿಯುವುದಕ್ಕೂ ಮತ್ತು ಹೇಳುವುದಕ್ಕೂ ಅವನೇ ಶಕ್ತನಲ್ಲದೇ ಬೇರೆ ಮನುಷ್ಯನಲ್ಲವು. ||೩೭||

ಯಥಾಽಯಃ ಪಾವಕೇನೇದ್ಧಂ ಭಾತೀವ ದಹತೀವ ಚ ।
ತಥಾ ವೇದಃ ಶಿವೇನೇದ್ಧಃ ಸರ್ವಂ ವಕ್ತೀವ ಭಾಸತೇ ॥೩೮॥

ಅಯೋಽವಯವಸಂಕ್ರಾಂತೋ ಯಥಾ ದಹತಿ ಪಾವಕಃ ।
ತಥಾ ವೇದೇಷು ಸಂಕ್ರಾಂತಃ ಶಿವಃ ಸರ್ವಾರ್ಥಸಾಧಕಃ ॥೩೯॥

ತಥಾಽಪಿ ವೇದರಹಿತಃ ಸ್ವಯಂ ಧರ್ಮಾದಿವಸ್ತುನಿ ।
ನ ಪ್ರಮಾಣಂ ವಿನಾ ತೇನ ವೇದೋಽಪಿ ದ್ವಿಜಪುಂಗವಾಃ ॥೪೦॥

ತಸ್ಮಾದ್ವೇದೋ ಮಹೇಶೇದ್ಧಃ ಪ್ರಮಾಣಂ ಸರ್ವವಸ್ತುನಿ ।
ಅನ್ಯಥಾ ನ ಜಡಃ ಶಬ್ದೋಽತೀಂದ್ರಿಯಾರ್ಥಸ್ಯ ಸಾಧಕಃ ॥೪೧॥

ಬೆಂಕಿಯಿಂದ ಕಾಯಿಸಿದ ಕಬ್ಬಿಣವು ಹೇಗೆ ಪ್ರಕಾಶಿಸುವಂತೆಯೂ ಮತ್ತು ಸುಡುವಂತೆಯೂ ತೋರುತ್ತದೋ ಎಂದರೆ ಸುಡುವುದಾದಗಲೀ, ಪ್ರಕಾಶವಾಗಲೀ ನಿಶ್ಚಯವಾಗಿಯೂ ಕಬ್ಬಿಣದ ಧರ್ಮವಲ್ಲವೋ, ಹಾಗೆ ಅದು ತೋರುವಿಕೆ ಮಾತ್ರ ಹೇಗೋ, ಹಾಗೆ ಈಶ್ವರನಿಂದ ಪ್ರಕಾಶಿತವಾದ ವೇದವೂ ಹೇಳುತ್ತದೆ ಮತ್ತು ಪ್ರಕಾಶಿಸುತ್ತದೆ ಎನ್ನುವಂತೆ ಇದೆ. ಎಂದರೆ ಹಾಗೆ ಹೇಳುವಿಕೆಗೂ ಮತ್ತು ಪ್ರಕಾಶಕ್ಕೂ, ಈ ಪರಮಾತ್ಮನಿಗೂ, ವಾಸ್ತವ ಸಂಬಂಧವೂ ಇಲ್ಲವೆಂಬುದು ತಾತ್ಪರ್ಯವು. ॥೩೮॥

ಕಬ್ಬಿಣದ ಅಂಗಗಳಲ್ಲಿ ಸೇರಿರುವ ಅಗ್ನಿಯು ಹೇಗೆ ದಹಿಸುತ್ತಾನೆಯೋ, ಹಾಗೆ ವೇದಗಳಲ್ಲಿ ಸೇರಿರುವ ಶಿವನು ಸಕಲ ಪ್ರಯೋಜನಗಳನ್ನೂ ಸಾಧಿಸಿಕೊಡುತ್ತಾನೆ. ॥೩೯॥

ಹಾಗಾದಾಗ್ಯೂ ಧರ್ಮಾದಿ ಪದಾರ್ಥದ ವಿಷಯದಲ್ಲಿ ವೇದರಹಿತನಾದ ತಾನೂ (ಈಶ್ವರನೂ) ಪ್ರಮಾಣವಲ್ಲವು. ಎಲೌ ಬ್ರಾಹ್ಮಣಶ್ರೇಷ್ಠರೇ, ಹಾಗೆಯೇ ಆ ಪರಮಾತ್ಮನಿಲ್ಲದ ವೇದವೂ ಪ್ರಮಾಣವಲ್ಲವು. ॥೪೦॥

ಆದ್ದರಿಂದ ಪರಮೇಶ್ವರನಿಂದ ಪ್ರಕಾಶಿತವಾದ ವೇದವು ಎಲ್ಲವೂ ಸಕಲ ವಿಷಯದಲ್ಲೂ ಪ್ರಮಾಣವಾದದ್ದು. ಹಾಗಲ್ಲದಿದ್ದರೆ ಜಡವಾದ ಶಬ್ದವು ಇಂದ್ರಿಯಗಳಿಗೆ ಗೋಚರಿಸದ ಅರ್ಥಜ್ಞಾನವನ್ನು ಸಾಧಿಸಿಕೊಡಲಾರದು. ಆದ್ದರಿಂದ ಅದಕ್ಕೂ ಪರಮಾತ್ಮನೇ ಪ್ರಕಾಶಕನೆಂದಾಯಿತು. ॥೪೧॥

ಮೇರುಪಾರ್ಶ್ವೇ ತಪಸ್ತಪ್ತ್ವಾ ದೃಷ್ಟ್ವಾ ಶಂಭುಂ ಜಗದ್ಗುರುಂ ।
ಅಯಮರ್ಥೋ ಮಯಾ ಜ್ಞಾತಸ್ತತಸ್ತಸ್ಯ ಪ್ರಸಾದತಃ ॥೪೨॥

ತದಾಜ್ಞಯೈವ ವಿಪ್ರೇಂದ್ರಾಃ ಸಂಹಿತೇಯಂ ಮಯೋದಿತಾ ।
ಅಹಂ ಕ್ಷುದ್ರೋಽಪಿ ಯುಷ್ಮಾಕಂ ಮಹಾತ್ಮನಾಮಪಿ ದೇಶಿಕಃ ॥೪೩॥

ಅಭವಂ ಸಾ ಶಿವಸ್ಯಾಜ್ಞಾ ಲಂಘನೀಯಾ ನ ಕೇನಚಿತ್ ।
ಶಿವಸ್ಯಾಜ್ಞಾ ಬಲಾದ್ವಿಷ್ಣುರ್ಜಾಯತೇ ಮ್ರಿಯತೇಽಪಿ ಚ ॥೪೪॥

ಬ್ರಹ್ಮಾ ಸರ್ವಜಗತ್ಕರ್ತಾ ವಿರಾಟ್ಸಮ್ರಾಟ್ಸ್ವರಾಡಪಿ ।
ಖರೋಷ್ಟ್ರತರವಃ ಕ್ಷುದ್ರಾ ಬ್ರಹ್ಮವಿಷ್ಣ್ವಾದಯೋಽಭವನ್ ॥೪೫॥

ತಸ್ಮಾದ್ಗುರುತ್ವಂ ಮೇ ವಿಪ್ರಾಃ ಯುಜ್ಯತೇ ನ ಹಿ ಸಂಶಯಃ ।
ಶಿಷ್ಯತ್ವಂ ಚಾಪಿ ಯುಷ್ಮಾಕಂ ಸ್ವತಂತ್ರಃ ಖಲು ಶಂಕರಃ ॥೪೬॥

ನಾನು ಮೇರುಪರ್ವತದ ಸಮೀಪದಲ್ಲಿ ತಪಸ್ಸನ್ನು ಮಾಡಿ ಜಗದ್ಗುರುವಾದ ಪರಮೇಶ್ವರನನ್ನು ಪ್ರತ್ಯಕ್ಷವಾಗಿ ನೋಡಿದೆನು. ಅನಂತರ ಆ ಮಹಾಮಹಿಮನ ಅನುಗ್ರಹದಿಂದ ಈ ತತ್ವವು ನನ್ನಿಂದ ತಿಳಿಯಲ್ಪಟ್ಟಿತು. ॥೪೨॥

ಎಲೌ ಬ್ರಾಹ್ಮಣಶ್ರೇಷ್ಠರೇ, ಆತನ ಅಪ್ಪಣೆಯಿಂದಲೇ ಈ ಸಂಹಿತೆಯು ನನ್ನಿಂದ ನಿಮಗೆ ಹೀಗೆ ಹೇಳಲ್ಪಟ್ಟಿತು. ಅಲ್ಪನಾದರೂ ಕೂಡ ನಾನು ಮಹಾತ್ಮರಾಗಿರತಕ್ಕ ನಿಮ್ಮಗಳಿಗೂ ಈ ತತ್ವದ ಉಪದೇಶಕ್ಕೆ ಕಾರಣನಾದುದು ಆ ಪರಮಾತ್ಮನ ಆಜ್ಞೆಯಿಂದಲೇ. ಆತನ ಆ ಜ್ಞಾನಬಲದಿಂದಲೇ ನಾನು ನಿಮಗೆ ಉಪದೇಶಕನು ಆದೆನು. ॥೪೩॥

ಆ ಪರಮೇಶ್ವರನ ಆಜ್ಞೆಯು ಯಾರಿಂದಲೂ ಮೀರಲು ಸಾಧ್ಯವಲ್ಲವು. ಪರಶಿವನ ಆಜ್ಞಾಬಲದಿಂದಲೇ ವಿಷ್ಣುವು (ಅವತಾರ ಸಮಯಗಳಲ್ಲಿ) ಹುಟ್ಟುತ್ತಾನೆ. ಮತ್ತು ಮರಣಹೊಂದುತ್ತಾನೆ.

ಬ್ರಹ್ಮನು ಸಕಲ ಜಗತ್ಕರ್ತನೂ, ವಿರಾಜನೂ, ಸಾಮ್ರಾಜನೂ, ಆದುದಕ್ಕೂ, ಕ್ಷುದ್ರಗಳಾದ ಕತ್ತೆ, ಒಂಟೆ ಮತ್ತು ಮರಗಳೂ ಉಂಟಾದುದಕ್ಕೂ, ಬ್ರಹ್ಮ, ವಿಷ್ಣು ಮತ್ತು ಮಹೇಶ್ವರರೂ ಉಂಟಾದುದಕ್ಕೂ ಕೂಡ ಪರಮೇಶ್ವರನ ಆಜ್ಞೆಯೇ ಕಾರಣವು. ॥೪೫॥

ಆದಕಾರಣದಿಂದ ವಿಪ್ರರೇ, ನನಗೂ ಗುರುತ್ವವು ಯೋಗ್ಯವಾಗುತ್ತದೆ. ನಿಮ್ಮಗಳಿಗೆ ಶಿಷ್ಯತ್ವವೂ ಸಂಭವಿಸುತ್ತದೆ, ಎಂಬುದರಲ್ಲಿ ಸಂಶಯವಿಲ್ಲವು. ಏಕೆಂದರೆ, ಈಶ್ವರನು ಸರ್ವಜ್ಞನೂ, ಸರ್ವಶಕ್ತನೂ, ಸ್ವತಂತ್ರನೂ ಆಗಿದಾನೆ. ॥೪೬॥

ಮಹಾದೇವಸ್ಯ ಭಕ್ತಾಶ್ಚ ತದ್ಭಕ್ತಾ ಅಪಿ ದೇಹಿನಃ ।
ಸ್ವತಂತ್ರಾ ವೇದವಿಚ್ಛ್ರೇಷ್ಠಾಃ ಕಿಂ ಪುನಃ ಸ ಮಹೇಶ್ವರಃ ॥೪೭॥

ಸ್ವಾತಂತ್ರ್ಯಾದ್ಧಿ ಶಿವೇನೈವ ವಿಷಂ ಭುಕ್ತಂ ವಿನಾಮೃತಂ ।
ಬ್ರಹ್ಮಣಶ್ಚ ಶಿರಶ್ಛಿನ್ನಂ ವಿಷ್ಣೋರಪಿ ತಥೈವ ಚ ॥೪೮॥

ಸ್ವಾತಂತ್ರ್ಯಾದ್ಧಿ ಕೃತಂ ತೇನ ಮುನೀಂದ್ರಾ ಬ್ರಹ್ಮವಾದಿನಃ ।
ತತ್ಪ್ರಸಾದಾನ್ಮಯಾ ಸರ್ವಂ ವಿದಿತಂ ಕರಬಿಲ್ವವತ್ ॥೪೯॥

ಪ್ರಸಾದಬಲತಃ ಸಾಕ್ಷಾತ್ಸತ್ಯಾರ್ಥಃ ಕಥಿತೋ ಮಯಾ ।
ಪ್ರಸಾದೇನ ವಿನಾ ವಕ್ತುಂ ಕೋ ವಾ ಶಕ್ತೋ ಮುನೀಶ್ವರಾಃ ॥೫೦॥

ತಸ್ಮಾತ್ಸರ್ವಂ ಪರಿತ್ಯಜ್ಯ ಶ್ರದ್ಧಯಾ ಪರಯಾ ಸಹ ।
ಮದುಕ್ತಂ ಪರಮಾದ್ವೈತಂ ವಿದ್ಯಾದ್ವೇದೋದಿತಂ ಬುಧಃ ॥೫೧॥

ಮಹೇಶ್ವರನ ಭಕ್ತರೂ, ಅವರ ಭಕ್ತರಾದ ಮನುಷ್ಯರೂ ಸಹ ಸ್ವತಂತ್ರರೂ, ವೇದಜ್ಞರೊಳಗೆ ಶ್ರೇಷ್ಠರೂ ಆಗಿರುವಾಗ ಆ ಪರಮೇಶ್ವರನು ಸ್ವತಂತ್ರನು. ಎಂದು ಬೇರೆ ಹೇಳತಕ್ಕದ್ದೇನಿದೆ? ॥೪೭॥

ಸ್ವಾತಂತ್ರ್ಯವಿರುವುದರಿಂದಲೇ ಶಿವನಿಂದ, ಅಮೃತವನ್ನು ದೇವತೆಗಳಿಗೆ ಬಿಟ್ಟು, ವಿಷವು ಪಾನಮಾಡಲ್ಪಟ್ಟಿತು. ಅದರಿಂದಲೇ ಬ್ರಹ್ಮನ ಶಿರಸ್ಸೂ ಕತ್ತರಿಸಲ್ಪಟ್ಟಿತು. ವಿಷ್ಣುವಿನದೂ ಹಾಗೆಯೇ. ॥೪೮॥

ಆ ಕಾರಣದಿಂದ ಸ್ವಾತಂತ್ರ್ಯದಿಂದಲೇ ಮುನಿಶ್ರೇಷ್ಠರು ಬ್ರಹ್ಮವಾದಿಗಳಾಗಿ ಮಾಡಲ್ಪಟ್ಟರು. ಆ ಅನುಗ್ರಹಬಲದಿಂದಲೇ ನನ್ನಿಂದ ಸಮಸ್ತ ವಿಷಯವೂ ಕೈಯಲ್ಲಿರತಕ್ಕ ಬಿಲ್ವಫಲದಂತೆ ವಿಶದವಾಗಿ ತಿಳಿಯಲ್ಪಟ್ಟಿತು. ॥೪೯॥

ಎಲೌ ಮುನಿಶ್ರೇಷ್ಠರೇ, ಆ ಅನುಗ್ರಹಬಲದಿಂದಲೇ ಪ್ರತ್ಯಕ್ಷವಾದ ಸತ್ಯಾರ್ಥವು ನನ್ನಿಂದ ಹೇಳಲ್ಪಟ್ಟಿತು. ಆ ಪರಮಾತ್ಮನ ಅನುಗ್ರಹವಿಲ್ಲದೇ ಮಾತನಾಡುವುದಕ್ಕೆ ಯಾವನು ತಾನೇ ಶಕ್ತನಾಗುತ್ತಾನೆ? ॥೫೦॥

ಆದ್ದರಿಂದ ಎಲ್ಲವನ್ನೂ ಬಿಟ್ಟು ಹೆಚ್ಚಾದ ಶ್ರದ್ಧೆಯಿಂದ ನನ್ನಿಂದ ಹೇಳಲ್ಪಟ್ಟ ಈ ಪರಮಾದ್ವೈತವನ್ನು ಬುದ್ಧಿವಂತನಾದವನು ವೇದೋದಿತವೆಂಬುದಾಗಿ ತಿಳಿಯುವವನಾಗಬೇಕು. ॥೫೧॥

ವಿಜ್ಞಾನೇನ ವಿನಾಽನ್ಯೇನ ನಾಸ್ತಿ ಮುಕ್ತಿರ್ನ ಸಂಶಯಃ ।
ಅತೋ ಯೂಯಮಪಿ ಪ್ರಾಜ್ಞಾ ಭವತಾದ್ವೈತವಾದಿನಃ ॥೫೨॥

ಪರಮಾದ್ವೈತವಿಜ್ಞಾನಂ ಸಿದ್ಧಂ ಸ್ವಾನುಭವೇನ ಚ ।
ಶ್ರುತಿ-ಸ್ಮೃತಿ-ಪುರಾಣಾದ್ಯೈಸ್ತರ್ಕೈರ್ವೇದಾನುಸಾರಿಭಿಃ ॥೫೩॥

ಪರಮಾದ್ವೈತ ವಿಜ್ಞಾನಮೇವ ಗ್ರಾಹ್ಯಂ ಯಥಾಸ್ಥಿತಂ ।
ನಾನ್ಯತರ್ಕೈಶ್ಚ ಹಂತವ್ಯಮಿದಮಾಮ್ನಾಯವಾಕ್ಯಜಂ ॥೫೪॥

ವಿನೈವ ಪರಮಾದ್ವೈತಂ ಭೇದಂ ಕೇಚನ ಮೋಹಿತಾಃ ।
ಕಲ್ಪಯಂತಿ ತದಾ ಶಂಭುಃ ಸದ್ವಿತೀಯೋ ಭವಿಷ್ಯತಿ ॥೫೫॥

ಆಮ್ನಾಯಾರ್ಥಂ ಮಹಾಽದ್ವೈತಂ ನೈವ ಜಾನಂತಿ ಯೇ ಜನಾಃ ।
ವೇದಸಿದ್ಧಂ ಮಹಾಽದ್ವೈತಂ ಕೋ ವಾ ವಿಜ್ಞಾತುಮರ್ಹತಿ ॥೫೬॥

ಪ್ರಾಜ್ಞರೇ, ಶಾಸ್ತ್ರಜ್ಞಾನವನ್ನು ಬಿಟ್ಟು ಬೇರೆಯ ರೀತಿಯಿಂದ ಮುಕ್ತಿಯಿಲ್ಲ ವೆಂಬುದು ನಿಶ್ಚಯವು. ಆದ್ದರಿಂದ ಪ್ರಾಜ್ಞರಾದ ನೀವುಗಳೂ ಕೂಡ ಅದ್ವೈತವಾದಿ ಗಳಾಗಿರಿ. ॥೫೨॥

ಈ ಲೋಕೋತ್ಕೃಷ್ಟವಾದ ಅದ್ವೈತಶಾಸ್ತ್ರಜ್ಞಾನವು ಶ್ರುತಿ, ಸ್ಮೃತಿ, ಪುರಾಣ ಮೊದಲಾದುವುಗಳಿಂದಲೂ, ವೇದವನ್ನನುಸರಿಸುವ ತರ್ಕಗಳಿಂದಲೂ ಮತ್ತು ಸ್ವಂತ ಅನುಭವದಿಂದಲೂ ಸಿದ್ಧವಾಗಿದೆ. ॥೫೩॥

ಲೋಕೋತ್ಕೃಷ್ಟವಾದ ಅದ್ವೈತಶಾಸ್ತ್ರಜ್ಞಾನವೇ ಯಥಾಸ್ಥಿತವಾಗಿ ಗ್ರಹಿಸಲು ಯೋಗ್ಯವಾದದ್ದು. ವೇದವಾಕ್ಯಗಳಿಂದ ನಿರ್ಣಯಿಸಲ್ಪಟ್ಟ ಈ ಶಾಸ್ತ್ರಜ್ಞಾನವು ಬೇರೆಯಾವ ತರ್ಕಗಳಿಂದ, ನಾಶಪಡಿಸಲ್ಪಡಲೂ ಆಗದು. ॥೫೪॥

ಈ ಉತ್ಕೃಷ್ಟವಾದ ಅದ್ವೈತವನ್ನು ಬಿಟ್ಟು ಭ್ರಾಂತರಾದ ಕೆಲವರು ಭೇದವನ್ನು ಕಲ್ಪಿಸಿಕೊಳ್ಳುತ್ತಾರೆ. ಹಾಗಾದರೆ ಈಶ್ವರನು ವಾಸ್ತವವಾದ ಎರಡನೆಯ ವಸ್ತುವುಳ್ಳವನಾಗುತ್ತಾನೆ. ॥೫೫॥

ವೇದಗಳ ತಾತ್ಪರ್ಯಾರ್ಥವಾಗಿರುವ ಈ ಮಹಾ ಅದ್ವೈತವನ್ನು ಯಾವ ಜನರು ತಿಳಿಯುವುದಿಲ್ಲವೋ ಅವರು ಭ್ರಾಂತಿಯಿಂದ ಕಲ್ಪಿತವಾದ ಪ್ರಮಾಣಗಳಿಂದ ಆ ಮಹಾಽದ್ವೈತವನ್ನು ಹೇಗೆ ತಾನೇ ತಿಳಿಯಲು ಸಮರ್ಥರಾಗುತ್ತಾರೆ? ॥೫೬॥

ಭಿನ್ನಾಭಿನ್ನತಯಾ ದೇವಂ ಪರಮಾದ್ವೈತಲಕ್ಷಣಂ ।
ಕಲ್ಪಯಂತಿ ಮಹಾಮೋಹಾತ್ ಕೇಚಿತ್ತಚ್ಚ ನ ಸಂಗತಂ ॥೫೭॥

ಭೇದಾಭೇದೇಽಪಿ ಭೇದಾಂಶೋ ಮಿಥ್ಯಾಭವತಿ ಸತ್ತಮಾಃ ।
ಭೇದಾನಿರೂಪಣಾದೇವ ಧರ್ಮ್ಯಾದೇರನಿರೂಪಣಾತ್ ॥೫೮॥

ತಸ್ಮಾನ್ನಾಸ್ತೀಶ್ವರಾದನ್ಯತ್ಕಿಂಚಿದಪ್ಯಾಸ್ತಿಕೋತ್ತಮಾಃ ।
ದ್ವಿತೀಯಾದ್ವೈಭಯಂ ಜಂತೋರ್ಭವತೀತ್ಯಾಹ ಹಿ ಶ್ರುತಿಃ ॥೫೯॥

ಕೋ ಮೋಽಹಸ್ತತ್ರ ಕಶ್ಶೋಕ ಏಕತ್ವಮನುಪಶ್ಯತಃ ।
ಇತಿ ಚಾಹ ಹಿ ಸಾ ಸಾಧ್ವೀ ಶ್ರುತಿರದ್ವೈತಮಾಸ್ತಿಕಾಃ ॥೬೦॥

ಪರಿಶುದ್ಧವಾದ ಅದ್ವೈತವೆಂಬ ಲಕ್ಷಣವುಳ್ಳ ಪರಮಾತ್ಮನನ್ನು ವಾಸ್ತವವಾಗಿ ಭೇದಾಭೇದ ರೂಪವುಳ್ಳವನೆಂದೂ ಕೆಲವರು ಮಹಾಭ್ರಾಂತಿಯಿಂದ ಕಲ್ಪಿಸಿಕೊಳ್ಳುತ್ತಾರೆ. ಅದೂ ಸಹ ಸಂಗತವಲ್ಲವು. ॥೫೭॥

ಎಲೌ ಶ್ರೇಷ್ಠತಮರೇ, ಭೇದಾಭೇದವೆಂಬುದನ್ನು ಯೋಚಿಸಿದರೂ ಭೇದಾಂಶವು ಸುಳ್ಳಾಗುತ್ತದೆ. ಭೇದವನ್ನು ಯಾವ ಪ್ರಮಾಣದಿಂದಲೂ ಹೇಳುವುದಕ್ಕಾಗುವುದಿಲ್ಲವು. ಏಕೆಂದರೆ ಧರ್ಮಿ ಯಾರೆಂಬುದರ ನಿರೂಪಣವು ಕಷ್ಟವಾಗುತ್ತದೆ. ಸ್ವರೂಪದಿಂದಲಾಗಲೀ ಅಥವಾ ಧರ್ಮದಿಂದಲಾಗಲೀ ಭೇದವೆಂಬುದನ್ನು ಹೇಳುವುದಕ್ಕೆ ಯಾರಿಂದಲೂ ಸಾಧ್ಯವಿಲ್ಲವು. ಆದ್ದರಿಂದ ದ್ವೈತವು ವೇದಾಂತಶಾಸ್ತ್ರಾರ್ಥವೆಂದು ಹೇಳುವುದು ತಪ್ಪು. ॥೫೮॥

ಆಸ್ತಿಕೋತ್ತಮರೇ, ಆದ್ದರಿಂದ ಈಶ್ವರನಿಗಿಂತಲೂ ಭಿನ್ನವಾದದ್ದು ಯಾವುದೂ ಇಲ್ಲವು. ಎರಡನೆಯದರ ದೆಸೆಯಿಂದಲೇ ಭಯವೆಂಬುದಾಗಿ ವೇದವು ಹೇಳುತ್ತದೆಯಷ್ಟೆ. "ದ್ವಿತೀಯಾದ್ವೈಭಯಂಭವತಿ" ಎಂದು ಬೃ.ಉ. ೧.೪.೨. ಹೇಳುತ್ತದೆ. ॥೫೯॥

ಎಲೌ ಆಸ್ತಿಕರೇ, "ತತ್ರ ಕೋ ಮೋಹಃ ಕಶ್ಶೋಕ ಏಕತ್ವಂ ಅನುಪಶ್ಯತಃ" ಎಂಬ ಶ್ರುತಿಯು ಈಶ.ಉ. ೭. ಅದ್ವೈತವನ್ನೇ ಅನುಸಂಧಾನಮಾಡುವವನಿಗೆ ಮೋಹವೆಂದರೇನು? ಅಂತಹವರಿಗೆ ಶೋಕವೆನ್ನುವುದು ಯಾವುದು? ಎಂಬುದಾಗಿ ತಾನೇ ಆ ಪರಮ ಪರಿಶುದ್ಧವಾದ ಅದ್ವೈತಬ್ರಹ್ಮತತ್ವವನ್ನು ಹೇಳುತ್ತಿರುವುದು. ॥೬೦॥

ಏಕತ್ವಮೇವ ವಾಕ್ಯಾರ್ಥೋ ನಾಪರಃ ಪರಮಾಸ್ತಿಕಾಃ ।
ಸ್ತುತಿನಿಂದೇ ವಿರುಧ್ಯೇತೇ ಯದಿ ಭೇದೋ ವಿವಕ್ಷಿತಃ ॥೬೧॥

ಅತೀವ ಶುದ್ಧಚಿತ್ತಾನಾಂ ಕೇವಲಂ ಕರುಣಾಬಲಾತ್ ।
ಪರಮಾದ್ವೈತಮಾಮ್ನಾಯಾತ್ಪ್ರಭಾತಿ ಶ್ರದ್ಧಯಾ ಸಹ ॥೬೨॥

ಶಿವಭಟ್ಟಾರಕಸ್ಯೈವ ಪ್ರಸಾದೇ ಪುಷ್ಕಲೇ ಸತಿ ।
ಪರಮಾದ್ವೈತಮಾಭಾತಿ ಯಥಾವನ್ನಾನ್ಯಹೇತುನಾ ॥೬೩॥

ನ ಭಾತಿ ಪರಮಾದ್ವೈತಂ ಪ್ರಸಾದರಹಿತಸ್ಯ ತು ।
ದುರ್ಲಭಃ ಖಲು ದೇವಸ್ಯ ಪ್ರಸಾದಃ ಪರಮಾಸ್ತಿಕಾಃ ॥೬೪॥

ಎಲೌ ಆಸ್ತಿಕರೇ, ಅದ್ವೈತವೇ ಶ್ರುತಿಗಳ ಮುಖ್ಯವಾದ ವಾಕ್ಯಾರ್ಥವು. ಬೇರೆಯದು ಮುಖ್ಯಾರ್ಥವಲ್ಲವು. ಭೇದವು ಶಾಸ್ತ್ರಾರ್ಥವೆಂದು ಹೇಳಬೇಕಾಗಿದ್ದರೆ ವೇದದಲ್ಲಿ ಸಾಕ್ಷಾತ್ತಾಗಿ ಹೇಳಿರುವ ಅದ್ವೈತದ ಸ್ತುತಿಯೂ ಭೇದನಿಂದೆಯೂ ವಿರುದ್ಧವಾಗುತ್ತದೆ. ಆದ್ದರಿಂದ ವೇದದಿಂದ ದೂಷಿತವಾದ ಭೇದವು ಗ್ರಾಹ್ಯವಲ್ಲವು. ಸ್ತುತಿಸಲ್ಪಟ್ಟಿರುವ ಅದ್ವೈತವೇ ಗ್ರಾಹ್ಯವು. ||೬೧||

ರಾಗದ್ವೇಷಾದಿಗಳನ್ನು ಬಿಟ್ಟು ಅತ್ಯಂತ ಪರಿಶುದ್ಧವಾದ ಅಂತಃಕರಣವುಳ್ಳವರಿಗೆ ಮಾತ್ರ ಪರಮಾತ್ಮನ ಅನುಗ್ರಹಬಲದಿಂದ, ವೇದದ ದೆಸೆಯಿಂದ ಪರಿಶುದ್ಧವಾದ ಅದ್ವೈತವು ಶ್ರದ್ಧೆಯುಳ್ಳವರಿಗೆ ಪ್ರಕಾಶಿಸುತ್ತಲ್ಲದೆ ಬೇರೆಯಲ್ಲವು. ||೬೨||

ಪೂಜ್ಯನಾದ ಪರಮೇಶ್ವರನ ಅನುಗ್ರಹವು ಪರಿಪೂರ್ಣವಾಗಿದ್ದರೇ ಶ್ರೇಷ್ಠವಾದ ಅದ್ವೈತವು ಶಾಸ್ತ್ರಾನುಸಾರವಾಗಿ ಪ್ರಕಾಶಿಸುತ್ತದಲ್ಲದೆ ಬೇರೆಯ ಕಾರಣದಿಂದಲ್ಲವು. ||೬೩||

ಈಶ್ವರಪ್ರಸಾದವಿಲ್ಲದವನಿಗೆ ಪರಿಶುದ್ಧವಾದ ಅದ್ವೈತವು ತೋರುವುದೇ ಇಲ್ಲವು. ಎಲೌ ಆಸ್ತಿಕರೇ, ಆ ಪರಮೇಶ್ವರನ ಅನುಗ್ರಹವನ್ನು ಪಡೆಯಲು ಬಹಳ ಕಷ್ಟವಾದುದು. ||೬೪||

ಅತಶ್ಚ ವೇದೋದಿತ ವರ್ತ್ಮನ್ಯೈವ
ವಿಹಾಯ ವಾದಾಂತರ-ಜನ್ಮ-ಬುದ್ಧಿಂ ।
ವಿಮುಕ್ತಿಕಾಮಃ ಪರಮಾದ್ವಿತೀಯಂ
ಸಮಾಶ್ರಯೇದೇವ ಶಿವಸ್ವರೂಪಂ ||೬೫||

ಇತಿ ಶ್ರೀಸ್ಕಾಂದಪುರಾಣೇ ಸೂತಸಂಹಿತಾಯಾಂ ಚತುರ್ಥಸ್ಯ ಯಜ್ಞವೈಭವಖಂಡಸ್ಯೋಪರಿಭಾಗೇ ಸೂತಗೀತಾಸೂಪನಿಷತ್ಸು ತೃತೀಯೋಽಧ್ಯಾಯಃ

ಆದುದರಿಂದ ವೇದೋಕ್ತವಾದ ದಾರಿಯೊಂದರಿಂದಲೇ, ಬೇರೆ ಬೇರೆ ವಾದಗಳಿಂದ ಹುಟ್ಟುವ ಬುದ್ಧಿಯನ್ನು ಬಿಟ್ಟು, ಮೋಕ್ಷವನ್ನು ಹೊಂದಬೇಕೆಂದಪೇಕ್ಷಿಸುವವನು ಪರಮೇಶ್ವರನ ಸ್ವರೂಪವಾದ ಪರಿಶುದ್ಧವಾದ ಅದ್ವೈತವನ್ನೇ ಅವಲಂಬಿಸಬೇಕು. ||೬೫||

ಇಲ್ಲಿಗೆ ಶ್ರೀಸೂತಸಂಹಿತೆಯ ಸೂತಗೀತೆಯಲ್ಲಿ ಮೂರನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಅಥಾಸ್ಯಾಃ ಶ್ರೀಮತ್ಸ್ಕಾಂದಪುರಾಣಾಂತರ್ಗತ ಸೂತಸಂಹಿತಾಯಾಶ್ಚತುರ್ಥಸ್ಯ ಯಜ್ಞವೈಭವಖಂಡಸ್ಯೋಪರಿಭಾಗೇ ಸೂತಗೀತಾ

॥ ಚತುರ್ಥೋಽಧ್ಯಾಯಃ ॥

ನಾಲ್ಕನೆಯ ಅಧ್ಯಾಯವು

॥ ಸೂತ ಉವಾಚ ॥

ಈಶ್ವರೋ ಜಗತಃ ಕರ್ತಾ ಮಾಯಯಾ ಸ್ವೀಯಯಾ ಪುರಾ ।
ಅಭೇದೇನ ಸ್ಥಿತಃ ಪೂರ್ವಕಲ್ಪವಾಸನಯಾಽನ್ವಿತಃ ॥೧॥

ಕಾಲಕರ್ಮಾನುಗುಣ್ಯೇನ ಸ್ವಾಭಿನ್ನಸ್ವೀಯಮಾಯಯಾ ।
ಅಭಿನ್ನೋಽಪಿ ತಯಾ ತಸ್ಯ ಭೇದಂ ಕಲ್ಪಯತಿ ಪ್ರಭುಃ ॥೨॥

ಸೂತನು ಹೇಳಿದನು—ಜಗನ್ನಿರ್ಮಾಪಕನಾದ ಪರಮಾತ್ಮನು ಸೃಷ್ಟಿಕಾಲದಲ್ಲಿ ತನ್ನ ಸಂಬಂಧವಾದ ಅಂತರ್ಮುಖವಾದ ಮಾಯೆಯೊಡನೆ ಏಕರೂಪದಿಂದಲೇ ಇದ್ದನು. ಮಾಯಾಕಾರ್ಯಗಳಾದ ಭೂತಭೌತಿಕಾದಿಗಳ ಪೂರ್ವಕಲ್ಪದ ಮಾಯಾಗತವಾದ ವಾಸನೆಗಳಿಂದ ಕೂಡಿದವನಾಗಿದ್ದನು. ॥೧॥

ಆಮೇಲೆ ಪ್ರಾಣಿಗಳ, ಕರ್ಮಗಳ ಫಲಕಾಲ ಮತ್ತು ಕರ್ಮಗಳ ಅನುಗುಣ್ಯದಿಂದ ತನಗಿಂತಲೂ ಬೇರೆಯಲ್ಲದ ತನ್ನ ಮಾಯೆಯಿಂದ ಬೇರೆಯಾಗದವನಾಗಿದ್ದರೂ ಆ ಮಾಯೆಯಿಂದ ತನಗೆ ಭೇದವನ್ನು ಶಕ್ತನಾದ ಆತನು ತೋರಿಸಿಕೊಳ್ಳುತ್ತಾನೆ. ॥೨॥

ಕಲ್ಪಿತೋಽಯಂ ದ್ವಿಜಾ ಭೇದೋ ನಾಭೇದಂ ಬಾಧತೇ ಸದಾ ।
ಕಲ್ಪಿತಾ ನಾಮವಸ್ತುತ್ವಾದ ವಿರೋಧಶ್ಚ ಸಿದ್ಧ್ಯತಿ ॥೩॥

ಪುನಃ ಪೂರ್ವೇಕ್ಷಣೋತ್ಪನ್ನವಾಸನಾಬಲತೋಽನಘಾಃ ।
ಈಕ್ಷಿತಾ ಪೂರ್ವವದ್ಭೂತ್ವಾ ಸ್ವಶಕ್ತ್ಯಾ ಪರಯಾ ಯುತಃ ॥೪॥

ಮಾಯಯಾ ಗುಣಭೇದೇನ ರುದ್ರಂ ವಿಷ್ಣುಂ ಪಿತಾಮಹಂ ।
ಸೃಷ್ಟ್ವಾಽನುಪ್ರಾವಿಶತ್ತೇಷಾಮಂತರ್ಯಾಮಿತಯಾ ಹರಃ ॥೫॥

ತೇಷಾಂ ರುದ್ರಃ ಪರಾಭೇದಾತ್ಪರತತ್ವವದೇವ ತು ।
ಕರೋತಿ ಸರ್ಗಸ್ಥಿತ್ಯಂತಂ ರುದ್ರರೂಪೇಣ ಸತ್ತಮಾಃ ॥೬॥

ಸಂಹರತ್ಯವಿಶೇಷೇಣ ಜಗತ್ಸರ್ವಂ ಚರಾಚರಂ ।
ವಿಷ್ಣುರಪ್ಯಾಸ್ತಿಕಾಃ ಸಾಕ್ಷಾತ್ಪರಾಭೇದೇನ ಕೇವಲಂ ॥೭॥

ಎಲೌ ಬ್ರಾಹ್ಮಣರೇ, ಕಲ್ಪಿತವಾದ ಈ ವ್ಯಾವಹಾರಿಕ ಭೇದವು ಅಭೇದಕ್ಕೆ ಯಾವಾಗಲೂ ವಿರೋಧಿಯಲ್ಲವು. ಕಲ್ಪಿತವಾದುವುಗಳೆಲ್ಲವೂ ಅವಾಸ್ತವ (ಸುಳ್ಳು)ಗಳಾದ್ದರಿಂದಲೇ ವಿರೋಧವಿಲ್ಲದಿರುವಿಕೆಯು ಸಿದ್ಧಿಸುತ್ತದೆ. ||೩||

ಹೀಗೆ ಮಾಯೆಯು ದೆಸೆಯಿಂದ ತನಗೆ ಭೇದವನ್ನು ಪರಿಕಲ್ಪಿಸಿಕೊಂಡು ಪೂರ್ವಕಲ್ಪದ ಮಾಯಾಸಂಬಂಧಗಳಾದ ಸತ್ವ, ರಜಸ್ತಮೋಗುಣಜನ್ಯವಾದ ಸಂಸ್ಕಾರಬಲದಿಂದ ಆ ಮಾಯೋಪಾಧಿಕನಾದ ಪರಶಿವನು ಪೂರ್ವಕಲ್ಪದಂತೆಯೇ ಈಕ್ಷಕನಾಗಿ ಪರಿಣಮಿಸಿ, ನಿರ್ಮಿಸಲ್ಪಡಬೇಕಾದ ಜಗತ್ತಿನ ಪರ್ಯಾಲೋಚನಾ ರೂಪವಾದ ಈಕ್ಷಣವನ್ನು ಮಾಡುತ್ತಾನೆ. ಆಮೇಲೆ ಮಾಯಾಗತವಾದ ಗುಣ ಪ್ರಾಧಾನ್ಯಭೇದದಿಂದ ಬ್ರಹ್ಮ, ವಿಷ್ಣು ಮತ್ತು ಮಹೇಶ್ವರರನ್ನು ಸೃಷ್ಟಿಸಿ, ಹರನು ತಾನೇ ಅವರಅಂತರ್ಯಾಮಿಯಾಗಿ ಪ್ರವೇಶಿಸಿದನು. ||೪-೫||

ಎಲೌ ಶ್ರೇಷ್ಠತಮರಾದ ಋಷಿಗಳೇ, ಅವರುಗಳೊಳಗೆ ರುದ್ರನು ಪರತತ್ತ್ವಕ್ಕಿಂತಲೂ ಅಭಿನ್ನನಾದ್ದರಿಂದ ಪರತತ್ತ್ವದಂತೆಯೇ ಸೃಷ್ಟಿ, ಸ್ಥಿತಿ, ಸಂಹಾರಗಳನ್ನು ಮಾಡುತ್ತಾನೆ. ರುದ್ರರೂಪದಿಂದಲಾದರೋ ಸಕಲವಾದ ಚರಾಚರ ಜಗತ್ತನ್ನೂ ಭೇದವಿಲ್ಲದಂತೆ ಸಂಹರಿಸುತ್ತಾನೆ. ||೬||

ಎಲೌ ಆಸ್ತಿಕರೇ, ಪರತತ್ತ್ವಕ್ಕಿಂತಲೂ ಅಭಿನ್ನನಾದ ವಿಷ್ಣುವೂ ಕೂಡ

ಕರೋತಿ ಸರ್ಗಸ್ಥಿತ್ಯಂತಂ ವಿಷ್ಣುರೂಪೇಣ ಹೇ ದ್ವಿಜಾಃ ।
ಪಾಲಯತ್ಯವಿಶೇಷೇಣ ಜಗತ್ಸರ್ವಂ ಚರಾಚರಂ ॥೮॥

ಬ್ರಹ್ಮಾಽಪಿ ಮುನಿಶಾರ್ದೂಲಾ ಪರಾಭೇದೇನ ಕೇವಲಂ ।
ಕರೋತಿ ಸರ್ಗಸ್ಥಿತ್ಯಂತಂ ಬ್ರಹ್ಮರೂಪೇಣ ಸತ್ತಮಾಃ ॥೯॥

ಕರೋತಿ ವಿವಿಧಂ ಸರ್ವಂ ಜಗತ್ಪೂರ್ವಂ ಯಥಾ ತಥಾ ।
ಶಬ್ದಾದಿಭೂತಸೃಷ್ಟಿಸ್ತು ಪರಸ್ಯೈವ ಶಿವಸ್ಯ ತು ॥೧೦॥

ಸರ್ವಾಂತಃಕರಣಾನಾಂ ತು ಸಮಷ್ಟೇಃ ಸೃಷ್ಟಿರಾಸ್ತಿಕಾಃ ।
ತ್ರಿಮೂರ್ತೀನಾಂ ಹರಸ್ಯೈವ ಪ್ರಾಧಾನ್ಯೇನ ನ ಸಂಶಯಃ ॥೧೧॥

ಪ್ರಾಣಾನಾಮಪಿ ಸರ್ವೇಷಾಂ ಸಮಷ್ಟೇಃ ಸೃಷ್ಟಿರಾಸ್ತಿಕಾಃ ।
ಅಪಿ ರುದ್ರಸ್ಯ ತಸ್ಯೈವ ಪ್ರಾಧಾನ್ಯೇನ ನ ಸಂಶಯಃ ॥೧೨॥

ಸರ್ವಜ್ಞಾನೇಂದ್ರಿಯಾಣಾಂ ತು ಸಮಷ್ಟೀನಾಂ ಜನಿರ್ದ್ವಿಜಾಃ ।
ತ್ರಿಮೂರ್ತೀನಾಂ ಹರಸ್ಯೈವ ಪ್ರಾಧಾನ್ಯೇನ ನ ಸಂಶಯಃ ॥೧೩॥

ಸೃಷ್ಟಿ, ಸ್ಥಿತಿ, ಸಂಹಾರಗಳನ್ನು ಮಾಡುತ್ತಾನೆ. ದ್ವಿಜರೇ, ವಿಷ್ಣುರೂಪದಿಂದ ಮಾತ್ರ ಚರಾಚರವಾದ ಎಲ್ಲಾ ಜಗತ್ತನ್ನೂ ಭೇದವಿಲ್ಲದಂತೆ ಪಾಲಿಸುತ್ತಾನೆ. ॥೬-೮॥

ಎಲೌ ಋಷಿಶ್ರೇಷ್ಠರೇ, ಬ್ರಹ್ಮನೂ ಕೂಡ ಪರತತ್ತ್ವಕ್ಕಿಂತಲೂ ಅಭಿನ್ನನಾಗಿ ಸೃಷ್ಟಿ-ಸ್ಥಿತಿ-ಸಂಹಾರಗಳನ್ನು ಮಾಡುತ್ತಾನೆ. ಬ್ರಹ್ಮರೂಪದಿಂದ ಮಾತ್ರ ನಾನಾವಿಧವಾದ ಸಕಲ ಜಗತ್ತನ್ನೂ ಪೂರ್ವದಲ್ಲಿದ್ದಂತೆಯೇ ಸೃಷ್ಟಿಸುತ್ತಾನೆ. ॥೯॥

ಶಬ್ದತನ್ಮಾತ್ರಲಕ್ಷಣಗಳಾದ ಸೂಕ್ಷ್ಮಾಕಾಶಾದಿ ಭೂತಸೃಷ್ಟಿಯು ಮಾಯಾಯುಕ್ತನಾದ ಪರಶಿವನು ಮಾಡಿದ್ದೇ ಅಲ್ಲದೇ ಬ್ರಹ್ಮನದಲ್ಲವು. ಎಲೌ ಆಸ್ತಿಕರೇ, ಸರ್ವಾಂತಃಕರಣಗಳ ಸಮಷ್ಟಿಸೃಷ್ಟಿಯೂ ತ್ರಿಮೂರ್ತಿಗಳೊಳಗೆ ಮುಖ್ಯವಾಗಿ ಈಶ್ವರನದ್ದೇ ಎಂಬುದರಲ್ಲಿ ಸಂಶಯವಿಲ್ಲವು. ॥೧೦-೧೧॥

ಎಲೌ ಆಸ್ತಿಕರೇ, ಸಮಸ್ತವಾದ ಪ್ರಾಣಿಗಳ ಸಮಷ್ಟಿಸೃಷ್ಟಿಯೂ ಮುಖ್ಯವಾಗಿ ಆ ರುದ್ರನಿಗೇ ಸೇರಿದ್ದೆಂಬುದರಲ್ಲಿ ಸಂಶಯವಿಲ್ಲವು. ॥೧೨॥

ಜ್ಞಾನೇಂದ್ರಿಯಗಳ ಸಮಷ್ಟಿಗಳ (ಎಂದರೆ ಸತ್ತ್ವಾಂಶಗಳ) ಉತ್ಪತ್ತಿಯೂ

ಸರ್ವಕರ್ಮೇಂದ್ರಿಯಾಣಾಂ ತು ಸಮಷ್ಟೀನಾಂ ಜನಿರ್ದ್ವಿಜಾಃ ।
ತ್ರಿಮೂರ್ತೀನಾಂ ಹರಸ್ಯೈವ ಪ್ರಾಧಾನ್ಯೇನ ನ ಸಂಶಯಃ ॥೧೪॥

ತಥಾಽಪಿ ಪರಮಂ ತತ್ವಂ ತ್ರಿಮೂರ್ತೀನಾಂ ತು ಕಾರಣಂ ।
ಬ್ರಹ್ಮವಿಷ್ಣು ಮಹೇಶಾನಾಂ ಸೃಷ್ಟಾವುಪಕರೋತಿ ಚ ॥೧೫॥

ಉಪಚಾರತಯಾ ತೇಽಪಿ ಸ್ರಷ್ಟಾರ ಇತಿ ಶಬ್ದಿತಾಃ ।
ತತ್ರಾಪಿ ತತ್ತ್ವತಃ ಸ್ರಷ್ಟೃ ಬ್ರಹ್ಮೈವಾದ್ವಯಮಾಸ್ತಿಕಾಃ ॥೧೬॥

ವ್ಯಷ್ಟಯಸ್ತು ಸಮಷ್ಟಿಭ್ಯೋ ಜಾಯಂತೇ ಬ್ರಾಹ್ಮಣಾನಘಾಃ ।
ಸಮಷ್ಟಿಷು ವಿಜಾಯಂತೇ ದೇವತಾಃ ಪೂರ್ವಕಲ್ಪವತ್ ॥೧೭॥

ಎಲೌ ಬ್ರಾಹ್ಮಣರೇ, ತ್ರಿಮೂರ್ತಿಗಳೊಳಗೂ ಮುಖ್ಯವಾಗಿ ರುದ್ರನಿಗೇ ಸೇರಿದು ದೆಂಬುದರಲ್ಲಿ ಸಂದೇಹವಿಲ್ಲವು. ॥೧೩॥

ಎಲ್ಲಾ ಕರ್ಮೇಂದ್ರಿಯಗಳ ಸಮಷ್ಟಿಗಳ ಉತ್ಪತ್ತಿಯೂ ತ್ರಿಮೂರ್ತಿಗಳೊಳಗೆ ಮುಖ್ಯವಾಗಿ ಹರನದೇ ಎಂಬುದರಲ್ಲಿ ಸಂದೇಹವಿಲ್ಲ. ಪರಮೇಶ್ವರನು ನಿರತಿಶಯ ಸತ್ವೋಪಾಧಿಕನಾದುದರಿಂದ ಸರ್ವಜ್ಞಭಾವದಿಂದ ಹರಿಬ್ರಹ್ಮಾದಿಗಳಿಗಿಂತ ಮುಖ್ಯನು. ॥೧೪॥

ಹಾಗಾದಾಗ್ಯೂಕೂಡೆ ಪರಮತತ್ವವು ತ್ರಿಮೂರ್ತಿಗಳಿಗೂ ಕಾರಣವು. ಬ್ರಹ್ಮ, ವಿಷ್ಣು, ಮಹೇಶ್ವರರ ಸೃಷ್ಟಿಯಲ್ಲೂ ಅದೇ ಸಹಾಯಕವಾದದ್ದು. ॥೧೫॥

ಬ್ರಹ್ಮಾದಿಗಳಲ್ಲಿ ಸೃಷ್ಟಿಕರ್ತರೆಂಬ ಹೆಸರೂ ಕೂಡ ಗೌಣವಾದದ್ದಲ್ಲದೇ ಮುಖ್ಯವಲ್ಲವು. ಅದರಲ್ಲಿಯೂ ನಿಜವಾಗಿಯೂ ಸೃಷ್ಟಿಕರ್ತೃವು ಅದ್ವಿತೀಯವಾದ ಬ್ರಹ್ಮವೇ ಅಲ್ಲದೇ ಬೆರೆಯಲ್ಲವು. ॥೧೬॥

ವ್ಯಷ್ಟಿಸೃಷ್ಟಿಗಳು ಸಮಷ್ಟಿಗಳ ದೆಸೆಯಿಂದುಂಟಾಗುತ್ತವೆ. ಎಲೌ ಬ್ರಾಹ್ಮಣ ಶ್ರೇಷ್ಠರೇ, ಸಮಷ್ಟಿಗಳೊಳಗೆ ದೇವತೆಗಳು ಪೂರ್ವಕಲ್ಪದಂತೆಯೇ ಹುಟ್ಟುತ್ತಾರೆ. ಸಮಷ್ಟ್ಯಂತಃಕರಣೋಪಾಧಿಕನಾದ ಈಶ್ವರನೇ ವ್ಯಷ್ಟ್ಯಂತಃಕರಣಾದಿಗಳಿಗೂ ಸೃಷಿ ಕರ್ತನೆಂದರ್ಥವು. (ಇಲ್ಲಿ ವಿವರಣೆ ಬೇಕು) ॥೧೭॥

ಸಮಷ್ಟಿ ವ್ಯಷ್ಟಿರೂಪಾಣಾಂ ಸೃಷ್ಟಾನಾಂ ಪಾಲಕೋ ಹರಿಃ ।
ರುದ್ರಸ್ತೇಷಾಂ ತು ಸಂಹರ್ತಾ ದ್ವಿಜಾ ರೂಪಾಂತರೇಣ ಚ ॥೧೮॥

ಯಾ ದೇವತಾಽಂತಃಕರಣ ಸಮಷ್ಟೌ ಪೂರ್ವಕಲ್ಪವತ್ ।
ವಿಜಾತಾ ಸ ಮುನಿಶ್ರೇಷ್ಠಾ ರುಕ್ಮಗರ್ಭ ಇತೀರಿತಃ ॥೧೯॥

ಜಾತಾ ಪ್ರಾಣ ಸಮಷ್ಟೌ ಯಾ ಸ ಸೂತ್ರಾತ್ಮಸಮಾಹ್ವಯಃ ।
ದಿಗ್ವಾಯ್ವರ್ಕ ಜಲಾಧ್ಯಕ್ಷ ಪೃಥಿವ್ಯಾಖ್ಯಾಸ್ತು ದೇವತಾಃ ॥೨೦॥

ಜಾಯಂತೇ ಕ್ರಮಶಃ ಶ್ರೋತ್ರಪ್ರಮುಖೇಷು ಸಮಷ್ಟಿಷು ।
ಪಾದ ಪಾಣ್ಯಾದಿಷು ಪ್ರಾಜ್ಞಾಃ ಕರ್ಮೇಂದ್ರಿಯ ಸಮಷ್ಟಿಷು ॥೨೧॥

ತ್ರಿವಿಕ್ರಮೇಂದ್ರ ಪ್ರಮುಖಾ ಜಾಯಂತೇ ದೇವತಾಃ ಕ್ರಮಾತ್ ।
ಸಮಷ್ಟಿಷು ವಿಜಾತಾ ಯಾ ದೇವತಾ ಸ್ತಾ ಯಥಾಕ್ರಮಂ ॥೨೨॥

ಬ್ರಾಹ್ಮಣರೇ, ವ್ಯಷ್ಟಿಸಮಷ್ಟಿರೂಪಗಳಾದ ಸೃಷ್ಟಿಸಲ್ಪಟ್ಟ ಎಲ್ಲಾ ಪದಾರ್ಥಗಳಿಗೂ ಹರಿಯು ಪಾಲಕನು. ಈ ರುದ್ರನೇ ಅವುಗಳಿಗೆ ರೂಪಾಂತರದಿಂದ ಸಂಹಾರಕನು. ಪರತತ್ತ್ವರೂಪದಿಂದ ಸರ್ವಕಾರಣನಾದರೂ ರುದ್ರರೂಪದಿಂದ ಸಂಹಾರಕಾರ್ಯವನ್ನೂ ನಡೆಸುತ್ತಾನೆಂದು ತಾತ್ಪರ್ಯವು. ॥೧೮॥

ಎಲೌ ಮುನಿಶ್ರೇಷ್ಠರೇ, ಪೂರ್ವಕಲ್ಪಾನುಸಾರವಾಗಿ ಅಂತಃಕರಣ ಸಮಷ್ಟಿಯಲ್ಲಿ ಯಾವ ದೇವತೆಯು ಉಂಟಾದನೋ ಅವನು ಹಿರಣ್ಯಗರ್ಭನೆನಿಸಿಕೊಂಡಿದಾನೆ. ॥೧೯॥

ಪ್ರಾಣಸಮಷ್ಟಿಯಲ್ಲಿ ಯಾವ ದೇವತೆಯು ಹುಟ್ಟಿದನೋ ಅವನು ಸೂತ್ರಾತ್ಮನೆಂಬ ಹೆಸರುಳ್ಳವನು. ಸಮಷ್ಟಿರೂಪಗಳಾದ ಶ್ರೋತ್ರಾದಿ ಜ್ಞಾನೇಂದ್ರಿಯಗಳಲ್ಲಿ ಹುಟ್ಟತಕ್ಕ ದೇವತೆಗಳಿಗೆ ಕ್ರಮವಾಗಿ ದಿಕ್ಕು, ವಾಯು, ಸೂರ್ಯ, ವರುಣ ಮತ್ತು ಪೃಥ್ವಿಗಳೆಂದು ಹೆಸರು. ॥೨೦॥

ಪ್ರಾಜ್ಞರೇ, ಕಾಲು, ಕೈ ಮೊದಲಾದ ಕರ್ಮೇಂದ್ರಿಯ ಸಮಷ್ಟಿಗಳೊಳಗೆ ತ್ರಿವಿಕ್ರಮ, ಇಂದ್ರ ಮೊದಲಾದ ದೇವತೆಗಳು ಕ್ರಮವಾಗಿ ಹುಟ್ಟುತ್ತಾರೆ. ॥೨೧॥

ದ್ವಿಜರೇ, ಸಮಷ್ಟಿಗಳೊಳಗೆ ಯಾವ ದೇವತೆಗಳು ಹುಟ್ಟಿದರೋ ಅವರು ಕ್ರಮವಾಗಿ ವ್ಯಷ್ಟಿರೂಪಗಳಾದ ಭೂತಗಳಿಗೂ ಮತ್ತು ಇಂದ್ರಿಯಗಳಿಗೂ ನಿಯಾಮಕರಾದ ದೇವತೆಗಳು. ॥೨೨॥

ವ್ಯಷ್ಟಿಭೂತೇಂದ್ರಿಯಾಣಾಂ ತು ನಿಯಂತ್ರ್ಯೋ ದೇವತಾ ದ್ವಿಜಾಃ ।
ಮಾರುತಸ್ತ್ವಗಧಿಷ್ಠಾತಾ ದಿಗ್ದೇವೀ ಕರ್ಣದೇವತಾ ॥೨೩॥

ನೇತ್ರಾಭಿಮಾನೀ ಸೂರ್ಯಸ್ಸ್ಯಾಜ್ಜಿಹ್ವಾಯಾ ವರುಣಸ್ತಥಾ ।
ಘ್ರಾಣಾಭಿಮಾನಿನೀ ದೇವೀ ಪೃಥಿವೀತಿ ಪ್ರಕೀರ್ತಿತಾ ॥೨೪॥

ಅಗ್ನಿರ್ವಾಗಭಿಮಾನೀ ಸ್ಯಾದುಪಸ್ಥಸ್ಯ ಪ್ರಜಾಪತಿಃ ।
ಪಾಯೋರ್ಮಿತ್ರೋಽಭಿಮಾನ್ಯಾತ್ಮಾ ಪಾದಸ್ಯಾಪಿ ತ್ರಿವಿಕ್ರಮಃ ॥೨೫॥

ಇಂದ್ರೋ ಹಸ್ತನಿಯಂತಾ ಸ್ಯಾತ್ ಶಿವಃ ಸರ್ವನಿಯಾಮಕಃ ।
ಮನೋಬುದ್ಧಿರಹಂಕಾರಃ ಚಿತ್ತಂ ಚೇತಿ ಚತುರ್ವಿಧಂ ॥೨೬॥

ಸ್ಯಾದಂತಃಕರಣಂ ಪ್ರಾಜ್ಞಾಃ ಕ್ರಮಾತ್ತೇಷಾಂ ಹಿ ದೇವತಾಃ ।
ಚಂದ್ರೋ ವಾಚಸ್ಪತಿಃ ವಿಪ್ರಾಃ ಸಾಕ್ಷಾತ್ಕಾಲಾಗ್ನಿರುದ್ರಕಃ ॥೨೭॥
ಶಿವಶ್ಚೇತಿ ಮಯಾ ಪ್ರೋಕ್ತಾಃ ಸಾಕ್ಷಾದ್ವೇದಾಂತಪಾರಗಾಃ ।

ವಾಯುವು ತ್ವಗಭಿಮಾನಿದೇವತೆಯು. ಪೂಜ್ಯಳಾದ ದಿಗ್ದೇವಿಯು ಕರ್ಣಾಭಿಮಾನಿ ದೇವತೆಯು. ಸೂರ್ಯನು ನೇತ್ರಾಭಿಮಾನಿಯಾದ ದೇವತೆಯು. ಹಾಗೆಯೇ ಪೃಥಿವಿಯು ಘ್ರಾಣಾಭಿಮಾನಿದೇವತೆಯೆಂದೂ ಹೇಳಲ್ಪಟ್ಟಿದ್ದಾಳೆ. ||೨೩-೨೪||

ಕರ್ಮೇಂದ್ರಿಯಗಳ ಅಭಿಮಾನಿಗಳಾದ ದೇವತೆಗಳು ಯಾರೆಂದರೆ, ಅಗ್ನಿಯು ವಾಗಭಿಮಾನಿದೇವತೆಯು. ಪ್ರಜಾಪತಿಯು ಉಪಸ್ಥೇಂದ್ರಿಯಾಭಿಮಾನಿ ದೇವತೆಯು. ಮಿತ್ರನು ಪಾಯ್ವಭಿಮಾನಿದೇವತೆಯು. ತ್ರಿವಿಕ್ರಮನು ಪಾದಾಭಿಮಾನಿದೇವತೆಯು. ಸಾಕ್ಷಾತ್ಪರಶಿವನು ಸರ್ವರಿಗೂ ನಿಯಾಮಕನು. ||೨೫||

ಎಲೌ ಬ್ರಾಹ್ಮಣರೇ, ಅಂತಃಕರಣವು ಮನಸ್ಸು, ಬುದ್ಧಿ, ಅಹಂಕಾರ ಮತ್ತು ಚಿತ್ತವೆಂಬುದಾಗಿ ನಾಲ್ಕು ವಿಧವು. ಅವುಗಳಿಗೂ ಕೂಡ ಕ್ರಮವಾಗಿ ಚಂದ್ರನೂ, ಬೃಹಸ್ಪತಿಯೂ, ಕಾಲಾಗ್ನಿ ರುದ್ರನೂ (ಯಮನೂ) ಮತ್ತು ಶಂಕರನೂ ದೇವತೆಗಳೆಂದು, ಎಲೌ ವೇದಾಂತಪಾರಂಗತರಾದ ಬ್ರಾಹ್ಮಣರೇ, ನನ್ನಿಂದ ವೇದ ಶಾಸ್ತ್ರಾನುಸಾರವಾಗಿ ಹೇಳಲ್ಪಟ್ಟಿದ್ದಾರೆ. ||೨೬-೨೭||

ಆಕಾಶಾದೀನಿ ಭೂತಾನಿ ಸ್ಥೂಲಾನಿ ಪುನರಾಸ್ತಿಕಾಃ ॥೨೮॥

ಜಾಯಂತೇ ಸೂಕ್ಷ್ಮಭೂತೇಭ್ಯಃ ಪೂರ್ವಕಲ್ಪೇ ಯಥಾ ತಥಾ ।
ಅಂಡಭೇದಾಸ್ತಥಾ ಲೋಕಭೇದಾಸ್ತೇಷು ಚ ಚೇತನಾ ॥೨೯॥

ಅಚೇತನಾನಿ ಚಾನ್ಯಾನಿ ಭೌತಿಕಾನಿ ಚ ಪೂರ್ವವತ್ ।
ನಿಜಾಯಂತೇ ಚ ಭೋಗಾರ್ಥಂ ಚೇತನಾನಾಂ ಶರೀರಿಣಾಂ ॥೩೦॥

ಭೋಕ್ತಾರಃ ಪಶವಃ ಸರ್ವೇ ಶಿವೋ ಭೋಜಯಿತಾ ಪರಃ ।
ಸುಖದುಃಖಾದಿಸಂಸಾರೋ ಭೋಗಃ ಸರ್ವಮಿದಂ ಸುರಾಃ ॥೩೧॥

ಸ್ವಪ್ನವದ್ದೇವದೇವಸ್ಯ ಮಾಯಯೈವ ವಿನಿರ್ಮಿತಂ ।
ಮಾಯಯಾ ನಿರ್ಮಿತಂ ಸರ್ವಂ ಮಾಯೈವ ಹಿ ನಿರೂಪಣೇ ॥೩೨॥
ಕಾರಣವ್ಯತಿರೇಕೇಣ ಕಾರ್ಯಂ ನೇತಿ ಹಿ ದರ್ಶಿತಂ ।

ಎಲೌ ಆಸ್ತಿಕರೇ, ಆಕಾಶವೇ ಮೊದಲಾದ ಸ್ಥೂಲಭೂತಗಳು ತಿರುಗಿಯೂ, ಸೂಕ್ಷ್ಮಭೂತಗಳ ದೆಸೆಯಿಂದ, ಪೂರ್ವಕಲ್ಪದಲ್ಲಿ ಹೇಗೋ ಹಾಗೆ, ಹುಟ್ಟುತ್ತವೆ. ಸ್ಥೂಲಭೂತಸೃಷ್ಟಿಯು ಸೂಕ್ಷ್ಮಭೂತಸೃಷ್ಟಿಯಿಂದುಂಟಾಯಿತೆಂದು ತಾತ್ಪರ್ಯವು. ಬ್ರಹ್ಮಾಂಡಗಳ ಭೇದಗಳೂ ಮತ್ತು ಲೋಕಭೇದಗಳೂ, ಅವುಗಳೊಳಗೆ ಚೇತನಗಳೂ ಮತ್ತು ಭೌತಿಕಗಳಾದ ಅಚೇತನಗಳೂ ಪೂರ್ವದಂತೆಯೇ ಹುಟ್ಟುತ್ತವೆ. ಇವು ಚೇತನರಾದ ದೇಹಿಗಳ ಕರ್ಮಭೋಗಕ್ಕೋಸ್ಕರವಾಗಿ ನಾನಾರೀತಿಯಾಗಿ ಹುಟ್ಟುತ್ತವೆ. ಭೋಕ್ತೃಗಳೆಲ್ಲರೂ ಪಶುಗಳು. ಪರಶಿವನು ಅವಕ್ಕೆ ಪ್ರೇರಕನು. ॥೨೮-೨೯-೩೦॥

ಎಲೌ ದೇವತೆಗಳೇ, ಸುಖದುಃಖಮಯವಾದ ಈ ಸಂಸಾರಾಭಿಮಾನವೇ ಭೋಗವು. ಈ ಸಮಸ್ತವೂ ಕೂಡ ಕನಸಿನಲ್ಲಿಯೋ ಎನ್ನುವಹಾಗೆ ಪರಮಾತ್ಮನ ಮಾಯೆಯಿಂದಲೇ ಸೃಷ್ಟಿಸಲ್ಪಟ್ಟಿದೆ! ॥೩೧॥

ಮಾಯೆಯಿಂದ ಸೃಷ್ಟಿಸಲ್ಪಟ್ಟ ಎಲ್ಲವೂ ಕೂಡ ವಿಚಾರಮಾಡಿದರೆ ಮಾಯೆಯೇ ಅಲ್ಲದೇ ಬೇರೆಯಲ್ಲವು. ಏಕೆಂದರೆ ಕಾರಣಕ್ಕಿಂತಲೂ ಬೇರೆಯಾದ ಕಾರ್ಯವು ಇಲ್ಲವೇ ಇಲ್ಲವೆಂದು ತೋರಿಸಲ್ಪಟ್ಟಿದೆಯಷ್ಟೆ. ॥೩೨॥

ಮಾಯಾಽಪಿ ಕಾರಣತ್ವೇನ ಕಲ್ಪಿತಾ ಮುನಿಪುಂಗವಾಃ ॥೩೩॥

ಅಧಿಷ್ಠಾನಾತಿರೇಕೇಣ ನಾಸ್ತಿ ತತ್ವ ನಿರೂಪಣೇ ।
ವ್ಯವಹಾರದೃಶಾ ಮಾಯಾಕಲ್ಪನಾ ನೈವ ವಸ್ತುತಃ ॥೩೪॥

ವಸ್ತುತಃ ಪರಮಾದ್ವೈತಂ ಬ್ರಹ್ಮೈವಾಸ್ತಿ ನ ಚೇತರತ್ ।
ಮಾಯಾರೂಪತಯಾ ಸಾಕ್ಷಾದ್ಬ್ರಹ್ಮೈವ ಪ್ರತಿಭಾಸತೇ ॥೩೫॥

ಜಗಜ್ಜೀವಾದಿರೂಪೇಣಾಪ್ಯಹೋ ದೇವಸ್ಯ ವೈಭವಂ ।
ಸ್ವಸ್ವರೂಪಾತಿರೇಕೇಣ ಬ್ರಹ್ಮಣೋ ನಾಸ್ತಿ ಕಿಂಚನ ॥೩೬॥

ತಥಾಽಪಿ ಸ್ವಾತಿರೇಕೇಣ ಭಾತಿ ಹಾ ದೇವವೈಭವಂ ।
ಜಗದಾತ್ಮತಯಾ ಪಶ್ಯನ್ ಬಧ್ಯತೇ ನ ವಿಮುಚ್ಯತೇ ॥೩೭॥

ಸರ್ವಮೇತತ್ಪರಂ ಬ್ರಹ್ಮ ಪಶ್ಯನ್ ಸ್ವಾನುಭವೇನ ತು ।
ಮುಚ್ಯತೇ ಘೋರ ಸಂಸಾರಾತ್ಸದ್ಯ ಏವ ನ ಸಂಶಯಃ ॥೩೮॥

ಎಲೌ ಮುನಿಪುಂಗವರೇ, ತತ್ವವನ್ನು ವಿಚಾರಮಾಡಿದ್ದೇ ಆದರೆ ಕಾರಣ ರೂಪದಿಂದ ಕಲ್ಪಿತವಾಗಿರುವ ಮಾಯೆಯೂ ಕೂಡ ತನಗೆ ಆಶ್ರಯಭೂತವಾದ ವಸ್ತುವಿಗಿಂತ ಬೇರೆಯಾಗಿ ಇಲ್ಲವೇ ಇಲ್ಲವು. ॥೩೩॥

ಮಾಯೆಯೂ ಕೂಡ ವ್ಯವಹಾರ ದೃಷ್ಟಿಯಿಂದ ಕಲ್ಪನೆಯಲ್ಲದೇ ವಾಸ್ತವ ವಾಗಿ ಇಲ್ಲವು. ನಿಜವಾಗಿಯೂ ಇರತಕ್ಕದ್ದು ಪರಮಾದ್ವಿತೀಯವಾದ ಬ್ರಹ್ಮವಸ್ತು ವೊಂದೇ ಅಲ್ಲದೇ ಬೇರೆ ಇಲ್ಲವು. ॥೩೪॥

ಮಾಯಾರೂಪದಿಂದಲೂ, ಜಗದ್ರೂಪದಿಂದಲೂ ಮತ್ತು ಜೀವಾದಿರೂಪ ದಿಂದಲೂ ಆ ಸಾಕ್ಷಾದ್ಬ್ರಹ್ಮವಸ್ತುವೇ ಪ್ರಕಾಶಿಸುತ್ತದೆ! ಎಂದರೆ ಆ ದೇವದೇವನ ಮಹಿಮೆಯನ್ನು ಇಷ್ಟೆಂದು ತಿಳಿಯುವುದು ಯಾರಿಗೆ ತಾನೇ ಸಾಧ್ಯವಾದೀತು ? ॥೩೫॥

ಬ್ರಹ್ಮ ವಸ್ತುವಿನ ಆ ಸ್ವರೂಪಕ್ಕಿಂತ ಬೇರೆಯಾಗಿ ಯಾವ ವಸ್ತುವೂ ನಿಜ ವಾಗಿ ಇಲ್ಲವು. ಆದರೂ ಅದು ಬೇರೆಯದಾಗಿ ತೋರುತ್ತದೆಯಾದುದರಿಂದ ಅಂತಹ ದೈವದ ವೈಭವವು ಆಶ್ಚರ್ಯಕರವಾಗಿದೆ! ॥೩೬॥

ಆದುದರಿಂದ ಪ್ರಪಂಚವನ್ನು ಆತ್ಮವನ್ನಾಗಿ ಭಾವಿಸುವವನು ಸಂಸಾರದಿಂದ ಬದ್ಧನಾಗುತ್ತಾನಲ್ಲದೇ ಮುಕ್ತನಾಗುವುದಿಲ್ಲ. ಆದರೆ ಈ ಸಕಲವನ್ನೂ ಅಧಿಷ್ಠಾನ

ಸರ್ವಮೇತತ್ಪರಂ ಬ್ರಹ್ಮ ವಿದಿತ್ವಾ ಸುದೃಢಂ ಬುಧಾಃ ।
ಮಾನತರ್ಕಾನುಭೂತ್ಯೈವ ಗುರೂಕ್ತ್ಯಾ ಚ ಪ್ರಸಾದತಃ ॥೩೯॥

ಜ್ಞಾನ ಪ್ರಾಕಟ್ಯ ಬಾಹುಳ್ಯಾತ್ ಜ್ಞಾನಂ ಚ ಸ್ವಾತ್ಮನೈವ ತು ।
ಸ್ವಾತ್ಮಾನಾ ಕೇವಲೇನೈವ ತಿಷ್ಠನ್ಮುಚ್ಯೇತ ಬಂಧನಾತ್ ॥೪೦॥

ಯ ಏವಂ ವೇದ ವೇದಾರ್ಥಂ ಮುಚ್ಯತೇ ಸ ತು ಬಂಧನಾತ್ ।
ಸೋಪಾನಕ್ರಮತ ಶ್ಚೈವಂ ಪಶ್ಯನ್ನಾತ್ಮಾನಮದ್ವಯಂ ।
ಸರ್ವಂ ಜಗದಿದಂ ವಿಪ್ರಾಃ ಪಶ್ಯನ್ನಪಿ ನ ಪಶ್ಯತಿ ॥೪೧॥

ವಾದ ಪರಬ್ರಹ್ಮದಲ್ಲಿ ಅಧ್ಯಸ್ತವನ್ನಾಗಿ ತನ್ನ ಅನುಭವದಿಂದಲೇ ಭಾವಿಸತಕ್ಕವನು ಆ ಕ್ಷಣದಲ್ಲಿಯೇ ಈ ಘೋರಸಂಸಾರದ ದೆಸೆಯಿಂದ ಮುಕ್ತನಾಗುತ್ತಾನೆಂಬುದರಲ್ಲಿ ಸಂಶಯವಿಲ್ಲವು. ॥೩೭-೩೮॥

ಓ ಬುದ್ಧಿವಂತರೇ, ಈ ಸರ್ವವನ್ನೂ ಪರಬ್ರಹ್ಮವನ್ನಾಗಿ ದೃಢವಾಗಿ ಭಾವಿಸಿ, "ಇದಂ ಸರ್ವಂ ಯದಯಮಾತ್ಮಾ" ಎಂದು ಮುಂತಾದ ಶ್ರುತಿಪ್ರಮಾಣ, ವಿಚಾರ, ಯುಕ್ತಿ ಮತ್ತು ವಿಶೇಷವಾಗಿ ಅಪರೋಕ್ಷವಾದ ಅನುಭವ ಇವುಗಳಿಂದಲೂ, ಗುರುವಚನ ಮತ್ತು ಗುರುಪ್ರಸಾದದಿಂದ ಉಂಟಾಗುವ ಜ್ಞಾನಪ್ರಕಾಶದ ಆಧಿಕ್ಯದಿಂದಲೂ, ತಿಳಿದುಕೊಂಡರೆ ಅದು ಆಗ ಸ್ವಾತ್ಮಭಾವದಿಂದಲೇ ಪ್ರಕಾಶವಾಗುತ್ತದೆ. ॥೩೯॥

ಅದ್ವಿತೀಯವಾದ ಸ್ವಾತ್ಮರೂಪದಿಂದಿರುವವನೇ ಸಂಸಾರದಿಂದ ಮುಕ್ತನಾಗುತ್ತಾನೆ. ಹೀಗೆಂಬ ವೇದಾರ್ಥವನ್ನು ಯಾವನು ತಿಳಿದುಕೊಳ್ಳುತ್ತಾನೋ ಅವನೇ ಸಂಸಾರಬಂಧದಿಂದ ಮುಕ್ತಿಯನ್ನೂ ಪಡೆಯುತ್ತಾನೆ. ॥೪೦॥

ಓ ಬ್ರಾಹ್ಮಣರೇ, ಜ್ಞಾನಸರಣಿಯಲ್ಲಿ ಮೇಲೆ ಮೇಲೆ ಹತ್ತಲು ಅನುಕೂಲಿಸುವಂತೆ ಮೆಟ್ಟಲಿನ ರೀತಿಯಿಂದ ಇರುವ ಶ್ರವಣ, ಮನನ, ನಿಧಿಧ್ಯಾಸನಗಳಿಂದ ಅದ್ವಿತೀಯನಾದ ಆತ್ಮನನ್ನು ಗಮನಿಸತಕ್ಕವನು ಸಕಲವಾದ ಜಗತ್ತನ್ನೂ ಪಾರಮಾರ್ಥಿಕವಾಗಿ ಅಲ್ಲದೆ ವ್ಯಾವಹಾರಿಕವಾಗಿದೆ ಎಂದು ನೋಡುವವನಾಗಿದ್ದರೂ, ಅದನ್ನು ಬೇರೆಯೆಂದು ತಿಳಿಯದೇ ಕಾರಣವಾದ ಬ್ರಹ್ಮವಸ್ತುವೆಂದೇ ತಿಳಿಯುತ್ತಾನೆ. ಈ ಕ್ರಮವು ಹೀಗಿರುತ್ತದೆ. ಮೊದಲು ಶ್ರವಣವು ಅಥವಾ ಶಾಬ್ದಜ್ಞಾನವು ; ಶ್ರುತಿ, ಗುರೂಪದೇಶ ಇವುಗಳಿಂದ ತಿಳಿವಳಿಕೆಯುಂಟಾಗುತ್ತದೆ. ಅದನ್ನು ಮನನ, ನಿದಿ

ಭಾಸಮಾನಮಿದಂ ಸರ್ವಂ ಭಾನರೂಪಂ ಪರಂ ಪದಂ ।
ಪಶ್ಯನ್ ವೇದಾಂತಮಾನೇನ ಸದ್ಯ ಏವ ವಿಮುಚ್ಯತೇ ॥೪೨॥

ಏವಮಾತ್ಮಾನ ಮದ್ವೈತಮಪಶ್ಯನ್ನೇವ ಪಶ್ಯತಃ ।
ಜ_ದಾತ್ಮತಯಾ ಭಾನಮಪಿ ಸ್ವಾತ್ಮೈವ ಕೇವಲಮ್ ॥೪೩॥

ವಿದಿತ್ವೈವಂ ಮಹಾಯೋಗೀ ಜಗದ್ಭಾನೇಽಪಿ ನಿಶ್ಚಲಃ ।
ಯಥಾ ಭಾತಮಿದಂ ಸರ್ವಮನುಜಾನಾತಿ ಚಾತ್ಮನಾ ॥೪೪॥

ಧ್ಯಾಸನಗಳಿಂದ ಅನುಭವದ ದಾರಿಗೆ ತರಬೇಕು. ಆ ಮೇಲೆ ಸಂಶಯಗಳೆಲ್ಲವೂ ಅಳಿಯಲು ಜ್ಞಾನವು ಪ್ರಾಕಟ್ಯವನ್ನು ಪಡೆಯುತ್ತದೆ. ಅನಂತರದಲ್ಲಿ ಆ ಜ್ಞಾನಾತಿಶಯವು ಜ್ಞಾತೃವಿನ ಸ್ವರೂಪವಾದ ಚಿನ್ಮಾತ್ರವಾಗಿ ಪರಿಣಮಿಸುತ್ತದೆ. ಇದೇ ಅಪರೋಕ್ಷಾನುಭವವಾಗಿರುತ್ತದೆ. ಇದೇ ಪಾರಮಾರ್ಥಿಕವಾದ ದೃಷ್ಟಿಲಾಭವಾಗಿರುತ್ತದೆ. ॥೪೧॥

ಚೇತನವಸ್ತುವಿನ ಪ್ರಕಾಶಬಲದಿಂದ ತೋರತಕ್ಕ ಈ ಎಲ್ಲ ಜಗತ್ತೂ ಕೂಡ ನಿರತಿಶಯವಾದ ಆನಂದರೂಪಕ್ಕಿಂತಲೂ ಬೇರೆಯಿಲ್ಲದ್ದೆಂದೂ, ಹೊಂದಲ್ಪಡಬೇಕಾದ ಬ್ರಹ್ಮವಸ್ತುವೇ ಅದೂ ಆಗಿದೆ ಎಂಬುದಾಗಿಯೂ, ವೇದಾಂತವಾಕ್ಯಪ್ರಮಾಣದಿಂದ ತಿಳಿಯತಕ್ಕವನು ಆ ಕ್ಷಣವೇ ಮುಕ್ತನಾಗುವನು. ॥೪೨॥

ಈ ರೀತಿಯಾಗಿ ಆತ್ಮನನ್ನು ದರ್ಶನಕ್ರಿಯೆಗೆ ವಿಷಯವಾಗದೆ ಕರ್ಮಕರ್ತೃಭಾವದ ವಿರೋಧವನ್ನು ಮೀರಿರುವ ಅದ್ವೈತಬ್ರಹ್ಮವನ್ನಾಗಿ ಜ್ಞಾನಿಯು ನೋಡುತ್ತಿರುತ್ತಾನೆ. ಅಲ್ಲದೆ ಮಾಯೆಯಿಂದ ಮಾತ್ರ ನೋಡತಕ್ಕವನ ಜಗದ್ರೂಪದಿಂದ ತೋರುವಿಕೆಯೂ ಕೂಡ ಅದ್ವಿತೀಯವಾದ ಸ್ವಾತ್ಮವೇ ಅಲ್ಲದೆ ಬೇರೆಯಲ್ಲವು. ಎಂದೂ ಅವನು ಮನಗಾಣುತ್ತಾನೆ. ॥೪೩॥

ಈ ರೀತಿಯಾಗಿ ತಿಳಿದು ಆ ಮಹಾಜ್ಞಾನಿಯಾದವನು ಜಗದ್ರೂಪದಿಂದ ತೋರುವಿಕೆಯಲ್ಲಿಯೂ ಅಭಿಮಾನರಾಗದ್ವೇಷ ಸುಖದುಃಖಗಳಿಲ್ಲದೆ ಇರುವುದರಿಂದ ಸ್ಥಿರನಾಗಿಯೇ ಇರುವನು. ಈ ಸರ್ವವೂ ಹೇಗೆ ಆತ್ಮನಿಂದಲೇ ತೋರುತ್ತದೆಂಬುದನ್ನು ಆ ಜೀವನ್ಮುಕ್ತನು ತನ್ನ ಆತ್ಮನಿಂದಲೇ ತಿಳಿದುಕೊಳ್ಳುತ್ತಾನೆ. ॥೪೪॥

ನಿಷೇಧತಿ ಚ ತತ್ಸಿದ್ಧಿರನುಜ್ಞಾತಸ್ಯ ಕೇವಲಮ್ ।
ತದಸಿದ್ಧಿರ್ನಿಷಿದ್ಧಸ್ಯ ಸಿದ್ಧ್ಯ ಸಿದ್ಧೀ ಚ ತಸ್ಯ ನ ॥೪೫॥

ಪ್ರಕಾಶಾತ್ಮತಯಾ ಸಾಕ್ಷಾತ್ಸ್ಥಿತಿರೇವಾಸ್ಯ ಕೇವಲಮ್ ।
ವಿದ್ಯತೇ ನೈವ ವಿಜ್ಞಾನಂ ನಾಜ್ಞಾನಂ ನ ಜಗತ್ತದಾ ॥೪೬॥

ಪ್ರಕಾಶಾತ್ಮತಯಾ ಸಾಕ್ಷಾತ್ ಸ್ಥಿತಿರಿತ್ಯಪಿ ಭಾಷಣಮ್ ।
ಅಹಂ ವದಾಮಿ ಮೋಹೇನ ತಚ್ಚ ತಸ್ಮಿನ್ನವಿದ್ಯತೇ ॥೪೭॥

ತಸ್ಯ ನಿಷ್ಠಾ ಮಯಾ ವಕ್ತುಂ ವಿಜ್ಞಾತುಂ ಚ ನ ಶಕ್ಯತೇ ।
ಶ್ರದ್ಧಾಮಾತ್ರೇಣ ಯತ್ಕಿಂಚಿತ್ ಜಲ್ಪ್ಯತೇಽಭ್ರಾಂತಚೇತಸಾ ॥೪೮॥

ಇರದೇಇರತಕ್ಕದ್ದನ್ನು, ಇಲ್ಲದ್ದನ್ನು, ಮಾತ್ರ ನಿಷೇಧಿಸುತ್ತಾನೆ. ಆತ್ಮವಲ್ಲ ವೆಂದು ಭಾವಿಸಬೇಕೆಂದರ್ಥವು. ಏಕೆಂದರೆ ತಿಳಿಯಲ್ಪಟ್ಟದ್ದರ ಸದ್ಭಾವವೂ, ನಿಷೇಧಿಸ ಲ್ಪಟ್ಟದ್ದರ ಅಸದ್ಭಾವವೂ, ತಿಳಿಯಲ್ಪಟ್ಟದ್ದಕ್ಕೂ ಮತ್ತು ನಿಷೇಧಿಸಲ್ಪಟ್ಟದ್ದಕ್ಕೂ ಸಂಭವಿಸಬಹುದಲ್ಲದೇ, ನಿಷೇಧಿಸತಕ್ಕವನಿಗೂ, ತಿಳಿಯತಕ್ಕವನಿಗೂ ಅದು ಸಂಬಂಧಿ ಸಲಾರದು. ಏಕೆಂದರೆ ಸಾಕ್ಷಿಚೈತನ್ಯವು ಆಕಾಶ ಬಿಸಿಲುಗಳಂತೆ ನಿರ್ಲಿಪ್ತವಾಗಿರು ತ್ತದೆ. ॥೪೫॥

ಈ ಆತ್ಮನಿಗಾದರೋ ಚಿತ್ಪ್ರಕಾಶರೂಪದಿಂದಲೇ, ಸಾಕ್ಷಾತ್ತಾಗಿ ಗೋಚರಿಸ ತಕ್ಕ ಅದ್ವಿತೀಯವಾಗಿರತಕ್ಕ ಈ ಸ್ಥಿತಿಯು ಇರುತ್ತದೆ. ಅದಕ್ಕೆ ನಿವರ್ತ್ಯವಾದದ್ದೂ ಅಜ್ಞಾನಕಾರ್ಯವಾದ ಜಗತ್ತೆಂಬುದೂ ಬೇರೆ ಯಾವುದೂ ನಿಜವಾಗಿ ಇರುವುದೇ ಇಲ್ಲವು. ॥೪೬॥

ಸ್ವರೂಪಚಿತ್ಪ್ರಕಾಶರೂಪದಿಂದ ಇರುವಿಕೆಯು ಎಂಬ ಈ ಮಾತನ್ನೂ ಕೂಡ ನಾನು ಅಜ್ಞಾನದಿಂದ ಮಾತ್ರ ಹೇಳುತ್ತಿರುತ್ತೇನೆ! ಅದೂ ಕೂಡ ಆತನಲ್ಲಿ ಇಲ್ಲವೇ ಇಲ್ಲವು. ಆ ಜೀವನ್ಮುಕ್ತನ ನಿಷ್ಠೆಯನ್ನು ನನ್ನಿಂದ ಹೇಳುವುದಕ್ಕಾಗಲೀ ಅಥವಾ ತಿಳಿಯುವುದಕ್ಕಾಗಲೀ ಸಾಧ್ಯವಲ್ಲವು. ಶ್ರುತಿ, ಗುರೂಪದೇಶ, ಇವುಗಳಲ್ಲಿ ಶ್ರದ್ಧೆ ಯಿಂದ ಮಾತ್ರ, ಭ್ರಾಂತಿ ಮುಂತಾದ ಪುರುಷದೋಷವಿಲ್ಲದೆ ನಿರ್ಮಲವಾದ ಮನಸ್ಸಿ ನಿಂದ ಯಾವುದಾದರೂ ಕೆಲವು ಮಾತುಗಳು ನನ್ನಿಂದ ಹೇಳಲ್ಪಡುತ್ತವೆ! ವಾಸ್ತವ ವಾಗಿ ಪರತತ್ವವು ವಾಙ್ಮನೋಽತೀತವಾದುದೆಂದು ಭಾವವು. ॥೪೭-೪೮॥

ಇತಿ ಗುಹ್ಯಮಿದಂ ಕಥಿತಂ ಮಯಾ ।
ನಿಖಿಲೋಪನಿಷದ್ಧೃದಯಂಗಮಮ್ ॥
ಹರಪಂಕಜಲೋಚನ ಪಾಲಿತಂ ।
ವಿದಿತಂ ಯದಿ ವೇದ ವಿದೇವ ಸಃ ॥೪೯॥

ಇತಿ ಶ್ರೀಸ್ಕಾಂದಪುರಾಣೇ ಸೂತಸಂಹಿತಾಯಾಂ ಚತುರ್ಥಸ್ಯ ಯಜ್ಞವೈಭವಖಂಡಸ್ಯೋಪರಿಭಾಗೇ ಸೂತಗೀತಾಸೂಪನಿಷತ್ಸು ಚತುರ್ಥೋಽಧ್ಯಾಯಃ

ಈರೀತಿಯಾಗಿ ರಹಸ್ಯವಾದ ಮತ್ತು ಸಕಲ ಉಪನಿಷತ್ತುಗಳಿಗೂ ಪರಮ ತಾತ್ಪರ್ಯವಿಷಯವಾದ, ಹೃದಯಂಗಮವಾದ, ಮತ್ತು ಈಶ್ವರ ವಿಷ್ಣುಗಳಿಂದ ರಕ್ಷಿಸಲ್ಪಟ್ಟ, ನನ್ನಿಂದಲೂ ಹೇಳಲ್ಪಟ್ಟ ಈ ಶಾಸ್ತ್ರಾರ್ಥವು ತಿಳಿಯಲ್ಪಟ್ಟದ್ದೇ ಆದರೆ ಆತನೇ ನಿಜವಾದ ವೇದಾರ್ಥಜ್ಞಾನಿಯು. ॥೪೯॥

ಇಲ್ಲಿಗೆ ಸೂತಸಂಹಿತೆಯ ಸೂತಗೀತೆಯಲ್ಲಿ ನಾಲ್ಕನೆಯ ಅಧ್ಯಾಯವು ಮುಗಿದುದು.

|| ಶ್ರೀಃ ||

ಅಥಾಸ್ಯಾಃ ಶ್ರೀಮತ್ಸ್ಕಾಂದಪುರಾಣಾಂತರ್ಗತ ಸೂತಸಂಹಿತಾಯಾಶ್ಚತುರ್ಥಸ್ಯ ಯಜ್ಞವೈಭವಖಂಡಸ್ಯೋಪರಿಭಾಗೇ ಸೂತಗೀತಾ

|| ಪಂಚಮೋಽಧ್ಯಾಯಃ ||

ಐದನೆಯ ಅಧ್ಯಾಯವು

|| ಸೂತ ಉವಾಚ ||

ವಕ್ಷ್ಯಾಮಿ ಪರಮಂ ಗುಹ್ಯಂ ಯುಷ್ಮಾಕಂ ಮುನಿಪುಂಗವಾಃ ।
ವಿಜ್ಞಾನಂ ವೇದಸಂಭೂತಂ ಭಕ್ತಾನಾಮುತ್ತಮೋತ್ತಮಂ ||೧||

ರುದ್ರ-ವಿಷ್ಣು-ಪ್ರಜಾನಾಥ-ಪ್ರಮುಖಾಃ ಸರ್ವಚೇತನಾಃ ।
ಸ್ವರಸೇನಾಹಮಿತ್ಯಾಹುಃ ಇದಮಿತ್ಯಪಿ ಚ ಸ್ವತಃ ||೨||

ಈ ರೀತಿಯಲ್ಲಿ ಪರಾಗರ್ಥವಾದ ಪ್ರಪಂಚಸೃಷ್ಟಿಯು ಪರಶಿವನ ಮಾಯೆಯಿಂದ, ಸೃಜ್ಯಮಾನವಾದ ಪ್ರಾಣಿಗಳ ಕರ್ಮವಶದಿಂದ, ಅಧ್ಯಾರೋಪ ಅಪವಾದ ನ್ಯಾಯರೀತಿಯಲ್ಲಿ ಆಗುತ್ತಿದೆಯೆಂದು ಹೇಳಿ, ಈಗ ಪ್ರತ್ಯಗರ್ಥದ ದೃಷ್ಟಿಯಿಂದಲೂ ಅದ್ವೈತಾತ್ಮತತ್ವವನ್ನು ತಿಳಿಸುತ್ತಾರೆ.

ಸೂತಮುನಿಯು ಹೇಳಿದನು.— ಎಲೌ ಋಷಿಶ್ರೇಷ್ಠರೇ, ಪರಮರಹಸ್ಯವಾದ, ವೇದವೇದಾಂತಗಳ ವ್ಯಾಸಂಗದಿಂದ ಜನ್ಯವಾದ, ಭಕ್ತರಿಗೆ ಉತ್ತಮೋತ್ತಮವಾಗಿರುವ ಫಲಪ್ರದವಾದ ಶಾಸ್ತ್ರಜ್ಞಾನವನ್ನು ನಿಮಗಾಗಿ ಹೇಳುವೆನು. ಆಹಮರ್ಥವನ್ನೂ ವಿವೇಚನೆಮಾಡುವುದರಿಂದ ಉಂಟಾಗುವ ಅದ್ವೈತಬ್ರಹ್ಮತತ್ವದ ತಿಳಿವಳಿಕೆಯೇ ಮೋಕ್ಷಕಾರಣವೆಂದು ಭಾವವು. ||೧||

ಹರಿ, ಹರ, ಬ್ರಹ್ಮಾ ಮೊದಲಾದ ಸಕಲ ಚೇತನರೂ, ಸ್ವರಸವಾಗಿಯೇ

ಇದಂ ಬುದ್ಧಿಶ್ಚ ಬಾಹ್ಯಾರ್ಥೇ ತ್ವಹಂ ಬುದ್ಧಿಸ್ತಥಾಽಽತ್ಮನಿ ।
ಪ್ರಸಿದ್ಧಾ ಸರ್ವಜಂತೂನಾಂ ವಿವಾದೋಽತ್ರ ನ ಕಶ್ಚನ ॥೩॥

ಇದಮರ್ಥೇ ಘಟಾದ್ಯರ್ಥೇಽನಾತ್ಮತ್ವಂ ಸರ್ವದೇಹಿನಾಂ ।
ಅಹಮರ್ಥೇ ತಥಾಽಽತ್ಮತ್ವಮಪಿ ಸಿದ್ಧಂ ಸ್ವಭಾವತಃ ॥೪॥

ಏವಂ ಸಮಸ್ತಜಂತೂನಾಮನುಭೂತಿರ್ವ್ಯವಸ್ಥಿತಾ ।
ಭ್ರಾಂತಾ ಅಪಿ ನ ಕುರ್ವಂತಿ ವಿವಾದಂ ಚಾತ್ರ ಸತ್ತಮಾಃ ॥೫॥

ಏವಂ ವ್ಯವಸ್ಥಿತೇ ಹ್ಯರ್ಥೇ ಸತಿ ಬುದ್ಧಿಮತಾಂ ವರಾಃ ।
ಸಂಸಾರವಿಷವೃಕ್ಷಸ್ಯ ಮೂಲಚ್ಛೇದನಕಾಂಕ್ಷಿಭಿಃ ॥೬॥

ಯತ್ರ ಯತ್ರೇದಮಿತ್ಯೇಷಾ ಬುದ್ಧಿರ್ದೃಷ್ಟಾ ಸ್ವಭಾವತಃ ।
ತತ್ರ ತತ್ರ ತ್ವನಾತ್ಮತ್ವಂ ವಿಜ್ಞಾತವ್ಯಂ ವಿಚಕ್ಷಣೈಃ ॥೭॥

'ನಾನು' ಎಂಬುದಾಗಿಯೂ, ಮತ್ತು ತಮ್ಮಿಂದಲೇ ಈ ಜಗತ್ತಿನ ಸೃಷ್ಟಿ, ಸ್ಥಿತಿ, ಸಂಹಾರಕಾರ್ಯಗಳು ನೆರವೇರುತ್ತಿರುತ್ತವೆ, ಎಂಬುದಾಗಿಯೂ ಹೇಳುತ್ತಾರೆ. ॥೨॥

ಹೊರಗಡೆ ತೋರುವ ಪದಾರ್ಥದಲ್ಲಿ ಇದು ಎಂಬ ಬುದ್ಧಿಯೂ, ಆತ್ಮನಲ್ಲಿ ನಾನು ಎಂಬ ಬುದ್ಧಿಯೂ, ಸರ್ವ ಜಂತುಗಳಿಗೂ ಪ್ರಸಿದ್ಧವಾಗಿದೆ. ಈ ವಿಚಾರದಲ್ಲಿ ಯಾವ ಭಿನ್ನಾಭಿಪ್ರಾಯವೂ ಇಲ್ಲವು. ॥೩॥

ಇದು ಎಂದು ತೋರುವ ಘಟಾದಿಪದಾರ್ಥಗಳಲ್ಲಿ ಆತ್ಮನಲ್ಲವೆಂಬ ಬುದ್ಧಿಯೂ, ನಾನು ಎಂದು ತೋರುವ ಪದಾರ್ಥದಲ್ಲಿ ಆತ್ಮಭಾವವೂ, ಸಕಲ ದೇಹಿಗಳಿಗೂ ಸ್ವಭಾವವಾಗಿಯೇ ಉಂಟಾಗಿರುತ್ತದೆ. ॥೪॥

ಓ ಸತ್ಪುರುಷರೇ, ಮೇಲೆ ಹೇಳಿದ ಈ ರೀತಿಯಾದ ಅನುಭವವು ಸಕಲ ಪ್ರಾಣಿಗಳಿಗೂ ಕ್ಲೃಪ್ತವಾಗಿದೆ. ಇದರಲ್ಲಿ ಪರತತ್ವಜ್ಞಾನವಿಲ್ಲದಿರುವ ಭ್ರಾಂತರೂ ವಿವಾದಮಾಡುವುದಿಲ್ಲ. ॥೫॥

ಎಲೌ ಬುದ್ಧಿವಂತರೊಳಗೆ ಶ್ರೇಷ್ಠರೇ, ಈ ರೀತಿಯಾಗಿ ಅರ್ಥವು ನಿರ್ಣೀತ ವಾಗಿರಲಾಗಿ ಸಂಸಾರವೆಂಬ ವಿಷವೃಕ್ಷದ ಬೇರುಗಳನ್ನೇ ಕತ್ತರಿಸಿ ಮೋಕ್ಷವನ್ನ ಪೇಕ್ಷಿಸುವ ವಿದ್ವಾಂಸರುಗಳಿಂದ ಎಲ್ಲಿ ಎಲ್ಲಿ 'ಇದು' ಎಂಬ ಬುದ್ಧಿಯು ಉಂಟಾಗು ತ್ತದೋ ಅಲ್ಲಿ ಅಲ್ಲಿ ಅನಾತ್ಮಭಾವವು ಗ್ರಹಿಸಲ್ಪಡಬೇಕು. ॥೬-೭॥

ಯತ್ರಯತ್ರಾಹಮಿತ್ಯೇಷಾ ಬುದ್ಧಿರ್ದೃಷ್ಟಾ ಸ್ವಭಾವತಃ ।
ತತ್ರ ತತ್ರ ತಥಾಽತ್ಮತ್ವಂ ವಿಜ್ಞಾತವ್ಯಂ ಮನೀಷಿಭಿಃ ॥೮॥

ಶರೀರೇ ದೃಶ್ಯತೇ ಸರ್ವೈರಿದಂ ಬುದ್ಧಿಸ್ತಥೈವಚ ।
ಅಹಂ ಬುದ್ಧಿಶ್ಚ ವಿಪ್ರೇಂದ್ರಾಸ್ತತಸ್ತೇ ಭಿನ್ನಗೋಚರೇ ॥೯॥

ಶರೀರಾಲಂಬನಾ ಬುದ್ಧಿರಿದ ಮಿತ್ಯಾಸ್ತಿಕೋತ್ತಮಾಃ ।
ಚಿದಾತ್ಮಾಲಂಬನಾ ಸಾಕ್ಷಾದಹಂ ಬುದ್ಧಿರ್ನ ಸಂಶಯಃ ॥೧೦॥

ಇದಮರ್ಥೇ ಶರೀರೇ ತು ಯಾಽಹಮಿತ್ಯುದಿತಾ ಮತಿಃ ।
ಸಾ ಮಹಾಭ್ರಾಂತಿರೇವ ಸ್ಯಾತ್ ಅತಸ್ಮಿಂ ಸ್ತದ್ಗ್ರಹತ್ವತಃ ॥೧೧॥

ಅಚಿದ್ರೂಪಮಹಂ ಬುದ್ಧೇಃ ಪಿಂಡಂ ನಾಲಂಬನಂ ಭವೇತ್ ।
ಮೃತ್ಪಿಂಡಾದಿಷ್ವದೃಷ್ಟತ್ವಾತ್ ತತೋಽನಾತ್ಮೈವ ವಿಗ್ರಹಃ ॥೧೨॥

ಎಲೌ ಬ್ರಾಹ್ಮಣಶ್ರೇಷ್ಠರೇ, ಎಲ್ಲ ಜನರಿಂದಲೂ ಶರೀರದಲ್ಲಿ 'ಇದು' ಎಂಬ ಬುದ್ಧಿಯೂ, ಹಾಗೆಯೇ 'ನಾನು' ಎಂಬ ಬುದ್ಧಿಯೂ, ತಿಳಿಯಲ್ಪಡುತ್ತದೆ. ಆದ್ದರಿಂದ ಆ 'ಇದು, ನಾನು' ಎಂಬ ಎರಡು ಬುದ್ಧಿಗಳೂ ಭಿನ್ನಭಿನ್ನ ವಿಷಯಕಗಳೆಂದು ನಿರ್ಣೀತವಾಗಿದೆ. ॥೯॥

ಎಲೌ ಆಸ್ತಿಕೋತ್ತಮರೇ, ಇವುಗಳಲ್ಲಿ ಶರೀರವನ್ನವಲಂಬಿಸಿಕೊಂಡಿರುವುದಕ್ಕೆ 'ಇದು' ಎಂಬ ಬುದ್ಧಿಯು, ಎಂದು ಹೆಸರು. 'ನಾನು' ಎಂಬ ಬುದ್ಧಿಯು ಚಿದಾತ್ಮನನ್ನವಲಂಬಿಸಿಕೊಂಡಿರತಕ್ಕದ್ದೆಂಬುದರಲ್ಲಿ ಸಂಶಯವಿಲ್ಲವು. ॥೧೦॥

ನಾನು ಮನುಷ್ಯನು ; ನಾನು ಸ್ಥೂಲನು ; ಎಂಬ ವ್ಯವಹಾರಗಳಲ್ಲಿ ಮನುಷ್ಯತ್ವ ಮತ್ತು ಸ್ಥೂಲತ್ವ ಮೊದಲಾದ ಧರ್ಮಗಳು ಶರೀರದ್ದಲ್ಲದೇ ಆತ್ಮನವಲ್ಲವು. ಹೀಗಿದ್ದರೂ ಆ ಶರೀರ ಧರ್ಮವೇ ಆತ್ಮನದೆಂಬ ಭ್ರಾಂತಿಯಿಂದ ಮಾತ್ರ ನಾನು ಮನುಷ್ಯನು, ನಾನು ಸ್ಥೂಲನು, ಎಂಬುದಾಗಿ ವ್ಯವಹಾರವುಂಟಾಗಿದೆ. ಇದು ಮಹಾಭ್ರಾಂತಿಯು. ಏಕೆಂದರೆ ಅದರದ್ದಲ್ಲದ ಧರ್ಮವನ್ನು ಅದರದ್ದೆಂದು ಹೇಳುವುದಕ್ಕೆ ಶಾಸ್ತ್ರದಲ್ಲಿ ಮಹಾಭ್ರಾಂತಿಯೆಂದು ಸಂಜ್ಞೆಯು ಇದೆ. ॥೧೧॥

ನಾನು ಎಂಬ ಬುದ್ಧಿಗೆ ಚದ್ರೂಪವಲ್ಲದ (ಜಡವಾದ) ಶರೀರವು ವಿಷಯವಾಗಲಾರದು. ನನ್ನ ಶರೀರವೆಂಬ ವ್ಯವಹಾರದಲ್ಲಿ ನಾನು ಎಂಬುದು ಚೈತನ

ಅಚಿತ್ತ್ವಾದಿಂದ್ರಿಯಾಣಾಂ ಚ ಪ್ರಾಣಸ್ಯ ಮನಸಸ್ತಥಾ ।
ಆಲಂಬನತ್ವಂ ನಾಸ್ತ್ಯೇವ ಬುದ್ಧೇಶ್ಚಾಹಂ ಮತಿಂ ಪ್ರತಿ ॥೧೩॥

ಬುದ್ಧೇರಚಿತ್ತ್ವಂ ಸಂಗ್ರಾಹ್ಯಂ ದೃಷ್ಟತ್ವಾಜ್ಜನ್ಮನಾಶಯೋಃ ।
ಅಚಿದ್ರೂಪಸ್ಯ ಕುಡ್ಯಾದೇಃ ಖಲು ಜನ್ಮವಿನಾಶನಮ್ ॥೧೪॥

ಅಹಂಕಾರಸ್ಯ ಚಾಚಿತ್ತ್ವಾಚ್ಚಿತ್ತಸ್ಯ ಚ ತಥೈವ ಚ ।
ಆಲಂಬನತ್ವಂ ನಾಸ್ತ್ಯೇವ ಸದಾಽಹಂ ಪ್ರತ್ಯಯಂ ಪ್ರತಿ ॥೧೫॥

ಪದಾರ್ಥ (ಆತ್ಮ) ವೆಂದೂ, ಶರೀರವೆಂಬುದು ಜಡವೆಂದೂ, ನಿರ್ಣೀತವಾಗಿದೆ. ಏಕೆಂದರೆ ಅದೇ ಭೌತಿಕದ ರೂಪಾಂತರವೇ ಆಗಿರುವ ಮಣ್ಣಿನ ಉಂಡೆಯೇ ಮೊದಲಾದುವುಗಳಲ್ಲಿ ಅಹಂ, ನಾನು, ಎಂಬ ಬುದ್ಧಿಯುಂಟಾಗುವುದಿಲ್ಲವು. ಆದ್ದರಿಂದ ಈ ಶರೀರವು ಅನಾತ್ಮವೇ ಎಂದು ನಿರ್ಣೀತವಾಯಿತು. ದೇಹವು ಜಡವಾದ್ದರಿಂದಲೂ, ಆತ್ಮನು ಚೇತನಾರೂಪವಾದದ್ದರಿಂದಲೂ ಇದು ನಿರ್ಣೀತವಾಗುತ್ತದೆ. ॥೧೨॥

ಅಹಂ (ನಾನು) ಎಂಬ ಬುದ್ಧಿಗೆ ಆಲಂಬನವಾದದ್ದು ಇಂದ್ರಿಯಗಳಾಗಲೀ, ಪ್ರಾಣವಾಗಲೀ ಅಥವಾ ಮನಸ್ಸಾಗಲೀ ಅಗಲಾರದು. ಏಕೆಂದರೆ, ಅವೆಲ್ಲವೂ ಅಚೇತನವಾದವುಗಳು. ನಾನು ಎಂಬುದು ಚೇತನದ ರೂಪವು. ಅಲ್ಲದೆ ನನ್ನ ಇಂದ್ರಿಯ, ನನ್ನ ಪ್ರಾಣ, ಮತ್ತು ನನ್ನ ಮನಸ್ಸು ಎಂಬ ವ್ಯವಹಾರಗಳೂ, ಅಬಾಧಿತಗಳಾಗಿರುತ್ತವಾದ್ದರಿಂದ ಇವುಗಳಾವುವೂ ಆತ್ಮನಾಗಲಾರವು. ಬುದ್ಧಿಯೂ ಕೂಡ ಜಡವಾದ್ದರಿಂದ ಚೇತನವಾಗಲಾರದು. ॥೧೩॥

ಉತ್ಪತ್ತಿ ಮತ್ತು ನಾಶಗಳು ಕಾಣಲ್ಪಟ್ಟಿರುವುದರಿಂದಲೇ ಬುದ್ಧಿಗೆ ಅಚೇತನ ಭಾವವು ಗ್ರಹಿಸಲ್ಪಡಬೇಕು. ಉತ್ಪತ್ತಿ ಮತ್ತು ವಿನಾಶವೆಂಬುದು ಚಿದ್ರೂಪವಲ್ಲದ ಕುಡ್ಯಾದಿಗಳಿಗೆ (ಗೋಡೆ ಮುಂತಾದುವುಗಳಿಗೆ) ಮಾತ್ರವಲ್ಲದೇ ಬೇರೆಯಿಲ್ಲವು.॥೧೪॥

ಅಹಂಕಾರವಾಗಲೀ ಅಥವಾ ಚಿತ್ತವೆಂಬುದಾಗಲೀ ಅಚಿದ್ರೂಪಕ್ಕೆ ಆಲಂಬನವಾಗಲಾರದು. ಏಕೆಂದರೆ, ಅವೂ ಕೂಡ ಜಡವಾದುವುಗಳೇ ಚಿದ್ಬಾಹ್ಯಗಳೇ ಆದ್ದರಿಂದ ಘಟಾದಿಗಳಂತೆಯೇ ಆಯಿತು. ಆದ್ದರಿಂದ ಜಡಗಳಾದ ಆ ಪದಾರ್ಥಗಳು ಆತ್ಮಪ್ರತ್ಯಯಕ್ಕೆ ಆಲಂಬನವಲ್ಲವು. ॥೧೫॥

ಸರ್ವಪ್ರತ್ಯಯರೂಪೇಣ ಸದಾಽಹಂಕಾರ ಏವ ಹಿ ।
ವಿವರ್ತತೇಽತೋಽಹಂಕಾರಸ್ತ್ವನಾತ್ಮೈವ ಶರೀರವತ್ ॥೧೬॥

ಪರಿಣಾಮಸ್ವಭಾವಸ್ಯ ಕ್ಷೀರಾದೇರ್ದ್ವಿಜಪುಂಗವಾಃ ।
ಅಚೇತನತ್ವಂ ಲೋಕೇಽಸ್ಮಿನ್ ಪ್ರಸಿದ್ಧಂ ಖಲು ಸಂತತಂ ॥೧೭॥

ತಸ್ಮಾಚ್ಚಿದ್ರೂಪ ಏವಾತ್ಮಾಽಹಂ ಬುದ್ಧೇರರ್ಥ ಆಸ್ತಿಕಾಃ ।
ಅಚಿದ್ರೂಪಮಿದಂ ಬುದ್ಧೇರನಾತ್ಮೈವಾರ್ಥ ಈರಿತಃ ॥೧೮॥

ಸತ್ಯಪಿ ಪ್ರತ್ಯಯಾರ್ಥತ್ವೇ ಪ್ರತ್ಯಗಾತ್ಮಾ ಸ್ವಯಂ ಪ್ರಭಃ ।
ವೃತ್ತ್ಯಧೀನತಯಾ ನೈವ ವಿಭಾತಿ ಘಟಕುಡ್ಯವತ್ ॥೧೯॥

ಸ್ವಚ್ಛವೃತ್ತಿಮನುಪ್ರಾಪ್ಯ ವೃತ್ತೇಸ್ಸಾಕ್ಷಿತಯಾ ಸ್ಥಿತಃ ।
ವೃತ್ತ್ಯಾ ನಿವರ್ತ್ಯಮಜ್ಞಾನಂ ಗ್ರಸತೇ ತೇನ ತೇಜಸಾ ॥೨೦॥

ಸರ್ವ ವಿಷಯಾಕಾರಗಳಿಂದಲೂ ಎಲ್ಲಾ ಕಾಲದಲ್ಲಿಯೂ ಅಹಂಕಾರವೂ ಸುಖದುಃಖಾದಿ ರೂಪಗಳಿಂದ ರೂಪಾಂತರವನ್ನೈದುವುದರಿಂದ, ವಿಕಾರಿಯಾದದ್ದರಿಂದ, ಅದೂ ಶರೀರದಂತೆ ಅನಾತ್ಮವೇ ಆಯಿತು. ಎಲೈ ಬ್ರಾಹ್ಮಣಶ್ರೇಷ್ಠರೇ, ರೂಪಾಂತರವನ್ನೈದುವ ಸ್ವಭಾವವುಳ್ಳ ಕ್ಷೀರಾದಿಗಳು ಅಚೇತನಗಳೆಂಬುದು ಈ ಲೋಕದಲ್ಲಿ ಎಲ್ಲಾ ಕಾಲದಲ್ಲಿಯೂ ಪ್ರಸಿದ್ಧವಾಗಿಯೇ ಇದೆ. ಹಾಗೆಯೇ ಅಹಂಕಾರಕ್ಕೂ ಅಚೇತನತ್ವವಲ್ಲದೇ ಆತ್ಮರೂಪತ್ವವಿಲ್ಲವು. ||೧೬-೧೭||

ಆದ್ದರಿಂದಲೇ ಅಹಂ ಬುದ್ಧಿಗೆ ಚೈತನ್ಯರೂಪವುಳ್ಳ ಆತ್ಮನೇ ವಿಷಯನು. ಇದಂ ಬುದ್ಧಿಗೆ ಚೈತನ್ಯರೂಪವಲ್ಲದ ಅನಾತ್ಮವೇ ಅರ್ಥವೆಂಬುದಾಗಿ ಹೇಳಲ್ಪಟ್ಟಿದೆ. ||೧೮||

ಆತ್ಮನು ಅಹಂ ಬುದ್ಧಿ ವಿಷಯನಾದರೆ ಸ್ವಪ್ರಕಾಶತ್ವವಿಲ್ಲದವನಾಗಬೇಕೆನ್ನಲಾಗದು. ಏಕೆಂದರೆ ಸರ್ವಾಂತರ್ಯಾಮಿಯಾದ ಪ್ರತ್ಯಗಾತ್ಮನಿಗೆ ಅಹಂ ಪ್ರತ್ಯಯ ವಿಷಯತ್ವವಿದ್ದರೂ, ಸ್ವಯಂಪ್ರಕಾಶನೆಂಬುದರಲ್ಲಿ ವಿವಾದವಿಲ್ಲವು. ಅಂತಃಕರಣ ವೃತ್ತ್ಯಧೀನನಾಗಿ ಘಟ, ಕುಡ್ಯಾದಿಗಳಂತೆ ಅವನೂ ಪ್ರಕಾಶಿಸುವುದಿಲ್ಲವು. ಏಕೆಂದರೆ ವೃತ್ತಿಯೂ ಕೂಡ ಚಿದ್ರೂಪದಿಂದ ಪ್ರಕಾಶ್ಯವಲ್ಲದೇ ಬೇರೆಯಿಂದಲ್ಲವು. ಆವೃತ್ತಿಗೂ ಅವನೇ ಸಾಕ್ಷಿರೂಪನು. ನಿರ್ಮಲರೂಪವನ್ನು ಹೊಂದಿರುವ ಆತ್ಮನು ಅದಕ್ಕೂ

ಅನುಪ್ರವಿಷ್ಟ-ಚೈತನ್ಯ-ಸಂಬಂಧಾ ದ್ವೃತ್ತಿರಾಸ್ತಿಕಾಃ ।
ಜಡರೂಪಂ ಘಟಾದ್ಯರ್ಥಂ ಭಾಸಯತ್ಯಾತ್ಮರೂಪವತ್ ॥೨೧॥

ಅತೋಽಹಂ ಪ್ರತ್ಯಯಾರ್ಥೋಽಪಿ ನಾನಾತ್ಮಾ ಸ್ಯಾದ್ಘಟಾದಿವತ್ ।
ಸ್ವಯಂ ಪ್ರಕಾಶರೂಪೇಣ ಸಾಕ್ಷಾದಾತ್ಮೈವ ಕೇವಲಮ್ ॥೨೨॥

ಯತ್ಸಂಬಂಧಾದಹಂ ವೃತ್ತಿಃ ಪ್ರತ್ಯಯತ್ವೇನ ಭಾಸತೇ ।
ಸ ಕಥಂ ಪ್ರತ್ಯಯಾಧೀನ ಪ್ರಕಾಶಃ ಸ್ಯಾತ್ಸ್ವಯಂ ಪ್ರಭಃ ॥೨೩॥

ಅಹಂವೃತ್ತಿಃ ಸ್ವತಸ್ಸಿದ್ಧ ಚೈತನ್ಯೇದ್ಧಾಽವಭಾಸತೇ ।
ತತ್ಸಂಬಂಧಾದಹಂಕಾರಃ ಪ್ರತ್ಯಯೀವ ಪ್ರಕಾಶತೇ ॥೨೪॥

ಸಾಕ್ಷಿರೂಪನು. ಹಾಗಾದರೆ ಅಹಮಾಕಾರವಾದ ವೃತ್ತಿಯ ಪ್ರಯೋಜನವೇನು? ಎಂದರೆ ಚಿತ್ಪ್ರಕಾಶರೂಪನಾದ ಆತನು ವೃತ್ತಿಯಿಂದ ಓಡಿಸಲು ಯೋಗ್ಯವಾದ, ಆವಾರಕವಾದ ಅಜ್ಞಾನವನ್ನು ಆತನೇ ನುಂಗುತ್ತಾನೆ. (ವೃತ್ತಿಯು ಅಜ್ಞಾನವನ್ನು ಕಳೆಯುವುದರ ಮೂಲಕ ತಾನೂ ಆತ್ಮನಲ್ಲಿಯೇ ಅಡಗುತ್ತದೆಂದು ತಾತ್ಪರ್ಯವು). ॥೧೯-೨೦॥

ವೃತ್ತಿಯೊಳಗೆ ಅನುಪ್ರವಿಷ್ಟವಾಗಿರುವ ಚೈತನ್ಯಸಂಬಂಧದಿಂದಲೇ, ಎಲೌ ಆಸ್ತಿಕರೇ, ವೃತ್ತಿಯೂ ಕೂಡ ಜಡರೂಪವಾದ ಘಟಾದಿಪದಾರ್ಥವನ್ನು ಆತ್ಮದಂತೆ ಪ್ರಕಾಶಗೊಳಿಸುತ್ತದೆ. ಆದ್ದರಿಂದ ಸೂರ್ಯನ ಪ್ರತಿಬಿಂಬವನ್ನು ಪಡೆದಿರುವ ಕನ್ನಡಿಯೂ ಪದಾರ್ಥಪ್ರಕಾಶವನ್ನುಂಟುಮಾಡುವಂತೆ ವೃತ್ತಿಯು ಎಂದು ತಿಳಿಯಬೇಕು. ಆದ್ದರಿಂದ ಅಹಂಪ್ರತ್ಯಯಾರ್ಥವೂ ಕೂಡ ಘಟಾದಿಗಳಂತೆ ಅನಾತ್ಮವಾಗಲಾರದು. ಮತ್ತೇನೆಂದರೆ ಸ್ವಯಂಪ್ರಕಾಶರೂಪದಿಂದ ಕೂಡಿರುವ ಅದ್ವಿತೀಯವಾದ ಕೇವಲ ಆತ್ಮವೇ ಆಗಿರುತ್ತದೆ. ॥೨೧-೨೨॥

ಅಹಂ ವೃತ್ತಿಯೂ ಕೂಡ ಯಾರ ಸಂಬಂಧವಿದ್ದರೆ ಪ್ರಕಾಶವಾಗುತ್ತದೆಯೋ (ಯಾವ ಆತ್ಮನ ಸಂಬಂಧವಿಲ್ಲದೇ ಇದ್ದರೆ ತೋರಲಾಗುವುದೇ ಇಲ್ಲವೋ) ಅಂಥಾ ಸ್ವಪ್ರಕಾಶನಾದ ಆ ಆತ್ಮನು ಪ್ರತ್ಯಯಕ್ಕೆ, ವೃತ್ತಿಗೆ, ಅಧೀನವಾದ ಪ್ರಕಾಶವುಳ್ಳವನು ಆಗುವುದಾದರೂ ಹೇಗೆ? ॥೨೩॥

ಸ್ವಪ್ರಕಾಶವಾದ ಯಾವ ಸಾಕ್ಷಿಭೂತಚೈತನ್ಯವಸ್ತುವುಂಟೋ ಅದರಿಂದ ರೂಪಾಂತರಗೊಂಡು ಅಹಂ ವೃತ್ತಿಯು ಪ್ರಕಾಶಿಸುತ್ತದೆ. ಅದು ಶಬ್ದಾದಿಜ್ಞಾನ

ಆತ್ಮಾಽಹಂ ಪ್ರತ್ಯಯಾಕಾರಸಂಬಂಧ ಭ್ರಾಂತಿ ಮಾತ್ರತಃ ।
ಕರ್ತಾ ಭೋಕ್ತಾ ಸುಖೀ ದುಃಖೀ ಜ್ಞಾತೇತಿ ಪ್ರತಿಭಾಸತೇ ॥೨೫॥

ವಸ್ತುತಸ್ತಸ್ಯ ನಾಸ್ತ್ಯೇವ ಚಿನ್ಮಾತ್ರಾದಪರಂ ವಪುಃ ।
ಚಿದ್ರೂಪಮೇವ ಸ್ವಾಜ್ಞಾನಾದನ್ಯಥಾ ಪ್ರತಿಭಾಸತೇ ॥೨೬॥

ಸರ್ವದೇಹೇಷ್ವಹಂ ರೂಪಃ ಪ್ರತ್ಯಯೋ ಯಃ ಪ್ರಕಾಶತೇ ।
ತಸ್ಯ ಚಿದ್ರೂಪ ಏವಾತ್ಮಾ ಸಾಕ್ಷಾದರ್ಥೋ ನ ಚಾಪರಃ ॥೨೭॥

ಗೌರಿತಿ ಪ್ರತ್ಯಯಸ್ಯಾರ್ಥೋ ಯಥಾ ಗೋತ್ವಂ ತು ಕೇವಲಂ ।
ತಥಾಽಹಂ ಪ್ರತ್ಯಯಸ್ಯಾರ್ಥ ಶ್ಚಿದ್ರೂಪಾತ್ಮೈವ ಕೇವಲಮ್ ॥೨೮॥

ವ್ಯಕ್ತಿಸಂಬಂಧರೂಪೇಣ ಗೋತ್ವಂ ಭಿನ್ನಂ ಪ್ರತೀಯತೇ ।
ಚಿದಹಂಕಾರ ಸಂಬಂಧಾತ್ ಭೇದೇನ ಪ್ರತಿಭಾತಿ ಚ ॥೨೯॥

ವುಳ್ಳದ್ದೋ ಎನ್ನುವಹಾಗೆ ತೋರಿಕೊಳ್ಳುವುದಕ್ಕೂ ಚೈತನ್ಯಸಂಬಂಧವೇ ಕಾರಣವು. ಆತ್ಮನು ಮಾತ್ರ ನಿಜವಾಗಿಯೂ ಚೇತನರೂಪನು. ವೃತ್ತಿಯಲ್ಲವು. ॥೨೪॥

ಆತ್ಮನು ಅಹಂ ಪ್ರತ್ಯಯಾಕಾರ ವೃತ್ತಿಸಂಬಂಧ ಭ್ರಾಂತಿಮಾತ್ರದಿಂದಲೇ, ಕರ್ತೃವೆಂದೂ, ಭೋಕ್ತೃವೆಂದೂ, ಸುಖಿಯೆಂದೂ. ದುಃಖಿಯೆಂದೂ ತಿಳಿಯತಕ್ಕವನೆಂದೂ ತೋರುತ್ತಾನೆ. ॥೨೫॥

ನಿಜವಾಗಿಯೂ ವಿಚಾರಮಾಡಿದರೆ ಕೇವಲ ಚಿದ್ರೂಪಕ್ಕಿಂತಲೂ ಬೇರೆಯಾದ ಸ್ವರೂಪವು ಆತ್ಮನಿಗೆ ಇಲ್ಲವೇ ಇಲ್ಲವು. ಆ ಚಿದ್ರೂಪವೇ ತನ್ನ ಅಜ್ಞಾನದಿಂದ ಬೇರೆಯ ರೂಪದಿಂದ ತೋರುತ್ತದೆ. ॥೨೬॥

ಸಕಲ ಶರೀರಗಳಲ್ಲಿಯೂ ನಾನು ಎಂಬ ರೂಪದಿಂದ ಯಾವ ಪ್ರತ್ಯಯವು ತೋರುವುದೋ ಅದಕ್ಕೆ ಚಿದ್ರೂಪನಾದ ಪ್ರತ್ಯಗಾತ್ಮನೇ ಅರ್ಥವಲ್ಲದೇ ಬೇರೆಯಲ್ಲವು. ॥೨೭॥

ಅನೇಕ ವಿಧಗಳಾದ ಗೋವುಗಳಲ್ಲಿ ಉಂಟಾಗುವ ಗೋವು ಎಂಬ ಪ್ರತ್ಯಯಕ್ಕೆ ಗೋತ್ವವು ಮಾತ್ರ ಹೇಗೆ ಅರ್ಥವೋ ಹಾಗೆ ಅಹಂ ಎಂಬ ಪ್ರತ್ಯಯಕ್ಕೂ ಚಿದ್ರೂಪನಾದ ಆತ್ಮನು ಮಾತ್ರ ಅರ್ಥವು. ॥೨೮॥

ಗೋತ್ವವು ಒಂದಾದರೂ ವ್ಯಕ್ತಿಗಳ ಸಂಬಂಧರೂಪದಿಂದ ಭಿನ್ನವಾಗಿ

ಯಥೈವೈಕೋಽಪಿ ಗೋಶಬ್ದೋ ಭಿನ್ನಾರ್ಥೋ ವ್ಯಕ್ತಿಭೇದತಃ ।
ತಥೈವೈಕೋಽಪ್ಯಹಂ ಶಬ್ದೋ ಭಿನ್ನಾರ್ಥೋ ವ್ಯಕ್ತಿಭೇದತಃ ॥೩೦॥

ಯಥಾ ಪ್ರತೀತ್ಯಾ ಗೋವ್ಯಕ್ತಿಃ ಗೋಶಬ್ದಾರ್ಥೋ ನ ತತ್ವತಃ ।
ತತ್ತ್ವತೋ ಗೋತ್ವಮೇವಾರ್ಥ ಸ್ಸಾಕ್ಷಾದ್ವೇದವಿದಾಂ ವರಾಃ ॥೩೧॥

ತಥಾ ಪ್ರತೀತ್ಯಾಽಹಂಕಾರೋಽಹಂ ಶಬ್ದಾರ್ಥೋ ನ ತತ್ತ್ವತಃ ।
ತತ್ತ್ವತಃ ಪ್ರತ್ಯಗಾತ್ಮೈವ ಸ ಏವಾಖಿಲಸಾಧಕಃ ॥೩೨॥

ಏಕತ್ವೇಽಪಿ ಪೃಥಕ್ತ್ವೇನ ವ್ಯಪದೇಶೋಽಪಿ ಯುಜ್ಯತೇ ।
ಅಂತಃಕರಣಭೇದೇನ ಸಾಕ್ಷಿಣಃ ಪ್ರತ್ಯಗಾತ್ಮನಃ ॥೩೩॥

ರುದ್ರವಿಷ್ಣು ಪ್ರಜಾನಾಥ ಪ್ರಮುಖಾಃ ಸರ್ವಚೇತನಾಃ ।
ಚಿನ್ಮಾತ್ರಾತ್ಮನ್ಯಹಂ ಶಬ್ದಂ ಪ್ರಯುಂಜಂತೇ ಹಿ ತತ್ತ್ವತಃ ॥೩೪॥

ತೋರುತ್ತದೆ. ಹಾಗೆ ಆತ್ಮನೂ ಚಿದಹಂಕಾರಸಂಬಂಧದಿಂದ, ಭಿನ್ನನಂತೆ ತೋರುತ್ತಾನೆ. ||೨೯||

ಗೋಶಬ್ದವು ಒಂದೇ ಆಗಿದ್ದರೂ ವ್ಯಕ್ತಿಭೇದದಿಂದ ಹೇಗೆ ಭಿನ್ನಾರ್ಥಕವೋ ಹಾಗೆಯೇ ಅಹಂ ಶಬ್ದಾರ್ಥವು ಒಂದೇ ಆಗಿದ್ದರೂ ವ್ಯಕ್ತಿಭೇದದಿಂದ ಭಿನ್ನಾರ್ಥಕವಾಗಿ ತೋರುತ್ತದೆ. ||೩೦||

ಗೋಶಬ್ದಕ್ಕೆ ಪ್ರತೀತಿ ಮಾತ್ರದಿಂದ ತೋರತಕ್ಕ ಗೋವ್ಯಕ್ತಿಯು ಹೇಗೆ ತಾತ್ತ್ವಿಕವಾದ ಅರ್ಥವಲ್ಲವೋ, ಗೋತ್ವವೇ ಹೇಗೆ ತಾತ್ವಿಕವಾದ ಅರ್ಥವೋ, ಹಾಗೆ, ಎಲೌ ವೇದಜ್ಞರೊಳಗೆ ಶ್ರೇಷ್ಠರೇ, ತೋರುವಿಕೆ ಮಾತ್ರದಿಂದ ಅಹಂಕಾರವು ಅಹಂ ಶಬ್ದಾರ್ಥವಲ್ಲವು. ಪರಮಾರ್ಥವಾದ ಅಖಿಲಸಾಧಕನಾದ ಪ್ರತ್ಯಗಾತ್ಮನೇ ನಿಜವಾದ ಅರ್ಥವು. ||೩೧-೩೨||

ಸಾಕ್ಷೀಭೂತನಾದ ಪ್ರತ್ಯಗಾತ್ಮನಿಗೆ ಏಕತ್ವವಿದ್ದರೂ ಕೂಡ ಶರೀರ ಮತ್ತು ಅಂತಃಕರಣಭೇದದಿಂದ ಭೇದರೂಪವಾದ ವ್ಯವಹಾರವೂ ಯೋಗ್ಯವಾಗುತ್ತದೆ. ||೩೩||

ತಾತ್ವಿಕವಾಗಿ ವಿಚಾರಮಾಡಿದರೆ ಬ್ರಹ್ಮಾ, ವಿಷ್ಣು, ಮಹೇಶ್ವರರೇ ಮೊದಲಾದ ಸಕಲ ಪ್ರಾಣಿಗಳೂ ಚಿದ್ರೂಪನಾದ ಆತ್ಮನಲ್ಲಿ ಮಾತ್ರ ಅಹಂ ಶಬ್ದವನ್ನು ಪ್ರಯೋಗಿಸುತ್ತಾರೆ. ||೩೪||

ಸುಷುಪ್ತೇಽಸ್ಮೀತಿ ಸರ್ವೋಽಯಂ ಸುಷುಪ್ತಾದುತ್ಥಿತೋ ಜನಃ ।
ಸುಷುಪ್ತಕಾಲೀನಸ್ವಾತ್ಮನ್ಯಹಂ ಶಬ್ದಂ ದ್ವಿಜೋತ್ತಮಾಃ ॥೩೫॥

ಪ್ರಯುಙ್ಕ್ತೇ ತತ್ರ ದೇಹಾದಿವಿಶೇಷಾಕಾರ ಭಾಸನಂ ।
ನ ಹಿ ಕೇವಲಚೈತನ್ಯಂ ಸುಷುಪ್ತೇಃ ಸಾಧಕಂ ಸ್ವತಃ ॥೩೬॥

ಪ್ರತಿಭಾತಿ ತತಸ್ತಸ್ಮಿನ್ ಚಿನ್ಮಾತ್ರೇ ಪ್ರತ್ಯಗಾತ್ಮನಿ ।
ಅಹಂ ಶಬ್ದಪ್ರವೃತ್ತಿಃ ಸ್ಯಾತ್ ನ ತು ಸೋಪಾಧಿಕಾತ್ಮನಿ ॥೩೭॥

ಯಥಾಽಯೋ ದಹತೀತ್ಯುಕ್ತೇ ವಹ್ನಿರ್ದಹತಿ ಕೇವಲಮ್ ।
ನಾಯಸ್ತದ್ವದಹಂ ಶಬ್ದಶ್ಚೈತನ್ಯಸ್ಯೈವ ವಾಚಕಃ ॥೩೮॥

ಪ್ರತೀತ್ಯಾ ವಹ್ನಿಸಂಬಂಧಾದ್ಯಥಾಽಯೋ ದಾಹಕಂ ತಥಾ ।
ಚಿತ್ಸಂಬಂಧಾದಹಂಕಾರೋಽಹಂ ಶಬ್ದಾರ್ಥಃ ಪ್ರಕೀರ್ತಿತಃ ॥೩೯॥

ಎಲೌ ಬ್ರಾಹ್ಮಣಶ್ರೇಷ್ಠರೇ, ಗಾಢನಿದ್ರೆಯಿಂದ ಎಚ್ಚೆತ್ತ ಸಕಲ ಜನವೂ ಗಾಢ ನಿದ್ರೆಯಲ್ಲಿ ನಾನು ಇದ್ದೆನು. ಏನೊಂದನ್ನೂ ನಾನು ತಿಳಿಯಲಿಲ್ಲ. ಎಂದು ಸುಷುಪ್ತಿಕಾಲದ ಆತ್ಮನಲ್ಲಿ ಅಹಂ ಶಬ್ದವನ್ನು ಪ್ರಯೋಗಿಸುತ್ತದೆ. ಆ ಸುಷುಪ್ತಿಯಲ್ಲಿ ದೇಹವೇ ಮೊದಲಾದ ವಿಶೇಷರೂಪಗಳ ತೋರುವಿಕೆಯು ಇರುವುದಿಲ್ಲ. ಸುಷುಪ್ತಿಗೆ ಸ್ವತಃ ಸಾಧಕವಾದದ್ದು ಎಂದರೆ ಸ್ಮಾರಕವಾದುದು ಕೇವಲ ಚೈತನ್ಯ ಮಾತ್ರ. ||೩೫-೩೬||

ಆ ಸುಷುಪ್ತಿಯಲ್ಲಿ ಚಿನ್ಮಾತ್ರನಾದ ಪ್ರತ್ಯಗಾತ್ಮನಲ್ಲಿ ಅಹಂ ಶಬ್ದಪ್ರವೃತ್ತಿಯು ತೋರುತ್ತದಲ್ಲದೇ, ಸೋಪಾಧಿಕನಾದ ದೇವದತ್ತಾದ್ಯಾತ್ಮನಲ್ಲಿ ಅಲ್ಲವು. ||೩೭||

ಕಬ್ಬಿಣವು ಸುಡುತ್ತದೆಂದು ಹೇಳಿದರೂ ಹೇಗೆ ಸುಡುವುದು ಮಾತ್ರ ಅಗ್ನಿಯೋ ಮತ್ತು ಕಬ್ಬಿಣವಲ್ಲವೋ, ಹಾಗೆ ಅಹಂ ಶಬ್ದವೂ ಕೂಡ ಚೈತನ್ಯಕ್ಕೆ ವಾಚಕವಲ್ಲದೇ ಬೇರೆಯದಕ್ಕಲ್ಲ. ||೩೮||

ವಹ್ನಿಯುಳ್ಳೋಣ ಮಾತ್ರದಿಂದ ಮಾತ್ರ ಕಬ್ಬಿಣವು ಹೇಗೆ ದಾಹಕವೋ, ಹಾಗೆ ಕೇವಲ ಪ್ರತೀತಿಯಿಂದ ಚಿತ್ತಿನ ಸಂಬಂಧದಿಂದ ಮಾತ್ರ ಅಹಂಕಾರವು ಅಹಂ ಶಬ್ದಾರ್ಥವೆಂಬುದಾಗಿ ಹೇಳಲ್ಪಟ್ಟಿದೆ. ||೩೯||

ಚೈತನ್ಯೇದ್ಧಾಹಮಃ ಸ್ಪರ್ಶಾದ್ದೇಹಾದೌ ಭ್ರಾಂತಚೇತಸಾಂ ।
ಅಹಂ ಶಬ್ದಪ್ರಯೋಗಸ್ಸ್ಯಾತ್ತಥಾಽಹಂ ಪ್ರತ್ಯಯೋಽಪಿ ಚ ॥೪೦॥

ಇತ್ಥಂ ವಿವೇಕತಸ್ಸಾಕ್ಷ್ಯಂ ದೇಹಾದಿಪ್ರಾಣಪೂರ್ವಕಮ್ ।
ಅಂತಃಕರಣಮಾತ್ಮಾನಂ ವಿಭಜ್ಯ ಸ್ವಾತ್ಮನಃ ಪೃಥಕ್ ॥೪೧॥

ಸರ್ವಸಾಕ್ಷಿಣ ಮಾತ್ಮಾನಂ ಸ್ವಯಂ ಜ್ಯೋತಿಸ್ಸ್ವಲಕ್ಷಣಂ ।
ಸತ್ಯಮಾನಂದಮದ್ವೈತಮಹಮರ್ಥಂ ವಿಚಿಂತಯೇತ್ ॥೪೨॥

ರುದ್ರ-ವಿಷ್ಣು-ಪ್ರಜಾನಾಥಪ್ರಮುಖಾಃ ಸರ್ವಚೇತನಾಃ ।
ಅಹಮೇವ ಪರಂ ಬ್ರಹ್ಮೇತ್ಯಾಹುರಾತ್ಮಾನಮೇವ ಹಿ ॥೪೩॥

ತೇ ತು ಚಿನ್ಮಾತ್ರಮದ್ವೈತಮಹಮರ್ಥತಯಾ ಭೃಶಂ ।
ಅಂಗೀಕೃತ್ಯಾಹಮದ್ವೈತಂ ಬ್ರಹ್ಮೇತ್ಯಾಹು ರ್ನ ದೇಹತಃ ॥೪೪॥

ಭ್ರಾಂತಿಯುತ ಮನಸ್ಸಿನಿಂದ ಕೂಡಿದವರಿಗೆ ಚೈತನ್ಯದಿಂದ ದೀಪ್ತವಾದ ಅಹಮ್ ಭಾವಸ್ಪರ್ಶದ ದೆಸೆಯಿಂದ ದೇಹವೇ ಮೊದಲಾದುವುಗಳಲ್ಲಿ ಅಹಂ ಶಬ್ದ ಪ್ರಯೋಗವುಂಟಾಗುತ್ತದೆ. ಅಹಂ ಎಂಬ ನಂಬಿಕೆಯೂ ಹಾಗೆಯೇ ಬಂದಿದೆ. ||೪೦||

ಈರೀತಿಯಾಗಿ ದೇಹ ಇಂದ್ರಿಯ ಪ್ರಾಣ ಮುಂತಾದ ಸಾಕ್ಷ್ಯವನ್ನು ಸ್ವಾತ್ಮನಿಗಿಂತ ಬೇರೆ ಎಂದು ವಿಂಗಡಿಸಿಕೊಂಡು ಸರ್ವಸಾಕ್ಷಿಯೂ ಸ್ವಯಂ ಜ್ಯೋತಿ ಸ್ವರೂಪನೂ ಸಚ್ಚಿದಾನಂದನೂ, ಅದ್ವಿತೀಯನೂ ಆದ ಆತ್ಮನನ್ನು ಅಹಂ ಮರ್ಥವನ್ನಾಗಿ ಅನುಚಿಂತನೆ ಮಾಡುತ್ತಿರಬೇಕು. ||೪೧-೪೨||

ಹರಿ, ಹರ, ಬ್ರಹ್ಮಾ ಮೊದಲಾದ ಸಕಲ ಚೇತನರೂ ನಾನೇ ಪರಬ್ರಹ್ಮನೆಂಬುದಾಗಿ ಆತ್ಮನನ್ನೇ ನಿರೂಪಿಸಿಕೊಳ್ಳುತ್ತಾರೆ. ||೪೩||

ಆ ಹರಿ, ಹರ, ಬ್ರಹ್ಮಾದಿಗಳು ಚಿನ್ಮಾತ್ರರೂಪನಾದ ಅದ್ವಿತೀಯ ಬ್ರಹ್ಮನನ್ನು ದೃಢವಾಗಿ ಅಹಮರ್ಥವನ್ನಾಗಿ ಒಪ್ಪಿಕೊಂಡು ಬ್ರಹ್ಮವು ಅದ್ವಿತೀಯವೆಂದು ಹೇಳುತ್ತಾರಲ್ಲದೇ ದೇಹದೃಷ್ಟಿಯಿಂದಲ್ಲ. ||೪೪||

ಚಿನ್ಮಾತ್ರಂ ಸರ್ವಗಂ ಸತ್ಯಂ ಸಂಪೂರ್ಣಸುಖಮದ್ವಯಮ್ ।
ಸಾಕ್ಷಾದ್ಬ್ರಹ್ಮೈವ ನೈವಾನ್ಯದಿತಿ ತತ್ತ್ವವಿದಾಂ ಸ್ಥಿತಿಃ ॥೪೫॥

ಶಾಸ್ತ್ರಂ ಸತ್ಯಚಿದಾನಂದಮನಂತಂ ವಸ್ತುಕೇವಲಂ ।
ಶುದ್ಧಂ ಬ್ರಹ್ಮೇತಿ ಸಶ್ರದ್ಧಂ ಪ್ರಾಹ ವೇದವಿದಾಂ ವರಾಃ ॥೪೬॥

ಪ್ರತ್ಯಗಾತ್ಮಾಽಯಮದ್ವಂದ್ವಃ ಸಾಕ್ಷೀ ಸರ್ವಸ್ಯ ಸರ್ವದಾ ।
ಸತ್ಯಜ್ಞಾನಸುಖಾನಂತಲಕ್ಷಣಸ್ಸರ್ವದಾಽನಘಾಃ ॥೪೭॥

ಅತೋಽಯಂ ಪ್ರತ್ಯಗಾತ್ಮೈವ ಸ್ವಾನುಭೂತ್ಯೈಕಗೋಚರಃ ।
ಶಾಸ್ತ್ರಸಿದ್ಧಂ ಪರಂ ಬ್ರಹ್ಮ ನಾಪರಂ ಪರಮಾರ್ಥತಃ ॥೪೮॥

ಏವಂ ತರ್ಕಪ್ರಮಾಣಾಭ್ಯಾಮಾಚಾರ್ಯೋಕ್ತ್ಯಾ ಚ ಮಾನವಃ ।
ಅವಿಜ್ಞಾಯ ಶಿವಾತ್ಮೈಕ್ಯಂ ಸಂಸಾರೇ ಪತತಿ ಭ್ರಮಾತ್ ॥೪೯॥

ಚಿನ್ಮಾತ್ರಸ್ವರೂಪವೂ, ಸರ್ವಾಂತರ್ಯಾಮಿಯೂ, ಸತ್ಯವೂ, ಪೂರ್ಣವೂ, ಅಪರೋಕ್ಷವೂ, ಮತ್ತು ಸಚ್ಚಿದಾನಂದಾದ್ವಯಾತ್ಮಕವೂ ಆಗಿರುವುದೇ ಸಾಕ್ಷಾದ್ಬ್ರಹ್ಮವಲ್ಲದೇ ಬೇರೆಯದಲ್ಲವೆಂಬುದು ತತ್ತ್ವಜ್ಞಾನಿಗಳ ಸಿದ್ಧಾಂತವು. ॥೪೫॥

ಎಲೌ ವೇದಜ್ಞರೊಳಗೆ ಉತ್ತಮರಾದವರೇ, ಶಾಸ್ತ್ರವು ಸಚ್ಚಿದಾನಂದಾತ್ಮಕವೂ ಮತ್ತು ಅನಂತವೂ ಆದ ವಸ್ತುವನ್ನು ಮಾತ್ರ ಪರಿಶುದ್ಧವಾದ ಬ್ರಹ್ಮವನ್ನಾಗಿ ಶ್ರದ್ಧಾಪೂರ್ವಕವಾಗಿ ಹೇಳುತ್ತದೆ. ಎಲೌ ಪರಿಶುದ್ಧರೇ, ಈ ಪ್ರತ್ಯಗಾತ್ಮನೇ ಅದ್ವಂದ್ವನೂ ಮತ್ತು ಎಲ್ಲರಲ್ಲಿರುವ ಸಾಕ್ಷಿಯೂ, ಸತ್ಯಜ್ಞಾನಾನಂದಾನಂತಲಕ್ಷಣನೂ ಆಗಿರುವ ಪರಬ್ರಹ್ಮತತ್ತ್ವವಾಗಿದಾನೆ. ಎಂದು ತಿಳಿಯಿರಿ. ॥೪೬-೪೭॥

ಆದ್ದರಿಂದ ಈ ಪ್ರತ್ಯಗಾತ್ಮನೇ ಎಲ್ಲರ ಅನುಭವವೊಂದಕ್ಕೆ ಮಾತ್ರ ಗೋಚರನಾದ ಶಾಸ್ತ್ರಸಿದ್ಧವಾದ ಪರಬ್ರಹ್ಮವಸ್ತುವು. ನಿಶ್ಚಯವಾಗಿಯೂ ಬೇರೆಯದು ಇಲ್ಲವೇ ಇಲ್ಲವು. ಹೀಗೆಂಬುದಾಗಿ ತರ್ಕದಿಂದಲೂ, ಪ್ರಮಾಣದಿಂದಲೂ, ಗುರುವಚನದಿಂದಲೂ, ಮನುಷ್ಯನು ಶಿವಾತ್ಮೈಕ್ಯವನ್ನು ತಿಳಿಯದಿದ್ದರೆ ಅಜ್ಞಾನದಿಂದ ಸಂಸಾರದಲ್ಲಿ ಬೀಳುತ್ತಾನೆ. ॥೪೮-೪೯॥

ಶಾಸ್ತ್ರಾಚಾರ್ಯೋಪದೇಶೇನ ತರ್ಕೈಃ ಶಾಸ್ತ್ರಾನುಸಾರಿಭಿಃ ।
ಸರ್ವಸಾಕ್ಷಿತಯಾಽಽತ್ಮಾನಂ ಸಮ್ಯಙ್ನಿಶ್ಚಿತ್ಯ ಸುಸ್ಥಿರಃ ॥೫೦॥

ಸ್ವಾತ್ಮನೋಽನ್ಯತಯಾ ಭಾತಂ ಸಮಸ್ತಮವಿಶೇಷತಃ ।
ಸ್ವಾತ್ಮಮಾತ್ರತಯಾ ಬುದ್ಧ್ವಾ ಪುನಃ ಸ್ವಾತ್ಮಾನಮದ್ವಯಂ ॥೫೧॥

ಶುದ್ಧಂ ಬ್ರಹ್ಮೇತಿ ನಿಶ್ಚಿತ್ಯ ಸ್ವಯಂ ಸ್ವಾನುಭವೇನ ಚ ।
ನಿಶ್ಚಯಂ ಚ ಸ್ವಚಿನ್ಮಾತ್ರೇ ವಿಲಾಪ್ಯಾವಿಕ್ರಿಯೇಽದ್ವಯೇ ॥೫೨॥

ವಿಲಾಪನಂ ಚ ಚಿದ್ರೂಪಂ ಬುದ್ಧ್ವಾ ಕೇವಲರೂಪತಃ ।
ಸ್ವಯಂ ತಿಷ್ಠೇದಯಂ ಸಾಕ್ಷಾದ್ಬ್ರಹ್ಮವಿತ್ಪ್ರವರೋ ಮುನಿಃ ॥೫೩॥

ಈದೃಶೀ ಪರಮಾ ನಿಷ್ಠಾ ಶ್ರೌತೀ ಸ್ವಾನುಭವಾತ್ಮಿಕಾ ।
ದೇಶಿಕಾಲೋಕನೇನೈವ ಕೇವಲೇನ ಹಿ ಸಿದ್ಧ್ಯತಿ ॥೫೪॥

ದೇಶಿಕಾಲೋಕನಂ ಚಾಪಿ ಪ್ರಸಾದಾತ್ಪಾರಮೇಶ್ವರಾತ್ ।
ಸಿದ್ಧ್ಯತ್ಯಯತ್ನತಃ ಪ್ರಾಜ್ಞಾಃ ಸತ್ಯಮೇವ ಮಯೋದಿತಮ್ ॥೫೫॥

ಶಾಸ್ತ್ರವೂ ಮತ್ತು ಗುರುಗಳೂ ಇವರ ಉಪದೇಶದಿಂದಲೂ, ವೇದಶಾಸ್ತ್ರ ಮರ್ಯಾದೆಯನ್ನನುಸರಿಸಿರುವ ತರ್ಕಗಳಿಂದಲೂ, ಆತ್ಮನನ್ನು ಸರ್ವಸಾಕ್ಷಿರೂಪದಿಂದ ಚೆನ್ನಾಗಿ ನಿರ್ಣಯಿಸಿ ಸ್ಥಿರಮನಸ್ಕನಾದವನು ಸ್ವಾತ್ಮಕ್ಕಿಂತಲೂ ಭಿನ್ನವಾಗಿ ತೋರಿದ ಸಕಲವನ್ನೂ ವಿಶೇಷವಿಲ್ಲದಂತೆ ಸ್ವಾತ್ಮರೂಪದಿಂದ ನಿಶ್ಚಯಿಸಿಕೊಂಡು, ಪುನಃ ಸ್ವಾತ್ಮನನ್ನು ಅದ್ವಿತೀಯವಾದ ಶುದ್ಧಬ್ರಹ್ಮವೆಂದು ತಾನೇ ನಿರ್ಣಯಿಸಿಕೊಂಡು, ಸ್ವಾನುಭವದಿಂದಲೂ ಆ ನಿಶ್ಚಯವನ್ನೂ ಕೂಡ ಅವಿಕ್ರಿಯವಾದ ಮತ್ತು ಅದ್ವಿತೀಯವಾದ ಚಿನ್ಮಾತ್ರದಲ್ಲಿ ವಿಲಯಮಾಡಿಕೊಂಡು, ಅದನ್ನು ಅದ್ವಿತೀಯರೂಪದಿಂದ ಭಾವಿಸಿಕೊಂಡು, ಅದ್ವಿತೀಯಭಾವದಿಂದ ತಾನೇತಾನಾಗಿ ಇರಬೇಕು. ಅವನೇ ಬ್ರಹ್ಮಜ್ಞಾನಿಗಳೊಳಗೆ ಶ್ರೇಷ್ಠನಾದ ಮುನಿಯು. ॥೫೦-೫೧-೫೨-೫೩॥

ಈ ರೀತಿಯಾದ ವೈದಿಕಮಾರ್ಗಾವಲಂಬಿಯಾದ ಮತ್ತು ಸ್ವಾನುಭವಾತ್ಮಕವಾದ ಪರಮನಿಷ್ಠೆಯು ಶ್ರೇಷ್ಠವಾದ ಗುರುಕಟಾಕ್ಷದಿಂದ ಮಾತ್ರ ಸಿದ್ಧಿಸುತ್ತದೆ.॥೫೪॥

ಗುರ್ವನುಗ್ರಹವೂ ಕೂಡ ವೈದಿಕವಾದ ಪರಮೇಶ್ವರನ ಪ್ರಸಾದದಿಂದಲೇ ಸಿದ್ಧಿಸುತ್ತದೆ. ಎಲೌ ಪ್ರಾಜ್ಞರೇ, ನನ್ನಿಂದ ಸತ್ಯವೇ ಹೇಳಲ್ಪಟ್ಟಿದೆ. ॥೫೫॥

ಸತ್ಯಂ ಸತ್ಯಂ ಪುನಸ್ಸತ್ಯಮುದ್ಧೃತ್ಯ ಭುಜಮುಚ್ಯತೇ ।
ಪ್ರಸಾದಾದೇವ ಸರ್ವೇಷಾಂ ಸರ್ವಸಿದ್ಧಿರ್ಮಹೇಶಿತುಃ ॥೫೬॥

ಪ್ರಸಾದೇ ಶಾಂಭವೇ ಸಿದ್ಧೇ ಸರ್ವಂ ಶಂಭುತಯಾ ಸ್ವತಃ ।
ವಿಭಾತಿ ನಾನ್ಯಥಾ ವಿಪ್ರಾಃ ಸತ್ಯಮೇವ ಮಯೋದಿತಮ್ ॥೫೭॥

ಯದಾ ಶಂಭುತಯಾ ಸರ್ವಂ ವಿಭಾತಿ ಸ್ವತ ಏವ ತು ।
ತದಾ ಹಿ ಶಾಂಭವಃ ಸಾಕ್ಷಾತ್ಪ್ರಸಾದಸ್ಸತ್ಯಮೀರಿತಂ ॥೫೮॥

ಶಿವಾದನ್ಯತಯಾ ಕಿಂಚಿದಪಿ ಭಾತಿ ಯದಾ ದ್ವಿಜಾಃ ।
ತದಾ ನ ಶಾಂಕರೋ ಬೋಧಃ ಸಂಜಾತ ಇತಿ ಮೇ ಮತಿಃ ॥೫೯॥

ಶಿವಾದನ್ಯತಯಾ ಸರ್ವಂ ಪ್ರತೀತಮಪಿ ಪಂಡಿತಃ ।
ತತ್ತ್ವದೃಷ್ಟ್ಯಾ ಶಿವಂ ಸರ್ವಂ ಸುಸ್ಥಿರಂ ಪರಿಪಶ್ಯತಿ ॥೬೦॥

ಸತ್ಯವಾಗಿಯೂ ಭುಜವನ್ನು ಮೇಲೆತ್ತಿಕೊಂಡು ಬಾರಿಬಾರಿಗೂ ಸತ್ಯವನ್ನೇ ಹೇಳುತ್ತೇನೆ. ಎಲ್ಲರಿಗೂ ಎಲ್ಲಾ ಸಿದ್ಧಿಗಳೂ ಉಂಟಾಗಬೇಕಾದರೆ ಮಹೇಶ್ವರನ ಪ್ರಸಾದಮಾತ್ರದಿಂದಲ್ಲದೇ ಬೇರೆಯಲ್ಲವು. ಇದು ಸತ್ಯವಾದದ್ದು. ॥೫೬॥

ಈಶ್ವರನ ಪ್ರಸಾದವು ಸಿದ್ಧಿಸಿದ ಕೂಡಲೆ ಸಕಲವೂ ಈಶ್ವರರೂಪದಿಂದ ದಿಂದ ತಾನಾಗಿಯೇ ತೋರುತ್ತದೆ. ಬೇರೆಯ ರೀತಿಯಿಂದ ತೋರುವುದೇ ಇಲ್ಲ. ಎಲೌ ಬ್ರಾಹ್ಮಣರೇ, ಸತ್ಯವೇ ನನ್ನಿಂದ ಹೇಳಲ್ಪಟ್ಟಿದೆ. ॥೫೭॥

ಯಾವಾಗ ಸಕಲವೂ ತಾನಾಗಿಯೇ ಶಂಭುಭಾವದಿಂದ ಪ್ರಕಾಶಿಸುತ್ತದೆಯೋ (ಇರತಕ್ಕದ್ದೆಲ್ಲವೂ ಬ್ರಹ್ಮನಲ್ಲದೇ ಬೇರೆಯಲ್ಲವೆಂದಭಿಪ್ರಾಯವು) ಆಗಲೇ ಪರಮೇಶ್ವರನ ಪ್ರಸಾದವು ಪ್ರತ್ಯಕ್ಷವಾಗುವುದು. ಸತ್ಯವೇ ನನ್ನಿಂದ ಹೇಳಲ್ಪಟ್ಟಿದೆ. ॥೫೮॥

ಯಾವಾಗ ಶಿವನಿಗಿಂತಲೂ ಬೇರೆಯಾಗಿ ಯಾವುದಾದರೂ ತೋರುತ್ತಿರುತ್ತದೆಯೋ, ಆಗ ಈಶ್ವರಾತ್ಮಕವಾದ ಜ್ಞಾನವು ಹುಟ್ಟಿಲ್ಲವೆಂದೇ ನನ್ನ ಅಭಿಪ್ರಾಯವು. ॥೫೯॥

ಶಿವನಿಗಿಂತಲೂ ಬೇರೆಯದಾಗಿ ಯಾವುದಾದರೂ ತೋರಿದರೂ, ಜ್ಞಾನಿಯಾದವನು ತತ್ತ್ವಜ್ಞಾನದಿಂದ ಆ ಸರ್ವವನ್ನೂ ಶಿವನನ್ನಾಗಿಯೇ ಭಾವಿಸುತ್ತಾನೆ. ॥೬೦॥

ಶಿವಾಕಾರೇಣ ವಾ ನಿತ್ಯಂ ಪ್ರಪಂಚಾಕಾರತೋಽಪಿ ವಾ ।
ಜೀವಾಕಾರೇಣ ವಾ ಭಾತಂ ಯತ್ತದ್ಬ್ರಹ್ಮ ವಿಚಿಂತಯೇತ್ ॥೬೧॥

ಶಂಭುರೇವ ಸದಾ ಭಾತಿ ಸರ್ವಾಕಾರೇಣ ನಾಪರಃ ।
ಇತಿ ವಿಜ್ಞಾನಸಂಪನ್ನಃ ಶಾಂಕರಜ್ಞಾನಿನಾಂ ವರಃ ॥೬೨॥

ಶಂಭುರೂಪತಯಾ ಸರ್ವಂ ಯಸ್ಯ ಭಾತಿ ಸ್ವಭಾವತಃ ।
ನ ಸತ್ಯಂ ವೈದಿಕಂ ಕಿಂಚಿತ್ತಾಂತ್ರಿಕಂ ಚಾಸ್ತಿ ಲೌಕಿಕಂ ॥೬೩॥

ಯಥಾಭಾತಸ್ವರೂಪೇಣ ಶಿವಂ ಸರ್ವಂ ವಿಚಿಂತಯನ್ ।
ಯೋಗೀ ಚರತಿ ಲೋಕಾನಾಮುಪಕಾರಾಯ ನಾನ್ಯಥಾ ॥೬೪॥

ಎಲ್ಲಾ ಕಾಲದಲ್ಲಿಯೂ ಶಿವಾಕಾರದಿಂದಲಾಗಲೀ, ಪ್ರಪಂಚಾಕಾರದಿಂದಲಾಗಲೀ, ಅಥವಾ ಜೀವರೂಪದಿಂದಾಗಲೀ ಪ್ರಕಾಶಿತವಾದುದು ಯಾವುದುಂಟೋ, ಅದೆಲ್ಲವೂ ಬ್ರಹ್ಮವೆಂದೇ ಚಿಂತಿಸಬೇಕು. ॥೬೧॥

ಎಲ್ಲ ಕಾಲದಲ್ಲಿಯೂ ಈಶ್ವರನೇ ಎಲ್ಲಾ ಆಕಾರದಿಂದಲೂ ಪ್ರಕಾಶಿಸುತ್ತಾನೆ. ಬೇರೆಯಲ್ಲವು. ಹೀಗೆಂಬ ಶಾಸ್ತ್ರಜ್ಞಾನದಿಂದ ಪರಿಪೂರ್ಣನಾದವನು ಶಾಂಕರಜ್ಞಾನಿಗಳೊಳಗೆಲ್ಲರಿಗೂ ಶ್ರೇಷ್ಠನಾಗುತ್ತಾನೆ. ಎಲ್ಲದರಲ್ಲಿಯೂ ಶಿವಬುದ್ಧಿಯೇ ಶ್ರೇಷ್ಠವೆಂದರ್ಥವು. ॥೬೨॥

ಯಾವನಿಗೆ ಸ್ವಭಾವವಾಗಿಯೇ ಸರ್ವವೂ ಪರಮೇಶ್ವರ ರೂಪದಿಂದ ತೋರುತ್ತದೋ, ಆತನಿಗೆ ವೈದಿಕವಾಗಲೀ, ತಾಂತ್ರಿಕವಾಗಲೀ ಅಥವಾ ಲೌಕಿಕವೇ ಆಗಲಿ ಆದ ಕರ್ತವ್ಯಧರ್ಮವೂ, ವಿಧಿನಿಷೇಧಗಳೂ, ಯಾವುದೊಂದೂ ಇರುವುದಿಲ್ಲವು. ಎಲ್ಲವೂ ಶಿವನೇ ಆಗಿರುತ್ತಾದ್ದರಿಂದ ಯಾವ ಕರ್ಮವೂ ಇಲ್ಲವೆಂದು ತಾತ್ಪರ್ಯವು. ॥೬೩॥

ಪರಮೇಶ್ವರನ ಆಕಾರದಿಂದಿರುವ ಎಲ್ಲವನ್ನೂ ಶಿವನನ್ನಾಗಿ ಅನುಸಂಧಾನ ಮಾಡುತ್ತಿರುವ ಆ ಜೀವನ್ಮುಕ್ತನಾಗಿರುವ ಯೋಗಿಯು ಲೋಕೋಪಕಾರಕ್ಕಾಗಿ ಮೊದಲು ಹೇಗೆ ತೋರುತ್ತಿದ್ದನೋ ಹಾಗೆಯೇ ವ್ಯವಹರಿಸುತ್ತಾನಲ್ಲದೇ ಬೇರೆ ಯಾವ ಉದ್ದೇಶದಿಂದಲೂ ವ್ಯವಹರಿಸುತ್ತಿರುವುದಿಲ್ಲವು. ॥೬೪॥

ಸ್ವಸ್ವರೂಪಾತಿರೇಕೇಣ ನಿಷಿದ್ಧಂ ವಿಹಿತಂ ತು ವಾ ।
ನ ಪಶ್ಯತಿ ಮಹಾಯೋಗೀ ಭಾತಿ ಸ್ವಾತ್ಮತಯಾಽಖಿಲಮ್ ॥೬೫॥

ಚಂಡಾಲಗೇಹೇ ವಿಪ್ರಾಣಾಂ ಗೃಹೇ ವಾ ಪರಮಾರ್ಥವಿತ್ ।
ಭಕ್ಷ್ಯಭೋಜ್ಯಾದಿ ವೈಷಮ್ಯಂ ನ ಕಿಂಚಿದಪಿ ಪಶ್ಯತಿ ॥೬೬॥

ಯಥೇಷ್ಟಂ ವರ್ತತೇ ಯೋಗೀ ಶಿವಂ ಸರ್ವಂ ವಿಚಿಂತಯನ್ ।
ತಾದೃಶೋ ಹಿ ಮಹಾಯೋಗೀ ಕೋ ವಾ ತಸ್ಯ ನಿವಾರಕಃ ॥೬೭॥

ಬಹುನೋಕ್ತೇನ ಕಿಂ ಸಾಕ್ಷಾದ್ದೇಶಿಕಸ್ಯ ನಿರೀಕ್ಷಣಾತ್ ।
ಪ್ರಸಾದಾದೇವ ರುದ್ರಸ್ಯ ಪರಶಕ್ತೇಸ್ತಥೈವ ಚ ॥೬೮॥

ಶ್ರುತಿಭಕ್ತಿಬಲಾತ್ಪುಣ್ಯ ಪರಿಪಾಕಬಲಾದಪಿ ।
ಶಿವರೂಪತಯಾ ಸರ್ವಂ ಸ್ವಭಾವಾದೇವ ಪಶ್ಯತಿ ॥೬೯॥

ಸ್ವಸ್ವರೂಪ ಶಿವರೂಪಕ್ಕಿಂತಲೂ ಬೇರೆಯಾದುದನ್ನಾಗಿ ನಿಷಿದ್ಧವನ್ನಾಗಲೀ, ವಿಹಿತವಾದದ್ದನ್ನಾಗಲೀ ಮಹಾಜ್ಞಾನಿಯಾದ ಆತನು ನೋಡುವುದಿಲ್ಲ. ಸಕಲವೂ ಸ್ವಾತ್ಮರೂಪದಿಂದಲೇ ಆತನಿಗೆ ತೋರುತ್ತಿಯಾದ್ದರಿಂದ ವಿಧಿನಿಷೇಧಗಳಿಲ್ಲವು. ||೬೫||

ಪರಮಾರ್ಥಜ್ಞಾನಿಯಾದ ಅವನು ಚಂಡಾಲಗೃಹದಲ್ಲಿಯಾಗಲೀ, ಬ್ರಾಹ್ಮಣ ಗೃಹದಲ್ಲಿಯಾಗಲೀ, ಇರುವ ಭಕ್ಷ್ಯಭೋಜ್ಯಾದಿಗಳಲ್ಲಿ ಯಾವ ವೈಷಮ್ಯವನ್ನೂ ಕಾಣುವುದಿಲ್ಲ. ಸಕಲವೂ ಶಿವಸ್ವರೂಪವಾಗಿ ತೋರುತ್ತಿರುವುದರಿಂದ ನ್ಯೂನಾಧಿಕ ಭಾವವೆಂಬುದೇ ಆ ನಿರ್ಲಿಪ್ತನಾದ ಜೀವನ್ಮುಕ್ತನಿಗೆ ತೋರುವುದಿಲ್ಲವೆಂದರ್ಥವು. ||೬೬||

ಸರ್ವವನ್ನೂ ಶಿವನನ್ನಾಗಿ ಭಾವಿಸುವ ಆ ಯೋಗಿಯು ತನ್ನ ಇಷ್ಟಾನುಸಾರ ವಾಗಿ ವರ್ತಿಸುತ್ತಾನೆ. ಅಂಥಹವನೇ ಮಹಾಯೋಗಿಯು. ಆ ಯೋಗಿಗೆ ನಿವಾರ ಕನು ಯಾವನು ತಾನೇ ಇರುತ್ತಾನೆ? ಅವನೇ ಸರ್ವಜ್ಞನು. ||೬೭||

ಹೆಚ್ಚು ಹೇಳಿದ್ದರಿಂದ ಫಲವೇನು? ಸಾಕ್ಷಾದ್ಗುರುಕಟಾಕ್ಷಬಲದಿಂದಲೂ, ಪರಶಕ್ತಿಸ್ವರೂಪಿಯಾದ ಪರಮೇಶ್ವರನ ಅನುಗ್ರಹದಿಂದಲೂ, ವೇದದಲ್ಲಿರುವ ಭಕ್ತಿ ಬಲದಿಂದಲೂ, ಅವನ ಸತ್ಕರ್ಮಗಳ ಫಲೋನ್ಮುಖವಾಗಿರುವ ಅವಸ್ಥೆಯ ಬಲ ದಿಂದಲೂ, ಜ್ಞಾನಿಯಾಗಿರುವ ಆ ಜೀವನ್ಮುಕ್ತನು ಸರ್ವವನ್ನೂ ಶಿವರೂಪದಿಂದ ಸಹಜವಾಗಿಯೇ ಭಾವಿಸುತ್ತಾನೆ. ||೬೮-೬೯||

ಶಿವಸ್ಸರ್ವಮಿತಿ ಜ್ಞಾನಂ ಶಾಂಕರಂ ಶೋಕಮೋಹನುತ್ ।
ಅಯಮೇವ ಹಿ ವೇದಾರ್ಥೋ ನಾಪರಃ ಸತ್ಯಮೀರಿತಂ ॥೭೦॥

ಶ್ರುತೌ ಭಕ್ತಿರ್ಗುರೌ ಭಕ್ತಿಃ ಶಿವೇ ಭಕ್ತಿಶ್ಚ ದೇಹಿನಾಂ ।
ಸಾಧನಂ ಸತ್ಯವಿದ್ಯಾಯಾಃ ಸತ್ಯಮೇವ ಮಯೋದಿತಮ್ ॥೭೧॥

ಸೋಪಾನಕ್ರಮತೋ ಲಬ್ಧಂ ವಿಜ್ಞಾನಂ ಯಸ್ಯ ಸುಸ್ಥಿರಂ ।
ತಸ್ಯ ಮುಕ್ತಿಃ ಪರಾ ಸಿದ್ಧಾ ಸತ್ಯಮೇವ ಮಯೋದಿತಂ ॥೭೨॥

ನಿತ್ಯಮುಕ್ತಸ್ಯ ಸಂಸಾರೋ ಭ್ರಾಂತಿಸಿದ್ಧಃ ಸದಾ ಖಲು ।
ತಸ್ಮಾತ್ ಜ್ಞಾನೇನ ನಾಶಸ್ಸ್ಯಾತ್ಸಂಸಾರಸ್ಯ ನ ಕರ್ಮಣಾ ॥೭೩॥

ಸರ್ವವೂ ಶಿವನೆಂಬ ಶಾಂಕರಜ್ಞಾನವು ಶೋಕ ಮತ್ತು ಮೋಹಗಳಿಗೆ ನಾಶಕವು. ಇದೇ ಸರಿಯಾದ ವೇದಾರ್ಥವು. ಬೇರೆಯದಲ್ಲವು. ನನ್ನಿಂದ ಸತ್ಯವು ಹೇಳಲ್ಪಟ್ಟಿದೆ. ॥೭೦॥

ಮನುಷ್ಯರಿಗೆ ವೇದದ ಪ್ರಾಮಾಣ್ಯವಿಷಯದಲ್ಲಿ ಭಕ್ತಿಯೂ, ಗುರುವಿನ ಉಪದೇಶದಲ್ಲಿ ಭಕ್ತಿಯೂ, ಶಿವನ ತಾರಕತ್ವದ ವಿಷಯದಲ್ಲಿ ಭಕ್ತಿಯೂ, ಸತ್ಯವಾದ ಬ್ರಹ್ಮಜ್ಞಾನವಾಗಲು ಸಾಧನವಾದುದು. ನನ್ನಿಂದ ಸತ್ಯವೇ ಹೇಳಲ್ಪಟ್ಟಿದೆ. ಸಂಶಯವಿಲ್ಲವು. ॥೭೧॥

ಯಾವ ಮನುಷ್ಯನಿಗೆ ಮೆಟ್ಟಲಿನ ರೀತಿಯಿಂದ ಅಚಲವಾದ ಶಾಸ್ತ್ರಜ್ಞಾನವೂ ಅನುಭವವೂ ಹೊಂದಿಕೊಂಡು ಉಂಟಾಗಿ ಶಾಶ್ವತವಾಗಿದೆಯೋ, ಅವನಿಗೆ ಶ್ರೇಷ್ಠವಾದ ಮುಕ್ತಿಯು ಸಿದ್ಧವಾಗಿರುತ್ತದೆ. ಇದೇ ನಿಶ್ಚಯವೆಂದು ನನ್ನಿಂದಲೂ ಹೇಳಲ್ಪಟ್ಟಿದೆ. ॥೭೨॥

ಜ್ಞಾನಮಾತ್ರದಿಂದಲೇ ಮೋಕ್ಷವು ಸಿದ್ಧಿಸುವುದೆಂದು ಹೇಳುವುದು ಹೇಗೆ? ಎಂದರೆ, "ಅಸಂಗೋಽಹ್ಯಯಂ ಪುರುಷಃ" ಎಂಬ ಬೃ. ಉ. ೪.೩.೧೫ ರಂತೆ ನಿತ್ಯಮುಕ್ತನಾದವನಿಗೆ ಎಲ್ಲಾ ಕಾಲದಲ್ಲಿಯೂ ಸಂಸಾರವೆಂಬುದೇ ಭ್ರಾಂತಿಯೆಂದು ಸಿದ್ಧವಾಗುತ್ತದಲ್ಲದೇ ಬೇರೆಯಿಲ್ಲವು. ಆದ್ದರಿಂದ ಸಂಸಾರದ ನಾಶವು ಜ್ಞಾನದಿಂದಲೇ ಆಗಬೇಕಲ್ಲದೇ ಕರ್ಮದಿಂದಲೇ ನೇರವಾಗಿ ಆಗಲಾರದು. ॥೭೩॥

ಜ್ಞಾನಲಾಭಾಯ ವೇದೋಕ್ತಪ್ರಕಾರೇಣ ಸಮಾಹಿತಃ ।
ಮಹಾಕಾರುಣಿಕಂ ಸಾಕ್ಷಾದ್ಗುರುಮೇವ ಸಮಾಶ್ರಯೇತ್ ॥೭೪॥

ಇತಿ ಶ್ರೀಸ್ಕಾಂದಪುರಾಣೇ ಸೂತಸಂಹಿತಾಯಾಂ ಚತುರ್ಥಸ್ಯ
ಯಜ್ಞವೈಭವಖಂಡಸ್ಯೋಪರಿಭಾಗೇ ಸೂತಗೀತಾಸೂಪನಿಷತ್ಸು
ಪಂಚಮೋಽಧ್ಯಾಯಃ

ಆದುದರಿಂದ ಚಿತ್ತೈಕಾಗ್ರತೆಯುಳ್ಳವನು ವೇದೋಕ್ತರೀತಿಯಿಂದ ಜ್ಞಾನವನ್ನು ಸಂಪಾದಿಸಿಕೊಳ್ಳುವುದಕ್ಕೋಸ್ಕರ ಮಹಾದಯಾಶಾಲಿಯಾದ ಸಾಕ್ಷಾದ್ಗುರುವನ್ನೇ ಭಕ್ತಿಯಿಂದ ಆಶ್ರಯಿಸಬೇಕು. ॥೭೪॥

ಇಲ್ಲಿಗೆ ಸ್ಕಾಂದಪುರಾಣದ ಸೂತಸಂಹಿತೆಯ ನಾಲ್ಕನೆಯ ಯಜ್ಞವೈಭವಖಂಡದ ಸೂತಗೀತೆಯಲ್ಲಿ ಆತ್ಮಸ್ವರೂಪಕಥನವೆಂಬ ಐದನೆಯ ಅಧ್ಯಾಯವು ಮುಗಿದದು.

|| ಶ್ರೀಃ ||

ಅಥಾಸ್ಯಾಃ ಶ್ರೀಮತ್ಸ್ಕಾಂದಪುರಾಣಾಂತರ್ಗತ ಸೂತಸಂಹಿತಾಯಾಶ್ಚತುರ್ಥಸ್ಯ ಯಜ್ಞವೈಭವಖಂಡಸ್ಯೋಪರಿಭಾಗೇ ಸೂತಗೀತಾ

|| ಷಷ್ಠೋಽಧ್ಯಾಯಃ ||

ಆರನೆಯ ಅಧ್ಯಾಯವು

|| ಸೂತ ಉವಾಚ ||

ವಕ್ಷ್ಯಾಮಿ ಪರಮಂ ಗುಹ್ಯಂ ಸರ್ವಶಾಸ್ತ್ರಾರ್ಥ ಸಂಗ್ರಹಂ ।
ಯಂ ವಿದಿತ್ವಾ ದ್ವಿಜೋ ಮರ್ತ್ಯೋ ನ ಪುನರ್ಜಾಯತೇ ಭುವಿ ॥೧॥

ಸಾಕ್ಷಾತ್ಪರತರಂ ತತ್ತ್ವಂ ಸಚ್ಚಿದಾನಂದ ಲಕ್ಷಣಂ ।
ಸರ್ವೇಷಾಂ ನಃ ಸದಾ ಸಾಕ್ಷಾದಾತ್ಮಭೂತಮಪಿ ಸ್ವತಃ ॥೨॥

ದುರ್ದರ್ಶಮೇವ ಸೂಕ್ಷ್ಮತ್ವಾದ್ದೇವಾನಾಂ ಮಹತಾಮಪಿ ।
ರುದ್ರಸ್ಯಾತ್ಮತಯಾ ಭಾತಂ ತತ್ಸದಾ ಪರಿಪಶ್ಯತಿ ॥೩॥

ಸೂತಮುನಿಯು ಹೇಳಿದನು---ಮೇಲಿನ ಅಧ್ಯಾಯದಲ್ಲಿ ಹೇಳಿದಂತೆ ಪರಶಿವ ಸ್ವರೂಪವಾದ ಆತ್ಮಜ್ಞಾನವು ಆ ಪರಮೇಶ್ವರನ ಅನುಗ್ರಹದಿಂದಲೇ ಆಗಬೇಕಾಗಿರುವುದರಿಂದ ಅದಕ್ಕೆ ಸಾಧನವಾದ ಪರಶಿವನ ಮೂರ್ತಿಯ ಧ್ಯಾನಕ್ರಮವನ್ನು ಹೇಳುತ್ತಾರೆ. ಎಲೌ ಬ್ರಾಹ್ಮಣರೇ, ಸರ್ವಶಾಸ್ತ್ರಾರ್ಥಗಳ ಸಂಗ್ರಹವಾದ ಉತ್ತಮರಹಸ್ಯವನ್ನು ಹೇಳುತ್ತೇನೆ---ಯಾವುದನ್ನು ತಿಳಿದು ಮನುಷ್ಯನು ಭೂಮಿಯಲ್ಲಿ ಪುನಃ ಜನ್ಮವನ್ನೆತ್ತುವುದಿಲ್ಲವೋ, ಅಂತಹ ಜ್ಞಾನೋಪಾಯವನ್ನು ತಿಳಿಸುತ್ತೇನೆ. ||೧||

ಸಾಕ್ಷಾತ್ಪರತರವಾದ ತತ್ತ್ವವು ಸಚ್ಚಿದಾನಂದ ಲಕ್ಷಣವುಳ್ಳದ್ದೇ ಆಗಿದೆ. ಅದು ನಮ್ಮೆಲ್ಲರಿಗೂ ಹೃದಯದಲ್ಲಿ ತಾನಾಗಿಯೇ ಪ್ರತ್ಯಕ್ಷವಾಗಿರುವ ಆತ್ಮಭೂತ

ವಿಷ್ಣುಃ ಕದಾಚಿತ್ತತ್ತತ್ತ್ವಂ ಕಥಂ ಚಿತ್ಪರಿಪಶ್ಯತಿ ।
ತಥಾ ಕಥಂಚಿದ್ಬ್ರಹ್ಮಾಽಪಿ ಕದಾಚಿತ್ಪರಿಪಶ್ಯತಿ ॥೪॥

ತ್ರಿಮೂರ್ತೀನಾಂ ತು ಯಜ್ಜ್ಞಾನಂ ಬ್ರಹ್ಮೈಕ ವಿಷಯಂ ಪರಂ ।
ತಸ್ಯಾಪಿ ಸಾಧಕಂ ತತ್ತ್ವಂ ಸಾಕ್ಷಿತ್ವಾನ್ನೈವ ಗೋಚರಂ ॥೫॥

ಪ್ರಸಾದಾದೇವ ತಸ್ಯೈವ ಪರತತ್ತ್ವಸ್ಯ ಕೇವಲಂ ।
ದೇವಾದಯೋಽಪಿ ಪಶ್ಯಂತಿ ತತ್ರಾಪಿ ಬ್ರಹ್ಮ ಸಾಧಕಂ ॥೬॥

ಅತಃ ಪ್ರಸಾದಸಿದ್ಧ್ಯರ್ಥಂ ಪರಯಾ ಶ್ರದ್ಧಯಾ ಸಹ ।
ಧ್ಯೇಯಮೇವ ಪರಂ ತತ್ತ್ವಂ ಹೃದಯಾಂಭೋಜ ಮಧ್ಯಗಂ ॥೭॥

ತ್ರಿಮೂರ್ತೀನಾಂ ತು ರುದ್ರೋಽಪಿ ಶಿವಂ ಪರಮಕಾರಣಂ ।
ಸದಾ ಮೂರ್ತ್ಯಾತ್ಮನಾ ಪ್ರೀತ್ಯಾ ಧ್ಯಾಯತಿ ದ್ವಿಜಪುಂಗವಾಃ ॥೮॥

ವಾಗಿರತಕ್ಕದ್ದಾದರೂ, ಅತ್ಯಂತ ಸೂಕ್ಷ್ಮವಾದ್ದರಿಂದ ಅದು ಮಹಾತ್ಮರಾದ ದೇವತೆಗಳಿಗೂ ಕೂಡ ಕಷ್ಟದಿಂದಲೂ ನೋಡಲಸಾಧ್ಯವಾದದ್ದಾಗಿದೆ! ಅದನ್ನು ರುದ್ರನು ಮಾತ್ರ ಎಲ್ಲಾ ಕಾಲದಲ್ಲಿಯೂ ಸ್ವಾತ್ಮರೂಪದಿಂದ ನೋಡುತ್ತಿರುತ್ತಾನೆ. ಅವನಿಗೆ ಮಾತ್ರ ಪರತತ್ತ್ವವು ಬೇರೆ ತಾನು ಬೇರೆ ಎಂಬ ಬುದ್ಧಿಯಿರುವುದಿಲ್ಲವು. ॥೨-೩॥

ವಿಷ್ಣುವೂ, ಬ್ರಹ್ಮನೂ ಯಾವಾಗಲಾದರೂ ಒಂದೊಂದು ಸಮಯದಲ್ಲಿ ಆ ಪರತತ್ತ್ವವನ್ನು ಅತಿ ಪ್ರಯಾಸದಿಂದ ಸ್ವಾತ್ಮವನ್ನಾಗಿ ಭಾವಿಸಿಕೊಳ್ಳುತ್ತಾರೆ. ॥೪॥

ತ್ರಿಮೂರ್ತಿಗಳಿಗೂ ಕೂಡ ಪರಬ್ರಹ್ಮ ಮಾತ್ರ ವಿಷಯಕವಾದ ಯಾವ ಉತ್ಕೃಷ್ಟಜ್ಞಾನವುಂಟೋ ಆ ಜ್ಞಾನಕ್ಕೂ ಸಾಧಕವಾದ ತತ್ತ್ವವು ಸಾಕ್ಷಿಯಾದ್ದರಿಂದ ಎಲ್ಲರಿಗೂ ಇಂದ್ರಿಯಮನೋಬುದ್ಧಿಗಳಿಗೆ ಗೋಚರಿಸತಕ್ಕದ್ದಲ್ಲವು. ॥೫॥

ಆ ಪರಾತ್ಪರತತ್ತ್ವದ ಅನುಗ್ರಹಮಾತ್ರದಿಂದಲೇ ದೇವಾದಿಗಳೂ ಕೂಡ ಅದರ ಆ ಅದ್ವೈತಾತ್ಮಭಾವವನ್ನು ಮನಗಾಣುತ್ತಾರೆ. ಆ ವಿಷಯದಲ್ಲಿಯೂ ಕೂಡ ಬ್ರಹ್ಮವೇ ಸಾಧಕವು. ॥೬॥

ಆದ್ದರಿಂದ ಆ ಪರಶಿವನ ಪ್ರಸಾದಸಿದ್ಧಿಗೋಸ್ಕರ ಹೃದಯಕಮಲದ ಮಧ್ಯದಲ್ಲಿರುವ ಆ ಪರತತ್ತ್ವವೇ ಹೆಚ್ಚು ಶ್ರದ್ಧೆಯಿಂದ ಧ್ಯಾನಿಸಲ್ಪಡಬೇಕಾದದ್ದು. ॥೭॥

ತ್ರಿಮೂರ್ತೀನಾಂ ತು ವಿಷ್ಣುಶ್ಚ ಶಿವಂ ಪರಮಕಾರಣಂ ।
ಸದಾ ಮೂರ್ತ್ಯಾತ್ಮನಾ ಪ್ರೀತ್ಯಾ ಧ್ಯಾಯತಿ ದ್ವಿಜಪುಂಗವಾಃ ॥೯॥

ತ್ರಿಮೂರ್ತೀನಾಂ ವಿರಿಂಚೋಽಪಿ ಶಿವಂ ಪರಮಕಾರಣಂ ।
ಸದಾ ಮೂರ್ತ್ಯಾತ್ಮನಾ ಪ್ರೀತ್ಯಾ ಧ್ಯಾಯತಿ ದ್ವಿಜಪುಂಗವಾಃ ॥೧೦॥

ಬ್ರಹ್ಮ ವಿಷ್ಣು ಮಹೇಶಾನಾಂ ತ್ರಿಮೂರ್ತೀನಾಂ ವಿಚಕ್ಷಣಾಃ ।
ವಿಭೂತಿರೂಪಾ ದೇವಾಶ್ಚ ಧ್ಯಾಯಂತಿ ಪ್ರೀತಿಸಂಯುತಾಃ ॥೧೧॥

ಘೃತಕಾಠಿನ್ಯವನ್ಮೂರ್ತಿಸ್ಸಚ್ಚಿದಾನಂದಲಕ್ಷಣಾ ।
ಶಿವಾದ್ಭೇದೇನ ನೈವಾಸ್ತಿ ಶಿವ ಏವ ಹಿ ಸಾ ಸದಾ ॥೧೨॥

ಎಲೈ ಬ್ರಾಹ್ಮಣಶ್ರೇಷ್ಠರೇ, ತ್ರಿಮೂರ್ತಿಗಳೊಳಗೆ ರುದ್ರನೂ ಕೂಡ ಉತ್ಕೃಷ್ಟ ಮೂಲಕಾರಣವಾದ ವಸ್ತುವನ್ನು ಎಲ್ಲಾ ಕಾಲದಲ್ಲಿಯೂ ಸಂತೋಷದಿಂದ ಸಾಂಬಮೂರ್ತಿರೂಪದಿಂದಲೇ ಧ್ಯಾನಿಸುತ್ತಾನೆ. ॥೮॥

ಎಲೈ ಬ್ರಾಹ್ಮಣಶ್ರೇಷ್ಠರೇ, ತ್ರಿಮೂರ್ತಿಗಳೊಳಗೆ ವಿಷ್ಣುವೂ ಕೂಡ ಉತ್ಕೃಷ್ಟಮೂಲಕಾರಣವಾದ ವಸ್ತುವನ್ನು ಎಲ್ಲಾ ಕಾಲದಲ್ಲಿಯೂ ಸಂತೋಷದಿಂದ ಸಾಂಬಮೂರ್ತಿರೂಪದಿಂದಲೇ ಧ್ಯಾನಿಸುತ್ತಾನೆ. ॥೯॥

ಎಲೈ ಬ್ರಾಹ್ಮಣಶ್ರೇಷ್ಠರೇ, ತ್ರಿಮೂರ್ತಿಗಳೊಳಗೆ ಬ್ರಹ್ಮನೂ ಕೂಡ ಉತ್ಕೃಷ್ಟಕಾರಣವಾದ ಸರ್ವಾಧಿಷ್ಠಾನವಾದ ಆ ತತ್ತ್ವವನ್ನು ಎಲ್ಲಾ ಕಾಲದಲ್ಲಿಯೂ ಸಂತೋಷದಿಂದ ಸಾಂಬಮೂರ್ತಿರೂಪದಿಂದ ಧ್ಯಾನಿಸುತ್ತಿರುತ್ತಾನೆ. ॥೧೦॥

ಎಲೈ ವಿಚಕ್ಷಣರೇ, ಬ್ರಹ್ಮ, ವಿಷ್ಣು, ಮಹೇಶ್ವರರೆಂಬ ತ್ರಿಮೂರ್ತಿಗಳ ಅಂಶರೂಪರಾದ ಉಳಿದ ದೇವತೆಗಳೂ ಕೂಡ ಎಲ್ಲಾ ಕಾಲದಲ್ಲಿಯೂ ಪ್ರೀತಿಯಿಂದ ಕೂಡಿದವರಾಗಿ ಆ ಪರಶಿವನನ್ನು ಅರ್ಧನಾರೀಶ್ವರರೂಪನಾದ ಸಾಂಬಮೂರ್ತಿಯಲ್ಲೇ ಧ್ಯಾನಿಸುತ್ತಿರುತ್ತಾರೆ. ॥೧೧॥

ಸಚ್ಚಿದಾನಂದಲಕ್ಷಣವಾದ ಆ ಪರಶಿವನ ಮೂರ್ತಿಯೂ, ತುಪ್ಪದ ಕಾಠಿಣ್ಯದಂತೆ, ಶಿವನಿಗಿಂತಲೂ ಭೇದರೂಪದಿಂದ ತೋರುವುದೇ ಇಲ್ಲವು ! ಅದು ಎಲ್ಲಾ ಕಾಲದಲ್ಲಿಯೂ ಶಿವನಾಗಿಯೇ ಇರುತ್ತದೆ. ಕಾಠಿಣ್ಯಮಾತ್ರದಿಂದ ಬೇರೆ ರೂಪವು ತುಪ್ಪಕ್ಕೆ ಹೇಗೆ ಇಲ್ಲವೋ ಹಾಗೆ ಕಾಣತಕ್ಕಸಗುಣ ಸಾಕಾರಮೂರ್ತಿಯಿಂದ ಬೇರೆಯ ರೂಪವು ಈಶ್ವರನಿಗೆ ವಾಸ್ತವವಾಗಿ ಸಿದ್ಧವಾಗುವುದಿಲ್ಲವೆಂದು ತಾತ್ಪರ್ಯವು. ॥೧೨॥

ಬ್ರಹ್ಮ ವಿಷ್ಣು ಮಹೇಶಾದ್ಯಾಃ ಶಿವಧ್ಯಾನಪರಾ ಅಪಿ ।
ಪರಮಾತ್ಮವಿಭಾಗಸ್ಥಾ ನ ಜೀವವ್ಯೂಹಸಂಸ್ಥಿತಾಃ ॥೧೩॥

ಬ್ರಹ್ಮ ವಿಷ್ಣು ಮಹೇಶಾನಾ ಮಾವಿರ್ಭಾವಾ ಅಪಿ ದ್ವಿಜಾಃ ।
ಪರಮಾತ್ಮವಿಭಾಗಸ್ಥಾ ನ ಜೀವವ್ಯೂಹಸಂಸ್ಥಿತಾಃ ॥೧೪॥

ಪರತತ್ತ್ವಂ ಪರಂ ಬ್ರಹ್ಮ ಜೀವಾತ್ಮಪರಮಾತ್ಮನೋಃ ।
ಔಪಾಧಿಕೇನ ಭೇದೇನ ದ್ವಿಧಾಭೂತಮಿವಸ್ಥಿತಂ ॥೧೫॥

ಪುಣ್ಯಪಾಪಾವೃತಾ ಜೀವಾ ರಾಗದ್ವೇಷಮಲಾವೃತಾಃ ।
ಜನ್ಮನಾಶಾಭಿಭೂತಾಶ್ಚ ಸದಾ ಸಂಸಾರಿಣೋಽವಶಾಃ ॥೧೬॥

ಬ್ರಹ್ಮ ವಿಷ್ಣು ಮಹೇಶಾನಾಂ ತಥಾ ತೇಷಾಂ ದ್ವಿಜರ್ಷಭಾಃ ।
ಆವಿರ್ಭಾವವಿಶೇಷಾಣಾಂ ಪುಣ್ಯಪಾಪಾದಯೋ ನ ಹಿ ॥೧೭॥

ಬ್ರಹ್ಮ ವಿಷ್ಣು ಮಹೇಶ್ವರರೇ ಮೊದಲಾದ ದೊಡ್ಡವರೂ ಶಿವಧ್ಯಾನಪರರೆಂದು ವರ್ಣಿತರಾಗಿದ್ದರೂ ಕೂಡ ಅವರು ಈಶ್ವರನೆಂಬ ಮೇಲಿನ ತರಗತಿಯವರಲ್ಲಿ ಸೇರುವವರಲ್ಲದೇ ನಮ್ಮಂತೆ ಜೀವಸಮೂಹದಲ್ಲಿ ಸೇರತಕ್ಕವರಲ್ಲವು. ॥೧೩॥

ಎಲೌ ಬ್ರಾಹ್ಮಣರೇ, ಬ್ರಹ್ಮ, ವಿಷ್ಣು, ಮಹೇಶ್ವರರ ಅವತಾರಗಳೂ ಕೂಡ ಮಾಯೋಪಾಧಿಕಗಳಾದುದರಿಂದ ಪರಮಾತ್ಮ ಕೋಟಿಯಲ್ಲಿ ಸೇರತಕ್ಕವುಗಳೇ ಹೊರತು ಅವಿದ್ಯೋಪಾಧಿಕಗಳಾಗಿರುವ ನಮ್ಮಂತೆ ಜೀವಸಂಘಗಳ ಪಂಗಡಗಳಲ್ಲಿ ಸೇರತಕ್ಕವುಗಳಲ್ಲವು. ॥೧೪॥

ಜೀವರು ಈಶ್ವರ ಇವರಿಬ್ಬರಿಗೂ ಹಿನ್ನೆಲೆಯಾಗಿರುವ ತತ್ತ್ವವೇ ಪರಬ್ರಹ್ಮವು. ಉಪಾಧಿಸಂಬಂಧವಾದ ಭೇದದಿಂದ ಎರಡು ರೂಪವುಳ್ಳದ್ದೋ ಎನ್ನುವ ಹಾಗಿದೆಯಲ್ಲದೇ ಎರಡು ರೂಪ ಮಾತ್ರ ವಾಸ್ತವವಾಗಿ ಇಲ್ಲವೇ ಇಲ್ಲವು. ॥೧೫॥

ಪುಣ್ಯ ಮತ್ತು ಪಾಪಗಳಿಂದ ಕೂಡಿದವರೂ, ರಾಗದ್ವೇಷಗಳೆಂಬ ಮಲದಿಂದ ಕೂಡಿದವರೂ, ಎಲ್ಲ ಕಾಲಗಳಲ್ಲಿಯೂ ಉತ್ಪತ್ತಿನಾಶಗಳಿಂದ ತಿರಸ್ಕೃತರಾದವರೂ ಆದ ಜೀವರು ಮಾಯಾಪರವಶರಾಗಿ ಸಂಸಾರಿಗಳಾಗಿರತಕ್ಕವರು. ॥೧೬॥

ಎಲೌ ಬ್ರಾಹ್ಮಣಶ್ರೇಷ್ಠರೇ, ಹಾಗೆಯೇ ಆ ಬ್ರಹ್ಮ, ವಿಷ್ಣು ಮತ್ತು ಮಹೇಶ್ವರರ ಅವತಾರವಿಶೇಷಗಳ ಸಂಬಂಧವಾದ ಪುಣ್ಯಪಾಪಗಳೂ ಕೂಡ ಅವರಿಗೆ

ಆಜ್ಞಯಾ ಪರತತ್ತ್ವಸ್ಯ ಜೀವಾನಾಂ ಹಿತಕಾಮ್ಯಯಾ ।
ಆವಿರ್ಭಾವತಿರೋಭಾವೌ ತೇಷಾಂ ಕೇವಲಮಾಸ್ತಿಕಾಃ ॥೧೮॥

ಹರಿ ಬ್ರಹ್ಮ ಹರಾಸ್ತೇಷಾಮಾವಿರ್ಭಾವಾಶ್ಚ ಸುವ್ರತಾಃ ।
ಸದಾ ಸಂಸಾರಿಭಿರ್ಜೀವೈರುಪಾಸ್ಯಾ ಭುಕ್ತಿಮುಕ್ತಯೇ ॥೧೯॥

ಉಪಾಸ್ಯತ್ವೇ ಸಮಾನೇಽಪಿ ಹರಃ ಶ್ರೇಷ್ಠೋ ಹರೇರಜಾತ್ ।
ನ ಸಮೋ ನ ವಿಹೀನಶ್ಚ ನಾಸ್ತಿ ಸಂದೇಹಕಾರಣಂ ॥೨೦॥

ವಿಹೀನಂ ವಾ ಸಮಂ ವಾಽಪಿ ಹರಿಣಾ ಬ್ರಹ್ಮಣಾ ಹರಂ ।
ಯೇ ಪಶ್ಯಂತಿ ಸದಾ ತೇ ತು ಪಚ್ಯಂತೇ ನರಕಾನಲೇ ॥೨೧॥

ಸೇರುವುದಿಲ್ಲ. ಅವರು ಕರ್ಮಗಳಿಗೆ ನಮ್ಮಂತೆ ವಶರಾಗಿರತಕ್ಕವರಲ್ಲವು ಮತ್ತು ಸ್ವತಂತ್ರರೂ ಸಹ ಆಗಿರುವರು. ||೧೭||

ಎಲೌ ಆಸ್ತಿಕರೇ, ಪರತತ್ತ್ವದ ಆಜ್ಞೆಯಿಂದಲೂ ಈ ಜೀವರುಗಳಿಗೆ ಹಿತ ಮಾಡಬೇಕೆಂಬ ಇಚ್ಛೆಯಿಂದಲೂ ಮಾತ್ರ ತ್ರಿಮೂರ್ತಿಗಳಿಗೆ ಪ್ರಕಾಶ ತಿರೋಭಾವಗಳು ಆಗುವುವಲ್ಲದೇ ಬೇರೆ ರೀತಿಯಿಂದ ಎಂದರೆ ನಮ್ಮಹಾಗೆ ಕರ್ಮಾಧೀನವಾಗಿ ಆಗವು. ||೧೮||

ಎಲೌ ಸಚ್ಚರಿತ್ರರೇ, ಆ ಹರಿಹರಬ್ರಹ್ಮರೂ ಮತ್ತು ಅವರ ಅವತಾರಗಳೂ ಕೂಡ ಎಲ್ಲ ಕಾಲದಲ್ಲಿಯೂ ಸಂಸಾರಿಗಳಾದ ಜೀವರುಗಳಿಂದ ಸಂಸಾರದಲ್ಲಿನ ಐಹಿಕವಾದ ಸುಖಗಳು, ಆಮುಷ್ಮಿಕಗಳಾದ ಸದ್ಗತಿಗಳು ಇವುಗಳ ಭೋಗಕ್ಕೋಸ್ಕರವೂ, ಕಡೆಗೆ ಸಂಸಾರದಿಂದ ಮುಕ್ತಿಯನ್ನೂ ಹೊಂದುವುದಕ್ಕೋಸ್ಕರವೂ, ಸೇವಿಸಲ್ಪಡಬೇಕಾದವುಗಳು. ||೧೯||

ನಮ್ಮಿಂದ ಪೂಜೆಯನ್ನು ಹೊಂದಲು ಯೋಗ್ಯತೆಯು ಈ ಮೂವರಲ್ಲಿಯೂ ಸಮಾನವಾಗಿದ್ದರೂ ವಿಷ್ಣು ಬ್ರಹ್ಮರಿಬ್ಬರಿಗಿಂತಲೂ ರುದ್ರನೇ ಶ್ರೇಷ್ಠನು. ನಿಶ್ಚಯವಾಗಿ ಅವನು ಅವರಿಗೆ ಸಮನೂ ಅಲ್ಲವು. ನ್ಯೂನನೂ ಅಲ್ಲವು. ಈ ವಿಷಯದಲ್ಲಿ ಸಂದೇಹಕ್ಕೆ ಕಾರಣವಿಲ್ಲವು. ||೨೦||

ವಿಷ್ಣುವಿನೊಡನೆಯೂ, ಬ್ರಹ್ಮನೊಡನೆಯೂ, ಹರನನ್ನು ನ್ಯೂನನನ್ನಾಗಿಯೂ, ಸಮನನ್ನಾಗಿಯೂ ಯಾರು ಭಾವಿಸುತ್ತಾರೋ ಅವರು ಎಲ್ಲಾ ಕಾಲದಲ್ಲಿಯೂ ನರಕಾಗ್ನಿಯಲ್ಲಿ ಬೇಯಿಸಲ್ಪಡುತ್ತಾರೆ. ||೨೧||

ಹರಿ ಬ್ರಹ್ಮಾದಿದೇವೇಭ್ಯಃ ಶ್ರೇಷ್ಠಂ ಪಶ್ಯಂತಿ ಯೇ ಹರಂ ।
ತೇ ಮಹಾಘೋರಸಂಸಾರಾನ್ಮುಚ್ಯಂತೇ ನಾತ್ರ ಸಂಶಯಃ ॥೨೨॥

ಪ್ರಾಧಾನ್ಯೇನ ಪರಂ ತತ್ತ್ವಂ ಮೂರ್ತಿದ್ವಾರೇಣ ಯೋಗಿಭಿಃ ।
ಧ್ಯೇಯಂ ಮುಮುಕ್ಷುಭಿಃ ನಿತ್ಯಂ ಹೃದಯಾಂಭೋಜಮಧ್ಯಮೇ ॥೨೩॥

ಕಾರ್ಯಭೂತಾ ಹರಿಬ್ರಹ್ಮ ಪ್ರಮುಖಾಸ್ಸರ್ವದೇವತಾಃ ।
ಅಪ್ರಧಾನತಯಾ ಧ್ಯೇಯಾ ನ ಪ್ರಧಾನತಯಾ ಸದಾ ॥೨೪॥

ಸರ್ವೈಶ್ವರ್ಯೇಣ ಸಂಪನ್ನಸ್ಸರ್ವೇಶ ಸ್ಸರ್ವಕಾರಣಂ ।
ಶಂಭುರೇವ ಸದಾ ಸಾಂಬೋ ನ ವಿಷ್ಣುರ್ನ ಪ್ರಜಾಪತಿಃ ॥೨೫॥

ತಸ್ಮಾತ್ತತ್ಕಾರಣಂ ಧ್ಯೇಯಂ ಪ್ರಾಧಾನ್ಯೇನ ಮುಮುಕ್ಷುಭಿಃ ।
ನ ಕಾರ್ಯ ಕೋಟಿ ನಿಕ್ಷಿಪ್ತಾ ಬ್ರಹ್ಮವಿಷ್ಣು ಮಹೇಶ್ವರಾಃ ॥೨೬॥

ಹರಿ ಬ್ರಹ್ಮಾದಿ ದೇವತೆಗಳಿಗಿಂತಲೂ ಹರನನ್ನು ಉತ್ತಮನನ್ನಾಗಿ ಯಾರು ಭಾವಿಸುತ್ತಾರೋ, ಅವರು ಮಹಾಭಯಂಕರವಾದ ಈ ಸಂಸಾರದಿಂದ ಮುಕ್ತರಾಗುತ್ತಾರೆ. ಈ ವಿಷಯದಲ್ಲಿ ಸಂಶಯವಿಲ್ಲವು. ||೨೨||

ಮುಕ್ತರಾಗಬೇಕೆಂದಾಸೆಯುಳ್ಳ ಯೋಗಿಗಳಿಂದ ಹೃದಯ ಕಮಲದ ಮಧ್ಯದಲ್ಲಿ ಯಾವುದಾದರೊಂದು ಮೂರ್ತಿರೂಪದಲ್ಲೂ ಮುಖ್ಯವಾಗಿ ಪರತತ್ತ್ವವೇ ಸದಾ ಧ್ಯಾನಿಸಲ್ಪಡಬೇಕು. ಇದು ಎಲ್ಲ ಕಾಲದಲ್ಲಿಯೂ ಅವಲಂಬಿಸಬೇಕಾದ ಮೋಕ್ಷೋಪಾಯವು. ||೨೩||

ಪರಶಿವನ ಕಾರ್ಯರೂಪರಾದ ಹರಿಬ್ರಹ್ಮರೇ ಮೊದಲಾದ ದೇವತೆಗಳ ಮೂರ್ತರೂಪವು ಎಲ್ಲ ಕಾಲದಲ್ಲಿಯೂ ಅಪ್ರಧಾನಭಾವದಿಂದ ಧ್ಯಾನಿಸಲ್ಪಡಬೇಕಾದುದು. ಪ್ರಧಾನಭಾವದಿಂದ ಮಾತ್ರ ಯಾವಾಗಲೂ ಅವರನ್ನು ಧ್ಯಾನಿಸಬಾರದು. ಏಕೆಂದರೆ ಶಿವನೇ ಪ್ರಧಾನನು. ||೨೪||

ಎಲ್ಲ ಕಾಲಗಳಲ್ಲೂ ಅಣಿಮಾದಿ ಸಕಲೈಶ್ವರ್ಯಗಳಿಂದ ಕೂಡಿದವನೂ, ಸರ್ವೇಶ್ವರನೂ, ಸರ್ವಕ್ಕೂ ಕಾರಣನಾದವನೂ, ಸಾಂಬನಾದ ಶಂಭುಮಾತ್ರವಲ್ಲದೇ ವಿಷ್ಣುವಾಗಲೀ, ಬ್ರಹ್ಮನಾಗಲೀ ಅಲ್ಲವು. ||೨೫||

ಆದ್ದರಿಂದ ಮೋಕ್ಷಹೊಂದಲಪೇಕ್ಷೆಯುಳ್ಳವರಿಂದ, ಮುಖ್ಯಭಾವನೆಯಿಂದ

ಶಿವಂಕರತ್ವಂ ಸರ್ವೇಷಾಂ ದೇವಾನಾಂ ವೇದವಿತ್ತಮಾಃ ।
ಸ್ವವಿಭೂತಿಮುಪೇಕ್ಷ್ಯೈವ ನ ಪರಬ್ರಹ್ಮವತ್ಸದಾ ॥೨೭॥

ಶಿವಂ ಕರತ್ವಂ ಸಂಪೂರ್ಣಂ ಶಿವಸ್ಯೈವ ಪರಾತ್ಮನಃ ।
ಸಾಂಬಮೂರ್ತಿ ಧರಸ್ಯಾಸ್ಯ ಜಗತಃ ಕಾರಣಸ್ಯ ಹಿ ॥೨೮॥

ಅತೋಽಪಿ ಸ ಶಿವೋ ಧ್ಯೇಯಃ ಪ್ರಾಧಾನ್ಯೇನ ಶಿವಂಕರಃ ।
ಸರ್ವಮನ್ಯತ್ಪರಿತ್ಯಜ್ಯ ದೈವತಂ ಪರಮೇಶ್ವರಾತ್ ॥೨೯॥

ಸಾಕ್ಷಾತ್ಪರಶಿವಸ್ಯೈವ ಶೇಷತ್ವೇನಾಂಬಿಕಾಪತೇಃ ।
ದೇವತಾಃ ಸಕಲಾ ಧ್ಯೇಯಾ ನ ಪ್ರಾಧಾನ್ಯೇನ ಸರ್ವದಾ ॥೩೦॥

ಸಕಲ ಕಾರಣವಾದ ಬ್ರಹ್ಮವೇ ಧ್ಯೇಯವಾದುದು. ಕಾರ್ಯಪಜ್ತ್ತಿಗೆ ಸೇರಿದವರಾದ ಬ್ರಹ್ಮವಿಷ್ಣುಮಹೇಶ್ವರರಲ್ಲವು. ॥೨೬॥

ವೇದಜ್ಞಾನಿಗಳೊಳಗೆ ಶ್ರೇಷ್ಠರೇ, ಸಕಲ ದೇವತೆಗಳಲ್ಲೂ ಇರುವ ಮಂಗಳ ವನ್ನುಂಟುಮಾಡುವ ಶಕ್ತಿಯು ತಮ್ಮಲ್ಲಿರುವ ಬ್ರಹ್ಮರೂಪದ ಮಹಿಮೆಯ ಬೆಂಬಲ ದಿಂದ ಉಂಟಾಗಿದೆಯೇ ಹೊರತು ಪರಬ್ರಹ್ಮವಸ್ತುವಿನಂತೆ ಯಾವಾಗಲೂ ಸ್ವತಂತ್ರ ವಾಗಿ ಇಲ್ಲವೆಂದು ತಾತ್ಪರ್ಯವು. ॥೨೭॥

ಸಂಪೂರ್ಣವಾದ ನಿತ್ಯಸುಖಸಂಪಾದಕತ್ವವು ಪರಮಾತ್ಮನೂ, ಸಾಂಬ ಮೂರ್ತಿಧರನೂ, ಈ ಜಗತ್ತಿಗೆ ಕಾರಣನೂ ಆದ ಶಿವನಿಗೇ ಇದೆ. ಅಲ್ಲದೆ ಬೇರೆ ಯವರಿಗೆ ನೇರವಾಗಿ ಇಲ್ಲವು. ॥೨೮॥

ಆ ಕಾರಣದಿಂದಲೂ ಕೂಡ ಸುಖಸಂಪಾದಕನಾದ ಪರಮೇಶ್ವರನಿಗಿಂತಲೂ ಬೇರೆಯಾದ ಎಲ್ಲ ದೇವತೆಗಳನ್ನೂ ಮುಖ್ಯವಾಗಿ ಎಣಿಸದೆ ಬಿಟ್ಟು, ಮುಖ್ಯವಾಗಿ ಸ್ಮರಿಸಲ್ಪಡಬೇಕಾದವನು ಆ ಶಿವನೇ ಆಗಿರುತ್ತಾನೆ. ॥೨೯॥

ಅಂಬಿಕಾಪತಿಯಾದ ಸಾಕ್ಷಾತ್ಪರಶಿವನ ಶೇಷಭಾವದಿಂದಲೇ ಇತರ ಎಲ್ಲ ದೇವತೆಗಳೂ ಧ್ಯೇಯರಲ್ಲದೇ ಯಾವಾಗಲೂ ಪ್ರಧಾನಭಾವದಿಂದಲ್ಲವು. ॥೩೦॥

ಶಿಖಾಽಸ್ಯಾಥರ್ವಣೀ ಸಾಧ್ವೀ ಸರ್ವವೇದೋತ್ತಮೋತ್ತಮಾ ।
ಅಸ್ಮಿನ್ನರ್ಥೇ ಸಮಾಪ್ತಾ ಸಾ ಶ್ರುತಯಶ್ಚಾಪರಾ ಅಪಿ ॥೩೧॥

ಯಥಾ ಸಾಕ್ಷಾತ್ಪರಂ ಬ್ರಹ್ಮ ಪ್ರತಿಷ್ಠಾ ಸಕಲಸ್ಯ ಚ ।
ತಥೈವಾಥರ್ವಣೋ ವೇದಃ ಪ್ರತಿಷ್ಠೈವಾಖಿಲಶ್ರುತೇಃ ॥೩೨॥

ಕಂದಸ್ತಾರಸ್ತಥಾ ಬಿಂದುಃ ಶಕ್ತಿಸ್ತಾರೋ ಮಹಾದ್ರುಮಃ ।
ಸ್ಕಂಧಶಾಖಾ ಅಕಾರಾದ್ಯಾ ವರ್ಣಾ ಯದ್ವತ್ತಥೈವ ತು ॥೩೩॥

ತಾರಸ್ಕಂದಶ್ರುತೇರ್ಜಾತಿಶ್ಶಕ್ತಿರಾಥರ್ವಣೋದ್ರುಮಃ ।
ಸ್ಕಂಧಶಾಖಾಸ್ತ್ರಯೋ ವೇದಾಃ ಪರ್ಣಾಃ ಸ್ಮೃತಿಪುರಾಣಕಾಃ ॥೩೪॥

ಅಂಗಾನಿ ಶಾಖಾವರಣಂ ತರ್ಕಾಸ್ತಸ್ಯೈವ ರಕ್ಷಕಾಃ ।
ಪುಷ್ಪಂ ಶಿವಪರಿಜ್ಞಾನಂ ಫಲಂ ಮುಕ್ತಿಃ ಪರಾ ಮತಾ ॥೩೫॥

ಸಕಲ ವೇದಗಳೊಳಗೂ ಉತ್ತಮೋತ್ತಮವಾದ ಅಥರ್ವಣವೇದದ ಶಿಖೆಯೆಂತಿರುವ ಉಪನಿಷತ್ತು ಕೂಡ ಈ ಅರ್ಥದಲ್ಲಿಯೇ ಪರಿಸಮಾಪ್ತವಾಗಿದೆ. ಉಳಿದ ಶ್ರುತಿಗಳೂ ಕೂಡ ಹಾಗೆಯೇ ಸಮಾಪ್ತವಾಗಿವೆ. ॥೩೧॥

ಸಕಲಕ್ಕೂ ಸಾಕ್ಷಾತ್ಪರಬ್ರಹ್ಮವೇ ಹೇಗೆ ಮೂಲಾಧಾರವೋ ಹಾಗೆ ನಿಖಿಲ ವೇದಗಳಿಗೂ ಅಥರ್ವಣವೇದವೇ ಮೂಲಾಧಾರವು. ಅ. ಶಿಖಾ. ಉ. ೨. ॥೩೨॥

ತಾರವೆಂದರೆ, ಸರ್ವೇಭ್ಯಃ ದುಃಖಭಯೇಭ್ಯಃ ಸಂತಾರಯತಿ (ಉಪಾಸಕಾನ್) ಇತಿ ತಾರಣಾತ್ತಾರಃ ಎಂದರೆ ಉಪಾಸಕರಾದ ಜೀವರನ್ನು ಎಲ್ಲ ಬಗೆಯ ದುಃಖಗಳಿಂದ ದಾಟಿಸುತ್ತದೆ. ಎಂಬಂತೆ ಪ್ರಣವವೆಂದರ್ಥವು. ಆ ಪ್ರಣವವೇ ಬೇರು. ಅದರಲ್ಲಿರುವ ಅಕಾರ, ಉಕಾರ, ಮಕಾರ, ಬಿಂದು, ನಾದ, ಶಕ್ತಿ, ಶಾಂತ ಎಂಬ ಏಳು ಅಂಗಗಳಲ್ಲಿ ಬಿಂದುವೇ ಸಾಮರ್ಥ್ಯವು. ಅದು ಪರಾ ಎಂಬ ವಾಗ್ರೂಪದಿಂದ ಮೂಲಾಧಾರದಲ್ಲಿರುತ್ತಾಬೇರೆಂದು ಹೇಳಲ್ಪಟ್ಟಿರುತ್ತದೆ. ಅಲ್ಲಿ ಬಿಂದುವೆಂಬ ಅವಯುಕ್ಕೆ ಪ್ರಣವವೆಂಬ ಕಂದ, ಗಡ್ಡೆ, ಬೇರಿನಿಂದ ಶಕ್ತಿಯು ಬರುತ್ತದೆ. ಅನಂತರದಲ್ಲಿ ವೈಖರೀರೂಪದಿಂದ ಅಭಿವ್ಯಕ್ತವಾದ ಆ ಪ್ರಣವವೆಂಬುದೇ ಮಹಾವೃಕ್ಷವು. ಅದರಿಂದ ಉಂಟಾಗುವ ಅಕಾರಾದಿಯಾದ ಐವತ್ತು ಸಂಖ್ಯೆಯುಳ್ಳ ಯಾವ ವರ್ಣಮಾಲೆಯ ಅಕ್ಷರಗಳುಂಟೋ ಅವೆಲ್ಲವೂ ಪ್ರಣವಾವಯವಗಳಿಂದುತ್ಪನ್ನವಾದವುಗಳಾದ್ದರಿಂದ,

ಬಹುನೋಕ್ತೇನ ಕಿಂ ವಿಪ್ರಾಃ ಶಿವೋ ಧ್ಯೇಯಃ ಶಿವಂಕರಃ ।
ಸರ್ವಮನ್ಯತ್ಪರಿತ್ಯಜ್ಯ ದೈವತಂ ಭುಕ್ತಿಮುಕ್ತಯೇ ॥೩೬॥

ಸರ್ವಮುಕ್ತಂ ಸಮಾಸೇನ ಸಾರಾತ್ಸಾರತರಂ ಬುಧಾಃ ।
ಶಿವಧ್ಯಾನಂ ಸದಾ ಯೂಯಂ ಕುರುಧ್ವಂ ಯತ್ನತಸ್ಸದಾ ॥೩೭॥

ಇತಿ ಶ್ರೀಸ್ಕಾಂದಪುರಾಣೇ ಸೂತಸಂಹಿತಾಯಾಂ ಚತುರ್ಥಸ್ಯ ಯಜ್ಞವೈಭವಖಂಡಸ್ಯೋಪರಿಭಾಗೇ ಸೂತಗೀತಾಸೂಪನಿಷತ್ಸು ಷಷ್ಠೋಽಧ್ಯಾಯಃ

ಆ ವೃಕ್ಷಕ್ಕೆ ಕಾಂಡ, ಕೊಂಬೆ, ಕವಟಲು, ಮೊದಲಾದವುಗಳಂತೆ ಇರುತ್ತವೆ. ಇದರಂತೆ ವೇದಗಳಿಗೆ ಪ್ರಣವವೇ ಕಂದವು. ಶ್ರುತಿಗಳ ಹೊರಹೊಮ್ಮುವಿಕೆಯೇ ಶಕ್ತಿ ಅಥವಾ ಸಾಮರ್ಥ್ಯವು. ಅಥರ್ವಣವೇದವೆಂಬುದೇ ವೃಕ್ಷವು. ಋಗ್ಯಜುಸ್ಸಾಮಗಳೆಂಬ ಮೂರು ವೇದಗಳೂ ಆ ಅಥರ್ವಣವೇದವೆಂಬ ವೃಕ್ಷದ ಬುಡದ ಕಾಂಡ ಕೊಂಬೆ ರೆಂಬೆಗಳು. ಸ್ಮೃತಿಪುರಾಣಗಳು ಪರ್ಣಗಳು. ಶಿಕ್ಷಾ, ಕಲ್ಪ, ವ್ಯಾಕರಣಾದಿಗಳು ಶಾಖೆಗಳ ರಕ್ಷಣೆಗಿರುವ ಆವರಣಗಳು (ಮುಸುಕುಗಳು). ತರ್ಕಗಳು (ವಿಚಾರಗಳು) ಆ ಆವರಣಗಳ ಕವಚಗಳು. ಪರಶಿವಸ್ವರೂಪದ ಜ್ಞಾನವೇ ಪುಷ್ಪವು. ಅದರಿಂದ ದೊರೆಯುವ ನಿರತಿಶಯವಾದ ಮೋಕ್ಷವೇ ಉತ್ಕೃಷ್ಟವಾದ ಫಲವು. ॥೩೩-೩೪-೩೫॥

ಎಲೌ ಬ್ರಾಹ್ಮಣರೇ, ಹೆಚ್ಚು ಹೇಳಿದ್ದರಿಂದ ಫಲವೇನು? ಕ್ಷೇಮಕರನಾದ ಶಿವನೇ ಧ್ಯೇಯನು. ಸಂಸಾರದಲ್ಲಿ ಭೋಗಗಳನ್ನೂ ಕಡೆಗೆ ಅದರಿಂದ ಮುಕ್ತಿಯನ್ನೂ ಸುಲಭವಾಗಿಯೂ ಶೀಘ್ರವಾಗಿಯೂ ಹೊಂದಬೇಕಾದರೆ ಉಳಿದ ಎಲ್ಲ ದೇವತೆಗಳನ್ನೂ ಬಿಟ್ಟು ಪರಶಿವನನ್ನೇ ಧ್ಯಾನಿಸಬೇಕೆಂದು ತಾತ್ಪರ್ಯವು. "ಶಿವ ಏಕೋಧ್ಯೇಯಃ ಶಿವಂಕರಃ ಸರ್ವಮನ್ಯತ್ ಪರಿತ್ಯಜ್ಯ," ಅಥರ್ವಶಿಖೋಪನಿಷತ್ ೩. ॥೩೬॥

ಎಲೌ ವಿದ್ವಾಂಸರೇ, ಮುಖ್ಯವಾದುದಕ್ಕಿಂತಲೂ ಸಾರತರವಾದುದು ಎಲ್ಲವೂ ಸಂಕ್ಷೇಪವಾಗಿ ಹೇಳಲ್ಪಟ್ಟಿದೆ. ಶಿವಧ್ಯಾನವನ್ನು ನೀವೆಲ್ಲರೂ ಪ್ರಯತ್ನಪೂರ್ವಕವಾಗಿ ಶ್ರದ್ಧೆಯಿಂದ ಎಲ್ಲ ಕಾಲದಲ್ಲಿಯೂ ಮಾಡಿರಿ. ॥೩೭॥

ಇಲ್ಲಿಗೆ ಸೂತಗೀತೆಯಲ್ಲಿ ಸರ್ವಶಾಸ್ತ್ರಾರ್ಥಸಂಗ್ರಹ ವರ್ಣನೆಯೆಂಬ
ಆರನೆಯ ಅಧ್ಯಾಯವು ಮುಗಿದುದು.

|| ಶ್ರೀಃ ||

ಅಥಾಸ್ಯಾಃ ಶ್ರೀಮತ್ಸ್ಕಾಂದಪುರಾಣಾಂತರ್ಗತ ಸೂತಸಂಹಿತಾಯಾಶ್ಚತುರ್ಥಸ್ಯ ಯಜ್ಞವೈಭವಖಂಡಸ್ಯೋಪರಿಭಾಗೇ ಸೂತಗೀತಾ

|| ಸಪ್ತಮೋಽಧ್ಯಾಯಃ ||

ಏಳನೆಯ ಅಧ್ಯಾಯವು

|| ಸೂತ ಉವಾಚ ||

ರಹಸ್ಯಂ ಸಂಪ್ರವಕ್ಷ್ಯಾಮಿ ಸಮಾಸೇನ ನ ವಿಸ್ತರಾತ್ ।
ಶೃಣುತಶ್ರದ್ಧಯಾ ವಿಪ್ರಾಃ ಸರ್ವಸಿದ್ಧ್ಯರ್ಥಮುತ್ತಮಮ್ ॥೧॥

ದೇವತಾಃ ಸರ್ವದೇಹೇಷು ಸ್ಥಿತಾಸ್ಸತ್ಯತಪೋಧನಾಃ ।
ಸರ್ವೇಷಾಂ ಕಾರಣಂ ಸಾಕ್ಷಾತ್ಪರತತ್ತ್ವಮಪಿ ಸ್ಥಿತಮ್ ॥೨॥

ಇದುವರೆಗೆ ಉತ್ತಮಜ್ಞಾನಕ್ಕೆ ಕಾರಣವಾದ ಪರಶಿವನ ಅನುಗ್ರಹದ ಸಿದ್ಧಿಗೋಸ್ಕರ ಪರಶಿವನ ಧ್ಯಾನವು ನೇರವಾಗಿ ಕಾರಣವೆಂದು ಅದನ್ನು ಹೇಳಿ ಆಯಿತು. ಈಗ ಉಪಾಸಕನು ತನ್ನ ಅಂಗಗಳಲ್ಲಿ ಮುಂದೆ ಹೇಳುವಂತೆ ದೇವತೆಗಳನ್ನು ಧ್ಯಾನ ಮಾಡುವುದರಿಂದ ಕ್ರಮವಾಗಿ ಆ ಜ್ಞಾನವು ಉಂಟಾಗುತ್ತದೆಂದು ತಿಳಿಸುತ್ತಾರೆ.

ಸೂತನು ಹೇಳಿದನು—ಎಲೌ ಬ್ರಾಹ್ಮಣರೇ, ವಿಸ್ತಾರಮಾಡದಂತೆ ಸಂಕ್ಷೇಪವಾಗಿ ಸಮಸ್ತರ ಮೋಕ್ಷಕ್ಕೋಸ್ಕರವಾಗಿ ಶ್ರೇಷ್ಠವಾದ ರಹಸ್ಯವನ್ನು ಹೇಳುತ್ತೇನೆ. ಶ್ರದ್ಧೆಯಿಂದ ಕೇಳಿರಿ. ॥೧॥

ಸತ್ಯತಪೋಧನರೇ, ಸತ್ಯವಾದುದನ್ನು ಹೇಳುವುದೂ, ತಪಸ್ಸನ್ನು ಆಚರಿಸುವುದೂ, ಇವನ್ನು ಸಂಪತ್ತಿನಂತೆ ಯಾವಾಗಲೂ ಕಾಪಾಡಿಕೊಂಡಿರುವ ಋಷಿಗಳೇ, ಸಕಲ ಶರೀರಗಳಲ್ಲಿಯೂ ಆಯಾ ಅಭಿಮಾನದೇವತೆಗಳು ನಿಯಾಮಕರಾಗಿರುತ್ತಾರೆ. ಸಕಲ ಜಗತ್ತಿಗೂ ಕಾರಣವಾದ ಸಾಕ್ಷಾತ್ಪರತತ್ತ್ವವೂ ಎಲ್ಲಾ ಶರೀರಗಳಲ್ಲಿಯೂ ವ್ಯಾಪಿಸಿರುತ್ತದೆ. ॥೨॥

ಪಂಚಭೂತಾತ್ಮಕೇ ದೇಹೇ ಸ್ಥೂಲೇ ಷಟ್ಕೋಶಕೇ ಸದಾ ।
ಪೃಥಿವ್ಯಾದಿಕ್ರಮೇಣೈವ ವರ್ತಂತೇ ಪಂಚದೇವತಾಃ ॥೩॥

ಕಾರ್ಯಂ ಬ್ರಹ್ಮಾ ಮಹೀಭಾಗೇ ಕಾರ್ಯಂ ವಿಷ್ಣುರ್ಜಲಾಂಶಕೇ ।
ಕಾರ್ಯಂ ರುದ್ರೋಽಗ್ನಿಭಾಗೇ ಚ ವಾಯ್ವಂಶೇ ಚೇಶ್ವರಃ ಪರಃ ॥೪॥

ಆಕಾಶಾಂಶೇ ಶರೀರಸ್ಯ ಸ್ಥಿತಃ ಸಾಕ್ಷಾತ್ಸದಾಶಿವಃ ।
ಶರೀರಸ್ಯ ಬಹಿರ್ಭಾಗೇ ವಿರಾಡಾತ್ಮಾ ಸ್ಥಿತಃ ಸದಾ ॥೫॥

ಅಂತರ್ಭಾಗೇ ಸ್ವರಾಡಾತ್ಮಾ ಸಮ್ರಾಡ್ದೇಹಸ್ಯ ಮಧ್ಯಮೇ ।
ಜ್ಞಾನೇಂದ್ರಿಯ ಸಮಾಖ್ಯೇಷು ಶ್ರೋತ್ರಾದಿಷು ಯಥಾಕ್ರಮಾತ್॥೬॥

ಚರ್ಮ, ರಕ್ತ, ಮಾಂಸ, ಮೇದಸ್ಸು, ಅಸ್ಥಿ ಮತ್ತು ಮಜ್ಜೆ ಎಂಬ ಆರು ಕೋಶಗಳಿಂದ ಕೂಡಿದ ಪಂಚಭೂತಾತ್ಮಕವಾದ ಸ್ಥೂಲಶರೀರದಲ್ಲಿ ಪೃಥಿವ್ಯಾದಿ ಕ್ರಮವನ್ನನುಸರಿಸಿಯೇ ಬ್ರಹ್ಮ, ವಿಷ್ಣು, ರುದ್ರ, ಈಶ್ವರ ಮತ್ತು ಸದಾಶಿವರೆಂಬ ದೇವತೆಗಳು ಕ್ರಮವಾಗಿರುವರು. ॥೩॥

ಶರೀರದ ಪೃಥಿವ್ಯಂಶದಲ್ಲಿ ಪರವಸ್ತುವಿನ ಕಾರ್ಯರೂಪನಾದ ಬ್ರಹ್ಮನೂ, ಜಲಾಂಶದಲ್ಲಿ ಕಾರ್ಯರೂಪನಾದ ವಿಷ್ಣುವೂ ಅಗ್ನ್ಯಂಶದಲ್ಲಿ ಕಾರ್ಯರೂಪನಾದ ರುದ್ರನೂ, ವಾಯ್ವಂಶದಲ್ಲಿ ಈಶ್ವರನೂ, ಆಕಾಶಾಂಶದಲ್ಲಿ ಸಾಕ್ಷಾತ್ಪರಶಿವನೂ ಅಭಿಮಾನಿಗಳಾಗಿ ನಿಯಾಮಕರಾಗಿ ಇರುತ್ತಾರೆ. ॥೪॥

ಸ್ಥೂಲಶರೀರದ ಬಹಿರ್ಭಾಗದಲ್ಲಿ ಸ್ಥೂಲದೇಹಾಭಿಮಾನಿಯಾದ ವಿರಾಡಾತ್ಮನು ಸದಾ ಇರುತ್ತಾನೆ. ಹೀಗೆ ಒಳಭಾಗದಲ್ಲಿ ಸೂಕ್ಷ್ಮಶರೀರಾಭಿಮಾನಿಯಾದ ಸ್ವರಾಡಾತ್ಮನಿರುತ್ತಾನೆ. ಇವೆರಡಕ್ಕೂ ಮಧ್ಯದಲ್ಲಿ ಕಾರಣಶರೀರಾಭಿಮಾನಿಯಾದ ಸಮ್ರಾಡಾತ್ಮನಿರುತ್ತಾನೆ. ಶ್ರೋತ್ರವೇ ಮೊದಲಾದ ಜ್ಞಾನೇಂದ್ರಿಯಗಳ ಸಮಷ್ಟಿಗಳೊಳಗೆ ಕ್ರಮವಾಗಿ ದಿಕ್ಕು, ವಾಯು, ಸೂರ್ಯ, ವರುಣ, ಪೃಥಿವೀ ಎಂಬ ಹೆಸರುಳ್ಳಪಂಚಭೂತಾಭಿಮಾನಿಗಳಾದ ದೇವತೆಗಳು ಇರುವರು. ಅವರೂ ಧ್ಯೇಯರು. ॥೫-೬॥

ದಿಗ್ವಾಯ್ವರ್ಕ ಜಲಾಧ್ಯಕ್ಷ ಭೂಮಿಸಂಜ್ಞಾಶ್ಚ ದೇವತಾಃ ।
ಕರ್ಮೇಂದ್ರಿಯ ಸಮಾಖ್ಯೇಷು ಪಾದಪಾಣ್ಯಾದಿಷು ಕ್ರಮಾತ್ ॥೭॥

ತ್ರಿವಿಕ್ರಮೇಂದ್ರ ವಹ್ನ್ಯಾಖ್ಯಾ ದೇವತಾಶ್ಚ ಪ್ರಜಾಪತಿಃ ।
ಮಿತ್ರಸಂಜ್ಞಶ್ಚ ವರ್ತಂತೇ ಪ್ರಾಣೇ ಸೂತ್ರಾತ್ಮಸಂಜ್ಞಿತಃ ॥೮॥

ಹಿರಣ್ಯಗರ್ಭೋ ಭಗವಾನಂತಃಕರಣಸಂಜ್ಞಿತೇ ।
ತದವಸ್ಥಾ ಪ್ರಭೇದೇಷು ಚಂದ್ರಮಾ ಮನಸಿ ಸ್ಥಿತಃ ॥೯॥

ಬುದ್ಧೌ ಬೃಹಸ್ಪತಿರ್ವಿಪ್ರಾಃ ಸ್ಥಿತಃ ಕಾಲಾಗ್ನಿರುದ್ರಕಃ ।
ಅಹಂಕಾರೇ ಶಿವಶ್ಚಿತ್ತೇ ರೋಮಸು ಕ್ಷುದ್ರದೇವತಾಃ ॥೧೦॥

ಭೂತಪ್ರೇತಾದಯಸ್ಸರ್ವೇ ದೇಹಸ್ಯಾಸ್ಥಿಷು ಸಂಸ್ಥಿತಾಃ ।
ಪಿಶಾಚಾ ರಾಕ್ಷಸಾಸ್ಸರ್ವೇ ಸ್ಥಿತಾಃ ಸ್ನಾಯುಷು ಸರ್ವಶಃ ॥೧೧॥

ಪಾದ, ಪಾಣಿ ಮೊದಲಾದ ಕರ್ಮೇಂದ್ರಿಯ ಸಮಷ್ಟಿಗಳೊಳಗೆ ಕ್ರಮವಾಗಿ ತ್ರಿವಿಕ್ರಮ, ಇಂದ್ರ, ವಹ್ನಿ, ಪ್ರಜಾಪತಿ ಮತ್ತು ಮಿತ್ರರೆಂಬ ದೇವತೆಗಳು ಧ್ಯೇಯರು. ಪ್ರಾಣದಲ್ಲಿ ಸೂತ್ರಾತ್ಮಸಂಜ್ಞೆಯುಳ್ಳ ದೇವನೂ ಧ್ಯೇಯನು. ॥೭-೮॥

ಅಂತಃಕರಣವೆಂಬ ಸಂಜ್ಞೆಯುಳ್ಳ ಅವಯವದಲ್ಲಿ ಅದರ ಸಮಷ್ಟ್ಯಭಿಮಾನಿಯಾಗಿ ಪೂಜ್ಯನಾದ ಹಿರಣ್ಯಗರ್ಭನು ಇರುವನು. ಅದರ ರೂಪಾಂತರ ಭೇದಗಳೊಳಗೆ ಒಂದಾದ ಮನಸ್ಸಿನಲ್ಲಿ ಚಂದ್ರನಿರುವನು. ॥೯॥

ಎಲೌ ಬ್ರಾಹ್ಮಣರೇ, ಬುದ್ಧಿಯಲ್ಲಿ ಬೃಹಸ್ಪತಿಯೂ, ಅಹಂಕಾರದಲ್ಲಿ ಕಾಲಾಗ್ನಿರುದ್ರನೂ, ಚಿತ್ತದಲ್ಲಿ ಶಿವನೂ, ರೋಮಗಳಲ್ಲಿ ಕ್ಷುದ್ರ ಎಂದರೆ ಇತರ ಚಿಕ್ಕ ದೇವತೆಗಳೂ ಇರುತ್ತಾರೆ. ॥೧೦॥

ಭೂತಪ್ರೇತ ಮೊದಲಾದುವುಗಳೆಲ್ಲವೂ ಶರೀರದ ಮೂಳೆಗಳಲ್ಲಿರುತ್ತವೆ. ಎಲ್ಲ ಪಿಶಾಚಗಳೂ ಮತ್ತು ರಾಕ್ಷಸರೂ ಎಲ್ಲ ಕಡೆಗಳಲ್ಲಿಯೂ ಮಾಂಸಖಂಡಗಳೊಳಗಿರುವರು. ॥೧೧॥

ಮಜ್ಜಾಖ್ಯೇ ಪಿತೃಗಂಧರ್ವಾಸ್ತ್ವಙ್ಮಾಂಸರುಧಿರೇಷು ಚ ।
ವರ್ತಂತೇ ತತ್ರ ಸಂಸಿದ್ಧಾ ದೇವತಾಸ್ಸಕಲಾ ದ್ವಿಜಾಃ ॥೧೨॥

ತ್ರಿಮೂರ್ತೀನಾಂ ತು ಯೋ ಬ್ರಹ್ಮಾ ತಸ್ಯ ಘೋರಾ ತನುರ್ದ್ವಿಜಾಃ ।
ದಕ್ಷಿಣಾಕ್ಷಿಣಿ ಜಂತೂನಾಮಂತರ್ಭಾಗೇ ರವಿರ್ಬಹಿಃ ॥೧೩॥

ತ್ರಿಮೂರ್ತೀನಾಂ ತು ಯೋ ಬ್ರಹ್ಮಾ ತಸ್ಯ ಶಾಂತಾ ತನುರ್ದ್ವಿಜಾಃ ।
ವರ್ತತೇ ವಾಮನೇತ್ರಾಂತರ್ಭಾಗೇ ಬಾಹ್ಯೇ ನಿಶಾಕರಃ ॥೧೪॥

ತ್ರಿಮೂರ್ತೀನಾಂ ತು ಯೋ ವಿಷ್ಣುಸ್ಸ ಕಂಠೇ ವರ್ತತೇ ಸದಾ ।
ಅಂತಶ್ಶಾಂತತನುರ್ಘೋರಾ ತನುರ್ಬಾಹ್ಯೇ ದ್ವಿಜರ್ಷಭಾಃ ॥೧೫॥

ತ್ರಿಮೂರ್ತೀನಾಂ ತು ಯೋ ರುದ್ರೋ ಹೃದಯೇ ವರ್ತತೇ ಸದಾ ।
ಅಂತಶ್ಶಾಂತತನುರ್ಘೋರಾ ತನುರ್ಬಾಹ್ಯೇ ದ್ವಿಜರ್ಷಭಾಃ ॥೧೬॥

ಎಲೌ ದ್ವಿಜರೇ, ಕೊಬ್ಬಿನಲ್ಲಿ ಪಿತೃಗಂಧರ್ವರೂ, ಚರ್ಮಮಾಂಸರಕ್ತಗಳಲ್ಲಿ ಸಕಲಸಿದ್ಧರೂ ಮತ್ತು ದೇವತೆಗಳೂ ಇರುತ್ತಾರೆ. ||೧೨||

ಎಲೌ ಬ್ರಾಹ್ಮಣರೇ, ತ್ರಿಮೂರ್ತಿಗಳೊಳಗೆ ಯಾವ ಬ್ರಹ್ಮನಿದ್ದಾನೋ, ಆತನ ಘೋರ ತನುವು ಸಕಲ ಜಂತುಗಳ ಬಲಗಣ್ಣಿನಲ್ಲಿ ಒಳಭಾಗದಲ್ಲಿರುತ್ತದೆ. ಹೊರಭಾಗದಲ್ಲಿ ಸೂರ್ಯನಾಗಿರುತ್ತದೆ. ||೧೩||

ಬ್ರಾಹ್ಮಣರೇ, ತ್ರಿಮೂರ್ತಿಗಳೊಳಗೆ ಯಾರು ಬ್ರಹ್ಮನೋ ಅವನ ಶಾಂತ ತನುವು ಎಡಗಣ್ಣಿನ ಒಳಭಾಗದಲ್ಲಿರುತ್ತದೆ. ಹೊರಭಾಗದಲ್ಲಿ ಚಂದ್ರನೆಂಬುದಾಗಿ ಇರುತ್ತದೆ. ||೧೪||

ತ್ರಿಮೂರ್ತಿಗಳೊಳಗೆ ಯಾರು ವಿಷ್ಣುವೋ ಅವನು ಎಲ್ಲ ಕಾಲದಲ್ಲಿಯೂ ಕಂಠದಲ್ಲಿರುತ್ತಾನೆ. ಎಲೌ ಬ್ರಾಹ್ಮಣಶ್ರೇಷ್ಠರೇ, ಅವನು ಒಳಗಡೆ ಶಾಂತವಾದ ಶರೀರವುಳ್ಳವನು. ಹೊರಭಾಗದಲ್ಲಿ ಅವನ ಶರೀರವು ಭಯಂಕರವಾಗಿದೆ. ||೧೫||

ತ್ರಿಮೂರ್ತಿಗಳೊಳಗೆ ಯಾವನು ರುದ್ರನೋ ಅವನು ಸದಾ ಹೃದಯದಲ್ಲಿರುತ್ತಾನೆ. ಎಲೌ ಬ್ರಾಹ್ಮಣಶ್ರೇಷ್ಠರೇ, ಅವನು ಒಳಭಾಗದಲ್ಲಿ ಸೌಮ್ಯವಾದ ಶರೀರವುಳ್ಳವನು. ಮತ್ತು ಹೊರಭಾಗದಲ್ಲಿ ಅವನ ಶರೀರವು ಭಯಂಕರವಾದದ್ದು. ||೧೬||

ಸರ್ವೇಷಾಂ ಕಾರಣಂ ಯತ್ತದ್ಬ್ರಹ್ಮ ಸತ್ಯಾದಿಲಕ್ಷಣಮ್ ।
ಬ್ರಹ್ಮರಂಧ್ರೇ ಮಹಾಸ್ಥಾನೇ ವರ್ತತೇ ಸತತಂ ದ್ವಿಜಾಃ ॥೧೭॥

ಚಿಚ್ಛಕ್ತಿಃ ಪರಮಾ ದೇಹಮಧ್ಯಮೇ ಸುಪ್ರತಿಷ್ಠಿತಾ ।
ಮಾಯಾಶಕ್ತಿರ್ಲಲಾಟಾಗ್ರಭಾಗೇ ವ್ಯೋಮಾಂಬುಜಾದಯಃ ॥೧೮॥

ನಾದರೂಪಾ ಪರಾ ಶಕ್ತಿರ್ಲಲಾಟಸ್ಯ ತು ಮಧ್ಯಮೇ ।
ಭಾಗೇ ಬಿಂದುಮಯೀ ಶಕ್ತಿರ್ಲಲಾಟಸ್ಯಾಪರಾಂಶಕೇ ॥೧೯॥

ಬಿಂದುಮಧ್ಯೇ ತು ಜೀವಾತ್ಮಾ ಸೂಕ್ಷ್ಮರೂಪೇಣ ವರ್ತತೇ ।
ಹೃದಯೇ ಸ್ಥೂಲರೂಪೇಣ ಮಧ್ಯಮೇನ ತು ಮಧ್ಯಮೇ ॥೨೦॥

ದೇವೀ ಸರಸ್ವತೀ ಸಾಕ್ಷಾದ್ಬ್ರಹ್ಮಪತ್ನೀ ಸನಾತನೀ ।
ಜಿಹ್ವಾಗ್ರೇ ವರ್ತತೇ ನಿತ್ಯಂ ಸರ್ವವಿದ್ಯಾಪ್ರದಾಯಿನೀ ॥೨೧॥

ಎಲೌ ಬ್ರಾಹ್ಮಣರೇ, ಸಚ್ಚಿದಾನಂದಲಕ್ಷಣವುಳ್ಳ ಸಕಲ ಕಾರಣವಾದುದು ಯಾವ ಬ್ರಹ್ಮವೋ ಅದು ಬ್ರಹ್ಮರಂಧ್ರವೆಂಬ ಮಹಾಸ್ಥಾನದಲ್ಲಿ ಎಲ್ಲಾ ಕಾಲದಲ್ಲಿಯೂ ಇರುವುದು. ॥೧೭॥

ಶರೀರದ ಮಧ್ಯಭಾಗದಲ್ಲಿ ಶ್ರೇಷ್ಠವಾದ ಚೇತನಶಕ್ತಿಯು ಸ್ಥಿರವಾಗಿದೆ. ಬ್ರಹ್ಮರಂಧ್ರಕ್ಕಿಂತಲೂ ಆಕಾಶಕಮಲದ ಕೆಳಭಾಗದಲ್ಲಿರುವ ಲಲಾಟಾಗ್ರಪ್ರದೇಶದಲ್ಲಿ ಮಾಯಾಶಕ್ತಿಯೂ ಇರುವುದು. ॥೧೮॥

ನಾದರೂಪವಾದ ಪರಾಶಕ್ತಿಯು ಹಣೆಯ ಮಧ್ಯದಲ್ಲಿಯೂ ಬಿಂದುಮಯವಾದ ಶಕ್ತಿಯು ಹುಬ್ಬುಗಳ ಮಧ್ಯದಲ್ಲಿಯೂ ಇರುವುದು. ॥೧೯॥

ಆ ಬಿಂದುವಿನ ಮಧ್ಯದಲ್ಲಿ ಜೀವಾತ್ಮನು ಸೂಕ್ಷ್ಮರೂಪದಿಂದ ಇರುತ್ತಾನೆ. ಹೃದಯದಲ್ಲಿ ಸ್ಥೂಲರೂಪದಿಂದಲೂ, ಮಧ್ಯಭಾಗದಲ್ಲಿ ಮಧ್ಯಮರೂಪದಿಂದಲೂ ಅವನು ಇರುತ್ತಾನೆ. ॥೨೦॥

ಬ್ರಹ್ಮಪತ್ನಿಯೂ, ಸನಾತನಿಯೂ ಮತ್ತು ಪೂಜ್ಯಳೂ ಆದ ಸರಸ್ವತಿಯು ಎಲ್ಲಕಾಲದಲ್ಲಿಯೂ ಸರ್ವವಿದ್ಯಾಪ್ರದಾಯಕಳಾಗಿ ನಾಲಿಗೆಯ ತುದಿಯಲ್ಲಿ ಮುಂಭಾಗದಲ್ಲಿ ಇರುವಳು. ॥೨೧॥

ವಿಷ್ಣುಪತ್ನೀ ಮಹಾಲಕ್ಷ್ಮೀಃ ವರ್ತತೇಽನಾಹತೇ ಸದಾ ।
ರುದ್ರಪತ್ನೀ ತು ರುದ್ರೇಣ ಪಾರ್ವತೀ ಸಹ ವರ್ತತೇ ॥೨೨॥

ಸರ್ವತ್ರ ವರ್ತತೇ ಸಾಕ್ಷಾಚ್ಛಿವಃ ಸಾಂಬಸ್ಸನಾತನಃ ।
ಸತ್ಯಾದಿಲಕ್ಷಣಶ್ಶುದ್ಧಃ ಸರ್ವದೇವ ನಮಸ್ಕೃತಃ ॥೨೩॥

ಸಮ್ಯಕ್ಜ್ಞಾನವತಾಂ ದೇಹೇ ದೇವತಾಸ್ಸಕಲಾ ಅಮೂಃ ।
ಪ್ರತ್ಯಗಾತ್ಮತಯಾ ಭಾಂತಿ ದೇವತಾರೂಪತೋಽಪಿ ಚ ॥೨೪॥

ವೇದಮಾರ್ಗೈಕನಿಷ್ಠಾನಾಂ ವಿಶುದ್ಧಾನಾಂ ತು ವಿಗ್ರಹೇ ।
ದೇವತಾರೂಪತೋ ಭಾಂತಿ ದ್ವಿಜಾ ನ ಪ್ರತ್ಯಗಾತ್ಮನಾ ॥೨೫॥

ತಾಂತ್ರಿಕಾಣಾಂ ಶರೀರೇ ತು ದೇವತಾಸ್ಸಕಲಾ ಅಮೂಃ ।
ವರ್ತಂತೇ ನ ಪ್ರಕಾಶಂತೇ ದ್ವಿಜೇಂದ್ರಾಶ್ಶುದ್ಧ್ಯಭಾವತಃ ॥೨೬॥

ಅನಾಹತವೆಂಬ ಹೃದಯಮಧ್ಯಸ್ಥಾನದಲ್ಲಿ, ವಿಷ್ಣುಪತ್ನಿಯಾದ ಮಹಾಲಕ್ಷ್ಮಿಯು ಯಾವಾಗಲೂ ಇರುತ್ತಾಳೆ. ರುದ್ರಪತ್ನಿಯಾದ ಪಾರ್ವತಿಯು ರುದ್ರನೊಡನೆಯೇ ಇರುತ್ತಾಳೆ. ॥೨೨॥

ಸನಾತನನಾದ ಸಾಕ್ಷಾತ್ಸಾಂಬಶಿವನು ಸಚ್ಚಿದಾನಂದ ಲಕ್ಷಣನೂ, ಪರಿಶುದ್ಧನೂ ಮತ್ತು ಸಕಲ ದೇವತೆಗಳಿಂದ ನಮಸ್ಕರಿಸಲ್ಪಟ್ಟವನೂ ಆಗಿ ಎಲ್ಲಾ ಕಡೆಯಲ್ಲಿಯೂ ವ್ಯಾಪಕನಾಗಿರುತ್ತಾನೆ. ॥೨೩॥

ಸಮ್ಯಗ್ಜ್ಞಾನವುಳ್ಳವರಿಗೆ ದೇಹದಲ್ಲಿ ಎಲ್ಲ ದೇವತೆಗಳೂ ಪ್ರತ್ಯಗಾತ್ಮರೂಪದಿಂದಲೇ ತೋರುತ್ತಾರೆ ; ಮತ್ತು ದೇವತಾರೂಪದಿಂದಲೂ ತೋರುತ್ತಾರೆ. ॥೨೪॥

ವೈದಿಕಮಾರ್ಗದಲ್ಲಿ ಮಾತ್ರ ಆಸಕ್ತರಾದವರ ಮತ್ತು ಪರಿಶುದ್ಧರಾದವರ ಶರೀರದಲ್ಲಿ ಆಯಾ ಸ್ಥಾನಗಳಲ್ಲಿ ಆಯಾ ದೇವತೆಗಳು ತೋರುತ್ತಾರೆ. ಕರ್ಮಮಾರ್ಗದಲ್ಲಿ ಮಾತ್ರ ಆಸಕ್ತರಾದವರಿಗೆ ಆತ್ಮಜ್ಞಾನವಿರುವುದಿಲ್ಲವಾದ್ದರಿಂದ ಪ್ರತ್ಯಗಾತ್ಮರೂಪದಿಂದ ತೋರುವುದಿಲ್ಲವು. ॥೨೫॥

ವೇದಾನಧಿಕಾರಿಗಳಾಗಿ ಶೈವವೈಷ್ಣವಾಗಮಗಳಲ್ಲಿ ಹೇಳಲ್ಪಟ್ಟ ಸಂಸ್ಕಾರಗಳಿಂದ ಸಂಸ್ಕೃತರಾದವರ ಶರೀರಗಳಲ್ಲಿರತಕ್ಕ ಈ ಮೇಲೆ ಹೇಳಲ್ಪಟ್ಟ ದೇವತೆಗಳು,

ಯಥಾ ಜಾತಜನಾನಾಂ ತು ಶರೀರೇ ಸರ್ವದೇವತಾಃ ।
ತಿರೋಭೂತತಯಾ ನಿತ್ಯಂ ವರ್ತಂತೇ ಮುನಿಸತ್ತಮಾಃ ॥೨೭॥

ಅತಶ್ಚ ಭೋಗಮೋಕ್ಷಾರ್ಥೀ ಶರೀರಂ ದೇವತಾಮಯಂ ।
ಸ್ವಕೀಯಂ ಪರಕೀಯಂ ಚ ಪೂಜಯೇತ್ತು ವಿಶೇಷತಃ ॥೨೮॥

ನಾವಮಾನಂ ಸದಾ ಕುರ್ಯಾನ್ಮೋಹತೋ ವಾಽಪಿ ಮಾನವಃ ।
ಯದಿ ಕುರ್ಯಾತ್ಪ್ರಮಾದೇನ ಪತತ್ಯೇವ ಭವೋದಧೌ ॥೨೯॥

ದುರ್ವೃತ್ತಮಪಿ ಮೂರ್ಖಂ ಚ ಪೂಜಯೇದ್ದೇವತಾತ್ಮನಾ ।
ದೇವತಾರೂಪತಃ ಪಶ್ಯನ್ ಮುಚ್ಯತೇ ಭವಬಂಧನಾತ್ ॥೩೦॥

ನಿಜವಾದ ಪರಿಶುದ್ಧಿಯಿಲ್ಲದೆ (ಜ್ಞಾನಶುದ್ಧಿಯಿಲ್ಲದ್ದರಿಂದ) ಇರುವುದು ಮಾತ್ರವಲ್ಲದೆ ಪ್ರಕಾಶಿಸುವುದೂ ಇಲ್ಲವು. ॥೨೬॥

ಎಲೌ ಋಷಿಶ್ರೇಷ್ಠರೇ, ಅಜ್ಞರಾದ ಜನಗಳ ಶರೀರದಲ್ಲಿ ಸಕಲ ದೇವತೆಗಳೂ ಅಂತರ್ಧಾನರೂಪದಿಂದ ಯಾವಾಗಲೂ ಇರುತ್ತಾರೆ. ॥೨೭॥

ಆದುದರಿಂದ ಸಂಸಾರದಿಂದ ಮೋಕ್ಷವನ್ನು ಹೊಂದಲಪೇಕ್ಷೆಯುಳ್ಳವನು ಸಕಲ ದೇವತಾಮಯವಾದ ತನ್ನ ಮತ್ತು ಅನ್ಯರ ಶರೀರವನ್ನು ವಿಶೇಷವಾಗಿ ಪೂಜಿಸಬೇಕು. ॥೨೮॥

ಅಜ್ಞಾನದಿಂದಾಗಲೀ ಮನುಷ್ಯನು ಮೇಲೆ ಹೇಳಿದಂತೆ ದೇವತೆಗಳಿಗೆ ಆವಾಸಸ್ಥಾನವಾಗಿರುವ ಈ ದೇಹಕ್ಕೆ ಅವಮಾನವನ್ನು ಯಾವಾಗಲೂ ಮಾಡಬಾರದು. ಪ್ರಮಾದದಿಂದಾಗಲೀ ಹಾಗೆ ಮಾಡಿದ್ದೇ ಆದರೆ ಸಂಸಾರಸಾಗರದಲ್ಲಿ ಬಿದ್ದೇ ಬೀಳುತ್ತಾನೆ. ॥೨೯॥

ದುರ್ಮಾರ್ಗವುಳ್ಳವನನ್ನಾದರೂ, ಮೂರ್ಖನನ್ನಾದರೂ ಕೂಡ, ದೇವತಾತ್ಮನಾದ್ದರಿಂದ ಪೂಜಿಸಬೇಕು. ದೇವತಾರೂಪದಿಂದ ಎಲ್ಲ ದೇಹಗಳನ್ನೂ ಭಾವಿಸತಕ್ಕವನು ಸಂಸಾರಪಾಶದಿಂದ ಮುಕ್ತಿಯನ್ನು ಹೊಂದುತ್ತಾನೆ. ॥೩೦॥

ಮೋಹೇನಾಪಿ ಸದಾ ನೈವ ಕುರ್ಯಾದಪ್ರಿಯಭಾಷಣಂ ।
ಯದಿ ಕುರ್ಯಾತ್ಪ್ರಮಾದೇನ ಹಂತಿ ತಂ ದೇವತಾ ಪರಾ ॥೩೧॥

ನ ಕ್ಷತಂ ವಿಗ್ರಹೇ ಕುರ್ಯಾದಸ್ತ್ರಶಸ್ತ್ರನಖಾದಿಭಿಃ ।
ತಥಾ ನ ಲೋಹಿತಂ ಕುರ್ಯಾದ್ಯದಿ ಕುರ್ಯಾತ್ಪತತ್ಯಧಃ ॥೩೨॥

ಸ್ವದೇಹೇ ಪರದೇಹೇ ವಾ ನ ಕುರ್ಯಾದಂಕನಂ ನರಃ ।
ಯದಿ ಕುರ್ಯಾತ್ತು ಚಕ್ರಾದ್ಯೈಃ ಪತತ್ಯೇವ ನ ಸಂಶಯಃ ॥೩೩॥

ರಹಸ್ಯಂ ಸರ್ವಶಾಸ್ತ್ರಾಣಾಂ ಮಯಾ ಪ್ರೋಕ್ತಂ ಸಮಾಸತಃ ।
ಶರೀರಂ ದೇವತಾರೂಪಂ ಭಜಧ್ವಂ ಯೂಯಮಾಸ್ತಿಕಾಃ ॥೩೪॥

ಇತಿ ಶ್ರೀಸ್ಕಾಂದಪುರಾಣೇ ಸೂತಸಂಹಿತಾಯಾಂ ಚತುರ್ಥಸ್ಯ
ಯಜ್ಞವೈಭವಖಂಡಸ್ಯೋಪರಿಭಾಗೇ ಸೂತಗೀತಾಸೂಪನಿಷತ್ಸು
ಸಪ್ತಮೋಽಧ್ಯಾಯಃ

ಯಾವಾಗಲೂ ಅಜ್ಞಾನದಿಂದಲಾದರೂ ಕೆಟ್ಟಮಾತನ್ನು ಆಡಲೇಬಾರದು ಹಾಗೆ ಒಂದುವೇಳೆ ಪ್ರಮಾದದಿಂದಾಗಲೀ ಆಡಿದ್ದೇ ಆದರೆ ಪರದೇವತೆಯು ಅಂತಹವನನ್ನು ನಾಶಪಡಿಸುತ್ತಾಳೆ. ॥೩೧॥

ಮಂತ್ರಬಲವುಳ್ಳ ಅಸ್ತ್ರ, ಶಸ್ತ್ರ, (ಬಾಣ ಮುಂತಾದ ಆಯುಧ) ಉಗುರು ಇವೇ ಮೊದಲಾದವುಗಳಿಂದ ಶರೀರದಲ್ಲಿ ವ್ರಣವನ್ನೂ ಹಾಗೆಯೇ ರಕ್ತಪಾತವನ್ನೂ ಉಂಟುಮಾಡಬಾರದು. ಹಾಗೇನಾದರೂ ಮಾಡಿದರೆ ನರಕದಲ್ಲಿ ಬೀಳುತ್ತಾನೆ.॥೩೨॥

ಮನುಷ್ಯನು ತನ್ನ ದೇಹದಲ್ಲಿಯಾಗಲೀ, ಪರರ ದೇಹದಲ್ಲಾಗಲೀ ಚಕ್ರಾದಿಗಳಿಂದ ಗುರುತನ್ನು ಮಾಡಿಕೊಳ್ಳಬಾರದು. ಮಾಡಿಸಿಕೊಳ್ಳಲೂ ಬಾರದು. ಹಾಗೆ ಮಾಡಿದರೆ ಇಬ್ಬರೂ ಪತಿತರಾಗುತ್ತಾರೆ. ಇದರಲ್ಲಿ ಸಂಶಯವಿಲ್ಲವು. ॥೩೩॥

ಎಲೌ ಆಸ್ತಿಕರೇ, ಸಕಲ ಶಾಸ್ತ್ರಗಳ ರಹಸ್ಯವು ಸಂಕ್ಷೇಪವಾಗಿ ನನ್ನಿಂದ ಹೇಳಲ್ಪಟ್ಟಿತು. ನೀವು ಯಾವಾಗಲೂ ಈ ಶರೀರವನ್ನು ದೇವತಾರೂಪವನ್ನಾಗಿ ಭಜಿಸುವವರಾಗಿರಿ. ॥೩೪॥

ಇಲ್ಲಿಗೆ ಸೂತಗೀತೆಯಲ್ಲಿ ದೇಹಗಳಲ್ಲಿರುವ ದೇವತೆಗಳ ರಹಸ್ಯವರ್ಣನೆ ಎಂಬ
ಏಳನೆಯ ಅಧ್ಯಾಯವು ಮುಗಿದುದು.

|| ಶ್ರೀಃ ||

ಅಥಾಸ್ಯಾಃ ಶ್ರೀಮತ್ಸ್ಕಾಂದಪುರಾಣಾಂತರ್ಗತ ಸೂತಸಂಹಿತಾಯಾಶ್ಚತುರ್ಥಸ್ಯ ಯಜ್ಞವೈಭವಖಂಡಸ್ಯೋಪರಿಭಾಗೇ ಸೂತಗೀತಾ

|| ಅಷ್ಟಮೋಽಧ್ಯಾಯಃ ||

ಎಂಟನೆಯ ಅಧ್ಯಾಯವು

|| ಸೂತ ಉವಾಚ ||

ಅಥ ವಕ್ಷ್ಯೇ ಸಮಾಸೇನ ಸರ್ವವೇದಾಂತಸಂಗ್ರಹಂ ।
ಯಂ ವಿದಿತ್ವಾ ನರಸ್ಸಾಕ್ಷಾನ್ನಿರ್ವಾಣಮಧಿಗಚ್ಛತಿ ||೧||

ಪರಾತ್ಪರತರಂ ತತ್ತ್ವಂ ಶಿವಸ್ಸತ್ಯಾದಿಲಕ್ಷಣಃ ।
ತಸ್ಯಾಸಾಧಾರಣೀ ಮೂರ್ತಿರಂಬಿಕಾಸಹಿತಾ ಸದಾ ||೨||

ಸೂತಮುನಿಯು ಹೇಳಿದನು---ಎಲೌ ಬ್ರಾಹ್ಮಣರೇ, ಅನಂತರದಲ್ಲಿ, ಯಾವುದನ್ನು ತಿಳಿಯುವುದರಿಂದ ಮನುಷ್ಯನು ಪ್ರತ್ಯಕ್ಷವಾಗಿ ಮುಕ್ತಿಯನ್ನು ಹೊಂದುತ್ತಾನೋ ಅಂತಹ ಸಕಲ ವೇದಾಂತಗಳ ತಾತ್ಪರ್ಯಸಂಗ್ರಹವನ್ನು ಸಂಕ್ಷೇಪವಾಗಿ ಹೇಳುತ್ತೇನೆ. ವೇದಾಂತದಲ್ಲಿ ತಿಳಿಯಬೇಕಾದ ಬ್ರಹ್ಮತತ್ವದ ಸ್ವರೂಪವೂ, ಅದನ್ನು ಪಡೆಯುವ ಉಪಾಯವಾದ ಜ್ಞಾನ ಮತ್ತು ಅದರ ಸ್ಥಾನಗಳಾದ ಶ್ರವಣಮನನಾದಿಗಳೂ, ಅದರ ಫಲವೂ, ಇವನ್ನು ಹೇಳಿ ಆಯಿತು. ಅದರಲ್ಲಿ ವೇದ್ಯಸ್ವರೂಪದ ಸಕಲ ನಿಷ್ಕಲ ಭೇದಗಳನ್ನು ತಿಳಿಸುತ್ತಾರೆ.

ಪರವಸ್ತುವಿಗಿಂತಲೂ ಪರತರವಾದ ತತ್ತ್ವವು ಸತ್ಯಾದಿಲಕ್ಷಣವುಳ್ಳ ಶಿವನು. ಆತನ ಅಸಾಧಾರಣವಾದ ಸಕಲ ರೂಪವು ಅಂಬಿಕೆಯಿಂದ ಕೂಡಿದ ಅರ್ಧನಾರೀಶ್ವರ ರೂಪವಾದ ಸದಾಶಿವಮೂರ್ತಿಯು. ||೧-೨||

ಸ್ವಸ್ವರೂಪಮಹಾನಂದ ಪ್ರಮೋದಾತ್ತಾಂಡವಪ್ರಿಯಃ ।
ಶಿವಾದಿನಾಮಾನ್ಯೇವಾಸ್ಯ ನಾಮಾನಿ ಮುನಿಪುಂಗವಾಃ ॥೩॥

ಬ್ರಹ್ಮಾ ವಿಷ್ಣುಶ್ಚ ರುದ್ರಶ್ಚ ಪರತತ್ತ್ವವಿಭೂತಯಃ ।
ತ್ರಿಮೂರ್ತೀನಾಂ ತು ರುದ್ರಸ್ತು ವರಿಷ್ಠೋ ಬ್ರಹ್ಮಣೋ ಹರೇಃ ॥೪॥

ಸಂಸಾರಕಾರಣಂ ಮಾಯಾ ಸಾ ಸದಾ ಸದ್ವಿಲಕ್ಷಣಾ ।
ಪ್ರತೀತ್ಯೈವ ತು ಸದ್ಭಾವಃ ತಸ್ಯಾ ನೈವ ಪ್ರಮಾಣತಃ ॥೫॥

ಸಾಽಪಿ ಬ್ರಹ್ಮಾತಿರೇಕೇಣ ವಸ್ತುತೋ ನೈವ ವಿದ್ಯತೇ ।
ತತ್ತ್ವಜ್ಞಾನೇನ ಮಾಯಾಯಾ ಬಾಧೋ ನಾನ್ಯೇನ ಕರ್ಮಣಾ ॥೬॥

ಋಷಿಶ್ರೇಷ್ಠರೇ, ಶಿವಶಕ್ತ್ಯಾತ್ಮಕವಾದ ಆ ಸದಾಶಿವಮೂರ್ತಿಯು ಸ್ವಸ್ವರೂಪವೆಂಬ ನಿಷ್ಕಲಮಹಾನಂದದ ಸಂತೋಷಾತಿಶಯದಿಂದ ಲಾಸ್ಯತಾಂಡವರೂಪವಾದ ನಾಟ್ಯದಲ್ಲಿ ಪ್ರೀತಿಯುಳ್ಳದ್ದು. ಅದಕ್ಕೆ ಶಿವನೇ ಮೊದಲಾದ ಹೆಸರುಗಳು ಪ್ರಸಿದ್ಧವಾಗಿವೆ. ॥೩॥

ಪರತತ್ವದ ವಿಭೂತಿಗಳೇ ಬ್ರಹ್ಮಾ, ವಿಷ್ಣು, ಮಹೇಶ್ವರರು. ಆ ತ್ರಿಮೂರ್ತಿಗಳೊಳಗೂ ಬ್ರಹ್ಮ ಮತ್ತು ವಿಷ್ಣುಗಳಿಗಿಂತಲೂ ರುದ್ರನೇ ಅತ್ಯಂತ ಶ್ರೇಷ್ಠನು. ॥೪॥

ಜನನಮರಣವೆಂಬ ಈ ಸಂಸಾರದಲ್ಲಿನ ವ್ಯವಹಾರಕ್ಕೆ ಮೂಲವಾದುದು ಮಾಯೆಯು. ಅದು ಎಲ್ಲ ಕಾಲದಲ್ಲಿಯೂ ಸದ್ವಸ್ತುವಿಗಿಂತಲೂ ವಿಜಾತೀಯವಾದುದು. ಅದರ (ಮಾಯೆಯ) ಇರುವಿಕೆಯೂ ಕೂಡ ಅಜ್ಞಾನಕಾಲದಲ್ಲಿನ ಕೇವಲ ಪ್ರತೀತಿಮಾತ್ರವಾಗಿದೆ. ಆದುದರಿಂದ ಅದು ಪ್ರಾಮಾಣಿಕವಾದುದಲ್ಲವು. ಯಾವ ಪ್ರಮಾಣದಿಂದಲೂ ಮಾಯೆಯ ಸ್ವತಂತ್ರವಾದ ತ್ರಿಕಾಲಾಬಾಧ್ಯವಾದ ಇರುವಿಕೆಯನ್ನು ಸ್ಥಾಪಿಸಲು ಸಾಧ್ಯವಿಲ್ಲವೆಂದು ತಾತ್ಪರ್ಯವು. ॥೫॥

ಆ ಮಾಯೆಯೂ ಕೂಡ ಬ್ರಹ್ಮವಸ್ತುವಿಗಿಂತಲೂ ಭಿನ್ನವಾಗಿ ವಾಸ್ತವವಾಗಿ ಇಲ್ಲವೇ ಇಲ್ಲವು. ಅದರ ನಿವೃತ್ತಿಯೂ ಕೂಡ ಪರಮಾರ್ಥವಾದ ಜ್ಞಾನಮಾತ್ರದಿಂದಲ್ಲದೆ ಬೇರೆ ಯಾವ ಕರ್ಮದಿಂದಲೂ ನೇರವಾಗಿ ಆಗಲಾರದು. ॥೬॥

ಜ್ಞಾನಂ ವೇದಾಂತವಾಕ್ಯೋತ್ಥಂ ಬ್ರಹ್ಮಾತ್ಮೈಕತ್ವಗೋಚರಮ್ ।
ತಚ್ಚ ದೇವಪ್ರಸಾದೇನ ಗುರೋಸ್ಸಾಕ್ಷಾನ್ನಿರೀಕ್ಷಣಾತ್ ॥೭॥

ಜಾಯತೇ ಶಕ್ತಿಪಾತೇನ ವಾಕ್ಯಾದೇವಾಧಿಕಾರಿಣಾಮ್ ।
ಜ್ಞಾನೇಚ್ಛಾಕಾರಣಂ ದಾನಂ ಯಜ್ಞಾಶ್ಚ ವಿವಿಧಾ ಅಪಿ ॥೮॥

ತಪಾಂಸಿ ಸರ್ವವೇದಾನಾಂ ವೇದಾಂತಾನಾಂ ತಥೈವ ಚ ।
ಪುರಾಣಾನಾಂ ಸಮಸ್ತಾನಾಂ ಸ್ಮೃತೀನಾಂ ಭಾರತಸ್ಯ ಚ ॥೯॥

ವೇದಾಂಗಾನಾಂ ಚ ಸರ್ವೇಷಾಮಪಿ ವೇದಾರ್ಥಪಾರಗಾಃ ।
ಅಧ್ಯಾಪನಂ ಚಾಧ್ಯಯನಂ ವೇದಾರ್ಥೇ ತ್ವರಮಾಣತಾ ॥೧೦॥

ಜ್ಞಾನವೆಂದರೆ ವೇದಾಂತವಾಕ್ಯಗಳಿಂದುಂಟಾದ ಪರಬ್ರಹ್ಮ ಮತ್ತು ಜೀವಾತ್ಮರ ಅಭೇದ ವಿಷಯಕವಾದ ಅಪರೋಕ್ಷಾನುಭವವು. ಆ ಜ್ಞಾನವೂ ಕೂಡ ಸಾಕ್ಷಾದ್ಗುರುವಿನ ಕೃಪೆಯಿಂದಲೂ ಮತ್ತು ದೇವಾನುಗ್ರಹದಿಂದಲೂ ಉಂಟಾಗುತ್ತದೆ. ಶಮದಮಾದಿಗುಣಸಂಪನ್ನರಾದ ಅಧಿಕಾರಿಗಳಿಗೆ ಗುರುವಿನ ಅನುಗ್ರಹಪೂರ್ವಕವಾದ ದೃಷ್ಟಿಯಿಂದ ಶಕ್ತಿಯು ಬಂದು ಆ ಸಾಕ್ಷಾತ್ಕಾರವು ಉಂಟಾಗುತ್ತದೆ. ॥೭॥

ಎಲೌ ವೇದಾರ್ಥಪಾರಂಗತರೇ, ಜ್ಞಾನದ ಇಚ್ಛೆಯಲ್ಲಿ ಕಾರಣಗಳಾವುವೆಂದರೆ, ಒಳ್ಳೆಯ ದೇಶಕಾಲಪಾತ್ರಗಳಲ್ಲಿ ದಾನವೂ, ನಾನಾವಿಧಗಳಾದ ಪಂಚಮಹಾಯಜ್ಞಾದಿಸತ್ಕರ್ಮಗಳೂ, ತಪಸ್ಸುಗಳೂ, ಸಕಲ ವೇದಗಳ ಮತ್ತು ವೇದಾಂತಗಳ, ಪುರಾಣಗಳ, ಸಮಸ್ತವಾದ ಸ್ಮೃತಿಗಳ, ಭಾರತದ ಮತ್ತು ವ್ಯಾಕರಣವೇ ಮೊದಲಾದ ಸಕಲ ವೇದಾಂಗಗಳ ಪಾಠಮಾಡಿಸುವುದೂ, ತಾನು ಅಧ್ಯಯನಮಾಡುವುದೂ ಮತ್ತು ವೇದಾರ್ಥಜ್ಞಾನದಲ್ಲಿ ಹೆಚ್ಚು ಆಸಕ್ತಿಯಿರುವುದೂ, ಇವೇ ಆಗಿವೆ. ॥೮-೯-೧೦॥

ಅಲ್ಲದೇ ವೇದಾರ್ಥಜ್ಞಾನಕ್ಕಿಂತಲೂ ಬೇರೆಯಾದ ಬಾಹ್ಯಾರ್ಥವಿಷಯದಲ್ಲಿಯೂ ಮತ್ತು ಸಕಲವಾದ ಲೌಕಿಕವ್ಯಾಪಾರಗಳಲ್ಲಿ ಉಪೇಕ್ಷೆಯೂ ಕೂಡ ಜ್ಞಾನೇಚ್ಛೆಯಲ್ಲಿ ಕಾರಣವು.

ಉಪೇಕ್ಷಾ ವೇದಬಾಹ್ಯಾರ್ಥೇ ಲೌಕಿಕೇಷ್ವಖಿಲೇಷ್ವಪಿ ।
ಶಾಂತಿದಾಂತ್ಯಾದಯೋ ಧರ್ಮಾ ಜ್ಞಾನಸ್ಯಾಂಗಾನಿ ಸುವ್ರತಾಃ ॥೧೧॥

ಜ್ಞಾನಾಂಗೇಷು ಸಮಸ್ತೇಷು ಭಕ್ತ್ಯಾ ಲಿಂಗೇ ಶಿವಾರ್ಚನಂ ।
ಪ್ರತಿಷ್ಠಾ ದೇವದೇವಸ್ಯ ಶಿವಸ್ಥಾನ ನಿರೀಕ್ಷಣಮ್ ॥೧೨॥

ಶಿವಭಕ್ತಸ್ಯ ಪೂಜಾ ಚ ಶಿವಭಕ್ತಿಸ್ತಥೈವ ಚ ।
ರುದ್ರಾಕ್ಷಧಾರಣಂ ಭಕ್ತ್ಯಾ ಕರ್ಣೇ ಕಂಠೇ ತಥಾ ಕರೇ ॥೧೩॥

ಅಗ್ನಿರಿತ್ಯಾದಿಭಿರ್ಮಂತ್ರೈಃ ಭಸ್ಮನೈವಾವಗುಂಠನಮ್ ।
ತ್ರಿಪುಂಡ್ರಧಾರಣಂ ಚೈವ ಲಲಾಟಾದಿಸ್ಥಲೇಷು ಚ ॥೧೪॥

ವೇದವೇದಾಂತನಿಷ್ಠಸ್ಯ ಮಹಾಕಾರುಣಿಕಸ್ಯ ಚ ।
ಗುರೋಶ್ಶುಶ್ರೂಷಣಂ ನಿತ್ಯಂ ವರಿಷ್ಠಂ ಪರಿಕೀರ್ತಯೇತ್ ॥೧೫॥

ಚಿನ್ಮಂತ್ರಸ್ಯ ಪದಾಖ್ಯಸ್ಯ ಹಂಸಾಖ್ಯಸ್ಯ ಮನೋರ್ಜಪಃ ।
ಷಡಕ್ಷರಸ್ಯ ತಾರಸ್ಯ ವರಿಷ್ಠಃ ಪರಿಕೀರ್ತಿತಃ ॥೧೬॥

ಎಲೌ ಸುವ್ರತರೇ, ಅಲ್ಲದೆ ಶಾಂತಿದಾಂತಿಯೇ ಮೊದಲಾದ ಸದ್ಧರ್ಮಗಳೂ ಜ್ಞಾನಕ್ಕೆ ಅಂಗಗಳು. ಸಕಲಗಳಾದ ಜ್ಞಾನಾಂಗಸಾಧನಗಳೊಳಗೆ, ಭಕ್ತಿಯಿಂದ ಲಿಂಗ ದೊಳಗೆ ಶಿವನನ್ನು ಪೂಜಿಸುವುದೂ, ದೇವದೇವನಾದ ಅವನ ವಿಗ್ರಹ, ಪ್ರತೀಕ ಗಳನ್ನು ದೇವಾಲಯದಲ್ಲಿ ಪ್ರತಿಷ್ಠೆಮಾಡುವಿಕೆಯೂ, ಶಿವದೇವಾಲಯದ ಸಂದರ್ಶ ನವೂ, ಜ್ಞಾನೇಚ್ಛೆಯಲ್ಲಿ ಕಾರಣಗಳಾಗುತ್ತವೆ. ॥೧೧-೧೨॥

ಶಿವನಲ್ಲಿ ಭಕ್ತಿಯುಳ್ಳವರ ಪೂಜೆಯೂ, ಹಾಗೆಯೇ ತಾನೂ ಸಹ ಶಿವನಲ್ಲಿ ಭಕ್ತಿಯಿಡುವುದೂ, ಶ್ರದ್ಧೆಯಿಂದ ಕಿವಿಯಲ್ಲಿ ಕಂಠದಲ್ಲಿ ಮತ್ತು ಕೈಯಲ್ಲಿ ರುದ್ರಾಕ್ಷ ಧಾರಣೆಯೂ, "ಅಗ್ನಿರಿತಿ" ಮೊದಲಾದ ಮಂತ್ರಗಳಿಂದ ಜಪಪೂರ್ವಕವಾಗಿ ಭಸ್ಮ ದಿಂದ ಅವಗುಂಠನವೂ, ಹಣೆಯೇ ಮೊದಲಾದ ಸ್ಥಳಗಳಲ್ಲಿ ತ್ರಿಪುಂಡ್ರಧಾರಣೆಯೂ ಮತ್ತು ವೇದವೇದಾಂತಪಾರಂಗತನಾದ, ದಯಾಸಮುದ್ರನೂ ಆದ, ಗುರುವಿನ ಶುಶ್ರೂಷೆಯೂ, ಎಲ್ಲ ಕಾಲದಲ್ಲಿಯೂ ಅತ್ಯಂತ ಶ್ರೇಷ್ಠವಾದ ಸಾಧನಧರ್ಮಗಳೆಂದು ತಿಳಿಯಬೇಕು. ॥೧೩-೧೪-೧೫॥

ಪದಮಂತ್ರವೆಂಬ ಹೆಸರುಳ್ಳ, ಚಿದ್ರೂಪಿಣಿಯಾದ ಪರಾಶಕ್ತಿಮಂತ್ರವಾದ,

ಅವಿಮುಕ್ತಸಮಾಖ್ಯಂ ಚ ಸ್ಥಾನಂ ವ್ಯಾಘ್ರಪುರಾಭಿದಂ ।
ಶ್ರೀಮದ್ದಕ್ಷಿಣಕೈಲಾಸ ಸಮಾಖ್ಯಂ ಚ ಸುಶೋಭನಂ ॥೧೭॥

ಮಾರ್ಗಾಂತರೋದಿತಾಚಾರಾತ್ಸ್ಮಾರ್ತೋ ಧರ್ಮಸ್ಸುಶೋಭನಃ ।
ಸ್ಮಾರ್ತಾಚ್ಛ್ರೌತಃ ಪರೋ ಧರ್ಮಃ ಶ್ರೌತಾಚ್ಛ್ರೇಷ್ಠೋ ನ ವಿದ್ಯತೇ ॥೧೮॥

ಅತೀಂದ್ರಿಯಾರ್ಥೇ ಧರ್ಮಾದೌ ಶಿವೇ ಪರಮಕಾರಣೇ ।
ಶ್ರುತಿರೇವ ಸದಾ ಮಾನಂ ಸ್ಮೃತಿಸ್ತದನುಸಾರಿಣೀ ॥೧೯॥

ಆಸ್ತಿಕ್ಯಂ ಸರ್ವಧರ್ಮಸ್ಯ ಕಂದಭೂತಂ ಪ್ರಕೀರ್ತಿತಂ ।
ಪ್ರತಿಷಿದ್ಧಕ್ರಿಯಾತ್ಯಾಗಃ ಕಂದಸ್ಯಾಪಿ ಚ ಕಾರಣಂ ॥೨೦॥

ಹೃಲ್ಲೇಖಾ ಎಂಬುದಾಗಿಯೂ ಪ್ರಸಿದ್ಧವಾಗಿರುವ ಹ್ರೀಂಕಾರದ ಮತ್ತು ಷಡಕ್ಷರ ಮಂತ್ರದ, ಪ್ರಣವದ ಮತ್ತು ಹಂಸಮಂತ್ರದ ಜಪವು ಶ್ರೇಷ್ಠವೆಂದು ಹೇಳಲ್ಪಟ್ಟಿದೆ. ||೧೬||

ಅವಿಮುಕ್ತ (ಕಾಶೀ) ಎಂಬ ಹೆಸರುಳ್ಳ, ವ್ಯಾಘ್ರಪುರವೆಂಬ ಹೆಸರುಳ್ಳ, ಶ್ರೀಮದ್ದಕ್ಷಿಣಕೈಲಾಸವೆಂಬ ಹೆಸರುಳ್ಳ, ಸ್ಥಾನವೂ ಕೂಡ ಜ್ಞಾನದ ಉದಯಕ್ಕೆ ಸಾಧನವಾದುದು. ||೧೭||

ರೀತ್ಯಂತರಗಳಿಂದ ಹೇಳಲ್ಪಟ್ಟ ಆಚಾರಕ್ಕಿಂತಲೂ ಸ್ಮಾರ್ತಧರ್ಮವು ಬಹು ಮಂಗಳಕರವಾದುದು. ಸ್ಮಾರ್ತಧರ್ಮಕ್ಕಿಂತಲೂ ಶ್ರೌತಧರ್ಮವು ಶ್ರೇಷ್ಠವಾದುದು. ಶ್ರೌತಕ್ಕಿಂತಲೂ ಶ್ರೇಷ್ಠವಾದ ಧರ್ಮವು ಬೇರೆ ಯಾವುದೂ ಇಲ್ಲವೇ ಇಲ್ಲವು. ||೧೮||

ಇಂದ್ರಿಯಗಳಿಗೆ ಗೋಚರಿಸದ ಧರ್ಮಾದಿಗಳ ವಿಷಯದಲ್ಲಿಯೂ, ಪರಮ ಕಾರಣನಾದ ಶಿವನಲ್ಲಿಯೂ, ನಮಗೆ ವೇದವೇ ಸದಾಪ್ರಮಾಣವಾದುದು. ಅದಕ್ಕನುಸಾರವಾಗಿರತಕ್ಕ ಸ್ಮೃತಿಯೂ ಸಹ ಪ್ರಮಾಣವಾದುದು. ||೧೯||

ಸಕಲ ಧರ್ಮಕ್ಕೂ ಆಸ್ತಿಕ್ಯವು ಮೂಲಭೂತವಾದುದೆಂದು ಹೇಳಲ್ಪಟ್ಟಿದೆ. ಆ ಮೂಲಕ್ಕೂ ಕೂಡ ನಿಷಿದ್ಧಗಳಾದ ಕರ್ಮಗಳ ತ್ಯಾಗವೇ ಕಾರಣವು. ||೨೦||

ಶಿವಸ್ಸರ್ವಮಿತಿ ಜ್ಞಾನಂ ಸರ್ವಜ್ಞಾನೋತ್ತಮೋತ್ತಮಂ ।
ತತ್ತುಲ್ಯಂ ತತ್ಪರಂ ಚಾಪಿ ನ ಕಿಂಚಿದಪಿ ವಿದ್ಯತೇ ॥೨೧॥

ವಕ್ತವ್ಯಂ ಸಕಲಂ ಪ್ರೋಕ್ತಂ ಮಯಾಽತಿಶ್ರದ್ಧಯಾ ಸಹ ।
ಅತಃ ಪರಂ ತು ವಕ್ತವ್ಯಂ ನ ಪಶ್ಯಾಮಿ ಮುನೀಶ್ವರಾಃ ॥೨೨॥

ಇತ್ಯುಕ್ತ್ವಾ ಭಗವಾನ್ ಸೂತೋ ಮುನೀನಾಂ ಭಾವಿತಾತ್ಮನಾಂ ।
ಸಾಂಬಂ ಸರ್ವೇಶ್ವರಂ ಧ್ಯಾತ್ವಾ ಭಕ್ತ್ಯಾ ಪರವಶೋಽಭವತ್ ॥೨೩॥

ಅಥ ಪರಶಿವಭಕ್ತ್ಯಾ ಸಚ್ಚಿದಾನಂದಪೂರ್ಣಂ
ಪರಶಿವಮನುಭೂಯ ತ್ವಾತ್ಮರೂಪೇಣ ಸೂತಃ ।
ಮುನಿಗಣಮವಲೋಕ್ಯ ಪ್ರಾಹ ಸಾಕ್ಷಾತ್ ಘೃಣಾಬ್ಧಿಃ
ಜನಪದಹಿತರೂಪಂ ವೇದಿತವ್ಯಂ ತು ಕಿಂಚಿತ್ ॥೨೪॥

ಸಕಲವೂ ಪರಮೇಶ್ವರನೆಂಬ ಜ್ಞಾನವು ಸರ್ವಜ್ಞಾನಗಳೊಳಗೂ ಶ್ರೇಷ್ಠವಾದುದು. ಅದಕ್ಕೆ ಸದೃಶವಾದುದೂ, ಅದಕ್ಕಿಂತಲೂ ಉತ್ತಮವಾದುದೂ, ಬೇರೆ ಯಾವುದೂ ಇಲ್ಲವೇ ಇಲ್ಲವು. ॥೨೧॥

ಮುನೀಶ್ವರರೇ, ಹೇಳಬೇಕಾದ ಸಮಸ್ತವೂ ಹೆಚ್ಚಾದ ಶ್ರದ್ಧಾಪೂರ್ವಕವಾಗಿ ನನ್ನಿಂದ ಹೇಳಲ್ಪಟ್ಟಿತು. ಇದಕ್ಕಿಂತಲೂ ಬೇರೆಯಾಗಿ ಹೇಳಬೇಕಾದುದನ್ನು ನಾನು ಕಂಡಿಲ್ಲ. ॥೨೨॥

ಹೀಗೆಂದು ಹೇಳಿ ಪೂಜ್ಯನಾದ ಸೂತನು ಪೂತಾತ್ಮರಾದ ಭಕ್ತರಾದ ಮುನಿಗಳ ಮಧ್ಯದಲ್ಲಿ ಸರ್ವೇಶ್ವರನಾದ ಸಾಂಬನನ್ನು ಭಕ್ತಿಯಿಂದ ಧ್ಯಾನಿಸಿ ಸಮಾಧಿಯಲ್ಲಿ ಪರವಶನಾದನು. ॥೨೩॥

ತರುವಾಯ ಸೂತಮುನಿಯು ಪರಶಿವನ ಭಕ್ತಿಯಿಂದ ಸಚ್ಚಿದಾನಂದ ಪೂರ್ಣನಾದ ಪರಶಿವನನ್ನು ಸ್ವಾತ್ಮರೂಪದಿಂದ ಅನುಭವಿಸಿ, ಸಾಕ್ಷಾತ್ಕರುಣಾಸಾಗರನಾದವನಾಗಿ ಋಷಿಸಮೂಹವನ್ನು ನೋಡಿ ಲೋಕಕ್ಕೆ ಹಿತರೂಪವಾದ ಮತ್ತು ಮುಖ್ಯವಾಗಿ ತಿಳಿಯಬೇಕಾದ ಅಂಶವನ್ನು ಸಂಗ್ರಹವಾಗಿ ಹೇಳತೊಡಗಿದನು. ॥೨೪॥

ಶ್ರುತಿಪಥಗಲಿತಾನಾಂ ಮಾನುಷಾಣಾಂ ತು ತಂತ್ರಂ
ಗುರುಗುರುರಖಿಲೇಶಸ್ಸರ್ವವಿತ್ಪ್ರಾಹ ಶಂಭುಃ ।
ಶ್ರುತಿಪಥನಿರತಾನಾಂ ತತ್ರ ನೈವಾಸ್ತಿ ಕಿಂಚಿತ್
ಹಿತಕರಮಿಹ ಸರ್ವಂ ಪುಷ್ಕಲಂ ಸತ್ಯಮುಕ್ತಂ ॥೨೫॥

ಶ್ರುತಿರಪಿ ಮನುಜಾನಾಂ ವರ್ಣಧರ್ಮಂ ಬಭಾಷೇ
ಪರಗುರುರಖಿಲೇಶಃ ಪ್ರಾಹ ತಂತ್ರೇಷು ತದ್ವತ್ ।
ಶ್ರುತಿಪಥಗಲಿತಾನಾಂ ವರ್ಣಧರ್ಮಂ ಘೃಣಾಬ್ಧಿಃ
ಶ್ರುತಿಪಥನಿರತಾನಾಂ ನೈವ ತತ್ಸೇವನೀಯಂ ॥೨೬॥

ಶ್ರುತಿಪಥನಿರತಾನಾಮಾಶ್ರಮಾ ಯದ್ವದುಕ್ತಾಃ
ಪರಗುರುರಖಿಲೇಶಃ ತದ್ವದಾಹಾಶ್ರಮಾಂಶ್ಚ ।
ಶ್ರುತಿಪಥಗಲಿತಾನಾಂ ಮಾನುಷಾಣಾಂ ತು ತಂತ್ರಂ
ಹರಿರಪಿ ಮುನಿಮುಖ್ಯಾಃ ಪ್ರಾಹ ತಂತ್ರೇ ಸ್ವಕೀಯೇ ॥೨೭॥

ಗುರುಗಳಿಗೆ ಗುರುವೂ, ಸಕಲೇಶ್ವರನೂ, ಸರ್ವಜ್ಞನೂ ಆದ ಶಂಭುವು ವೇದಮಾರ್ಗವನ್ನು ಬಿಟ್ಟ ಮನುಷ್ಯರಿಗೆಂದು ಆಗಮವನ್ನು ಹೇಳಿರುತ್ತಾನೆ. ವೇದ ಮಾರ್ಗಾವಲಂಬಿಗಳಾದವರಿಗೆ ಆ ಆಗಮದಲ್ಲಿ ಹೆಚ್ಚಿನ ಹಿತಕರವಾದುದು ಯಾವುದೂ ಇಲ್ಲವು. ಇಲ್ಲಿ ವೇದಮಾರ್ಗದಲ್ಲಿ ನಿರತರಾದವರಿಗೆ ಹಿತಕರವಾದ ಸಕಲ ಸತ್ಯವೂ ವಿಸ್ತಾರವಾಗಿ ಹೇಳಲ್ಪಟ್ಟಿದೆ. ॥೨೫॥

ವೇದವೂ ಕೂಡ ಮನುಷ್ಯರಿಗೆ ವರ್ಣಧರ್ಮವನ್ನು ಹೇಳುತ್ತದೆ. ಸಕಲೇಶ್ವರನಾದ ಪರಮಗುರುವೂ ಕೂಡ ಆಗಮಗಳಲ್ಲಿಯೂ ಹಾಗೆಯೇ ಹೇಳಿರುತ್ತಾನೆ. ಅವನ್ನು ದಯಾಸಾಗರನಾದ ಪರಶಿವನು ಶ್ರುತಿಮಾರ್ಗದಿಂದ ದೂರರಾದವರಿಗೆ ಹೇಳಿರುತ್ತಾನೆ. ವೈದಿಕಮಾರ್ಗಾವಲಂಬಿಗಳಾದವರಿಗೆ ಶ್ರೌತಧರ್ಮವನ್ನು ಬಿಟ್ಟು ಅದು, ಎಂದರೆ ಆಗಮೋಕ್ತವಾದ, ವೇದಾನುಸಾರಿಯಲ್ಲದ ಧರ್ಮವು, ಎಂದ ಸೇವಿಸಲು ಯೋಗ್ಯವಾದುದಲ್ಲವು. ॥೨೬॥

ಎಲೌ ಮುನಿಗಳಲ್ಲಿ ಮುಖ್ಯರಾದವರೇ, ವೈದಿಕಮಾರ್ಗನಿರತರಿಗೆ ಹೇಗೆ ಆಶ್ರಮಗಳು ಹೇಳಲ್ಪಟ್ಟಿವೆಯೋ ಹಾಗೆ ಸರ್ವೇಶ್ವರನಾದ ಪರಮಗುರುವು ವೇದ ಮಾರ್ಗದಲ್ಲಿ ಅಧಿಕಾರಿಗಳಾಗದೆ ಇರುವ ಮನುಷ್ಯರಿಗೂ ಆಶ್ರಮಧರ್ಮಗಳನ್ನು

ವಿಧಿರಪಿ ಮನುಜಾನಾಮಾಹ ವರ್ಣಾಶ್ರಮಾಂಶ್ಚ
ಶ್ರುತಿಪಥಗಲಿತಾನಾಮೇವ ತಂತ್ರೇ ಸ್ವಕೀಯೇ ।
ಶ್ರುತಿಪಥನಿರತಾನಾಂ ತೇ ನ ಸಂಸೇವನೀಯಾಃ
ಶ್ರುತಿಪಥಸಮಮಾರ್ಗೋ ನೈವ ಸತ್ಯಂ ಮಯೋಕ್ತಂ ॥೨೮॥

ಹರಹರಿವಿಧಿಪೂಜಾ ಕೀರ್ತಿತಾ ಸರ್ವತಂತ್ರೇ
ಶ್ರುತಿಪಥನಿರತಾನಾಂ ಯದ್ವದುಕ್ತಾ ತು ಪೂಜಾ ।
ಶ್ರುತಿಪಥಗಲಿತಾನಾಮೇವ ತಂತ್ರೋಕ್ತಪೂಜಾ
ಶ್ರುತಿಪಥನಿರತಾನಾಂ ಸರ್ವವೇದೋದಿತೈವ ॥೨೯॥

ಶ್ರುತಿಪಥಗಲಿತಾನಾಂ ಸರ್ವತಂತ್ರೇಷು ಲಿಂಗಂ
ಕಥಿತ ಮಖಿಲ ದುಃಖಧ್ವಂಸಕಂ ತತ್ರ ತತ್ರ ।

ಆಗಮದಲ್ಲಿ ಹೇಳಿರುತ್ತಾನೆ. ಇದೇ ರೀತಿಯಲ್ಲಿ ವಿಷ್ಣುವೂ ಕೂಡ ಅವನಿಗೆ ಸಂಬಂಧ ಪಟ್ಟ ಆಗಮದಲ್ಲಿಯೂ ತಾಂತ್ರಿಕರಿಗೆ ತಕ್ಕಂತೆ ಇವುಗಳನ್ನು (ವರ್ಣಾಶ್ರಮಧರ್ಮಗಳನ್ನು) ಹೇಳಿರುತ್ತಾನೆ. ॥೨೭॥

ಬ್ರಹ್ಮನೂ ಕೂಡ ತನ್ನ ಆಗಮದಲ್ಲಿ, ವೇದಮಾರ್ಗದಲ್ಲಿ ಅಧಿಕಾರಿಗಳಾಗದೆ ಇರುವ ಮನುಷ್ಯರಿಗಾಗಿಯೇ ವರ್ಣಾಶ್ರಮಧರ್ಮಗಳನ್ನೂ ಹೇಳಿರುವನು. ವೇದ ಮಾರ್ಗವನ್ನನುಸರಿಸುವವರಿಗೆ ಈ ಆಗಮಗಳ ತಾಂತ್ರಿಕ ಧರ್ಮಗಳು ಎಂದೂ ಸೇವಿಸಲು ಯೋಗ್ಯವಾದವುಗಳಲ್ಲ. ವೇದಮಾರ್ಗಕ್ಕೆ ಸಮಾನವಾದ ಬೇರೊಂದು ಮಾರ್ಗವು ಇಲ್ಲವೇ ಇಲ್ಲವು. ಸತ್ಯವೇ ನನ್ನಿಂದ ಹೇಳಲ್ಪಟ್ಟಿದೆ. ॥೨೮॥

ವೇದಮಾರ್ಗವನ್ನು ಅನುಸರಿಸತಕ್ಕವರಿಗೆ ಯಾವ ರೀತಿಯಲ್ಲಿ ಪೂಜೆಯು ಹೇಳಲ್ಪಟ್ಟಿದೆಯೋ ಹಾಗೆ ಶಿವ, ವಿಷ್ಣು, ಬ್ರಹ್ಮರ ಪೂಜೆಯೂ ಎಲ್ಲಾ ಆಗಮಗಳಲ್ಲಿಯೂ ಹೇಳಲ್ಪಟ್ಟಿದೆ. ಆಗಮೋಕ್ತವಾದ ಪೂಜೆಯನ್ನು ವೇದಮಾರ್ಗದಲ್ಲಿ ಅಧಿಕಾರಿಗಳಾಗದೆ ಇರುವವರಿಗೆ ಮಾತ್ರ ಹೇಳಿದೆ. ವೇದಮಾರ್ಗಾವಲಂಬಿಗಳಾದ ಎಲ್ಲರೂ ವೇದದಲ್ಲಿ ಹೇಳಲ್ಪಟ್ಟಿರತಕ್ಕದ್ದನ್ನೇ ಆಚರಿಸಬೇಕೇ ವಿನಾ ಬೇರೆಯಿಲ್ಲವು. ॥೨೯॥

ವೇದಮಾರ್ಗಚ್ಯುತರಿಗೆ ಸಕಲಾಗಮಗಳಲ್ಲಿಯೂ ಸಕಲ ದುಃಖಧ್ವಂಸಕವಾದ ಲಿಂಗಧಾರಣೆಯು ಅಲ್ಲಲ್ಲಿ ಹೇಳಲ್ಪಟ್ಟಿದೆ. ಶ್ರುತಿಮಾರ್ಗಾಸಕ್ತರಾದವರಿಗೆ ಅದು ಯಾವಾಗಲೂ ಹಾಗೆ ಧರಿಸಲು ಯೋಗ್ಯವಾದುದಲ್ಲವು. ಆದರೂ ವೇದವೂ ಕೂಡ

ಶ್ರುತಿಪಥನಿರತಾನಾಂ ತತ್ಸದಾ ನೈವ ಧಾರ್ಯಂ
ಶ್ರುತಿರಪಿ ಮನುಜಾನಾಮಾಹ ಲಿಂಗಂ ವಿಶುದ್ಧಮ್ ॥೩೦॥

ಶಿವಾಗಮೋಕ್ತಾ ಶ್ರಮನಿಷ್ಠಮಾನವಃ
ತ್ರಿಪುಂಡ್ರಲಿಂಗಂ ತು ಸದೈವ ಧಾರಯೇತ್ ।
ತದುಕ್ತತಂತ್ರೇಣ ಲಲಾಟಮಧ್ಯಮೇ
ಮಹಾದರೇಣೈವ ಸಿತೇನ ಭಸ್ಮನಾ ॥೩೧॥

ವಿಷ್ಣ್ವಾಗಮೋಕ್ತಾಶ್ರಮನಿಷ್ಠಮಾನವಃ
ತಥೈವ ಪುಂಡ್ರಾಂತರಮೂರ್ಧ್ವರೂಪಕಮ್ ।
ತ್ರಿಶೂಲರೂಪಂ ಚತುರಸ್ರಮೇವ ವಾ
ಮೃದಾ ಲಲಾಟೇ ತು ಸದೈವ ಧಾರಯೇತ್ ॥೩೨॥

ಬ್ರಹ್ಮಾಗಮೋಕ್ತಾಶ್ರಮನಿಷ್ಠಮಾನವೋ
ಲಲಾಟಮಧ್ಯೇಽಪಿ ಚ ವರ್ತುಲಾಕೃತಿಮ್ ।

ಮನುಷ್ಯರಿಗೆ ಲಿಂಗವನ್ನು ವಿಶುದ್ಧವನ್ನಾಗಿ ಹೇಳುತ್ತದೆ. ಎಂದರೆ ಮುಂದೆ ಹೇಳುವ ಶುದ್ಧವಾದ ಲಿಂಗ, ಚಿಹ್ನಗಳನ್ನು ಮನುಷ್ಯರಿಗೆ ವೇದವೂ ಹೇಳುತ್ತದೆ. ||೩೦||

ಶಿವಾಗಮದಲ್ಲಿ ಹೇಳಿರುವ ಆಶ್ರಮಧರ್ಮಾಚರಣೆಯಲ್ಲಿ ನಿಷ್ಠನಾದ ಮನುಷ್ಯನು ತ್ರಿಪುಂಡ್ರವೆಂಬ ಚಿಹ್ನೆಯನ್ನು, ಆ ಆಗಮೋಕ್ತವಾದ ತಂತ್ರಕ್ಕೆ ಅನುಸಾರವಾಗಿ ಹಣೆಯ ಮಧ್ಯಭಾಗದಲ್ಲಿ ಆಸಕ್ತಿಯಿಂದ ಶುಭ್ರವಾದ ಭಸ್ಮದಿಂದ ಎಲ್ಲ ಕಾಲದಲ್ಲಿಯೂ ಧರಿಸಿರಬೇಕು. ಅದರಂತೆಯೇ, ||೩೧||

ವೈಷ್ಣವಾಗಮದಲ್ಲಿ ಹೇಳಿರುವ ಆಶ್ರಮದಲ್ಲಿ ನಿರತನಾದ ಮನುಷ್ಯನು ಊರ್ಧ್ವರೂಪವುಳ್ಳ ಬೇರೆ ಪುಂಡ್ರವನ್ನೂ, ತ್ರಿಶೂಲರೂಪವುಳ್ಳ ಪುಂಡ್ರವನ್ನಾಗಲೀ ಚತುಷ್ಕೋಣರೂಪವುಳ್ಳ ಪುಂಡ್ರವನ್ನಾಗಲೀ ಮಣ್ಣಿನಿಂದ ಎಲ್ಲ ಕಾಲದಲ್ಲಿಯೂ ಹಣೆಯಲ್ಲಿ ಧರಿಸಬೇಕು. ||೩೨||

ಬ್ರಹ್ಮಾಗಮದಲ್ಲಿ ಹೇಳಿರುವ ಧರ್ಮದಲ್ಲಿ ನಿರತನಾಗಿರುವ ಮನುಷ್ಯನು ಲಲಾಟಮಧ್ಯಭಾಗದಲ್ಲಿ ಗುಂಡಾಗಿರುವ ಪುಂಡ್ರವನ್ನು ಅದರಲ್ಲಿ (ಬ್ರಹ್ಮಾಗಮದಲ್ಲಿ)

ತದುಕ್ತಮಂತ್ರೇಣ ಸಿತೇನ ಭಸ್ಮನಾ
ಮೃದಾऽಥವಾ ಚಂದನತಸ್ತು ಧಾರಯೇತ್ ॥೩೩॥

ಅಶ್ವತ್ಥಪತ್ರಸದೃಶಂ ಹರಿಚಂದನೇನ
ಮಧ್ಯೇ ಲಲಾಟಮತಿಶೋಭನಮಾದರೇಣ ।
ಬುದ್ಧಾಗಮೇ ಮುನಿವರಾ ಯದಿ ಸಂಸ್ಕೃತಶ್ಚೇತ್
ಮೃದ್ವಾರಿಣಾ ಸತತಮೇವ ತು ಧಾರಯೇಚ್ಚ ॥೩೪॥

ಊರ್ಧ್ವಪುಂಡ್ರತ್ರಯಂ ನಿತ್ಯಂ ಧಾರಯೇದ್ಭಸ್ಮನಾ ಮೃದಾ ।
ಲಲಾಟೇ ಹೃದಯೇ ಬಾಹ್ವೋಶ್ಚಂದನೇನಾಥವಾ ನರಃ ॥೩೫॥

ಸಿತೇನ ಭಸ್ಮನಾ ತಿರ್ಯಕ್ತ್ರಿಪುಂಡ್ರಸ್ಯ ಚ ಧಾರಣಂ ।
ಸರ್ವಾಗಮೇಷು ನಿಷ್ಠಾನಾಂ ತತ್ತನ್ಮಂತ್ರೇಣ ಶೋಭನಂ ॥೩೬॥

ಶಿವಾಗಮೇಷು ನಿಷ್ಠಾನಾಂ ಧಾರ್ಯಂ ತಿರ್ಯಕ್ತ್ರಿಪುಂಡ್ರಕಂ ।
ಏಕಮೇವ ಸದಾ ಭೂತ್ವಾ ನೈವ ಪುಂಡ್ರಾಂತರಂ ಬುಧಾಃ ॥೩೭॥

ಹೇಳಲ್ಪಟ್ಟಿರುವ ಮಂತ್ರದಿಂದ ಬೆಳ್ಳಗಿರುವ ಭಸ್ಮದಿಂದಲಾಗಲೀ, ಮಣ್ಣಿನಿಂದಲಾಗಲೀ ಅಥವಾ ಗೋಪೀಚಂದನದಿಂದಲಾಗಲೀ ಧರಿಸಬೇಕು. ॥೩೩॥

ಮುನಿಶ್ರೇಷ್ಠರೇ, ಬುದ್ಧಾಗಮದಲ್ಲಿ ಸಂಸ್ಕಾರ ಹೊಂದಿದವನಾದರೆ ಅರಳೀ ಎಲೆಯಂತಿರುವ ತ್ರಿಪುಂಡ್ರವನ್ನು ಹಣೆಯ ಮಧ್ಯಭಾಗದಲ್ಲಿ ಮನೋಹರವಾಗಿಯೂ, ಆದರದಿಂದಲೂ ಗಂಧದಿಂದಲಾಗಲೀ ಅಥವಾ ಮಣ್ಣಿನಿಂದಲಾಗಲೀ ಎಲ್ಲಾ ಕಾಲದಲ್ಲಿಯೂ ಧರಿಸಿರಬೇಕು. ॥೩೪॥

ಮನುಷ್ಯನು ಎಲ್ಲ ಕಾಲದಲ್ಲಿಯೂ ಭಸ್ಮದಿಂದಾಗಲೀ, ಮಣ್ಣಿನಿಂದಾಗಲೀ ಗಂಧದಿಂದಾಗಲೀ ಊರ್ಧ್ವಪುಂಡ್ರವನ್ನು ಹಣೆಯಲ್ಲಿಯೂ, ಹೃದಯದಲ್ಲಿಯೂ, ಭುಜಗಳಲ್ಲಿಯೂ ಧರಿಸಬೇಕು. ॥೩೫॥

ಶುಭ್ರವಾದ ಭಸ್ಮದಿಂದ ಅಡ್ಡಲಾಗಿ ತ್ರಿಪುಂಡ್ರಧಾರಣೆಯೂ ಕೂಡ, ಎಲ್ಲಾ ಆಗಮಗಳಲ್ಲೂ ನಿರತರಾದವರಿಗೆ, ಆಯಾ ಮಂತ್ರಗಳಿಂದ ಧರಿಸಲ್ಪಡಬೇಕೆಂದೂ, ಅದು ಮಂಗಳಕರವಾದುದು, ಎಂದೂ ಹೇಳಿದೆ. ॥೩೬॥

ವಿದ್ವಾಂಸರೇ, ಶೈವಾಗಮನಿಷ್ಠರಿಗೆ ಭಸ್ಮದಿಂದ ಅಡ್ಡಲಾಗಿ ತ್ರಿಪುಂಡ್ರಕವು

ವೇದಮಾರ್ಗೈಕನಿಷ್ಠಾನಾಂ ವೇದೋಕ್ತೇನೈವ ವರ್ತ್ಮನಾ ।
ಲಲಾಟೇ ಭಸ್ಮನಾ ತಿರ್ಯಕ್ತ್ರಿಪುಂಡ್ರಂ ಧಾರ್ಯಮೇವ ಹಿ ॥೩೮॥

ಲಲಾಟೇ ಭಸ್ಮನಾ ತಿರ್ಯಕ್ತ್ರಿಪುಂಡ್ರಸ್ಯ ತು ಧಾರಣಂ ।
ವಿನಾ ಪುಂಡ್ರಾಂತರಂ ಮೋಹಾದ್ಧಾರಯನ್ ಪತತಿ ದ್ವಿಜಃ ॥೩೯॥

ವಿಷ್ಣ್ವಾಗಮಾದಿತಂತ್ರೇಷು ದೀಕ್ಷಿತಾನಾಂ ವಿಧೀಯತೇ ।
ಶಂಖಚಕ್ರಗದಾಪೂರ್ವೈರಂಕನಂ ನಾನ್ಯದೇಹಿನಾಂ ॥೪೦॥

ದೀಕ್ಷಿತಾನಾಂ ತು ತಂತ್ರೇಷು ನರಾಣಾಮಂಕನಂ ದ್ವಿಜಾಃ ।
ಉಪಕಾರಕಮೇವೋಕ್ತಂ ಕ್ರಮೇಣ ಮುನಿಪುಂಗವಾಃ ॥೪೧॥

ಪುಂಡ್ರಾಂತರಸ್ಯ ತಂತ್ರೇಷು ಧಾರಣಂ ದೀಕ್ಷಿತಸ್ಯ ತು ।
ಉಪಕಾರಕಮೇವೋಕ್ತಂ ಕ್ರಮೇಣ ಮುನಿಪುಂಗವಾಃ ॥೪೨॥

ಎಲ್ಲ ಕಾಲದಲ್ಲಿಯೂ ಧರಿಸಲು ಯೋಗ್ಯವಾದುದು. ಬೇರೆ ಯಾವುದನ್ನೂ ಧರಿಸಲೇ ಬಾರದು. ॥೩೭॥

ವೈದಿಕಮಾರ್ಗನಿರತರಿಗೆ ವೇದೋಕ್ತವಾದ ಕ್ರಮದಿಂದಲೇ ಭಸ್ಮದಿಂದ ಹಣೆಯಲ್ಲಿ ಅಡ್ಡಲಾಗಿ ತ್ರಿಪುಂಡ್ರಕವು ಧರಿಸಲು ಯೋಗ್ಯವಾದುದು. ॥೩೮॥

ಹಣೆಯಲ್ಲಿ ಭಸ್ಮದಿಂದ ಅಡ್ಡಲಾಗಿ ಪುಂಡ್ರವನ್ನು ಧರಿಸುವುದನ್ನು ಬಿಟ್ಟು ಅಜ್ಞಾನದಿಂದ ಬೇರೆಯ ಪುಂಡ್ರಎಂದರೆ ತಪ್ತಮುದ್ರಾಂಕನವನ್ನು ಧರಿಸುವ ಬ್ರಾಹ್ಮಣನು ಪತಿತನಾಗುತ್ತಾನೆ. ॥೩೯॥

ವಿಷ್ಣ್ವಾದಿ ಆಗಮಗಳಲ್ಲಿ ದೀಕ್ಷಿತರಾದವರಿಗೆ ಮಾತ್ರ ಶಂಖ, ಚಕ್ರ, ಗದಾದಿಗಳಿಂದ ಅಂಕನವು ವಿಹಿತವಾಗಿದೆಯೇ ವಿನಾ ಬೇರೆಯ ಮನುಷ್ಯರಿಗೆ ವಿಹಿತವಲ್ಲವು. ॥೪೦॥

ಎಲೌ ಬ್ರಾಹ್ಮಣರೇ, ವೈಷ್ಣವಾದಿತಂತ್ರಶಾಸ್ತ್ರಗಳಲ್ಲಿ ದೀಕ್ಷಿತರಾದವರಿಗೆ ಮಾತ್ರ ಅಂಕನವು ಸೋಪಾನಕ್ರಮದಿಂದ ಉಪಕಾರಕವೇ ಆಗುತ್ತದೆಂದು ಹೇಳಲ್ಪಟ್ಟಿದೆ. ॥೪೧॥

ಮುನಿಶ್ರೇಷ್ಠರೇ, ಹಾಗೆಯೇ ವೈಷ್ಣವಾದಿತಂತ್ರಗಳಲ್ಲಿ ದೀಕ್ಷಿತನಾದವನಿಗೆ ಬೇರೆಯ ಪುಂಡ್ರಧಾರಣೆಯು ಕ್ರಮವಾಗಿ ಉಪಕಾರಕವಾಗುತ್ತದೆ. ॥೪೨॥

ವೇದಮಾರ್ಗೈಕನಿಷ್ಠಸ್ತು ಮೋಹೇನಾಪ್ಯಂಕಿತೋ ಯದಿ ।
ಪತತ್ಯೇವ ನ ಸಂದೇಹಸ್ತಥಾ ಪುಂಡ್ರಾಂತರಾದಪಿ ॥೪೩॥

ನಾಂಕನಂ ವಿಗ್ರಹೇ ಕುರ್ಯಾದ್ವೇದಪಂಥಾನಮಾಶ್ರಿತಃ ।
ಪುಂಡ್ರಾಂತರಂ ಭ್ರಮಾದ್ವಾಽಪಿ ಲಲಾಟೇ ನೈವ ಧಾರಯೇತ್ ॥೪೪॥

ತಂತ್ರೋಕ್ತೇನ ಪ್ರಕಾರೇಣ ದೇವತಾ ಯಾ ಪ್ರತಿಷ್ಠಿತಾ ।
ಸಾಽಪಿ ವಂದ್ಯಾ ಸುಸೇವ್ಯಾ ಚ ಪೂಜನೀಯಾ ಚ ವೈದಿಕೈಃ ॥೪೫॥

ಶುದ್ಧಮೇವ ಹಿ ಸರ್ವತ್ರ ದೇವತಾರೂಪಮಾಸ್ತಿಕಾಃ ।
ತತ್ತತ್ತಂತ್ರೋಕ್ತ ಪೂಜಾ ತು ತಂತ್ರನಿಷ್ಠಸ್ಯ ಕೇವಲಂ ॥೪೬॥

ತಂತ್ರೇಷು ದೀಕ್ಷಿತೋ ಮರ್ತ್ಯೋ ವೈದಿಕಂ ನ ಸ್ಪೃಶೇತ್ಸದಾ ।
ವೈದಿಕಶ್ಚಾಪಿ ತಂತ್ರೇಷು ದೀಕ್ಷಿತಂ ನ ಸ್ಪೃಶೇತ್ಸದಾ ॥೪೭॥

ವೈದಿಕಮಾರ್ಗದಲ್ಲಿ ನಿಷ್ಠನಾದವನು ಮಾತ್ರ ಅಜ್ಞಾನದಿಂದಲಾದರೂ ತಪ್ತಮುದ್ರಾಧಾರಣೆಯನ್ನು ಮಾಡಿಕೊಂಡರೆ ಅದರಿಂದಲೂ, ಬೇರೆ ಪುಂಡ್ರಧಾರಣೆಯಿಂದಲೂ ನಿಶ್ಚಯವಾಗಿಯೂ ಪತಿತನಾಗುತ್ತಾನೆ. ॥೪೩॥

ವೇದಮಾರ್ಗವನ್ನಾಶ್ರಯಿಸಿದವನು ದೇಹದಲ್ಲಿ ತಪ್ತಮುದ್ರಾಧಾರಣೆಯನ್ನು ಮಾಡಿಸಿಕೊಳ್ಳಬಾರದು. ಅಜ್ಞಾನದಿಂದಲಾದರೂ ಬೇರೆಯ ಪುಂಡ್ರವನ್ನೂ ಧರಿಸಲೇಬಾರದು. ॥೪೪॥

ಆಗಮೋಕ್ತರೀತಿಯಿಂದ ಯಾವ ದೇವತೆಯು ಪ್ರತಿಷ್ಠಿತವಾಗಿದೆಯೋ ಆ ದೇವತೆಯನ್ನೇ ವೈದಿಕರಾದವರೂ ನಮಸ್ಕರಿಸಿ, ಸೇವಿಸಿ ಮತ್ತು ಚನ್ನಾಗಿ ಪೂಜಿಸಬೇಕು. ಏಕೆಂದರೆ ಬಾಹ್ಯಚಿಹ್ನೆ, ಪೂಜಾಕ್ರಮಗಳು ಭಿನ್ನವಾದರೂ ಪೂಜ್ಯತತ್ವವು ಒಂದೇ ಆಗಿದೆ. ॥೪೫॥

ಎಲೌ ಆಸ್ತಿಕರೇ, ಎಲ್ಲ ವಿಗ್ರಹಗಳಲ್ಲಿಯೂ ದೇವತಾರೂಪವು ಪರಿಶುದ್ಧವಾದುದೇ. ಆಯಾ ಆಗಮದಲ್ಲಿ ಹೇಳಲ್ಪಟ್ಟ ಪೂಜೆಯ ಪ್ರಕಾರವು ಆಯಾ ಆಗಮಗಳಲ್ಲಿ ನಿರತರಾದವರಿಗೆ ಮಾತ್ರ ಪವಿತ್ರವಾದುದು. ॥೪೬॥

ತಂತ್ರಗಳಲ್ಲಿ ದೀಕ್ಷಿತನಾದ ಮನುಷ್ಯನು ವೈದಿಕನನ್ನು ಯಾವಾಗಲೂ ಮುಟ್ಟಬಾರದು. ಹಾಗೆಯೇ ವೈದಿಕನೂ ಕೂಡ ತಂತ್ರಗಳಲ್ಲಿ ದೀಕ್ಷಿತನಾದವನನ್ನು ಯಾವಾಗಲೂ ಮುಟ್ಟಬಾರದು. ॥೪೭॥

ರಾಜಾ ತು ವೈದಿಕಾನ್ಸರ್ವಾನ್ ತಾಂತ್ರಿಕಾನಖಿಲಾನಪಿ ।
ಅಸಂಕೀರ್ಣತಯಾ ನಿತ್ಯಂ ಸ್ಥಾಪಯೇನ್ಮತಿಮತ್ತಮಾಃ ॥೪೮॥

ಅನ್ನಪಾನಾದಿಭಿರ್ವಸ್ತ್ರೈಸ್ಸರ್ವಾನ್ರಾಜಾಽಭಿರಕ್ಷಯೇತ್ ।
ವೈದಿಕಾಂಸ್ತು ವಿಶೇಷೇಣ ಜ್ಞಾನಿನಂ ತು ವಿಶೇಷತಃ ॥೪೯॥

ಮಹಾದೇವಸಮೋ ದೇವೋ ಯಥಾ ನಾಸ್ತಿ ಶ್ರುತೌ ಸ್ಮೃತೌ ।
ತಥಾ ವೈದಿಕತುಲ್ಯಸ್ತು ನಾಸ್ತಿ ತಂತ್ರಾವಲಂಬಿಷು ॥೫೦॥

ಶಿವಜ್ಞಾನಸಮಂ ಜ್ಞಾನಂ ಯಥಾ ನಾಸ್ತಿ ಶ್ರುತೌ ಸ್ಮೃತೌ ।
ತಥಾ ವೈದಿಕತುಲ್ಯಸ್ತು ನಾಸ್ತಿ ತಂತ್ರಾವಲಂಬಿಷು ॥೫೧॥

ಯಥಾ ವಾರಾಣಸೀ ತುಲ್ಯಾ ಪುರೀ ನಾಸ್ತಿ ಶ್ರುತೌ ಸ್ಮೃತೌ ।
ತಥಾ ವೈದಿಕತುಲ್ಯಸ್ತು ನಾಸ್ತಿ ತಂತ್ರಾವಲಂಬಿಷು ॥೫೨॥

ಎಲೌ ಬುದ್ಧಿಶಾಲಿಗಳೇ, ದೊರೆಯಾದವನು ಸಕಲ ವೈದಿಕರನ್ನೂ, ಎಲ್ಲ ತಾಂತ್ರಿಕರನ್ನೂ, ಒಬ್ಬರಿಗೊಬ್ಬರು ಬೆರೆಯದಂತೆ ಘರ್ಷಿಸದಂತೆ ಇರಿಸಿರಬೇಕು. ಎಂದರೆ ಮೇಲೆ ಹೇಳಿದ ಧರ್ಮಗಳು ಕಲುಬೆರಿಕೆಯಾಗದಂತೆ ಕಾಪಾಡಬೇಕು. ॥೪೮॥

ರಾಜನಾದವನು ಎಲ್ಲರನ್ನೂ ಅನ್ನೋದಕಗಳಿಂದ ಚನ್ನಾಗಿ ಕಾಪಾಡಬೇಕು. ಅದರಲ್ಲಿಯೂ ವೈದಿಕರನ್ನು ಮುಖ್ಯವಾಗಿಯೂ, ಅವರಲ್ಲಿಯೂ ಜ್ಞಾನಿಗಳನ್ನು ವಿಶೇಷವಾಗಿಯೂ, ಸಂರಕ್ಷಿಸಬೇಕು. ॥೪೯॥

ವೇದದಲ್ಲಿಯಾಗಲೀ, ಸ್ಮೃತಿಯಲ್ಲಾಗಲೀ ಹೇಗೆ ಪರಮೇಶ್ವರನಿಗೆ ಸಮನಾದ ದೇವನಿಲ್ಲವೋ ಹಾಗೆ ತಂತ್ರಾವಲಂಬಿಗಳೊಳಗೆ ವೈದಿಕನಿಗೆ ಸಮಾನನು ಯಾರೂ ಇಲ್ಲವು. ॥೫೦॥

ಶ್ರುತಿಯಲ್ಲಾಗಲೀ, ಸ್ಮೃತಿಯಲ್ಲಾಗಲೀ ಹೇಗೆ ಶಿವಜ್ಞಾನಕ್ಕೆ ಸಮವಾದ ಜ್ಞಾನವಿಲ್ಲವೋ ಹಾಗೆ ತಂತ್ರಾವಲಂಬಿಗಳೊಳಗೆ ವೈದಿಕನಿಗೆ ಸಮನಾದವನು ಯಾರೂ ಇಲ್ಲವು. ॥೫೧॥

ಶ್ರುತಿ, ಸ್ಮೃತಿಗಳೊಳಗೆ ಕಾಶಿಗೆ ಸಮಾನವಾದ ನಗರವು ಹೇಗೆ ಬೇರೊಂದು ಇದೆ ಎಂದು ಹೇಳಿ ಇಲ್ಲವೋ ಹಾಗೆ ತಂತ್ರಾವಲಂಬಿಗಳೊಳಗೆ ವೈದಿಕನಿಗೆ ಸಮನಾದವನು ಯಾರೂ ಇಲ್ಲವು. ॥೫೨॥

ಷಡಕ್ಷರಸಮೋ ಮಂತ್ರೋ ಯಥಾ ನಾಸ್ತಿ ಶ್ರುತೌ ಸ್ಮೃತೌ ।
ತಥಾ ವೈದಿಕತುಲ್ಯಸ್ತು ನಾಸ್ತಿ ತಂತ್ರಾವಲಂಬಿಷು ॥೫೩॥

ಯಥಾ ಭಾಗೀರಥೀತುಲ್ಯಾ ನದೀ ನಾಸ್ತಿ ಶ್ರುತೌ ಸ್ಮೃತೌ ।
ತಥಾ ವೈದಿಕತುಲ್ಯಸ್ತು ನಾಸ್ತಿ ತಂತ್ರಾವಲಂಬಿಷು ॥೫೪॥

ಓದನೇನ ಸಮಂ ಭೋಜ್ಯಂ ಯಥಾ ಲೋಕೇ ನ ವಿದ್ಯತೇ ।
ತಥಾ ವೈದಿಕತುಲ್ಯಸ್ತು ನಾಸ್ತಿ ತಂತ್ರಾವಲಂಬಿಷು ॥೫೫॥

ದೇವದೇವೋ ಮಹಾದೇವೋ ಯಥಾ ಸರ್ವೈಃ ಪ್ರಪೂಜ್ಯತೇ ।
ತಥೈವ ವೈದಿಕೋ ಮರ್ತ್ಯಃ ಪೂಜ್ಯಸ್ಸರ್ವಜನೈರಪಿ ॥೫೬॥

ಆದಿತ್ಯೇನ ವಿಹೀನಂ ತು ಜಗದಂಧಂ ಯಥಾ ಭವೇತ್ ।
ತಥಾ ವೈದಿಕಹೀನಂ ತು ಜಗದಂಧಂ ನ ಸಂಶಯಃ ॥೫೭॥

ಶ್ರುತಿ, ಸ್ಮೃತಿಗಳೊಳಗೆ ಷಡಕ್ಷರಕ್ಕೆ ಸಮನಾದ ಮಂತ್ರವು ಹೇಗೆ ಇಲ್ಲವೋ ಹಾಗೆ ತಂತ್ರಾವಲಂಬಿಗಳೊಳಗೆ ವೈದಿಕನಿಗೆ ಸಮನಾದವನು ಬೇರೆ ಇಲ್ಲವು. ॥೫೩॥

ಶ್ರುತಿ, ಸ್ಮೃತಿಗಳೊಳಗೆ ಗಂಗೆಗೆ ಸಮನಾದ ಪಾವನವಾದ ನದಿಯು ಇಲ್ಲದಿರುವುದು ಹೇಗೋ ಹಾಗೆ ತಂತ್ರಾವಲಂಬಿಗಳೊಳಗೆ ವೈದಿಕನಿಗೆ ಸಮನಾದವನಿಲ್ಲವು. ॥೫೪॥

ಅನ್ನಕ್ಕೆ ಸಮನಾದ ಆಹಾರವು ಹೇಗೆ ಪ್ರಪಂಚದಲ್ಲಿ ಬೇರೊಂದಿಲ್ಲವೋ ಹಾಗೆ ತಂತ್ರಾವಲಂಬಿಗಳೊಳಗೆ ವೈದಿಕನಿಗೆ ಸಮಾನನಿಲ್ಲವು. ॥೫೫॥

ದೇವದೇವನಾದ ಪರಮೇಶ್ವರನು ಹೇಗೆ ಎಲ್ಲರಿಂದಲೂ ಪೂಜಿಸಲ್ಪಡುತ್ತಾನೋ ಹಾಗೆ ವೇದಮಾರ್ಗಾವಲಂಬಿಯಾದ ಮನುಷ್ಯನು ಮೇಲಾದ ಸಂಸ್ಕೃತಿಯುಳ್ಳವನಾದುದರಿಂದ ಸರ್ವರಿಂದಲೂ ಪೂಜಿಸಲ್ಪಡುವನು. ॥೫೬॥

ಸೂರ್ಯನಿಲ್ಲದ ಪ್ರಪಂಚವು ಹೇಗೆ ಕತ್ತಲೆಯಿಂದ ಕುರುಡಾಗುವುದೋ, ಹಾಗೆ ವೈದಿಕನಿಲ್ಲದ ಜಗತ್ತು ಪ್ರಗತಿಮಾರ್ಗವನ್ನು ಕಾಣದೆ ಅಂಧವಾಗುವುದು. ಸಂಶಯವಿಲ್ಲವು. ॥೫೭॥

ಪ್ರಾಣೇಂದ್ರಿಯಾದಿಹೀನಂ ತು ಶರೀರಂ ಕುಣಪಂ ಯಥಾ ।
ತಥಾ ವೈದಿಕಹೀನಂ ತು ಜಗದ್ವ್ಯರ್ಥಂ ನ ಸಂಶಯಃ ॥೫೮॥

ಅಹೋ ವೈದಿಕಮಾಹಾತ್ಮ್ಯಂ ಮಯಾ ವಕ್ತುಂ ನ ಶಕ್ಯತೇ ।
ವೇದ ಏವ ತು ಮಾಹಾತ್ಮ್ಯಂ ವೈದಿಕಸ್ಯಾಬ್ರವೀನ್ಮುದಾ ॥೫೯॥

ಸ್ಮೃತಯಶ್ಚ ಪುರಾಣಾನಿ ಭಾರತಾದೀನಿ ಸುವ್ರತಾಃ ।
ವೈದಿಕಸ್ಯ ತು ಮಾಹಾತ್ಮ್ಯಂ ಪ್ರವದಂತಿ ಸದಾ ಮುದಾ ॥೬೦॥

ವೇದೋಕ್ತಂ ತಾಂತ್ರಿಕಾಸ್ಸರ್ವೇ ಸ್ವೀಕುರ್ವಂತಿ ದ್ವಿಜರ್ಷಭಾಃ ।
ನೋಪಜೀವಂತಿ ತಂತ್ರೋಕ್ತಂ ವೇದಃ ಸಾಕ್ಷಾತ್ಸನಾತನಃ ॥೬೧॥

ಇತ್ಯುಕ್ತ್ವಾ ಭಗವಾನ್ ಸೂತಃ ಸ್ವಗುರುಂ ವ್ಯಾಸಸಂಜ್ಞಿತಂ ।
ಸ್ಮೃತ್ವಾ ಭಕ್ತ್ಯಾಽವಶೋ ಭೂತ್ವಾ ಪಪಾತ ಭುವಿ ದಂಡವತ್ ॥೬೨॥

ಪ್ರಾಣೇಂದ್ರಿಯಾದಿಗಳಿಲ್ಲದ ಶರೀರವು ಹೇಗೆ ಹೆಣವಾಗುತ್ತದೋ, ಹಾಗೆ ವೈದಿಕನಿಲ್ಲದ ಪ್ರಪಂಚವು ಪ್ರಗತಿಮಾರ್ಗಗಾಮಿಯಾಗಲಾರದೆ ವ್ಯರ್ಥವಾಗುವುದರಲ್ಲಿ ಸಂಶಯವಿಲ್ಲವು. ॥೫೮॥

ಅಹೋ! ವೈದಿಕನ ಮಹಿಮೆಯನ್ನು ಪೂರ್ತಿ ಹೇಳಲು ನನ್ನಿಂದ ಸಾಧ್ಯವಿಲ್ಲವು. ವೇದವೇ ವೈದಿಕನ ಮಹಿಮೆಯನ್ನು ಸಂತೋಷದಿಂದ ಹೇಳಿರುತ್ತದೆ. ॥೫೯॥

ಎಲೌ ಸುವ್ರತರೇ, ಸ್ಮೃತಿಗಳೂ ಭಾರತವೇ ಮೊದಲಾದ ಪುರಾಣಗಳೂ ವೇದಮತಾವಲಂಬಿಯ ಮಹಿಮೆಯನ್ನು ಸದಾ ಸಂತೋಷದಿಂದ ಹೊಗಳುತ್ತಿರುತ್ತವೆ. ಏಕೆಂದರೆ ವೇದೋಕ್ತಧರ್ಮತತ್ವಗಳು ತಾಂತ್ರಿಕರಿಗೂ ಮಾನ್ಯವಾಗಿವೆ.॥೬೦॥

ಬ್ರಾಹ್ಮಣಶ್ರೇಷ್ಠರೇ, ಆಗಮಿಕರೂ, ತಾಂತ್ರಿಕರೂ ಎಲ್ಲರೂ ಮೇಲಾದ ವೇದೋಕ್ತಧರ್ಮವನ್ನು ಅಂಗೀಕರಿಸುತ್ತಾರೆ. ಆದುದರಿಂದ ವೇದವು ಸನಾತನವಾದ ಪ್ರಮಾಣವಾಗಿ ಎಲ್ಲರಿಂದಲೂ ಅಂಗೀಕೃತವಾಗಿದೆ. ॥೬೧॥

ಲೋಕಪೂಜ್ಯನಾದ ಸೂತನು ಈ ರೀತಿಯಾಗಿ ಹೇಳಿ, ವ್ಯಾಸಸಂಜ್ಞಿತನಾದ ತನ್ನ ಗುರುವನ್ನು ಸ್ಮರಿಸಿ, ಭಕ್ತಿಪರವಶನಾಗಿ ಭೂಮಿಯಲ್ಲಿ ಸಾಷ್ಟಾಂಗದಂಡಪ್ರಣಾಮವನ್ನು ಮಾಡಿದನು. ॥೬೨॥

ಅಸ್ಮಿನ್ನವಸರೇ ಶ್ರೀಮಾನ್ಮುನಿಃ ಸತ್ಯವತೀಸುತಃ ।
ಶಿಷ್ಯಸ್ಮೃತ್ಯಂಕುಶಾಕೃಷ್ಟಃ ತತ್ರೈವಾವಿರಭೂತ್ಸ್ವಯಂ ॥೬೩॥

ತಂ ದೃಷ್ಟ್ವಾ ಮುನಯಸ್ಸರ್ವೇ ಸಂತೋಷಾದ್ಗದ್ಗದಸ್ವರಾಃ ।
ನಿಶ್ಚೇಷ್ಟಾ ನಿತರಾಂ ಭೂಮೌ ಪ್ರಣಮ್ಯ ಕರುಣಾನಿಧಿಂ ॥೬೪॥

ಸ್ತೋತ್ರೈಸ್ಸ್ತುತ್ವಾ ಮಹಾತ್ಮಾನಂ ವ್ಯಾಸಂ ಸತ್ಯವತೀಸುತಂ ।
ಪೂಜಯಾಮಾಸುರತ್ಯರ್ಥಂ ವನ್ಯಪುಷ್ಪಫಲಾದಿಭಿಃ ॥೬೫॥

ಭಗವಾನಪಿ ಸರ್ವಜ್ಞಃ ಕರುಣಾಸಾಗರಃ ಪ್ರಭುಃ ।
ಉವಾಚ ಮಧುರಂ ವಾಕ್ಯಂ ಮುನೀನಾಲೋಕ್ಯ ಸುವ್ರತಾನ್ ॥೬೬॥

ಶಿವಮಸ್ತು ಮುನೀಂದ್ರಾಣಾಂ ನಾಶಿವಂ ತು ಕದಾಚನ ।
ಅಹೋಭಾಗ್ಯ ಮಹೋಭಾಗ್ಯಂ ಮಯಾ ವಕ್ತುಂ ನ ಶಕ್ಯತೇ ॥೬೭॥

ಈ ಸಮಯದಲ್ಲಿ ಶಿಷ್ಯನ ಸ್ಮರಣೆಯೆಂಬ ಅಂಕುಶದಿಂದೆಳೆಯಲ್ಪಟ್ಟವನಾಗಿ ಸತ್ಯವತೀದೇವಿಯ ಮಗನಾದ ವ್ಯಾಸಮುನಿಯು ಅಲ್ಲಿಯೇ ಪ್ರತ್ಯಕ್ಷನಾದನು. ॥೬೩॥

ಅಲ್ಲಿದ್ದ ಸಕಲ ಮುನಿಗಳೂ ದಯಾಸಮುದ್ರನಾದ ಆ ವ್ಯಾಸಮುನಿಯನ್ನು ನೋಡಿ ಸಂತೋಷದಿಂದ ಗದ್ಗದಧ್ವನಿಯುಳ್ಳವರಾಗಿ, ಸ್ತಬ್ಧರಾಗಿ ಭಕ್ತಿಯಿಂದ ಭೂಮಿಯ ಮೇಲೆ ಸಾಷ್ಟಾಂಗಪ್ರಣಾಮಮಾಡಿ, ॥೬೪॥

ಮಹಾತ್ಮನೂ, ಸತ್ಯವತೀ ಪುತ್ರನೂ ಆದ ವ್ಯಾಸಋಷಿಯನ್ನು ಸ್ತೋತ್ರಗಳಿಂದ ಸ್ತುತಿಸಿ, ಭಕ್ತಿಯಿಂದ ಆ ಅರಣ್ಯದಲ್ಲಿ ದೊರೆಯುವ ಫಲಪುಷ್ಪಗಳಿಂದ ಬಹಳವಾಗಿ ಪೂಜಿಸಿ, ಸತ್ಕರಿಸಿದರು. ॥೬೫॥

ಸರ್ವಜ್ಞನೂ, ದಯಾಸಾಗರನೂ, ಪ್ರಭುವೂ ಆದ ವ್ಯಾಸನು, ಸಚ್ಚರಿತ್ರರಾದ ಆ ಋಷಿಗಳನ್ನು ನೋಡಿ ಮಧುರವಾದ ಮಾತುಗಳನ್ನು ಹೀಗೆ ಹೇಳಿದನು. ॥೬೬॥

ವ್ಯಾಸನು ಹೇಳಿದನು.—ಮುನಿಶ್ರೇಷ್ಠರಾದ ನಿಮಗೆಲ್ಲರಿಗೂ ಮಂಗಳವುಂಟಾಗಲಿ. ಅಮಂಗಳವು ಯಾವಾಗಲೂ ಉಂಟಾಗದಿರಲಿ. ಓಹೋ! ನಿಮ್ಮ ಅದೃಷ್ಟವೂ, ಆಶ್ಚರ್ಯಕರವಾಗಿರುವಷ್ಟು ಮೇಲಾದುದು. ಅದನ್ನು ಸರಿಯಾಗಿ ಪೂರ್ಣವಾಗಿ ವರ್ಣಿಸುವುದು ನನ್ನಿಂದಲೂ ಸಾಧ್ಯವಿಲ್ಲವು. ॥೬೭॥

ಶ್ರೂಯತಾಂ ಮುನಯಸ್ಸರ್ವೇ ಭಾಗ್ಯವಂತಸ್ಸಮಾಹಿತಾಃ ।
ಪ್ರಭಾವಾದೇವ ರುದ್ರಸ್ಯ ಪ್ರಭೋಃ ಕಾರುಣಿಕಸ್ಯ ಚ ॥೬೮॥

ಪುರಾಣಾನಾಂ ಸಮಸ್ತಾನಾಮಹಂ ಕರ್ತಾ ಪುರಾಽಭವಂ ।
ಮತ್ಪ್ರಸಾದಾದಯಂ ಸೂತಸ್ತ್ವ ಭವದ್ರುದ್ರವಲ್ಲಭಃ ॥೬೯॥

ರುದ್ರಸ್ಯಾಜ್ಞಾಬಲಾದೇವ ಪ್ರಭೋಃ ಕಾರುಣಿಕಸ್ಯ ಚ ।
ಪುರಾಣಸಂಹಿತಾಕರ್ತಾ ದೇಶಿಕಶ್ಚಾಭವದ್ಭೃಶಂ ॥೭೦॥

ಪುರಾಕೃತೇನ ಪುಣ್ಯೇನ ಭವಂತೋಽಪೀಶ್ವರಾಜ್ಞಯಾ ।
ಸೂತಾದಸ್ಮಾಚ್ಛ್ರುತೇರರ್ಥಂ ಶ್ರುತವಂತೋ ಯಥಾ ತಥಂ ॥೭೧॥

ಕೃತಾರ್ಥಾಶ್ಚ ಪ್ರಸಾದಶ್ಚ ರೌದ್ರಃ ಕಿಂ ನ ಕರಿಷ್ಯತಿ ।
ಆಜ್ಞಯಾ ಕೇವಲಂ ಶಂಭೋರಹಂ ವೇದಾರ್ಥವೇದನೇ ॥೭೨॥

ಸಂಪೂರ್ಣಸ್ಸರ್ವವೇದಾಂತವಾಕ್ಯಾನಾಮರ್ಥನಿಶ್ಚಯೇ ।
ಸಮರ್ಥಶ್ಚ ನಿಯುಕ್ತಶ್ಚ ಸೂತ್ರಾರಂಭಕೃತೇಽಪಿ ಚ ॥೭೩॥

ಎಲೌ ಭಾಗ್ಯಶಾಲಿಗಳಾದ ಋಷಿಗಳೇ, ಚಿತ್ತೈಕಾಗ್ರತೆಯುಳ್ಳವರಾಗಿ ಕೇಳಿರಿ. ದಯಾಶಾಲಿಯೂ, ಪ್ರಭುವೂ ಆದ ರುದ್ರನ ಮಹಿಮೆಯಿಂದಲೇ, ॥೬೮॥

ಪೂರ್ವದಲ್ಲಿ ನಾನು ಸಮಸ್ತಪುರಾಣಗಳನ್ನೂ ವಿರಚಿಸಿದೆನು. ಈ ಸೂತನೂ ನನ್ನ ಅನುಗ್ರಹದಿಂದಲೇ ರುದ್ರನ ದಯೆಗೆ ಪಾತ್ರನಾದನು. ॥೬೯॥

ದಯಾಶಾಲಿಯಾದ ಮತ್ತು ಪ್ರಭುವಾದ ರುದ್ರನ ಆಜ್ಞೆಯಿಂದಲೇ ಪುರಾಣ ಸಂಹಿತೆಗಳನ್ನು ಈ ಸೂತನು ಒಟ್ಟುಗೂಡಿಸಿ ಕ್ರಮಪಡಿಸಿ ಹೇಳಿದವನೂ ಮತ್ತು ಪಾಠಕನೂ ಪ್ರಚಾರಕನೂ ಆದನು. ॥೭೦॥

ಜನ್ಮಾಂತರದಲ್ಲಿ ಮಾಡಿದ ಪುಣ್ಯಫಲದ ಮಹಿಮೆಯು ಫಲವಾಗಿ ನೀವೂ ಕೂಡ ಆ ಈಶ್ವರಾಜ್ಞೆಯನ್ನು ಅನುಸರಿಸಿ, ಈ ಸೂತನ ದೆಸೆಯಿಂದ ವೇದಾರ್ಥವನ್ನು ಯಥಾರ್ಥವಾಗಿ ಕೇಳಿರುವಿರಿ! ॥೭೧॥

ಮತ್ತು ಧನ್ಯರೂ ಆಗಿದ್ದೀರಿ! ಈಶ್ವರನ ಅನುಗ್ರಹವು ಏನನ್ನು ತಾನೇ ಮಾಡಲಾರದು? ಈಶ್ವರನ ಅನುಗ್ರಹದಿಂದಲೇ ನಾನೂ ವೇದಾರ್ಥವನ್ನು ತಿಳಿಯು

ಆಜ್ಞಯಾ ದೇವದೇವಸ್ಯ ಭವತಾಮಪಿ ಯೋಗಿನಾಂ ।
ಜ್ಞಾನೇ ಗುರುಗುರುಶ್ಚಾಹಮಭವಂ ಮುನಿಪುಂಗವಾಃ ॥೭೪॥

ಭವಂತೋಽಪಿ ಶಿವಜ್ಞಾನೇ ವೇದಸಿದ್ಧೇ ವಿಶೇಷತಃ ।
ಭಕ್ತ್ಯಾ ಪರಮಯಾ ಯುಕ್ತಾ ನಿಷ್ಠಾ ಭವತ ಸರ್ವದಾ ॥೭೫॥

ಇತ್ಯುಕ್ತ್ವಾ ಭಗವಾನ್ವ್ಯಾಸಃ ಸ್ವಶಿಷ್ಯಂ ಸೂತಮುತ್ತಮಂ ।
ಉತ್ಥಾಪ್ಯಾಲಿಂಗ್ಯ ದೇವೇಶಂ ಸ್ಮೃತ್ವಾ ನತ್ವಾಽಗಮದ್ಗುರುಃ ॥೭೬॥

ಪುನಶ್ಚ ಸೂತಸ್ಸರ್ವಜ್ಞಃ ಸ್ವಶಿಷ್ಯಾನವಲೋಕ್ಯ ಚ ।
ಪ್ರಾಹ ಗಂಭೀರಯಾ ವಾಚಾ ಭವತಾಂ ಶಿವಮಸ್ತ್ವಿತಿ ॥೭೭॥

ವುದರಲ್ಲಿ ಸಮರ್ಥನಾಗಿರುತ್ತೇನೆ (ಸಫಲನಾಗಿರುತ್ತೇನೆ). ಆತನ ಅನುಗ್ರಹದಿಂದಲೇ ಸಕಲ ವೇದಾಂತವಾಕ್ಯಗಳ ಅರ್ಥದ ನಿರ್ಣಯದಲ್ಲಿ ಸಮರ್ಥನಾದುದರಿಂದ, ಸೂತ್ರ ರಚನೆಯಲ್ಲಿ ನಿಯಮಿಸಲ್ಪಟ್ಟವನೂ ಆಗಿದೇನೆ. ||೭೨-೭೩||

ಎಲೌ ಮುನಿಪುಂಗವರೇ, ದೇವದೇವನಾದ ಆ ಪರಮೇಶನ ಅಪ್ಪಣೆಯಿಂದಲೇ ಯೋಗಿಗಳಾದ ನಿಮಗೂ ಕೂಡ ಜ್ಞಾನವನ್ನು ಉಂಟುಮಾಡುವ ಗುರುಗಳಲ್ಲಿ ಉತ್ತಮನಾದ ಗುರುವೂ ಆಗಿದೇನೆ. ||೭೪||

ನೀವೂ ಕೂಡ ವೇದದಿಂದ ನಿರ್ಣೀತವಾದ ಈ ಶಿವಸ್ವರೂಪಜ್ಞಾನದ ಸಂಪಾದನೆಯಲ್ಲಿ ಹೆಚ್ಚಾದ ಭಕ್ತಿಯಿಂದ ಎಲ್ಲಕಾಲದಲ್ಲಿಯೂ ವಿಶೇಷವಾಗಿ ನಿರತರಾಗಿರಿ.||೭೫||

ಈ ರೀತಿಯಾಗಿ ಹೇಳಿ ಪೂಜ್ಯಗುರುವಾದ ವ್ಯಾಸನು ತನ್ನ ಉತ್ತಮ ಶಿಷ್ಯನಾದ ಸೂತನನ್ನು ಮೇಲಕ್ಕೆಬ್ಬಿಸಿ ಅಪ್ಪಿಕೊಂಡು, ದೇವಗುರುವಾದ ಈಶ್ವರನನ್ನು ಧ್ಯಾನಿಸಿ ಮತ್ತು ನಮಸ್ಕರಿಸಿ, ಹೊರಟುಹೋದನು. ||೭೬||

ಸರ್ವಜ್ಞನಾದ ಸೂತನೂ ಮತ್ತೊಂದಾವೃತ್ತಿ ತನ್ನ ಶಿಷ್ಯರನ್ನು ನೋಡಿ, ಗಂಭೀರವಾದ ವಾಣಿಯಿಂದ ನಿಮಗೆಲ್ಲರಿಗೂ ಮಂಗಳವಾಗಲೆಂದು ಹೇಳಿದನು. ನಿಜವಾದ ಧರ್ಮಾಚರಣೆಯಿಂದ ತತ್ವಸಾಕ್ಷಾತ್ಕಾರವಾಗಲಿ ಎಂದು ಹರಸಿದನು. ||೭೭||

ಮಯೋಕ್ತಾ ಪರಮಾ ಗೀತಾ ಪಠಿತಾ ಯೇನ ತಸ್ಯ ತು ।
ಆಯುರಾರೋಗ್ಯಮೈಶ್ವರ್ಯಂ ವಿಜ್ಞಾನಂ ಚ ಭವಿಷ್ಯತಿ ॥೨೮॥

ಶಿವ ಪ್ರಸಾದಸ್ಸುಲಭೋ ಭವಿಷ್ಯತಿ ನ ಸಂಶಯಃ ।
ಗುರುತ್ವಂ ಚ ಮನುಷ್ಯಾಣಾಂ ಭವಿಷ್ಯತಿ ನ ಸಂಶಯಃ ॥೨೯॥

ವಿದ್ಯಾರೂಪಾ ಯಾ ಶಿವಾ ವೇದವೇದ್ಯಾ
ಸತ್ಯಾನಂದಾನಂತಸಂವಿತ್ಸ್ವರೂಪಾ ।
ತಸ್ಯಾ ವಾಚಃ ಸರ್ವಲೋಕೈಕಮಾತುಃ
ಭಕ್ತ್ಯಾ ನಿತ್ಯಂ ಚಾಂಬಿಕಾಯಾಃ ಪ್ರಸಾದಾತ್ ॥೩೦॥

ಗುರುಪ್ರಸಾದಾದಪಿ ಸುವ್ರತಾ ಮಯಾ
ಶಿವಪ್ರಸಾದಾದಪಿ ಚೋತ್ತಮೋತ್ತಮಾತ್ ।
ವಿನಾಯಕಸ್ಯಾಪಿ ಮಹಾಪ್ರಸಾದಾತ್
ಷಡಾನನಸ್ಯಾಪಿ ಮಹಾಪ್ರಸಾದಾತ್ ॥೩೧॥

ಓ ಋಷಿಗಳೇ, ನನ್ನಿಂದ ಹೇಳಲ್ಪಟ್ಟ ಉತ್ತಮವಾದ ಈ ಗೀತೆಯನ್ನು ಯಾರು ಪಠಿಸುತ್ತಾರೋ ಅಂತಹವರಿಗೆ ಆಯುರಾರೋಗ್ಯ ಐಶ್ವರ್ಯಗಳೂ, ಶಾಸ್ತ್ರ ಜ್ಞಾನವೂ ಆ ಪಠನ, ಅದರ ಅರ್ಥದ ಮನನ ನಿದಿಧ್ಯಾಸನಗಳಿಂದ ಸಾಕ್ಷಾತ್ಕಾರ ವಾಗುತ್ತದೆ. ॥೨೮॥

ವೈದಿಕಧಾರ್ಮಿಕರಾದ ಅಂತಹವರಿಗೆ ಶಿವಾನುಗ್ರಹವು ಸುಲಭವಾಗಿ ಉಂಟಾಗುವುದು. ಹಾಗೆಯೇ ಮನುಷ್ಯರೊಳಗೆ ಶ್ರೇಷ್ಠತೆಯೂ ಅವರಿಗೆ ಉಂಟಾಗುವುದರಲ್ಲಿ ಸಂಶಯವಿಲ್ಲವು. ಪ್ರಗತಿಮಾರ್ಗಪ್ರದರ್ಶನದಿಂದ ಗೌರವವು ಬರುತ್ತದೆ. ॥೨೯॥

ವಿದ್ಯಾಸ್ವರೂಪಿಣಿಯೂ, ವೇದವೇದ್ಯಳೂ, ಸಚ್ಚಿದಾನಂದಾನಂತಜ್ಞಾನಸ್ವರೂಪಳೂ ಆದ ಯಾವ ಅಂಬಿಕೆಯುಂಟೋ ಅಂತಹ ಲೋಕೈಕಮಾತೆಯಾದ ದೇವಿಯ ಮಾತುಗಳಿಂದಲೂ, ನಿತ್ಯವಾದ ಭಕ್ತಿಯಿಂದಲೂ, ಅಂಬಿಕೆಯ ಅನುಗ್ರಹದಿಂದಲೂ, ನಾನು ನಿಮಗೆ ಈ ವೇದಾಂತ ಮುಖ್ಯಾರ್ಥವನ್ನು ತಿಳಿಯ ಹೇಳಿದೆನು. ॥೩೦॥

ಎಲೌ ಸುವ್ರತರೇ, ಅಷ್ಟೇ ಅಲ್ಲದೆ ಗುರುವಿನ ಅನುಗ್ರಹದ ದೆಸೆಯಿಂದಲೂ, ಉತ್ತಮೋತ್ತಮವಾದ ಶಿವಪ್ರಸಾದದ ದೆಸೆಯಿಂದಲೂ, ವಿನಾಯಕನ ಮಹಾಪ್ರಸಾದದ ದೆಸೆಯಿಂದಲೂ, ಷಡಾನನನಾದ ಕುಮಾರಸ್ವಾಮಿಯ ಅನುಗ್ರಹದಿಂದಲೂ, ॥೩೧॥

ಯಜ್ಞವೈಭವ ಸಮಾಹ್ವಯಃ ಕೃತಃ
ಸರ್ವವೇದಮಥನೇನ ಸತ್ತಮಾಃ ।
ಅತ್ರ ಮುಕ್ತಿರಪಿ ಶೋಭನಾ ಪರಾ
ಸುಸ್ಥಿತೈವ ನ ಹಿ ತತ್ರ ಸಂಶಯಃ ॥೮೨॥

ಯಜ್ಞವೈಭವಸಮಾಹ್ವಯಂ ಪರಂ
ಖಂಡಮತ್ರ ವಿಮಲಂ ಪಠೇನ್ನರಃ ।
ಸತ್ಯಬೋಧಸುಖಲಕ್ಷಣಂ ಶಿವಂ
ಸತ್ಯಮೇವ ಝಟಿತಿ ಪ್ರಯಾತಿ ಹಿ ॥೮೩॥

ಮದುಕ್ತಸಂಹಿತಾ ಪರಾ ಸಮಸ್ತದುಃಖಹಾರಿಣೀ
ನರಸ್ಯ ಮುಕ್ತಿದಾಯಿನೀ ಶಿವಪ್ರಸಾದಕಾರಿಣೀ ।
ಸಮಸ್ತವೇದಸಾರತಸ್ಸುನಿರ್ಮಿತಾತಿಶೋಭನಾ
ಮಹತ್ತರಾನುಭೂತಿಮದ್ಭಿರಾದೃತಾ ನ ಚಾಪರೈಃ ॥೮೪॥

ಎಲೌ ಶ್ರೇಷ್ಠತಮರೇ, ಯಜ್ಞವೈಭವವೆಂಬ ಹೆಸರುಳ್ಳ ಈ ಖಂಡವು ಸಕಲ ವೇದಗಳ ಅರ್ಥಸಮಾಲೋಚನೆಯನ್ನು ಮಾಡಿ ಇದರಲ್ಲಿ ಹೇಳಿರುವ ಧರ್ಮಾಚರಣೆಯು ವಿವರದೊಡನೆ ನನ್ನಿಂದ ರಚಿಸಲ್ಪಟ್ಟಿತು. ಇಲ್ಲಿ ಶ್ರೇಷ್ಠವೂ ಮತ್ತು ಪರಮಮಂಗಳವೂ ಆದ ಮೋಕ್ಷವೆಂಬ ಪರಮಪುರುಷಾರ್ಥದ ಲಾಭವು ಸುಸ್ಥಿರವಾಗಿದೆ. ಎಂಬುದರಲ್ಲಿ ಸಂಶಯವೇ ಇಲ್ಲವು. ॥೮೨॥

ಯಜ್ಞವೈಭವವೆಂದು ಹೆಸರುಳ್ಳ, ಮುಖ್ಯವೂ ಮತ್ತು ನಿರ್ಮಲವೂ ಆದ ಈ ಖಂಡವನ್ನು ಯಾರು ಈ ಲೋಕದಲ್ಲಿ ಪಠಿಸುತ್ತಾರೋ, ಅಂತಹವರು ಸತ್ಯವಾಗಿಯೂ ಸಚ್ಚಿದಾನಂದಸ್ವರೂಪನಾದ ಶಿವನನ್ನು ಬೇಗನೆ ಹೊಂದುತ್ತಾರೆ. ॥೮೩॥

ನನ್ನಿಂದ ಹೇಳಲ್ಪಟ್ಟ, ಶ್ರೇಷ್ಠವಾದ, ಸಕಲ ದುಃಖಗಳನ್ನೂ ನಾಶಪಡಿಸುವ, ಮನುಷ್ಯನಿಗೆ ಮುಕ್ತಿಯನ್ನು ದೊರಕಿಸಿ ಕೊಡುವ, ಈಶ್ವರಾನುಗ್ರಹವನ್ನುಂಟುಮಾಡತಕ್ಕ ಈ ಸಂಹಿತೆಯು ಸಕಲ ವೇದಗಳ ಸಾರದಿಂದ ಅತಿ ಮಂಗಳಕರವಾಗಿ ವಿಸ್ತಾರವಾಗಿ ರಚಿಸಲ್ಪಟ್ಟಿರುತ್ತದೆ. ಇದು ಹೆಚ್ಚು ಮಹಿಮಾಶಾಲಿಗಳಾದ ತತ್ತ್ವಸಾಕ್ಷಾತ್ಕಾರವನ್ನು ಪಡೆದಿರುವವರಿಂದ ಪುರಸ್ಕರಿಸಲ್ಪಟ್ಟಿದೆ. ಇತರರಿಂದಲ್ಲವು. ॥೮೪॥

ಮದುಕ್ತಸಂಹಿತಾ ತು ಯಾ ತಯಾ ವಿರುದ್ಧಮಸ್ತಿ ಚೇ
ದನರ್ಥಕಂ ಹಿ ತದ್ಬುಧಾ ವಚಃ ಪ್ರಯೋಜನಾಯ ನ ।
ಶ್ರುತಿಪ್ರಮಾಣರೂಪಿಣೀ ಸುಸಂಹಿತಾ ಮಯೋದಿತಾ
ಶ್ರುತಿಪ್ರಮಾಣಮೇವ ಸಾ ಮಹಾಜನಸ್ಯ ಸಂತತಂ ॥೮೫॥

ಮದುಕ್ತಸಂಹಿತಾಮಿಮಾಮತಿಪ್ರಿಯೇಣ ಮಾನವಃ
ಪಠನ್ನಯಾತಿ ಸಂಸೃತಿಂ ಪ್ರಯಾತಿ ಶಂಕರಂ ಪರಂ ।
ಅತಶ್ಚ ಶೋಭನಾ ಮಿಮಾಮಹರ್ನಿಶಂ ಸಮಾಹಿತಃ
ಶ್ರುತಿಪ್ರಮಾಣವತ್ಪಠೇದತಂದ್ರಿತಃ ಸ್ವಮುಕ್ತಯೇ ॥೮೬॥

ಪುರಾಣಸಂಹಿತಾ ಮಿಮಾಮತಿಪ್ರಿಯೇಣ ಯಃ ಪುಮಾನ್
ಶೃಣೋತಿ ಸಂಸೃತಿಂ ಪುನರ್ನ ಯಾತಿ ಯಾತಿ ಶಂಕರಂ ।
ಪರಾನುಭೂತಿರದ್ವಯಾ ವಿಜಾಯತೇ ಚ ತಸ್ಯ ಸಾ
ಶಿವಾ ಚ ವಾಚಿ ನೃತ್ಯತಿ ಪ್ರಿಯೇಣ ಶಂಕರೋಽಪಿ ಚ ॥೮೭॥

ನನ್ನಿಂದ ಹೇಳಲ್ಪಟ್ಟ ಯಾವ ಈ ಸಂಹಿತೆಯುಂಟೋ ಅದರೊಡನೆ ಇತರ ಉಪದೇಶಗಳಿಗೆ ವಿರೋಧವಿರುವುದಾದರೆ ಅವು ನಿರರ್ಥಕವಾದುವೇ ಸರಿ. ಎಲೌ ಬುಧರೇ, ಅಂತಹ ಉಪದೇಶವು ಮಹಾಜನಗಳಿಗೆ ಪ್ರಯೋಜನಕಾರಿಯಾಗುವುದಲ್ಲವು. ನನ್ನಿಂದ ಮಂಗಳಕರವಾದ ಈ ಸಂಹಿತೆಯು ವೇದಪ್ರಮಾಣವನ್ನು ಅನುಸರಿಸಿರುವ ಸ್ವರೂಪವುಳ್ಳದ್ದಾಗಿ ಹೇಳಲ್ಪಟ್ಟಿತು. ಮತ್ತು ಈ ಸಂಹಿತೆಯು ಯಾವಾಗಲೂ ವೇದವನ್ನೇ ಪ್ರಮಾಣವಾಗಿ ಅವಲಂಬಿಸಿದೆಯಾದುದರಿಂದ ಸರಿಯಾದುದು. ॥೮೫॥

ಯಾವ ಮನುಷ್ಯನು, ನನ್ನಿಂದ ಹೇಳಲ್ಪಟ್ಟ ಈ ಸಂಹಿತೆಯನ್ನು ಹೆಚ್ಚಾದ ಪ್ರೀತಿಯಿಂದ, ಪಠಿಸುತ್ತಾನೋ ಅವನು ಸಂಸಾರದಲ್ಲಿನ ನಿರ್ಬಂಧದ ದುಃಖವನ್ನು ಹೊಂದುವುದಿಲ್ಲವು. ಪರಮೇಶ್ವರನನ್ನೇ ಹೊಂದುತ್ತಾನೆ. ಆದ್ದರಿಂದ ಅತಿಮಂಗಳಕರವಾದ ಈ ಸಂಹಿತೆಯನ್ನು ಹಗಲೂ, ರಾತ್ರಿಯೂ ಚಿತ್ತೈಕಾಗ್ರತೆಯುಳ್ಳವನಾಗಿ, ಅವನು ತನ್ನ ಮುಕ್ತಿಗೋಸ್ಕರವಾಗಿ, ಬಹಳ ಎಚ್ಚರಿಕೆಯಿಂದ ಶ್ರುತಿಪ್ರಮಾಣದಂತೆಯೇ ಭಕ್ತಿಶ್ರದ್ಧೆಗಳೊಡನೆ ಪಠಿಸಬೇಕು. ॥೮೬॥

ಯಾವ ಮನುಷ್ಯನು ಈ ಪ್ರಾಚೀನ ಸಂಹಿತೆಯನ್ನು ಅತ್ಯಂತ ಪ್ರೀತಿಯಿಂದ ಕೇಳುತ್ತಾನೆಯೋ ಅವನು ಸಂಸಾರನಿರ್ಬಂಧದುಃಖದಲ್ಲಿ ಸೇರುವುದಿಲ್ಲ. ಶಂಕರನನ್ನೇ

ಸತ್ಯಪೂರ್ಣಸುಖಬೋಧಲಕ್ಷಣಂ
ತತ್ತ್ವಮರ್ಥವಿಭವಂ ಸನಾತನಂ ।
ಸತ್ಸ್ವರೂಪಮಶುಭಾಪಹಂ ಶಿವಂ
ಭಕ್ತಿಗಮ್ಯಮಮಲಂ ಸದಾ ನುಮಃ ॥೪೮॥

ಯಾಽನುಭೂತಿರಮಲಾ ಸದೋದಿತಾ
ವೇದಮಾನನಿರತಾ ಶುಭಾವಹಾ ।
ತಾಮತೀವ ಸುಖದಾಮಹಂ ಶಿವಾಂ
ಕೇಶವಾದಿಜನಸೇವಿತಾಂ ನುಮಃ ॥೪೯॥

ವೇದಪದ್ಮನಿಕರಸ್ಯ ಭಾಸ್ಕರಂ
ದೇವದೇವ ಸದೃಶಂ ಘೃಣಾನಿಧಿಂ ।
ವ್ಯಾಸಮಿಷ್ಟಫಲದಂ ಗುರುಂ ನುಮಃ
ಶೋಕಮೋಹ ವಿಷರೋಗ ಭೇಷಜಮ್ ॥೯೦॥

ಸೇರುತ್ತಾನೆ. ಆ ಮನುಷ್ಯನಿಗೆ ವೇದ ಲೋಕಪ್ರಸಿದ್ಧವಾದ ಅದ್ವೈತಾನುಭವವೂ ಉಂಟಾಗುತ್ತದೆ. ಮತ್ತು ಆತನ ಮಾತಿನಲ್ಲಿ ಅತ್ಯಂತ ಪ್ರೀತಿಯಿಂದ ಸರ್ವಮಂಗಳೆಯೂ, ಪರಮೇಶ್ವರನೂ ಸಹ ಒಲಿದು ತಾಂಡವವಾಡುತ್ತಿರುತ್ತಾರೆ. ಸಾಕ್ಷಾತ್ಕಾರವನ್ನು ಅನುಗ್ರಹಿಸುತ್ತಾರೆ. ॥೮೭॥

ಸತ್ಯಪೂರ್ಣಾನಂದಜ್ಞಾನಸ್ವರೂಪದಿಂದ ಯುಕ್ತನಾದ, ಅರ್ಥವೈಭವವುಳ್ಳ ಪರತತ್ತ್ವಸ್ವರೂಪನಾದ, ಪುರಾತನನಾದ, ಸತ್ಯರೂಪನಾದ, ಅಮಂಗಳವನ್ನು ನಾಶಪಡಿಸತಕ್ಕ, ಭಕ್ತಿಯಿಂದ ಮಾತ್ರ ಹೊಂದಲು ಯೋಗ್ಯನಾದ ಮತ್ತು ನಿರ್ಮಲನಾದ ಪರಮೇಶ್ವರನನ್ನು ಯಾವಾಗಲೂ ಸ್ತುತಿಸುತ್ತೇವೆ. ॥೮೮॥

ಯಾವ ಅನುಭೂತಿಯು, ನಿರ್ಮಲವೂ, ಯಾವಾಗಲೂ ಪ್ರಕಾಶಿಸುತ್ತಿರುವುದೂ, ವೇದಪ್ರಮಾಣದ ಅವಲಂಬನದಲ್ಲಿಯೇ ನಿರತವೂ, ಮಂಗಳಕರವೂ, ಹೆಚ್ಚಾಗಿ ಸುಖವನ್ನು ಕೊಡುವುದೂ ಮತ್ತು ಕೇಶವನೇ ಮೊದಲಾದ ದೊಡ್ಡ ಜನರಿಂದ ಸೇವಿಸಲ್ಪಟ್ಟದ್ದೂ ಆಗಿರುವುದೋ ಆ ಅನುಭೂತಿಯನ್ನೂ ಸ್ತುತಿಸುತ್ತೇವೆ. ॥೮೯॥

ವೇದಗಳೆಂಬ ಕಮಲ ಸಮೂಹಕ್ಕೆ ಭಾಸ್ಕರನಂತೆ ವಿಕಾಸಕನೂ, ಗೌರವದಲ್ಲಿ ಪರಮೇಶ್ವರನಿಗೆ ಸಮಾನನೂ, ದಯಾನಿಧಿಯೂ, ಇಷ್ಟಾರ್ಥಗಳನ್ನು ಕೊಡುವವನೂ,

ಯೇ ವೇದವೇದಾಂತಧನಾ ಮಹಾಜನಾಃ
ಶಿವಾಭಿಮಾನ್ಯೈಕ ನಿರಸ್ತ ಕಿಲ್ಬಿಷಾಃ ।
ನಮಾಮಿ ವಾಚಾ ಶಿರಸಾ ಹೃದಾ ಚ ತಾನ್
ಭವಾಹಿವೇಗಸ್ಯ ನಿವಾರಕಾನಹಂ ॥೯೧॥

ಇತಿ ಶ್ರೀ ಸ್ಕಾಂದಪುರಾಣೇ ಸೂತಸಂಹಿತಾಯಾಂ
ಯಜ್ಞವೈಭವಖಂಡಸ್ಯೋಪರಿಭಾಗೇ ಸೂತಗೀತಾಸೂಪನಿಷತ್ಸು
ಅಷ್ಟಮೋಽಧ್ಯಾಯಃ

ಶ್ರೀಸೂತಗೀತಾ ಸಮಾಪ್ತಾ

ಶ್ರೀಸೂತಸಂಹಿತಾಽಪಿ ಸಮಾಪ್ತಾ

ದುಃಖ ಮತ್ತು ಮೋಹವೆಂಬ ವಿಷರೋಗಗಳಿಗೆ ವೈದ್ಯನೂ, ಜ್ಞಾನೋಪದೇಶಕನೂ ಗುರುವೂ ಆದ ವ್ಯಾಸಮುನಿಯನ್ನು ಎಲ್ಲ ಕಾಲದಲ್ಲಿಯೂ ಸ್ತುತಿಸುತ್ತೇವೆ. ॥೯೦॥

ವೇದ ಮತ್ತು ವೇದಾಂತಗಳೇ ಐಶ್ವರ್ಯವಾಗಿ ಉಳ್ಳ ಯಾವ ಮಹಾತ್ಮರು, ಶಿವಾನುಗ್ರಹಮಾತ್ರದಿಂದಲೇ ನಾಶಪಡಿಸಲ್ಪಟ್ಟ ಪಾಪವುಳ್ಳವರಾಗಿರುವರೋ, ಸಂಸಾರವೆಂಬ ಸರ್ಪದ ದುಃಖಕರವಾದ ವಿಷದ ವೇಗವನ್ನು ಪರಿಹರಿಸತಕ್ಕವರಾಗಿರುವರೋ, ಅವರನ್ನು ನಾನು ಮಾತಿನಿಂದಲೂ, ಶಿರಸ್ಸಿನಿಂದಲೂ, ಮತ್ತು ಮನಸ್ಸಿನಿಂದಲೂ ನಮಸ್ಕರಿಸುತ್ತೇನೆ. ॥೯೧॥

ಇಲ್ಲಿಗೆ ಸ್ಕಾಂದಪುರಾಣದ ಸೂತಸಂಹಿತೆಯ ನಾಲ್ಕನೆಯ ಯಜ್ಞವೈಭವಖಂಡದ
ಸೂತಗೀತೆಯಲ್ಲಿ ಸರ್ವವೇದಾಂತಸಂಗ್ರಹವೆಂಬ
ಎಂಟನೆಯ ಅಧ್ಯಾಯವು ಮುಗಿದುದು.

ಸೂತಗೀತೆಯೂ ಮುಗಿದುದು

ಶ್ರೀಸೂತಸಂಹಿತೆಯೂ ಮುಗಿದುದು

॥ ಶ್ರೀಸಾಂಬಶಿವಾರ್ಪಣಮಸ್ತು ॥

ಕರ್ಣಾಟಾಧಿಪತಿ ಶ್ರೀಮಜ್ಜಯಚಾಮೇಂದ್ರ ಶಾಸನಾತ್ ।
ಶ್ರೀಸೂತಸಂಹಿತಾರ್ಥಾನುವಾದಂ ಕನ್ನಡಭಾಷಯಾ ॥
ಸುಬ್ಬಮ್ಮಾಂಬಾ ದೇವಯಜ್ವ ತನಯಃ ಚಂದ್ರಶೇಖರಃ ।
ಜನಾನಾಮುಪಕಾರಾಯ ರಚಯಾಮಾಸ ಸಾದರಂ ॥
ವಾಣೀಸೇವಾಂ ರಾಜಸೇವಾಂ ಜನಸೇವಾಂ ಮುದಾ ಕೃತಾಂ ।
ಸ್ವೀಕೃತ್ಯ ತುಷ್ಯತು ಶಿವಃ ಸಾಂಬೋ ರಾಜಾ ಚ ಭಾರತೀ ॥

ಶಿವೇ ತವ ಕೃಪಾ ದದೌ ಗೃಹಕಳತ್ರವಿತ್ತಾದಿಕಂ
ಸುತಾನ್ ದುಹಿತೃತತ್ಸುತಾನ್ ಸುಕೃತಯುಶ್ಚ ಕಾಶ್ಚಿತ್ ಕೃತಾಃ ।
ಅಲಂಮತಿರಿಹಾಸ್ತು ಮೇ ಮಮ ಕದಾಽಂತಮಾಶಾ ವ್ರಜೇತ್
ಪ್ರಬೋಧಸುಖಮರ್ಥಯೇ ಪರವಿರಕ್ತಿ ಮುಕ್ತೀ ಮುದಾ ॥

॥ ಓಂ ತತ್ಸತ್ ॥